# ಮಧುಗಿರಿ ತಾಲ್ಲೂಕು
# ಗ್ರಾಮ ಚರಿತ್ರೆ ಕೋಶ


ಪ್ರಧಾನ ಸಂಪಾದಕರು :

**ಡಾ. ಅಂಬಳಿಕೆ ಹಿರಿಯಣ್ಣ**

ಕಾರ್ಯನಿರ್ವಾಹಕ ಸಂಪಾದಕರು :

**ಕಾ.ತ. ಚಿಕ್ಕಣ್ಣ**

ಸಂಯೋಜಕ ಸಂಪಾದಕರು :

**ಡಾ. ಚಕ್ಕೆರೆ ಶಿವಶಂಕರ್**

ಬೆಂಗಳೂರು

ಜಿಲ್ಲಾ ಸಂಪಾದಕರು :

**ಡಾ. ಚಿಕ್ಕಣ್ಣ ಯಣ್ಣೆಕಟ್ಟೆ**


ಪ್ರಾಧ್ಯಾಪಕರು, ಸಿರಾ



ಹೊನ್ನ ಬಿತ್ತೇವು ಹೊಲಕೆಲ್ಲ

**ಕರ್ನಾಟಕ ಜಾನಪದ ವಿಶ್ವವಿದ್ಯಾಲಯ**

ಗೊಟಗೋಡಿ, ರಾ.ಹೆ–೪, ಶಿಗ್ಗಾವಿ ತಾ. ಹಾವೇರಿ ಜಿ–೫೮೧ ೧೯೭


LEGEND
TALUK BOUNDARY
VILLAGE BOUNDAR
MADHUGIRI TMC
SIRA TALUK
MADHUGIRI
TALUK WITH GRAMA PA
NCAHAYTH
KORATAGERE TALU
ANDRA PRADESH STATE
NRDMS, ZP, TUMKUR
CHIKKA BALLAF
0
5
kilometer
N
MADHUGIRI TMC

# ಪರಿವಿಡಿ


1. ಮಧುಗಿರಿ ತಾಲ್ಲೂಕು........ 1
2. ಅಕ್ಕಲಾಪುರ........ 2
3. ಅಯ್ಯನಹಳ್ಳಿ........ 3
4. ಅವರಗಲ್ಲು ........ 4
5. ಅವರಗಲ್ಲು ಗೊಲ್ಲರಹಟ್ಟಿ........ 6
6. ಅಮರಾವತಿ........ 6
7. ಅರಳಿಮರದಹಳ್ಳಿ........ 7
8. ಅಡವಿನಾಗೇನಹಳ್ಳಿ ........ 8
9. ಅಣ್ಣೇನಹಳ್ಳಿ ........ 9
10. ಅರಳಾಪುರ........ 10
11. ಅಗ್ರಹಾರ ........ 11
12. ಅಗ್ರಹಾರ ಜನತಾ ಹೌಸಿಂಗ್ ಕಾಲೋನಿ........ 12
13. ಅಂಗಡಿ ತಿಮ್ಮನಹಳ್ಳಿ........ 13
14. ಆಪ್‌ನಳ್ಳಿ ........ 13
15. ಆಲದಮರದಹಟ್ಟಿ ........ 14
16. ಆವಿನಮಡು ........ 14
17. ಆವೇಕಟ್ಟೆ........ 15
18. ಆಚೇನಹಳ್ಳಿ........ 16
19. ಇಂದಿರಾ ಗ್ರಾಮ ........ 17
20. ಇಮ್ಮಡಗೊಂಡನಹಳ್ಳಿ........ 18
21. ಈಡಿಗರಹಟ್ಟಿ........ 19
22. ಈಜೀಹಳ್ಳಿ ........ 20
23. ಉಪ್ಪಾರಹಳ್ಳಿ ........ 21
24. ಉಪ್ಪಾರಪಾಳ್ಯ........ 22
25. ಉಮ್ಮನಹಳ್ಳಿ........ 23
26. ಎಸ್.ಎಂ. ಗೊಲ್ಲಹಳ್ಳಿ........ 24
27. ಎಮ್ಮೆತಿಮ್ಮನಹಳ್ಳಿ........ 25
28. ಎಸ್.ಅಪ್ಪೇನಹಳ್ಳಿ........ 26
29. ಐ.ಡಿ. ಹಳ್ಳಿ (ಇಟಕದಿಬ್ಬನಹಳ್ಳಿ) ........ 27
30. ಓಬಳಾಪುರ ........ 28
31. ಓಬಳಹಳ್ಳಿ ........ 29
32. ಓಬಳಹಳ್ಳಿ ಜನತಾ ಹೌಸಿಂಗ್ ಕಾಲೋನಿ ........ 30
33. ಕೃಷ್ಣಾಪುರ........ 31
34. ಕನಪನಾಯಕನಹಳ್ಳಿ ........ 31
35. ಕೂನ್ನಹಳ್ಳಿ ........ 32
36. ಕುರಿಹಳ್ಳಿ........ 33
37. ಕಿತ್ತಗಳಿ ........ 35
38. ಕಾರ್ಪೇನಹಳ್ಳಿ ಗೊಲ್ಲರಹಟ್ಟಿ........ 36
39. ಕೆಂಪಚನ್ನೇನಹಳ್ಳಿ ........ 37
40. ಕೋಡಿರಾಂಪುರ........ 38
41. ಕೆ.ಗೊಲ್ಲಳ್ಳಿ ........ 39
42. ಕೋಟಗಾರ್ಲಳ್ಳಿ........ 40
43. ಕೋಟಗಾರ್ಲಳ್ಳಿ ಗೊಲ್ಲರಹಟ್ಟಿ........ 41
44. ಕುರುಬರಹಳ್ಳಿ........ 41
45. ಕಂಸಾನಹಳ್ಳಿ ........ 42
46. ಕತ್ತಿರಾಜನಹಳ್ಳಿ........ 43
47. ಕೃಷ್ಣಪುರ........ 44
48. ಕಾಡಪ್ಪನಪಾಳ್ಯ........ 45
49. ಕಸಾಪುರ ........ 46
50. ಕಾರೇನಹಳ್ಳಿ........ 47
51. ಕಲ್ಲೇನಹಳ್ಳಿ ........ 48
52. ಕೆ. ಕೃಷ್ಣಾಂಪುರ ........ 49
53. ಕೆ.ಅಪ್ಪೇನಹಳ್ಳಿ........ 50
54. ಕಾಟಗೊಂಡನಹಳ್ಳಿ........ 51
55. ಕ್ಯಾತಗೊಂಡನಹಳ್ಳಿ........ 52
56. ಕವಡಿಗರಪಾಳ್ಯ ........ 53
57. ಕಾಟಗಾನಹಟ್ಟಿ ........ 53
58. ಕಮ್ಮನಕೋಟೆ ........ 54
59. ಕೆರೆಮೇಗಳಪಾಳ್ಯ........ 55
60. ಕೆರೆಮೇಗಳಪಾಳ್ಯ ಜನತಾ ಹೌಸಿಂಗ್ ಕಾಲೋನಿ........ 56
61. ಕಂಬಯ್ಯನಪಾಳ್ಯ ........ 56
62. ಕುಪ್ಪಾಚಾರಿರೊಪ್ಪ........ 57
63. ಕಂಬದಹಳ್ಳಿ........ 58
64. ಕಂಬತ್ತನಹಳ್ಳಿ........ 59
65. ಕಾರಮರಡಿ ........ 60
66. ಕೆ.ಜಿ. ತಿಪ್ಪಾಪುರ........ 61
67. ಕುರುಬರಹಟ್ಟಿ ........ 61
68. ಕೃಷ್ಣಯ್ಯನಪಾಳ್ಯ ........ 62
69. ಕುಣಿಗಲ್ ತಿಮ್ಮನಹಳ್ಳಿ........ 63
70. ಕುಣಿಗಲ್ ತಿಮ್ಮನಹಳ್ಳಿ ತಿಗುಳರಹಟ್ಟಿ........ 63
71. ಕೆಂಪಾಪುರ ........ 63
72. ಕಾಳೇನಹಳ್ಳಿ........ 64
73. ಕಲಿದೇವಪುರ........ 65
74. ಕೊಡಿಗೇನಹಳ್ಳಿ........ 67
75. ಕಡಗತ್ತೂರು........ 68
76. ಕಸಿನಾಯಕನಹಳ್ಳಿ ........ 69
77. ಕುರ್ಕೆಹಳ್ಳಿ........ 70
78. ಕೊಂಡವಾಡಿ ........ 71
79. ಕಂಸಾನಹಳ್ಳಿ........ 72
80. ಕುಲುಮೇನಹಳ್ಳಿ........ 73
81. ಕೋಡಗದಾಲ ........ 74
82. ಕೋಡ್ಲಾಪುರ........ 76
83. ಕತ್ತಿಜೋಗಿಪಾಳ್ಯ........ 77

84. ಕವಣದಾಲ....................77
85. ಕುರಂಕೋಟೆ ತಿಮ್ಮನಪಾಳ್ಯ....................79
86. ಕಂತಾನಹಳ್ಳಿ....................79
87. ಕಾಮೇಗೌಡನಹಳ್ಳಿ....................80
88. ಗಿಡದಾಗಲಹಳ್ಳಿ....................81
89. ಗುಡಿಬಂಡೆಹಟ್ಟಿ....................82
90. ಗಾಂಧಿ ಗ್ರಾಮ....................83
91. ಗಾಳಿಹಳ್ಳಿ....................83
92. ಗಂಪಲಹಳ್ಳಿ....................85
93. ಗಡ್ಡೆತಿಮ್ಮನಹಳ್ಳಿ....................86
94. ಗುಡಿರೊಪ್ಪ....................86
95. ಗುಡಿರೊಪ್ಪ ಜನತಾ ಹೌಸಿಂಗ್ ಕಾಲೋನಿ....................88
96. ಗುರ್ರಮ್ಮನಕಟ್ಟೆ....................88
97. ಗುಂಡ್ಲಳ್ಳಿ....................89
98. ಗುಂಡ್ಲಳ್ಳಿ ಜನತಾ ಹೌಸಿಂಗ್ ಕಾಲೋನಿ....................90
99. ಗೋಪಗೊಂಡನಹಳ್ಳಿ....................90
100. ಗಂಜಲಗುಂಟೆ....................91
101. ಗಿಡ್ಡೇನಹಳ್ಳಿ....................92
102. ಗುಂಡಗಲ್ಲು....................92
103. ಗುಟ್ಟೆ....................94
104. ಗೌತಮನಗರ....................95
105. ಗಿಡ್ಡಯ್ಯನಪಾಳ್ಯ....................95
106. ಗಂಕಾರನಹಳ್ಳಿ....................96
107. ಗೋವಿಂದನಹಳ್ಳಿ....................98
108. ಗಿರೇಗೌಡನಹಳ್ಳಿ....................99
109. ಗೊಂದಿಹಳ್ಳಿ....................100
110. ಗಿರಿಯಮ್ಮನಪಾಳ್ಯ....................101
111. ಗಿರಿಯಮ್ಮನಪಾಳ್ಯ....................102
112. ಗಿರೆಗೊಂಡನಹಳ್ಳಿ....................103
113. ಗುಣೆದಿಬ್ಬ....................104
114. ಗಟ್ಟಿಮಲ್ಲನಹಳ್ಳಿ....................104
115. ಗೊಬಲಗುಟ್ಟೆ....................104
116. ಗೊದ್ದನಪಾಳ್ಯ....................105
117. ಗರಣಿ....................106
118. ಗೌರದಿಮ್ಮನಹಳ್ಳಿ....................108
119. ಗಿರಿಯಪಾಳ್ಯ....................108
120. ಗಿರೇಗುಂಡನಹಳ್ಳಿ....................108
121. ಗುಟ್ಟೆ....................109
122. ಗೊಲ್ಲಹಳ್ಳಿ....................111
123. ಚಂದ್ರಗಿರಿ....................112
124. ಚಂದ್ರಗಿರಿ ಗೊಲ್ಲರಹಟ್ಟಿ....................113
125. ಚಂಬೇನಹಳ್ಳಿ....................114
126. ಚಿನ್ನೇನಹಳ್ಳಿ....................115
27. ಚಿಕ್ಕೆರೆ ಗೊಲ್ಲರಹಟ್ಟಿ....................116
28. ಚಂದ್ರಬಾವಿ....................117
29. ಚಿನಕವಜ್ರ....................118
30. ಚಿನಕವಜ್ರ ಜನತಾ ಕಾಲೋನಿ....................119
31. ಚಿಕ್ಕೇಗೌಡನರೊಪ್ಪ....................119
32. ಚಿಕ್ಕನಹಳ್ಳಿ....................119
33. ಚಿಕ್ಕಮಾಲೂರು....................120
34. ಚೆನ್ನಗಿರಿಪಾಳ್ಯ....................121
35. ಚೆನ್ನಸಾಗರ....................122
36. ಚುಂಚೇನಹಳ್ಳಿ....................123
37. ಚಿಕ್ಕತಿಮ್ಮನಹಳ್ಳಿ....................125
38. ಚಿಕ್ಕಹೊಸಹಳ್ಳಿ....................126
39. ಚಿಕ್ಕತಿಮ್ಮನಹಳ್ಳಿ (ಬೇವಿನಮರದಪಾಳ್ಯ)....................127
40. ಚೀಲನಹಳ್ಳಿ....................128
41. ಚನ್ನಮಲ್ಲನಹಳ್ಳಿ....................129
42. ಚೌಳಹಳ್ಳಿ....................130
43. ಚಿಕ್ಕದಾಳವಟ್ಟ....................131
44. ಚಿಕ್ಕ ಯಲ್ಲೂರು....................132
45. ಸಿತ್ರಪಾಳ್ಯ....................133
46. ಜಯನಗರ (ಹೊಸಗುಡ್ಲು)....................134
47. ಜಲತಿಮ್ಮನಹಳ್ಳಿ....................135
48. ಜನಕಲೋಟಿ....................135
49. ಜಡೆಗೊಂಡನಹಳ್ಳಿ....................136
50. ಜಕ್ಕೇನಹಳ್ಳಿ....................138
51. ಜೀವಗೊಂಡನಹಳ್ಳಿ....................139
52. ಜಿ.ಡಿ. ಪಾಳ್ಯ....................140
53. ಜವನಾಯಕನಪಾಳ್ಯ....................141
54. ಜೋಗಿಹಳ್ಳಿ....................142
55. ಜಾಲಿಹಳ್ಳಿ....................143
56. ಜವರಯ್ಯನಪಾಳ್ಯ....................144
57. ಜವನಯ್ಯನಪಾಳ್ಯ....................144
58. ಡಿ.ಕೈಮರ ಅಥವಾ ಅಡವಿಕಾಟನಹಳ್ಳಿ....................145
59. ತಿಪ್ಪನಹಳ್ಳಿ....................147
60. ತೊಣಚಗೊಂಡನಹಳ್ಳಿ....................148
61. ತಿಪ್ಪಗೊಂಡನಹಳ್ಳಿ....................149
62. ತಿಪ್ಪಗೊಂಡನಹಳ್ಳಿ ವಡ್ಡರಹಳ್ಳಿ....................150
63. ತೋಟಮಡಗಲು....................150
64. ತಾಯಗೊಂಡನಹಳ್ಳಿ....................151
65. ತುಂಗೋಟಿ....................152
66. ತವಕದಳ್ಳಿ....................153
67. ತಿಗಳರಹಳ್ಳಿ....................154
68. ತಿಂಗಳೂರು....................155
69. ತಿರುಮಲದೇವರಹಳ್ಳಿ....................156

170. ತೆರಿಯೂರು.......157
171. ತಗ್ಗಿಹಳ್ಳಿ.......158
172. ತಿಮ್ಮನಹಳ್ಳಿ.......159
173. ತಾಳೇಕೆರೆ.......160
174. ತಿಮ್ಮಸಂದ್ರ.......161
175. ತಿಮ್ಮಲಾಪುರ.......162
176. ತಿಮ್ಮಲಾಪುರ ಗೇಟ್.......164
177. ತಿಮ್ಮಲಾಪುರ ಲಂಬಾಣಿ ತಾಂಡ.......164
178. ತಿಮ್ಮಲಾಪುರ ಗೊಲ್ಲರಹಟ್ಟಿ (ಟಿ.ಗೊಲ್ಲರಹಟ್ಟಿ).......165
179. ತಿಮ್ಮಲಾಪುರ.......166
180. ತಾಡಿ.......167
181. ತೊಂಡೋಟಿ.......168
182. ತುಮ್ಮಲು.......169
183. ತಿಪ್ಪಾಪುರ.......169
184. ತಿಪ್ಪಾಪುರ ತಾಂಡ.......171
185. ದಬ್ಬೆಘಟ್ಟ.......172
186. ದಾಸರಹಳ್ಳಿ.......173
187. ದೊಡ್ಡೇನಹಳ್ಳಿ.......174
188. ದ್ಯಾವಗೊಂಡನಹಳ್ಳಿ.......175
189. ದಾಸೇನಹಳ್ಳಿ.......175
190. ದಾಸೇನಹಳ್ಳಿ ಜನತಾ ಹೌಸಿಂಗ್ ಕಾಲೋನಿ.......176
191. ದೊಡ್ಡಗೊಲ್ಲರಹಟ್ಟಿ.......176
192. ದೊಡ್ಡವೀರಗೊಂಡನಹಳ್ಳಿ (ಡಿ.ವಿ.ಹಳ್ಳಿ).......177
193. ದೇವರಲಿಂಗಪ್ಪನ ಕಟ್ಟೆ.......178
194. ದೊಡ್ಡಹಟ್ಟಿ.......179
195. ದೊಡ್ಡಮಾಲೂರು.......180
196. ದೊಡ್ಡಮಾಲೂರು ಲಂಬಾಣಿ ತಾಂಡ.......181
197. ದಂಡಿಪುರ.......181
198. ದೇವರತೋಪು.......182
199. ದೊಡ್ಡಹೊಸಹಳ್ಳಿ.......183
200. ದೊಡ್ಡಗಾಳಿಹಳ್ಳಿ.......185
201. ದೊಡ್ಡೇರಿ.......186
202. ದೊಡ್ಡೇರಿ ಗೊಲ್ಲರಹಟ್ಟಿ.......187
203. ದಂಡಿನದಿಬ್ಬ (ಬೀಸನಪಾಳ್ಯ).......188
204. ದೊಡ್ಡದಾಳವಟ್ಟ.......189
205. ದೊಡ್ಡ ದಾಳವಾಟ ಟೆಂಪಲ್.......190
206. ದಾಸಪ್ಪನಪಾಳ್ಯ.......190
207. ದಿನ್ನೆ ಗೊಲ್ಲರಹಟ್ಟಿ.......191
208. ದೊಡ್ಡ ಯಲ್ಲೂಕುರು.......192
209. ದಾದಗೊಂಡನಹಳ್ಳಿ.......193
210. ದೊಡ್ಡಹಟ್ಟಿ.......194
211. ನಾಗೇನಹಳ್ಳಿ ಗೊಲ್ಲರಹಟ್ಟಿ.......195
212. ನೀರಕಲ್ಲು.......196
213. ನೀರಕಲ್ಲು ಗೊಲ್ಲರಹಟ್ಟಿ.......197
214. ನೀಲಿಹಳ್ಳಿ.......197
215. ನೇರಳೇಕೆರೆ.......199
216. ನಲ್ಲೆಕಾಮನಹಳ್ಳಿ (ಜಂಗಮಯ್ಯನಪಾಳ್ಯ).......200
217. ನಾರಪ್ಪನಹಳ್ಳಿ.......201
218. ನಾಗಲಾಪುರ.......202
219. ನಾಗೇನಹಳ್ಳಿ.......203
220. ನಾಗೇನಹಳ್ಳಿ.......204
221. ನವಿಲನಡುಕು.......205
222. ನಿಟ್ರಹಳ್ಳಿ.......206
223. ನಿಟ್ರಹಳ್ಳಿ ಕ್ರಾಸ್.......207
224. ನಂಜಾಪುರ.......208
225. ನಾಗಮ್ಮನಪಾಳ್ಯ.......209
226. ನರಸಾಪುರ.......210
227. ನಲ್ಲಹಳ್ಳಿ.......211
228. ಪೆಟ್ಟೇನಹಳ್ಳಿ.......212
229. ಪುಲಮಘಟ್ಟ.......213
230. ಪಡಸಾಲಹಟ್ಟಿ.......214
231. ಪಣ್ಣೆ.......215
232. ಪಾಳ್ಯದಹಳ್ಳಿ.......215
233. ಪೆಮ್ಮಯ್ಯನಪಾಳ್ಯ.......215
234. ಪುಟ್ಟೇನಹಳ್ಳಿ.......216
235. ಪರ್ತಿಹಳ್ಳಿ.......216
236. ಪೋಲೇನಹಳ್ಳಿ.......217
237. ಪೂಜಾರಹಳ್ಳಿ.......218
238. ಪುರವರ.......219
239. ಪೆಮ್ಮೇನಹಳ್ಳಿ.......220
240. ಪೂಜಾರಹಳ್ಳಿ.......221
241. ಪುಲಮಾಚಿ.......222
242. ಬಡವನಹಳ್ಳಿ.......223
243. ಬಡವನಹಳ್ಳಿ ಜನತಾ ಹೌಸಿಂಗ್ ಕಾಲೋನಿ.......224
244. ಬಡವನಹಳ್ಳಿ ಅಮೃತಮಹಲ್ ಕಾವಲ್.......225
245. ಬಳೆಹಳ್ಳಿ.......226
246. ಬಂಡೆಮೇಗಲಪಾಳ್ಯ (ಬಿ.ಎಂ ಪಾಳ್ಯ).......227
247. ಬೋರೆಗುಂಟೆ.......228
248. ಭಸ್ಮಾಂಗಿ ಕಾವಲ್.......229
249. ಬಸವನಹಳ್ಳಿ.......230
250. ಬಸವನಹಳ್ಳಿ ಗೊಲ್ಲರಹಟ್ಟಿ.......232
251. ಬಡಿಗೊಂಡನಹಳ್ಳಿ.......232
252. ಬುಳಸಂದ್ರ.......233
253. ಬುಳಸಂದ್ರ ಗೊಲ್ಲರಹಟ್ಟಿ.......234
254. ಬೋರಮುತ್ತೇನಹಳ್ಳಿ.......234
255. ಭೀಮನಕುಂಟೆ.......235

256. ಬಿಟ್ಟಿನಕುರಿಕೆ ........ 236
257. ಬ್ರಹ್ಮದೇವರಹಳ್ಳಿ ........ 237
258. ಬ್ರಹ್ಮದೇವರಹಳ್ಳಿ ಕಾವಲ್ ........ 238
259. ಬೆನಕನಹಳ್ಳಿ ........ 239
260. ಬೇಡತ್ತೂರು ........ 240
261. ಬಿದರಕೆರೆ ........ 241
262. ಬೆಲ್ಲದಮಡುಗು ........ 242
263. ಬೆಲ್ಲದಮಡಗು ಕ್ರಾಸ್ ........ 243
264. ಬನವೇನಹಳ್ಳಿ ........ 243
265. ಬಂದ್ರೇಹಳ್ಳಿ ........ 244
266. ಬಿಜವರ ........ 245
267. ಬಕಡಿ ಚನ್ನಯ್ಯನಪಾಳ್ಯ ........ 247
268. ಬಿಜವರಹಟ್ಟಿ ........ 248
269. ಬೊಮ್ಮತಿಮ್ಮನಹಳ್ಳಿ ........ 249
270. ಬಸವನಹಳ್ಳಿ ........ 249
271. ಬೂದೇನಹಳ್ಳಿ ........ 250
272. ಬೊಮ್ಮೇನಹಳ್ಳಿ ........ 251
273. ಬೊಮ್ಮೇನಹಳ್ಳಿ ವಡ್ಡರಹಟ್ಟಿ ........ 252
274. ಬೈರಾಪುರ ತಾಂಡ ........ 253
275. ಬಾಚೇನಹಳ್ಳಿ ........ 254
276. ಬಟ್ಟಗೆರೆ ........ 255
277. ಬ್ಯಾಲ್ಯ ........ 256
278. ಬ್ರಹಸಮುದ್ರ ........ 258
279. ಭಕ್ತರಹಳ್ಳಿ ........ 259
280. ಬೆಣಚಕಲ್ಲಹಟ್ಟಿ ........ 260
281. ಬಡಚೌಡನಹಳ್ಳಿ ........ 260
282. ಭೈರವನಗರ ........ 261
283. ಬಡಕನಹಳ್ಳಿ ........ 262
284. ಬೀರನಹಳ್ಳಿ ........ 263
285. ಭೂತನಹಳ್ಳಿ ........ 264
286. ಬೇಗೂರು ದಾಸರಹಳ್ಳಿ ........ 265
287. ಬಾಣಗಾರಹಳ್ಳಿ ........ 265
288. ಬಾಣಗಾರನಹಳ್ಳಿ ಬೋವಿ ಕಾಲೋನಿ ........ 266
289. ಬೊಮ್ಮಯ್ಯನಪಾಳ್ಯ ........ 266
290. ಬಡ್ಡಯ್ಯನಹಟ್ಟಿ ........ 267
291. ಬ್ರಹ್ಮಸಮುದ್ರ ಕ್ರಾಸ್ ........ 268
292. ಬಂಡೇನಹಳ್ಳಿ ........ 267
293. ಬ್ಯಾಡರಹಳ್ಳಿ ........ 268
294. ಬಡೋಬನಹಳ್ಳಿ ........ 269
295. ಮಂಡಿತಿಮ್ಮನಹಳ್ಳಿ ........ 270
296. ಮರಿತಿಮ್ಮನಹಳ್ಳಿ ........ 270
297. ಮಲ್ಲೇನಹಳ್ಳಿ ........ 271
298. ಮಾರಿಪಾಳ್ಯ ........ 272
299. ಮುತ್ಯಾಲಮ್ಮನಹಳ್ಳಿ ........ 273
300. ಮಾಯಗೊಂಡನಹಳ್ಳಿ ........ 274
301. ಮಲ್ಲನಾಯಕನಹಳ್ಳಿ ........ 275
302. ಮಲ್ಲನಾಯಕನಹಳ್ಳಿ ಗೊಲ್ಲರಹಟ್ಟಿ ........ 276
303. ಮಿಡಿಗೇಶಿ ........ 277
304. ಮಾಡಗಾನಹಟ್ಟಿ ........ 279
305. ಮಾರೀಬೀಳು ........ 280
306. ಮದ್ಲೇರಹಳ್ಳಿ ........ 281
307. ಮರುವೇಕೆರೆ ........ 282
308. ಮರಬಳ್ಳಿ ........ 283
309. ಮುದ್ದೇನೇರಳೆಕೆರೆ ........ 284
310. ಮಾರಮ್ಮ ಟೆಂಪಲ್ ಕ್ರಾಸ್ ........ 285
311. ಮಲ್ಲೇನಹಳ್ಳಿ ........ 285
312. ಮಲ್ಲೇನಹಳ್ಳಿ ಗೊಲ್ಲರಹಟ್ಟಿ ........ 287
313. ಮುದ್ದೇನಹಳ್ಳಿ ........ 287
314. ಮುದ್ದೇನಹಳ್ಳಿ ಜನತಾ ಹೌಸಿಂಗ್ ಕಾಲೋನಿ ........ 288
315. ಮುದ್ದೇನಹಳ್ಳಿ ಗೊಲ್ಲರಹಟ್ಟಿ ........ 288
316. ಮುದ್ದಯ್ಯನಪಾಳ್ಯ ........ 289
317. ಮಿಡತರಹಳ್ಳಿ ........ 290
318. ಮಿಡಿತರಹಳ್ಳಿ ಗೊಲ್ಲರಹಟ್ಟಿ ........ 291
319. ಮಿಡಿತರಹಳ್ಳಿ ಜನತಾ ಹೌಸಿಂಗ್ ಕಾಲೋನಿ ........ 291
320. ಮರಿತಿಮ್ಮನಹಳ್ಳಿ ಗೊಲ್ಲರಹಟ್ಟಿ ........ 291
321. ಮುದ್ದೇನಹಳ್ಳಿ ........ 291
322. ಮುತ್ತುರಾಯನಹಳ್ಳಿ ........ 292
323. ಮೈದನಹಳ್ಳಿ ........ 293
324. ಮಸರಪಡಿ ........ 295
325. ಮೌಲಾನಾಬೇಗ್‌ಪಾಳ್ಯ ........ 296
326. ಮುಳಬಾಗಿಲಪಾಳ್ಯ ........ 297
327. ಮುದ್ದಲಿಂಗಯ್ಯನಪಾಳ್ಯ ........ 298
328. ಮೇಕೆತಿಮ್ಮನಹಳ್ಳಿ ........ 299
329. ಮಾದೇನಹಳ್ಳಿ ........ 300
330. ಮುದ್ದಪ್ಪನಪಾಳ್ಯ ........ 301
331. ಮುದ್ದುಮಲ್ಲನಹಳ್ಳಿ ........ 302
332. ಮಾದೇನಹಳ್ಳಿ ........ 303
333. ಮಾರುತಿಪುರ ........ 304
334. ಮುದ್ದನೇರಳೇಕೆರೆ ಜನತಾ ಹೌಸಿಂಗ್ ಕಾಲೋನಿ ........ 305
335. ಯರ್ರಗುಂಟೆ ಹೊಸಹಳ್ಳಿ ........ 306
336. ಯಾಕಾರ್ಲಹಳ್ಳಿ ........ 307
337. ಯರ್ರನಪಾಳ್ಯ ........ 307
338. ಯರಗುಂಟೆ ........ 308
339. ಯರಮಲ್ಲನಹಳ್ಳಿ ........ 310
340. ರಂಗಾಪುರ ........ 311
341. ರಂಗಾಪುರ ಗೊಲ್ಲರಹಟ್ಟಿ ........ 312

342. ರಂಟವಾಳಲು ..................................... 313
343. ರೆಡ್ಡಿಹಳ್ಳಿ..................................... 314
344. ರೆಡ್ಡಿಹಳ್ಳಿ ಗೊಲ್ಲರಹಟ್ಟಿ..................................... 315
345. ರೆಡ್ಡಿಹಳ್ಳಿ ಗೊಲ್ಲಹಳ್ಳಿ..................................... 316
346. ರಂಗನಾಥಪುರ..................................... 317
347. ರಂಗನಾಯಕನರೊಪ್ಪ..................................... 318
348. ರಂಗೇನಹಳ್ಳಿ..................................... 319
349. ರೆಡ್ಡಿಹಳ್ಳಿ..................................... 319
350. ರಂಗನಹಳ್ಳಿ..................................... 320
351. ರಘುವನಹಳ್ಳಿ..................................... 322
352. ರಜಪೂತರ ಪಾಳ್ಯ..................................... 323
353. ರಾಮನಹಳ್ಳಿ..................................... 324
354. ರಾಚಯ್ಯನಪಾಳ್ಯ..................................... 325
355. ರಂಗನಪಾಳ್ಯ..................................... 325
356. ಲಿಂಗಸಂದ್ರ..................................... 326
357. ಲಕ್ಷ್ಮಿದೇವಿಪುರ ..................................... 327
358. ಲಕ್ಕೀಹಟ್ಟಿ..................................... 328
359. ಲಕ್ಷ್ಮಿಪುರ ..................................... 329
360. ಲಕ್ಷ್ಮಣಪಾಳ್ಯ..................................... 329
361. ಲಿಂಗಜ್ಜನಪಾಳ್ಯ..................................... 330
362. ಲಕ್ಷ್ಮಿಪುರ ..................................... 331
363. ವೆಂಕಟೇಶಪುರ..................................... 332
364. ವಿ.ಡಿ.ಜಿ ಪಾಳ್ಯ..................................... 332
365. ವೆಂಕಟದಾಸೇಗೌಡನ ಪಾಳ್ಯ (ವಿ.ಡಿ.ಜಿ. ಪಾಳ್ಯ) ಜನತಾ ಹೌಸಿಂಗ್ ಕಾಲೋನಿ ..................................... 334
366. ವೀರಣ್ಣನಹಳ್ಳಿ..................................... 334
367. ವೀರಕ್ಯಾತನಪಾಳ್ಯ..................................... 335
368. ವಿಠಲಾಪುರ ..................................... 335
369. ವಿರುಪಗೊಂಡನಹಳ್ಳಿ..................................... 336
370. ವೆಂಕಟಾಪುರ ..................................... 337
371. ವರದನಹಳ್ಳಿ..................................... 338
372. ವೀರಚೆನ್ನೇನಹಳ್ಳಿ..................................... 339
373. ವೀರಾಪುರ..................................... 340
374. ವಸಂತರಾಯನರೊಪ್ಪ..................................... 341
375. ವಸಂತರಾಯನರೊಪ್ಪ ಜನತಾ ಹೌಸಿಂಗ್ ಕಾಲೋನಿ ..................................... 341
376. ವಜ್ರದಹಳ್ಳಿ..................................... 341
377. ವಜ್ರದಹಳ್ಳಿ ಗೊಲ್ಲರಹಟ್ಟಿ..................................... 343
378. ವೆಂಕಟಾಪುರ ..................................... 343
379. ವೀರೇನಹಳ್ಳಿ ತಾಂಡ ..................................... 344
380. ವಡೇರಹಳ್ಳಿ..................................... 345
381. ವೀರಾಪುರ..................................... 346
382. ವೆಂಗಳಮ್ಮನಹಳ್ಳಿ..................................... 347
383. ವೀರನಾಗೇನಹಳ್ಳಿ..................................... 348
384. ವಡ್ಡರಹಟ್ಟಿ..................................... 349
385. ವಡ್ಡರಹಟ್ಟಿ..................................... 350
386. ವಡ್ಡರಹಟ್ಟಿ..................................... 351
387. ವಿಠಲಾಪುರ ..................................... 352
388. ಶಂಕರಾಪುರ ..................................... 353
389. ಶಿವನಗೆರೆ..................................... 354
390. ಶಿವನಗೆರೆ ಗೊಲ್ಲರಹಟ್ಟಿ..................................... 355
391. ಶ್ರವಣಗುಡಿ ..................................... 356
392. ಶ್ರೀರಾಂಪುರ..................................... 357
393. ಶೆಟ್ಟಿಹಳ್ಳಿ ..................................... 358
394. ಶಂಭೋನಹಳ್ಳಿ ..................................... 359
395. ಶಂಬೋನಹಳ್ಳಿ ಕ್ರಾಸ್ ..................................... 360
396. ಶ್ರಾವಂಡನಹಳ್ಳಿ..................................... 360
397. ಶಿವಪುರ ..................................... 362
398. ಶೀಬಿನಯ್ಯನಪಾಳ್ಯ..................................... 363
399. ಶ್ರೀನಿವಾಸಪುರ ..................................... 364
400. ಶ್ಯಾನಗನಹಳ್ಳಿ..................................... 365
401. ಶೋಬೇನಹಳ್ಳಿ..................................... 366
402. ಸಿಡಿದರಗಲ್ಲು..................................... 366
403. ಸರ್ಜಮ್ಮನಹಳ್ಳಿ..................................... 368
404. ಸೋದೇನಹಳ್ಳಿ..................................... 368
405. ಸಜ್ಜೆ ಹೊಸಳ್ಳಿ..................................... 370
406. ಸಜ್ಜೆ ಹೊಸಹಳ್ಳಿ ಆದಿಕರ್ನಾಟಕ ಕಾಲೋನಿ ..................................... 371
407. ಸಿಂಗರಾವುತನಹಳ್ಳಿ..................................... 371
408. ಸತ್ತಿಗೇನಹಳ್ಳಿ..................................... 372
409. ಸೋಮಲಾರ..................................... 373
410. ಸೋಂಪುರ..................................... 374
411. ಸೋಗೇನಹಳ್ಳಿ..................................... 375
412. ಸೋಗೇನಹಳ್ಳಿ ಗೊಲ್ಲರಹಟ್ಟಿ..................................... 376
413. ಸೋಗೇನಹಳ್ಳಿ ಹಳೇಹಟ್ಟಿ..................................... 377
414. ಸಿದ್ದಾಪುರ..................................... 378
415. ಸಿದ್ದಾಪುರ ಗೇಟ್..................................... 379
416. ಸಿದ್ದಾಪುರ ಎ.ಕೆ. ಕಾಲೋನಿ..................................... 380
417. ಸೂರನಾಗೇನಹಳ್ಳಿ..................................... 381
418. ಸುದ್ದೇಕುಂಟೆ..................................... 382
419. ಸಿಂಗನಹಳ್ಳಿ..................................... 383
420. ಸಂಕಾಪುರ..................................... 384
421. ಸುಣ್ಣವಾಡಿ..................................... 385
422. ಸಂಜೀವಪುರ..................................... 386
423. ಸಿದ್ದನಹಳ್ಳಿ..................................... 388
424. ಸಿಂಗ್ರಿಗೊಂಡನಹಳ್ಳಿ ..................................... 389
425. ಸಂಜೀವಪುರ..................................... 390

426. ಸಾದರಹಳ್ಳಿ ........ 391
427. ಹೊನ್ನಾಪುರ ........ 392
428. ಹಳೆತಿಮ್ಮನಹಳ್ಳಿ ........ 393
429. ಹುಡುಗನಹಟ್ಟಿಪಾಳ್ಯ ........ 394
430. ಹರಿಹರಪುರ ........ 395
431. ಹರಿಹರಪುರ ಜನತಾ ಹೌಸಿಂಗ್ ಕಾಲೋನಿ ........ 396
432. ಹರಿಹರ ರೊಪ್ಪ ........ 397
433. ಹೊಸಹಳ್ಳಿ ........ 397
434. ಹೊಸಕೆರೆ ........ 398
435. ಹೊಸಕೆರೆ ಬಸವನಹಳ್ಳಿ ........ 399
436. ಹೊಸಪಾಳ್ಯ ........ 400
437. ಹನುಮಂತಪುರ ........ 401
438. ಹುಣಸೇಮರದಹಟ್ಟಿ ........ 402
439. ಹೊಸಳ್ಳಿ ........ 403
440. ಹೊಸಹಳ್ಳಿ ಜನತಾ ಹೌಸಿಂಗ್ ಕಾಲೋನಿ ........ 404
441. ಹಳೇಹಟ್ಟಿ ........ 405
442. ಹೊಸಹಳ್ಳಿ ........ 406
443. ಹುಣಸವಾಡಿ ........ 407
444. ಹೊಸಪಾಳ್ಯ ........ 408
445. ಹನುಮಂತಪುರ ........ 409
446. ಹಂದ್ರಾಳು ........ 410
447. ಹನುಮಂತರಾಯನಪಾಳ್ಯ ........ 411
448. ಹನುಮನಹಳ್ಳಿ ........ 412
449. ಹಾಲಪ್ಪನಹಳ್ಳಿ ........ 413
450. ಹೊಸಗೊಲ್ಲರಹಟ್ಟಿ ........ 413
451. ಹೊಸಕೋಟೆ ........ 414
452. ಹೊಸಕೋಟೆ ಜನತಾ ಹೌಸಿಂಗ್ ಕಾಲೋನಿ ........ 415
453. ಹೊಸಕೋಟೆ ಲಂಬಾಣಿ ತಾಂಡ ........ 415
454. ಹೊಸ ಇಟಕಲೋಟಿ ........ 415
455. ಹಳೇ ಇಟಕಲೋಟಿ ........ 416
456. ಹಳೇ ಗೊಲ್ಲರಹಟ್ಟಿ ........ 417
457. ಹೂವಿನಹಳ್ಳಿ ........ 418
458. ವಾರ್ಡ್ ನಂ.1 ಹೊಗೆಬೀಳು ........ 419
459. ವಾರ್ಡ್ ನಂ.2 ಕುಂಬಾರಹಟ್ಟಿ ........ 420
460. ವಾರ್ಡ್–3: ಟಿವಿವಿ ಕಾಲೇಜು,
ಎಸ್.ಎಂ.ಕೃಷ್ಣ ಬಡಾವಣೆ, ಕರಡೀಪುರ ........ 421
461. ವಾರ್ಡ್ ನಂ.4: ಮಸೀದಿ ಹಿಂಭಾಗ ........ 422
462. ವಾರ್ಡ್ ನಂ.5: ಇಂದಿರಾನಗರ ಮತ್ತು
ಸಿದ್ದನಾಯಕನ ಗಲ್ಲಿ ........ 422
463. ವಾರ್ಡ್ ನಂ.6 : ಗೋರಿಪಾಳ್ಯ ........ 423
464. ವಾರ್ಡ್ ನಂ.7 : ಸಿಹೀನೀರಿನ ಬಾವಿ ........ 424
465. ವಾರ್ಡ್ ನಂ.8 : ಹೌಸಿಂಗ್ ಬೋರ್ಡ್ ........ 425
466. ವಾರ್ಡ್ ನಂ.9 :
ಮೇಕೆಬಂಡೆ ಮತ್ತು ತಿಪ್ಪಾಪುರ ಸಿತ್ರ ........ 426
467. ವಾರ್ಡ್ ನಂ.10, 11 ಹಾಗೂ 12 :
ಹೊಗೆಬೀಳು ನಾಯ್ಕರಹಟ್ಟಿ ........ 427
468. ವಾರ್ಡ್ ನಂ.13 : ಬೂರ್ಕನಹಟ್ಟಿ ........ 428
469. ವಾರ್ಡ್ ನಂ.14 : ರಾಮೇಗೌಡನ ಗಲ್ಲಿ ........ 429
470. ವಾರ್ಡ್ ನಂ.15 :
ಚೌಡೇಶ್ವರಿ ಮತ್ತು ವಿಆರ್‌ಎಸ್‌ಟಿ ........ 429
471. ವಾರ್ಡ್ ನಂ.16, 17, 18 :
ಆದಿಕರ್ನಾಟಕ ಕಾಲೋನಿ ........ 430

# ಮಧುಗಿರಿ ತಾಲ್ಲೂಕು

ಮಧುಗಿರಿ ತುಮಕೂರು ಜಿಲ್ಲೆಗೆ ಸೇರಿದ ಒಂದು ತಾಲ್ಲೂಕು ಕೇಂದ್ರ. ಗಡಿನಾಡ ಪ್ರದೇಶವಾಗಿದ್ದು ಪೂರ್ವ, ಉತ್ತರ, ವಾಯವ್ಯ ದಿಕ್ಕುಗಳಿಗೆ ಆಂಧ್ರ ಪ್ರದೇಶದಿಂದ ಆವೃತವಾಗಿದೆ. ದೊಡ್ಡೇರಿ, ಮಿಡಿಗೇಶಿ, ಪುರವರ, ಕೊಡಿಗೇನಹಳ್ಳಿ ಮತ್ತು ಐ.ಡಿ. ಹಳ್ಳಿ (ಇಟಕದಿಬ್ಬನಹಳ್ಳಿ) ಹಾಗೂ ಮಧುಗಿರಿ ಕಸಬಾ ಈ ಆರು ಹೋಬಳಿ ಕೇಂದ್ರಗಳಾಗಿ ಆಡಳಿತಾತ್ಮಕವಾಗಿ ಗುರುತಿಸಲಾಗಿದೆ. ಮಾತ್ರವಲ್ಲದೆ ಮಧುಗಿರಿ ತುಮಕೂರು ಜಿಲ್ಲೆಯ ಉಪವಿಭಾಗವಾಗಿದ್ದು ಸಿರಾ, ಪಾವಗಡ, ಮಧುಗಿರಿ ಹಾಗೂ ಕೊರಟಗೆರೆ ಈ ನಾಲ್ಕು ತಾಲ್ಲೂಕುಗಳು ಮಧುಗಿರಿಯ ಉಪವಿಭಾಗಕ್ಕೆ ಒಳಪಟ್ಟಿವೆ. ಶೈಕ್ಷಣಿಕ ಜಿಲ್ಲೆಯ ಸ್ಥಾನಮಾನವೂ ಇದೆ.

ಭೌಗೋಳಿಕವಾಗಿ ೧,೧೧೮ ಚದರ ಕಿ.ಮೀ ಗಳಲ್ಲಿ ಇಲ್ಲಿನ ಭೂ ವಿಸ್ತೀರ್ಣ ಹರಡಿಕೊಂಡಿದೆ. ಬೇಸಿಗೆಯಲ್ಲಿ ಅತಿ ಹೆಚ್ಚು ಉಷ್ಣಾಂಶ ೪೦ ಡಿಗ್ರಿ ಸೆಂಟಿಗ್ರೇಡ್ ಇರುತ್ತದೆ. ಚಳಿಗಾಲದಲ್ಲಿ ೧೪ ಡಿಗ್ರಿ ಸೆಂಟಿಗ್ರೇಡ್ ಚಳಿ ಇರುತ್ತದೆ. ಸಾಧಾರಣ ಮಳೆ ಪ್ರಮಾಣ ಹೊಂದಿದ್ದು ಕಳೆದ ೨ ವರ್ಷಗಳಲ್ಲಿ ೫೦೮ ಮಿಮೀ ಮಳೆ ಬಿದ್ದಿರುತ್ತದೆ. ಮಧುಗಿರಿ ಸುತ್ತಲೂ ಬೆಟ್ಟಗಳಿಂದ ಆವೃತವಾಗಿದೆ. ಮಧುಗಿರಿ ಬೆಟ್ಟದ ಮೇಲೆ ಭದ್ರವಾದ ಕೋಟೆ ಇದೆ. ಮಧುಗಿರಿ ಕೋಟೆಯು ೨೩೨ ಎಕರೆಯಷ್ಟು ವಿಸ್ತಾರವಾಗಿದೆ. ಬೆಟ್ಟಕ್ಕೆ ಹೊಂದಿಕೊಂಡಂತೆ ಬುಡದಲ್ಲಿಯೇ ಸಿದ್ದೇಶ್ವರ ಗವಿ, ಪಟಾಲದಮ್ಮನ ಗವಿ, ಸಾಧುಗವಿ ಹಾಗೂ ಮೇಕೆ ಗವಿ ಎಂಬ ಪ್ರಸಿದ್ಧ ಗವಿಗಳಿವೆ.

ಮಧುಗಿರಿ ಬೆಟ್ಟವು ಏಕಶಿಲೆಯದಾಗಿದ್ದು ಏಷ್ಯಾ ಖಂಡದಲ್ಲಿಯೇ ಎರಡನೇ ಅತಿ ಎತ್ತರದ ಏಕಶಿಲಾ ಬೆಟ್ಟ ಎಂದು ಹೇಳಲಾಗುತ್ತಿದೆ. ಕುಡಿಯಲು ಹೇಮಾವತಿ ನೀರನ್ನು ಮಧುಗಿರಿ ಕೆರೆಗೆ ಹರಿಸಿ ಕೊಳಾಯಿಗಳ ಮೂಲಕ ಪಟ್ಟಣಕ್ಕೆ ಪೂರೈಸಲಾಗುತ್ತದೆ.

ಈ ಗ್ರಾಮ ನಿಷ್ಪತ್ತಿಯ ಬಗೆಗೆ ಉಲ್ಲೇಖಗಳೂ ಪ್ರಕಟವಾಗಿವೆ. ಮೊದಲಿಗೆ ಮದ್ಗಿರಿ ಎಂದು ಇದರ ಪ್ರಾಚೀನ ಹೆಸರಾಗಿದ್ದು ಮುಂದೆ ಮದ್ದಗಿರಿ ಎಂದೂ, ಮೈಸೂರು ಅರಸರು ಪ್ರಸನ್ನಗಿರಿ ಎಂದೂ, ಹೈದರಾಲಿ ಫತೇಹಾಬಾದ್ ಎಂದು, ಇದರ ಜೊತೆ ಜೊತೆಗೆ ಮಾಧವಗಿರಿ, ಪ್ರಸನ್ನಗಿರಿ ಎಂದೂ ಕರೆಯುತ್ತಿದ್ದ ಬಗೆಗೆ ಉಲ್ಲೇಖಗಳಿವೆ. ಮಂದಗಿರಿಯೇ ಮಧಗಿರಿ ಆಗಿರಬೇಕೆಂಬ ವಾದಗಳೂ ಇವೆ. ೧೯೨೭ ರಲ್ಲಿ ಕಂಪನಿ ಸರ್ಕಾರ ಹಾಗೂ ಮಧುಗಿರಿಯಲ್ಲಿ ಅಧಿಕಾರಿಯಾಗಿದ್ದ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು 'ಮಧುಗಿರಿ' ಎಂದು ಪುನರ್ ನಾಮಕರಣ ಮಾಡಿರುವುದರ ಬಗೆಗೆ ಸರ್ಕಾರಿ ದಾಖಲೆಗಳಿವೆ.

ಮಧುಗಿರಿ ಒಂದು ಪಾಳೆಯಪಟ್ಟಾಗಿ, ಹಲವು ರಾಜರ ಆಳ್ವಿಕೆಗೆ ಒಳಪಟ್ಟಿತ್ತು. ಇಲ್ಲಿ ಗಂಗರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮೈಸೂರು ಮಹಾರಾಜರು, ಹೈದರಾಲಿ, ಮಧುಗಿರಿ ಪಾಳೆಯಗಾರರು ಮಧುಗಿರಿ ನಗರವನ್ನು ಕಟ್ಟಿ ಬೆಳೆಸಿದ್ದಾರೆ. ಮಧುಗಿರಿ ದೇವಾಲಯಗಳ ಬೀಡು, ಕಲ್ಯಾಣ ನಗರ, ಹಿತ್ತಾಳೆ, ತಾಮ್ರದ ಪಾತ್ರೆ ಕೈಗಾರಿಕೆಗೆ ಹೆಸರುವಾಸಿ. ಅಂತೆಯೇ ಕಂಬಳಿ ಗೃಹಕೈಗಾರಿಕೆಯಲ್ಲಿ ಈ ಊರು ಹೆಸರು ಮಾಡಿತ್ತೆಂದು ಹೇಳಲಾಗುತ್ತಿದೆ. ದೇಗುಲಗಳ ನಾಡಾದ ಮಧುಗಿರಿಯ ಪ್ರವೇಶ ದ್ವಾರದ ಬಳಿಯೇ ದಂಡಿನ ಮಾರಮ್ಮನ ದೇವಾಲಯವಿದೆ. ಬೆಟ್ಟದ ಬದಿಗೆ ಕೋದಂಡರಾಮ ದೇವಾಲಯವಿದೆ. ಕೋಟೆಗೆ ಹೊಂದಿಕೊಂಡಂತೆ ಪ್ರಸಿದ್ಧ ಜೈನ ಬಸದಿ, ಮಲ್ಲಿನಾಥನ ಬಸದಿ, ರಾಯರ ಗುಡಿ, ಶನಿದೇವರ ದೇವಾಲಯಗಳಿವೆ. ಊರಿನ ನಡುವೆ ವೆಂಕಟರಮಣಸ್ವಾಮಿ ಹಾಗೂ ಅದರ ಬದಿಗೆ ಮಲ್ಲೇಶ್ವರ ದೇವಾಲಯಗಳಿವೆ. ಇವು ಎತ್ತರದ ಗೋಪುರ, ಪ್ರಾಂಗಣ, ವಾಸ್ತುಶಿಲ್ಪಕ್ಕೆ ಹೆಸರಾಗಿವೆ. ಇಂದಿಗೂ ಆಕರ್ಷಕವಾದ ಬೃಹತ್ ದೇಗುಲಗಳಿವು.

ಮಧುಗಿರಿಯಲ್ಲಿ ಜೈನರು, ಶೆಟ್ಟಿ ಬಣಜಿಗರು, ಮುಸ್ಲಿಮರು, ಕುಂಚಿಟಿಗರು, ಕುರುಬರು, ಆದಿಕರ್ನಾಟಕ, ಆದಿದ್ರಾವಿಡ ಜನಾಂಗದವರಿದ್ದಾರೆ. ವೈಶ್ಯರು, ನಾಯಕರು, ಅಕ್ಕಸಾಲಿಗರು, ಮಡಿವಾಳ, ಹೂವಾಡಿಗರು, ಮಾರ್ವಾಡಿ, ಲಂಬಾಣಿ, ಕೊರಚ, ಕೊರಮ, ಬುಡಬುಡಿಕೆ ಜನಾಂಗದವರೂ ಇಲ್ಲಿ ಕಿರು ಸಮುದಾಯವಾಗಿದೆ. ಅವರುಗಳು ಮಧುಗಿರಿಯ ವಿವಿಧ ಬಡಾವಣೆಗಳಲ್ಲಿ ಹಂಚಿಹೋಗಿದ್ದಾರೆ. ವ್ಯವಸಾಯ, ವಾಣಿಜ್ಯ, ಸಣ್ಣ ಕೈಗಾರಿಕೆ ಇಲ್ಲಿನ ಪ್ರಮುಖ ವೃತ್ತಿಯಾಗಿದ್ದು ಶೇಂಗಾ, ರಾಗಿ, ಹುರುಳಿ ಬೆಳೆಯುತ್ತಾರೆ. ತೆಂಗು, ದಾಳಿಂಬೆ, ಅಡಿಕೆ, ರೇಷ್ಮೆ ಪ್ರಮುಖ ವ್ಯಾಪಾರಿ ಬೆಳೆಯಾಗಿದೆ. ಕುರಿ, ಹುಣಸೇಹಣ್ಣು, ಹೊಂಗೆ ಬೀಜ ಪ್ರಮುಖ ವಾಣಿಜ್ಯ ಬೆಳೆಗಳು. ಮುಖ್ಯ ಆಹಾರ ರಾಗಿಮುದ್ದೆ, ಅನ್ನ. ಚಪಾತಿ, ಉಪ್ಪಿಟ್ಟು, ಚಿತ್ರಾನ್ನ ಬಳಸುತ್ತಾರೆ. ಬಾಡೂಟ, ಪಾಯಸ, ಹೋಳಿಗೆ ಸಾಂದರ್ಭಿಕ ವಿಶೇಷ ಭೋಜನಗಳಾಗಿವೆ.

ಪ್ರಾಣಿಗಳಾದ ಕರಡಿ, ಮೊಲ, ಜಿಂಕೆ, ಹಂದಿ, ಉಡ, ಅಳಿಲು, ಇಲಿ, ಮುಂಗುಸಿ ಕಂಡುಬಂದರೆ ಸಾಕುಪ್ರಾಣಿಗಳಾಗಿ ಹಸು, ಎಮ್ಮೆ, ಎತ್ತು, ಮೇಕೆ, ಕುರಿ, ನಾಯಿ, ಬೆಕ್ಕು ಸಾಕುತ್ತಾರೆ. ಪಕ್ಷಿಗಳಾದ ಕೊಕ್ಕರೆ, ಕಾಗೆ, ಕೋಗಿಲೆ, ಹದ್ದು, ಗರುಡ, ಗೂಬೆ, ಗಿಡುಗ ಮೊದಲಾದ ಪಕ್ಷಿಗಳು, ಕೋಳಿ, ಪಾರಿವಾಳ ಸಾಕುಪಕ್ಷಿಯಾಗಿವೆ. ಆಡಳಿತಾತ್ಮಕವಾಗಿ ಮಧುಗಿರಿ ವಿಧಾನಸಭಾ ಕ್ಷೇತ್ರವಾಗಿದ್ದು

ಪುರಸಭಾ ಕೇಂದ್ರವೂ ಆಗಿದೆ. ತುಮಕೂರು ಲೋಕಸಭಾ ವ್ಯಾಪ್ತಿಗೆ ಸೇರಿದೆ. ಈ ತಾಲ್ಲೂಕಿನ ಪುರವರ ಹೋಬಳಿ ಮಾತ್ರ ಕೊರಟಗೆರೆ ವಿಧಾನಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಉಪವಿಭಾಗಾಧಿಕಾರಿಗಳ ಕಛೇರಿ, ತಹಸೀಲ್ದಾರ್, ಪಂಚಾಯತ್ ರಾಜ್ ಇಲಾಖೆಗಳು, ಉಪನಿರ್ದೇಶಕರ ಕಛೇರಿ (ಡಿಡಿಪಿಐ), ಭಾರತೀಯ ಜೀವವಿಮಾ ಕೇಂದ್ರ ಕಛೇರಿ, ಅಂಚೆ, ಆರ್.ಟಿ.ಓ., ನ್ಯಾಯಾಲಯ, ಪಿಡಬ್ಲ್ಯೂಡಿ ಮೊದಲಾದ ಇಲಾಖೆಗಳು ಉಪವಿಭಾಗದ ಕಚೇರಿಗಳಾಗಿ ಕಾರ್ಯನಿರ್ವಹಿಸುತ್ತಿವೆ.

ಸರ್ಕಾರಿ ಪ್ರಥಮದರ್ಜೆ ಕಾಲೇಜು, ಪದವಿಪೂರ್ವ ಕಾಲೇಜು, ಪ್ರೌಢಶಾಲೆಗಳು, ಉರ್ದು ಹೈಸ್ಕೂಲ್‌ಗಳಿವೆ. ಕೈಗಾರಿಕಾ ತರಬೇತಿ ಸಂಸ್ಥೆಗಳಿವೆ. ಖಾಸಗಿ ಟಿವಿವಿ ಪ್ರಥಮದರ್ಜೆ ಕಾಲೇಜು, ಬಿ.ಎಡ್ ಕಾಲೇಜುಗಳೂ ಇವೆ. ಮಧುಗಿರಿಯನ್ನು ಕೇಂದ್ರವಾಗಿರಿಸಿಕೊಂಡು ಇಲ್ಲಿನ ಜನರೊಂದಿಗೆ ಸ್ವಾತಂತ್ರ್ಯ ಚಳುವಳಿ ನಡೆಸುವ ಮೂಲಕ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿಸಿಕೊಂಡ ಈ ಭಾಗದ ಎಂ.ಪುಟ್ಟತಿಮ್ಮಯ್ಯ, ಆರ್.ಚಿಕ್ಕಯ್ಯ, ಜಿ.ಟಿ. ಗೋವಿಂದರೆಡ್ಡಿ, ಲಕ್ಷ್ಮೀನಾರಾಯಣಶೆಟ್ಟಿ, ಬ್ರಹ್ಮರಾಯಪ್ಪ, ಹೆಂಜಾರಪ್ಪ, ಜಾಲನಪ್ಪ, ಜಿ.ವಿ. ಖಾದರ್ ಅಲಿಖಾನ್ ಮೊದಲಾದವರ ಸೇವೆ ಮನನೀಯವಾದುದು.

ಚಿತ್ರಕಲೆಯಲ್ಲಿ ಅಪೂರ್ವ ಸಾಧನೆ ಮಾಡಿರುವ ಮಧುಗಿರಿಯ ರಾಮು ರಾಷ್ಟ್ರಪ್ರಶಸ್ತಿ ಪುರಸ್ಕೃತರು. ಇವರ ತೈಲವರ್ಣದ ಚಿತ್ರಗಳು ರಾಷ್ಟ್ರಪತಿ ಭವನದಲ್ಲಿವೆ. ದೇವರ ವಿಗ್ರಹ ತಯಾರಕರಾದ ಎಂ.ಎಲ್. ನಾಗರಾಜ್, ರಂಗ ಸೀನರಿಯ ಜರತಾರಿ ರಂಗಣ್ಣ, ಕಾಮಾಕ್ಷಮ್ಮ, ಎಂ.ಡಿ. ಮಲ್ಲಪ್ಪ, ಕೋಟೆ ಕಲ್ಲಪ್ಪ, ರಂಗಭೂಮಿ ಕಲಾವಿದರಾದ ಚಿ.ಸೂ. ಕೃಷ್ಣಮೂರ್ತಿ, ಮ.ನಾ. ವೆಂಕಟೇಶ ಬಾಬು, ಸುದರ್ಶನ ಬಾಬು, ಚಂದ್ರಶೇಖರ ಶಾಸ್ತ್ರಿ, ಪ.ವಿ. ಸುಬ್ರಹ್ಮಣ್ಯ, ಕೆಇಬಿ ಹುಚ್ಚಣ್ಣ, ಲಕ್ಷ್ಮೀನಾರಾಯಣರೆಡ್ಡಿ, ಎನ್. ಅಡವೀಶ, ಮರಿಬಸಪ್ಪ, ದೂರದರ್ಶನ ಕಲಾವಿದರಾದ ಮಧುಗಿರಿ ಮಲ್ಲಣ್ಣ, ಎನ್.ಅಡವೀಶ್ ಇವರ ಕಲಾ ಚಾತುರ್ಯತೆಯಿಂದ ಪ್ರಸಿದ್ಧರಾಗಿದ್ದಾರೆ.

ಸಾಹಿತ್ಯ ಕ್ಷೇತ್ರಕ್ಕೆ ಮಹತ್ವದ ಕೊಡುಗೆ ನೀಡಿರುವ ಚರಿತ್ರೆಕಾರ ಎಂ.ಡಿ. ಶ್ರೀನಿವಾಸ್, ಪತ್ರಕರ್ತರಾದ ಪಿ.ಎಂ. ಉಮೇಶ್, ಅನಂತಕುಮಾರ್, ರಾಮಕೃಷ್ಣ, ನಾಗಭೂಷಣ, ಮಲ್ಲಿಕಾರ್ಜುನ್, ರಾಮಚಂದ್ರ ರಾವ್, ಸಿ.ಎಸ್. ಕೃಷ್ಣಮೂರ್ತಿ, ಸಿ.ಎಸ್. ಗುರುರಾಜ್, ಎಂ.ಎಸ್. ರಘುನಾಥ್, ಲಕ್ಷ್ಮೀನಾರಾಯಣ ರೆಡ್ಡಿ, ಬಂಡಿ ಚೌಡಯ್ಯ, ಕೆ.ಆರ್. ಗೌಡ, ಅನಂತ್, ರಮೇಶ್, ನಾಗೇಂದ್ರ ಈ ಮೊದಲಾದವರು ಅಕ್ಷರ ಮಾಧ್ಯಮದಲ್ಲಿ ಸಕ್ರಿಯವಾಗಿ ತೊಡಗಿದ್ದಾರೆ. ಪ್ರೊ॥ ಎಂ.ಎಲ್. ನರಸಿಂಹಮೂರ್ತಿ ಉತ್ತಮ ಸಾಹಿತಿಗಳೂ ಆಗಿದ್ದು ಇವರು ಬರೆದ ಮಧುಗಿರಿ ದಂಡಿನ ಮಾರಮ್ಮ ಕೃತಿಯನ್ನು ಕರ್ನಾಟಕ ಜಾನಪದ ಅಕಾಡೆಮಿ ಪ್ರಕಟಿಸಿದೆ. ಇದು ಹಲವು ಸಂಶೋಧನೆಗೂ ಒಳಗಾದ ಕೃತಿಯಾಗಿದೆ. ಇತರ ಕೃತಿಗಳನ್ನೂ ಪ್ರಕಟಿಸಿದ್ದಾರೆ. ಸಾಂಸ್ಕೃತಿಕ ಚಿಂತಕರೂ ಹೌದು. ಮಧುಗಿರಿ ವಿಜಯ ಮೋಹನ್ ಉತ್ತಮ ಕಥೆಗಾರ್ತಿಯಾಗಿ ಗುರುತಿಸಿಕೊಂಡಿದ್ದಾರೆ. ಸಿರಾದ ಕಮಲಾ ನರಸಿಂಹ ಸಧ್ಯ ಮಧುಗಿರಿ ಬಿ.ಇಡಿ ಕಾಲೇಜಿನ ಪ್ರಾಧ್ಯಾಪಕಿಯಾಗಿ ಪ್ರಬುದ್ಧ ಕಾದಂಬರಿ, ಕಥೆಗಾರ್ತಿಯಾಗಿ ಗುರುತಿಸಿಕೊಂಡಿದ್ದಾರೆ. ಇವರ ಕಾದಂಬರಿ ಬೇರೆ ಭಾಷೆಗೂ ಅನುವಾದವಾಗಿವೆ. ಸಾಹಿತ್ಯ ಅಕಾಡೆಮಿ ಪ್ರಶಸ್ತಿಗೆ 'ಹದ್ದು' ಕಾದಂಬರಿ ಪಾತ್ರವಾಗಿದೆ.

ಮಧುಗಿರಿ, ಸಿರಾ, ಪಾವಗಡ, ಬೆಂಗಳೂರು, ತುಮಕೂರು, ಗೌರಿಬಿದನೂರಿಗೆ ಉತ್ತಮ ರಸ್ತೆ, ಬಸ್ ಸಂಪರ್ಕವಿದೆ. ಕನ್ನಡ ಇಲ್ಲಿನ ಮಾತೃಭಾಷೆ. ತೆಲುಗು, ಉರ್ದು, ಹಿಂದಿ, ಗುಜರಾತಿ, ಲಂಬಾಣಿ ಇತರೆ ಸಂಪರ್ಕ ಭಾಷೆಗಳಾಗಿವೆ.

ಮಧುಗಿರಿ ದಂಡಿನ ಮಾರಮ್ಮನ ಜಾತ್ರೆ ತುಮಕೂರು ಜಿಲ್ಲೆಯ ಪ್ರಸಿದ್ಧ ಜಾತ್ರೆ. ದನಗಳ ಜಾತ್ರೆಯಾಗಿ ೧೫ ದಿನಗಳ ಕಾಲ ನಡೆಯುತ್ತದೆ. ಕುಲಾಚಾರ, ಕೈವಾಡದವರು ಒಂದೊಂದು ಜಾತಿಯವರ ಪ್ರತ್ಯೇಕ ಆರತಿ, ವಾನ, ಬಲಿ ಸಂಪ್ರದಾಯವಿದೆ. ಸಿಡಿ, ಬಾಯಿಬೀಗ, ಸರಗ ಹಾಕುವುದು, ಗಾವು ಸಿಗಿಯುವುದು ಇಲ್ಲಿನ ಪ್ರಮುಖ ಆಚರಣೆ. ಈ ಸಂದರ್ಭದಲ್ಲಿ ಸೋಮನ ಕುಣಿತ, ಪಟ ಕುಣಿತ, ಪಂಡರಿ ಭಜನೆ, ಕೋಲಾಟ, ಅಸಾದಿ ಕುಣಿತ ಏರ್ಪಡುತ್ತದೆ. ಹಗಲು ಪರಿಸೆ, ರಾತ್ರಿ ಪರಿಷೆ ಎಂದು ಎರಡು ವಿಧದಲ್ಲಿ ಉತ್ಸವ ನಡೆಯುತ್ತದೆ.

ಯುಗಾದಿ, ದೀಪಾವಳಿ, ದಸರಾ, ಶಿವರಾತ್ರಿ, ಗೌರಿ–ಗಣೇಶ, ಬಕ್ರೀದ್, ಈದ್‌ಮಿಲಾದ್ ಮೊದಲಾದ ಹಬ್ಬಗಳನ್ನು ವಿಜೃಂಭಣೆಯಿಂದ ಆಚರಿಸುತ್ತಾರೆ.

## ಅಕ್ಕಲಾಪುರ

ಅಕ್ಕಲಾಪುರ ಗ್ರಾಮವು ಮಧುಗಿರಿ ತಾಲ್ಲೂಕಿನ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೯೪.೮೭ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಅಕ್ಕಲಾಪುರ ಗ್ರಾಮದ ಭೌಗೋಳಿಕ ವಿಸ್ತೀರ್ಣವು ಕಂಸಾನಹಳ್ಳಿ ಭೌಗೋಳಿಕ ವಿಸ್ತೀರ್ಣದಲ್ಲಿ ಸೇರಿರುತ್ತದೆ.

ಕಂಸಾನಹಳ್ಳಿ ಗ್ರಾಮವು ಪ್ರಾಚೀನ ಕಾಲದಲ್ಲಿ ಜೋಡಿದಾರಿಕೆ ಗ್ರಾಮವಾಗಿತ್ತು ಹಾಗಾಗಿ ಕಂಸಾನಹಳ್ಳಿ ಗ್ರಾಮದ ಭೌಗೋಳಿಕ ವಿಸ್ತೀರ್ಣದಲ್ಲಿ ಅಕ್ಕಲಾಪುರ ಗ್ರಾಮವು ಸೇರಿದೆ. ಪ್ರಾಚೀನ ಕಾಲದಲ್ಲಿ ಕಂಸಾನಹಳ್ಳಿ ಗ್ರಾಮದ ಉತ್ತರ ದಿಕ್ಕಿನಲ್ಲಿದ್ದ ಗೋಮಾಳದ

ಪ್ರದೇಶದಲ್ಲಿಯೇ ಗ್ರಾಮ ನಿರ್ಮಿತವಾಗಿ ಅಕ್ಕಳಾಪುರ ಎಂದು ಹೆಸರಾಗಿದೆ. ಆಕಳುಗಳು ಅಂದರೆ ಹಸುಗಳು ಮೇವು ಮೇಯುತ್ತಿದ್ದಂತಹ ಗೋಮಾಳದ ಸ್ಥಳದಲ್ಲಿ ನಿರ್ಮಿತವಾದ ಗ್ರಾಮವೇ ಹೆಸರಾಗಿ ಆಕಳಾಪುರ ಎನಿಸಿದೆ. ಆಕಳಾಪುರ ಎಂಬ ಹೆಸರು ಕ್ರಮೇಣವಾಗಿ ಆಕಳಾಪುರ, ಅಕ್ಕಲಾಪುರ ಎಂದೆಲ್ಲಾ ಬಳಕೆಯಾಗಿದೆ. ಈಗಿನ ಸರ್ಕಾರಿ ದಾಖಲೆಗಳಲ್ಲಿ ಅಕ್ಕಲಾಪುರ ಎಂದು ಬಳಸಲ್ಪಟ್ಟಿದೆ. ಆದರೂ ಸಹ ಗ್ರಾಮಸ್ಥರು ಅಕ್ಕಳಾಪುರ ಎಂದೇ ಆಡುಭಾಷೆಯಲ್ಲಿ ಈಗಲೂ ಸಹ ಬಳಸುತ್ತಾರೆ. ಕಂಸಾನಹಳ್ಳಿ ಗ್ರಾಮದ ಬ್ರಾಹ್ಮಣರ ಜೋಡಿದಾರಿಕೆಯ ಅಧೀನಕ್ಕೆ ಅಕ್ಕಲಾಪುರ ಗ್ರಾಮವು ಒಳಪಟ್ಟಿತ್ತು ಎಂದು ತಿಳಿದುಬರುತ್ತದೆ. ಮೇಲ್ಕಂಡಂತೆ ಅಕ್ಕಲಾಪುರ ಗ್ರಾಮದ ಗ್ರಾಮಸ್ಥರು ತಿಳಿಸಿದ್ದಾರೆ.

ಈ ಗ್ರಾಮದಲ್ಲಿ ಭೌಗೋಳಿಕವಾಗಿ ಯಾವುದೇ ರೀತಿಯ ಬೆಟ್ಟ ಗುಡ್ಡಗಳಿಲ್ಲ. ವಿಶಾಲವಾದ ಬಯಲುಸೀಮೆಯ ಪ್ರದೇಶವಾಗಿದೆ. ಈ ಪ್ರದೇಶವು ಕೆಂಪು ಮಣ್ಣಿನ ಭೂಮಿಯನ್ನು ಹೊಂದಿರುತ್ತದೆ.

ಗ್ರಾಮಕ್ಕೆ ಒಂದು ಕೆರೆ ಇದೆ. ದಾಸಕುಂಟೆ ಹಳ್ಳ, ಜಾಲಿಹಳ್ಳ, ಕೋಡಿ ಹಳ್ಳಗಳು ಈ ಪ್ರದೇಶದ ಹಳ್ಳಗಳಾಗಿವೆ. ಮಳೆಗಾಲದಲ್ಲಿ ಉತ್ತಮ ಮಳೆಯಾದಾಗ ಹಳ್ಳಗಳು ಹರಿದು ಕೆರೆಯೂ ಸಹ ತುಂಬುತ್ತದೆ. ಆಗ ಗ್ರಾಮದ ಅಂತರ್ಜಲ ಮಟ್ಟವು ಮೇಲೇರುತ್ತದೆ. ಉತ್ತಮವಾದ ನೀರು ಕೊಳವೆ ಬಾವಿಗಳಲ್ಲಿ ಬೇಸಿಗೆಯಲ್ಲೂ ಸಹ ಬರುವಂತಾಗುತ್ತದೆ. ವಾರ್ಷಿಕವಾಗಿ ೫೫೭ ಮಿಮೀ ಮಳೆ ಪ್ರಮಾಣವಿದೆ. ಒಂದೇ ದಿನ ೮೫ ಮಿಮೀ ಮಳೆ ಬಿದ್ದ ದಾಖಲೆ ಇದೆ. ಆದರೂ ಪ್ರತಿ ವರ್ಷದಲ್ಲಿ ಮಳೆಯ ಪ್ರಮಾಣವು ಕುಸಿಯುತ್ತಿದೆ. ಮಳೆಯು ಚೆನ್ನಾಗಿ ಸುರಿದ ವರ್ಷದಲ್ಲಿ ಉತ್ತಮ ಬೆಳೆಯನ್ನು ರೈತರು ಬೆಳೆಯುವರು. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ೪೦ ಮನೆಗಳಿದ್ದು ಇವು ಮಾಳಿಗೆ, ಕಲ್ಲಿನ, ಹೆಂಚಿನ ರೂಪದಲ್ಲಿದೆ. ಆಶ್ರಯ, ಜನತಾ ವಸತಿ ಯೋಜನೆಯ ೧೪ ಫಲಾನುಭವಿಗಳಿದ್ದಾರೆ.

ಈ ಗ್ರಾಮದಲ್ಲಿ ರಾಗಿ, ಮುಸುಕಿನಜೋಳ, ರೇಷ್ಮೆ ಬೆಳೆಗಳನ್ನು ಪ್ರಧಾನವಾಗಿ ಬೆಳೆಯುತ್ತಾರೆ. ಅವರೆ, ಉದ್ದು, ತೊಗರಿ ಉಪಬೆಳೆಗಳಾಗಿವೆ. ರಾಗಿಯು ಆಹಾರದ ಬೆಳೆಯಾಗಿದೆ. ರೇಷ್ಮೆ ಗೂಡು ಮತ್ತು ಮೆಣಸಿನಕಾಯಿ ಬೆಳೆದು ವಾಣಿಜ್ಯ ಬೆಳೆಯಾಗಿದೆ. ಗ್ರಾಮಸ್ಥರು ಒಳ್ಳೆಯ ಬೆಳೆಯನ್ನು ಬೆಳೆಯುತ್ತಾರೆ.

ಅಕ್ಕಲಾಪುರ ಗ್ರಾಮದಲ್ಲಿ ಅಂದಿನಿಂದ ಇಂದಿನವರೆಗೆ ಮಾರಮ್ಮ ದೇವತೆಗೆ ಮಂಗಳವಾರ ಮತ್ತು ಶುಕ್ರವಾರಗಳಂದು ವಿಶೇಷ ಪೂಜೆ ನೆರವೇರಿಸುತ್ತಾರೆ. ಪ್ರತಿವರ್ಷ ಆಷಾಢ ಮಾಸದಲ್ಲಿ ಆರತಿ ಸೇವೆ ನಡೆಯುತ್ತದೆ. ೩ ಅಥವಾ ೪ ವರ್ಷಕ್ಕೊಮ್ಮೆ ಅಕ್ಕಲಾಪುರದಲ್ಲಿ ಮಾರಮ್ಮ ದೇವತೆ ಜಾತ್ರೆ ನಡೆಯುತ್ತದೆ. ಆಷಾಢದಲ್ಲಿಯೇ ಲಕ್ಷ್ಮೀನರಸಿಂಹಸ್ವಾಮಿಗೆ ಪ್ರತ್ಯೇಕವಾಗಿ ಆರತಿ ಪೂಜೆ ನಡೆಯುತ್ತದೆ. ಲಕ್ಕಮ್ಮ ದೇವತೆಗೆ ಶಿವರಾತ್ರಿ ಹಬ್ಬದಂದು ಮಣೇವು ಕುಣಿತದ ಆಚರಣೆ ನಡೆಸುವರು.

ಈ ಗ್ರಾಮದಲ್ಲಿ ನಾಯಕರು ದೊಡ್ಡ ಸಮುದಾಯದವರಾಗಿದ್ದಾರೆ. ಉಳಿದಂತೆ ಹಿಂದೂ ಸಾದರು, ಕುರುಬರು, ನೇಕಾರರು, ಭಜಂತ್ರಿ, ಬ್ರಾಹ್ಮಣರು ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದೆ. ತೆಲುಗು ಮಾತನಾಡುವವರು ಇದ್ದಾರೆ.

ಈ ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಅಂಗನವಾಡಿ ಕೇಂದ್ರ, ಮಿನಿ ಡೈರಿ, ಮೂರು ಕಿರಾಣಿ ಅಂಗಡಿ, ಮೂರು ಸ್ತ್ರೀಶಕ್ತಿ ಸಂಘಗಳಿವೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಒಟ್ಟು ೧೧ ಮಂದಿ ವಿದ್ಯಾರ್ಥಿಗಳಿದ್ದಾರೆ. ಇವರಲ್ಲಿ ಬಾಲಕರು ೬ ಮಂದಿ, ಬಾಲಕಿಯರು ೫ ಮಂದಿಯಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೧೩%. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೯.೨%.

ಗ್ರಾಮದಲ್ಲಿನ ಕುರುಚಲು ಪೊದೆಗಳಲ್ಲಿ ಕಾಡುಮೊಲ, ಕಾಡುಹಂದಿ, ನರಿಯಂತಹ ಪ್ರಾಣಿಗಳಿವೆ. ಗೌಜುಗ, ಬೆಳವ, ಗೊರವಂಕ ಮುಂತಾದ ಪಕ್ಷಿಗಳಿವೆ. ಗ್ರಾಮದಲ್ಲಿ ನಾಟಿಹಸು, ನಾಟಿ ಎತ್ತು, ಸೀಮೆಹಸು, ಎಮ್ಮೆ, ಕುರಿ, ಮೇಕೆ ಮುಂತಾದ ಸಾಕುಪ್ರಾಣಿಗಳಿವೆ. ಕೋಳಿಗಳು, ಹುಂಜಗಳು ಸಾಕು ಪಕ್ಷಿಗಳಾಗಿವೆ.

ಗ್ರಾಮದಲ್ಲಿನ ಮಿನಿಡೈರಿಗೆ ಗ್ರಾಮಸ್ಥರು ಸೀಮೆಹಸು, ನಾಟಿಹಸು, ಎಮ್ಮೆಗಳಿಂದ ಹಾಲು ಸಂಗ್ರಹಿಸಿ ತಲುಪಿಸುತ್ತಾರೆ. ಆ ಮೂಲಕ ಹೈನುಗಾರಿಕೆಯು ಗ್ರಾಮದ ಆರ್ಥಿಕ ಬಲದ ಕಾರಣಗಳಲ್ಲೊಂದಾಗಿದೆ. ಅಲ್ಲದೆ ಗ್ರಾಮದಲ್ಲಿ ಕುರಿ, ಮೇಕೆಗಳು ಹಿಂಡುಹಿಂಡಾಗಿ ಸಾಕುತ್ತಿದ್ದು ಆರ್ಥಿಕ ಸ್ವಾವಲಂಬನೆ ಸಾಧನೆಯಲ್ಲಿದ್ದಾರೆ. ಕುರಿ–ಮೇಕೆಗಳು ವಂಶವೃದ್ಧಿಯಾದಂತೆಯೇ ಬೆಳೆಸಿ ಮಾರಿ ಹಣ ಪಡೆಯುತ್ತಾರೆ.

ಅಕ್ಕಲಾಪುರ ಗ್ರಾಮದ ಪ್ರಧಾನವಾದ ಆಹಾರವು ರಾಗಿ ಮುದ್ದೆಯಾಗಿದೆ. ಅಮುಖ್ಯವಾದ ಆಹಾರವಾಗಿ ಚಪಾತಿ, ಅನ್ನ, ಉಪ್ಪಿಟ್ಟು ಗ್ರಾಮದಲ್ಲಿ ಬಳಸುತ್ತಾರೆ. ಗ್ರಾಮದಲ್ಲಿ ವಿಶೇಷ ಆಹಾರವಾಗಿ ಬಾಡೂಟ, ಹೋಳಿಗೆ, ಕಡುಬನ್ನು ಬಳಸಲಾಗುತ್ತದೆ.

ಈ ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ ದೊಡ್ಡ ಮಾಲೂರು ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ, ಕೊಂಡವಾಡಿ

ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ಈ ಗ್ರಾಮವು ಕಂಸಾನಹಳ್ಳಿ ಮಜರೆ ಗ್ರಾಮವಾಗಿದೆ. ಅಕ್ಕಲಾಪುರ ಗ್ರಾಮವು ತುಮಕೂರು ಲೋಕಸಭಾ ವ್ಯಾಪ್ತಿಗೆ ಸೇರಿದೆ.

ಗ್ರಾಮದಲ್ಲಿ ಅಕ್ಕಲಾಪುರ ವೆಂಕಟಮ್ಮ ಎನ್ನುವ ಜನಪದ ಹಾಡುಗಾರ್ತಿಯಿದ್ದಾರೆ. ಡಾ॥ ಚಿಕ್ಕಣ್ಣ ಎಣ್ಣೆಕಟ್ಟೆಯವರು ಸಂಪಾದಿಸಿರುವ 'ಬಂಡಿ ಬಂದಾವು ಬಾಳೆ ವನದಾಗೆ' ಎನ್ನುವ ಗ್ರಂಥದಲ್ಲಿ ಅಕ್ಕಲಾಪುರದ ವೆಂಕಟಮ್ಮನವರ ಜನಪದ ಗೀತೆಗಳು ಸೇರ್ಪಡೆಯಾಗಿವೆ. ಗ್ರಾಮದಲ್ಲಿನ ಎಲ್.ಪುಟ್ಟರಾಜು ಕನ್ನಡ ಉಪನ್ಯಾಸಕರಾಗಿದ್ದು ಕವಿ, ಲೇಖಕರಾಗಿದ್ದಾರೆ. ಇವರು ತುಮಕೂರು ವಿವಿ ಆಶ್ರಯದಲ್ಲಿ 'ತುಮಕೂರು ಜಿಲ್ಲಾ ಸ್ಥಳನಾಮಗಳು' ಎಂಬ ಪುಸ್ತಕವನ್ನು ಪ್ರಕಟಿಸಿದ್ದಾರೆ.

ಗ್ರಾಮದಲ್ಲಿ ಯುಗಾದಿ, ಶ್ರೀರಾಮನವಮಿ, ಶಿವರಾತ್ರಿ, ಗೌರಿ–ಗಣೇಶ, ಕದರಿ ಹುಣ್ಣಿಮೆ ಹಬ್ಬಗಳನ್ನು ವಿಶೇಷವಾಗಿ ಆಚರಿಸುವರು. ಕದರಿ ಹುಣ್ಣಿಮೆ ಹಬ್ಬವು ಆಂಧ್ರದ ಮೂಲ ಕದರಿ ಲಕ್ಷ್ಮೀನರಸಿಂಹಸ್ವಾಮಿ ದೇವರ ಹಬ್ಬವಾಗಿದ್ದು ಗ್ರಾಮದಲ್ಲಿ ಆಚರಿಸುವರು.

## ಅಯ್ಯನಹಳ್ಳಿ

ಅಯ್ಯನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೦೫.೩೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳಗಳಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಆದಿಕರ್ನಾಟಕ, ಶೆಟ್ಟಿ, ಮಡಿವಾಳ, ಮುಸ್ಲಿಂ ಮುಂತಾದ ಜನಾಂಗದವರಿದ್ದಾರೆ. ಆದಿದ್ರಾವಿಡ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೫೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೭೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿ, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

೯೦% ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿಕಾರರು ೧೦% ಸಂಖ್ಯೆಯಲ್ಲಿದ್ದಾರೆ. ರಾಗಿ, ಭತ್ತ, ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ

ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ರೆಡ್ಡಿಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೬೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೩ ಅಂಗಡಿಗಳಿವೆ. ಇಬ್ಬರು ಸರ್ಕಾರಿ ಉದ್ಯೋಗದಲ್ಲಿದ್ದಾರೆ.

ಗ್ರಾಮದಲ್ಲಿ ಹನುಮಂತರಾಯ, ಲಕ್ಕಮ್ಮ, ಜಾಜಗಿರಿ ಕರಿಯಮ್ಮ ಹೊಸಳ್ಳಿ ಕರಿಯಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಕರಿಯಮ್ಮನ ಜಾತ್ರೆಯನ್ನು ಆರತಿ ಹಾಗೂ ಹರಕೆಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಅವರಗಲ್ಲು

ಅವರಗಲ್ಲು ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೦೫.೩೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಮಧುಗಿರಿ ಪಾಳೆಯಗಾರರು ಹಾಗೂ ಮಿಡಿಗೇಶಿ ಪಾಳೆಯಗಾರರ ಭೌಗೋಳಿಕ ಎಲ್ಲೆಯಲ್ಲಿ ಈ ಇಬ್ಬರೂ ಪಾಳೆಯಗಾರರ ಒಡಂಬಡಿಕೆಯಿಂದಾಗಿ ನಿರ್ಮಿಸಿದ ಗಡಿ ಕಲ್ಲಿನಿಂದಾಗಿ ಆ ಇಬ್ಬರಿಗೂ ಅವರಗಲ್ಲಾಗಿದೆ. ಇದು ಶುದ್ಧ ಕನ್ನಡ ಶಬ್ಧವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದಲ್ಲಿ ಬೆಟ್ಟ ಹಾಗೂ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಡಗ, ಗಿಳಿ, ಕಾಗೆ, ಕವುಜ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಕೆರೆ ಇಲ್ಲದೆ ಇದ್ದು ನೀರಾವರಿ ವ್ಯವಸಾಯಕ್ಕೆ ತುಂಬ ತೊಂದರೆಯಾಗಿದೆ. ಮಳೆಗಾಲದಲ್ಲಿ ಹಳ್ಳಗಳಿಂದ ಜಾನುವಾರುಗಳಿಗೆ ಕುಡಿಯುವ ನೀರಿನ ಸಹಾಯವಾಗುತ್ತಿತ್ತು. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೫೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೭೫ ಜನಸಂಖ್ಯೆ

ಪ್ರಮಾಣವನ್ನು ಹೊಂದಿದೆ. ಗಂಡಸರು ೩೪೫ ಜನ ಮತ್ತು ಹೆಂಗಸರು ೩೩೦ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೩೭ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಮೂರು ಸಾಂಪ್ರದಾಯಿಕ ಎತ್ತಿನ ಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಹೊಸಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಹೊಸಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಹೊಸಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳು ಹಾಗೂ ವಿಎಸ್ಎಸ್ಎನ್ ಇದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೬೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೭೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೫.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಒಂದು ಹಾಸ್ಟೆಲ್ ಇದೆ. ಪಶುವೈದ್ಯಕೀಯ ಆಸ್ಪತ್ರೆ ಇದ್ದು ವೈದ್ಯರು ಇದ್ದಾರೆ. ಇಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇದೆ.

ಗ್ರಾಮದಲ್ಲಿ ಹನುಮಂತರಾಯ, ಲಕ್ಕಮ್ಮ, ಜಾಜಗಿರಿ ಕರಿಯಮ್ಮ, ಹೊಸಹಳ್ಳಿ ಕರಿಯಮ್ಮ ದೇವಾಲಯಗಳಿವೆ. ಗ್ರಾಮವು ಎಲ್ಲಾ ಸಾಂಸ್ಕೃತಿಕ ಹಾಗೂ ಜಾನಪದ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಅವರಗಲ್ಲು ಗೊಲ್ಲರಹಟ್ಟಿ

ಅವರಗಲ್ಲು ಗೊಲ್ಲರಹಟ್ಟಿಯು ಮಧುಗಿರಿಯ ಉತ್ತರ ದಿಕ್ಕಿನಲ್ಲಿದ್ದು ಅವರಗಲ್ಲು ಗ್ರಾಮದ ಹೊರವಲಯದಲ್ಲಿದೆ. ಗಡಿಯ ಗುರುತಿಸುವ ಕಲ್ಲು ಎಂಬ ಅರ್ಥದಲ್ಲಿ ಅವರ ಕಲ್ಲು, ಅವರಗಲ್ಲು ಎಂದಾಗಿದೆ.

ಒಟ್ಟು ೭೦ ಮನೆಗಳನ್ನು ಹೊಂದಿದ್ದು ೨೨೦ ಜನಸಂಖ್ಯೆಯನ್ನು ಹೊಂದಿದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಹೊಸಕೆರೆ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಮತ್ತು ಪಶುಸಂಗೋಪನೆ ಮುಖ್ಯ ಕಸುಬಾಗಿದೆ. ಶಿಕ್ಷಣ, ರೇಷ್ಮೆ ಹಾಗೂ ಅಂಚೆ ಇಲಾಖೆಯಲ್ಲಿ ಮೂವರು ಸೇವೆ ಸಲ್ಲಿಸುತ್ತಿದ್ದಾರೆ.

ಚಿತ್ರದೇವರ ಪೌಳಿಯಿದೆ. ದೀಪಾವಳಿಯಲ್ಲಿ ಜಾತ್ರೆ ಮಾಡುತ್ತಾರೆ. ಹಿರಿಯರಿಗೆ ಹಾಲು–ತುಪ್ಪ, ಬಟ್ಟೆ ಹಾಕುವ ವಿಶಿಷ್ಟ ಆಚರಣೆಯನ್ನು ಈ ಸಂದರ್ಭದಲ್ಲಿ ಕಾಣಬಹುದಾಗಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಅಮರಾವತಿ

ಅಮರಾವತಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೬೫.೬೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಗೊಲ್ಲನಕಟ್ಟೆ ಹಳ್ಳ, ಸಿದ್ದಕ್ಕಜ್ಜಿಹಳ್ಳ ಹಾಗೂ ಒಂದು ಕುಂಟೆಯಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ ಜನಾಂಗ ಕಿರು ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೮೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೯೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೭ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೯ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮದಲ್ಲಿ ೧೦% ವ್ಯವಸಾಯ ಮಾಡುವವರಿದ್ದು ೯೦% ಕೂಲಿ ಮಾಡುವವರಿದ್ದಾರೆ. ಗ್ರಾಮದಲ್ಲಿ ಎರಡು ಆಧುನಿಕ ಡೈರಿ ಇದೆ. ಶಿಕ್ಷಣ ಇಲಾಖೆ, ಪೊಲೀಸ್, ಕೆಎಸ್‌ಆರ್‌ಟಿಸಿ ಸೇರಿದಂತೆ ೮ ಜನ ಸರ್ಕಾರಿ ನೌಕರಿಯಲ್ಲಿದ್ದಾರೆ. ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗಂಜಲಗುಂಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗಂಜಲಗುಂಟೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಗಂಜಲಗುಂಟೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಗ್ರಾಮದಲ್ಲಿ ಒಂದು ಗ್ರಂಥಾಲಯವಿದ್ದು ವಿವಿಧ ಪ್ರಕಾರದ ೧೫೦೦ ಪುಸ್ತಕಗಳಿವೆ. ಇಲ್ಲಿ ಒಬ್ಬರು ಗ್ರಂಥಪಾಲಕರಿದ್ದಾರೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ

ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೪ ಅಂಗಡಿಗಳಿವೆ.

ಗ್ರಾಮದಲ್ಲಿ ಹನುಮಂತರಾಯ, ಮಾರಮ್ಮ, ಸಪ್ಲಮ್ಮ ಹಾಗೂ ಸಿದ್ದೇಶ್ವರ ದೇವಾಲಯಗಳಿವೆ. ಶ್ರಾವಣ ಮಾಸದಲ್ಲಿ ಆಂಜನೇಯ ದೇವರಿಗೆ ಆರತಿಯನ್ನು ಹಾಗೂ ಆಷಾಢ ಮಾಸದಲ್ಲಿ ಮಾರಮ್ಮನ ಜಾತ್ರೆಯನ್ನು ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಅರಳಿಮರದಹಳ್ಳಿ

ಅರಳಿಮರದಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೩.೦೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮತ್ತು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಇಲ್ಲಿ ಹೆಚ್ಚು ಅರಳಿ ಮರಗಳಿದ್ದವು.

ಇಲ್ಲಿ ಪಾರಿವಾಳ, ಗಿಳಿ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳು ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಪ್ಪಾರ, ಲಿಂಗಾಯಿತ, ಕುರುಬ, ರೆಡ್ಡಿ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರು ಗ್ರಾಮದಲ್ಲಿದ್ದಾರೆ.

ಒಟ್ಟು ೬೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೨೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ೧೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಮತ್ತು ತೆಂಗನ್ನು ಬೆಳೆಯುತ್ತಾರೆ. ಇಲ್ಲಿ ಕಾಕಡ, ಕನಕಾಂಬರ ಇತ್ಯಾದಿ ಹೂಗಳನ್ನು ಕಾಣಬಹುದಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿ ಕೆಲವು ಸರ್ಕಾರಿ ನೌಕರರು ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ.

ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿಕ್ಕಮಾಲೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿಕ್ಕಮಾಲೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ಸ್ತ್ರೀಶಕ್ತಿ ಸಂಘ ಹಾಗೂ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೪೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿನ ಹೋಟೆಲ್ ಚಿಕ್ಕದಾಗಿ ಚೊಕ್ಕವಾಗಿದೆ.

ಗ್ರಾಮದಲ್ಲಿ ಮಾರಮ್ಮದೇವಿ, ಆಂಜನೇಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಅಡವಿನಾಗೇನಹಳ್ಳಿ

ಅಡವಿ ನಾಗೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೪೯.೨೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕೊಡಿಗೇನಹಳ್ಳಿ ಹೋಬಳಿಯಲ್ಲಿ ಮೂರು ನಾಗೇನಹಳ್ಳಿಗಳಿದ್ದು ಸುಲಭವಾಗಿ ಗುರುತಿಸುವುದು ಮತ್ತು ಪ್ರಾಕೃತಿಕ ಲಕ್ಷಣದಿಂದ ಕಾಡಿನ ನಾಗೇನಹಳ್ಳಿಯನ್ನು ಅಡವಿನಾಗೇನಹಳ್ಳಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮತ್ತು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಅಡವಿಯ ಮೂಲದಿಂದ ಗ್ರಾಮಕ್ಕೆ ಹೆಸರು ಬಂದಿದೆ.

ಗ್ರಾಮವು ಸಾಮಾಜಿಕ ನೀಲಗಿರಿ ಕಾಡು ಅರಣ್ಯ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಅರಳೀಮರ, ಹುಣಸೆ, ಮಾವು ಇತ್ಯಾದಿ ಮರಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ, ಕುರುಬ, ಉಪ್ಪಾರ, ಆದಿಕರ್ನಾಟಕ, ಆದಿದ್ರಾವಿಡ, ಬ್ರಾಹ್ಮಣ, ಮಡಿವಾಳ, ವೈಷ್ಣವ, ವಿಶ್ವಕರ್ಮ, ರೆಡ್ಡಿ ಒಕ್ಕಲಿಗ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೨೨೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೧೧೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೬೦ ಮತ್ತು ಹೆಂಗಸರು ೫೫೭ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್

ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ಅಲ್ಲಲ್ಲಿ ಗುಡಿಸಲುಗಳನ್ನು ಕಾಣಬಹುದು. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೭೩ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಸ್ವಲ್ಪ ಭಾಗ ಸಿಮೆಂಟ್ ಮತ್ತು ಜಲ್ಲಿ ಕಾಣಬಹುದು. ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೬೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಲಸಂದೆ, ಶೇಂಗಾ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಇಂಜಿನಿಯರ್, ಶಿಕ್ಷಕರು ಮತ್ತು ಪೊಲೀಸರು ಸೇರಿದಂತೆ ೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸುದ್ದೇಕುಂಟೆ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಸಿಂಗನಹಳ್ಳಿಯಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಇಬ್ಬರು ಸದಸ್ಯರು ಹಾಗೂ ಒಬ್ಬರು ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಿಂಗನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದ್ದು ೫೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೫.೬೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ ಮತ್ತು ಟೀ ದೊರೆಯುವ ೧ ಹೋಟೆಲ್ ಹಾಗೂ ೨ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮಾರಮ್ಮದೇವಿ, ಕೊಲ್ಲಾಪುರದಮ್ಮ, ಅಕ್ಕಮ್ಮ, ತಾಯಿ ಮುದ್ದಮ್ಮ, ಮಧುಗಿರಿ ಮಾರಮ್ಮ, ಶ್ರೀರಾಮ, ತಾಯಣ್ಣ, ತಮ್ಮಣ್ಣ, ತಾರಣ್ಣ, ಈರಮುದ್ದಣ್ಣ, ಆಂಜನೇಯ ದೇವಾಲಯಗಳಿವೆ. ನಾಗರಕಟ್ಟೆಗಳು ಇವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಅಣ್ಣೇನಹಳ್ಳಿ

ಅಣ್ಣೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೧.೭೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಅಣ್ಣೇಪಲ್ಲಿ ಮೂಲದಿಂದ ಕನ್ನಡದಲ್ಲಿ ಅಣ್ಣನಹಳ್ಳಿ ಅಣ್ಣೇನಹಳ್ಳಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ,

ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಉಳಿದಂತೆ ಕೆಲವು ಹಾವುಗಳು ಇವೆ. ಪಕ್ಷಿಗಳಾದ ಗರುಡ, ಕೋಗಿಲೆ, ಗೌಜುಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಅರಳೀಮರ, ಹುಣಸೆ, ಮಾವು ಇತ್ಯಾದಿ ಮರಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಒಂದು ಬಾವಿಯಿದೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೧೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೩೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೧೧ ಮತ್ತು ಹೆಂಗಸರು ೨೨೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ಅಲ್ಲಲ್ಲಿ ಗುಡಿಸಲುಗಳನ್ನು ಕಾಣಬಹುದು. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೪ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಲಸಂದೆ, ಶೇಂಗಾ ಮತ್ತು ಸೂರ್ಯಕಾಂತಿ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಶಿಕ್ಷಕರು ಮತ್ತು ಪೊಲೀಸರು ಸೇರಿದಂತೆ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ. ಇನ್ನಾವುದೇ ರೀತಿಯ ಕೈಗಾರಿಕೆಗಳು ಇಲ್ಲಿ ಇಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸುದ್ದೇಕುಂಟೆ ತಾಲ್ಲೂಕು ಪಂಚಾಯ್ತಿ, ಸಿಂಗನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿ ನೌಕರರನ್ನು ಹೊಂದಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಿಂಗನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದ್ದು ೪೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ೩ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ,

ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೮.೧೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೧ ಹೋಟೆಲ್ ಹಾಗೂ ೧ ಅಂಗಡಿಗಳಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಅಣ್ಣಮ್ಮ, ಆಂಜನೇಯ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಅರಳಾಪುರ

ಅರಳಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೨೨.೮೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಹರಳು ಬೆಳೆಯುವ ಪ್ರದೇಶ ಎಂಬ ಕಾರಣದಿಂದ ಹರಳಾಪುರ > ಅರಳಾಪುರವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಹುಣಸೆ, ನೇರಳೆ, ಮಾವು ಮತ್ತು ಹಲಸಿನ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ನವಿಲು, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೭೨ ಎಮ್ಮೆ, ೨೩ ಕುರಿ, ಮೇಕೆಗಳನ್ನು ಸಾಕಿದ್ದಾರೆ. ೪೬ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೨ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೮ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ೨ ಕುಡಿಯುವ ನೀರಿನ ಬಾವಿಗಳು ಕಂಡುಬರುತ್ತವೆ.

ಲಿಂಗಾಯಿತ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ರೆಡ್ಡಿ, ಒಕ್ಕಲಿಗ, ಈಡಿಗ, ಕುಂಬಾರ, ನಾಯಕ, ಬೋವಿ, ತಿಗಳ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೯೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೯೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೦೬ ಮತ್ತು ಹೆಂಗಸರು ೧೮೫ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಮುಸುಕಿನ ಜೋಳ, ಬಾಳೆ, ದಾಳಿಂಬೆ, ಅಡಿಕೆ ಮತ್ತು ಶೇಂಗಾ, ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ಒಬ್ಬರು ಕುಂಬಾರಿಕೆ ಮಾಡುವವರಿದ್ದಾರೆ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಪುರವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಪುರವರದಲ್ಲಿ ಪಂಚಾಯಿತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಪುರವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಪುರವರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೫.೩೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೩ ಹೋಟೆಲ್‌ಯಿದ್ದು ೪ ಅಂಗಡಿಗಳಿವೆ.

ಚ.ಹ. ರಘುನಾಥ್ ಪ್ರಜಾವಾಣಿಯ ಹಿರಿಯ ಸಂಪಾದಕರಾಗಿದ್ದು ಶ್ರೇಷ್ಠ ಕಥೆಗಾರರೂ ಆಗಿದ್ದಾರೆ. ಹ.ಚ. ನಟೇಶ್ ಬಾಬು ಪತ್ರಕರ್ತರಾಗಿದ್ದು ಉತ್ತಮ ಕವಿ, ಚಿಂತಕರು. ಶ್ರೀ ಚಾಮುಂಡೇಶ್ವರಿ ಜಾನಪದ ಯುವ ಕಲಾತಂಡವಿದ್ದು ಕಲಾವಿದ ಹರಳಾಪುರ ರಾಮಚಂದ್ರಪ್ಪ ಮುಖ್ಯಸ್ಥರಾಗಿದ್ದಾರೆ.

ಗ್ರಾಮದಲ್ಲಿ ಮಾರಮ್ಮದೇವಿ, ತೊಣಚಮ್ಮ, ಆಂಜನೇಯ, ಮಹೇಶ್ವರಿ, ದೇವಾಲಯಗಳಿವೆ. ನಾಗರಕಟ್ಟೆಗಳಿವೆ. ಪ್ರತಿ ವರ್ಷ ಅದ್ದೂರಿಯಾಗಿ ಮಹೇಶ್ವರಮ್ಮ ಜಾತ್ರೆ ನಡೆಯುತ್ತದೆ. ಹರಕೆ ಹೊರುವ ಮತ್ತು ಬಲಿ ನೀಡುವ ಆಚರಣೆಗಳು ರೂಢಿಯಲ್ಲಿವೆ. ಮಹೇಶ್ವರಮ್ಮನ ಹೂವಿನ ತೇರನ್ನು ಅತಿ ವಿಜೃಂಭಣೆಯಿಂದ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಅಗ್ರಹಾರ

ಅಗ್ರಹಾರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೮೯.೨೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ೫೦ ಹೆಕ್ಟೇರ್‌ನಷ್ಟು ಅರಣ್ಯವನ್ನು ಹೊಂದಿದ್ದು ಹೊಂಗೆ, ಹುಣಸೆ, ಅರಳಿ, ಮಾವು, ಬೇವು, ಹಲಸು, ಅಕೇಶಿಯಾ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಕೃಷ್ಣಮೃಗ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೌಜುಗ, ಗಿಳಿ, ಪಾರಿವಾಳ, ಹದ್ದು, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೯೪ ಎಮ್ಮೆ, ೩೭೪ ಕುರಿ, ೧೮೦ ಮೇಕೆಗಳು ಮತ್ತು ೧೧೧ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೩ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಶೆಟ್ಟಿ ಬಣಜಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೩೧೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೧೫೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೮೮ ಮತ್ತು ಹೆಂಗಸರು ೫೬೫ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೧೮ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಮುಸುಕಿನಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ಶೇಂಗಾ, ಸೂರ್ಯಕಾಂತಿ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಇಂಜಿನಿಯರ್, ಸಾರಿಗೆ ಇಲಾಖೆ (ಕೆಎಸ್‌ಆರ್‌ಟಿಸಿ), ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ನಾಲ್ಕು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬ್ಯಾಲ್ಯ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಬ್ಯಾಲ್ಯ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬ್ಯಾಲ್ಯ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಬ್ಯಾಲ್ಯ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೫

ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೨೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ೨ ಹೋಟೆಲ್ ಮತ್ತು ೪ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯ, ಶನಿಮಹಾತ್ಮ ದೇವಾಲಯಗಳಿವೆ.ಗ್ರಾಮದಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಅಗ್ರಹಾರ ಜನತಾ ಹೌಸಿಂಗ್ ಕಾಲೋನಿ

ಅಗ್ರಹಾರ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ಅಗ್ರಹಾರ ಗ್ರಾಮದ ಹೊರವಲಯದಲ್ಲಿದೆ.

ಒಟ್ಟು ೮೪ ಮನೆಗಳನ್ನು ಹೊಂದಿದ್ದು ೩೪೦ ಜನಸಂಖ್ಯೆಯನ್ನು ಹೊಂದಿದೆ. ಶೆಟ್ಟಿಬಣಜಿಗ, ಆದಿಕರ್ನಾಟಕ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಬ್ಯಾಲ್ಯ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ವ್ಯವಸಾಯ ಮುಖ್ಯ ಉದ್ಯೋಗವಾಗಿದ್ದು ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ. ಪೊಲೀಸ್, ವಿದ್ಯುತ್, ಶಿಕ್ಷಣ ಹಾಗೂ ಅಂಚೆ ಇಲಾಖೆಯಲ್ಲಿ ಐದು ಜನ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಅಂಗಡಿ ತಿಮ್ಮನಹಳ್ಳಿ

ಅಂಗಡಿ ತಿಮ್ಮನಹಳ್ಳಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೪೭.೬೧ ಹೆಕ್ಟೇರ್ ನಲ್ಲಿದ್ದು ಕಂದಾಯ ಗ್ರಾಮವಾಗಿದೆ.

ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಮೊಲ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ.

೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಕವಣದಲ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಒಟ್ಟು ೬೨ ಮನೆಗಳನ್ನು ಹೊಂದಿದ್ದು ೨೪೨ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಒಕ್ಕಲಿಗ, ಕುರುಬ, ಲಿಂಗಾಯಿತ ಜನಾಂಗದವರು ಗ್ರಾಮದಲ್ಲಿದ್ದಾರೆ. ವ್ಯವಸಾಯ ಮುಖ್ಯ ಕಸುಬಾಗಿದೆ. ಶಿಕ್ಷಣ, ಅಂಚೆ ಹಾಗೂ ಆರೋಗ್ಯ ಇಲಾಖೆಯಲ್ಲಿ ಮೂರು ಜನ ಸೇವೆ ಸಲ್ಲಿಸುತ್ತಿದ್ದಾರೆ. ಒಬ್ಬರು ಐಟಿ-ಬಿಟಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಮಧುಗಿರಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕವಣದಲ ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ. ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿ ನೌಕರರಿದ್ದಾರೆ. ಒಂದು ಸ್ತ್ರೀಶಕ್ತಿ ಸಂಘವಿದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಮಾರಮ್ಮನ ಪೌಳಿಯಿದ್ದು ಆಷಾಢ ಮಾಸದಲ್ಲಿ ಊರಹಬ್ಬ ಆಚರಿಸುತ್ತಾರೆ. ಆರತಿ, ಬ್ಯಾಟೆ, ಹರಕೆ ಸಂಪ್ರದಾಯಗಳಿವೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಆಪ್‌ನಳ್ಳಿ

ಆಪ್‌ನಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೨೯.೩೫ ಹೆಕ್ಟೇರ್ ಕಂದಾಯ ಗ್ರಾಮವಾಗಿದೆ. ಅಪ್ಪೇನ ಅಥವಾ

ಅಪ್ಪಣ್ಣ ಎಂಬ ವ್ಯಕ್ತಿ ಮೂಲದಿಂದ ಗ್ರಾಮ ರಚನೆಯಾಗಿದ್ದು ಜನರ ಬಾಯಲ್ಲಿ ಆಪ್‌ನಳ್ಳಿ ಎಂದು ರೂಪಾಂತರವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದೆ. ಕೆಂಪುಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಕೂಡ ಪ್ರಾಣಿಗಳಾದ ಕರಡಿ, ಕಾಡುಹಂದಿ, ಕಾಡುಮೊಲಗಳು ಊರ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ನಾಟಿಹಸು, ಎಮ್ಮೆಗಳನ್ನು ಸಾಕಿದ್ದು ಕುರಿ ಮತ್ತು ಮೇಕೆಗಳನ್ನು ಕೂಡ ಸಾಕಿದ್ದಾರೆ. ಸಾಕುಪಕ್ಷಿಗಳಾದ ಕೋಳಿಯನ್ನು ಕೆಲವರು ಸಾಕಿರುವುದು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಸುವರ್ಣಮುಖಿ ಹೊಳೆಯಿದ್ದು ನೀರಿಲ್ಲದಂತೆ ಬತ್ತಿಹೋಗಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮ ಪಂಚಾಯ್ತಿಯು ಕಿರುನೀರು ಸರಬರಾಜು ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ೩೫ ಕ್ಕೂ ಹೆಚ್ಚು ಸಾರ್ವಜನಿಕ ನಲ್ಲಿಗಳಿವೆ. ಗ್ರಾಮದಲ್ಲಿ ಕೆರೆಯಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ. ಆದರೆ ಕೆರೆ ಸಂಪೂರ್ಣವಾಗಿ ತುಂಬಿ ಕೋಡಿಬಿದ್ದು ಬಹಳ ವರ್ಷಗಳೇ ಕಳೆದಿದೆ. ಗಾಣಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಅಗಸರು, ಕುಂಬಾರ, ನಾಯಕ ಜನಾಂಗದವರು ಗ್ರಾಮದಲ್ಲಿ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೬೦ ಮನೆಗಳನ್ನು ಹೊಂದಿರುವ ಗ್ರಾಮವು ೨೦೦೧ ರ ಜನಗಣತಿಯ ಪ್ರಕಾರ ೨೨೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗಂಡು ೧೧೨, ಹೆಣ್ಣು ೧೦೮ ಜನಸಂಖ್ಯೆ ಇದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಇಡಿಕೆ ಮನೆ ಹಾಗೂ ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ-ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಎರಡು ಸಾಂಪ್ರದಾಯಿಕ ಎತ್ತಿನ ಗಾಡಿಗಳಿದ್ದು ಟ್ರ್ಯಕ್ಟರ್, ಟಿಲ್ಲರ್ ಹಾಗೂ ದ್ವಿಚಕ್ರ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಲ್ಲಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ ಇದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಕಾಕಡ ಹೂ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು, ವೀಳೆದೆಲೆ ಬೆಳೆಯುತ್ತಾರೆ. ಅಡಿಕೆ, ತೆಂಗು, ವೀಳೆದೆಲೆ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಒಂದು (ಸೀಮೆಹಸು) ಹೈನುಗಾರಿಕೆ ಇದೆ ಹಾಗೂ ಒಂದು ದೊಡ್ಡ ಆಧುನಿಕ ಡೈರಿ ಇದೆ.

ಗ್ರಾಮದಲ್ಲಿ ಹೊಳೆ ಹಾಗೂ ಕೆರೆಯಲ್ಲಿ ನೀರಿಲ್ಲದ ಕಾರಣ ಮೀನುಗಾರಿಕಾ ಚಟುವಟಿಕೆ ನಡೆಯುವುದಿಲ್ಲ. ಈ ಗ್ರಾಮದಲ್ಲಿ ೯ ಜನ ನೌಕರಿಯಲ್ಲಿದ್ದು ಇದರಲ್ಲಿ ೮ ಜನ ಸರ್ಕಾರಿ ಹಾಗೂ ಒಂದು ನೀರ್‌ಗಂಟಿ ನೌಕರ ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ ಗ್ರಾಮದಲ್ಲಿ ಸಾಂಪ್ರದಾಯಿಕ ಉದ್ಯೋಗ ನಡೆಸುವ ಒಬ್ಬ ಕುಂಬಾರ ಇದ್ದು ಆಧುನಿಕ ಉದ್ಯೋಗವಾದ ಟೈಲರ್ ಇಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ, ತುಮಕೂರು ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಬಡವನಹಳ್ಳಿ ಗ್ರಾಮಪಂಚಾಯ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಡವನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಸಂಪರ್ಕ ಸಾಧನವಾದ ಸ್ಥಿರ ದೂರವಾಣಿಗಳು ಹಾಗೂ ಚರ ದೂರವಾಣಿ ಸಂಪರ್ಕವಿದೆ.

ಸಣ್ಣಪುಟ್ಟ ಕಲಹ, ವ್ಯಾಜ್ಯಗಳು ಗ್ರಾಮದ ಹಿರಿಯರು, ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೭ ಸ್ತ್ರೀಶಕ್ತಿ ಸಂಘಗಳಿದ್ದು ೨ ಸ್ವಸಹಾಯ ಸಂಘಗಳು ಇವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೭ ವಿದ್ಯಾರ್ಥಿಗಳಿದ್ದಾರೆ. ಒಬ್ಬರು ಶಿಕ್ಷಕರು ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಒಟ್ಟು ೧೮ ವಿದ್ಯಾರ್ಥಿಗಳಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೩.೫%.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಒಂದು ನಂಜುಂಡೇಶ್ವರಸ್ವಾಮಿ ದೇವಾಲಯವಿದ್ದು ಪ್ರತಿ ವರ್ಷ ನಂಜುಂಡೇಶ್ವರಸ್ವಾಮಿಯ ಜಾತ್ರಾ ಉತ್ಸವ ಹಾಗೂ ಪಲ್ಲಕ್ಕಿಯನ್ನು ಅತಿ ಸಂಭ್ರಮದಿಂದ ಆಚರಿಸಲಾಗುತ್ತದೆ.

ಗ್ರಾಮದಲ್ಲಿ ಹರಕೆ ಹೊರುವ ಆಚರಣೆಯು ರೂಢಿಯಲ್ಲಿದ್ದು ಉಳಿದಂತೆ ಗ್ರಾಮದವರು ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಆಲದಮರದಹಟ್ಟಿ

ಆಲದಮರದಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ದಕ್ಷಿಣ ದಿಕ್ಕಿನಲ್ಲಿದ್ದು ಚಿನಕವಜ್ರ ಗ್ರಾಮದ ಹೊರವಲಯದಲ್ಲಿದೆ.

ಒಟ್ಟು ೬ ಮನೆಗಳನ್ನು ಹೊಂದಿದ್ದು ೨೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಚಿನಕವಜ್ರ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತಿದೆ. ಕುರಿ, ಹಸು ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಸಡಗರದಿಂದ ಆಚರಿಸುತ್ತಾರೆ.

## ಆವಿನಮಡು

ಆವಿನಮಡು ಗ್ರಾಮವು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೩೫೦.೩೩ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮದ ಪ್ರಾಚೀನ ಹೆಸರು ಹಾಲಿನಮಡುಗು. ಇಲ್ಲಿ ಹೆಚ್ಚಾಗಿ ಹಸುಗಳನ್ನು ಸಾಕುತ್ತಿದ್ದುದರಿಂದ ಗ್ರಾಮದಲ್ಲಿ ಅತಿ ಹೆಚ್ಚು ಹಾಲು ಸಂಗ್ರಹವಾಗುತ್ತಿದ್ದರಿಂದ ಗ್ರಾಮಕ್ಕೆ ಹಾಲಿನ ಮಡಗು ಎಂದು ಹೆಸರಿಡಲಾಗಿದ್ದು ಕಾಲಕ್ರಮೇಣ ಆವಿನಮಡು ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರೆ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರವಾದ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಸಾಮಾಜಿಕ ಅರಣ್ಯವನ್ನು ಹೊಂದಿರುವುದರಿಂದ ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಕರಡಿ, ಚಿರತೆ ಹಾಗೂ ಪಕ್ಷಿಗಳಾದ ನವಿಲು, ಗೊರವಂಕ, ಕಾಗೆ, ಕೋಗಿಲೆ, ಗುಬ್ಬಚ್ಚಿ ಮೊದಲಾದವುಗಳು ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಕುರಿ, ಮೇಕೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ೧೦ ರಿಂದ ೧೩ ಡಿಗ್ರಿ ಸೆಂಟಿಗ್ರೇಡ್ ಚಳಿ, ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದ್ದು ವಾರ್ಷಿಕವಾಗಿ ೬೩೨.೨ ಮಿಮೀ ಮಳೆ ಬಿದ್ದಿದೆ.

ರಂಗಾಪುರ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತಿದೆ. ಗ್ರಾಮದಲ್ಲಿ ೫ ಸಿಸ್ಟನ್, ೨ ಕೊಳವೆ ಬಾವಿ ಹಾಗೂ ೩೦ ಸಾರ್ವಜನಿಕ ನಲ್ಲಿಗಳಿವೆ.

ಕುಂಚಿಟಿಗ ಜನಾಂಗದವರು ಅಧಿಕ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯದವರಾಗಿದ್ದಾರೆ. ನಾಯಕ, ಬೋವಿ, ಕಮ್ಮಾರ ಜನಾಂಗದವರು ಕಿರು ಸಮುದಾಯಗಳಾಗಿವೆ. ಗ್ರಾಮದ ಮಾತೃಭಾಷೆಯು ಕನ್ನಡವಾಗಿದೆ. ಒಟ್ಟು ೨೫೨ ಮನೆಗಳಿದ್ದು ೧೦೧೨ ಜನಸಂಖ್ಯಾ ಪ್ರಮಾಣವನ್ನು ಹೊಂದಿವೆ. ೧೫೦ ಮನೆಗಳು ಶೌಚಾಲಯ ಸೌಲಭ್ಯವನ್ನು ಹೊಂದಿವೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ವ್ಯವಸಾಯ ಮುಖ್ಯ ಕಸುಬಾಗಿದ್ದು ರಾಗಿ, ಭತ್ತ, ಅಡಿಕೆ, ತೆಂಗು, ಜೋಳ, ತೊಗರಿ, ಅವರೆ ಬೆಳೆಯುವರು. ಮಲ್ಲಿಗೆ ಹೂ ಗ್ರಾಮದ ವ್ಯಾಪಾರದ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಹೈನುಗಾರಿಕೆ ಗ್ರಾಮದಲ್ಲಿದೆ. ಶಿಕ್ಷಣ, ಸಾರಿಗೆ ಹಾಗೂ ಪೊಲೀಸ್ ಇಲಾಖೆಯಲ್ಲಿ ೪ ಜನ ಸೇವೆ ಸಲ್ಲಿಸುತ್ತಿದ್ದಾರೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಕಮ್ಮಾರರು ಗ್ರಾಮದಲ್ಲಿದ್ದು ಇಬ್ಬರು ಟೈಲರ್ ಆಗಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ರಂಗಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ರಂಗಾಪುರ ಅಂಚೆ ಸಂಪರ್ಕವನ್ನು

ಒದಗಿಸುತ್ತಿದೆ. ರಸ್ತೆ ಮಾರ್ಗದ ಮೂಲಕ ತೋವಿನಕೆರೆ, ತುಮಕೂರು, ಬಡವನಹಳ್ಳಿ, ಸಿರಾ ಕಡೆಗೆ ಬಸ್ ಸಂಚಾರವಿದೆ.

ಗ್ರಾಮದಲ್ಲಿ ೧ ಅಂಗನವಾಡಿ ಕೇಂದ್ರವಿದ್ದು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದೆ. ಶಾಲೆಯಲ್ಲಿ ೫ ಜನ ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ ಹಾಗೂ ಶೌಚಾಲಯ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೫೪.೫% ಇದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ಹಾಗೂ ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ೧ ಮಾರಮ್ಮನ ಗುಡಿಯಿದೆ. ಮಾರಮ್ಮನಿಗೆ ಆರತಿಯನ್ನು ಹರಕೆ ಹಾಗೂ ಬಲಿಯೊಂದಿಗೆ ಆಚರಿಸುತ್ತಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಸಡಗರದಿಂದ ಆಚರಿಸುತ್ತಾರೆ.

ಪ್ರೊ॥ ಎನ್.ಶಿವರಾಮಯ್ಯ ಈ ಗ್ರಾಮದವರಾಗಿದ್ದು ಕಾಲೇಜು ಶಿಕ್ಷಣ ಇಲಾಖೆಯ ನಿವೃತ್ತ ಪ್ರಾಧ್ಯಾಪಕರಾಗಿದ್ದಾರೆ. ಬಡವನಹಳ್ಳಿ ರಂಗಧಾಮ ಸೇರಿದಂತೆ ಪುಸ್ತಕಗಳನ್ನು ರಚಿಸಿದ್ದಾರೆ.

## ಆವೇಕಟ್ಟೆ

ಆವೇಕಟ್ಟೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೯೦.೯೨ ಹೆಕ್ಟೇರ್ ಹೊಂದಿದ್ದು ಕೆ.ಸಿ. ರೊಪ್ಪ ವಿಸ್ತೀರ್ಣದಲ್ಲಿ ಸೇರಿರುವ ಕಂದಾಯ ಗ್ರಾಮವಾಗಿದೆ.

ಕಾಡುಗೊಲ್ಲರ ಪಶುಸಂಸ್ಕೃತಿಯಲ್ಲಿ ಆವಿನ ಗೂಡು ಎಂದರೆ ದನಗಳ ದೊಡ್ಡಿ ಎಂಬ ಅರ್ಥವಿದ್ದು ಆವು > ಅವೇ ಆಗಿದೆ. ಕಟ್ಟೆ ಪ್ರಾಕೃತಿಕ ಭೂ ಲಕ್ಷಣ ಕೂಡಿಕೊಂಡು ಅವೇಕಟ್ಟೆ ಆಗಿದೆ.

ಗ್ರಾಮವು ಬೆಟ್ಟದ ಮೇಲಿರುವ ಸುಂದರ ಪ್ರಕೃತಿಯ ಗಿಡಮರಗಳಿಂದ ಕೂಡಿದ ಸ್ವರ್ಗವಾಗಿದೆ. ಅರಣ್ಯ ಪ್ರದೇಶವನ್ನು ಹೊಂದಿದ್ದು ಸುಂದರ ಪ್ರಕೃತಿಯನ್ನು ಹೊಂದಿದೆ.

ಗ್ರಾಮವು ಅರಣ್ಯ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಕರಡಿ ಹಾಗೂ ಚಿರತೆಗಳು ಅತಿ ಹೆಚ್ಚಾಗಿ ಕಂಡುಬರುತ್ತಿದ್ದು ಜಾನುವಾರುಗಳ ಮೇಲೆ ಹಲ್ಲೆ ನಡೆಸುತ್ತವೆ. ಉಳಿದಂತೆ ನರಿ, ತೋಳ, ಮುಂಗುಸಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ ಮೊದಲಾದವುಗಳು ಕಂಡುಬರುತ್ತವೆ. ನವಿಲುಗಳು ಹಿಂಡುಹಿಂಡಾಗಿ ಕಾಣಸಿಗುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಐದು ಕುಂಟೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೯ ಸಾರ್ವಜನಿಕ ನಲ್ಲಿಗಳು, ೩ ಮಿನಿ ಟ್ಯಾಂಕ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ ಹಾಗೂ ಶೆಟ್ಟಿ ಬಣಜಿಗ ಜನಾಂಗದವರು ಕಿರ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೨೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೨೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೬೫ ಮತ್ತು ಹೆಂಗಸರು ೫೫ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ಎಲ್ಲ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ೬೦% ಇದ್ದು ೪೦% ಕೂಲಿ ಮಾಡುವವರಿದ್ದಾರೆ. ಶೇಂಗಾ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಡಿ.ವಿ.ಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಡಿ.ವಿ.ಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಡಿ.ವಿ. ಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೩.೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಮುತ್ತುರಾಯ, ಹುರಿಬೆಟ್ಟದ ಮಾರಮ್ಮ ದೇವಾಲಯಗಳಿದ್ದು ಹರಿಸೇವೆ ಇದೆ. ಮಾರಮ್ಮನ ಜಾತ್ರೆಯನ್ನು ಹರಕೆ ಹಾಗೂ ಬಲಿಯೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಯುಗಾದಿ ಹಾಗೂ ಮಾರ್ನವಮಿ ಹಬ್ಬವನ್ನು ಅತಿ ವಿಶೇಷತೆಯಿಂದ ಆಚರಿಸುವರು.

## ಆಚೇನಹಳ್ಳಿ

ಆಚೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೦೧.೭೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮವು ಹಳ್ಳದಿಂದ ಆಚೆಗೆ ಇರುವುದರಿಂದ ಆಚೇನಹಳ್ಳಿ ಎಂದು ಹೆಸರು ಬಂದಿತೆಂದು ಗ್ರಾಮದ ಹಿರಿಯರು ಹೇಳುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಹಾಗೂ ಬಿಳಿಯ ಕಲ್ಲುಗಳಿಂದ ಕೂಡಿದ್ದು ಮರಳು ಮಿಶ್ರ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ನರಿ, ಕರಡಿ, ಚಿರತೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೮ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ದಾಸರು ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೫೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೮೦೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೮೦ ಮತ್ತು ಹೆಂಗಸರು ೩೨೪ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೫೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎರಡು ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮದಲ್ಲಿ ಹಳೇ ಪೇಪರ್ ಹಾಗೂ ಕಬ್ಬಿಣ ಮಾರುವ ವ್ಯಾಪಾರಿಗಳು ಹೆಚ್ಚಾಗಿದ್ದು ಸಣ್ಣ ಕೈಗಾರಿಕೆ ನಡೆಸುತ್ತಿದ್ದಾರೆ. ಬೀಡಿ ಕಾರ್ಮಿಕರು ಹೆಚ್ಚಾಗಿ ಕಂಡುಬರುತ್ತಾರೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಬಡಗಿ, ಗುಡಿಕಾರ ಗ್ರಾಮದಲ್ಲಿರುವರು.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಡಿ.ವಿ. ಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಡಿ.ವಿ.ಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಡಿ.ವಿ.ಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೫೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಗ್ರಾಮದಲ್ಲಿ ಸರ್ಕಾರಿ ಉರ್ದು ಶಾಲೆ ಇದ್ದು ೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಆಂಜನೇಯ, ಯಲ್ಲಮ್ಮ, ತಿಪ್ಪೇರುದ್ರಸ್ವಾಮಿ ದೇವಾಲಯಗಳಿವೆ. ಆಂಜನೇಯಸ್ವಾಮಿ ಉತ್ಸವ ಹಾಗೂ ಮಾರಮ್ಮನ ಜಾತ್ರೆಯನ್ನು ಬಲಿ ಹಾಗೂ ಹರಕೆಯೊಂದಿಗೆ ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಇಂದಿರಾ ಗ್ರಾಮ

ಇಂದಿರಾನಗರ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೪೫೩.೭೫ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮವು ಎ.ಎಂ.ಕಾವಲ್ ಭೂ ವಿಸ್ತೀರ್ಣ ವ್ಯಾಪ್ತಿಗೆ ಸೇರಿಕೊಂಡಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಎ.ಎಂ.ಕಾವಲ್ ಅರಣ್ಯವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಕಾಡುಹಂದಿ, ಚಿರತೆ, ಮೊಲ, ಕರಡಿಗಳು ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ.

ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ನಾಟಿಹಸು, ಎತ್ತು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ೫೦೦ ಕ್ಕೂ ಹೆಚ್ಚು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಹಾಲಿನಕಟ್ಟೆ ಹೊಳೆಯಿದ್ದು ನೀರಿಲ್ಲದೆ ಬತ್ತಿ ಹೋಗಿದೆ. ಮಳೆಗಾಲದಲ್ಲಿ ಸ್ವಲ್ಪ ಪ್ರಮಾಣದ ನೀರು ಹರಿಯುತ್ತದೆ. ಇದರಿಂದ ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಒಂದು ಕೊಳವೆ ಬಾವಿಯಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕರು, ಕುಂಚಿಟಿಗ ಜನಾಂಗದವರು ಗ್ರಾಮದಲ್ಲಿದ್ದು ಕುಂಚಿಟಿಗ ಜನಾಂಗದವರು ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಕನ್ನಡ, ತೆಲುಗು ಹಾಗೂ ತಮಿಳು ಭಾಷೆಯನ್ನು ಬಳಸುತ್ತಾರೆ. ಊರಿನಲ್ಲಿ ಅತಿ ಹೆಚ್ಚು ತಮಿಳು ಭಾಷೆ ಮಾತನಾಡುವವರಿದ್ದಾರೆ.

ಒಟ್ಟು ೪೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೦೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೦೨, ಹೆಂಗಸರು ೧೦೦ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ, ಹೆಂಚಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೭ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ, ರೊಟ್ಟಿ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಲಾರಿ, ಕಾರು, ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಕೆಲವು ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಮಾಡುವವರು ಕೇವಲ ೨೦% ಇದ್ದು ಉಳಿದವರು ಬಂಡೆ ವ್ಯಾಪಾರಿಗಳಾಗಿದ್ದಾರೆ. ಬಂಡೆ ವ್ಯಾಪಾರವು ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಅವರೆ, ತೆಂಗು, ಅಡಕೆಯನ್ನು ಸ್ವಲ್ಪ ಪ್ರಮಾಣದಲ್ಲಿ ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು ಬೆಳೆಯುತ್ತಾರೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮಕ್ಕೆ ಸೇರಿದಂತೆ ಯಾವುದೇ ಕೆರೆ ಇಲ್ಲವಾದ್ದರಿಂದ, ಹಳ್ಳದಲ್ಲಿ ನೀರಿಲ್ಲವಾದ್ದರಿಂದ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಗ್ರಾಮದಲ್ಲಿ ಇಬ್ಬರು ಸರ್ಕಾರಿ ನೌಕರರಿದ್ದು ಮನೆಯಲ್ಲಿಯೇ ಊದುಬತ್ತಿ ತಯಾರಿಸುವ ಸಣ್ಣ ಕೈಗಾರಿಕೆ ವ್ಯವಸ್ಥೆ ಇದೆ. ಸುಮಾರು ೪೦ ಮನೆಗಳಲ್ಲಿ ಈ ವೃತ್ತಿ ಮಾಡಲಾಗುತ್ತಿದೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಒಬ್ಬರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ರಂಗಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಗಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ೫೦ ಕ್ಕೂ ಹೆಚ್ಚು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳು ಗ್ರಾಮದಲ್ಲಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆಯಿದ್ದಾರೆ. ಸರ್ಕಾರಿ

ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೦.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಮುತ್ರಾಯ, ಮಾರಮ್ಮ ಮತ್ತು ಆಂಜನೇಯ ದೇವಾಲಯಗಳಿದ್ದು ಪ್ರತಿ ವರ್ಷ ಮಾರಮ್ಮನ ಜಾತ್ರಾ ಮಹೋತ್ಸವವನ್ನು ಹರಕೆ ಮತ್ತು ಬಲಿಯೊಂದಿಗೆ ಆಚರಿಸುತ್ತಾರೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಇಮ್ಮಡಗೊಂಡನಹಳ್ಳಿ

ಇಮ್ಮಡಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ३೪೯.३೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಜಯಮಂಗಲಿ ನದಿ ತೊರೆ ಇದೆ. ಗ್ರಾಮದ ರಚನೆ ಕಾಲಕ್ಕೆ ಮೊದಲ ವ್ಯಕ್ತಿಯಿಂದ ೨ನೇ ವ್ಯಕ್ತಿಯಾಗಿ ಮುಖಂಡನೊಬ್ಬ ರೂಪುಗೊಂಡನು. ಅದು ಇಮ್ಮಡಿಗೌಡ > ಇಮ್ಮಡಿಗೊಂಡನಾಗಿ ಗ್ರಾಮಕ್ಕೆ ಇದೇ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚುಕಲ್ಲುಗಳಿಂದ ಕೂಡಿರುವ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ನರಿ, ತೋಳ, ಕೃಷ್ಣಮೃಗ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಕೋಗಿಲೆ, ಗಿಳಿ, ಗರುಡ, ನವಿಲು, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೯.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ३೨ ರಿಂದ ३೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ಗ್ರಾಮದಲ್ಲಿ ಹೆಚ್ಚಿನ ಕುಡಿಯುವ ನೀರಿನ ಬಾವಿಗಳಿದ್ದು ಇಂದು ಕೆಲವೇ ಬಾವಿಗಳು ಮಾತ್ರ ಕಾಣಸಿಗುತ್ತವೆ.

ಸಾದರು ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಲಿಂಗಾಯಿತ, ಕುರುಬ, ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೯೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೧೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೧೯ ಮತ್ತು ಹೆಂಗಸರು ೧೯೭ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು , ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಮುಸುಕಿನ ಜೋಳ,

ರಾಗಿ, ಬಾಳೆ, ದಾಳಿಂಬೆ, ಸೂರ್ಯಕಾಂತಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಮೂವರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡ್ಲಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡ್ಲಾಪುರ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡ್ಲಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡ್ಲಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂವರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೧೩%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೧ ಹೋಟೆಲ್‌ಯಿದ್ದು ೨ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಬಸವಣ್ಣ, ಈಶ್ವರ, ಆಂಜನೇಯ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಬಸವ ಜಯಂತಿ ವಿಶೇಷವಾಗಿ ಆಚರಿಸುತ್ತಾರೆ.

## ಈಡಿಗರಹಟ್ಟಿ

ಈಡಿಗರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೫೫.೭೯ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಹೊಸಕೆರೆ ವಿಸ್ತೀರ್ಣಕ್ಕೆ ಸೇರಿದೆ. ಜನಾಂಗಿಕ ಮೂಲದಿಂದ ಈ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಕಾಗೆ, ಕೋಗಿಲೆ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆಯಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ

ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಈಡಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಬೇರೆ ಯಾವುದೇ ಜನಾಂಗದವರು ಗ್ರಾಮದಲ್ಲಿ ಕಂಡುಬರುವುದಿಲ್ಲ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ಒಟ್ಟು ೧೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ಕೆಲವು ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಹೊಸಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಹೊಸಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಹೊಸಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದ ಒಟ್ಟು ಸಾಕ್ಷರತೆ ೪೯.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಒಂದು ಆಂಜನೇಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಈಜೀಹಳ್ಳಿ

ಈಜೀಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೦.೯೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ಮುಬ್ಬಿನ ಬೆಟ್ಟವಿದೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ನೇರಳೆ, ಹುಣಸೆ, ಮಾವು, ಹಲಸು, ಹೊಂಗೆ, ಅರಳಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗರುಡ, ಪಾರಿವಾಳ, ಕೊಕ್ಕರೆ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳು ಮತ್ತು ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೪ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬ್ರಾಹ್ಮಣ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೫೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೨೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೧೭ ಮತ್ತು ಹೆಂಗಸರು ೧೧೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ಮುಸುಕಿನಜೋಳ, ಬಾಳೆ, ದಾಳಿಂಬೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಮೂವರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬ್ಯಾಲ್ಯ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಬ್ಯಾಲ್ಯ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬ್ಯಾಲ್ಯ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಬ್ಯಾಲ್ಯ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೩.೪%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಕಾಫಿ ಮತ್ತು ಟೀ ದೊರೆಯುವ ೧ ಹೋಟೆಲ್ ಇದ್ದು ೨ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯ, ದೊಡ್ಡಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಹರಕೆ ಹೊರುವ, ಬಲಿ ನೀಡುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಉಪ್ಪಾರಹಳ್ಳಿ

ಉಪ್ಪಾರಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ

೨೩೪೦.೧೨ ಹೆಕ್ಟೇರ್ ಹೊಂದಿದ್ದು ಗುಂಡಗಲ್ ಮಜರೆ ವ್ಯಾಪ್ತಿಗೆ ಸೇರಿದ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣು ಮಿಶ್ರಿತವಾದ ಭೂಮಿ ಕಂಡುಬರುತ್ತದೆ. ಸಣ್ಣ ಸಣ್ಣ ಗುಡ್ಡಗಳಿವೆ. ಉಪ್ಪಾರ ಜನಾಂಗದಿಂದ ಈ ಹೆಸರು ಬಂತು. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಉಳಿದಂತೆ ಕೆಲವು ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೀಜುಗ, ಗೊರವಂಕ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೫ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ರೆಡ್ಡಿ ಒಕ್ಕಲಿಗರು, ಬೋವಿ, ಕುರುಬರು, ಲಿಂಗಾಯಿತರು, ನೇಕಾರರು, ಉಪ್ಪಾರರು ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರೂ ಗ್ರಾಮದಲ್ಲಿದ್ದಾರೆ.

ಒಟ್ಟು ೫೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೫೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ ಮತ್ತು ಕಲ್ಲಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೪ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ಅವರೆ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆಯಲ್ಲಿ ಜನರು ತೊಡಗಿದ್ದಾರೆ. ಒಂದು ಮಿನಿ ಡೈರಿಯಿದೆ. ಶಿಕ್ಷಕರು, ಸಾರಿಗೆ ಮತ್ತು ರೇಷ್ಮೆ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರು ಇದ್ದಾರೆ ಹಾಗೂ ೩ ಜನ ಟೈಲರ್ ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕಲಿದೇವಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಖಾಸಗಿ ಬಸ್ಸುಗಳ ಸೌಲಭ್ಯವಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೪ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದ್ದು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೫.೪೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಗಂಗಮ್ಮ, ವಿನಾಯಕ ದೇವಾಲಯಗಳಿವೆ. ನಾಗರ ಕಟ್ಟೆಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಉಪ್ಪಾರಪಾಳ್ಯ

ಉಪ್ಪಾರಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೨.೮೫ ಹೆಕ್ಟೇರ್ ಹೊಂದಿದ್ದು ದೊಡ್ಡಗಾಳಿಹಳ್ಳಿಯ ಭೂವಿಸ್ತೀರ್ಣದಲ್ಲಿ ಸೇರಿರುವ ಗ್ರಾಮವಾಗಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಮಾವು, ನೇರಳೆ, ಹಲಸು ಮತ್ತು ನೀಲಗಿರಿ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗರುಡ, ಕೋಗಿಲೆ, ಗಿಳಿ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕಮ್ಮಾರ, ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೪೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೭೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೮೪ ಮತ್ತು ಹೆಂಗಸರು ೯೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೨ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಶೇಂಗಾ, ದಾಳಿಂಬೆ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಗ್ರಾಮದಲ್ಲಿ ಪೊಲೀಸ್, ಬಡಗಿ, ಕಮ್ಮಾರರು ಮತ್ತು ಚಮ್ಮಾರರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ

ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ೨೬ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೫೨.೧೨%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮಾರಮ್ಮ, ಸಪ್ಲಮ್ಮ ದೇವಾಲಯಗಳು ಕಂಡುಬರುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಉಮ್ಮನಹಳ್ಳಿ

ಉಮ್ಮನಹಳ್ಳಿ ಗ್ರಾಮವು ಮಧುಗಿರಿಯ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೭ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೫೭೭.೦೫ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಉಮಣ್ಣ ಮೂಲದಿಂದ ಉಮ್ಮಣ್ಣ ಎಂದಾಗಿ ನಂತರ ಏಕವಚನಕ್ಕೆ ತಿರುಗಿ ಉಮ್ಮನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿರುವ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಮೊಲ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ.

೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨ ಸಿಸ್ಟರ್ನ್, ೧ ಕೊಳವೆ ಬಾವಿ, ೧೦ ಸಾರ್ವಜನಿಕ ನಲ್ಲಿಗಳಿವೆ. ಒಕ್ಕಲಿಗ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ.

ಒಟ್ಟು ೩೪ ಮನೆಗಳನ್ನು ಹೊಂದಿರುವ ಗ್ರಾಮವು ೧೪೨ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಇಟ್ಟಿಗೆ ಹಾಗೂ ಗುಡಿಸಲು ಮನೆಗಳಿವೆ. ಗ್ರಾಮದಲ್ಲಿ ಆಶ್ರಯ, ಜನತಾ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ಕೆಲವು ಮನೆಗಳು ನಿರ್ಮಾಣವಾಗಿವೆ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ.

ಸಾಂಪ್ರದಾಯಿಕ ಎತ್ತಿನಗಾಡಿ ಗ್ರಾಮದಲ್ಲಿದ್ದು ಆಧುನಿಕ ವಾಹನಗಳಾದ ಬೈಕ್‌ಗಳಿವೆ. ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆಗಳಾಗಿವೆ. ಗ್ರಾಮದಲ್ಲಿ ೧೧ ಮನೆಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ.

ವ್ಯವಸಾಯ ಮುಖ್ಯ ಕಸುಬಾಗಿದ್ದು ರಾಗಿ, ಭತ್ತ, ಜೋಳ, ಅಡಿಕೆ, ತೆಂಗು ಬೆಳೆಯುವರು. ಉಳಿದಂತೆ ತೊಗರಿ, ಅಲಸಂದೆ, ಕಡಲೇಕಾಯಿ ಬೆಳೆಯುತ್ತಾರೆ. ಭತ್ತ, ಜೋಳ ಗ್ರಾಮದ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ. ಸಾರಿಗೆ ಇಲಾಖೆಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದೊಡ್ಡೇರಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡೇರಿ ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿಯು ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೋಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ದೊಡ್ಡೇರಿ ಅಂಚೆ ಸಂಪರ್ಕವನ್ನು ಒದಗಿಸುತ್ತದೆ. ಚರ ದೂರವಾಣಿಗಳು ಗ್ರಾಮದಲ್ಲಿವೆ. ೧ ಸ್ತ್ರೀಶಕ್ತಿ ಸಂಘ, ೧ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪೂರಕವಾಗಿವೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೭೦.೬% ಆಗಿದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ. ಜ್ವರ, ಕೆಮ್ಮು, ಮಲೇರಿಯಾ ಗ್ರಾಮದಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವ ರೋಗಗಳಾಗಿವೆ.

ಗ್ರಾಮದಲ್ಲಿ ಅಶ್ವತ್ಥಕಟ್ಟೆಯಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಎಸ್.ಎಂ. ಗೊಲ್ಲಹಳ್ಳಿ

ಎಸ್.ಎಂ. ಗೊಲ್ಲಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೨೦.೨೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮದ ಪ್ರಾಚೀನ ಹೆಸರು ಸರ್ವಮಾನ್ಯ ಗೊಲ್ಲಹಳ್ಳಿ ಎಂದು ಇತ್ತು. ಕಾರಣ ಜನಸಾಮಾನ್ಯ ಹೇಳುವಂತೆ ಪ್ರತಿಯೊಬ್ಬ ಹಿರಿಯರು ಹಾಗೂ ಯಾವುದೇ ಅಧಿಕಾರಿಗಳು ಬಂದರೆ ಅವರನ್ನು ತುಂಬು ಹೃದಯದಿಂದ ಸ್ವಾಗತಿಸಿ ಅವರ ಬೇಕು–ಬೇಡಿಕೆಗಳನ್ನು ತೀರಿಸಿ ಅವರನ್ನು ಬಹಳ ಸಂತೋಷದಿಂದ ಸತ್ಕರಿಸಿ ತುಂಬು ಹೃದಯದಿಂದ ಅವರು ನೀಡಿದ ಸಲಹೆಗಳು ಸರ್ವವನ್ನು ಉತ್ತಮ ರೀತಿಯಲ್ಲಿ ಮಾನ್ಯ ಮಾಡುತ್ತಿದ್ದರಿಂದ ಹಿರಿಯ ಅಧಿಕಾರಿಗಳು ಹಿಂದಿನ ಕಾಲದಲ್ಲಿ ಈ ಗ್ರಾಮವನ್ನು ಸರ್ವಮಾನ್ಯ ಗೊಲ್ಲಹಳ್ಳಿ ಎಂದು ಕರೆದರು ಎನ್ನುವ ಪ್ರತೀತಿ ಇದೆ. ತದನಂತರದ ದಿನಗಳಲ್ಲಿ ಕಾಲ ಕಳೆದಂತೆ ಬರಿ ಎಸ್.ಎಮ್.ಗೊಲ್ಲಹಳ್ಳಿ ಎಂದು ಕರೆದುಕೊಂಡಿದ್ದಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಬಿಳಿ ಮತ್ತು ಕೆಂಪು ಮಿಶ್ರ ಬಣ್ಣದ ಮಣ್ಣನ್ನು ಹೊಂದಿದ್ದು ಫಲವತ್ತಾದ ಭೂಮಿಯನ್ನು ಹೊಂದಿದೆ. ಕೃಷಿ ಚಟುವಟಿಕೆಗೆ ತುಂಬಾ ಯೋಗ್ಯ ಭೂಮಿಯಾಗಿದೆ. ಎದೇಮೇಳಸರ ಎನ್ನುವ ಚಿಕ್ಕ ಗುಡ್ಡವನ್ನು ಹೊಂದಿದೆ. ಇಲ್ಲಿ ಪ್ರಾಣಿಗಳಾದ ಕರಡಿ, ಕಾಡುಮೊಲ, ಹಂದಿ, ನರಿ ಜಾತಿಯ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗೀಜಗನಹಕ್ಕಿ, ಕಾಗೆ, ಹದ್ದು, ಗಿಳಿ, ಕೋಗಿಲೆ, ಗುಬ್ಬಚ್ಚಿ ಜಾತಿಯ ಪಕ್ಷಿಗಳು ಕಂಡುಬರುತ್ತವೆ.

ಸಾಕುಪ್ರಾಣಿಗಳಾದ ಹಸು, ಎಮ್ಮೆ, ಸೀಮೆಹಸು, ಮೇಕೆ ಕುರಿ ಇನ್ನೂ ಮುಂತಾದ ಅನೇಕ ಪ್ರಾಣಿಗಳನ್ನು ಸಾಕಿರುವುದನ್ನು ನಾವು ನೋಡಬಹುದು. ಇದರ ಜೊತೆಗೆ ಸಾಕುಪಕ್ಷಿಗಳಾದ ಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ದಾಖಲಾಗಿರುವುದು ಕಂಡುಬರುತ್ತದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ३೨ ರಿಂದ ३೪ ಡಿಗ್ರಿ ಉಷ್ಣಾಂಶವಿದೆ.

ಈ ಗ್ರಾಮಕ್ಕೆ ಸೇರಿದ ಎರಡು ಹಳ್ಳಗಳಿವೆ. ಒಂದು ಚಿಕ್ಕ ಹಳ್ಳ, ಒಂದು ದೊಡ್ಡ ಹಳ್ಳ ಹಾಗೂ ಒಂದು ಕೆರೆಯನ್ನು ಸಹ ಹೊಂದಿದೆ. ಈ ಕೆರೆಯಲ್ಲಿ ಮಳೆಗಾಲದಲ್ಲಿ ಸುಮಾರು ३ ಅಥವಾ ४ ತಿಂಗಳ ಕಾಲ ನೀರು ನಿಂತು ಜಾನುವಾರುಗಳಿಗೆ ಕುಡಿಯಲು ಕೃಷಿಗೆ ಯೋಗ್ಯವಾಗಿರುವುದು ಕಂಡುಬರುತ್ತದೆ.

ಈ ಗ್ರಾಮದ ಕುಡಿಯುವ ನೀರಿನ ಜವಾಬ್ದಾರಿಯನ್ನು ಗ್ರಾಮಪಂಚಾಯಿತ್ತಿ ನೋಡಿಕೊಳ್ಳುತ್ತಿದೆ. ಸಾರ್ವಜನಿಕವಾಗಿ ೧೮ ನಲ್ಲಿಯನ್ನು ಈ ಗ್ರಾಮ ಹೊಂದಿದೆ. ಕಿರುನೀರು ಸರಬರಾಜಿನ ಮೂಲಕ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಗ್ರಾಮದಲ್ಲಿ ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಆದಿಕರ್ನಾಟಕ, ಆದಿದ್ರಾವಿಡ, ಮುಸ್ಲಿಂ, ಬೆಸ್ತರು, ಸಾದುಗೌಡರು ಇನ್ನೂ ಮುಂತಾದ ಚಿಕ್ಕ ಜಾತಿಗಳನ್ನು ಈ ಗ್ರಾಮ ಹೊಂದಿದೆ. ಬೆಸ್ತರು ಮತ್ತು ಸಾದುಗೌಡರು ಅತಿ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಭಾಷೆ ಕನ್ನಡವಾಗಿದ್ದು ಮುಸ್ಲಿಂ ಜನಾಂಗದವರು ಉರ್ದು ಭಾಷೆಯನ್ನು, ಮಿಕ್ಕ ಜನಾಂಗ ಕನ್ನಡ ಭಾಷೆಯನ್ನು ಮಾತನಾಡುವುದನ್ನು ನಾವು ಕಾಣಬಹುದು.

ಒಟ್ಟು ೧೫೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೩೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ३೦೮, ಹೆಂಗಸರು ३३೦ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨३ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎರಡು ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಗಳಿದ್ದು ಟ್ರ್ಯಕ್ಟರ್, ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ

ಕಂಡುಬರುತ್ತದೆ. ೨೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಸೂರ್ಯಕಾಂತಿ, ತೆಂಗು, ತರಕಾರಿಗಳನ್ನು ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಶೇಂಗಾ ಮತ್ತು ತೆಂಗು ಬೆಳೆಯುತ್ತಾರೆ. ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ ಹಾಗೂ ಆಧುನಿಕ ಡೈರಿ ವ್ಯವಸ್ಥೆಯಿಂದಾಗಿ ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಪೊಲೀಸ್ ಇಲಾಖೆ, ಮಿಲಿಟರಿ ಹಾಗೂ ಆರೋಗ್ಯ ಇಲಾಖೆಗೆ ಸೇರಿದ ಒಟ್ಟು ೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ. ಈ ಗ್ರಾಮದಿಂದ ಯಾವುದೇ ಗ್ರಾಮ ಪಂಚಾಯ್ತಿ ಸದಸ್ಯರು ಆಯ್ಕೆಯಾಗಿಲ್ಲ. ಆದರೆ ಒಬ್ಬರು ಪಂಚಾಯ್ತಿಯ ನೌಕರರನ್ನು ನೇಮಿಸಲಾಗಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ದಬ್ಬೇಘಟ್ಟ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಆಟೋ ರಿಕ್ಷಾಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ದಬ್ಬೇಘಟ್ಟ ಅಂಚೆ ಕಚೇರಿಗೆ ಸೇರಿದೆ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ, ೨೩ ಸ್ವಸಹಾಯ ಸಂಘಗಳು ಹಾಗೂ ೪ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೩.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ನರಸಿಂಹಸ್ವಾಮಿ, ಆಂಜನೇಯ, ಗೋಪಾಲಸ್ವಾಮಿ, ಮಾರಮ್ಮ ಹೀಗೆ ಒಟ್ಟು ನಾಲ್ಕು ದೇವಾಲಯಗಳಿವೆ. ಶ್ರಾವಣ ತಿಂಗಳಿನಲ್ಲಿ ಮಾರಮ್ಮ ಮತ್ತು ಆಂಜನೇಯ ಸ್ವಾಮಿ ದೇವರಿಗೆ ಆರತಿ ಬೆಳಗಲಾಗುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಎಮ್ಮೆತಿಮ್ಮನಹಳ್ಳಿ

ಎಮ್ಮೆತಿಮ್ಮನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೯೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬೆಟ್ಟದ ಸಾಲು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಬೆಟ್ಟಸಾಲು ಪ್ರದೇಶವಾಗಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳು, ೫ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೪೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೩೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ೫ ಎತ್ತಿನ ಗಾಡಿಗಳು, ೨ ಟ್ರ್ಯಾಕ್ಟರ್ ಹಾಗೂ ೧೦ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆಯು ಗ್ರಾಮದಲ್ಲಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬೇಡತ್ತೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬೇಡತ್ತೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬೇಡತ್ತೂರು ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಶಿಕ್ಷಕರು, ಪೊಲೀಸ್ ಅಧಿಕಾರಿಗಳು ಸೇರಿದಂತೆ ೩ ಜನ ಸರ್ಕಾರಿ ಉದ್ಯೋಗದಲ್ಲಿದ್ದಾರೆ. ಯಕ್ಷಗಾನ ಭಾಗವತರಾದ ದೊಡ್ಡಪಾಲಯ್ಯ, ಮಾರಪ್ಪ, ಉಗ್ರಪ್ಪ ಸ್ಥಳೀಯವಾಗಿ ಹೆಸರು ಮಾಡಿದ್ದ ಕಲಾವಿದರು.

ಗ್ರಾಮದಲ್ಲಿ ಆಂಜನೇಯ, ಮುತ್ತುರಾಯ ದೇವಾಲಯಗಳಿವೆ. ಪ್ರತಿ ವರ್ಷ ಆಂಜನೇಯನ ಜಾತ್ರೆಯನ್ನು ಆರತಿ ಹಾಗೂ ಹರಕೆಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಎಸ್.ಅಪ್ಪೇನಹಳ್ಳಿ

ಎಸ್.ಅಪ್ಪೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ.

ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೧.೦೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬೆಟ್ಟದಸಾಲು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಬೆಟ್ಟದ ಸಾಲು ಪ್ರದೇಶವಾಗಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಚಿರತೆ, ಕರಡಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩ ಸಾರ್ವಜನಿಕ ನಲ್ಲಿಗಳು, ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ರೆಡ್ಡಿ, ಬಣಜಿಗ, ಪರಿಶಿಷ್ಟ ಪಂಗಡ, ಬೋವಿ ಜನಾಂಗದವರಿದ್ದಾರೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೬೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೮೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೬ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬೇಡತ್ತೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬೇಡತ್ತೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬೇಡತ್ತೂರು ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ

ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೨.೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಶಿಕ್ಷಕರು, ಪೊಲೀಸ್ ಅಧಿಕಾರಿಗಳು, ಕೆಎಸ್‌ಆರ್‌ಟಿಸಿ ಉದ್ಯೋಗದಲ್ಲಿ ೩ ಜನ ಹೀಗೆ ಸರ್ಕಾರಿ ಉದ್ಯೋಗದಲ್ಲಿದ್ದಾರೆ.

ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಐ.ಡಿ. ಹಳ್ಳಿ (ಇಟಕದಿಬ್ಬನಹಳ್ಳಿ)

ಐ.ಡಿ.ಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೧೮೮೦.೫೭ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ.

ತೆಲುಗಿನ ಇಟಕ ಶಬ್ದ ಕನ್ನಡದಲ್ಲಿ ಇಟ್ಟಿಗೆ ಎಂಬ ಅರ್ಥವಿದ್ದು ಇಟ್ಟಿಗೆ ತಯಾರಿಸುತ್ತಿದ್ದ ಸ್ಥಳದಲ್ಲಿ ಗ್ರಾಮ ರಚನೆಯಾದುದರಿಂದ ಇಟಕದಿಬ್ಬನಹಳ್ಳಿ ಎಂದು ಕರೆಯಲಾಗಿದೆ. ಈಗ ಸಂಕ್ಷಿಪ್ತವಾಗಿ ಐ.ಡಿ. ಹಳ್ಳಿ ಎಂದು ಕರೆಯಲಾಗುವುದು. ಈ ಗ್ರಾಮದ ಪಕ್ಕದಲ್ಲಿ ಬಸ್ತಿಕೋಟೆ ಎಂಬ ಐತಿಹಾಸಿಕ ಬೇಚರಕ್ ಸ್ಥಳವಿದೆ. ಇದು ಈ ಗ್ರಾಮದ ಮೂಲಹಳ್ಳಿ ಎಂದು ಹೇಳಲಾಗುತ್ತದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ૩೨ ರಿಂದ ૩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೦೬ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕರು, ರೆಡ್ಡಿಗರು, ಕುರುಬರು, ಸಾದರು, ಅಗಸರು, ವೈಶ್ಯರು, ವೀರಶೈವರು, ಬ್ರಾಹ್ಮಣರು, ಆದಿದ್ರಾವಿಡ, ಗೊಲ್ಲ, ಮುಸ್ಲಿಂ, ಸಿಕ್ಖರ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು, ಉರ್ದು, ಸಿಖ್ ಭಾಷೆ ಮಾತನಾಡುತ್ತಾರೆ.

ಒಟ್ಟು ೯೬೬ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೪೧೪೫ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು ೨೧೦೭, ಹೆಣ್ಣು ೨೦૩೮ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ಆಟೋ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಈ ಗ್ರಾಮದಲ್ಲಿ ಉತ್ತಮವಾದ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ.

ಗ್ರಾಮದಲ್ಲಿ ೨೬೬ ಮನೆಗಳು ಶೌಚಾಲಯ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ, ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ವೈದ್ಯಕೀಯ, ವಕೀಲ, ಇಂಜಿನಿಯರ್, ಪೊಲೀಸ್, ಶಿಕ್ಷಣ ಇಲಾಖೆ, ಕಂದಾಯ ಇಲಾಖೆ, ವಿದ್ಯುತ್ ಇಲಾಖೆ ಮತ್ತು ಸಾರಿಗೆ ಇಲಾಖೆಗಳಿಗೆ ಸೇರಿದ ಒಟ್ಟು ೬೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ, ಟೈಲರ್ ಉದ್ಯೋಗ ಮಾಡುವವರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ ಐ.ಡಿ.ಹಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ ಒಟ್ಟು ೬ ಜನ ಸದಸ್ಯರುಗಳಿದ್ದು ೪ ಜನ ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಗರಣಿ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ತಾಲ್ಲೂಕು ರಸ್ತೆ ಮಾರ್ಗವಿದೆ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಐ.ಡಿ.ಹಳ್ಳಿ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೬ ಸ್ತ್ರೀಶಕ್ತಿ ಸಂಘಗಳು ಹಾಗೂ ३ ಧರ್ಮಸ್ಥಳ ಸಂಘಗಳನ್ನು ಹೊಂದಿದೆ. ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವಿದೆ.

ಗ್ರಾಮದಲ್ಲಿ ೦३ ಅಂಗನವಾಡಿ ಕೇಂದ್ರವಿದ್ದು ಐ.ಡಿ.ಹಳ್ಳಿ ೦೧ರಲ್ಲಿ ಗಂಡು-೫೦ ಹೆಣ್ಣು-३३ ಒಟ್ಟು ೮३ ಮಕ್ಕಳಿದ್ದು ಒಬ್ಬ ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ ಐ.ಡಿ.ಹಳ್ಳಿ-೦३ರಲ್ಲಿ೭೬ ಮಕ್ಕಳಿದ್ದು ೦೧ ಕಾರ್ಯಕರ್ತೆ ಹಾಗೂ ೦೧ ಸಹಾಯಕಿ ಇದ್ದಾರೆ ಐ.ಡಿ.ಹಳ್ಳಿ-೦३ರಲ್ಲಿ ೬೫ ಮಕ್ಕಳಿದ್ದು ೦೧ ಕಾರ್ಯಕರ್ತೆ ಹಾಗೂ ೦೧ ಸಹಾಯಕಿ ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ३४३ ವಿದ್ಯಾರ್ಥಿಗಳಿದ್ದಾರೆ ೯ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ ಸರ್ಕಾರಿ ಉರ್ದು ಹಿರಿಯ ಪ್ರಾಥಮಿಕ ಶಾಲೆಯಿದ್ದು ४೨ ವಿದ್ಯಾರ್ಥಿಗಳಿದ್ದಾರೆ ಇಬ್ಬರು ಶಿಕ್ಷಕರಿದ್ದಾರೆ ಸರ್ಕಾರಿ ಪದವಿ ಪೂರ್ವ ಕಾಲೇಜು ಇದ್ದು ४४೬ ವಿದ್ಯಾರ್ಥಿಗಳಿದ್ದು ೦೬ ಜನ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಜಿಟಿಆರ್ ಕಾನ್ವೆಂಟ್ ಹಾಗೂ ಜಿಎನ್ಎ ಕಾನ್ವೆಂಟ್ ಇದ್ದು ೨೧೦ ವಿದ್ಯಾರ್ಥಿಗಳು ೨೫ ಶಿಕ್ಷಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೬೨.೬೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ದಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ ಮತ್ತು ಟೀ ಲಘು ಉಪಹಾರಗಳ ೦३ ಹೋಟೆಲ್‌ಗಳಿದ್ದು ೫೦ ಅಂಗಡಿಗಳಿವೆ. ಎಸ್‌ಬಿಎಂ ಬ್ಯಾಂಕ್ ಇದೆ. ಪಶು ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ನಿವೃತ್ತ ಅಧಿಕಾರಿಗಲಾದ ಡಾ॥ ಎನ್.ಪ್ರಸಾದ್, ಡಾ॥ ಶಿವರಾಂ, ಡಾ॥ ರುದ್ರಮೂರ್ತಿ ಸೇರಿದಂತೆ ಭಾರತೀಯ ಟೆಕ್ಸ್‌ಟೈಲ್ಸ್ ನಿಯಂತ್ರಣಾಧಿಕಾರಿ ಈ ಗ್ರಾಮದಲ್ಲಿದ್ದಾರೆ.

ಗ್ರಾಮದಲ್ಲಿ ಬಸವಣ್ಣ, ನರಸಿಂಹಸ್ವಾಮಿ, ಸಪ್ಲಮ್ಮ, ಮಡಿವಾಳ ಮಾಚಯ್ಯ, ಸಿದ್ದಿ ದೇವರ ಗುಡಿ (ಪಾಳುಬಿದ್ದಿದೆ), ಭೂದೇವಿ, ಶ್ರೀದೇವಿ, ಆಂಜನೇಯ, ಶನಿಮಹಾತ್ಮ, ಮೈಲಾರ ಲಿಂಗೇಶ್ವರ, ಸ್ವಾಮಪ್ಪ, ಮಾರ್ಕಾಂಡೇಯ, ರಾಮದೇವರು, ದಂಡಿನಮಾರಮ್ಮ, ಮಾರಮ್ಮ, ಅಮ್ಮನವರ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

ಭಾನುವಾರ ಸಂತೆ ನಡೆಯುತ್ತದೆ. ಪಾಳುಬಿದ್ದ ಬಸ್ತಿ ಪಟ್ಟಣವಿದೆ.

## ಓಬಳಾಪುರ

ಓಬಳಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೯೬.೨೨ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ.

ಓಬಳನರಸಿಂಹ ದೈವ ಮೂಲದಿಂದಾಗಿ ಓಬಳಾಪುರವಾಗಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಮಾವು, ಹಲಸು, ನೇರಳೆ, ಅಕೇಶಿಯಾ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು

ಕಂಡುಬರುತ್ತವೆ. ಪಕ್ಷಿಗಳಾದ ಪಾರಿವಾಳ, ಕಾಗೆ, ಗೂಬೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ , ಕುರುಬ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೮ ಮತ್ತು ಹೆಂಗಸರು ೨೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ಶೇಂಗಾ, ದಾಳಿಂಬೆ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಗ್ರಾಮದಲ್ಲಿ ಅಂಚೆ, ಪೊಲೀಸ್ ಇಲಾಖೆಗೆ ಸೇರಿದ ೭ ಜನ ಸರ್ಕಾರಿ ನೌಕರರಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ಧರ್ಮಸ್ಥಳ ಸಂಘಗಳಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಆಂಜನೇಯಸ್ವಾಮಿ ದೇವಾಲಯವಿದೆ. ಜನರು ದೇವರಿಗೆ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಓಬಳಹಳ್ಳಿ

ಓಬಳಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೪.೮೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮದ ಪ್ರಾಚೀನ ಹೆಸರು ಮಾಯಕ್ಕನಪಾಳ್ಯ. ಆದರೆ ಈ ಗ್ರಾಮಕ್ಕೆ ಈ ಹೆಸರು ಇಟ್ಟಾಗಿನಿಂದ ಪಾಳುಬಿದ್ದು ಊರಿಗೆ ಊರೇ ಬರಗಾಲದಿಂದ ಕಷ್ಟಗಳನ್ನು ಎದುರಿಸುತ್ತಿತ್ತು ಎಂದು ಈ ಗ್ರಾಮಕ್ಕೆ ಓಬಳಹಳ್ಳಿ ಎಂದು ಮರುನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ಕರಡಿ, ಜಿಂಕೆ, ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗುಬ್ಬಚ್ಚಿ, ಗೊರವಂಕ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ದನ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಒಂದು ಹೊಸಕಟ್ಟೆ ಹಳ್ಳ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳಿದ್ದು ೩ ಸಿಸ್ಟರ್ನ್‌ಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಯಾವುದೇ ಜಾತಿಯವರಿಲ್ಲ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೭೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೫೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೭೦ ಮತ್ತು ಹೆಂಗಸರು ೧೮೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಗುಡಿಸಲು ಮನೆ, ಹೆಂಚಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ಅವರೆ, ಅಲಸಂದೆ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ತೆಂಗು, ಅಡಿಕೆ ಹೂವು ಬೆಳೆಯುವರು. ಅಡಿಕೆ ಮತ್ತು ಹೂವು ಗ್ರಾಮದ ಪ್ರಮುಖ ಸರಕಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಹೈನುಗಾರಿಕೆ ಇದೆ ಹಾಗೂ ಒಂದು ಆಧುನಿಕ ಡೈರಿಯಿದೆ. ಗ್ರಾಮದಲ್ಲಿ ಇಬ್ಬರು ಪೊಲೀಸ್ ನೌಕರಿಯಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕವಣದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕವಣದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ತಿಮ್ಮಲಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೩ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು, ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೨.೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಲಕ್ಕಮ್ಮ, ಹಟ್ಟಿಮಾರಮ್ಮ ದೇವಾಲಯವಿದೆ. ಪ್ರತಿ ಶ್ರಾವಣ ಮಾಸದಲ್ಲಿ ಹರಿಸೇವೆ ಹಾಗೂ ಐದು ವರ್ಷಗಳಿಗೊಮ್ಮೆ ದೊಡ್ಡ ಜಾತ್ರೆಯನ್ನು ನಡೆಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಓಬಳಹಳ್ಳಿ ಜನತಾ ಹೌಸಿಂಗ್ ಕಾಲೋನಿ

ಓಬಳಹಳ್ಳಿ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಓಬಳಹಳ್ಳಿಯ ಹೊರವಲಯದಲ್ಲಿದೆ. ಒಟ್ಟು ೮೦ ಮನೆಗಳನ್ನು ಹೊಂದಿದ್ದು ೭೪ ಜನಸಂಖ್ಯೆಯನ್ನು ಹೊಂದಿದೆ. ಒಕ್ಕಲಿಗ ಜನಾಂಗದವರು ಗ್ರಾಮದಲ್ಲಿದ್ದಾರೆ. ವ್ಯವಸಾಯ ಮುಖ್ಯ ಕಸುಬಾಗಿದೆ.

೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಕವಣದಲ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಪೊಲೀಸ್ ಇಲಾಖೆಯಲ್ಲಿ ಒಬ್ಬರು ಸೇವೆ ಸಲ್ಲಿಸುತ್ತಿದ್ದಾರೆ. ಹಟ್ಟಿ ಮಾರಮ್ಮನಿಗೆ ಆರತಿ ಮಾಡುವರು. ಹರಕೆ ಹಾಗೂ ಬಲಿ ನೀಡುವುದು ಸಂಪ್ರದಾಯವಾಗಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಕೃಷ್ಣಾಪುರ

ಕೃಷ್ಣಾಪುರ ಗ್ರಾಮವು ಮಧುಗಿರಿಯ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೩೬.೭೭ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಶ್ರೀಕೃಷ್ಣನ ಹೆಸರಿನಲ್ಲಿ ಗ್ರಾಮ ರಚನೆಯಾಗಿದ್ದು ನಂತರ ಕೃಷ್ಣಾಪುರ ಎಂದು ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿರುವ ಕೆಂಪು ಮರಳು ಮಿಶ್ರಿತ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಮೊಲ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ.

೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧ ಕೊಳವೆ ಬಾವಿ, ೮ ಸಾರ್ವಜನಿಕ ನಲ್ಲಿಗಳಿವೆ. ಒಕ್ಕಲಿಗ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ.

ಒಟ್ಟು ೩೦ ಮನೆಗಳನ್ನು ಹೊಂದಿರುವ ಗ್ರಾಮವು ೧೧೨ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಇಟ್ಟಿಗೆ ಹಾಗೂ ಗುಡಿಸಲು ಮನೆಗಳಿವೆ. ಗ್ರಾಮದಲ್ಲಿ ಆಶ್ರಯ, ಜನತಾ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ೧೦ ಮನೆಗಳು ನಿರ್ಮಾಣವಾಗಿವೆ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ.

ಸಾಂಪ್ರದಾಯಿಕ ಎತ್ತಿನಗಾಡಿ ಗ್ರಾಮದಲ್ಲಿದ್ದು ಆಧುನಿಕ ವಾಹನಗಳಾದ ಬೈಕ್‌ಗಳಿವೆ. ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆಗಳಾಗಿವೆ. ಗ್ರಾಮದಲ್ಲಿ ೬ ಮನೆಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ.

ವ್ಯವಸಾಯ ಮುಖ್ಯ ಕಸುಬಾಗಿದ್ದು ರಾಗಿ, ಭತ್ತ, ಜೋಳ, ಅಡಿಕೆ, ತೆಂಗು ಬೆಳೆಯುವರು. ಉಳಿದಂತೆ ತೊಗರಿ, ಅಲಸಂದೆ, ಕಡಲೇಕಾಯಿ ಬೆಳೆಯುತ್ತಾರೆ. ಜೋಳ ಗ್ರಾಮದ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ.

ಗ್ರಾಮವು ಮಧುಗಿರಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದೊಡ್ಡೇರಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಹಾಗೂ ಬಡವನಹಳ್ಳಿ ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿಯು ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೋಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಬಡವನಹಳ್ಳಿ ಅಂಚೆ ಸಂಪರ್ಕವನ್ನು ಒದಗಿಸುತ್ತದೆ. ಚರ ದೂರವಾಣಿಗಳು ಗ್ರಾಮದಲ್ಲಿವೆ. ೧ ಸ್ತ್ರೀಶಕ್ತಿ ಸಂಘ, ೧ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪೂರಕವಾಗಿವೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೬೧% ಆಗಿದೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ. ಜ್ವರ, ಕೆಮ್ಮು, ಮಲೇರಿಯಾ ಗ್ರಾಮದಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವ ರೋಗಗಳಾಗಿವೆ.

ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಕನಪನಾಯಕನಹಳ್ಳಿ

ಕನಪನಾಯಕನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೦೭.೫೦ ಹೆಕ್ಟೇರ್ ಕಂದಾಯ ಗ್ರಾಮವಾಗಿದೆ.

ಈ ಗ್ರಾಮಕ್ಕೆ ಕನಪನಾಯಕನಹಳ್ಳಿ ಎಂದು ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಹಿಂದೆ ಈ ಗ್ರಾಮವನ್ನು ಕನಪನಾಯಕ ಎನ್ನುವವರು ಕಟ್ಟಿದರೆಂಬ ಪ್ರತೀತಿ ಇದೆ. ಆದಕಾರಣ ಈ ಗ್ರಾಮಕ್ಕೆ ಕನಪನಾಯಕನಹಳ್ಳಿ ಎಂದು ನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪುಮಣ್ಣಿನ ಫಲವತ್ತಾದ ಭೂಮಿಯನ್ನು ಕೆಂಪು ಕಲ್ಲುಗಳಿಂದ ಕೂಡಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಕೂಡ ಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ ಮೊದಲಾದವು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗಿಳಿ, ನವಿಲು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ನಾಟಿಹಸು, ಸೀಮೆಹಸು, ಮೇಕೆಗಳನ್ನು ಸಾಕಿದ್ದು ೫೦೦ ಕ್ಕೂ ಹೆಚ್ಚು ಕುರಿಗಳು ಗ್ರಾಮದಲ್ಲಿವೆ. ನಾಟಿ ಕೋಳಿಗಳನ್ನು ಗ್ರಾಮದಲ್ಲಿ ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿ.ಮೀ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ದೊಡ್ಡ ಹಳ್ಳ ಹರಿಯುತ್ತಿದ್ದು ಇಂದು ನೀರಿಲ್ಲದೇ ಬರಿದಾಗಿದೆ. ಮಳೆಗಾಲದಲ್ಲಿ ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ಒಂದು ಕೊಳವೆ ಬಾವಿಯಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಮೂರು ಸಿಸ್ಟರ್ನ್‌ಗಳಿವೆ.

ಲಿಂಗಾಯಿತ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗೊಲ್ಲ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೯೭ ಮನೆಗಳನ್ನು ಹೊಂದಿರುವ ಗ್ರಾಮವು ೪೭೯ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗಂಡು ೨೪೫, ಹೆಣ್ಣು ೨೩೪ ಜನಸಂಖ್ಯೆ ಇದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಗುಡಿಸಲು ಮತ್ತು ಮಣ್ಣಿನ ಮನೆಗಳಿವೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್ ವಸತಿ ಹಾಗೂ ಜನತಾ ಯೋಜನೆಯಡಿ ೨೭ ಮನೆಗಳಾಗಿವೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ಹುರುಳಿ, ಜೋಳ ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು, ಬಾಳೆ, ವೀಳ್ಯದೆಲೆ ಬೆಳೆಯುತ್ತಾರೆ. ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಗ್ರಾಮದಲ್ಲಿ ಒಂದು ಆಧುನಿಕ ಡೈರಿಯಿದೆ. ಗ್ರಾಮದಲ್ಲಿರುವ ಹಳ್ಳದಲ್ಲಿ ನೀರಿಲ್ಲದಿರುವುದರಿಂದ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ.

ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಮಿಲಿಟರಿ ಹಾಗೂ ಇಂಜಿನಿಯರ್ ಸೇರಿದಂತೆ ೧೦ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವವರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಬಡವನಹಳ್ಳಿ ಗ್ರಾಮ ಪಂಚಾಯ್ತಿ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಡವನಹಳ್ಳಿ ಗ್ರಾಮ ಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮವು ಬಡವನಹಳ್ಳಿ ಅಂಚೆ ಕಛೇರಿಗೆ ಸೇರಿದೆ ಹಾಗೂ ೮೦ ಕ್ಕೂ ಹೆಚ್ಚು ಚರ ದೂರವಾಣಿ ದೂರ ಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ, ವ್ಯಾಜ್ಯಗಳು ಗ್ರಾಮದ ಹಿರಿಯರು, ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೨ ಸ್ತ್ರೀಶಕ್ತಿ ಸಂಘಗಳಿವೆ, ೩ ಸ್ವಸಹಾಯ ಸಂಘಗಳಿವೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೯.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ ವೇತನ, ವಿಧವಾವೇತನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಒಂದು ಮಾರಮ್ಮ ಹಾಗೂ ಆಂಜನೇಯ ದೇವಾಲಯಗಳಿದ್ದು ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಆಚರಿಸುವರು. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕೂನ್ನಹಳ್ಳಿ

ಕೂನ್ನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೫೨.೧೭ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮಕ್ಕೆ ಕೂನ್ನಹಳ್ಳಿ ಎಂದು ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಈ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನ ಕೊನೆಯ ಗ್ರಾಮವಾಗಿದ್ದರಿಂದ ಜನರು ಈ ಗ್ರಾಮಕ್ಕೆ ಕೂನ್ನಹಳ್ಳಿ ಎಂದು ಎಂದು ನಾಮಕರಣ ಮಾಡಲಾಗಿದೆ ಎಂದು ಹೇಳಲಾಗಿದೆ. ವ್ಯಕ್ತಿ ವಿಶೇಷಣದಿಂದ ಈ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿಕಲ್ಲುಗಳಿಂದ ಕೂಡಿದ್ದು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದಲ್ಲಿ ಮೂರು ಎಕರೆ ಗುಂಡುತೋಪಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಚಿರತೆ, ಕರಡಿ, ತೋಳ, ನರಿ, ಕಾಡುಹಂದಿ, ಕಾಡುಮೊಲ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಕೋಗಿಲೆ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಎತ್ತು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ೩೦೦ ಕ್ಕೂ ಹೆಚ್ಚು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೪.೨ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೋಡಿಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೬೦ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು ಹಾಗೂ ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿದ್ರಾವಿಡ ಜನಾಂಗದವರು ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೦೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೭೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೪೧, ಹೆಣ್ಣು ೨೩೫ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಜಿಂಕ್‌ಷೀಟ್ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೪೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ, ರೊಟ್ಟಿ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಒಂದು ಸಾಂಪ್ರದಾಯಿಕ ಎತ್ತಿನ ಗಾಡಿಯಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೨೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ರಾಗಿ, ಭತ್ತ ಮತ್ತು ಕಡಲೇಕಾಯಿ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಹಲಸಂದೆ ಮುಂತಾದವುಗಳನ್ನು ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಹಾಗೂ ಎರಡು ಆಧುನಿಕ ಡೈರಿಗಳು ಇದೆ. ಗ್ರಾಮಕ್ಕೆ ಸೇರಿದಂತೆ ಯಾವುದೇ ಕೆರೆ ಇಲ್ಲವಾದ್ದರಿಂದ, ಹಳ್ಳದಲ್ಲಿ ನೀರಿಲ್ಲವಾದ್ದರಿಂದ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಗ್ರಾಮದಲ್ಲಿ ಮೂವರು ಶಿಕ್ಷಕರು, ಒಬ್ಬರು ಕಂಡಕ್ಟರ್ ಸೇರಿದಂತೆ ನಾಲ್ಕು ಜನ ಸರ್ಕಾರಿ ನೌಕರರಿದ್ದಾರೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಗುಡಿಕಾರರಿದ್ದಾರೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಒಬ್ಬರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ರಂಗಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಗಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಅಂಚೆ ಕಛೇರಿ ಬಡವನಹಳ್ಳಿಯಲ್ಲಿದ್ದು ನೂರಕ್ಕೂ ಹೆಚ್ಚು ಜನ ಚರ ದೂರವಾಣಿ ದೂರಸಂಪರ್ಕ ಸಾಧನಗಳನ್ನು ಬಳಸುತ್ತಿದ್ದಾರೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳು ಗ್ರಾಮದಲ್ಲಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿಯಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂವರು ಶಿಕ್ಷಕರು ಹಾಗೂ ಇಬ್ಬರು ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೫೫.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಎರಡು ಹೋಟೆಲ್ ಹಾಗೂ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಎರಡು ದೇವಾಲಯಗಳಿವೆ ಮಾರಮ್ಮನ ಗದ್ದುಗೆ ಮತ್ತು ಆಂಜನೇಯ ದೇವಾಲಯಗಳಿದ್ದು ಪ್ರತಿ

ವರ್ಷ ಮಾರಮ್ಮನ ಜಾತ್ರಾ ಮಹೋತ್ಸವವನ್ನು ಅತ್ಯಂತ ಸಡಗರದಿಂದ ಹರಕೆ ಹಾಗೂ ಬಲಿಯೊಂದಿಗೆ ಆಚರಿಸುತ್ತಾರೆ. ಆಂಜನೇಯಸ್ವಾಮಿ ಉತ್ಸವವನ್ನು ಊರಿನ ತುಂಬಾ ನಡೆಸುವರು. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕುರಿಹಳ್ಳಿ

ಕುರಿಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೩.೪೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮಕ್ಕೆ ಕುರಿಹಳ್ಳಿ ಎಂದು ಹೆಸರು ಬರಲು ಕಾರಣವನ್ನು ಹಿರಿಯರು ಹೇಳಿದಂತೆ ಈ ಗ್ರಾಮದಲ್ಲಿ ಅತಿ ಹೆಚ್ಚು ಕುರಿಗಳನ್ನು ಸಾಕುತ್ತಿದ್ದರಂತೆ. ಕುರಿಗಳ ವ್ಯಾಪಾರಕ್ಕೆ ಹೆಸರಾಗಿಬಿಟ್ಟಿತ್ತಂತೆ. ಆದ್ದರಿಂದ ಕುರಿಹಳ್ಳಿ ಎಂದು ಈ ಊರಿಗೆ ನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಜಿಂಕೆ, ಚಿರತೆಗಳು ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ನವಿಲು, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಎತ್ತು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಹೆಚ್ಚು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಹಳೆ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೪ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಕ್ಕೂ ಹೆಚ್ಚು ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ತಿಗುಳ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುಂಚಿಟಿಗ, ನಾಯಕ ಜನಾಂಗದವರು ಗ್ರಾಮದಲ್ಲಿದ್ದು ಕುಂಚಿಟಿಗ ಜನಾಂಗದವರು ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೭೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೧೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೧೭, ಹೆಣ್ಣು ೧೯೬ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಒಂದು ಸಾಂಪ್ರದಾಯಿಕ ಎತ್ತಿನ ಗಾಡಿಯಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ರಾಗಿ, ಭತ್ತ ಮತ್ತು ಹೂವು ಮುಖ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಅವರೆ ಮುಂತಾದವುಗಳನ್ನು ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳ ಇದ್ದು ಸರಿಯಾಗಿ ನೀರಿಲ್ಲವಾದ್ದರಿಂದ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಗ್ರಾಮದಲ್ಲಿ ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ.

ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ರಂಗಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಗಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿಯಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಹಾಗೂ ಒಬ್ಬರು ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೫೫.೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಒಂದು ಕೊಲ್ಲಾಪುರದಮ್ಮನ ದೇವಾಲಯವಿದ್ದು ಪ್ರತಿ ವರ್ಷ ಕೊಲ್ಲಾಪುರದಮ್ಮನ ಜಾತ್ರಾ ಮಹೋತ್ಸವವನ್ನು ಅತ್ಯಂತ ವೈಭವಪೂರ್ಣವಾಗಿ ಆಚರಿಸುತ್ತಾರೆ. ಅಂದು ಊರಿನ ತುಂಬ ದೇವರ ಉತ್ಸವ ನಡೆಯುತತದೆ. ಹರಕೆ ಹೊರುವ ಮತ್ತು ಬಲಿ ನೀಡುವ ಆಚರಣೆಗಳು ರೂಢಿಯಲ್ಲಿವೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕಿತ್ತಗಳಿ

ಕಿತ್ತಗಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೪೦.೭೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮಕ್ಕೆ ಹಿರಿಯರು ಹೇಳುವಂತೆ ಕಿತ್ತಗಳಿ ಎಂದು ಹೆಸರು ಬರಲು ಕಾರಣವೇನೆಂದರೆ ಹಿಂದೆ ಈ ಗ್ರಾಮದಲ್ಲಿ ಅತಿ ಹೆಚ್ಚು ತೋಟವಿದ್ದು ತೋಟದಲ್ಲಿ ಅತಿ ಹೆಚ್ಚು ಕಿತ್ತಲೆ ಹಣ್ಣು ಬೆಳೆಯುತ್ತಿದ್ದರು. ಆ ಸಂದರ್ಭದಲ್ಲಿ ಇಲ್ಲಿಗೆ ಅತಿ ಹೆಚ್ಚು ಕೂಲಿ ಕಾರ್ಮಿಕರು ಹಣ್ಣು ಕೀಳಲು ಬರುತ್ತಿದ್ದರಂತೆ. ಆದ್ದರಿಂದ ಈ ಗ್ರಾಮಕ್ಕೆ ಕಿತ್ತಗಳಿ ಎಂದು ನಾಮಕರಣಗೊಂಡಿದೆ. ಅಗಳಿ ಪಕ್ಕದ ಚಿಕ್ಕಹಳ್ಳಿ ಎಂದು ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರೇ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರಿತವಾದ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಸ್ವಲ್ಪ ಅರಣ್ಯವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಚಿರತೆ, ಜಿಂಕೆ, ಕರಡಿ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಗೊರವಂಕ, ಗೌಜುಗ, ನವಿಲು, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಎಮ್ಮೆ, ಸೀಮೆಹಸುಗಳು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಹೆಚ್ಚು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೨ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧೫೦ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳು  ಇವೆ ಹಾಗೂ ಒಂದು ಕೆರೆ ಇದ್ದು ಮಳೆಗಾಲದಲ್ಲಿ ಮಾತ್ರ ನೀರಿರುತ್ತದೆ. ಕೆರೆಯ ನೀರನ್ನು ಗ್ರಾಮಸ್ಥರು ಜಾನುವಾರುಗಳಿಗೆ ಹಾಗೂ ಕೃಷಿಗೆ ಬಳಸಿಕೊಳ್ಳುತ್ತಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ವಿಶ್ವಕರ್ಮ ಜನಾಂಗದವರು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ

ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೨೬೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೨೧೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೬೩೩, ಹೆಂಗಸರು ೫೮೧ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೫೮ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಎರಡು ಸಾಂಪ್ರದಾಯಿಕ ಎತ್ತಿನ ಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೬೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಹಲಸಂದೆ, ಶೇಂಗಾ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ಶೇಂಗಾ ಮತ್ತು ತೆಂಗು ಬೆಳೆಯುತ್ತಾರೆ. ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಹಾಗೂ ಆಧುನಿಕ ಡೈರಿಯೊಂದು ಇದೆ. ಗ್ರಾಮದಲ್ಲಿ ನೀರಿಲ್ಲದ ಕಾರಣ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಶಿಕ್ಷಣ ಇಲಾಖೆಯಲ್ಲಿ ಕೆಲಸ ನಿರ್ವಹಿಸುವ ಐದು ಜನ, ವಕೀಲರು ಒಬ್ಬರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವವರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ನೋಂದಣಿ ಇಲಾಖೆಯಲ್ಲಿ ಸಬ್‌ರಿಜಿಸ್ಟ್ರರ್ ಆಗಿರುವ ಈಶ್ವರಪ್ಪ ಈ ಗ್ರಾಮದವರು.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಸಜ್ಜೆಹೊಸಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಜ್ಜೆ ಹೊಸಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಕಾರ್ಪೆನಹಳ್ಳಿ ಅಂಚೆ ಕಛೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧೦ ಸ್ತ್ರೀಶಕ್ತಿ ಸಂಘಗಳು ೧೦ ಸ್ವಸಹಾಯ ಸಂಘಗಳು ಹಾಗೂ ೧೦ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರಗಳಿದ್ದು ಅಂಗನವಾಡಿ ಒಂದರಲ್ಲಿ ೩೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿಯಿದ್ದಾರೆ. ಅಂಗನವಾಡಿ ಎರಡರಲ್ಲಿ ೩೯ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ.

ಗ್ರಾಮದಲ್ಲಿ ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೮೪ ವಿದ್ಯಾರ್ಥಿಗಳಿದ್ದಾರೆ. ಮೂವರು ಶಿಕ್ಷಕರು ಹಾಗೂ ಮೂವರು ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೦.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ನಾಲ್ಕು ಹೋಟೆಲ್‌ಗಳು, ಎರಡು ವಸತಿಗೃಹಗಳು ಮತ್ತು ಎರಡು ಅಂಗಡಿಗಳು ಗ್ರಾಮದಲ್ಲಿವೆ.

ಗ್ರಾಮದಲ್ಲಿ ಆರು ದೇವಾಲಯಗಳಿವೆ. ಆಂಜನೇಯ, ರಾಮ, ತಿಮ್ಮಪ್ಪ, ಮಾರಮ್ಮ, ಬಸವಣ್ಣ ಮತ್ತು ಲಕ್ಷ್ಮಿ ದೇವಸ್ಥಾನಗಳಿದ್ದು ಒಂದು ಮುಸ್ಲಿಂ ಅಲ್ಲಾ ಮಸೀದಿ ಇದೆ. ಪ್ರತಿ ವರ್ಷ ಮೇ ತಿಂಗಳಿನಲ್ಲಿ ಆಂಜನೇಯ ಸ್ವಾಮಿಯ ಉತ್ಸವವನ್ನು ಊರಿನ ಬೀದಿಗಳಲ್ಲಿ ಮಾಡಿ ದೊಡ್ಡ ಜಾತ್ರೆಯನ್ನು ನಡೆಸುತ್ತಾರೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ

ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮುಸ್ಲಿಂ ಬಾಂಧವರು ಮುಸ್ಲಿಂ ಹಬ್ಬಗಳನ್ನು ಆಚರಿಸುವರು.

## ಕಾರ್ಪೇನಹಳ್ಳಿ ಗೊಲ್ಲರಹಟ್ಟಿ

ಗೊಲ್ಲರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೩೬೮.೮೫ ಹೆಕ್ಟೇರ್ ಕಾರ್ಪೇನಹಳ್ಳಿ ಭೂ ವಿಸ್ತೀರ್ಣದಲ್ಲಿ ಸೇರ್ಪಡೆಯಾಗಿದ್ದು ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರಿತವಾದ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಭಸ್ಮಾಂಗಿ ಬೆಟ್ಟವಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ನರಿ, ಕರಡಿ, ತೋಳ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಗಿಳಿ, ಕಾಗೆ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಹೆಚ್ಚು ಕಂಡುಬರುತ್ತದೆ.

ಗ್ರಾಮದಲ್ಲಿ ಸುವರ್ಣಮುಖಿ ಹೊಳೆ ಹಾಗೂ ಒಂದು ಕೆರೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಬೇರೆ ಯಾವುದೇ ಜನಾಂಗವಿಲ್ಲ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೭೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೧೧೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೧೬, ಹೆಂಗಸರು ೧೧೪ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೧೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳು ಗ್ರಾಮದಲ್ಲಿವೆ.

ಕುರಿ ಸಾಕಾಣಿಕೆ ಹಾಗೂ ಕೂಲಿ ಗ್ರಾಮದ ಮುಖ್ಯ ಕಸುಬಾಗಿದ್ದು ೨೦% ಮಾತ್ರ ವ್ಯವಸಾಯ ಮಾಡುತ್ತಾರೆ. ಜೋಳ, ರಾಗಿ, ಭತ್ತ ಮುಖ್ಯ ಬೆಳೆಗಳಾಗಿವೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಸಜ್ಜೆಹೊಸಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಜ್ಜೆ ಹೊಸಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ೫೦ ಮೊಬೈಲ್‌ಗಳಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳು ಹಾಗೂ ಒಂದು ಸ್ವಸಹಾಯ ಸಂಘಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೫೧%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಮಾರಮ್ಮ, ರಂಗನಾಥ ದೇವಾಲಯವಿದ್ದು ರಂಗನಾಥಸ್ವಾಮಿ ಉತ್ಸವದಲ್ಲಿ ಭಾಗವಹಿಸುವರು. ಮಾರಮ್ಮನ ಜಾತ್ರೆಯನ್ನು ಆಚರಿಸುವರು. ಉಳಿದಂತೆ

ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕೆಂಪಚನ್ನೇನಹಳ್ಳಿ

ಕೆಂಪಚನ್ನೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೨೬.೩೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕೆಂಪಚನ್ನ ಎಂಬ ವ್ಯಕ್ತಿಮೂಲದಿಂದ ಈ ಹೆಸರು ಬಂದಿದೆ. ಕೆಂಪು ಮಣ್ಣು ಇಲ್ಲಿನ ಚನ್ನೇನಹಳ್ಳಿಗೆ ವಿಶೇಷವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರಿತವಾದ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ಚಿರತೆ, ನರಿ, ತೋಳ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ರಣಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಮಳೆಗಾಲದಲ್ಲಿ ಸ್ವಲ್ಪ ಪ್ರಮಾಣದ ನೀರು ಸಂಗ್ರಹವಾದಾಗ ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಬಳಸಿಕೊಳ್ಳಲಾಗುತ್ತದೆ. ಆದರೆ ಕೆರೆ ಸಂಪೂರ್ಣವಾಗಿ ತುಂಬಿ ಕೋಡಿ ಬಿದ್ದು ೨–೩ ವರ್ಷಗಳೇ ಕಳೆದಿವೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ತಿಗುಳ ಸಮುದಾಯ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೬೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೬೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೯೪, ಹೆಂಗಸರು ೧೭೪ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೦ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಸಿಹಿ ಊಟ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಎರಡು ಸಾಂಪ್ರದಾಯಿಕ ಎತ್ತಿನ ಗಾಡಿ ಇದೆ. ಟ್ರ್ಯಕ್ಟರ್ ಮತ್ತು ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಶೇಂಗಾ, ತೆಂಗು ಬೆಳೆಯುತ್ತಾರೆ. ಸಾಂಪ್ರದಾಯಿಕ ಶೈಲಿಯ ಒಂದು ಹೈನುಗಾರಿಕೆ ಹಾಗೂ ಒಂದು ಮಿನಿ ಡೈರಿ ಗ್ರಾಮದಲ್ಲಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಇದ್ದರೂ ಸಾಕಷ್ಟು ಪ್ರಮಾಣದ ನೀರಿಲ್ಲದ ಕಾರಣ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ.

ಗ್ರಾಮದಲ್ಲಿ ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವವರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ಎಲ್ಲರೂ ವ್ಯವಸಾಯವನ್ನು ಮಾಡುತ್ತಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರಂಟವಾಳಲು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಟವಳಲು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ರಂಟವಳಲು ಅಂಚೆ ಕಚೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೨.೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕೋಡಿರಾಂಪುರ

ಕೋಡಿರಾಂಪುರ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೮.೫೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮಕ್ಕೆ ಕೋಡಿರಾಂಪುರ ಎಂದು ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಈ ಗ್ರಾಮವು ರಂಟವಾಳಲು ಕೆರೆಯ ಕೋಡಿಯ ಪಕ್ಕದಲ್ಲಿ ರಾಮಪ್ಪ ಎಂಬ ವ್ಯಕ್ತಿ ವಸತಿ ನಿರ್ಮಿಸಿಕೊಂಡ ಕಾರಣ ಆತನ ಹೆಸರಿನಲ್ಲಿಯೇ ಗ್ರಾಮ ಬೆಳೆದು ಕೋಡಿರಾಂಪುರ ಎಂದು ನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಉಳಿದಂತೆ ಹಲವು ಜಾತಿಯ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೪ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಸಾದರು ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದಲ್ಲಿ ಸಾದರನ್ನು ಬಿಟ್ಟರೆ ಬೇರೆ ಯಾವುದೇ ಜನಾಂಗದವರಿಲ್ಲ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಕನ್ನಡ, ತೆಲುಗು ಭಾಷೆಯನ್ನು ಬಳಸುತ್ತಾರೆ.

ಒಟ್ಟು ೫೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೫೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೩೬, ಹೆಂಗಸರು ೧೨೧ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೨ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಸಿಹಿ ಊಟ ವಿಶೇಷ ಆಹಾರವಾಗಿದೆ.

ಮೂರು ಸಾಂಪ್ರದಾಯಿಕ ಎತ್ತಿನ ಗಾಡಿ ಇದೆ. ಟ್ರ್ಯಕ್ಟರ್ ಮತ್ತು ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ಮೆಣಸಿನಕಾಯಿ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ತೆಂಗು, ಅಡಿಕೆ ಬೆಳೆಯುತ್ತಾರೆ. ತೆಂಗು, ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಆಧುನಿಕ ಮಿನಿ ಡೈರಿ ಇದೆ. ಗ್ರಾಮದಲ್ಲಿ ಟೈಲರಿಂಗ್ ನಂತಹ ಉದ್ಯೋಗ ಮಾಡುವವರು ಮೂರು ಜನರಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರಂಟವಾಳಲು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಟವಳಲು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ರಂಟವಳಲು ಅಂಚೆ ಕಚೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೨ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೭೭.೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಇಲ್ಲಿ ಒಂದು ಚಿಲ್ಲರೆ ಅಂಗಡಿ ಇದೆ.

ಗ್ರಾಮದಲ್ಲಿ ೬೦ ವರ್ಷದ ಹಿರಿಯ ಕನ್ನಡ ಸಾಹಿತಿಗಳಾದ ಡಾ॥ರಂಗಾರೆಡ್ಡಿ ಕೋಡಿರಾಂಪುರ ಪ್ರಾಧ್ಯಾಪಕರಾಗಿ ನಿವೃತ್ತರಾಗಿದ್ದಾರೆ. ಶ್ರೀಯುತರು ಹಲವು ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಗ್ರಾಮದಲ್ಲಿ ಒಂದು ಅಶ್ವತ್ಥನಾರಾಯಣ ದೇವಾಲಯವಿದೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕೆ.ಗೊಲ್ಲಳ್ಳಿ

ಕೆ.ಗೊಲ್ಲಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೨.೧೮ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ.

ಈ ಗ್ರಾಮದಲ್ಲಿ ಹೆಚ್ಚಾಗಿ ಗೊಲ್ಲ ಜನಾಂಗದವರು ಇದ್ದ ಕಾರಣ ಈ ಗ್ರಾಮಕ್ಕೆ ಗೊಲ್ಲಳ್ಳಿ ಎಂದು ನಾಮಕರಣ ಮಾಡಲಾಗಿದೆ ಎಂದು ಹಿರಿಯರು ಹೇಳುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಕಲ್ಲುಗಳಿಂದ ಕೂಡಿದ್ದು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ, ಕರಡಿ, ಚಿರತೆ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ

ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೬೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೧೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೫೨, ಹೆಂಗಸರು ೧೬೪ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೦ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಮತ್ತು ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೧೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿ ಸ್ವಲ್ಪ ಜನರು ಮಾತ್ರ ಮಾಡುತ್ತಿದ್ದು, ಕುರಿ ವ್ಯಾಪಾರ ಮಾಡುವುದು ಗ್ರಾಮದ ಪ್ರಮುಖ ಉದ್ಯೋಗವಾಗಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ನೇರಳೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ನೇರಳೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ನೇರಳೇಕೆರೆ ಅಂಚೆ ಕಚೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೪೭.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಎರಡು ಅಂಗಡಿಗಳಿವೆ.

ಗ್ರಾಮದಲ್ಲಿ ಭೂತಪ್ಪನ ದೇವಾಲಯವಿದೆ. ಭಕ್ತರು ಹರಕೆ ಹೊರುವುದು ಹಾಗೂ ಬಲಿ ನೀಡುವ ಆಚರಣೆಯನ್ನು ನಡೆಸುತ್ತಾರೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಹಿರಿಯ ಲೇಖಕ ಡಾ. ರಂಗಾರೆಡ್ಡಿ ಕೋಡಿರಾಂಪುರ ಈ ಗ್ರಾಮದ ವಿಶೇಷ ವ್ಯಕ್ತಿಯಾಗಿದ್ದಾರೆ.

## ಕೋಟಗಾರ್ಲಳ್ಳಿ

ಕೋಟಗಾರ್ಲಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೪೭.೭೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕೋಟೆ ಮೂಲದಿಂದ ಕೋಟಗಾರ್ಲಳ್ಳಿ ಹೆಸರಾಗಿದೆ. ಕೋಟೆ+ಗಾರ > ಕೋಟೆಗಾರ > ಕೋಟಗಾರ್ಲ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ಕಾಡುಹಂದಿ, ಮೊಲ, ನರಿ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಗೂಬೆ, ಹಾಲಕ್ಕಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಎಮ್ಮೆ, ಎತ್ತು, ಹಸು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಒಂದು ಕೆರೆ ಕುಂಬಾರಕಟ್ಟೆ

ಇದ್ದು ಮಳೆಗಾಲದಲ್ಲಿ ಸ್ವಲ್ಪ ಪ್ರಮಾಣದ ನೀರು ಸಂಗ್ರಹವಾದಾಗ ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಬಳಸಿಕೊಳ್ಳಲಾಗುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೫ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಮುಸ್ಲಿಂ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುಂಬಾರ ಸಮುದಾಯ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ. ಉಳಿದಂತೆ ಮುಸ್ಲಿಂ ಜನಾಂಗದವರು ಉರ್ದು ಮಾತನಾಡುತ್ತಾರೆ.

ಒಟ್ಟು ೧೪೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೦೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೪೯, ಹೆಂಗಸರು ೨೫೯ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨೬ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಸಿಹಿ ಊಟ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಎರಡು ಸಾಂಪ್ರದಾಯಿಕ ಎತ್ತಿನ ಗಾಡಿ ಇದೆ. ಟಿಲ್ಲರ್, ಓಮ್ನಿ ಮತ್ತು ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೪೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಬೀಡಿ ವ್ಯಾಪಾರ ಇಲ್ಲಿ ಪ್ರಮುಖ ಕಸುಬಾಗಿದ್ದು ಎಲ್ಲರೂ ಸಣ್ಣ ಕೈಗಾರಿಕೆ ನಡೆಸುತ್ತಿದ್ದಾರೆ. ಸ್ವಲ್ಪ ಪ್ರಮಾಣದ ವ್ಯವಸಾಯ ಕೆಲವರು ಮಾಡುತ್ತಿದ್ದು ರಾಗಿ, ಭತ್ತ, ಶೇಂಗಾ, ಸೂರ್ಯಕಾಂತಿ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಒಂದು ಹೈನುಗಾರಿಕೆ ಹಾಗೂ ಎರಡು ಆಧುನಿಕ ಡೈರಿ ಗ್ರಾಮದಲ್ಲಿದೆ.

ಗ್ರಾಮದಲ್ಲಿ ಇಬ್ಬರು ಶಿಕ್ಷಕರಾಗಿ ಸರ್ಕಾರಿ ನೌಕರಿಯಲ್ಲಿದ್ದಾರೆ. ಉಳಿದವರೆಲ್ಲಾ ಬೀಡಿ ವ್ಯಾಪಾರದಲ್ಲಿ ತೊಡಗಿರುತ್ತಾರೆ. ಟೈಲರಿಂಗ್‌ನಂತರ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಟಗಾರ್ಲಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಇಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಟಗಾರ್ಲಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಕೋಟಗಾರ್ಲಹಳ್ಳಿ ಅಂಚೆ ಕಚೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೨೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಆರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರಿ ಉರ್ದು ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ೨೩ ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರಿದ್ದಾರೆ. ಸರ್ಕಾರಿ ಪ್ರೌಢಶಾಲೆ ಇದ್ದು ೧೦೭ ವಿದ್ಯಾರ್ಥಿಗಳು ಹಾಗೂ ೮ ಜನ ಶಿಕ್ಷಕರು ಇದ್ದು ಮಕ್ಕಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೭೦.೨%.

ಗ್ರಾಮಪಂಚಾಯ್ತಿ ವತಿಯಿಂದ ನಡೆಯುವ ಒಂದು ಗ್ರಂಥಾಲಯವಿದ್ದು ವಿವಿಧ ಪ್ರಕಾರದ ೨೦೦೦ ಪುಸ್ತಕಗಳಿವೆ. ಒಬ್ಬರು ಗ್ರಂಥಪಾಲಕರಿದ್ದಾರೆ.

ಗ್ರಾಮದಲ್ಲಿ ಒಂದು ಕುಟುಂಬ ಕಲ್ಯಾಣ, ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಇಲ್ಲಿ ಒಬ್ಬ

ವೈದ್ಯರಿದ್ದಾರೆ. ಗ್ರಾಮದಲ್ಲಿ ಸಾಮಾನ್ಯವಾಗಿ ಜ್ವರ, ನೆಗಡಿ, ಮಲೇರಿಯಾ ರೋಗಗಳು ಕಂಡುಬರುತ್ತವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್ ಹಾಗೂ ೪ ಅಂಗಡಿಗಳಿವೆ. ಗ್ರಾಮದಲ್ಲಿ ಒಂದು ಮಸೀದಿ ಇದ್ದು ಮುಸ್ಲಿಂ ಬಾಂಧವರು ಸೇವೆ ಸಲ್ಲಿಸುತ್ತಿರುತ್ತಾರೆ. ಆಂಜನೇಯ, ಮಾರಮ್ಮ, ದುರ್ಗಾದೇವಿ ದೇವಾಲಯಗಳಿವೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮುಸ್ಲಿಂ ಬಾಂಧವರು ಮುಸ್ಲಿಂ ಹಬ್ಬಗಳನ್ನು ಆಚರಿಸುವರು.

## ಕೋಟಗಾರ್ಲಳ್ಳಿ ಗೊಲ್ಲರಹಟ್ಟಿ

ಕೋಟಗಾರ್ಲಳ್ಳಿ ಗೊಲ್ಲರಹಟ್ಟಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಕೊಟಗಾರ್ಲಳ್ಳಿಯ ಹೊರವಲಯದಲ್ಲಿದೆ.

ಒಟ್ಟು ೨೧ ಮನೆಗಳಿದ್ದು ೯೫ ಜನಸಂಖ್ಯೆ ಇದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಕೂಲಿ ಹಾಗೂ ಪಶುಸಂಗೋಪನೆ ಮುಖ್ಯ ಕಸುಬಾಗಿದೆ. ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಕುರುಬರಹಳ್ಳಿ

ಕುರುಬರಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೭.೮೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮಕ್ಕೆ ಕುರುಬರಹಳ್ಳಿ ಎಂದು ಹೆಸರು ಬರಲು ಕಾರಣವೇನೆಂದರೆ ತುಂಬಾ ವರ್ಷಗಳ ಹಿಂದೆ ಈ ಗ್ರಾಮದಲ್ಲಿ ಕುರುಬರ ಜನಸಂಖ್ಯೆ ಹೆಚ್ಚು ಇದ್ದ ಕಾರಣ ಈ ಗ್ರಾಮಕ್ಕೆ ಈ ರೀತಿಯಾದ ಹೆಸರು ಇಟ್ಟರು ಎನ್ನುವುದು ಜನರ ಅನಿಸಿಕೆಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಿಶ್ರ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ಮೊಲ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಕಾಗೆ, ಗುಬ್ಬಚ್ಚಿ ಮೊದಲಾದವುಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದಲ್ಲಿ ೧ ಕೆರೆ ಮತ್ತು ೨ ಹಳ್ಳಗಳಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳು ಹಾಗೂ ೪ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ, ಒಕ್ಕಲಿಗ, ನಾಯಕ, ಆದಿದ್ರಾವಿಡ, ಆದಿಕರ್ನಾಟಕ, ಲಿಂಗಾಯಿತ, ಕುಂಬಾರ, ಕುರುಬ, ವಿಶ್ವಕರ್ಮ, ಶೆಟ್ಟಿ ಬಣಜಿಗ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೫೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೬೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೭೧, ಹೆಂಗಸರು ೨೯೪ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೩೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸೀಮೆಂಟ್ ರಸ್ತೆಯನ್ನು ಹೊಂದಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ೨೦% ಮಾತ್ರ ಇದ್ದು ಕುರಿ ಸಾಕಾಣಿಕೆ ಮುಖ್ಯ ಉದ್ಯೋಗವಾಗಿದೆ. ಶೇಂಗಾ, ರಾಗಿ, ಭತ್ತ ಮುಖ್ಯ ಬೆಳೆಗಳಾಗಿವೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ ಹಾಗೂ ಒಂದು ಆಧುನಿಕ ಡೈರಿಯು ಗ್ರಾಮದಲ್ಲಿದೆ. ಟೈಲರ್ ಇಬ್ಬರು, ಬಡಗಿ ಒಬ್ಬರು ಗ್ರಾಮದಲ್ಲಿದ್ದು ಇಬ್ಬರು ಶಿಕ್ಷಕರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದಬ್ಬೇಘಟ್ಟ ಗ್ರಾಮಪಂಚಾಯ್ತಿಗೆ ಸೇರುತ್ತದೆ. ಈ ಗ್ರಾಮದಿಂದ ಒಟ್ಟು ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ದಬ್ಬೇಘಟ್ಟ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ದಬ್ಬೇಘಟ್ಟ ಗ್ರಾಮದ ಅಂಚೆ ಕಚೇರಿಗೆ ಸೇರಿದೆ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೫೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೪.೭೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ರಂಗನಾಥ, ಮಾರಮ್ಮ, ಆಂಜನೇಯ ದೇವಾಲಯಗಳಿವೆ. ಮಾರಮ್ಮನ ಜಾತ್ರೆಯನ್ನು ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

ಹೆಸರಾಂತ ಸಾಹಿತಿ ದೊಡ್ಡರಂಗೇಗೌಡ, ಡಾ॥ ಡಿ.ಭರತ್, ಡಾ॥ ರಾಜೇಶ್ವರಿ ಗೌಡ ಈ ಗ್ರಾಮದ ವಿಶೇಷವಾಗಿದ್ದಾರೆ. ದೊಡ್ಡರಂಗೇಗೌಡರು ಪ್ರಾಧ್ಯಾಪಕರಾಗಿದ್ದು ಸಧ್ಯ ಕರ್ನಾಟಕ ವಿಧಾನಪರಿಷತ್ ಸದಸ್ಯರೂ ಆಗಿರುವುದು ಈ ಗ್ರಾಮದ ವಿಶೇಷವಾಗಿದೆ.

## ಕಂಸಾನಹಳ್ಳಿ

ಕಂಸಾನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೩೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಕಿವಿಗೆ ಓಲೆ ಹಾಕಿಕೊಳ್ಳುವ ಹೆಂಗಸು ಎಂಬ ಅರ್ಥದಲ್ಲಿ ಗ್ರಾಮದ ಹೆಸರು ಕಮ್ಮಸಾನಿಪಲ್ಲಿ ಎಂದಾಗಿತ್ತು. ಪ್ರಾಚೀನ ಕಾಲದಲ್ಲಿ ಕಮ್ಮಸಾನಿ ಎಂಬ ಪ್ರಮುಖ ಮಹಿಳೆಯ ಹೆಸರಿನಲ್ಲಿ ಈ ಗ್ರಾಮವಿದೆ. ಈ ಗ್ರಾಮವು ರಾಜರ ಕಾಲದಿಂದಲೂ ಜೋಡಿ ಗ್ರಾಮವಾಗಿದ್ದು ಬ್ರಾಹ್ಮಣರ ಅಗ್ರಹಾರವಾಗಿತ್ತು.

ಈ ಗ್ರಾಮದಲ್ಲಿ ಒಕ್ಕಲಿಗರು ಪ್ರಧಾನ ಸಮುದಾಯದವರಾಗಿದ್ದು ಉಳಿದಂತೆ ಬಲಜಿಗರು, ನಾಯಕ, ಉಪ್ಪಾರ, ವಿಶ್ವಕರ್ಮ, ಬ್ರಾಹ್ಮಣರು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ತೆಲುಗು ಮಾತನಾಡುವವರು ಇದ್ದಾರೆ.

ಈ ಗ್ರಾಮದಲ್ಲಿ ಬೆಟ್ಟಗುಡ್ಡಗಳು ಇಲ್ಲ. ಇದು ವಿಶಾಲವಾದ ಬಯಲುಸೀಮೆಯ ಪ್ರದೇಶವಾಗಿದೆ. ಇಲ್ಲಿನ

ಪ್ರದೇಶದಲ್ಲಿ ಸುತ್ತಲೂ ಕೆಂಪು ಮಣ್ಣು ಕಂಡುಬರುತ್ತದೆ. ಹೊಸಕೆರೆ ಬೊಮ್ಮಶೆಟ್ಟಿಕೆರೆಗಳು ಇಲ್ಲಿವೆ. ವಾರ್ಷಿಕವಾಗಿ ೪೫೩.೩ ಮಿಮೀ ಸರಾಸರಿ ಮಳೆಯ ಪ್ರಮಾಣವಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದಲ್ಲಿ ರಾಗಿ, ಮುಸುಕಿನ ಜೋಳ, ರೇಷ್ಮೆ ಪ್ರಧಾನ ಬೆಳೆಗಳಾಗಿವೆ. ಉದ್ದು, ಅವರೆ, ತೊಗರಿ, ಅಲಸಂದೆ ಉಪಬೆಳೆಗಳಾಗಿವೆ. ರಾಗಿಯು ಆಹಾರ ಬೆಳೆಯಾಗಿದೆ. ರೇಷ್ಮೆ, ಮೆಣಸಿನಕಾಯಿ ವಾಣಿಜ್ಯ ಬೆಳೆಗಳಾಗಿವೆ.

ಗ್ರಾಮದ ಕುರುಚಲು ಪೊದೆಗಳಲ್ಲಿ ಕಾಡುಮೊಲ, ಹಂದಿ, ನರಿ, ಜಿಂಕೆ ಮೊದಲಾದ ಪ್ರಾಣಿಗಳಿವೆ. ಗೌಜುಗ, ಗೊರವಂಕ, ಬೆಳವ ಮುಂತಾದ ಕಾಡು ಪಕ್ಷಿಗಳಿವೆ. ನಾಟಿಹಸು, ಸೀಮೆಹಸು, ಎಮ್ಮೆ, ಕುರಿ, ಮೇಕೆ ಮುಂತಾದ ಸಾಕುಪ್ರಾಣಿಗಳಿವೆ. ಕೋಳಿ ಮತ್ತು ಹುಂಜಗಳು ಸಾಕುಪ್ರಾಣಿಗಳಾಗಿವೆ.

ಗ್ರಾಮದಲ್ಲಿ ಅಂಗನವಾಡಿ ಕೇಂದ್ರವಿದ್ದು ೧೬ ವಿದ್ಯಾರ್ಥಿಗಳಿದ್ದಾರೆ. ಆರು ಸ್ತ್ರೀಶಕ್ತಿ ಸಂಘಗಳು, ಎರಡು ಕಿರಾಣಿ ಅಂಗಡಿಗಳು ಇವೆ. ಜೊತೆಗೆ ಮಿನಿ ಡೈರಿಯು ಇಲ್ಲಿದೆ. ಮಿಲಿಟರಿ ಹಾಗೂ ಸಾರಿಗೆ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರಿದ್ದಾರೆ.

ಇಲ್ಲಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಒಟ್ಟಾರೆ ೨೨ ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೫೭.೨೬%.

ಗ್ರಾಮದ ಪ್ರಮುಖ ಆಹಾರ ರಾಗಿ ಮುದ್ದೆಯಾಗಿದೆ. ಇನ್ನುಳಿದಂತೆ ಅನ್ನ, ಉಪ್ಪಿಟ್ಟು, ದೋಸೆ ಅಮುಖ್ಯ ಆಹಾರವಾಗಿದ್ದು ಕಡುಬು, ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಈ ಗ್ರಾಮದಲ್ಲಿ ಒಟ್ಟು ೨೫೭ ಮನೆಗಳಿವೆ, ೧೦೮೧ ಜನಸಂಖ್ಯೆ ಇದೆ. ಇದರಲ್ಲಿ ಗಂಡಸರು ೫೪೩ ಜನ, ಹೆಂಗಸರು ೫೩೮ ಜನರಿದ್ದಾರೆ. ೫೭ ಮನೆಗಳಲ್ಲಿ ಶೌಚಾಲಯದ ಬಳಕೆಯಿದೆ.

ಕಂಸಾನಹಳ್ಳಿ ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ, ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ, ದೊಡ್ಡಮಾಲೂರು ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ, ಕೊಂಡವಾಡಿ ಗ್ರಾಮ ಪಂಚಾಯ್ತಿ ಕ್ಷೇತ್ರಕ್ಕೆ, ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದೆ. ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಇಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳು ಚಾಲ್ತಿಯಲ್ಲಿವೆ. ತಿಮ್ಮಪ್ಪನ ದೇವಸ್ಥಾನ, ಮಾರಮ್ಮ ಹಾಗೂ ಆಂಜನೇಯ ದೇವಾಲಯಗಳಿವೆ. ಮಾರಮ್ಮನಿಗೆ ಆರತಿಯನ್ನು ಮಾಡುವರು. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕತ್ತಿರಾಜನಹಳ್ಳಿ

ಕತ್ತಿರಾಜನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೨.೦೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕತ್ತಿ ಮತ್ತು ವ್ಯಕ್ತಿ ಈ ಎರಡೂ ಶಬ್ದಗಳು ಅನ್ವರ್ಥದಿಂದ ಕೂಡಿದ್ದು ಕತ್ತಿ ಹಿಡಿದ ವ್ಯಕ್ತಿ ರಾಜ, ಪಾಳೆಯಗಾರ ಈ ಅರ್ಥದಲ್ಲಿ ಕತ್ತಿರಾಜನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣು ಹಾಗೂ ಬೆಟ್ಟ ಗುಡ್ಡಗಳಿಂದ ಕೂಡಿದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಚಿರತೆ, ಮೊಲ, ಕರಡಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳ ಇದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩ ಸಾರ್ವಜನಿಕ ನಲ್ಲಿಗಳು, ೨

ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಬಲಜಿಗ, ದೊಂಬಿದಾಸ, ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ಕತ್ತಿರಾಜನಹಳ್ಳಿಯಲ್ಲಿ ರಾಮಯ್ಯ ಹಾಗೂ ಅವರ ಮಗ ರಾಮಕೃಷ್ಣ ಎಂಬುವರು ಮದ್ದಲೆ ವಾದಕರಿದ್ದಾರೆ.

ಒಟ್ಟು ೧೭೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೫೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಒಂದು ಎತ್ತಿನಗಾಡಿ, ೩ ಟ್ರ್ಯಾಕ್ಟರ್ ಹಾಗೂ ೩೦ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಮೂವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನ್ನೇನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೯.೭%. ಗ್ರಾಮದಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ರಿಜಿಸ್ಟ್ರರ್ ಡಾ.ರಂಗ ಸೇರಿದಂತೆ ಶಿಕ್ಷಣ, ಸಾರಿಗೆ, ಕಂದಾಯ, ಬೆಸ್ಕಾಂ, ಅಂಚೆ ಮತ್ತು ಗ್ರಂಥಾಲಯ ಇಲಾಖೆಗಳ ೫೮ ಜನ ಸರ್ಕಾರಿ ನೌಕರರಿದ್ದಾರೆ. ಇಲ್ಲಿ ಶಿಲಾಗೋರಿಗಳು ಕಂಡುಬಂದಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಅಂಕಾಲಮ್ಮ, ರಂಗಧಾಮ, ವೆಂಕಟರಮಣ, ಶನಿಮಹಾತ್ಮ ಹಾಗೂ ಕೊಲ್ಲಾಪುರದಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಕೊಲ್ಲಾಪುರದಮ್ಮನ ಜಾತ್ರೆಯನ್ನು ಬಲಿ, ಹರಕೆಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕೃಷ್ಣಪುರ

ಕೃಷ್ಣಪುರ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೫.೦೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕೃಷ್ಣಪ್ಪನ ಪುರ > ಊರು – ಕೃಷ್ಣಾಪುರ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣು ಮಿಶ್ರ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಹಳ್ಳವಿದ್ದು ಇದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩ ಸಾರ್ವಜನಿಕ ನಲ್ಲಿಗಳು ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೯೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೨೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೩ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನ್ನೇನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಬಲಿ, ಹರಕೆಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕಾಡಪ್ಪನಪಾಳ್ಯ

ಕಾಡಪ್ಪನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೨೫.೧೬ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮದ ಭೂವಿಸ್ತೀರ್ಣವು ರೆಡ್ಡಿಹಳ್ಳಿ ವಿಸ್ತೀರ್ಣದಲ್ಲಿ ಸೇರಿರುತ್ತದೆ. ಕಾಡಪ್ಪ ಎಂಬ ವ್ಯಕ್ತಿ ಮೂಲದಿಂದ ಕಾಡಪ್ಪನಪಾಳ್ಯವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ತೋಳ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳವಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩ ಸಾರ್ವಜನಿಕ ನಲ್ಲಿಗಳು, ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬಲಜಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ಒಟ್ಟು ೧೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೯೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೬ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ಕೆಲವು ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ

ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ರೆಡ್ಡಿಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೯.೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಅಂಗಡಿಯಿದೆ.

ಗ್ರಾಮದಲ್ಲಿ ಶನಿಮಹಾತ್ಮ ದೇವಾಲಯವಿದೆ. ಕಾಡಜ್ಜ ನಿರ್ಮಾಣ ಮಾಡಿದ ಸ್ಥಳವಾದ್ದರಿಂದ ಈ ಗ್ರಾಮಕ್ಕೆ ಕಾಡಜ್ಜನಪಾಳ್ಯ ಎಂದು ನಾಮಕರಣ ಮಾಡಲಾಯಿತು. ಮೂಲತಃ ಇವರು ರೆಡ್ಡಿಹಳ್ಳಿ ಗ್ರಾಮಕ್ಕೆ ಸೇರಿದವರಾಗಿದ್ದು ಹಸುಗಳನ್ನು ಸಾಕಲು ಹಾಗೂ ವ್ಯವಸಾಯಕ್ಕೆ ಎಂದು ಬಂದು ಇಲ್ಲಿ ನೆಲೆ ಊರಿದರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕಸಾಪುರ

ಕಸಾಪುರ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೫೭.೦೭ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕಳಸ ಎಂಬ ದೈವಸಂಬಂಧಿ ಶಬ್ದ ನಂತರ ಳ ಅಕ್ಷರ ಉಚ್ಚಾರಣೆಯಲ್ಲಿ ಲೋಪವಾಗಿ ಕಳಸಾ > ಕಸಾಪುರ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸುತ್ತಲೂ ಬೆಟ್ಟಗುಡ್ಡಗಳಿಂದ ಸುತ್ತುವರಿದಿದೆ. ಆಗ್ನೇಯಕ್ಕೆ ಮಿಡಿಗೇಶಿ ಬೆಟ್ಟ, ಈಶಾನ್ಯಕ್ಕೆ ಬೆನಕನ ಬೆಟ್ಟ, ವಾಯವ್ಯಕ್ಕೆ ಮುಂಡಾಡಿ ಬೆಟ್ಟ ಮತ್ತು ನೈಋತ್ಯಕ್ಕೆ ಬಜ್ಜಿಬೆಟ್ಟ ಹೀಗೆ ನಾಲ್ಕು ಕಡೆಗೂ ಒಲೆಗೂಡು ಹೂಡಿದಂತೆ ಸುತ್ತುವರಿದಿರುವ ಗ್ರಾಮವಾಗಿದೆ. ಮಧ್ಯದಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣಿನ ಭೂಮಿ ಶೇಂಗಾ ಬೆಳೆಗೆ ಉತ್ತಮವಾಗಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೪೦ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳವಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳು, ೫ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗರು ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಆದಿದ್ರಾವಿಡ, ನಾಯಕ, ಮಡಿವಾಳ, ಲಿಂಗಾಯಿತ, ಈಡಿಗ, ಬೋವಿ ಜನಾಂಗದವರಿದ್ದಾರೆ. ಇವು ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರು ಗ್ರಾಮದಲ್ಲಿದ್ದಾರೆ.

ಒಟ್ಟು ೨೩೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೦೭೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಗಂಡಸರು ೫೩೩ ಜನ ಮತ್ತು ಹೆಂಗಸರು ೫೩೯ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಸರಾಸರಿ ೨೦೦ ಲೀ. ಹಾಲು ಸಂಗ್ರಹವಾಗುತ್ತಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ನಾಲ್ಕು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ಮಿಡಿಗೇಶಿ–ರೊಳ್ಳೆ–ಸಿರಾ ಮಾರ್ಗವಾಗಿ ಬಸ್ ಸಂಪರ್ಕವಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ರೆಡ್ಡಿಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘ ಸಂಘಗಳಿವೆ. ಒಂದು ವಿ.ಎಸ್.ಎಸ್.ಎನ್. ಸಹಕಾರಿ ಸಂಘವಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೨೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೫.೪%. ೧೫ ಜನ ಪ್ರಾಥಮಿಕ ಶಿಕ್ಷಕರು, ೩ ಜನ ಇಂಜಿನಿಯರ್, ೩ ಜನ ಸಾರಿಗೆ ಇಲಾಖೆ, ೪ ಜನ ಪೊಲೀಸ್, ಒಬ್ಬರು ಪೌರಸೇವೆ, ನಾಲ್ಕು ಜನ ಉಪನ್ಯಾಸಕರು ಇದ್ದಾರೆ. ಪ್ರಕಾಶ್, ಜಗದೀಶ್ ಎಂಬ ಇಬ್ಬರು ವೈದ್ಯರು, ಇಬ್ಬರು ಖಾಸಗಿ ವಕೀಲರು ಸೇರಿದಂತೆ ೫೦ ಕ್ಕೂ ಅಧಿಕ ಸರ್ಕಾರಿ ನೌಕರರಿದ್ದಾರೆ. ಬಸವಪ್ಪನವರ ಮಂಜುನಾಥ ವಿದೇಶದಲ್ಲಿ ಇಂಜಿನಿಯರ್ ಆಗಿದ್ದಾರೆ. ಡಾ॥ ಎನ್.ನಂದೀಶ್ ಪ್ರಾಂಶುಪಾಲರಾಗಿ, ಡಾ॥ ಬಸವರಾಜ್ ಉಪನ್ಯಾಸಕ – ಲೇಖಕರಾಗಿ ಪುಸ್ತಕಗಳನ್ನು ಪ್ರಕಟಿಸಿದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೫ ಅಂಗಡಿಗಳಿವೆ. ೨ ಹಿಟ್ಟಿನ ಗಿರಣಿ, ಒಂದು ಭತ್ತದ ಗಿರಣಿ ಇದೆ. ಸಿರಿಗೆಜ್ಜೆ ಕಲಾಸಂಸ್ಥೆ ಸಾಂಸ್ಕೃತಿಕವಾಗಿ ಹೆಸರಾಗಿದೆ.

ಗ್ರಾಮದಲ್ಲಿ ಆಂಜನೇಯ, ಶ್ರೀರಾಮ ಮಂದಿರ, ಕಟ್ಟೆ ಮೇಲಿನ ಮಾರಮ್ಮ, ಈಶ್ವರ, ಶನಿಮಹಾತ್ಮ, ಗೌರಸಂದ್ರದ ಮಾರಮ್ಮ ದೇವಾಲಯಗಳಿವೆ. ಪ್ರತಿವರ್ಷ ಮಾರಮ್ಮನ ಜಾತ್ರೆಯನ್ನು ೨ ದಿನಗಳ ಕಾಲ ನಡೆಸಲಾಗುವುದು. ಐದು ವರ್ಷಕ್ಕೊಮ್ಮೆ ಮಾರಿ ದೇವತೆಯ ಬೃಹತ್ ಜಾತ್ರೆ ೫ ದಿನಗಳ ಕಾಲ ನಡೆಯುತ್ತದೆ. ಬಲಿ, ಹರಕೆ, ಸರಗ ಹಾಕುವುದು, ಜನಪದ ಕಲೆಗಳ ಪ್ರದರ್ಶನದೊಂದಿಗೆ ವಿಜೃಂಭಣೆಯಿಂದ ನಡೆಯುತ್ತದೆ. ಈರಮಾರಿಯ ದೇವಾಲಯ ಕಲ್ಲು ಗುಂಡಿನ ಬಯಲ ದೇವಾಲಯವಾಗಿದೆ. ಮೂರು ಅರಳಿ ಕಟ್ಟೆ, ಒಂದು ನಾಗರ ಕಟ್ಟೆಗಳಿವೆ. ಮೂರು ಪ್ರಾಚೀನ ಬಾವಿಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕಾರೇನಹಳ್ಳಿ

ಕಾರೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೦೭.೦೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕಾರೆ ಎಂಬ ಸಸ್ಯ ಮೂಲದಿಂದ ಈ ಗ್ರಾಮಕ್ಕೆ ಈ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.  ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೪ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೫೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೫೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ.  ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ.  ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಹೊಸಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಹೊಸಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಹೊಸಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೭.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ

ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಭೂತಪ್ಪನ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕಲ್ಲೇನಹಳ್ಳಿ

ಕಲ್ಲೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೩.೦೫ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಕಲ್ಲಯ್ಯ ಎಂಬ ವ್ಯಕ್ತಿ ಮೂಲದಿಂದ ಕಲ್ಲೇನಹಳ್ಳಿ ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕರಡಿ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಜಯಮಂಗಲಿ ನದಿ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೭೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೧೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೫೦ ಜನ ಹಾಗೂ ಹೆಂಗಸರು ೧೬೦ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨೬ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ೩೫% ಜನ ಕೂಲಿ ಮಾಡುತ್ತಾರೆ. ಜೋಳ, ಶೇಂಗಾ, ತೊಗರಿ, ಅವರೆ ಗ್ರಾಮದ ಮುಖ್ಯ ಬೆಳೆಯಾಗಿದೆ. ಶಿಕ್ಷಕರು, ವೈದ್ಯರು, ಕೆಎಸ್‌ಆರ್‌ಟಿಸಿ ಸೇರಿದಂತೆ ಮೂವರು ನೌಕರಿಯಲ್ಲಿದ್ದು ಬಡಗಿ ಒಬ್ಬರು ಹಾಗೂ ಟೈಲರ್ ಇಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಹೊಸಕೆರೆ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಹೊಸಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮವು ಹೊಸಕೆರೆ ಅಂಚೆ ಕಛೇರಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ೨೦ ಚರ ದೂರವಾಣಿ ದೂರಸಂಪರ್ಕ ಸಾಧನಗಳಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ

ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೬.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಅಂಗಡಿಯಿದೆ.

ಗ್ರಾಮದಲ್ಲಿ ವೀರಭದ್ರಸ್ವಾಮಿ, ಮಾರಮ್ಮ, ಕೆಂಚಮ್ಮ ದೇವಾಲಯಗಳಿವೆ. ಮಾರಮ್ಮನ ಜಾತ್ರೆಯನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಯುಗಾದಿ, ಮಹಾನವಮಿ ಹಾಗೂ ದೀಪಾವಳಿ ಗ್ರಾಮದ ಆಚರಣೆಗಳಲ್ಲೇ ವಿಶೇಷವಾಗಿದೆ.

## ಕೆ. ಕೃಷ್ಣಾಂಪುರ

ಕೆ.ಕೃಷ್ಣಾಂಪುರ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೮.೬೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕೃಷ್ಣಾಂಪುರ ಎನ್ನುವ ಎರಡು ಗ್ರಾಮಗಳಿದ್ದುದರಿಂದ ಗುರುತು ಪತ್ತೆಹಚ್ಚಲು ಕಾರೇನಹಳ್ಳಿ ಪಕ್ಕದಲ್ಲಿ ಈ ಗ್ರಾಮವಿದ್ದುದರಿಂದ ಕೆ.ಕೃಷ್ಣಾಂಪುರ ಎಂದು ಕರೆಯುವರು.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಒಂದು ವೀರಭದ್ರಸ್ವಾಮಿ ಗುಡ್ಡವಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಕಾಗೆ, ಕೋಗಿಲೆ, ಬೆಳ್ಳಕ್ಕಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುಂಬಾರ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೪೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೦೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ಭತ್ತ, ರಾಗಿ ಮತ್ತು ಜೋಳ ಮುಖ್ಯ ಬೆಳೆಯಾಗಿದೆ. ಜೋಳ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಬಡಗಿ ಗ್ರಾಮದಲ್ಲಿದ್ದಾರೆ. ಗ್ರಾಮವು ಮಧುಗಿರಿ

ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ನೇರಳೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ನೇರಳೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ನೇರಳೇಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೭.೨%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಅಂಗಡಿಯಿದೆ.

ಗ್ರಾಮದಲ್ಲಿ ಒಂದು ಹಾಸ್ಟೆಲ್ ಇದೆ. ಪಶುವೈದ್ಯಕೀಯ ಆಸ್ಪತ್ರೆ ಇದ್ದು ವೈದ್ಯರು ಇದ್ದಾರೆ. ಇಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇದೆ.

ಗ್ರಾಮದಲ್ಲಿ ಒಂದು ವೀರಭದ್ರಸ್ವಾಮಿ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕೆ.ಅಪ್ಪೇನಹಳ್ಳಿ

ಕೆ.ಅಪ್ಪೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೭.೪೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಅಪ್ಪಯ್ಯ – ಅಪ್ಪಣ್ಣ ಎಂಬ ವ್ಯಕ್ತಿ ಮೂಲದಿಂದ ಅಪ್ಪನಹಳ್ಳಿ > ಅಪ್ಪೇನಹಳ್ಳಿಯಾಗಿದೆ. ಗ್ರಾಮಕ್ಕೆ ಕಾರೇನಹಳ್ಳಿ ಪಕ್ಕದಲ್ಲಿದ್ದುದರಿಂದ ಕೆ.ಅಪ್ಪೇನಹಳ್ಳಿ ಎಂದು ಕರೆಯುವರು.

ಈ ಗ್ರಾಮದ ಪ್ರಾಚೀನ ಹೆಸರು ಕೆ.ಅಪ್ಪೇನಹಳ್ಳಿಯಾಗಿದ್ದು ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಮೊಲ, ಕಾಡುಹಂದಿ, ಮುಂಗುಸಿ, ನರಿ, ತೋಳಗಳು ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಬೆಳವ, ಗುಬ್ಬಚ್ಚಿ, ಕಾಗೆ, ಪುರಡೆ ಹಕ್ಕಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ನಾಟಿಹಸು, ಕುರಿ ಹಾಗೂ ಮೇಕೆಗಳನ್ನು ಹಾಗೂ ನಾಯಿಯನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಯಾವುದೇ ರೀತಿಯ ಕೆರೆ ಇಲ್ಲದೆ ಇದ್ದು ಒಂದೇ ಒಂದು ಸಣ್ಣ ಹಳ್ಳ ಹರಿಯುವುದನ್ನು ನಾವು ಕಾಣಬಹುದು. ಈ ಹಳ್ಳ ಮಳೆಗಾಲದಲ್ಲಿ ಮಾತ್ರ ಹರಿಯುವುದನ್ನು ನೋಡಬಹುದು. ಇದರಿಂದ ಜಾನುವಾರುಗಳಿಗೆ, ಕುಡಿಯುವ ನೀರಿಗೆ ಸಹಕಾರಿಯಾಗಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೯ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ಇಲ್ಲಿ ತೆಲುಗು ಭಾಷೆಯನ್ನು ಸಹ ಬೋವಿ ಜನಾಂಗದವರು ಬಳಸುತ್ತಾರೆ.

ಒಟ್ಟು ೬೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೪೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೭೪, ಹೆಂಗಸರು ೧೭೧ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ, ಶೇಂಗಾ ಮತ್ತು ತೊಗರಿ ಮುಖ್ಯ ಬೆಳೆಯಾಗಿದೆ. ಶೇಂಗಾ ಗ್ರಾಮದ ವಾಣಿಜ್ಯ ಬೆಳೆಯಾಗಿ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ನೇರಳೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ನೇರಳೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ನೇರಳೇಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೪ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೯.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ ಹಾಗೂ ಮಾರಮ್ಮ ದೇವಿಯ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕಾಟಗೊಂಡನಹಳ್ಳಿ

ಕಾಟಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೩.೧೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕಾಟಲಿಂಗೇಶ್ವರ ದೈವಮೂಲದಿಂದ ಕಾಟಗೊಂಡನಹಳ್ಳಿ ರೂಪುಗೊಂಡಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ

ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಈರೇಹಳ್ಳವಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೨೨೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೨೦೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೭೩ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ನೇರಳೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ನೇರಳೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ನೇರಳೇಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೭೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೭.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಲಿಂಗೇಶ್ವರ, ಹಟ್ಟಿ ಮಾರಮ್ಮ, ನರಸಿಂಹಸ್ವಾಮಿ, ಭೂತಪ್ಪ ದೇವಾಲಯಗಳಿವೆ. ಆಷಾಢದಲ್ಲಿ ಪ್ರತಿ ವರ್ಷ ಲಿಂಗೇಶ್ವರ ಹಾಗೂ ಹಟ್ಟಿ ಮಾರಮ್ಮ ಜಾತ್ರೆಯನ್ನು ಮಾಡುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕ್ಯಾತಗೊಂಡನಹಳ್ಳಿ

ಕ್ಯಾತಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೪.೩೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬೆಟ್ಟದ ಸಾಲು ಪ್ರದೇಶವಾಗಿದ್ದು ಬಿಳಿಯ ಬಂಡೆಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಬೆಟ್ಟ ಸಾಲು ಪ್ರದೇಶವಾಗಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ,ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨ ಸಾರ್ವಜನಿಕ ನಲ್ಲಿಗಳು, ೪ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬೋವಿ, ಶೆಟ್ಟಿ ಬಣಜಿಗ, ಮಡಿವಾಳ, ರೆಡ್ಡಿ ಹಾಗೂ ಬ್ರಾಹ್ಮಣ ಜನಾಂಗಗಳಿವೆ. ರೆಡ್ಡಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೨೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೧೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೩೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರ ಸಂಖ್ಯೆ ಕಡಿಮೆ ಇದೆ. ರಾಗಿ, ಜೋಳ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬೇಡತ್ತೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬೇಡತ್ತೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬೇಡತ್ತೂರು ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೪.೭%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ,

ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೨ ಅಂಗಡಿಗಳಿವೆ. ಗ್ರಾಮದಲ್ಲಿ ಅಂಚೆ ಕಛೇರಿ ಮತ್ತು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇದೆ.

ಗ್ರಾಮದಲ್ಲಿ ಈಶ್ವರ, ಆಂಜನೇಯ, ಸಪ್ಲೆಮ್ಮ, ಬಸವಣ್ಣ ದೇವಾಲಯಗಳಿವೆ. ಪ್ರತಿ ವರ್ಷ ಆಂಜನೇಯನ ಜಾತ್ರೆಯನ್ನು ಆರತಿ, ಹರಕೆಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕವಡಿಗರಪಾಳ್ಯ

ಕವಡಿಗರಪಾಳ್ಯವು ಮಧುಗಿರಿ ತಾಲ್ಲೂಕು ಕೇಂದ್ರದ ದಕ್ಷಿಣ ದಿಕ್ಕಿನಲ್ಲಿದ್ದು ಕಾಟಿಗಾನಹಟ್ಟಿಯ ಹೊರವಲಯದಲ್ಲಿದೆ.

೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಚಿನಕವಜ್ರ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಒಟ್ಟು ೩೦ ಮನೆಗಳನ್ನು ಹೊಂದಿದ್ದು ೧೪೪ ಜನಸಂಖ್ಯೆ ಹೊಂದಿದೆ. ಕುರುಬ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ಗ್ರಾಮದಲ್ಲಿ ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಮುಖ್ಯ ಉದ್ಯೋಗವಾಗಿದೆ. ಶಿಕ್ಷಣ ಹಾಗೂ ಆರೋಗ್ಯ ಇಲಾಖೆಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮದಲ್ಲಿ ಮೈಲಾರಲಿಂಗೇಶ್ವರ ದೇವಸ್ಥಾನವಿದೆ. ದಸರಾ ಹಬ್ಬದ ಎರಡನೇ ದಿನ ಮೈಲಾರದೇವರ ಗೊರವಗಳಿಗೆ ದೋಣಿಸೇವೆ ಏರ್ಪಡುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಕಾಟಗಾನಹಟ್ಟಿ

ಕಾಟಗಾನಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ದಕ್ಷಿಣ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೨೪.೫೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮವು ಚಿನಕವಜ್ರ ಭೂವಿಸ್ತೀರ್ಣದಲ್ಲಿ ಸೇರಿದೆ.

ಕಾಟಂಲಿಂಗನ ದೈವ ಕೇಂದ್ರೀಕೃತ ನೆಲೆಯಲ್ಲಿ ಕಾಟನಹಳ್ಳಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೬೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೯೫೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ

ಆಹಾರವಾಗಿದೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನಕವಜ್ರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನಕವಜ್ರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನಕವಜ್ರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೨೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೫ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೨.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೪ ಹೋಟೆಲ್‌ಗಳು ಹಾಗೂ ೬ ಅಂಗಡಿಗಳಿವೆ. ಗ್ರಾಮದಲ್ಲಿ ಚಿತ್ರಲಿಂಗೇಶ್ವರ, ಕರಿಯಮ್ಮ, ಭೂತಪ್ಪ, ಮಾಸಣ್ಣ ದೇವಾಲಯಗಳಿವೆ. ಚಿತ್ರಲಿಂಗೇಶ್ವರನ ಜಾತ್ರೆ ನಡೆಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕಮ್ಮನಕೋಟೆ

ಕಮ್ಮನಕೋಟೆ ಗ್ರಾಮವನ್ನು ಬೆಟ್ಟದ ಮೇಲಿನ ಗ್ರಾಮ ಎಂದು ಕರೆಯಲಾಗಿದೆ. ಗ್ರಾಮವು ಮಧುಗಿರಿ ತಾಲ್ಲೂಕಿನ ದಕ್ಷಿಣ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೦೦೭.೫೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಹಿಂದೆ ಈ ಗ್ರಾಮದಲ್ಲಿ ರಾಜರಿಗೆ ಬೇಕಾದ ಆಯುಧಗಳನ್ನು ಮಾಡಿಕೊಡುತ್ತಿದ್ದರಂತೆ. ಕಬ್ಬಿಣದ ಕೆಲಸ ಮಾಡುವ ಕಮ್ಮಾರಿಕೆಯ ನೆಲೆಯಾದುದರಿಂದ ವೃತ್ತಿ ಮತ್ತು ಗ್ರಾಮದ ಸ್ವರೂಪ ಕೋಟೆ ಈ ಎರಡನ್ನೂ ಸೇರಿಸಿದಂತೆ ಕಮ್ಮನಕೋಟೆ ಆಗಿದೆ.

ಗ್ರಾಮವು ಬೆಟ್ಟಗುಡ್ಡಗಳ ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಬೆಟ್ಟ ಗುಡ್ಡಗಳನ್ನು ಹೊಂದಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ತೋಳ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಕಟ್ಟೆಗಳು, ದೊಡ್ಡ ಹಳ್ಳ, ನೀಲ ಹಳ್ಳಗಳಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಹಳ್ಳಗಳು, ಕಟ್ಟೆಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩ ಸಾರ್ವಜನಿಕ ನಲ್ಲಿಗಳು, ೧

ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕಮ್ಮಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ, ನಾಯಕ, ಕುರುಬ ಜನಾಂಗದವರಿದ್ದಾರೆ. ಶೆಟ್ಟಿ ಬಣಜಿಗ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೯೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೬೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೯೫ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯಿತ್ತಿ ಕ್ಷೇತ್ರ ಹಾಗೂ ಚಿನಕವಜ್ರ ಗ್ರಾಮಪಂಚಾಯಿತ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯಿತ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯಿತ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನಕವಜ್ರ ಗ್ರಾಮಪಂಚಾಯಿತ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನಕವಜ್ರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಮಾಲಿಂಗಪ್ಪ ಎಂಬ ೫೦ ವರ್ಷದ ಕುರುಬ ಸಮುದಾಯದವರು ನಾಟಕ ಕಲಾವಿದರಾಗಿದ್ದಾರೆ.

ಗ್ರಾಮದಲ್ಲಿ ಮುತ್ತುರಾಯ, ಶನಿಮಹಾತ್ಮ, ರಾಮದೇವರು, ಜುಂಜಪ್ಪ, ಮಾರಮ್ಮ, ಗುಟ್ಟೆ ಮಾರಣ್ಣ, ಗೋರಿಕಲ್ಲು, ಕರೆಕೆಮಾರದಟ್ಟಿ ಮಾರಮ್ಮ, ಗುಟ್ಟೆ ಮಾರಮ್ಮ, ಕುಕ್ಕಲಮ್ಮ, ಸಪ್ಲೆಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕೆರೆಮೇಗಳಪಾಳ್ಯ

ಕೆರೆಮೇಗಳಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೨೪.೫೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮದ ಭೂ ವಿಸ್ತೀರ್ಣವು ಚಿನಕವಜ್ರ ವಿಸ್ತೀರ್ಣದಲ್ಲಿ ಸೇರಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಹಳ್ಳಿಕಾರ, ಆದಿಕರ್ನಾಟಕ, ಆದಿ ದ್ರಾವಿಡ, ಬೋವಿ, ಮುಸ್ಲಿಂ, ಲಿಂಗಾಯಿತ, ಕುಂಬಾರ, ಮಡಿವಾಳ ಜನಾಂಗದವರಿದ್ದಾರೆ. ಲಿಂಗಾಯಿತ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೨೫೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೧೧೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೯೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಸಿಹಿ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನಕವಜ್ರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನಕವಜ್ರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನಕವಜ್ರ ಅಂಚೆ ಸಂಪರ್ಕ ಒದಗಿಸುತ್ತಿದೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧೦ ಸ್ತ್ರೀಶಕ್ತಿ ಸಂಘ ಹಾಗೂ ೧೦ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೨ ಅಂಗಡಿಗಳಿವೆ. ನರಸಿಂಹಯ್ಯ ಎಂಬ ೬೦ ವರ್ಷದ ಆದಿಕರ್ನಾಟಕ ಜನಾಂಗದವರು ನಾಟಕ ಕಲಾವಿದರಾಗಿದ್ದಾರೆ.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ, ರಂಗನಾಥಸ್ವಾಮಿ, ಶನಿಮಹಾತ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕೆರೆಮೇಗಳಪಾಳ್ಯ ಜನತಾ ಹೌಸಿಂಗ್ ಕಾಲೋನಿ

ಕೆರೆಗಳಪಾಳ್ಯ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿ ತಾಲ್ಲೂಕು ಕೇಂದ್ರದ ದಕ್ಷಿಣ ದಿಕ್ಕಿನಲ್ಲಿದ್ದು ಕೆರೆಗಳಪಾಳ್ಯ ಗ್ರಾಮದ ಹೊರವಲಯದಲ್ಲಿದೆ. ಸರ್ಕಾರದ ಜನತಾ ಹೌಸಿಂಗ್ ಯೋಜನೆಯಡಿ ಮನೆಗಳು ನಿರ್ಮಾಣವಾಗಿವೆ.

ಒಟ್ಟು ೩೫ ಮನೆಗಳನ್ನು ಹೊಂದಿದ್ದು ೧೬೨ ಜನಸಂಖ್ಯೆಯನ್ನು ಹೊಂದಿದೆ. ಕುರುಬ, ಒಕ್ಕಲಿಗ, ನಾಯಕ, ಆದಿದ್ರಾವಿಡ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಚಿನಕವಜ್ರ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಹಾಗೂ ಕೂಲಿ ಮಾಡುವವರಿದ್ದಾರೆ. ಸಾರಿಗೆ ಹಾಗೂ ಶಿಕ್ಷಣ ಇಲಾಖೆಯಲ್ಲಿ ೩ ಜನ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮದಲ್ಲಿ ಮೈಲಾರಲಿಂಗನ ದೇವಾಲಯವಿದೆ. ಶಿಕ್ಷಣ, ಸಾರಿಗೆ, ಕೆಇಬಿ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರಿದ್ದಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಕಂಬಯ್ಯನಪಾಳ್ಯ

ಕಂಬಯ್ಯನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ದಕ್ಷಿಣ ದಿಕ್ಕಿನಲ್ಲಿದ್ದು ಹುಣಸೇಮರದಹಟ್ಟಿಯ ಹೊರವಲಯದಲ್ಲಿದೆ. ಒಟ್ಟು ೩೫ ಮನೆಗಳನ್ನು ಹೊಂದಿದ್ದು ೧೫೨ ಜನಸಂಖ್ಯೆಯನ್ನು ಹೊಂದಿದೆ. ಗೊಲ್ಲ ಹಾಗೂ ಒಕ್ಕಲಿಗ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಜನತಾ ಯೋಜನೆಯಡಿ ಗ್ರಾಮದಲ್ಲಿ ಮನೆಗಳು ನಿರ್ಮಾಣವಾಗಿವೆ.

ಚಿನಕವಜ್ರ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಮತ್ತು ಕೂಲಿ ಮುಖ್ಯ ಕಸುಬಾಗಿದೆ. ಶಿಕ್ಷಣ ಹಾಗೂ ವಿದ್ಯುತ್ ಇಲಾಖೆಯಲ್ಲಿ ಇಬ್ಬರು ಜನ ಸೇವೆ ಸಲ್ಲಿಸುತ್ತಿದ್ದಾರೆ. ಒಂದು ಅಂಗನವಾಡಿ ಕೇಂದ್ರವಿದ್ದು ೧೨ ಮಕ್ಕಳು ಒಬ್ಬರು ಕಾರ್ಯಕರ್ತೆ ಇದ್ದಾರೆ.

ಗ್ರಾಮದಲ್ಲಿ ಮುತ್ತುರಾಯ ದೇವಾಲಯವಿದೆ. ಮುತ್ತುರಾಯನಿಗೆ ಆರತಿ ಮಾಡುವರು. ಈ ಸಂದರ್ಭದಲ್ಲಿ ಕೋಲುಮೇಳ, ಅರೆವಾದ್ಯದ ವ್ಯವಸ್ಥೆ ಇರುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಕುಪ್ಪಾಚಾರಿರೊಪ್ಪ

ಕುಪ್ಪಾಚಾರಿ ರೊಪ್ಪ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೯೦.೯೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕುಪ್ಪಣ್ಣ ಎಂಬ ಅಕ್ಕಸಾಲಿಗ ಮೂಲದ ವ್ಯಕ್ತಿಯಿಂದಾಗಿ ಗ್ರಾಮಕ್ಕೆ ಈ ಹೆಸರು ಬಂದಿದೆ.

ಗ್ರಾಮದ ಪೂರ್ಣ ಹೆಸರು ಕುಪ್ಪಾಚಾರಿ ರೊಪ್ಪ. ಬೆಟ್ಟದ ಸಾಲುಗಳಿಂದ ಕೂಡಿದ್ದು ಬೆಟ್ಟದ ಮೇಲಿರುವ ಸುಂದರ ಪ್ರಕೃತಿಯನ್ನು ಹೊಂದಿದೆ.

ಗ್ರಾಮವು ಬೆಟ್ಟದ ಮೇಲಿದ್ದು ಅರಣ್ಯ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳ ಹಾವಳಿ ಅತಿ ಹೆಚ್ಚು. ಒಂದು ವಾರದಲ್ಲಿ ೨–೩ ಹಸುಗಳನ್ನು ಚಿರತೆ ತಿನ್ನುವುದು ಸಾಮಾನ್ಯವಾಗಿದೆ. ಬೆಟ್ಟದ ಮೇಲಿರುವ ಆ ನೀರಿನ ಒಂದು ಕೊಳ ಅತಿ ಸುಂದರವಾಗಿದ್ದು ಜನರು ಅತಿ ವಿಶ್ವಾಸಿಗಳು, ಸ್ನೇಹಪ್ರಿಯರಾಗಿದ್ದಾರೆ. ಗ್ರಾಮದಲ್ಲಿ ಕರಡಿಗಳು, ಚಿರತೆಗಳು, ನರಿ, ಕೋತಿ, ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಊರಿನ ದಾರಿಯಲ್ಲೇ ಕೊಳವಿರುವುದರಿಂದ ಎಲ್ಲಾ ಪ್ರಾಣಿಗಳೂ ಅಲ್ಲಿಗೆ ನೀರು ಕುಡಿಯಲು ಬರುತ್ತವೆ. ಗ್ರಾಮದ ಜನರು ಪ್ರಕೃತಿಯ ಮಡಿಲಿನಲ್ಲಿ ಸುಂದರ ಜೀವನ ಸಾಗಿಸುತ್ತಿದ್ದು ಸಂಜೆ ೬ ಗಂಟೆಯ ನಂತರ ಹೊರಗೆ ಬರಲು ಹೆದರುವರು.

ಪಕ್ಷಿಗಳಾದ ನವಿಲು, ಗಿಳಿ, ಹದ್ದು, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ನವಿಲುಗಳು ಹಿಂಡು ಹಿಂಡಾಗಿ ಕಾಣಸಿಗುತ್ತವೆ. ಗ್ರಾಮಸ್ಥರು

ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ೫ ತೆರೆದ ಬಾವಿ ಹಾಗೂ ೧೦ ಕೊಳವೆ ಬಾವಿಗಳಿವೆ. ಉಳಿದಂತೆ ಬೇರೆ ಕಿರುನೀರಿನ ಸರಬರಾಜು ವ್ಯವಸ್ಥೆ ಇದ್ದು ೮ ಸಾರ್ವಜನಿಕ ನಲ್ಲಿಗಳಿವೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಕುಂಚಿಟಿಗ, ಆದಿಕರ್ನಾಟಕ ಜನಾಂಗದವರಿದ್ದು ಆದಿಕರ್ನಾಟಕ ಜನಾಂಗದವರು ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೭೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೮೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಲ್ಲಿನ ಮನೆ, ಮಣ್ಣಿನ ಮನೆ, ಇಟ್ಟಿಗೆ ಮನೆ ಮತ್ತು ಹೆಂಚಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮದಲ್ಲಿ ವ್ಯವಸಾಯ ಹಾಗೂ ಕೂಲಿ ಎರಡೂ ಸಮ ಪ್ರಮಾಣದಲ್ಲಿದ್ದು ಅಡಿಕೆ, ಜೋಳ, ರಾಗಿ, ಶೇಂಗಾ ಬೆಳೆಯುವರು. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸಿದ್ದಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಿದ್ದಾಪುರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ಮುರಾರ್ಜಿ ದೇಸಾಯಿ ವಸತಿ ಶಾಲೆ ಇದ್ದು ೨೫೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಹತ್ತು ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೩.೩೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಶನಿಮಹಾತ್ಮ, ದೇವರ ಲಿಂಗಪ್ಪ, ಉಡದಬೆಟ್ಟ, ಮಾರಮ್ಮ ದೇವಾಲಯಗಳಿವೆ. ಮಾರಮ್ಮನ ಜಾತ್ರೆಯನ್ನು ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕಂಬದಹಳ್ಳಿ

ಕಂಬದಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ

೩೨೮.೭೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಕಂಬದನರಸಿಂಹ ಅಥವಾ ರಂಗನಾಥನ ಒಕ್ಕಲುಗಳು ಅಧಿಕವಾಗಿ ಇಲ್ಲಿ ಗ್ರಾಮ ರಚಿಸಿದ ಕಾರಣ ದೈವ ಕೇಂದ್ರೀಕೃತವಾಗಿ ಕಂಬದಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಬಸವಣ್ಣನ ಬೆಟ್ಟ ಗ್ರಾಮದಲ್ಲಿದೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಚಿರತೆ, ಕರಡಿ, ಮೊಲ, ಜಿಂಕೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಕೋಗಿಲೆ, ಬೆಳ್ಳಕ್ಕಿ, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕುಂಟೆಯನ್ನು ಹೊಂದಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೧೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೨೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ.  ಗಂಡಸರು ೨೨೦ ಮತ್ತು ಹೆಂಗಸರು ೨೦೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ.  ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೫೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಕ್ಟರ್, ಆಟೋ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ, ಶೇಂಗಾ, ಭತ್ತ, ಜೋಳ, ತೊಗರಿಯನ್ನು ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು ಬೆಳೆಯುವರು. ರೇಷ್ಮೆಯನ್ನು ಗ್ರಾಮದಲ್ಲಿ ಬೆಳೆಯುತ್ತಿದ್ದು ವ್ಯಾಪಾರದ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಸಾಂಬಾರಕಾಳು, ಹಳೇ ಪೇಪರ್, ಕಬ್ಬಿಣ ಮಾರುವವರು ಗ್ರಾಮದಲ್ಲಿದ್ದಾರೆ. ಕೆಎಸ್‌ಆರ್‌ಟಿಸಿ ಹಾಗೂ ಪೊಲೀಸ್ ನೌಕರರು ಗ್ರಾಮದಲ್ಲಿದ್ದು ಸಾಂಪ್ರದಾಯಿಕ ಉದ್ಯೋಗ ಮಾಡುವ ಕಮ್ಮಾರರು ಒಬ್ಬರು ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಡಿ.ವಿ. ಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಡಿ.ವಿ.ಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಡಿ.ವಿ. ಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಚೋಳೇಶ್ವರ, ಆಂಜನೇಯ, ಬಸವಣ್ಣ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಫೆಬ್ರವರಿಯಲ್ಲಿ ಹರಕೆ ಹಾಗೂ ಬಲಿ ನೀಡುವುದರೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕಂಬತ್ತನಹಳ್ಳಿ

ಕಂಬತ್ತನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೬.೮೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕಂಬದನರಸಿಂಹಸ್ವಾಮಿಯಿಂದ ಈ ಗ್ರಾಮಕ್ಕೆ ಕಂಬತ್ತನಹಳ್ಳಿ ಎಂಬ ಹೆಸರಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಜೇಡಿ ಮಣ್ಣಿನಿಂದ ಕೂಡಿದೆ ಹಾಗೂ ಗುಡ್ಡಗಳಿಂದ ಕೂಡಿದೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಚಿರತೆ, ನರಿ, ತೋಳ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಯಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳು, ೫ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೮೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೨೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೧೪ ಮತ್ತು ಹೆಂಗಸರು ೨೧೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೬ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ, ತೊಗರಿ ಮತ್ತು ಮುಸುಕಿನ ಜೋಳ ಮುಖ್ಯ ಬೆಳೆಯಾಗಿದೆ. ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಆಧುನಿಕ ಡೈರಿ ಇದ್ದು ಹಾಲು ಉತ್ಪಾದಕರ ಸಂಘವಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬಿಜವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಿಜವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬಿಜವರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೫ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೩.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಅಂಗಡಿಯಿದೆ. ಈ ಗ್ರಾಮದ ಲೇಖಕ, ಪ್ರಕಾಶಕ ಕಂಬತ್ತನಹಳ್ಳಿ ಪ್ರಕಾಶ್ ಅಂಕಿತ ಪ್ರಕಾಶನದ ಅಡಿ ಬೃಹತ್ ಪುಸ್ತಕೋದ್ಯಮಿಯಾಗಿದ್ದಾರೆ.

ಗ್ರಾಮದಲ್ಲಿ ಆಂಜನೇಯ ಮತ್ತು ಲಕ್ಷ್ಮಿ ದೇವಾಲಯಗಳಿವೆ. ಎರಡೂ ದೇವರಿಗೆ ಆರತಿ ಹಾಗೂ ಜಾತ್ರೆಯನ್ನು ಮಾಡುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕಾರಮರಡಿ

ಕಾರಮರಡಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೪.೨೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕರಿದಾದ ಗುಡ್ಡ ಮತ್ತು ಕುರುಚಲು ಕಾಡುಗಳಿಂದ ಕೂಡಿರುವುದರಿಂದ ಕಾರಮರಡಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಕಲ್ಲುಗಳಿಂದ ಕೂಡಿದ್ದು ಕಪ್ಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಚಿರತೆ, ಕರಡಿ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಬಸವನಹಳ್ಳಿ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮುಸ್ಲಿಂ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಮುಸ್ಲಿಂ ಸಮುದಾಯದವರು ಉರ್ದು ಭಾಷೆಯನ್ನು ಬಳಸುತ್ತಾರೆ.

ಒಟ್ಟು ೨೦೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೦೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೨೪ ಮತ್ತು ಹೆಂಗಸರು ೨೮೧ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೩೮ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೧೫ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ ಮತ್ತು ಜೋಳ ಮುಖ್ಯ ಬೆಳೆಯಾಗಿದೆ. ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬಿಜವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಿಜವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬಿಜವರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ, ೧ ಮಂಜುನಾಥ ಸಂಘ ಹಾಗೂ ೧ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೭೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಕಾಲಭೈರವೇಶ್ವರ, ಮಿಡಿಗೇಶಿ ಮಾರಮ್ಮ, ಏಳು ಮಂದಮ್ಮ, ಶನಿಮಹಾತ್ಮ ದೇವಾಲಯಗಳಿವೆ. ಪ್ರತಿ ವರ್ಷ ಜೂನ್ ತಿಂಗಳಲ್ಲಿ ಏಳುಮಂದಮ್ಮನ ಜಾತ್ರೆ ಹಾಗೂ ಮಾರಮ್ಮನ ಜಾತ್ರೆ ನಡೆಸಲಾಗುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕೆ.ಜಿ. ತಿಪ್ಪಾಪುರ

ಕೆ.ಜಿ. ತಿಪ್ಪಾಪುರ ಗ್ರಾಮವು ಮಧುಗಿರಿಯ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೨೪.೭೧ ಹೆಕ್ಟೇರ್‌ನಲ್ಲಿದ್ದು ಜನವಸತಿ ಇಲ್ಲದ ಬೇಚಾರಕ್ ಗ್ರಾಮವಾಗಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರ, ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗಂಜಲಗುಂಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ.

## ಕುರುಬರಹಟ್ಟಿ

ಕುರುಬರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೩೨.೮೫ ಹೆಕ್ಟೇರ್ ಹೊಂದಿದ್ದು ಶಂಭೋನಹಳ್ಳಿ ಭೂ ವಿಸ್ತೀರ್ಣದಲ್ಲಿ ಸೇರಿರುವ ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ಮೊಲ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮

ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ದೊಡ್ಡ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೇರೆ ಯಾವುದೇ ಜನಾಂಗದವರಿಲ್ಲ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೬೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೫೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೯೦ ಮತ್ತು ಹೆಂಗಸರು ೬೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಕುರಿ ಸಾಕಾಣಿಕೆ ಇಲ್ಲಿನ ಪ್ರಮುಖ ಕಸುಬಾಗಿದ್ದು ೩೦% ವ್ಯವಸಾಯ ಮಾಡುವವರಿದ್ದಾರೆ. ಶೇಂಗಾ, ರಾಗಿ ಮತ್ತು ಜೋಳ ಮುಖ್ಯ ಬೆಳೆಯಾಗಿದೆ. ಒಬ್ಬರು ಶಿಕ್ಷಕರು ಗ್ರಾಮದಲ್ಲಿ ಒಬ್ಬರು ಟೈಲರ್ ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗಂಜಲಗುಂಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗಂಜಲಗುಂಟೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗಂಜಲಗುಂಟೆ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘವಿದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೩.೧%.

ಗ್ರಾಮದಲ್ಲಿ ಮಾರಮ್ಮ ಮತ್ತು ಬಸವಣ್ಣನ ದೇವಾಲಯಗಳಿವೆ. ಮಾರಮ್ಮನ ಜಾತ್ರೆಯನ್ನು ಬಲಿ ಹಾಗೂ ಹರಕೆಯೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕೃಷ್ಣಯ್ಯನಪಾಳ್ಯ

ಕೃಷ್ಣಯ್ಯನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೫೦.೮೭ ಹೆಕ್ಟೇರ್ ಹೊಂದಿದ್ದು ಮುದ್ದೇನಹಳ್ಳಿ ವಿಸ್ತೀರ್ಣದಲ್ಲಿ ಸೇರಿಕೊಂಡಿರುವ ಗ್ರಾಮವಾಗಿದೆ.

ಗ್ರಾಮವು ಮಜರೇ ಗ್ರಾಮವಾಗಿದ್ದು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಕಲ್ಲುಗಳಿಂದ ಕೂಡಿದ್ದು ಕಪ್ಪು ಹಾಗೂ ಬಿಳಿ ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಮೊಲ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ.

ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಮುದ್ದೇನಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು, ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮಡಿವಾಳ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೮೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೪೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೯೩ ಮತ್ತು ಹೆಂಗಸರು ೧೯೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರೂ ಗ್ರಾಮದಲ್ಲಿದ್ದಾರೆ. ರಾಗಿ, ಜೋಳ, ಶೇಂಗಾ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಮುಸುಕಿನಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಮೂರು ಜನ ಸರ್ಕಾರಿ ಶಿಕ್ಷಣ ಇಲಾಖೆಯಲ್ಲಿ ನೌಕರರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗಂಜಲಗುಂಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗಂಜಲಗುಂಟೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಗಂಜಲಗುಂಟೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘವಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೬.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಹೋಟೆಲ್‌ಗಳು ಹಾಗೂ ೧ ಅಂಗಡಿಗಳಿವೆ.

ಗ್ರಾಮದಲ್ಲಿ ಒಂದು ಶಾರದಾದೇವಿ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕುಣಿಗಲ್ ತಿಮ್ಮನಹಳ್ಳಿ

ಕುಣಿಗಲ್ ತಿಮ್ಮನಹಳ್ಳಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ೧೬ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೪೧೧.೪೩ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಕುಣಿಗಲ್ ಮೂಲದಿಂದ ಬಂದ ತಿಮ್ಮಯ್ಯ ಎಂಬ ವ್ಯಕ್ತಿ ತಿಗಳ ಜನಾಂಗದವರಾಗಿದ್ದು ಆತನೇ ಮೂಲ ಪುರುಷನಾದ್ದರಿಂದ ಈ ಹೆಸರು ಬಂದಿದೆ.

ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಕಾಡು ಪ್ರಾಣಿಗಳಾದ ಕರಡಿ, ನರಿ, ತೋಳ, ಮೊಲ ಹಾಗೂ ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದವುಗಳು ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ೮ ರಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ೪೫೨.೩ ಮಿಮೀ ಮಳೆ ಬಿದ್ದಿದೆ. ಕವಣದಾಲ ಗ್ರಾಮ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತಿದೆ.

ಒಟ್ಟು ೧೮೨ ಮನೆಗಳನ್ನು ಹೊಂದಿರುವ ಗ್ರಾಮವು ೮೩೬ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗೊಲ್ಲ ಜನಾಂಗದವರು ಗ್ರಾಮದಲ್ಲಿದ್ದಾರೆ. ಬೋವಿ ಜನಾಂಗ ಕಿರುಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದೆ. ಬಾಡೂಟ ವಿಶೇಷ ಆಹಾರವಾಗಿದೆ.

ವ್ಯವಸಾಯ ಹಾಗೂ ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ. ರಾಗಿ, ಭತ್ತ, ಜೋಳ, ಶೇಂಗಾ ಮುಖ್ಯ ಬೆಳೆಗಳಾಗಿವೆ. ಶಿಕ್ಷಣ, ಸಾರಿಗೆ, ಅಂಚೆ ಹಾಗೂ ಪೊಲೀಸ್ ಇಲಾಖೆಯಲ್ಲಿ ೪ ಜನ ಸೇವೆ ಸಲ್ಲಿಸುತ್ತಿದ್ದಾರೆ.

ಮಧುಗಿರಿ ವಿಧಾನಸಭಾ ಕ್ಷೇತ್ರ ತುಮಕೂರು ಲೋಕಸಭಾ ಕ್ಷೇತ್ರ, ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಕವಣದಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿ ನೌಕರರಿದ್ದಾರೆ. ಅಂಗನವಾಡಿ ಕೇಂದ್ರದಲ್ಲಿ ೧೮ ಮಕ್ಕಳು, ಒಬ್ಬರು ಕಾರ್ಯಕರ್ತೆ ಇದ್ದಾರೆ. ಸರ್ಕಾರಿ ಹಿರಿಯ ಪಾಠಶಾಲೆಯಲ್ಲಿ ೪೩ ಮಕ್ಕಳು, ೪ ಜನ ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯಗಳಿವೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಕಲಚೇತನ, ವಿಧವಾ ವೇತನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೬೧.೧%.

ಗ್ರಾಮದಲ್ಲಿ ಕೋಟೆ ಆಂಜನೇಯ ದೇವಸ್ಥಾನವಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಕುಣಿಗಲ್ ತಿಮ್ಮನಹಳ್ಳಿ ತಿಗುಳರಹಟ್ಟಿ

ಕುಣಿಗಲ್ ತಿಮ್ಮನಹಳ್ಳಿ ತಿಗುಳರಹಟ್ಟಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಕುಣಿಗಲ್ ತಿಮ್ಮನಹಳ್ಳಿಯ ಹೊರವಲಯದಲ್ಲಿದೆ. ತಿಗುಳ ಜಾತಿಯ ತಿಮ್ಮಯ್ಯ ಎಂಬುವವರು ಕುಣಿಗಲ್ ಮೂಲದಿಂದ ಬಂದು ಇಲ್ಲಿ ವಸತಿ ನಿರ್ಮಿಸಿಕೊಂಡ ಕಾರಣ ಕುಣಿಗಲ್ ತಿಮ್ಮನಹಳ್ಳಿ ತಿಗುಳರಹಟ್ಟಿ ಎಂದು ಕರೆಯಲಾಗಿದೆ. ಒಟ್ಟು ೨೪ ಮನೆಗಳಿದ್ದು ೮೩ ಜನಸಂಖ್ಯೆಯನ್ನು ಹೊಂದಿದೆ. ತಿಗುಳ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದೆ. ಬಾಡೂಟ ವಿಶೇಷ ಆಹಾರವಾಗಿದೆ.

ಕವಣದಲ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಕೆಂಪಾಪುರ

ಕೆಂಪಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೩.೭೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಈ ಗ್ರಾಮಕ್ಕೆ ಆ ಹೆಸರು ಬರಲು ಇದೇ ಕಾರಣ ಎನ್ನುವುದರಲ್ಲಿ ಸಂದೇಹವಿಲ್ಲ. ಇಲ್ಲಿ ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಉಳಿದಂತೆ ಹಲವು ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗರುಡ, ಕೋಗಿಲೆ, ಗಿಳಿ, ಗೌಜುಗ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಈ

ಗ್ರಾಮದಲ್ಲಿ ಕೃಷ್ಣಮೃಗ, ಮುಂಗುಸಿ, ಮೊಲ, ತೋಳ, ಕರಡಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ಗ್ರಾಮದಲ್ಲಿ ಬಾವಿಗಳಿದ್ದವು.

ರೆಡ್ಡಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ, ಮಡಿವಾಳ, ಲಿಂಗಾಯಿತ, ವಿಶ್ವಕರ್ಮ, ಸಾದರು, ಕುಂಬಾರ, ಉಪ್ಪಾರ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೧೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೪೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೧೩ ಮತ್ತು ಹೆಂಗಸರು ೨೨೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೬೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೭ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ, ಕಬ್ಬು, ಬಾಳೆ, ದಾಳಿಂಬೆ, ಮಾವು ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಅಷ್ಟೇ ಅಲ್ಲದೆ ಚೆಂಡು ಹೂ, ಸೇವಂತಿಗೆ, ಕಾಕಡ, ಕನಕಾಂಬರ ಇತ್ಯಾದಿ ಹೂಗಳನ್ನು ಬೆಳೆಯುತ್ತಾರೆ. ಇಲ್ಲಿ ಹೊಂಗೆ, ಅರಳಿ, ಬೇವು, ಹುಣಸೆ, ನೇರಳೆ, ನೀಲಗಿರಿ, ಮಳೆಮರ, ಗೋಣಿ ಇತ್ಯಾದಿ ಮರಗಳನ್ನು ಕಾಣಬಹುದು.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಕೆಲವರು ಗ್ರಾಮದಲ್ಲಿದ್ದಾರೆ. ಇಲ್ಲಿ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಮೂವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿಕ್ಕಮಾಲೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚಿಕ್ಕಮಾಲೂರು ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ಸ್ತ್ರೀಶಕ್ತಿ ಸಂಘ ಹಾಗೂ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ,

ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೫೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಇಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ನ್ಯಾಯಬೆಲೆ ಅಂಗಡಿ ಇದೆ.

ಗ್ರಾಮದಲ್ಲಿ ಮಾರಮ್ಮದೇವಿ, ರಾಮದೇವರ ದೇವಾಲಯವಿದ್ದು ಆಷಾಢದಲ್ಲಿ ಮಾರಮ್ಮನ ಹಬ್ಬ ಮಾಡುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕಾಳೇನಹಳ್ಳಿ

ಕಾಳೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೭೬.೧೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮಿಶ್ರಿತ ಮಣ್ಣು ಹಾಗೂ ಮರಳು ಇರುವ ಫಲವತ್ತಾದ ಭೂಮಿಯನ್ನು ಹೊಂದಿದೆ. ಅಲ್ಲಲ್ಲಿ ಸಣ್ಣ ಸಣ್ಣ ಗುಡ್ಡಗಳಿವೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ತೋಳ, ನರಿಗಳು ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಾವುಗಳೂ ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಗೊರವಂಕ, ಗೀಜುಗ, ಕಾಗೆಗಳು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳಿದ್ದು ೫ ಟ್ಯಾಂಕ್‌ಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ರೆಡ್ಡಿ ಒಕ್ಕಲಿಗ, ಆದಿದ್ರಾವಿಡ, ತಿಗುಳ, ಕೊರಮರು, ಲಿಂಗಾಯಿತ, ಕುರುಬ, ಮಡಿವಾಳ, ಮುಸ್ಲಿಂ, ಭಜಂತ್ರಿ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಹಾಗೂ ಉರ್ದು ಮಾತನಾಡುವವರಿದ್ದಾರೆ.

ಒಟ್ಟು ೨೬೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೦೨೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೩೭ ಮತ್ತು ಹೆಂಗಸರು ೪೮೭ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೭೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೭ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೯ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಮೂರು ಜನ ಗ್ರಾಮದಲ್ಲಿದ್ದು ಅನೇಕರು ಕೂಲಿ ಮಾಡುವವರು ಇದ್ದಾರೆ. ಉಳಿದಂತೆ ಇನ್ನಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ

ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೋಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಚಿಕ್ಕಮಾಲೂರು ಗ್ರಾಮ ಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿಕ್ಕಮಾಲೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚಿಕ್ಕಮಾಲೂರು ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ನಾಲ್ಕು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೭.೬೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೫ ಅಂಗಡಿಗಳಿವೆ. ಈ ಗಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಬಾಬಯ್ಯ, ಮಹೇಶ್ವರಿ, ಆಂಜನೇಯ, ಮಾರಮ್ಮ ಇವುಗಳಲ್ಲಿ ಮಾರಮ್ಮನ ಜಾತ್ರೆ ಮಾಡುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಅದರಲ್ಲೂ ಯುಗಾದಿ, ಗೌರಿ–ಗಣೇಶ, ಶಿವರಾತ್ರಿ, ದೀಪಾವಳಿ, ರಂಜಾನ್, ಬಕ್ರೀದ್ ಪ್ರಸಿದ್ಧವಾಗಿದೆ.

## ಕಲಿದೇವಪುರ

ಕಲಿದೇವಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೦೧೬.೦೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಕಲ್ಲಿನ ಆಂಜನೇಯನ ಮೂಲದಿಂದಾಗಿ ಕಲ್ಲಿನದೇವ – ಕಲಿದೇವರ ಪುರವಾಗಿದೆ. ಈ ಗ್ರಾಮದ ಪರಿಸರದಲ್ಲಿ ಹರಿಯುವ ಕುಮುದ್ವತಿ ನದಿ ತೀರದಲ್ಲಿ ಹಳೆಯ ಕಾಲದ ಶಾಸನ ತುಂಡಾಗಿ ಬಿದ್ದಿದೆ. ಇದನ್ನು ಗಂಗರ ಕಾಲದ ಶಾಸನ ಎನ್ನಲಾಗುತ್ತಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಕುಮುದ್ವತಿ ನದಿ ಇದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨೦ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳು, ೩ ಟ್ಯಾಂಕ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ, ಒಕ್ಕಲಿಗರು (ರೆಡ್ಡಿ) ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬರು, ಆದಿಕರ್ನಾಟಕ, ಆದಿದ್ರಾವಿಡ, ಭಜಂತ್ರಿ, ಅಗಸ, ಲಿಂಗಾಯಿತ, ಬ್ರಾಹ್ಮಣ, ಜೈನರು ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೩೮೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೫೨೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೭೯೦ ಮತ್ತು ಹೆಂಗಸರು ೭೩೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೯೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೨೦ ಎತ್ತಿನ ಗಾಡಿಗಳು, ಟ್ರ್ಯಕ್ಟರ್, ಕಾರು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ಅವರೆ ಮತ್ತು ಸೂರ್ಯಕಾಂತಿ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಈ ಗ್ರಾಮದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದೆ.

ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಲಿಗೆ ಸೇರಿದ ಒಟ್ಟು ಆರು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕಲಿದೇವರಹಳ್ಳಿ ಗ್ರಾಮ ಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಇಬ್ಬರು ಸದಸ್ಯರು ಹಾಗೂ ಇಬ್ಬರು ಪಂಚಾಯ್ತಿ ನೌಕರರಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೬ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಂಥಾಲಯವಿದೆ. ೬೦೦ ಪುಸ್ತಕಗಳು, ಒಬ್ಬರು ಗ್ರಂಥಪಾಲಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೪%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೩ ಹೋಟೆಲ್‌ಗಳು ಹಾಗೂ ೪ ಅಂಗಡಿಗಳಿವೆ. ಈ ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಸೀತಾರಾಮ ಕಲ್ಯಾಣಮಂಟಪವಿದೆ, ಅಂಬೇಡ್ಕರ್ ಭವನವಿದೆ, ನ್ಯಾಯಬೆಲೆ ಅಂಗಡಿಯಿದೆ.

ಗ್ರಾಮದಲ್ಲಿ ಸೀತಾರಾಮ, ಮಾರಮ್ಮ, ಬೀರಲಿಂಗೇಶ್ವರ ದೇವಾಲಯಗಳಿವೆ. ೨ ನಾಗರಕಟ್ಟೆಗಳಿವೆ (ಅರಳೀಕಟ್ಟೆ). ಪ್ರತಿ ವರ್ಷ ಮಾರಮ್ಮನ ಜಾತ್ರೆ ನಡೆಯುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮುಸ್ಲಿಂ ಬಾಂಧವರು ಮುಸ್ಲಿಂ ಹಬ್ಬಗಳನ್ನು ಆಚರಿಸುತ್ತಾರೆ.

# ಕೊಡಿಗೇನಹಳ್ಳಿ

ಕೊಡಿಗೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೨೫.೪೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಪಾಳೆಯಗಾರರಿಂದ ಕೊಡುಗೆಯಾಗಿ ಬಂದ ಕಾರಣದಿಂದಾಗಿ ಕೊಡಿಗೇನಹಳ್ಳಿ ಎಂದಾಗಿದೆ. ಕೊಡಿಗೇನಹಳ್ಳಿ ಬಸವ ಎನ್ನುವ ಸೈನ್ಯಾಧಿಕಾರಿಗೆ ಕೊಡುಗೆ ಕೊಟ್ಟಿದ್ದು ಎನ್ನಲಾಗುತ್ತಿದೆ. ಒಂದು ಶಾಸನ ಆಂಜನೇಯ ದೇವಾಲಯದ ಬಳಿಯಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಗೊರವಂಕ ಹೆಚ್ಚಾಗಿ ಕಂಡುಬರುತ್ತವೆ. ಹಲಸು, ಮಾವು, ಹುಣಸೆ, ಬೇವು ಇತ್ಯಾದಿ ಮರಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳು, ೫ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಹಳೆಯ ೩ ಬಾವಿಗಳನ್ನು ಕಾಣಬಹುದು. ೨ ಕೆರೆಗಳು ಹಾಗೂ ಜಯಮಂಗಲಿ ನದಿಯಿದೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮುಸ್ಲಿಂ, ಶೆಟ್ರು, ಲಂಬಾಣಿ, ಭಜಂತ್ರಿ, ಸಾದರು, ಕ್ರಿಶ್ಚಿಯನ್, ಕುಂಬಾರ, ಬ್ರಾಹ್ಮಣ, ನಾಯಕ, ಆದಿದ್ರಾವಿಡ, ಆದಿಕರ್ನಾಟಕ, ಅಗಸ, ಕಮ್ಮಾರ, ಲಿಂಗಾಯಿತ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು, ತಮಿಳು, ಹಿಂದಿ, ಲಂಬಾಣಿ ಮತ್ತು ಉರ್ದು ಭಾಷೆ ಮಾತನಾಡುವವರಿದ್ದಾರೆ.

ಒಟ್ಟು ೧೬೬೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೦೭೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೫೦೨ ಮತ್ತು ಹೆಂಗಸರು ೩೫೭೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೨೫೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೫ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್, ಕಾರು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲ ರಸ್ತೆಗಳು ಸಿಮೆಂಟ್ ರಸ್ತೆಯಾಗಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೬೬೭ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅಲಸಂದೆ, ಅವರೆ, ಅಡಿಕೆ ಮತ್ತು ತೆಂಗನ್ನು ಬೆಳೆಯಲಾಗುತ್ತಿದೆ. ಕೆಲವರು ಹೂಗಳನ್ನು ಬೆಳೆಯುತ್ತಾರೆ. ಇಲ್ಲಿ ಕಾಕಡ, ಕನಕಾಂಬರ, ಸೇವಂತಿಗೆ ಇತ್ಯಾದಿ ಹೂಗಳು ಕಂಡುಬರುತ್ತವೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಎರಡು ಮಿನಿ ಡೈರಿಗಳು ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ.

ಗ್ರಾಮದಲ್ಲಿ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪಶು ಚಿಕಿತ್ಸಾಲಯ ಕಂಡುಬಂದು ಇಬ್ಬರು ವೈದ್ಯರು ಹಾಗೂ ೧೦ ಮಂದಿ ಇತರೆ ಸಿಬ್ಬಂದಿ ಇದ್ದಾರೆ. ಕಾನೂನು, ಪಿಡಿಓ, ಕೆಇಬಿ, ಸಾರಿಗೆ, ಕೃಷಿ, ರೇಷ್ಮೆ, ಅರಣ್ಯ, ವೈದ್ಯಕೀಯ, ಇಂಜಿನಿಯರ್, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ೧೦೨ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ೩ ಜನ ಗ್ರಾಮದಲ್ಲಿದ್ದಾರೆ. ಜಿಲ್ಲಾಧಿಕಾರಿ ಧನರಾಜ್, ನಾಯಕ ಜನಾಂಗದವರು ಈ ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ತಾಲ್ಲೂಕು ಪಂಚಾಯ್ತಿ ಕಾರ್ಯಾಲಯ ಇದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಡಿಗೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ನಾಲ್ಕು ಸದಸ್ಯರು, ಮೂವರು ಪಂಚಾಯ್ತಿ ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘ ಹಾಗೂ ೩ ಧರ್ಮಸ್ಥಳ ಸಂಘಗಳಿವೆ. ವೈಶ್ಯ, ಡಿಸಿಸಿ, ಕಲ್ಪತರು ಕಾವೇರಿ ಗ್ರಾಮೀಣ ಬ್ಯಾಂಕ್‌ಗಳಿವೆ. ಪಿಡಬ್ಲ್ಯೂಡಿ ವಸತಿ ಗೃಹವಿದೆ.

ಗ್ರಾಮದಲ್ಲಿ ಮೂರು ಅಂಗನವಾಡಿ ಕೇಂದ್ರವಿದ್ದು ೧೫೦ ಮಕ್ಕಳಿದ್ದಾರೆ. ಮೂರು ಜನ ಕಾರ್ಯಕರ್ತೆ ಹಾಗೂ ಮೂವರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ, ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೫೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ೧೧ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೮%. ಬಾಲಕ ಹಾಗೂ ಬಾಲಕಿಯರ ವಿದ್ಯಾರ್ಥಿನಿಲಯವಿದೆ. ಸರ್ವೋದಯ ಬಾಲಕರ ಪ್ರೌಢಶಾಲೆ, ಸರ್ವೋದಯ ಬಾಲಕಿಯರ ಪ್ರೌಢಶಾಲೆ, ಸರ್ವೋದಯ ಪಿಯು ಕಾಲೇಜು, ಮಂಗಳ ಪ್ರಥಮದರ್ಜೆ ಕಾಲೇಜುಗಳಿವೆ.

ಗ್ರಾಮದಲ್ಲಿ ಕೂಲಿ ಕಾರ್ಮಿಕರು ಹೆಚ್ಚು ಕಾಣಬಹುದು. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೮ ಹೋಟೆಲ್‌ಗಳು ಹಾಗೂ ೨೦ ಅಂಗಡಿಗಳಿವೆ.

ಗ್ರಂಥಾಲಯದಲ್ಲಿ ೧೦೦೦೦ ಪುಸ್ತಕಗಳು ಹಾಗೂ ಒಬ್ಬರು ಗ್ರಂಥಪಾಲಕರಿದ್ದಾರೆ. ಕೆಇಬಿ, ಕಂದಾಯ ಇಲಾಖೆ ಕಛೇರಿಗಳಿವೆ. ನ್ಯಾಯಬೆಲೆ ಅಂಗಡಿಯಿದೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡು ಬರುತ್ತವೆ. ಪ್ರಾಥಮಿಕ ಆರೋಗ್ಯಕೇಂದ್ರ ಹಾಗೂ ಪಶು ಆಸ್ಪತ್ರೆ ಇದೆ.

ಮಧುಗಿರಿ ಪಾಳೆಯಗಾರನಾದ ಯುವರಾಜ ತೋಂಟೇಂದ್ರ ಕೊಡಿಗೇನಹಳ್ಳಿಯಲ್ಲಿ ಬೇಟೆ ಪರಿಸೆ ಎಂಬ ಜಾನಪದ ಬೇಟೆ ಪರಂಪರೆ ಆರಂಭಿಸಿ ಇಂದಿಗೂ ಪ್ರತಿ ಯುಗಾದಿಯಲ್ಲಿ ಬೇಟೆ ಪರಿಸೆ ನಡೆಯುತ್ತದೆ.

ಗ್ರಾಮದಲ್ಲಿ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಾಲಯ ಪ್ರಸಿದ್ಧಿ ಹೊಂದಿದೆ. ಸಪ್ಲಮ್ಮ, ಮಾರಮ್ಮ, ಕೊಲ್ಲಾಪುರದಮ್ಮ, ಈಶ್ವರ, ಬಸವೇಶ್ವರ, ರಾಮದೇವರು, ಶನಿಮಹಾತ್ಮ, ಆಂಜನೇಯ, ದಂಡಿಮಾರಮ್ಮ ದೇವಸ್ಥಾನಗಳಿವೆ. ಚಿಕ್ಕ ವಿದುರಾಶ್ವತ್ಥವಿದೆ. ಪ್ರತಿವರ್ಷ ಜುಲೈನಲ್ಲಿ ನರಸಿಂಹಸ್ವಾಮಿಯ ಬೃಹತ್ ಜಾತ್ರೆ ನಡೆಯುತ್ತದೆ. ದಂಡಿಮಾರಮ್ಮ, ಹಟ್ಟಿ ಮಾರಮ್ಮ ಹಾಗೂ ಸಪ್ಲಮ್ಮ ಜಾತ್ರೆ ನಡೆಯುತ್ತದೆ. ೨ ಚರ್ಚ್, ಒಂದು ದರ್ಗಾ, ಒಂದು ಮಸೀದಿ ಇದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕಡಗತ್ತೂರು

ಕಡಗತ್ತೂರು ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೯೮೬.೯೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮದ ಜನರು ಚಿನ್ನದ ಕಡಗವನ್ನು ಆಭರಣವನ್ನಾಗಿ ಧರಿಸುತ್ತಿದ್ದರಿಂದ ಕಡಗ > ತೊಡುವವರು > ಕಡಗತ್ತೂರು ಆಗಿದೆ ಎಂಬ ಅಭಿಪ್ರಾಯವನ್ನು ಇತಿಹಾಸ ಸಂಶೋಧಕ ಎಂ.ಡಿ. ಶ್ರೀನಿವಾಸ್ ತಮ್ಮ ಮಧುಗಿರಿ ಚರಿತ್ರೆ ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು, ಕಪ್ಪು ಮಣ್ಣು, ಮರಳು ಇರುವ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಪೊದೆಗಳು ಮತ್ತು ಗುಡ್ಡಗಳನ್ನು ಕಾಣಬಹುದು.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ,

ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ಹಾವುಗಳನ್ನು ಕಾಣಬಹುದಾಗಿದೆ. ಪಕ್ಷಿಗಳಾದ ನವಿಲು, ಗಿಳಿ, ಗೀಜುಗ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಅರಳಿ, ಬೇವು, ನೀಲಗಿರಿ, ಹೊಂಗೆ, ಹುಣಸೆ ಮರಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ತಾಲ್ಲೂಕಿಗೇ ಇದು ದೊಡ್ಡ ಕೆರೆಯಾಗಿದೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದಲ್ಲಿ ರೆಡ್ಡಿ, ಕುರುಬ, ಲಿಂಗಾಯಿತ, ಭಜಂತ್ರಿ, ಮುಸ್ಲಿಂ, ಶೆಟ್ರು, ಉಪ್ಪಾರ, ವಿಶ್ವಕರ್ಮ, ಬ್ರಾಹ್ಮಣ, ವೈಷ್ಣವ, ಶೆಟ್ಟಿ ಬಣಜಿಗ, ದೇವಾಂಗ, ಆದಿದ್ರಾವಿಡರು, ಒಕ್ಕಲಿಗರು, ಅಗಸರ ಸಮುದಾಯಗಳಿವೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಹಾಗೂ ಉರ್ದು ಮಾತನಾಡುವವರಿದ್ದಾರೆ.

ಒಟ್ಟು ೭೬೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೦೬೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೫೪೨ ಮತ್ತು ಹೆಂಗಸರು ೧೫೨೪ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೨೧೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೧೫ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್, ಕಾರು, ಆಟೋರಿಕ್ಷಾ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ಅವರೆ, ಅಲಸಂದೆ, ಸೂರ್ಯಕಾಂತಿ, ತೆಂಗು ಮತ್ತು ಅಡಿಕೆ ಬೆಳೆಯುತ್ತಾರೆ. ಅಲ್ಲಲ್ಲಿ ಬಾಳೆಯ ತೋಟಗಳನ್ನು ಕಾಣಬಹುದು.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಸಾರಿಗೆ ಇಲಾಖೆ, ಆರ್ಮಿ, ಕೆಇಬಿ, ಕಂದಾಯ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ೩೦ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ೮ ಜನ ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ನಾಲ್ಕು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಒಂದು ಪಶುಚಿಕಿತ್ಸಾಲಯ ಕಂಡುಬರುತ್ತದೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರಗಳಿದ್ದು ೧೫೦ ಮಕ್ಕಳಿದ್ದಾರೆ. ಕಾರ್ಯಕರ್ತೆ ಹಾಗೂ ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಪಾಠಶಾಲೆ ಮತ್ತು ಸರ್ಕಾರಿ ಪ್ರೌಢಶಾಲೆ ಇದ್ದು ೩೧೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ೧೧ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೨.೫೭%.

ಒಂದು ಗ್ರಂಥಾಲಯವಿದ್ದು ೬೫೦ ಪುಸ್ತಕಗಳು, ಒಬ್ಬರು ಗ್ರಂಥಪಾಲಕರಿದ್ದಾರೆ. ನ್ಯಾಯಬೆಲೆ ಅಂಗಡಿಯಿದೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೫ ಹೋಟೆಲ್‌ಗಳು ಹಾಗೂ ೫ ಅಂಗಡಿಗಳಿವೆ. ಎಸ್‌ಬಿಎಮ್ ಬ್ಯಾಂಕ್ ಇದೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಈ ಗ್ರಾಮದ ಶ್ರೀನಿವಾಸರಾವ್ ಅವರ ಮನೆಯಲ್ಲಿ ಕ್ರಿ.ಶ.೫೪೮ ರ ಗಂಗರಸರು ಬರೆಸಿದರೆಂಬ ತಾಮ್ರ ಶಾಸನವು ದೊರೆತಿದೆ. ಕಡಗತ್ತೂರನ್ನು ಇಲ್ಲಿ ಸುಜನ ಜನಪದ ಎಂದು ವರ್ಣಿಸಿದೆ. ಚಲನಚಿತ್ರ ನಿರ್ದೇಶಕ ಎನ್.ಟಿ. ಜಯರಾಮರೆಡ್ಡಿ ಈ ಗ್ರಾಮದವರು.

ಗ್ರಾಮದಲ್ಲಿ ಮಾರಮ್ಮ, ಆಂಜನೇಯ, ಜನಾರ್ಧನ, ಈಶ್ವರ, ರಾಮಮಂದಿರ. ಚೌಡೇಶ್ವರಿ, ಭೀಮೇಶ್ವರ, ಸುಬ್ಬರಾಯ, ದಂಡಿಮಾರಮ್ಮ, ಚನ್ನಕೇಶವ, ಮುತ್ತುರಾಯ, ಬಸವಣ್ಣ, ಬಿದಿರಮ್ಮ, ಎಲ್ಲಮ್ಮ ದೇವಾಲಯಗಳಿವೆ. ನಾಗರಕಟ್ಟೆಗಳಿವೆ. ಪ್ರತಿ ವರ್ಷ ಮಾರಮ್ಮ ಜಾತ್ರೆ ಮಾಡುವರು. ಚೌಡೇಶ್ವರಿ, ಬಿದರಮ್ಮ, ಸಪ್ಲಮ್ಮ ದೇವರಿಗೆ ಆರತಿ ಮಾಡುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಪಾಂಡವರು ವನವಾಸಕ್ಕೆ ಬಂದಾಗ ಭೀಮ ಈಶ್ವರನ ಗುಡಿ ಸ್ಥಾಪಿಸಿದ್ದರಿಂದ ಭೀಮೇಶ್ವರ ಎಂದು ಹೆಸರು ಬಂದಿದೆ. ಚೋಳರ ಕಾಲದ ಶಿಲಾಶಾಸನವಿದೆ. ಕೋಟೆಬೀದಿ, ಹಳೇ ಊರು ಬಾಗಿಲು ಇದೆ.

## ಕಸಿನಾಯಕನಹಳ್ಳಿ

ಕಸಿನಾಯಕನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿನಲ್ಲಿದ್ದು ೩೩ ಕಿಮೀ ದೂರದಲ್ಲಿದೆ. ೪೯.೮೭ ಹೆಕ್ಟೇರ್ ಭೌಗೋಳಿಕ ವಿಸ್ತೀರ್ಣ ಹೊಂದಿದೆ. ಕಾಸಿನಾಯಕ ಎನ್ನುವ ಪ್ರಾಚೀನ ಕಾಲದಲ್ಲಿದ್ದ ಗ್ರಾಮದ ಮುಖಂಡನ ನೆನಪಿನಲ್ಲಿ ಕಸಿನಾಯಕನಹಳ್ಳಿ ಗ್ರಾಮವು ಹೆಸರು ಪಡೆದಿದೆ ಎಂದು ಗ್ರಾಮಸ್ಥರು ಹೇಳುತ್ತಾರೆ.

ಈ ಗ್ರಾಮವು ಯಾವುದೇ ರೀತಿಯ ಬೆಟ್ಟಗುಡ್ಡಗಳನ್ನು ಹೊಂದಿಲ್ಲ. ಆದರೆ ವಿಶಾಲವಾದ ಬಯಲು ಸೀಮೆಯನ್ನು ಹೊಂದಿದೆ. ಗ್ರಾಮದ ಪೂರ್ವ ದಿಕ್ಕಿನಲ್ಲಿ ಕುಮುದ್ವತಿ ನದಿಯಿದೆ. ಈ ನದಿಯು ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ಬೇಸಿಗೆಯಲ್ಲೂ ಸಹ ಉತ್ತಮ ಬೆಳೆಯನ್ನು ರೈತರು ಬೆಳೆಯುತ್ತಾರೆ. ಗ್ರಾಮದ ಪ್ರದೇಶದಲ್ಲಿ ಒಂದು ಕೆರೆ, ಎರಡು ಕುಂಟೆ ಇವೆ. ಹನುಮರೆಡ್ಡಿ ಕುಂಟೆ, ರಂಗಾರೆಡ್ಡಿ ಕುಂಟೆ ಎಂಬುವಿವೆ.

ಗ್ರಾಮದಲ್ಲಿ ಆದಿಕರ್ನಾಟಕ ಜನಾಂಗದವರು ಪ್ರಧಾನ ಸಮುದಾಯವಾಗಿದ್ದು ಉಳಿದಂತೆ ಆದಿಕರ್ನಾಟಕ, ರೆಡ್ಡಿ, ಒಕ್ಕಲಿಗ, ಕುರುಬ, ಮುಸ್ಲಿಂ, ಅಗಸರು, ಕಿರುಸಮುದಾಯದವರಾಗಿದ್ದಾರೆ. ಗ್ರಾಮದಲ್ಲಿ ಕನ್ನಡ, ತೆಲುಗು ಭಾಷೆಗಳು ಬಳಕೆಯಲ್ಲಿವೆ.

ಗ್ರಾಮದಲ್ಲಿ ರಾಗಿ, ಮುಸುಕಿನಜೋಳ ಪ್ರಧಾನ ಬೆಳೆಯಾಗಿದೆ. ಅವರೆ, ತೊಗರಿ, ಉದ್ದು, ಅಲಸಂದೆ ಉಪಬೆಳೆಗಳಾಗಿವೆ. ರಾಗಿ ಆಹಾರ ಬೆಳೆ ಅಲ್ಲದೆ ಅಲ್ಪ ಪ್ರಮಾಣದಲ್ಲಿ ರೇಷ್ಮೆ ಸಾಕಾಣಿಕೆ ಇದೆ. ಗ್ರಾಮದಲ್ಲಿ ಯಾವುದೇ ರೀತಿಯ ಬೃಹತ್ ಪ್ರಮಾಣದ ಅಥವಾ ಸಣ್ಣ ಪ್ರಮಾಣದ ಕೈಗಾರಿಕೆಗಳಿಲ್ಲ.

ವಾರ್ಷಿಕವಾಗಿ ೫೫೭ ಮಿಮೀ ಸರಾಸರಿ ಮಳೆ ಇದೆ. ಈ ಗ್ರಾಮದಲ್ಲಿ ಅರಣ್ಯವಿಲ್ಲ. ಆದರೆ ಕುರುಚಲು ಪೊದೆಗಳಿದ್ದು ಬೇವಿನ ಮರ, ಹುಣಸೆ, ಹೊಂಗೆ, ಜಾಲಿ ಇತ್ಯಾದಿ ಮರಗಿಡಗಳಿದ್ದು ಗ್ರಾಮ ಪ್ರದೇಶದಲ್ಲಿ ಕಂಡುಬರುತ್ತದೆ. ಕಾಡುಹಂದಿ, ಕಾಡುಮೊಲ, ಕಾಡುನರಿ ಎಂಬ ಪ್ರಾಣಿಗಳು ಕಾಣಬಹುದು. ಅಲ್ಲದೆ ಕೌಜುಗ, ಗೊರವಂಕ, ಬೆಳವ ಎಂಬ ಪಕ್ಷಿಗಳು ಕಾಣುತ್ತವೆ.

ಗ್ರಾಮದಲ್ಲಿ ನಾಟಿಹಸು, ನಾಟಿಹಸು, ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕುತ್ತಾರೆ. ಅಲ್ಲದೆ ಗ್ರಾಮದಲ್ಲಿ ಕೋಳಿಗಳು ಮತ್ತು ಹುಂಜಗಳನ್ನು ಸಾಕುತ್ತಾರೆ. ಗ್ರಾಮದಲ್ಲಿ ಟ್ರ್ಯಕ್ಟರ್‌ಗಳು ಕಂಡುಬರುತ್ತವೆ. ಗ್ರಾಮದ ಹೈನುಗಾರರು ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘಕ್ಕೆ ಹಾಲನ್ನು ತಲುಪಿಸುವರು. ಆಧುನಿಕ ಡೈರಿ ಗ್ರಾಮದಲ್ಲಿದೆ.

ಗ್ರಾಮದಲ್ಲಿನ ಜನ ಕುರಿ, ಮೇಕೆಗಳನ್ನು ಮಾರಾಟ ಮಾಡುತ್ತಾರೆ. ಗ್ರಾಮದಲ್ಲಿ ರಾಗಿಮುದ್ದೆ ಮುಖ್ಯ ಆಹಾರ. ಚಪಾತಿ, ದೋಸೆ ದೆ. ಹೋಳಿಗೆ, ಕಡುಬು ಬಾಡೂಟ ವಿಶೇಷಾಹಾರವಾಗಿದೆ. ಗ್ರಾಮದಲ್ಲಿ ರಸ್ತೆ ಮಾರ್ಗ ಉತ್ತಮವಿದ್ದು ಸಾಧಾರಣ ಟಾರ್ ರಸ್ತೆಯಿದೆ. ಆದರೆ ಬಸ್

ಸಂಚಾರ ನೇರ ಸೌಲಭ್ಯವಿಲ್ಲ. ಗ್ರಾಮದಿಂದ ಬಹುದೂರ ಬಂದು ಬಸ್‌ಗಳ ಸೌಲಭ್ಯ ಪಡೆಯಬೇಕು. ನ್ಯಾಯಬೆಲೆ ಅಂಗಡಿ ಇದೆ. ಶಿಕ್ಷಣ, ಆರ್ಮಿ, ಸಾರಿಗೆ ಸೇರಿದಂತೆ ೫ ಜನ ಸರ್ಕಾರಿ ನೌಕರರಿದ್ದಾರೆ.

ಗ್ರಾಮದಲ್ಲಿ ಎತ್ತಿನ ಟೈರ್ ಚಕ್ರದ ಗಾಡಿ, ಟ್ರ್ಯಕ್ಟರ್‌ಗಳು ಬೈಕ್‌ಗಳಂತಹ ದ್ವಿಚಕ್ರ ವಾಹನಗಳಿವೆ. ಗ್ರಾಮದಲ್ಲಿ ಅಂಗನವಾಡಿ ಕೇಂದ್ರ ೩೧ ಮಕ್ಕಳು ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ೭೭ ಮಕ್ಕಳು ಮೂರು ಜನ ಶಿಕ್ಷಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೯೪%. ೯ ಸ್ತ್ರೀಶಕ್ತಿ ಸಂಘಗಳು, ೫ ಕಿರಾಣಿ ಅಂಗಡಿಗಳು, ೨ ಹೋಟೆಲ್‌ಗಳು ಇಲ್ಲಿವೆ. ಸರ್ಕಾರದ ಸಮುದಾಯ ಸೌಲಭ್ಯಗಳು ಚಾಲ್ತಿಯಲ್ಲಿದೆ. ೫೦ ಶೌಚಾಲಯಗಳಿವೆ.

ಗ್ರಾಮದಲ್ಲಿ ಒಟ್ಟು ೩೬೩ ಮನೆಗಳಿದ್ದು ಗಂಡು ೭೩೪ ಹೆಣ್ಣು ೭೨೭ ಒಟ್ಟು ೧೪೬೧ ಜನಸಂಖ್ಯಾ ಪ್ರಮಾಣ ಹೊಂದಿವೆ. ಕಸಿನಾಯಕನಹಳ್ಳಿ ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ, ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ, ಕಡಗತ್ತೂರು ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ ಮುದ್ದೇನಹಳ್ಳಿ ಗ್ರಾಮ ಪಂಚಾಯ್ತಿಗೆ ಸೇರಿದೆ. ಅಲ್ಲದೆ ಗ್ರಾಮವು ತುಮಕೂರು ಲೋಕಸಭಾ ವ್ಯಾಪ್ತಿಗೆ ಸೇರಿದೆ. ಇಬ್ಬರು ಸದಸ್ಯರು ಹಾಗೂ ಇಬ್ಬರು ನೌಕರರಾಗಿದ್ದಾರೆ.

ಗ್ರಾಮದಲ್ಲಿ ಮುತ್ಯಾಲಮ್ಮ, ಮಾರಮ್ಮ, ರಾಮದೇವರು, ಪಾತಲಪ್ಪ, ಆಂಜನೇಯಸ್ವಾಮಿ, ಬಸವಣ್ಣ ದೇವಸ್ಥಾನಗಳಿವೆ. ಮುತ್ಯಾಲಮ್ಮ ದೇವತೆ ಗ್ರಾಮದೇವತೆ ಆಗಿದ್ದು ಮಂಗಳವಾರ–ಶುಕ್ರವಾರ ಪೂಜೆ ನಡೆಯುತ್ತದೆ. ೨೫ ವರ್ಷಕ್ಕೆ ಅದ್ದೂರಿ ಜಾತ್ರೆ ಆಗುತ್ತದೆ. ಹಾಗೇ ಬಾಬಯ್ಯ ಜಾತ್ರೆಯು ಗ್ರಾಮದಲ್ಲಿ ನಡೆಯುತ್ತದೆ. ಗ್ರಾಮದಲ್ಲಿ ಯುಗಾದಿ, ಶ್ರೀರಾಮನವಮಿ, ಶಿವರಾತ್ರಿ ಹಬ್ಬಗಳನ್ನು ಆಚರಿಸುತ್ತಾರೆ.

## ಕುರ್ಕೆಹಳ್ಳಿ

ಕುರ್ಕೆಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೦೬.೧೧ ಹೆಕ್ಟೇರ್ ಹೊಂದಿದ್ದು ಸಿಂಗನಹಳ್ಳಿ ವಿಸ್ತೀರ್ಣಕ್ಕೆ ಸೇರಿರುವ ಮಜರೆ ಗ್ರಾಮವಾಗಿದೆ. ಕುಡಿಕೆ ತಯಾರಿಕೆಯ ಕುಂಬಾರ ಮೂಲದಿಂದ ನಂತರ ಕುಡಿಕೆ? ಕುರಿಕೆಯಾಗಿ ಕುರ್ಕೆಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಹದ್ದು, ಗೀಜುಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಅಲ್ಲಲ್ಲಿ ಕುರುಚಲು ಗಿಡಗಳನ್ನು ಕಾಣಬಹುದು. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೩ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ, ನೇಕಾರ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೬೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೦೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೦೦ ಮತ್ತು ಹೆಂಗಸರು ೧೦೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ಅಲ್ಲಲ್ಲಿ ಗುಡಿಸಲುಗಳನ್ನು ಕಾಣಬಹುದು. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೩ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ

ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಲಸಂದೆ, ಶೇಂಗಾ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಶಿಕ್ಷಕರು ಮತ್ತು ಪೊಲೀಸರು ಸೇರಿದಂತೆ ೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ. ಇನ್ನಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸುದ್ದೇಕುಂಟೆ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಸಿಂಗನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೧ ಹೋಟೆಲ್ ಹಾಗೂ ೧ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಶ್ರೀರಾಮ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಶ್ರೀರಾಮ ನವಮಿಯಂದು ವಿಶೇಷ ಪೂಜೆ ನಡೆಯುತ್ತದೆ.

## ಕೊಂಡವಾಡಿ

ಕೊಂಡವಾಡಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೭೨.೪೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕೊಂಡಪ್ಪನಾಯಕ ಎನ್ನುವ ವ್ಯಕ್ತಿಮೂಲದಿಂದ ಗ್ರಾಮಕ್ಕೆ ಕೊಂಡವಾಡಿ ಎನ್ನುವ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಬೇವು, ನೇರಳೆ, ಜಾಲಾರಿ, ಬಸರಿ, ನೀಲಗಿರಿ, ಹಲಸಿನ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕರಡಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಕೋಗಿಲೆ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ೬೦ ಎಮ್ಮೆ, ೧೨೦ ಕುರಿ ಹಾಗೂ ೨೫೧ ಮೇಕೆಗಳನ್ನು ಸಾಕಿದ್ದಾರೆ. ೭೮ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು

ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುಂಚಿಟಿಗರು, ಆದಿಕರ್ನಾಟಕ, ಶೆಟ್ಟಿಬಣಜಿಗ, ಆದಿದ್ರಾವಿಡ, ಭಜಂತ್ರಿ, ಕುರುಬ, ಬ್ರಾಹ್ಮಣರು, ವೈಶ್ಯರು, ತಿಗುಳ, ವಿಶ್ವಕರ್ಮ, ಲಿಂಗಾಯಿತ, ನಾಯಕ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೩೩೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೩೪೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೬೮೭ ಮತ್ತು ಹೆಂಗಸರು ೬೫೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೪೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ, ಮೆಕ್ಕೆಜೋಳ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಸೂರ್ಯಕಾಂತಿ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯಲಾಗುತ್ತಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಕೊಂಡವಾಡಿ ಚಂದ್ರಶೇಖರ್ ತುಮಕೂರು ಹಾಲು ಒಕ್ಕೂಟದ ಅಧ್ಯಕ್ಷರಾಗಿದ್ದಾರೆ.

ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಕಮ್ಮಾರರು, ಚಮ್ಮಾರರು, ಬಡಗಿಗಳು ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಒಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ಮೈಸೂರಿನ ಬನುಮಯ್ಯ ವಿದ್ಯಾಸಂಸ್ಥೆಯ ಸಂಸ್ಥಾಪಕ ಬನುಮಯ್ಯ ನಿವೃತ್ತ ಐಎಎಸ್ ಅಧಿಕಾರಿ ಕೃಷ್ಣಮೂರ್ತಿ, ಹಿರಿಯ ಸಹಕಾರಿ ಕೊಂಡವಾಡಿ ಚಂದ್ರಶೇಖರ್ ಈ ಗ್ರಾಮದವರು.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೊಂಡವಾಡಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಂಡವಾಡಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೊಂಡವಾಡಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ೭೮ ಮಕ್ಕಳಿದ್ದಾರೆ. ಇಬ್ಬರು ಕಾರ್ಯಕರ್ತೆಯರು ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೭೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಆರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೨೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಪಶು ಆಸ್ಪತ್ರೆ ಇದೆ. ಎರಡು

ಹೋಮಿಯೋಪತಿಕ್ ಚಿಕಿತ್ಸಾಲಯ ಕರ್ನಾಟಕದಲ್ಲಿ ಇದೆ. ಅವುಗಳಲ್ಲಿ ಇದೂ ಒಂದಾಗಿದೆ.

ಗ್ರಾಮದಲ್ಲಿ ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಸಮುದಾಯ ಭವನ ಮತ್ತು ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಹೊಂದಿರುವ ಒಂದು ಗ್ರಂಥಾಲಯ ಇದೆ. ಅದರ ನಿರ್ವಹಣೆಗಾಗಿ ಒಬ್ಬರು ಗ್ರಂಥಪಾಲಕರನ್ನು ನೇಮಿಸಲಾಗಿದೆ. ಕಾಫಿ-ಟೀ ದೊರೆಯುವ ೪ ಹೋಟೆಲ್‌ಗಳಿದ್ದು ೬ ಅಂಗಡಿಗಳಿವೆ. ೨ ವೀರಗಲ್ಲು, ೨ ಮಾಸ್ತಿಗಲ್ಲು, ಕರುಗಲ್ಲು ಇವೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ, ಚೌಡೇಶ್ವರಿ, ಸಪ್ಲಮ್ಮ, ಶನಿಮಹಾತ್ಮ, ಬಂಗಾರಲಿಂಗೇಶ್ವರ, ವೀರಭದ್ರೇಶ್ವರ, ಮಾರಮ್ಮ ಮತ್ತು ರಾಮಲಿಂಗೇಶ್ವರಸ್ವಾಮಿ ದೇವಾಲಯಗಳಿವೆ. ಗ್ರಾಮದ ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದೇವರಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಕಾಟಂಲಿಂಗ ಹಾಗೂ ಬನಶಂಕರಿ (ಚೌಡೇಶ್ವರಿ) ಜಾತ್ರೆ ೫ ವರ್ಷಗಳಿಗೊಮ್ಮೆ ನಡೆಯುತ್ತದೆ. ಇದರಲ್ಲಿ ಸಿಡಿ ಆಚರಣೆ ವಿಶೇಷವಾಗಿದೆ. ಇದನ್ನು ಶಿವರಾತ್ರಿಯಂದು ಆಚರಿಸುವರು.

## ಕಂಸಾನಹಳ್ಳಿ

ಕಂಸಾನಹಳ್ಳಿ ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೭ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೧೧೩೦ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಈ ಭಾಗದಲ್ಲಿ ಶ್ರೀಕೃಷ್ಣ ಗಾರುಡಿ ನಾಟಕವನ್ನು ಮಾಡುತ್ತಿದ್ದು ಕಂಸನ ಪಾತ್ರಧಾರಿಯ ವಿಶೇಷ ಅಭಿನಯದಿಂದಾಗಿ ಎಲ್ಲೆಡೆ ಗುರುತಿಸಿಕೊಂಡಿದ್ದನು. ಗ್ರಾಮ ರಚನೆಯಾದಾಗ ಆತನ ಹೆಸರಿನಲ್ಲಿಯೇ ಗ್ರಾಮಕ್ಕೆ ಕಂಸನಹಳ್ಳಿ ಎಂದು ಹೆಸರಾಯಿತು.

ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲು, ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ೧೫೦ ಹೆಕ್ಟೇರ್ ರಕ್ಷಿತ ಅರಣ್ಯವನ್ನು ಹೊಂದಿರುವುದರಿಂದ ಪ್ರಾಣಿಗಳಾದ ನರಿ, ತೋಳ, ಕರಡಿ, ಮೊಲ ಹಾಗೂ ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩ ಸಿಸ್ಟನ್‌ರ್, ೨ ಕೊಳವೆಬಾವಿ, ೨೦ ಸಾರ್ವಜನಿಕ ನಲ್ಲಿಗಳಿವೆ.

ನಾಯಕ ಜನಾಂಗದವರು ದೊಡ್ಡ ಸಮುದಾಯದವರಾಗಿದ್ದಾರೆ. ಕುರುಬ, ಲಂಬಾಣಿ ಹಾಗೂ ಒಕ್ಕಲಿಗ ಜನಾಂಗ ಕಿರು ಸಮುದಾಯವಾಗಿದೆ.

ಒಟ್ಟು ೨೫೭ ಮನೆಗಳನ್ನು ಹೊಂದಿದ್ದು ೧೦೮೧ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಕನ್ನಡ ಮಾತೃಭಾಷೆಯಾಗಿದೆ. ತೆಲುಗು ಹಾಗೂ ಲಂಬಾಣಿ ಮಾತನಾಡುವರು. ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ ಹಾಗೂ ಇಟ್ಟಿಗೆ ಮನೆಗಳು, ಗುಡಿಸಲು ಮನೆಗಳಿವೆ. ಗ್ರಾಮದಲ್ಲಿ ಆಶ್ರಯ, ಜನತಾ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ಕೆಲವು ಮನೆಗಳು ನಿರ್ಮಾಣವಾಗಿವೆ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಸಾಂಪ್ರದಾಯಿಕ ಎತ್ತಿನಗಾಡಿ ಗ್ರಾಮದಲ್ಲಿದ್ದು ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಆಟೋ ಹಾಗೂ ಬೈಕ್‌ಗಳಿವೆ. ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆಗಳಾಗಿವೆ. ಗ್ರಾಮದಲ್ಲಿ ೬೨ ಮನೆಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ.

ವ್ಯವಸಾಯ ಮುಖ್ಯ ಉದ್ಯೋಗವಾಗಿದ್ದು ರಾಗಿ, ಭತ್ತ, ಜೋಳ, ಅಡಿಕೆ, ತೆಂಗು ಬೆಳೆಯುತ್ತಾರೆ. ಉಳಿದಂತೆ ತೊಗರಿ, ಅಲಸಂದೆ, ಕಡಲೇಕಾಯಿ ಬೆಳೆಯುತ್ತಾರೆ. ಜೋಳ, ರಾಗಿ ಗ್ರಾಮದ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ. ೧ ಡೈರಿ ಇದೆ. ಶಿಕ್ಷಣ ರೆವಿನ್ಯೂ, ಪೊಲೀಸ್, ಸಾರಿಗೆ ಹಾಗೂ ಆರೋಗ್ಯ ಇಲಾಖೆಯಲ್ಲಿ ೭ ಜನ ಸೇವೆ ಸಲ್ಲಿಸುತ್ತಿದ್ದು ಒಬ್ಬರು ವೈದ್ಯರು ಹಾಗೂ ಇಬ್ಬರು ಟೈಲರ್ ಇದ್ದಾರೆ.

ಮಧುಗಿರಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೊಂಡವಾಡಿ ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿಯು ಕೊರಟಗೆರೆಯಲ್ಲಿದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಇಬ್ಬರು ಸದಸ್ಯರು ಹಾಗೂ ಇಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಕೊಂಡವಾಡಿ ಅಂಚೆ ಸಂಪರ್ಕ ಒದಗಿಸುತ್ತಿದೆ. ಚರ ದೂರವಾಣಿಗಳು ಗ್ರಾಮದಲ್ಲಿವೆ. ೨ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪೂರಕವಾಗಿವೆ. ೧ ಅಂಗನವಾಡಿ ಕೇಂದ್ರವಿದ್ದು ಒಟ್ಟು ೨೧ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ

ಪ್ರಾಥಮಿಕ ಪಾಠಶಾಲೆಯಿದ್ದು ಒಟ್ಟು ೪೮ ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಪಠ್ಯಪುಸ್ತಕ, ಸಮವಸ್ತ್ರ, ಶೌಚಾಲಯ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೫೭.೨೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ. ಒಂದು ಹೋಟೆಲ್ ಹಾಗೂ ಒಂದು ಅಂಗಡಿಯಿದೆ. ಜ್ವರ, ಕೆಮ್ಮು, ಮಲೇರಿಯಾ ಮುಖ್ಯವಾಗಿ ಗ್ರಾಮದಲ್ಲಿ ಕಾಣಿಸಿಕೊಳ್ಳುವ ರೋಗಗಳಾಗಿವೆ.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ ದೇವಸ್ಥಾನವಿದೆ. ಮಾರಮ್ಮನಿಗೆ ಆರತಿ ಮಾಡುತ್ತಾರೆ. ಊರಹಬ್ಬದ ಮಾದರಿಯಲ್ಲಿ ಬಲಿ, ಆರತಿ, ಉತ್ಸವ ಹೊರಡುತ್ತದೆ. ಗ್ರಾಮದೇವತೆಗಳ ಹಬ್ಬವಾಗಿ ಆಚರಿಸುವುದು ರೂಢಿಯಲ್ಲಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಕುಲುಮೇನಹಳ್ಳಿ

ಕುಲುಮೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೨.೨೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಕಮ್ಮಾರಿಕೆಯ ಕಸುಬಿನ ಆಧಾರವಾಗಿದ್ದು ಕಬ್ಬಿಣದ ಸಾಮಾನು ತಯಾರಿಕೆಯ ಕುಲುಮೆಯ ಕಾಯಕದವರಿಂದ ಈ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಮಾವು, ಹಲಸು, ಅರಳಿ, ಹುಣಸೆ, ಜಾಲಾರಿ ಮತ್ತು ಅಕೇಶಿಯಾ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೌಜುಗ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೧೫ ಎಮ್ಮೆ, ೧೭೦ ಕುರಿ ಹಾಗೂ ೧೧೦ ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕಮ್ಮಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ, ತಿಗುಳ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೭೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೪೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಶೇಂಗಾ, ಮುಸುಕಿನ ಜೋಳ, ಸೂರ್ಯಕಾಂತಿ, ಬಾಳೆ, ದಾಳಿಂಬೆ, ಅಡಿಕೆ ಮತ್ತು ತೆಂಗನ್ನು ಬೆಳೆಯಲಾಗುತ್ತಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಕಂದಾಯ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೪ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಆಧುನಿಕ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೊಂಡವಾಡಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಂಡವಾಡಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೊಂಡವಾಡಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೮.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮವು ಎಲ್ಲಾ ರೀತಿಯ ಜನಪದ ಕ್ಷೇತ್ರಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ.

ಗ್ರಾಮದಲ್ಲಿ ಕಾಫಿ-ಟೀ ದೊರೆಯುವ ೪ ಹೋಟೆಲ್‌ಗಳಿದ್ದು ೫ ಅಂಗಡಿಗಳಿವೆ. ಗ್ರಾಮದಲ್ಲಿ ರಂಗನಾಥಸ್ವಾಮಿ, ಆಂಜನೇಯಸ್ವಾಮಿ ದೇವಾಲಯಗಳಿವೆ. ಗ್ರಾಮದ ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದೇವರಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕೋಡಗದಾಲ

ಕೋಡಗದಾಲ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೭೦.೭೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಬೃಹತ್ತಾದ ಆಲದಮರ ಹಾಗೂ ಅದರಲ್ಲಿ ಮಂಗಗಳು ಸದಾ ವಾಸಿಸುತ್ತಿದ್ ಕಾರಣದಿಂದ ಕೋಡಗ (ಕೋತಿ) ಆಲ> ಕೋಡುಗದಾಲವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ೧೦ ಹೆಕ್ಟೇರ್‌ನಷ್ಟು ಅರಣ್ಯವನ್ನು ಹೊಂದಿದೆ. ಮಾವು, ಅರಳಿ, ಅಕೇಶಿಯಾ, ನೀಲಗಿರಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಹದ್ದು, ಗೂಬೆ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಮತ್ತು ಜಯಮಂಗಲಿ ನದಿ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಜಯಮಂಗಲಿ ನದಿಯಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನೇಕಾರ, ಕುರುಬ, ಆದಿದ್ರಾವಿಡ, ಸಾದರು, ಲಿಂಗಾಯಿತ, ಕುಂಬಾರ, ಮುಸ್ಲಿಂ, ಕ್ರೈಸ್ತರ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು, ಉರ್ದು, ಹಿಂದಿ ಮಾತನಾಡುವವರಿದ್ದಾರೆ.

ಒಟ್ಟು ೫೦೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೦೦೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೦೦೪ ಮತ್ತು ಹೆಂಗಸರು ೯೯೯ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೧೦ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೯೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಡಿಕೆ, ಶೇಂಗಾ, ಬಾಳೆ ಮತ್ತು ತೆಂಗನ್ನು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಕಂದಾಯ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಕುಂಬಾರರು, ಬಡಗಿ ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡಗದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಪುರವರದಲ್ಲಿ ಪಂಚಾಯಿತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡಗದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡಗದಾಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ೭೮ಮಕ್ಕಳಿದ್ದಾರೆ. ಇಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೧೨

ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಆರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಕಾಳಿದಾಸ ಪ್ರೌಢಶಾಲೆಯಿದ್ದು ೧೦೨ ಮಕ್ಕಳು, ೮ ಜನ ಶಿಕ್ಷಕರಿದ್ದಾರೆ. ವಿಶ್ವಭಾರತಿ ಶಾಲೆಯಲ್ಲಿ ೧೨೪ ಮಕ್ಕಲು, ೭ ಜನ ಶಿಕ್ಷಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೬೪.೩೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೪ ಹೋಟೆಲ್‌ಯಿದ್ದು ೮ ಅಂಗಡಿಗಳಿವೆ.

ಗ್ರಾಮದಲ್ಲಿ ಮಾರಮ್ಮದೇವಿ, ಹಟ್ಟಿಮಾರಮ್ಮ, ಆಂಜನೇಯ, ಭೈರವೇಶ್ವರ, ಅನ್ನಪೂರ್ಣೇಶ್ವರಿ, ಕೊಲ್ಲಾಪುರದಮ್ಮ ಮುಂತಾದ ಪ್ರಸಿದ್ಧ ದೇವಾಲಯಗಳಿವೆ. ಅಶ್ವತ್ಥಕಟ್ಟೆಯಿದೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಬಲಿ ಹಾಗೂ ಹರಕೆಯೊಂದಿಗೆ ಮಾರಮ್ಮನ ಹಬ್ಬವನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಕ್ರೈಸ್ತರು ಹಾಗೂ ಮುಸ್ಲಿಂ ಹಬ್ಬಗಳನ್ನೂ ಆಚರಿಸುತ್ತಾರೆ.

## ಕೋಡ್ಲಾಪುರ

ಚೆನ್ನಸಾಗರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೧೩.೮೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ತೆಲುಗಿನ ಕೊಡಲು ಅಂದರೆ ಕೋಳಿ ಎಂದು ಅರ್ಥ. ಇಲ್ಲಿನ ಹಳ್ಳದ ಪರಿಸರದಲ್ಲಿ ನೀರುಕೋಳಿ ಮತ್ತು ಕಾಡುಕೋಳಿಗಳು ವ್ಯಾಪಕವಾಗಿ ನೆಲೆಸಿದ್ದ ಕಾರಣದಿಂದ ಇಲ್ಲಿ ಗ್ರಾಮ ರಚನೆಯಾದಾಗ ಕೋಡ್ಲಾಪುರ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿರುವ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ಕೃಷ್ಣಮೃಗ, ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗರುಡ, ಗಿಳಿ, ನವಿಲು, ಪಾರಿವಾಳ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆ, ಹಂದಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಎರಡು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿದ್ರಾವಿಡ, ಭಜಂತ್ರಿ, ಮಡಿವಾಳ, ಸಾದಗೌಡರು, ಲಿಂಗಾಯಿತ, ಒಕ್ಕಲಿಗರು, ಕುರುಬರು, ಮುಸ್ಲಿಂ, ಉಪ್ಪಾರ, ಶೆಟ್ರು, ಬ್ರಾಹ್ಮಣ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು, ಉರ್ದು ಮಾತನಾಡುವವರಿದ್ದಾರೆ.

ಒಟ್ಟು ೫೬೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೩೬೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೨೧೩ ಮತ್ತು ಹೆಂಗಸರು ೧೧೪೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೫ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೯೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ. ಅಡಿಕೆ, ತೆಂಗು, ದಾಳಿಂಬೆ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ ಮತ್ತು ಮುಸುಕಿನ ಜೋಳವನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಮಿಲಿಟರಿ, ಕೆಇಬಿ, ಸಾರಿಗೆ, ಕಂದಾಯ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೧೮ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ಡಾ॥ ಭೀಮಯ್ಯ ಪ್ರೊಫೆಸರ್ ಆಗಿದ್ದು ಈ ಗ್ರಾಮದವರಾಗಿದ್ದಾರೆ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡ್ಲಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡಗದಾಲ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಇಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡ್ಲಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಈ ಭಾಗದಲ್ಲಿ ಉತ್ತಮ ಸೇವೆ ಒದಗಿಸುತ್ತಿದೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ೧೪೨ ಮಕ್ಕಳಿದ್ದಾರೆ. ಇಬ್ಬರು ಕಾರ್ಯಕರ್ತೆಯರು ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೨೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೬ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಪದವಿಪೂರ್ವ ಕಾಲೇಜುಗಳಿವೆ. ಒಟ್ಟು ೩೨೦ ವಿದ್ಯಾರ್ಥಿಗಳು, ೧೩ ಜನ ಶಿಕ್ಷಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೬೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪಶು ಆಸ್ಪತ್ರೆ ಇದೆ. ಗ್ರಂಥಾಲಯವಿದ್ದು ೭೫೦ ಪುಸ್ತಕಗಳು, ಒಬ್ಬರು ಗ್ರಂಥಪಾಲಕರಿದ್ದಾರೆ.

ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೩ ಹೋಟೆಲ್‌ಯಿದ್ದು ೩ ಅಂಗಡಿಗಳಿವೆ. ೧ ಶಿಲಾಶಾಸನವಿದೆ (ಪಲ್ಲವರ ಕಾಲದ್ದು). ೨ ವೀರಗಲ್ಲು, ೧ ಕರುಗಲ್ಲು ಇದೆ. ಬಸವಣ್ಣನ ಮೂರ್ತಿಯಿದೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮಾರಮ್ಮದೇವಿ, ಈಶ್ವರ, ದುರ್ಗಮ್ಮ, ಮೈಲಾರಲಿಂಗೇಶ್ವರ, ಆಂಜನೇಯ, ರಾಮದೇವರು, ಕನ್ನೇರಮ್ಮ, ಶನಿಮಹಾತ್ಮ ದೇವಾಲಯಗಳಿವೆ. ಮಾರಮ್ಮದೇವಿಯು ೧೨ ಗ್ರಾಮಕ್ಕೆ ಸೇರಿದ ಇತಿಹಾಸ ಪ್ರಸಿದ್ಧಿ ಹೊಂದಿದೆ. ಗ್ರಾಮಸ್ಥರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಬಲಿ ಹಾಗೂ ಹರಕೆಯೊಂದಿಗೆ ಮಾರಮ್ಮನ ಹಬ್ಬವನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ, ಬಕ್ರೀದ್, ರಂಜಾನ್ ಮುಂತಾದ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕತ್ತಿಜೋಗಿಪಾಳ್ಯ

ಕತ್ತಿಜೋಗಿಪಾಳ್ಯ ಗ್ರಾಮವು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೪೯.೧೭ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಇದೊಂದು ಕತ್ತಿಜೋಗಿ ಎಂಬ ಮೂಲದಿಂದ ನಂತರ ಕತ್ತಿ ಎಂಬ ಅರ್ಥದಲ್ಲಿ ಬಳಕೆಯಾಗುತ್ತಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದೆ. ಕೆಂಪು–ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಮೊಲ ಹಾಗೂ ನವಿಲು, ಗಿಳಿ, ಗೊರವಂಕ, ಗುಬ್ಬಚ್ಚಿ, ಕಾಗೆ ಮೊದಲಾದವುಗಳು ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ಕವಣದಲ ಗ್ರಾಮ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಒಟ್ಟು ೨೦ ಮನೆಗಳನ್ನು ಹೊಂದಿದ್ದು ೯೬ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಒಕ್ಕಲಿಗ ಹಾಗೂ ಕುರುಬ ಜನಾಂಗದವರು ಗ್ರಾಮದಲ್ಲಿದ್ದಾರೆ.

೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ವ್ಯವಸಾಯ ಮುಖ್ಯ ಉದ್ಯೋಗವಾಗಿದೆ. ಶಿಕ್ಷಣ, ಸಾರಿಗೆ ಇಲಾಖೆಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದಾರೆ. ಮಧುಗಿರಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಹಾಗೂ ಕವಣದಲ ಗ್ರಾಮಪಂಚಾಯ್ತಿ ಆಡಳಿತಕ್ಕೆ ಸೇರಿದೆ. ಒಬ್ಬರು ಪಂಚಾಯ್ತಿ ನೌಕರರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೪೨.೧% ಇದೆ.

ಸರ್ಕಾರದ ಸಮುದಾಯ ಸೌಲಭ್ಯಗಳು ಚಾಲ್ತಿಯಲ್ಲಿವೆ. ಒಂದು ಸ್ತ್ರೀಶಕ್ತಿ ಸಂಘವಿದೆ. ಕೊಲ್ಲಾಪುರದಮ್ಮ ದೇವಸ್ಥಾನವಿದೆ. ಕೊಲ್ಲಾಪುರದಮ್ಮನಿಗೆ ವಾರ್ಷಿಕವಾಗಿ ಆರತಿ, ಬ್ಯಾಟೆ ಸಂಪ್ರದಾಯವಿದ್ದು ಊರಹಬ್ಬ ಆಚರಿಸುತ್ತಾರೆ. ತಮಟೆ ಸ್ಥಳೀಯ ಜನಪದ ಕಲೆಗಳ ಉತ್ಸವ ಏರ್ಪಾಡಾಗುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಕವಣದಾಲ

ಕವಣದಾಲ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೧೫.೨೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮದ ಪ್ರಾಚೀನ ಹೆಸರು ಕಮಲದಲ. ಈ ಗ್ರಾಮದ ಕೆರೆಯಲ್ಲಿ ಕಮಲದ ಹೂಗಳು ಹೆಚ್ಚಾಗಿ ಇದ್ದುದರಿಂದ ಈ ಗ್ರಾಮಕ್ಕೆ ಕಮಲದಲ ಎಂದು ನಾಮಕರಣವಾಯಿತು. ವಾಡಿಕೆಯಲ್ಲಿ ನಂತರದ ದಿನಗಳಲ್ಲಿ ಕವಣದಾಲ ಎಂದು ಮರುನಾಮಕರಣವಾಗಿದೆ ಎಂದು ಹಿರಿಯರು ಹೇಳುತ್ತಾರೆ. ಕೇವಲ ಆಲದ ಮರದ ಭೂಪ್ರದೇಶದಲ್ಲಿ ಗ್ರಾಮ ರಚನೆಯಾದ ಕಾರಣ ಕವಲಿನ ಆಲ > ಕವಣದಾಲವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು–ಬಿಳಿ ಕಲ್ಲುಗಳಿಂದ ಕೂಡಿದ ಬಿಳಿ ಮರಳು ಮಿಶ್ರಿತವಾದ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ಉಜ್ಜನಿ ಮಲ್ಲಪ್ಪನ ಗುಡ್ಡವಿದೆ.

ಗ್ರಾಮ ಒಂದು ನೇರಳೆ ತೋಪು ಹಾಗೂ ಹಿಪ್ಪೆ ಮರದ ತೋಪುಗಳಿದ್ದು ಪ್ರಾಣಿಗಳಾದ ಚಿರತೆ, ಕರಡಿ, ಹಂದಿ, ನರಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು ಹೆಚ್ಚಾಗಿ ಕಂಡುಬರುತ್ತದೆ. ಉಳಿದಂತೆ ಗಿಳಿ, ಮರಕುಟಿಕ, ಗೊರವಂಕ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೪.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಸುವರ್ಣಮುಖಿ ಹೊಳೆಯಿದ್ದು ನೀರಿಲ್ಲದೆ ಬತ್ತಿಹೋಗಿದೆ. ಒಂದು ಚಿಕ್ಕ ಹಳ್ಳ ಹಾಗೂ ಒಂದು ಕೆರೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೫ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ೪ ಟ್ಯಾಂಕ್‌ಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೩೪೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೮೪೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೯೦೪ ಮತ್ತು ಹೆಂಗಸರು ೯೪೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ, ಇಟ್ಟಿಗೆ ಮನೆ, ಹೆಂಚಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೫ ಸಾಂಪ್ರದಾಯಿಕ ಎತ್ತಿನಗಾಡಿ, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೮೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಆಹಾರದ ಬೆಳೆಯಾಗಿದೆ. ಉಳಿದಂತೆ ತೊಗರಿ, ಜೋಳ, ಶೇಂಗಾ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಹೂವಿನ ಮೊಗ್ಗು, ಅಡಿಕೆ, ವಿಳೇದೆಲೆ, ತೆಂಗು ಬೆಳೆಯುವರು. ಅಡಿಕೆ, ಹೂವು ಮತ್ತು ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಹೈನುಗಾರಿಕೆಯು ಗ್ರಾಮದಲ್ಲಿದ್ದು ಒಂದು ಆಧುನಿಕ ಡೈರಿಯೂ ಇದೆ. ಗ್ರಾಮದಲ್ಲಿ ಶಿಕ್ಷಣ ಇಲಾಖೆ, ಪೊಲೀಸ, ಕೃಷಿ ಇಲಾಖೆ, ವೈದ್ಯ, ವಕೀಲರು ಸೇರಿದಂತೆ ೧೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಬಡಗಿ, ಇಬ್ಬರು ಗುಡಿಕಾರರು, ಇಬ್ಬರು ಚಿತ್ರಕಾರರು ಮತ್ತು ಟೈಲರಿಂಗ್‌ನಂತಹ ಆಧುನಿಕ ಕೆಲಸ ಮಾಡುವಂತಹ ೬ ಜನ ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡೇರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಸದರಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಮೂವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಇಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕವಣದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮದಲ್ಲಿಯೇ ಅಂಚೆ ಕಛೇರಿಯಿದೆ. ೨ ಸ್ಥಿರ ದೂರವಾಣಿ ಹಾಗೂ ೧೦೦೦ ಕ್ಕೂ ಹೆಚ್ಚು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘ ಹಾಗೂ ೪೦ ಸ್ವಸಹಾಯ ಸಂಘಗಳಿವೆ.

ರಾಜ್ಯಸರ್ಕಾರದ ವತಿಯಿಂದ ನಡೆಯುವ ಒಂದು ರೈತ ಸೇವಾ ಸಂಘ ಗ್ರಾಮದಲ್ಲಿದೆ. ಗ್ರಾಮದಲ್ಲಿ ೪ ಹೋಟೆಲ್ ಹಾಗೂ ೮ ಅಂಗಡಿಗಳಿವೆ. ಗ್ರಾಮಪಂಚಾಯ್ತಿ ವತಿಯಿಂದ ನಡೆಯುವ ಒಂದು ಗ್ರಂಥಾಲಯವಿದ್ದು ವಿವಿಧ ಪ್ರಕಾರದ ೧೦೦೦ ಪುಸ್ತಕಗಳಿವೆ. ಒಬ್ಬರು ಗ್ರಂಥಪಾಲಕರಿದ್ದಾರೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ಅಂಗನವಾಡಿ–೧ ರಲ್ಲಿ ೪೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗನವಾಡಿ–೨ ರಲ್ಲಿ ೧೪ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೦೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೮ ಜನ ಶಿಕ್ಷಕರು, ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೬.೫%. ಗ್ರಾಮದಲ್ಲಿ ಒಂದು ಖಾಸಗಿ ಆಡಳಿತದ ಸುವರ್ಣಮುಖಿ ಗ್ರಾಮಾಂತರ ಪ್ರೌಢಶಾಲೆಯಿದ್ದು ೧೧೨ ವಿದ್ಯಾರ್ಥಿಗಳಿದ್ದಾರೆ. ೮ ಜನ ಶಿಕ್ಷಕರು, ನಾಲ್ಕು ಜನ ಸಹಾಯಕರು ಹಾಗೂ ೩ ಜನ ಅಡಿಗೆ ಸಿಬ್ಬಂದಿ ಇದ್ದಾರೆ. ಸುವರ್ಣಮುಖಿ ಪದವಿಪೂರ್ವ ಕಾಲೇಜು ಇದ್ದು ಒಟ್ಟು ೮೦ ವಿದ್ಯಾರ್ಥಿಗಳು, ೬ ಜನ ಉಪನ್ಯಾಸಕರುಗಳಿದ್ದಾರೆ.

ಗ್ರಾಮದಲ್ಲಿ ಒಂದು ಕುಟುಂಬ ಕಲ್ಯಾಣ ಆರೋಗ್ಯ ಕೇಂದ್ರವಿದ್ದು ಒಬ್ಬರು ವೈದ್ಯರಿದ್ದಾರೆ. ಒಂದು ಪಶುವೈದ್ಯಶಾಲೆಯಿದ್ದು ಒಬ್ಬರು ವೈದ್ಯರಿದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ, ದಂಡಿಮಾರಮ್ಮ, ಉಜ್ಜೈನಿ ಮಲ್ಲೇಶ್ವರ, ಕಾವಲೇಶ್ವರ ದೇವಾಲಯವಿದೆ. ಪ್ರತಿವರ್ಷ ಜಾತ್ರೆ ಹಾಗೂ ತೇರನ್ನು ಎಳೆದು ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕುರಂಕೋಟೆ ತಿಮ್ಮನಪಾಳ್ಯ

ಕುರಂಕೋಟೆ ತಿಮ್ಮನಪಾಳ್ಯವು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೧೨೫.೯ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಕುರಂಗರಾಜನ ಹೆಸರನ್ನು ಮೂಲವಾಗಿಸಿಕೊಂಡು ತಿಮ್ಮಯ್ಯನು ಹೊಸ ಗ್ರಾಮ ರಚಿಸಿದ್ದರಿಂದಾಗಿ ಆತನ ಹೆಸರಿಂದಲೇ ಕರೆಯಲಾಗಿದೆ. ಗುರುತಿಸುವಿಕೆಯ ಕಾರಣದಿಂದಾಗಿ ಕುರಂಕೋಟೆಯನ್ನು ಸೇರಿಸಲಾಗಿದೆ.

ಇದು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಮೊಲ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ૩೨ ರಿಂದ ૩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫૩.೨ ಮಿಮೀ ಮಳೆ ಬೀಳುತ್ತದೆ.

ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಕವಣದಲ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಒಟ್ಟು ೨೪ ಮನೆಗಳನ್ನು ಹೊಂದಿದ್ದು ೭೮ ಜನಸಂಖ್ಯೆಯನ್ನು ಹೊಂದಿದೆ. ಒಕ್ಕಲಿಗ ಹಾಗೂ ಲಿಂಗಾಯಿತ ಜನಾಂಗದವರು ಗ್ರಾಮದಲ್ಲಿ ದ್ದಾರೆ. ವ್ಯವಸಾಯ ಮುಖ್ಯ ಕಸುಬಾಗಿದೆ. ಇಬ್ಬರು ಸಾರಿಗೆ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮಧುಗಿರಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಕವಣದಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ.

ಸರ್ಕಾರದ ಸಮುದಾಯ ಸೌಲಭ್ಯಗಳು ಚಾಲ್ತಿಯಲ್ಲಿವೆ. ಒಂದು ಸ್ತ್ರೀಶಕ್ತಿ ಸಂಘವಿದೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೪೨.૩% ರಷ್ಟಿದೆ.

ಮಾರಮ್ಮ, ತಿಮ್ಮಪ್ಪನ ಪೌಳಿಗಳಿವೆ. ಮಾರಮ್ಮನಿಗೆ ಶ್ರಾವಣ ಮಾಸದಲ್ಲಿ ಆರತಿ, ಬಾನ ಏರ್ಪಡಿಸುತ್ತಾರೆ. ಬಲಿ ಆಚರಣೆಯೂ ಇದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಕಂತಾನಹಳ್ಳಿ

ಕಂತಾನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿಗೆ ೨೭ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೯.೬೫ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ. ಕಾಂತನಹಳ್ಳಿ ಎಂಬುದು ಕಾಲಾನಂತರ ಕಾಂತಾನಹಳ್ಳಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫૩.೪ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ૩೨ ರಿಂದ ૩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವುಗಳನ್ನು ಜಾನುವಾರುಗಳಿಗೆ ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ಬೇರೆ ಜನಾಂಗದವರಿಲ್ಲ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೯೬ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೪೫೮ ಜನಸಂಖ್ಯಾ ಪ್ರಮಾಣವನ್ನು ಹೊಂದಿದ್ದು ಗಂಡು ೨೩೫, ಹೆಣ್ಣು ೨೨೩ ಹೊಂದಿದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಈ ಗ್ರಾಮದಲ್ಲಿ ಎಲ್ಲಾ ರಸ್ತೆಗಳು ಉತ್ತಮವಾಗಿದ್ದು ಚರಂಡಿ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ, ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆ, ವಿದ್ಯುತ್ ಇಲಾಖೆಗಳಿಗೆ ಸೇರಿದ ಒಟ್ಟು ೦೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರ್ ಕೆಲಸ ಮಾಡುವ ಒಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಐ.ಡಿ.ಹಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಒಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಐ.ಡಿ.ಹಳ್ಳಿ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಐ.ಡಿ.ಹಳ್ಳಿ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ೩೩ ಮಕ್ಕಳಿದ್ದು ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ೩೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ, ೦೨ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೩.೪೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ಎರಡು ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಮಾರಮ್ಮ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಕಾಮೇಗೌಡನಹಳ್ಳಿ

ಕಾಮೇಗೌಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕ ಕೇಂದ್ರದಿಂದ ೨೬ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ಇಟಕದಿಬ್ಬನಹಳ್ಳಿಯ ೧೮೮೦.೫೭ ಹೆಕ್ಟೇರ್ ಭೂ ವಿಸ್ತೀರ್ಣದಲ್ಲಿ ಸೇರಿದೆ ಕಂದಾಯ ಗ್ರಾಮವಾಗಿದೆ.

ಗ್ರಾಮದಲ್ಲಿ ಮೇಲ್ಭಾಗ ಮತ್ತು ಕೆಳಭಾಗವೆಂದು ಎರಡು ಭಾಗಗಳಿವೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಮತ್ತು ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಉಪ್ಪಾರ, ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ, ಆಚಾರ್, ಮುಸ್ಲಿಂ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ಉರ್ದು ಹಾಗೂ ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೯೦ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೩೬೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು ೧೭೦, ಹೆಣ್ಣು ೧೯೦ ಜನಸಂಖ್ಯೆ ಇದೆ, ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಈ ಗ್ರಾಮದಲ್ಲಿ ಚರಂಡಿ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ರಸ್ತೆ ವ್ಯವಸ್ಥೆ ಕಂಡುಬರುತ್ತದೆ.. ಗ್ರಾಮದಲ್ಲಿ ೨೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇಲ್ಲಿನ ರೈತರು ಉಪಕಸುಬಾಗಿದೆ.

ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆ, ಹಾಗೂ ವಿದ್ಯುತ್ ಇಲಾಖೆಗಳಿಗೆ ಸೇರಿದ ಒಟ್ಟು ೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಐ.ಡಿ.ಹಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಒಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಐ.ಡಿ.ಹಳ್ಳಿ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಐ.ಡಿ.ಹಳ್ಳಿ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ, ಒಬ್ಬರು ಕಾರ್ಯಕರ್ತೆ ಇದ್ದು ಒಬ್ಬ ಸಹಾಯಕಿ ಇದ್ದಾರೆ ಹಾಗೂ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು, ೨೯ ವಿದ್ಯಾರ್ಥಿಗಳಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ಎರಡು ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಸಂಕಲಮ್ಮ, ಮುತ್ತುರಾಯ, ಆಂಜನೇಯ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗಿಡದಾಗಲಹಳ್ಳಿ

ಗಿಡದಾಗಲಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೯೬.೫೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮಕ್ಕೆ ಗಿಡದಾಗಲಹಳ್ಳಿ ಎಂದು ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಈ ಗ್ರಾಮವು ಕಾಡಿನ ಮಧ್ಯದಲ್ಲಿ ಇದ್ದು ತುಂಬಾ ಗಿಡಗಳ ಪೊದೆಗಳ ಮಧ್ಯೆ ಇದ್ದುದರಿಂದ ಜನರು ಇದಕ್ಕೆ ಗಿಡದಾಗಲಹಳ್ಳಿ ಎಂದು ನಾಮಕರಣ ಮಾಡಿದ್ದಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳೀ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮವು ಅರಣ್ಯ ಪ್ರದೇಶವನ್ನು ಹೊಂದಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ನರಿ, ತೋಳ, ಚಿರತೆ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಗೊರವಂಕ, ನವಿಲು, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಎತ್ತು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಈ ಗ್ರಾಮದಲ್ಲಿ ಚಿಕ್ಕ ಚಿಕ್ಕ ಬಂಡೆಗಳಿಂದ ಕೂಡಿದ ಗುಟ್ಟೆಗಳಿದ್ದು ಯಾವುದೇ ಕೆರೆ, ಹೊಳೆ, ಹಳ್ಳಗಳು ಹರಿಯುವುದಿಲ್ಲ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೫ ಕ್ಕಿಂತ ಹೆಚ್ಚು ಸಾರ್ವಜನಿಕ ನಲ್ಲಿಗಳಿದ್ದು ನೀರನ್ನು ಒದಗಿಸುತ್ತಿದೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ವಿಶ್ವಕರ್ಮ ಜನಾಂಗ ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೮೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೦೨೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೯೫, ಹೆಣ್ಣು ೫೩೩ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಆಧುನಿಕ ವಾಹನಗಳಾದ ದ್ವಿಚಕ್ರ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಗಳಾಗಿದ್ದು ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆಯನ್ನು ಹೊಂದಿದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ಹೊಂದಿವೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ರಾಗಿ, ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ಶೇಂಗಾ, ಅವರೆ, ತೊಗರಿ ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು ಬೆಳೆಯುತ್ತಾರೆ. ಗ್ರಾಮದಲ್ಲಿ ೨೦ ಕ್ಕಿಂತ ಹೆಚ್ಚು ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಗಳಿವೆ.

ಗ್ರಾಮಕ್ಕೆ ಸೇರಿದಂತೆ ಯಾವುದೇ ಕೆರೆ ಹಳ್ಳಗಳಿಲ್ಲದಿರುವುದರಿಂದ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಗ್ರಾಮದಲ್ಲಿ ಮೂವರು ಸರ್ಕಾರಿ ನೌಕರರಿದ್ದು ಅದರಲ್ಲಿ ಒಬ್ಬರು ವಕೀಲರು ಮತ್ತು ಒಬ್ಬರು ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಕಮ್ಮಾರರು ಒಬ್ಬರು ಹಾಗೂ ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವವರು ಗ್ರಾಮದಲ್ಲಿದ್ದಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದ್ದು ಒಂದು ಆಧುನಿಕ ಡೈರಿಯೂ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ರಂಗಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಪಂಚಾಯ್ತಿಯ ಸದಸ್ಯರು ಹಾಗೂ ಇಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಗಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಚರ ದೂರವಾಣಿ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧೧ ಸ್ತ್ರೀಶಕ್ತಿ ಸಂಘ ಮತ್ತು ೨ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೬೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೬೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಏಳು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರಿ ಪ್ರೌಢಶಾಲೆಯಲ್ಲಿ ಒಟ್ಟು ೭೫ ವಿದ್ಯಾರ್ಥಿಗಳು ಶಿಕ್ಷಣ ಪಡೆಯುತ್ತಿದ್ದು ೭ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೭೭.೨%. ಗ್ರಾಮಪಂಚಾಯ್ತಿ ವತಿಯಿಂದ ನಡೆಯುವ ಒಂದು ಗ್ರಂಥಾಲಯವಿದ್ದು ಮುಚ್ಚಲ್ಪಟ್ಟಿದೆ. ಉಳಿದಂತೆ ಯಾವುದೇ ಆಸ್ಪತ್ರೆಗಳಿಲ್ಲ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಕೆಂಚಮ್ಮನ ದೇವಾಲಯವಿದ್ದು ಪ್ರತಿ ವರ್ಷವೂ ಕೆಂಚಮ್ಮ ದೇವಿಯ ಜಾತ್ರಾ ಉತ್ಸವ ನಡೆಯುತ್ತದೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗುಡಿಬಂಡೆಹಟ್ಟಿ

ಗುಡಿಬಂಡೆ ಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೩.೧೬ ಹೆಕ್ಟೇರ್ ಹೊಂದಿದ್ದು ಶಿವನಗೆರೆ ಭೂ ವಿಸ್ತೀರ್ಣದಲ್ಲಿ ಸೇರಿಕೊಂಡಿರುವ ಮಜರೆ ಗ್ರಾಮವಾಗಿದೆ. ಗುಡಿಯಾಕಾರದಲ್ಲಿ ಇಲ್ಲಿ ಬಂಡೆ ಇರುವುದರಿಂದಾಗಿ ಈ ಗ್ರಾಮಕ್ಕೆ ಗುಡಿಬಂಡೆ ಎಂಬ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರಿತವಾ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮಕ್ಕೆ ಹೊಂದಿಕೊಂಡಂತೆ ಒಂದು ಗುಡ್ಡವಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಮೊಲ, ನರಿ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಹೆಚ್ಚು ಕಂಡುಬರುತ್ತದೆ.

ಗ್ರಾಮದಲ್ಲಿ ಒಂದು ಕೆರೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳು, ೧ ಕೊಳವೆಬಾವಿ ಹಾಗೂ ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗದವರು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೧೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೫೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೭೮, ಹೆಂಗಸರು ೧೮೦ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೩೨ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಯಾವುದೇ ಸಾಂಪ್ರದಾಯಿಕ ವಾಹನಗಳಿಲ್ಲ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ, ಶೇಂಗಾ, ಅಡಿಕೆ, ತೆಂಗು, ಹುಣಸೆ ಮುಖ್ಯ ಬೆಳೆಯಾಗಿದೆ. ಹುಣಸೆ, ತೆಂಗು, ಅಡಿಕೆ ಗ್ರಾಮದ ವಾಣಿಜ್ಯ ಬೆಳೆಯಾಗಿದ್ದು ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮಕ್ಕೆ ಸೇರಿದಂತೆ ನೀರಿಲ್ಲದ ಕಾರಣ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಶಿಕ್ಷಕರು ಹಾಗೂ ಪೊಲೀಸ್ ಸೇರಿದಂತೆ ಮೂರು ಜನ ಸರ್ಕಾರಿ ನೌಕರರಾಗಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವವರು ಒಬ್ಬರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಸಜ್ಜೆಹೊಸಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಜ್ಜೆ ಹೊಸಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೧.೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಕೆಂಚಪ್ಪ, ಮಾರಮ್ಮ ದೇವಾಲಯಗಳಿದ್ದು ಕೆಂಚಪ್ಪನ ಜಾತ್ರೆಯನ್ನು ಬಲಿ ಹಾಗೂ ಹರಕೆಯೊಂದಿಗೆ ಆಚರಿಸುವರು. ಉಳಿದಂತೆ ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ, ದೀಪಾವಳಿ ಮೊದಲಾದ ಎಲ್ಲಾ ಹಿಂದೂ ಹಬ್ಬಗಳನ್ನು ಸಂಭ್ರಮದಿಂದ ಆಚರಿಸುತ್ತಾರೆ.

## ಗಾಂಧಿ ಗ್ರಾಮ

ಗಾಂಧಿ ಗ್ರಾಮವು ಮಧುಗಿರಿ ಪೂರ್ವ ದಿಕ್ಕಿನಲ್ಲಿದ್ದು ಅಕ್ಕಲಾಪುರದ ಹೊರವಲಯದಲ್ಲಿದೆ. ಒಟ್ಟು ೧೫ ಮನೆಗಳಿದ್ದು ೫೮ ಜನಸಂಖ್ಯೆ ಇದೆ. ನಾಯಕ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ತೆಲುಗು ಮಾತನಾಡುವವರು ಗ್ರಾಮದಲ್ಲಿದ್ದಾರೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಕೊಂಡವಾಡಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಕೂಲಿ ಹಾಗೂ ವ್ಯವಸಾಯ ಮುಖ್ಯ ಕಸುಬಾಗಿದೆ. ಸಾರಿಗೆ ಹಾಗೂ ಶಿಕ್ಷಣ ಇಲಾಖೆಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದಾರೆ. ಆಂಜನೇಯನ ದೇವಸ್ಥಾನವಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಗಾಳಿಹಳ್ಳಿ

ಗಾಳಿಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೮೧.೦೨ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ.

ಗಾಳಿ ಆಂಜನೇಯನ ಮೂಲದಿಂದ ಬಂದಿದ್ದು ಕ್ರಮೇಣ ಆಂಜನೇಯ ಪದ ತೇಲಿ ಈಗ ಗಾಳಿ ಶಬ್ದದೊಂದಿಗೆ ಗ್ರಾಮದ ಹೆಸರು ಗಾಳಿಹಳ್ಳಿ ಬಳಕೆಯಲ್ಲಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಮೊಲ, ಕಾಡುಹಂದಿ, ಕರಡಿ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕಾಗೆ, ಕೋಗಿಲೆ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಜಯಮಂಗಲಿ ನದಿ, ಒಂದು ಕೆರೆ ಇದೆ. ಜಯಮಂಗಲಿ ನದಿ ಹರಿದು ತುಂಬಾ ವರ್ಷಗಳೇ ಕಳೆದಿದ್ದು ಕೆರೆಯು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳು, ೫ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ನಾಯಕರು, ಕುಂಬಾರರು, ಗೊಲ್ಲ, ಕುರುಬ, ಆದಿಕರ್ನಾಟಕ, ಆದಿದ್ರಾವಿಡ, ಸಾದರು ಜನಾಂಗದವರಿದ್ದು, ಸಾದರು ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೦೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೮೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೯೫ ಜನ, ಹೆಂಗಸರು ೧೮೫ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೩೨ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿ, ಆಟೋ, ಟೆಂಪೋ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಹಾಗೂ ಕೂಲಿ ಇಲ್ಲಿ ಸಮಾನ ಪ್ರಮಾಣದಲ್ಲಿದ್ದು ಶೇಂಗಾ ಮುಖ್ಯ ಬೆಳೆಯಾಗಿದೆ. ತೊಗರಿ, ಅವರೆ, ಜೋಳ ಬೆಳೆಯಲಾಗುತ್ತಿದ್ದು ತೆಂಗು ಹಾಗೂ ಅಡಿಕೆಯನ್ನು ಬೆಳೆಯುವರು. ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಶಿಕ್ಷಕರು, ಪೊಲೀಸ್ ಸೇರಿದಂತೆ ೩ ಜನ ನೌಕರರಾಗಿದ್ದು ಸಾಂಪ್ರದಾಯಿಕ ಉದ್ಯೋಗ ಮಾಡುವ ಕುಂಬಾರರು ೧, ಬಡಗಿ ಇಬ್ಬರು ಗ್ರಾಮದಲ್ಲಿದ್ದು ಟೈಲರ್ ಒಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಹೊಸಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಹೊಸಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಹೊಸಕೆರೆ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ೫೦ ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಹೊಸಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೫೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೯.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಹೋಟೆಲ್‌ಗಳು ಹಾಗೂ ೪ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯ, ಜುಂಜಪ್ಪ, ಕರೆತಿಮ್ಮಪ್ಪ, ಶನಿಮಹಾತ್ಮ, ಮಾರಮ್ಮ, ಸಪ್ಲಮ್ಮ ದೇವಾಲಯಗಳಿವೆ. ಮಾರಮ್ಮನ ಜಾತ್ರೆಯನ್ನು ಆರತಿ ಹಾಗೂ ಬಲಿ ಕೊಡುವುದರೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗಂಪಲಹಳ್ಳಿ

ಗಂಪಲಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೬೨.೧೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗಂಪಲು ಎಂದರೆ ತೆಲುಗಿನಲ್ಲಿ ಬುಟ್ಟಿ ಅಥವಾ ತಟ್ಟಿ ಹೆಣೆಯುವ ಜನಾಂಗಿಕ ನೆಲೆಯಾಗಿದ್ದು ತೆಲುಗಿನ ಈ ಶಬ್ಧ ಹಾಗೆಯೇ ಉಳಿದುಕೊಂಡು ಗಂಪಲಪಲ್ಲಿ ಕನ್ನಡದಲ್ಲಿ ಗಂಪಲಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಮೊಲ, ಕಾಡುಹಂದಿ, ಚಿರತೆ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳಗಳಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬ್ರಾಹ್ಮಣ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಶೆಟ್ಟಿ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೨೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೦೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ. ಶೇಂಗಾ, ರಾಗಿ, ಭತ್ತ ಬೆಳೆಗಳಾಗಿವೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ನೇರಳೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ನೆರಳೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಹೊಸಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೯.೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಈಶ್ವರಪ್ಪ, ಆಂಜನೇಯ, ಲಕ್ಷ್ಮಿ, ಕೊಲ್ಲಾಪುರದ ಮಾರಮ್ಮ, ಮುತ್ತುರಾಯ ದೇವಾಲಯಗಳಿವೆ. ಮಾರಮ್ಮನ ಜಾತ್ರೆಯನ್ನು ಬಲಿ ಹಾಗೂ ಹರಕೆಯೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗಡ್ಡೆತಿಮ್ಮನಹಳ್ಳಿ

ಗಡ್ಡೆತಿಮ್ಮನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೩೮.೪೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಮೊಲ, ಚಿರತೆ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳಗಳಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗೊಲ್ಲ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೨೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೫೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೩೧ ಮತ್ತು ಹೆಂಗಸರು ೨೨೧ ಜನ ಗ್ರಾಮದಲ್ಲಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು

ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨೯ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ३೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರೂ ಗ್ರಾಮದಲ್ಲಿದ್ದಾರೆ. ಶೇಂಗಾ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ನೇರಳೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ನೇರಳೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ನೇರಳೇಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೭ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೭.೯%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ३ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯ, ಮುತ್ತುರಾಯ, ಮಾರಮ್ಮ ದೇವಾಲಯಗಳಿವೆ. ಪ್ರತಿ ಶ್ರಾವಣ ಮಾಸದಲ್ಲಿ ಮುತ್ತುರಾಯನ ಜಾತ್ರೆ ಹಾಗೂ ಆಷಾಢ ಮಾಸದಲ್ಲಿ ಮಾರಮ್ಮನ ಜಾತ್ರೆಯನ್ನು ಬಲಿ ಹಾಗೂ ಹರಕೆಯೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗುಡಿರೊಪ್ಪ

ಗುಡಿರೊಪ್ಪ (ಪ್ರಾಚೀನ ಹೆಸರು ಉದುರಿಪಟ್ಟಣ) ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ದಕ್ಷಿಣ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೦೭.೫೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮದ ಭೂ ವಿಸ್ತೀರ್ಣವು ಕಮ್ಮನಕೋಟೆ ವಿಸ್ತೀರ್ಣದಲ್ಲಿ ಸೇರಿದೆ. ಗ್ರಾಮದಲ್ಲಿ ಹರಿಹರೇಶ್ವರನ ಗುಡಿ ಇರುವುದರಿಂದ ಗುಡಿರೊಪ್ಪ ಎಂದು ಕರೆಯುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ३೨ ರಿಂದ ३೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬರು ಹಾಗೂ ನಾಯಕರು ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಒಟ್ಟು ೬೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೬೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನಕವಜ್ರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನಕವಜ್ರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಮಿಡಿಗೇಶಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಹರಿಹರೇಶ್ವರ ಗುಡಿ ಇರುವುದರಿಂದ ಈ ಗ್ರಾಮಕ್ಕೆ ಗುಡಿ ರೊಪ್ಪ ಎಂದು ನಾಮಕರಣ ಮಾಡಲಾಯಿತು. ಕ್ರಿ.ಶ.೬೫೦ ರಲ್ಲಿ ರಾಜ ಚಿಕ್ಕೇಗೌಡ ಆಳ್ವಿಕೆ ಮಾಡುತ್ತಿದ್ದರು. ಈ ಗ್ರಾಮಕ್ಕೆ ಉದುರಿಪಟ್ಟಣ ಎನ್ನುವ ಹೆಸರು ಇತ್ತು. ಈ ಪ್ರದೇಶದಲ್ಲಿ ಯುದ್ಧ ನಡೆದ ಕಾರಣ ಈ ಗ್ರಾಮ ಪತನ ಹೊಂದಿತು ಎಂದು ಹೇಳುತ್ತಾರೆ. ಈ ಗ್ರಾಮದಲ್ಲಿ ವಜ್ರ, ವೈಢೂರ್ಯ ಇನ್ನೂ ಮುಂತಾದ ಬೆಲೆಬಾಳುವ ರತ್ನಗಳನ್ನು ಇಲ್ಲಿಯೇ ಹೂತು ಅದರ ಮೇಲೆ ಗುಡಿ ನಿರ್ಮಾಣ ಮಾಡಿ ಈ ಪ್ರದೇಶವನ್ನು ಬಿಟ್ಟು ಅವರಿಗೆ ಅನುಕೂಲವಾದ ಪ್ರದೇಶಕ್ಕೆ ತೆರಳಿದರು ಎಂದೂ ಸಹ ತಿಳಿದುಬರುತ್ತದೆ.

ಈ ಊರ ದ್ವಾರಬಾಗಿಲಲ್ಲಿ ಉಗ್ರನರಸಿಂಹಸ್ವಾಮಿ ದೇವಸ್ಥಾನ ಭೂಗರ್ಭದಲ್ಲಿ ಮುಚ್ಚಿರುವುದು ಇಂದಿಗೂ ಸಹ ಕಂಡುಬರುತ್ತದೆ. ಹಾಗಾಗಿ ಈ ಗ್ರಾಮವು ಐತಿಹಾಸಿಕ

ನಗರವಾಗಿದೆ. ತುಂಬಾ ಪುರಾತನ ನಗರಗಳ ಸಾಲಿಗೆ ಸೇರುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗುಡಿರೊಪ್ಪ ಜನತಾ ಹೌಸಿಂಗ್ ಕಾಲೋನಿ

ಗುಡಿರೊಪ್ಪ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿಯ ದಕ್ಷಿಣ ದಿಕ್ಕಿನಲ್ಲಿದ್ದು ಗುಡಿರೊಪ್ಪದ ಹೊರವಲಯದಲ್ಲಿದೆ. ಒಟ್ಟು ೩೦ ಮನೆಗಳನ್ನು ಹೊಂದಿದ್ದು ೧೩೫ ಜನಸಂಖ್ಯೆಯನ್ನು ಹೊಂದಿದೆ. ನಾಯಕ, ಆದಿದ್ರಾವಿಡ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಜನತಾ ಯೋಜನೆಯಡಿ ಗ್ರಾಮದಲ್ಲಿ ಮನೆಗಳು ನಿರ್ಮಾಣವಾಗಿವೆ.

ಚಿನಕವಜ್ರ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಮತ್ತು ಕೂಲಿ ಮುಖ್ಯ ಕಸುಬಾಗಿದೆ. ಇಬ್ಬರು ಸಾರಿಗೆ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮದಲ್ಲಿ ಮುತ್ತುರಾಯ ದೇವಾಲಯವಿದೆ. ಮುತ್ತುರಾಯನಿಗೆ ಆರತಿ ಮಾಡುವರು. ಆರತಿಯನ್ನು ಅರೆವಾದ್ಯ, ಕುಣಿತದ ಮೂಲಕ, ನಡೆಮುಡಿಯಲ್ಲಿ ದೇವಸ್ಥಾನಕ್ಕೆ ಕರೆತರುವುದು ಇಲ್ಲಿನ ವಿಶೇಷವಾಗಿದೆ. ದೊಡ್ಡಮಾರಯ್ಯ ಎನ್ನುವವರು ೪೮ ವರ್ಷದವರು ನಾಯಕ ಜನಾಂಗದವರಾಗಿದ್ದು ನಾಟಕ ಕಲಾವಿದರಾಗಿದ್ದಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಗುರ್ರಮ್ಮನಕಟ್ಟೆ

ಗುರ್ರಮ್ಮನಕಟ್ಟೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೮೭.೩೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗುರು ಪರಂಪರೆಯಲ್ಲಿ ಮಹಿಳೆಯರಿಗೂ ಗೌರವ ನೀಡುವ ಕಾರಣದಿಂದ ಗುರುಭಕ್ತಿಯಾಗಿ ಒಂದು ಗೋಕಟ್ಟೆ ಸ್ಥಾಪಿಸಿ ಅದಕ್ಕೆ ಗುರ್ರಮ್ಮನ – ಗುರುವಿನಮ್ಮನ ಕಟ್ಟೆ ಎಂದು ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದ ಸುತ್ತಲೂ ಗುಡ್ಡಗಳಿದ್ದು ಮಧುಗಿರಿ ಬೆಟ್ಟವು ಹೊಂದಿಕೊಂಡಿದೆ. ಆದ ಕಾರಣ ಪ್ರಾಣಿಗಳಾದ ನರಿ, ತೋಳ, ಕರಡಿ, ಚಿರತೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗರುಡ, ಕಾಗೆ ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ, ಒಂದು ಹಳ್ಳ ಹಾಗೂ ಒಂದು ದೊಡ್ಡಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಹಳ್ಳಿಕಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಶೆಟ್ಟಿ ಬಣಜಿಗ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೩೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೧೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೬೩ ಮತ್ತು ಹೆಂಗಸರು ೨೫೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೯ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್, ಆಟೋ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರೂ ಇದ್ದಾರೆ. ತರಕಾರಿ ಗ್ರಾಮದ ವ್ಯಾಪಾರದ ಮುಖ್ಯ ಸರಕಾಗಿದೆ. ಗ್ರಾಮದಲ್ಲಿ ಅರಣ್ಯ ಇಲಾಖೆ ಹಾಗೂ ಪಿಡಬ್ಲ್ಯೂಡಿ ಸೇರಿದಂತೆ ಇಬ್ಬರು ಸರ್ಕಾರಿ ನೌಕರರಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಡಿ.ವಿ. ಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಡಿ.ವಿ. ಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಸಿದ್ದಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೫೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೬.೩೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಅಂಗಡಿಯಿದೆ.

ಗ್ರಾಮದಲ್ಲಿ ಮಾರಮ್ಮನ ದೇವಾಲಯವಿದ್ದು ಪ್ರತಿ ವರ್ಷ ಮಾರ್ಚ್ ತಿಂಗಳಲ್ಲಿ ಜಾತ್ರೆಯನ್ನು ಆರತಿ, ಬಲಿ ಹಾಗೂ ಹರಕೆಯೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗುಂಡ್ಲಹಳ್ಳಿ

ಗುಂಡ್ಲಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೫೫.೬೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗುಂಡುಕಲ್ಲುಗಳಿಂದ ಕೂಡಿದ ಗ್ರಾಮವಾದುದರಿಂದ ನಿಸರ್ಗ ಲಕ್ಷಣವಾಗಿ ಗುಂಡ್ಲಹಳ್ಳಿ ಆಗಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಮತ್ತು ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ಚಿರತೆ, ಕತ್ತೆ ಕಿರುಬ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ, ಮುಸ್ಲಿಂ, ಶೆಟ್ಟಿ ಬಣಜಿಗ ಜನಾಂಗ ಗ್ರಾಮದಲ್ಲಿ ಶೆಟ್ಟಿ ಬಣಜಿಗ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೬೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೩೦ ಜನಸಂಖ್ಯೆ

ಪ್ರಮಾಣವನ್ನು ಹೊಂದಿದೆ. ಗಂಡಸರು ೩೧೮ ಮತ್ತು ಹೆಂಗಸರು ೩೧೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೨೭ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್, ಆಟೋ, ಟೆಂಪೋ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ, ಶೇಂಗಾ, ಜೋಳ, ರೇಷ್ಮೆ, ತೆಂಗು, ಅಡಕೆಯನ್ನು ಬೆಳೆಯುವರು. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿ ಇದೆ. ಗ್ರಾಮದಲ್ಲಿ ಶಿಕ್ಷಣ ಇಲಾಖೆ, ಕೃಷಿ ಇಲಾಖೆ, ಅಂಚೆ ವಿಭಾಗ ಸೇರಿದಂತೆ ೬ ಜನ ಸರ್ಕಾರಿ ನೌಕರರಿದ್ದಾರೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಇಬ್ಬರು ಗುಡಿಕಾರರು, ಒಬ್ಬರು ಚಿತ್ರಕಾರರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಡಿ.ವಿ. ಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಡಿ.ವಿ. ಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೭ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೭.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೧ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯ, ಗುಡ್ಡದ ರಂಗನಾಥ, ಮಾರಮ್ಮ, ಹನುಮ ದೇವಾಲಯಗಳಿವೆ. ಮಾರ್ಚ್‌ನಲ್ಲಿ ಮಾರಮ್ಮ ಜಾತ್ರೆ ಹಾಗೂ ಡಿಸೆಂಬರ್‌ನಲ್ಲಿ ಹನುಮ ಜಯಂತಿಯನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗುಂಡ್ಲಹಳ್ಳಿ ಜನತಾ ಹೌಸಿಂಗ್ ಕಾಲೋನಿ

ಗುಂಡ್ಲಹಳ್ಳಿ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಗುಂಡ್ಲಹಳ್ಳಿಯ ಹೊರವಲಯದಲ್ಲಿದೆ. ಒಟ್ಟು ೪೦ ಮನೆಗಳನ್ನು ಹೊಂದಿದ್ದು ೧೪೦ ಜನಸಂಖ್ಯೆಯನ್ನು ಹೊಂದಿದೆ. ಒಕ್ಕಲಿಗ, ನಾಯಕ, ಆದಿಕರ್ನಾಟಕ, ಆದಿದ್ರಾವಿಡ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ದೊಡ್ಡವೀರಗೊಂಡನಹಳ್ಳಿ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಮತ್ತು ಕೂಲಿ ಮುಖ್ಯ ಕಸುಬಾಗಿದೆ. ಶಿಕ್ಷಣ ಹಾಗೂ ಅಂಚೆ ಇಲಾಖೆಯಲ್ಲಿ ನಾಲ್ವರು ಸೇವೆ ಸಲ್ಲಿಸುತ್ತಿದ್ದಾರೆ.

ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಗೋಪಗೊಂಡನಹಳ್ಳಿ

ಗೋಪಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೬೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೮೮.೪೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗೋಪಾಲಗೌಡ > ಗೋಪಗೌಡ – ಗೋಪಗೊಂಡದಿಂದ ಈ ಗ್ರಾಮಕ್ಕೆ ಗೋಪಗೊಂಡನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಹಾಗೂ ಬಿಳಿ ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಅರಣ್ಯ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ನರಿ, ಕರಡಿ, ತೋಳ, ಚಿರತೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು ಸಾವಿರಕ್ಕೂ ಹೆಚ್ಚು ಹಿಂಡು ಹಿಂಡಾಗಿ ಗ್ರಾಮದಲ್ಲಿ ಕಾಣಸಿಗುತ್ತವೆ. ಉಳಿದಂತೆ ಗಿಳಿ, ಗಿಡುಗ, ಹದ್ದು, ಗೂಬೆ, ಬೆಳ್ಳಕ್ಕಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಹಳ್ಳಿಗೊಂದಿ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೦೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೦೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೦೦ ಮತ್ತು ಹೆಂಗಸರು ೩೦೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೬ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೭ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಮಾಡುವವರ ಸಂಖ್ಯೆ ವಿರಳವಾಗಿದ್ದು ಕೂಲಿ ಮಾಡುವವರ ಸಂಖ್ಯೆ ಅಧಿಕವಾಗಿದೆ. ೮೦% ಜನ ಕೂಲಿ ಮಾಡುವವರಿದ್ದಾರೆ. ಗ್ರಾಮದಲ್ಲಿ ಕೋಳಿಫಾರಂ ಇದ್ದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಕಂಡುಬರುತ್ತದೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಬಡಗಿ ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಮರುವೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಮರುವೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ವಡೇರಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘ ಹಾಗೂ ೨ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೫೫%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಮುತ್ತುರಾಯ, ಮಾರಮ್ಮ, ವೀರಭದ್ರ, ಬೀರೇಪುಟ್ಟೀರಮ್ಮ, ಈಶ್ವರ, ಅಶ್ವತ್ಥಕಟ್ಟೆ ಹಾಗೂ ಚಂದ್ರಶೇಖರ ಗುಡಿ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗಂಜಲಗುಂಟೆ

ಗಂಜಲಗುಂಟೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೦೫.೮೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಪಶು ಮೂಲದ ಗ್ರಾಮವಾಗಿದ್ದು ದನಕರುಗಳು ನೀರು ಕುಡಿಯುವ, ವಿಶ್ರಮಿಸುವ ಊರು ಎಂಬ ಅರ್ಥದಲ್ಲಿ ಗಂಜಲಕುಂಟೆ ಗಂಜಲಗುಂಟೆಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಮಿಶ್ರ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ಕಾಡುಹಂದಿ, ಮೊಲ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಒಂದು ಮರುವೇಕೆರೆ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು, ೪ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೮೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೮೨೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ.  ಗಂಡಸರು ೪೩೨ ಮತ್ತು ಹೆಂಗಸರು ೩೯೭ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ.  ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೫೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೨ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ಭತ್ತ, ರಾಗಿ, ಜೋಳ, ತೆಂಗು ಮತ್ತು ಅಡಿಕೆ ಮುಖ್ಯ ಬೆಳೆಯಾಗಿದೆ. ಹೂವು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಶಿಕ್ಷಣ ಇಲಾಖೆ, ಪೊಲೀಸ್, ವಕೀಲ, ಕೆಎಸ್‌ಆರ್‌ಟಿಸಿ, ಕಂದಾ ಇಲಾಖೆ ಸೇರಿದಂತೆ ೧೦ ಜನ

ಸರ್ಕಾರಿ ನೌಕರರು ಗ್ರಾಮದಲ್ಲಿದ್ದಾರೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಬಡಗಿ ಒಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗಂಜಲಗುಂಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ನಾಲ್ಕು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಇಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗಂಜಲಗುಂಟೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಗಂಜಲಗುಂಟೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೮ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೬೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಎಸ್ಎಸ್ಆರ್ಹೆಚ್ ಎಸ್ ಪಾಠಶಾಲೆ ಇದ್ದು ಒಟ್ಟು ೨೩೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಏಳು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ಹೆಚ್‌ಪಿಎಸ್ ಶಾಲೆ ಇದ್ದು ೯೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಐದು ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೬ ಅಂಗಡಿಗಳಿವೆ. ಗ್ರಾಮದಲ್ಲಿ ಒಂದು ಗ್ರಂಥಾಲಯವಿದ್ದು ೧೦೦೦ ವಿವಿಧ ಪ್ರಕಾರದ ಪುಸ್ತಕಗಳಿವೆ. ಒಬ್ಬರು ಗ್ರಂಥಪಾಲಕರಿದ್ದಾರೆ.

ಗ್ರಾಮದಲ್ಲಿ ಮಾರಮ್ಮ, ಈಶ್ವರ, ಆಂಜನೇಯ, ಗೌರಮ್ಮ, ಸಪ್ಲಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗಿಡ್ಡೇನಹಳ್ಳಿ

ಗಿಡ್ಡೇನಹಳ್ಳಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೫ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೨೯೪.೨೮ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಬಯಲುನಾಡು ಪ್ರದೇಶವಾಗಿದ್ದು ಗಿಡ್ಡಯ್ಯ ಎಂಬ ವ್ಯಕ್ತಿ ಮೂಲದಿಂದಾಗಿ ಗಿಡ್ಡೇನಹಳ್ಳಿ ಎಂದು ಹೆಸರಾಗಿದೆ.

ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಭೂಮಿಯನ್ನು ಹೊಂದಿದೆ. ಕಾಡು ಪ್ರದೇಶವನ್ನು ಗ್ರಾಮವು ಹೊಂದಿಲ್ಲದಿದ್ದರೂ ಕರಡಿ, ನರಿ, ತೋಳ, ಮೊಲ ಹಾಗೂ ಪ್ರಾಣಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ ಮೊದಲಾದವುಗಳು ಕಂಡುಬರುತ್ತವೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಸಿದ್ದಾಪುರ ಗ್ರಾಮ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಒಟ್ಟು ೩೩ ಮನೆಗಳಿದ್ದು ೫೫ ಜನಸಂಖ್ಯೆ ಇದೆ. ಒಕ್ಕಲಿಗ ಹಾಗೂ ತಿಗುಳ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ವ್ಯವಸಾಯ ಮುಖ್ಯ ಕಸುಬಾಗಿದ್ದು ರಾಗಿ, ಭತ್ತ, ಜೋಳ, ಕಡಲೆಕಾಯಿ ಬೆಳೆಯುವರು.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಹಾಗೂ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೬೩% ಇದೆ. ಒಂದು ಅಂಗನವಾಡಿ ಕೇಂದ್ರವಿದ್ದು ಸರ್ಕಾರದ ಸಮುದಾಯ ಸೌಲಭ್ಯಗಳಾದ ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲಾಗುತ್ತಿದೆ. ವೃದ್ಧಾಪ್ಯ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಗುಂಡಗಲ್ಲು

ಗುಂಡಗಲ್ಲು ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ

೨೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೩೭.೪೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಈ ಗ್ರಾಮದ ಪೂರ್ವ ದಿಕ್ಕಿನಲ್ಲಿ ಕುಮುದ್ವತಿ ನದಿಯಿದೆ.

ಗುಂಡು ಕಲ್ಲುಗಳಿಂದ ಕೂಡಿದ ಸ್ಥಳವಾಗಿದ್ದು ಇಲ್ಲಿ ರಚನೆಯಾದ ಗ್ರಾಮಕ್ಕೆ ಗುಂಡಗಲ್ಲು ಎಂದು ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಕೆಂಪು ಮಣ್ಣು ಕಂಡುಬರುತ್ತದೆ. ಸಣ್ಣ ಸಣ್ಣ ಗುಡ್ಡಗಳು ಮತ್ತು ಅಲ್ಲಲ್ಲಿ ಅಡಿಕೆ, ತೆಂಗು ತೋಟಗಳನ್ನು ಕಾಣಬಹುದು. ಅರಳಿ ಮರ, ಮಾವು, ಹೊಂಗೆ ಇತ್ಯಾದಿ ಮರಗಳನ್ನು ಕಾಣಬಹುದು.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ಹಾವುಗಳು ಕಂಡುಬರುತ್ತದೆ. ಪಕ್ಷಿಗಳಾದ ಗೀಜುಗ, ಗಿಳಿ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಗ್ರಾಮದಲ್ಲಿನ ಕೆರೆಯಲ್ಲಿ ಒಂದು ದೊಡ್ಡದಾದ ಗುಂಡುಕಲ್ಲು ಇರುವುದರಿಂದ ಈ ಗ್ರಾಮಕ್ಕೆ ಗುಂಡಗಲ್ಲು ಎಂದು ಕರೆಯುತ್ತಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೬ ಸಾರ್ವಜನಿಕ ನಲ್ಲಿಗಳು, ೨ ಟ್ಯಾಂಕ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ರೆಡ್ಡಿ, ಬೋವಿ, ಕುಂಚಿಟಿಗ, ಕುರುಬರು, ಆದಿದ್ರಾವಿಡರು, ಭಜಂತ್ರಿ, ಒಕ್ಕಲಿಗ, ಶೆಟ್ಟಿಬಣಜಿಗ, ಈಡಿಗ ಸಮುದಾಯವರಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೬೮೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೫೪೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೨೪೨ ಮತ್ತು ಹೆಂಗಸರು ೧೩೦೫ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೧೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್, ಕಾರು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಮತ್ತು ತೆಂಗು ಬೆಳೆಯಲಾಗುತ್ತಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ.

ವಿದ್ಯುತ್ ಇಲಾಖೆ, ಸೈನಿಕರು, ಬಿಇಓ, ಶಿಕ್ಷಣ ಇಲಾಖೆ ಹಾಗೂ ಸಾರಿಗೆ ಇಲಾಖೆಗಳಿಗೆ ಸೇರಿದ ಒಟ್ಟು ೧೦ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ೩ ಜನ ಇದ್ದಾರೆ. ಬಿಇಓ ರಂಗನಾಥ್ ಇದೇ ಗ್ರಾಮದವರು.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕಲಿದೇವರಹಳ್ಳಿ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಮೂವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ.

ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕಲಿದೇವರಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೨ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಹಾಗೂ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೭೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೫೩%. ಸರ್ಕಾರಿ ಪ್ರೌಢಶಾಲೆಯಲ್ಲಿ ೧೨೭ ಮಕ್ಕಳು ೮ ಶಿಕ್ಷಕರು ಇದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ ಮತ್ತು ಟೀ ದೊರೆಯುವ ೨ ಹೋಟೆಲ್‌ಗಳು ಹಾಗೂ ೩ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ನ್ಯಾಯಬೆಲೆ ಅಂಗಡಿ, ಡಿಎಸ್‌ಎಸ್ ಕಟ್ಟಡ, ಎಎನ್‌ಎಮ್ ಕ್ವಾರ್ಟಸ್‌ರ್, ಸಮುದಾಯ ಭವನವಿದೆ.

ಗ್ರಂಥಾಲಯವಿದ್ದು ೧೦೫೮ ಪುಸ್ತಕಗಳು, ಒಬ್ಬರು ಗ್ರಂಥಪಾಲಕರಿದ್ದಾರೆ.

ಗ್ರಾಮದಲ್ಲಿ ಮಾರಮ್ಮ, ತಿಮ್ಮಪ್ಪ, ಶ್ರೀರಾಮ, ಪಾತಾಲಮ್ಮ ದೇವಾಲಯಗಳಿವೆ. ನಾಗರಕಟ್ಟೆಗಳಿವೆ. ಪ್ರತಿ ವರ್ಷ ಮಾರಮ್ಮನ ಜಾತ್ರೆ ನಡೆಯುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮುಸ್ಲಿಂ ಬಾಂಧವರು ಮುಸ್ಲಿಂ ಹಬ್ಬಗಳನ್ನು ಆಚರಿಸುತ್ತಾರೆ.

## ಗುಟ್ಟೆ

ಗುಟ್ಟೆ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೫೭.೭೮ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಚಂದ್ರಗಿರಿ ಭೂ ವಿಸ್ತೀರ್ಣದಲ್ಲಿ ಸೇರಿದೆ. ಈ ಗ್ರಾಮದಲ್ಲಿ ಚಿಕ್ಕ ಗುಟ್ಟೆಗಳು, ಬಂಡೆಗಳು ಇರುವ ಕಾರಣವಾಗಿ ಈ ಗ್ರಾಮಕ್ಕೆ ಗುಟ್ಟೆ ಎಂದು ನಾಮಕರಣ ಮಾಡಲಾಗಿದೆ ಎಂದು ಹಿರಿಯರು ಹೇಳುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪುಮಿಶ್ರಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದಲ್ಲಿ ಗುಟ್ಟೆಗಳು ಕಂಡುಬರುತ್ತವೆ.

ಈ ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕರಡಿ, ನರಿ, ತೋಳ, ಕತ್ತೆಕಿರುಬ ಪ್ರಾಣಿಗಳು ಕಂಡುಬರುತ್ತವೆ.

ಪಕ್ಷಿಗಳಾದ ಗಿಳಿ, ನವಿಲು, ಮರಕುಟಿಕ, ಗುಬ್ಬಚ್ಚಿ, ಕಾಗೆ ಮೊದಲಾದ ಪಕ್ಷಿಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಗ್ರಾಮದಲ್ಲಿ ನಾಟಿಹಸು, ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೩ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಬಡವನಹಳ್ಳಿ ಹಳ್ಳವಿದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ಮಳೆಗಾಲದಲ್ಲಿ ನೀರನ್ನು ಒದಗಿಸುತ್ತದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಕ್ಕಿಂತ ಹೆಚ್ಚು ಸಾರ್ವಜನಿಕ ನಲ್ಲಿಗಳಿವೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗೊಲ್ಲ ಜನಾಂಗದವರು ಕಿರು ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೫೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೬೩ ಜನಸಂಖ್ಯೆ

ಪ್ರಮಾಣವನ್ನು ಹೊಂದಿದೆ. ಅದರಲ್ಲಿ ೨೮೦ ಗಂಡು ಮತ್ತು ೨೮೩ ಜನ ಹೆಂಗಸರು ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆಗಳಿವೆ. ರಾಗಿ ಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ನಾಲ್ಕು ಸಾಂಪ್ರದಾಯಿಕ ಎತ್ತಿನ ಗಾಡಿಗಳಿದ್ದು ನಾಲ್ಕು ಟ್ರ್ಯಾಕ್ಟರ್ ಹಾಗೂ ೫೦ ಕ್ಕೂ ಹೆಚ್ಚು ಆಧುನಿಕ ವಾಹನವಾದ ದ್ವಿಚಕ್ರ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಯನ್ನು ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆಯನ್ನು ಹೊಂದಿದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು ಬೆಳೆಯುತ್ತಾರೆ. ಅಡಿಕೆ ಮತ್ತು ಹೂವು ಗ್ರಾಮ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳವಿದ್ದರೂ ನೀರಿಲ್ಲದ ಕಾರಣ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಗ್ರಾಮದಲ್ಲಿ ಅತಿ ಹೆಚ್ಚಾಗಿ ಕೂಲಿ ಮಾಡುವವರಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವವರು ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಚಂದ್ರಗಿರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಂದ್ರಗಿರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಜಕ್ಕೇನಹಳ್ಳಿ ಅಂಚೆ ಕಛೇರಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ನೂರಕ್ಕೂ ಹೆಚ್ಚು ಚರ ದೂರವಾಣಿ ದೂರಸಂಪರ್ಕ ಸಾಧನಗಳಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ಬಡವನಹಳ್ಳಿ ಪೊಲೀಸ್ ಠಾಣಾ ಮುಖೇನ ಬಗೆಹರಿಯುತ್ತದೆ. ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ತಾಲ್ಲೂಕಿನ ಮಧುಗಿರಿಗೆ ಸಾಗುತ್ತವೆ. ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಹಾಗೂ ಒಬ್ಬರು ಸಹಾಯಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೪೭.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ೪ ಅಂಗಡಿಗಳು ಹಾಗೂ ೨ ಹೋಟೆಲ್‌ಗಳಿವೆ.

ಗ್ರಾಮದಲ್ಲಿ ಒಂದು ಐತಿಹಾಸಿಕ ಪ್ರತಿಮೆಯಾದ ಒಂದು ಕೋಟೆ ಇದೆ. ಗ್ರಾಮದಲ್ಲಿ ನಾಲ್ಕು ದೇವಾಲಯಗಳಿವೆ. ಬಸವಣ್ಣ, ಶನಿಮಹಾತ್ಮ, ಮುತ್ತುರಾಯ ಮತ್ತು ಮಾರಮ್ಮ ದೇವಸ್ಥಾನಗಳಿದ್ದು ಪ್ರತಿವರ್ಷ ಮಾರಮ್ಮನ ಜಾತ್ರೆಯನ್ನು ಹರಕೆ ಹಾಗೂ ಬಲಿ ಕೊಡುವ ಆಚರಣೆಯೊಂದಿಗೆ ಆಚರಿಸುವರು. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗೌತಮನಗರ

ಗೌತಮನಗರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿನಲ್ಲಿ ೩೨ ಕಿ.ಮೀ. ದೂರದಲ್ಲಿದೆ. ಪರ್ತಿಹಳ್ಳಿ ಮಜರೆಗೆ ಸೇರಿದೆ. ಆಧುನಿಕ ಅಂಬೇಡ್ಕರ್ ಎಂದು ಹೆಸರಾದ ದಿ॥ ಪಿ.ನರಸಿಂಹಯ್ಯರ ಶ್ರಮದ ಹೋರಾಟದಿಂದ ೧೯೮೪ ರಲ್ಲಿ ಗೌತಮನಗರ ಗ್ರಾಮವು ಕಡಗತ್ತೂರು ಗ್ರಾಮಪಂಚಾಯ್ತಿ ವ್ಯಾಪ್ತಿಯಲ್ಲಿ ಸ್ಥಾಪಿಸಲಾಯಿತು.

ಇದು ಬಯಲುಸೀಮೆಯ ಪ್ರದೇಶವಾಗಿದೆ. ಗ್ರಾಮಕ್ಕೆ ಕೆರೆಯಿಲ್ಲ. ಆದರೆ ಒಂದು ಕುಂಟೆ ಇದೆ. ಗ್ರಾಮದಲ್ಲಿ ಭೌಗೋಳಿಕವಾಗಿ ಸುತ್ತಲೂ ಪ್ರದೇಶದಲ್ಲಿ ಕೆಂಪು ಮಣ್ಣು ಇದೆ. ಗೌತಮನಗರ ಗ್ರಾಮದಲ್ಲಿ ಪ್ರಧಾನ ಸಮುದಾಯವು ಆದಿಕರ್ನಾಟಕ ಜನಾಂಗದವರಾಗಿದ್ದಾರೆ. ಲಿಂಗಾಯಿತ,

ನಾಯಕ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳು ಬಳಕೆಯಲ್ಲಿವೆ.

ವಾರ್ಷಿಕವಾಗಿ ೪೫೩.೭ ಮಿಮೀ ಮಳೆ ಪ್ರಮಾಣವಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ರಾಗಿ, ಮುಸುಕಿನಜೋಳ ಪ್ರಧಾನವಾದ ಬೆಳೆಯಾಗಿದೆ. ಅವರೆ, ಉದ್ದು, ತೊಗರಿ, ಅಲಸಂದೆ ಉಪಬೆಳೆಗಳಾಗಿವೆ.

ಗ್ರಾಮದ ಮುಖ್ಯವಾದ ಆಹಾರವು ರಾಗಿಮುದ್ದೆಯಾಗಿದೆ. ಚಪಾತಿ, ಅನ್ನ, ಉಪ್ಪಿಟ್ಟು, ಮುಸುಕಿನಜೋಳದ ರೊಟ್ಟಿ ಅಮುಖ್ಯ ಆಹಾರವಾಗಿದೆ. ಹೋಳಿಗೆ, ಕಡುಬು, ಬಾಡೂಟವು ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ಒಟ್ಟು ೬೨ ಮನೆಗಳು, ೨೫೦ ಜನಸಂಖ್ಯೆ ಇದೆ. ಕಾಂಕ್ರೀಟ್ ಮನೆಗಳು, ಮಣ್ಣಿನ ಮನೆ, ಗುಡಿಸಲು ಮನೆ, ಹೆಂಚಿನ ಮನೆ, ಶೀಟಿನ ಮನೆಗಳು ಇವೆ. ಗ್ರಾಮದಲ್ಲಿ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಹೆಚ್ಚು ಇದ್ದಾರೆ. ೧೨ ಮನೆಗಳಲ್ಲಿ ಶೌಚಾಲಯ ಸೌಲಭ್ಯ ಹೊಂದಿದೆ. ಅಂಬೇಡ್ಕರ್ ವಸತಿ ಯೋಜನೆಯಲ್ಲಿ ೪೨ ಫಲಾನುಭವಿಗಳಿದ್ದಾರೆ.

ಈ ಗ್ರಾಮದ ರಸ್ತೆಯು ಜಲ್ಲಿ ರಸ್ತೆಯಾಗಿದೆ. ಇಲ್ಲಿಗೆ ಬಸ್ ಸಂಚಾರದ ನೇರ ಸೌಲಭ್ಯವಿಲ್ಲವಾಗಿದೆ. ಗ್ರಾಮದಲ್ಲಿ ಸೈಕಲ್‌ಗಳಿವೆ. ಗ್ರಾಮದಲ್ಲಿ ಕುರುಚಲು ಪೊದೆಗಳಲ್ಲಿ ಕಾಡುಮೊಲ, ಕಾಡುಹಂದಿ, ನರಿ ಮುಂತಾದ ಪ್ರಾಣಿಗಳಿವೆ. ಅಲ್ಲದೆ ಕೌಜುಗ, ಗೊರವಂಕ, ಬೆಳವ ಮುಂತಾದ ಪಕ್ಷಿಗಳಿವೆ. ಗ್ರಾಮದಲ್ಲಿ ನಾಟಿಹಸು, ನಾಟಿ ಎತ್ತು, ಸೀಮೆಹಸು, ಎಮ್ಮೆ, ಕುರಿ, ಮೇಕೆಗಳು ಸಾಕುಪ್ರಾಣಿಗಳಾಗಿವೆ. ಕೋಳಿಗಳು ಮತ್ತು ಹುಂಜಗಳು ಸಾಕು ಪಕ್ಷಿಗಳಾಗಿವೆ. ಗ್ರಾಮಸ್ಥರು ತಮ್ಮ ಹಸು, ಎಮ್ಮೆಗಳಿಂದ ಸಂಗ್ರಹಿಸಿದ ಹಾಲನ್ನು ಮಿನಿ ಡೈರಿಗೆ ತಲುಪಿಸುವರು.

ಗ್ರಾಮದಲ್ಲಿನ ಕುರಿ, ಮೇಕೆಗಳ ಸಂತತಿ ಬೆಳೆದಂತೆ ಮಾರಾಟ ಮಾಡುತ್ತಾರೆ. ಅಷ್ಟೇ ಅಲ್ಲದೆ ಕೋಳಿಗಳು ಮತ್ತು ಹುಂಜಗಳನ್ನು ಮಾರಾಟ ಮಾಡುತ್ತಾರೆ.

ಈ ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ೨೮ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಅಂಗನವಾಡಿಯಲ್ಲಿ ೧೨ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕಿ ಇದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೯.೨%. ಎರಡು ಸ್ತ್ರೀಶಕ್ತಿ ಸಂಘಗಳು, ಒಂದು ಕಿರಾಣಿ ಅಂಗಡಿ ಗ್ರಾಮದಲ್ಲಿವೆ. ಗ್ರಾಮದಲ್ಲಿ ೨ ಜನ ಅಂಗವಿಕಲರು ಕಂಡುಬರುತ್ತಾರೆ.

ಈ ಗ್ರಾಮದಲ್ಲಿ ಯುಗಾದಿ, ಶ್ರೀರಾಮನವಮಿ, ಶಿವರಾತ್ರಿ, ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಗ್ರಾಮದಲ್ಲಿ ಭಕ್ತಿಯ ಆಚರಣೆ ಕಾಣಬಹುದು. ಗೌತಮನಗರ ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರಕ್ಕೆ ಕಡಗತ್ತೂರು ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ ಮತ್ತು ಗ್ರಾಮ ಪಂಚಾಯ್ತಿ ಕ್ಷೇತ್ರಕ್ಕೆ ಪರ್ತಿಹಳ್ಳಿ ಮಜರೆ ವ್ಯಾಪ್ತಿಗೆ ಸೇರಿದೆ. ಅಲ್ಲದೆ ಈ ಗ್ರಾಮವು ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ.

ಗ್ರಾಮದಲ್ಲಿ ರಾಜರಾಜೇಶ್ವರಿ ದೇವಸ್ಥಾನ ಹಿಂದೆ ಈ ಗ್ರಾಮ ಸ್ಥಾಪನೆಗೆ ಮುನ್ನ ನಿರ್ಮಾಣವಾಗಿತ್ತೆಂದು ಗ್ರಾಮಸ್ಥರು ಹೇಳುತ್ತಾರೆ.

## ಗಿಡ್ಡಯ್ಯನಪಾಳ್ಯ

ಗಿಡ್ಡಯ್ಯನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ಗಂಕಾರನಹಳ್ಳಿಯ ೧೪೩.೦೨ ಹೆಕ್ಟೇರ್‌ನಲ್ಲಿರುವ ಮಜರೆ ಗ್ರಾಮವಾಗಿದೆ. ವ್ಯಕ್ತಿಮೂಲದ ಹೆಸರಿನಿಂದ ಗ್ರಾಮ ರಚನೆಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಹಲಸು, ಮಾವು, ಅರಳಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಕೃಷ್ಣಮೃಗ, ನರಿ, ಮೊಲ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೭೦ ಎಮ್ಮೆ, ೮೭ ಕುರಿ, ೬೫ ಮೇಕೆಗಳನ್ನು ಸಾಕಿದ್ದಾರೆ. ೭೨ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಜಯಮಂಗಲಿ ನದಿಯಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ತಿಗುಳ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ದಾಸರು, ಸಾದಗೌಡ್ರು, ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೯೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೨೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಆಹಾರ ಬೆಳೆಯಾಗಿದೆ. ತೊಗರಿ, ಅವರೆ, ಶೇಂಗಾ, ಬಾಳೆ, ಅಡಿಕೆ, ದಾಳಿಂಬೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಶಿಕ್ಷಣ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಒಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಪುರವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಪುರವರದಲ್ಲಿ ಪಂಚಾಯಿತಿ ಕಾರ್ಯಾಲಯವಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಪುರವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಪುರವರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೬೦.೪೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಸಪ್ಲಮ್ಮ, ನರಸಿಂಹಸ್ವಾಮಿ ದೇವಾಲಯಗಳಿವೆ. ಹರಕೆ ಹೊರುವ, ಬಲಿ ನೀಡುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಸಪ್ಲಮ್ಮ ದೇವರಿಗೆ ಆರತಿ ಮಾಡುವರು.

## ಗಂಕಾರನಹಳ್ಳಿ

ಗಂಕಾರನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೩.೦೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮ ಸಂಸ್ಕೃತಿಯಲ್ಲಿ ಗ್ರಾಮದಲ್ಲಿ ೧೨ ಜನ ಕೈವಾಡದವರು ಇರುತ್ತಾರೆ. ಗೌಡ, ಶಾನುಭೋಗ

ಇವರಲ್ಲಿ ಗಂಕಾರರೂ ಒಂದು ವಿಧ. ಗಂಕಾರ ವ್ಯಕ್ತಿಯಿಂದ ಗ್ರಾಮ ರಚನೆಯಾಗಿ ಗಂಕಾರನಹಳ್ಳಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಹಲಸು, ಮಾವು, ಅರಳಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಕೃಷ್ಣಮೃಗ, ನರಿ, ಮೊಲ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ರಾಮದೇವರ ತೋಪು ಇದೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಜಯಮಂಗಲಿ ನದಿಯಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಸಾದರು ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಕುಂಬಾರ, ಮಡಿವಾಳ, ಭಜಂತ್ರಿ, ನಾಯಕ, ಬೋವಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೨೬೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೦೭೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೩೯ ಮತ್ತು ಹೆಂಗಸರು ೫೩೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೮ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೫೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತಾರೆ. ರಾಗಿ, ಮೆಕ್ಕೆಜೋಳ, ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಡಿಕೆ, ಶೇಂಗಾ, ಬಾಳೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಕಂಬಾರರು, ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಪುರವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಪುರವರದಲ್ಲಿ ಪಂಚಾಯಿತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಪುರವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಪುರವರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೫೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೭.೫೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕಾಫಿ-ಟೀ ದೊರೆಯುವ ೩ ಹೋಟೆಲ್‌ಯಿದ್ದು ೪ ಅಂಗಡಿಗಳಿವೆ. ಹನುಮಂತಪ್ಪ ಎಂಬ ೬೫ ವರ್ಷದ ಕುಂಬಾರರು ೪೫ ವರ್ಷಗಳಿಂದ ಗಣಪತಿ ವಿಗ್ರಹ ತಯಾರಿಸುತ್ತಿದ್ದಾರೆ.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ, ವೆಂಕಟರಮಣಸ್ವಾಮಿ, ಈಶ್ವರ ಮುಂತಾದ ಪ್ರಸಿದ್ಧ ದೇವಾಲಯಗಳಿವೆ. ನಾಗರಕಟ್ಟೆಗಳಿವೆ. ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗೋವಿಂದನಹಳ್ಳಿ

ಗೋವಿಂದನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೦೧.೪೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ವ್ಯಕ್ತಿಮೂಲದಿಂದ ಈ ಗ್ರಾಮಕ್ಕೆ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚುಕಲ್ಲುಗಳಿಂದ ಕೂಡಿರುವ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ಗ್ರಾಮದಲ್ಲಿ ಹೆಚ್ಚಿನ ಕುಡಿಯುವ ನೀರಿನ ಬಾವಿಗಳಿದ್ದು ಇಂದು ಕೆಲವೇ ಬಾವಿಗಳು ಕಾಣಸಿಗುತ್ತವೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೪೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೦೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೦೪ ಮತ್ತು

ಹೆಂಗಸರು ೧೦೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಸಾರಿಗೆ ಇಲಾಖೆಗಳಿಗೆ ಸೇರಿದ ಮೂರು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಒಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡ್ಲಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡ್ಲಾಪುರ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡ್ಲಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡ್ಲಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೯ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೪.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೧ ಹೋಟೆಲ್‌ಯಿದ್ದು ೨ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ೧ ಕರುಗಲ್ಲು ಇದೆ.

ಗ್ರಾಮದಲ್ಲಿ ಮಾರಮ್ಮದೇವಿ, ದೊಡ್ಡಮ್ಮ, ಚಿಕ್ಕಮ್ಮ, ಆಂಜನೇಯ, ಕರೆತಿಮ್ಮಪ್ಪ, ಮಾರಮ್ಮ, ದೊಡ್ಡಮ್ಮ, ಚಿಕ್ಕಮ್ಮ ದೇವಾಲಯಗಳಿವೆ. ನಾಗರಕಟ್ಟೆ ಕಂಡುಬರುತ್ತದೆ. ಪ್ರತಿ ವರ್ಷ ಅದ್ಧೂರಿಯಾಗಿ ಜಾತ್ರೆ ನಡೆಯುತ್ತದೆ. ಅಂದು ಊರಿನ ತುಂಬ ದೇವರ ಉತ್ಸವ ನಡೆಯುತ್ತದೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಬಲಿ ಹಾಗೂ ಹರಕೆಯೊಂದಿಗೆ ಮಾರಮ್ಮನ ಹಬ್ಬವನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗಿರೇಗೌಡನಹಳ್ಳಿ

ಗಿರೇಗೌಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ

೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೧೧.೭೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಹೊಂಗೆ, ಮಾವು, ಹಲಸು, ಅಕೇಶಿಯಾ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಕೋಗಿಲೆ, ಗಿಳಿ, ಪಾರಿವಾಳ, ಹದ್ದು, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆ, ಹಂದಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ ಆದಿಕರ್ನಾಟಕ, ಕುರುಬ, ಲಂಬಾಣಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು, ಲಂಬಾಣಿ ಭಾಷೆ ಬಳಕೆಯಲ್ಲಿದೆ.

ಒಟ್ಟು ೩೨೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೩೨೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೬೯೮ ಮತ್ತು ಹೆಂಗಸರು ೬೨೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ಶೇಂಗಾ, ಸೂರ್ಯಕಾಂತಿ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಸಾರಿಗೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಮೂವರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬ್ರಹ್ಮಸಮುದ್ರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬ್ರಹ್ಮಸಮುದ್ರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ

ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡ್ಲಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೯೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೧೯%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಸಮುದಾಯಭವನ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇದೆ. ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಹೊಂದಿರುವ ಒಂದು ಗ್ರಂಥಾಲಯವಿದ್ದು ಅದರ ನಿರ್ವಹಣೆಗೆ ಒಬ್ಬರು ಗ್ರಂಥಪಾಲಕರನ್ನು ನೇಮಿಸಲಾಗಿದೆ. ಕಾಫಿ ಮತ್ತು ಟೀ ದೊರೆಯುವ ೩ ಹೋಟೆಲ್ ಇದ್ದು ೫ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಬ್ಯಾಟರಾಯಪ್ಪನ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗೊಂದಿಹಳ್ಳಿ

ಗೊಂದಿಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೮೭.೪೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಕೋಡ್ಲಾಪುರದ ಕೆರೆಯ ಕೋಡಿಯ ಭಾಗದ ಒಂದು ಕಿರಿದಾದ ಸ್ಥಳದಲ್ಲಿ ಗ್ರಾಮ ನಿರ್ಮಾಣವಾದುದರಿಂದ ಚಿಕ್ಕ ಸ್ಥಳ, ಕಿರಿದಾದ ಜಾಗ ಕಾರಣದಿಂದ ಗೊಂದಿಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಅರಳಿ, ಹೊಂಗೆ, ಬೇವು, ತಾರೆ, ನೇರಳೆ, ಹುಣಸೆ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಕೃಷ್ಣಮೃಗ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗರುಡ, ಕೋಗಿಲೆ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆ, ಹಂದಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ, ಮುಸ್ಲಿಂ, ಒಕ್ಕಲಿಗ, ರೆಡ್ಡಿ, ನಾಯಕ, ಬ್ರಾಹ್ಮಣ, ಮಡಿವಾಳ, ಈಡಿಗ, ವಿಶ್ವಕರ್ಮ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಹಾಗೂ ಉರ್ದು ಮಾತನಾಡುವವರಿದ್ದಾರೆ.

ಒಟ್ಟು ೩೯೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೮೩೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೮೯೫ ಮತ್ತು

ಹೆಂಗಸರು ೯೩೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೫೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಮುಸುಕಿನಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ಶೇಂಗಾ, ದಾಳಿಂಬೆ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಸಾರಿಗೆ, ವಿದ್ಯುತ್, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೬ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ೧೧೬ ಮಕ್ಕಳಿದ್ದಾರೆ. ಇಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೯೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಆರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಉರ್ದು ಹಿರಿಯ ಪಾಠಶಾಲೆಯಲ್ಲಿ ೬೮ ವಿದ್ಯಾರ್ಥಿಗಳು, ೩ ಶಿಕ್ಷಕರಿದ್ದಾರೆ. ಸುವರ್ಣಮುಖಿ ಸನಿವಾಸ ಪ್ರೌಢಶಾಲೆಯಲ್ಲಿ ೧೫೨ ವಿದ್ಯಾರ್ಥಿಗಳು, ೮ ಶಿಕ್ಷಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೬೫.೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಸಮುದಾಯಭವನ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇದೆ. ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಹೊಂದಿರುವ ಒಂದು ಗ್ರಂಥಾಲಯವಿದ್ದು ಅದರ ನಿರ್ವಹಣೆಗೆ ಒಬ್ಬರು ಗ್ರಂಥಪಾಲಕರನ್ನು ನೇಮಿಸಲಾಗಿದೆ. ಕಾಫಿ ಮತ್ತು ಟೀ ದೊರೆಯುವ ೪ ಹೋಟೆಲ್ ಇದ್ದು ೫ ಅಂಗಡಿಗಳಿವೆ. ನ್ಯಾಯಬೆಲೆ ಅಂಗಡಿ ಇದೆ. ಹೂವಿನ ಮಂಡಿಯಿದೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪಶು ಆಸ್ಪತ್ರೆ ಇದೆ. ಊರಿನ ಇಕ್ಕೆಲಗಳಲ್ಲಿ ೨ ಶಿಲೆಗಳು ದೊರೆತಿವೆ. ಆ ಶಿಲೆಗಳಲ್ಲಿ ಬಸವ, ಲಿಂಗ ಪೂರ್ಣಚಂದ್ರ, ಅರ್ಧಚಂದ್ರ ಇನ್ನೂ ಗುರುತಿಸದ ೨ ಚಿತ್ರಗಳನ್ನು ಒಳಗೊಂಡ ಶಿಲ್ಪಕಲೆಗಳಿರುವ ಶಿಲೆಗಳಿವೆ. ಇಲ್ಲಿನ ಗೊಂದಿಹಳ್ಳಿ ಆಂಜನೇಯ ಸ್ವಾಮಿ ದನಗಳ ಭಾರೀ ಜಾತ್ರೆ, ಕಲ್ಲುಗಾಲಿ ರಥೋತ್ಸವ ನಡೆಯುತ್ತದೆ. ಜೂನ್

ತಿಂಗಳಲ್ಲಿ ಜಾತ್ರೆ ನಡೆಯುತ್ತದೆ. ೧ ಮಸೀದಿ, ಪಾಳುಬಿದ್ದ ಈಶ್ವರನ ಗುಡಿ (ಪಾತಾಳೇಶ್ವರ) ಇದೆ. ಕದರೆ ಕಂಬ, ಕರುಗಲ್ಲು ಇದೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ ಪ್ರಸಿದ್ಧ ದೇವಾಲಯವಾಗಿದೆ. ಉಳಿದಂತೆ ಮಾರಮ್ಮ, ಶನಿಮಹಾತ್ಮ ದೇವಾಲಯಗಳು ಕಂಡುಬರುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಮತ್ತು ಮುಸ್ಲಿಂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗಿರಿಯಮ್ಮನಪಾಳ್ಯ

ಗಿರಿಯಮ್ಮನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೦೫.೩೫ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮವು ಅವರಗಲ್ಲು ಭೂವಿಸ್ತೀರ್ಣಕ್ಕೆ ಸೇರಿಕೊಂಡಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಶೆಟ್ಟಿಬಣಜಿದ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬುಡಬುಡಿಕೆ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರೂ ಗ್ರಾಮದಲ್ಲಿರುವರು.

ಒಟ್ಟು ೭೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೯೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಗಂಡಸರು ೧೮೦ ಜನ ಹಾಗೂ ಹೆಂಗಸರು ೧೧೦ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ತೆಂಗು ಹಾಗೂ ಮೊಗ್ಗು ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಹೊಸಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಹೊಸಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಹೊಸಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೫೬.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಅಂಗಡಿ ಹಾಗೂ ಸಮುದಾಯ ಭವನಗಳಿವೆ.

ಗ್ರಾಮದಲ್ಲಿ ತಿಮ್ಮಪ್ಪ ಹಾಗೂ ಮುತ್ತುರಾಯ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗಿರಿಯಮ್ಮನಪಾಳ್ಯ

ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೪೭.೬೩ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಗಿರಿಯಮ್ಮ ಎಂಬ ಸ್ತ್ರೀಮೂಲದಿಂದ ಗ್ರಾಮಕ್ಕೆ ಗಿರಿಯಮ್ಮನಹಳ್ಳಿ ಎಂದು ಹೆಸರಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಮೊಲ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ.

೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ.

ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧ ಕೊಳವೆಬಾವಿ, ೧೦ ಸಾರ್ವಜನಿಕ ನಲ್ಲಿಗಳಿವೆ. ಒಕ್ಕಲಿಗ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ.

ಒಟ್ಟು ೩೧ ಮನೆಗಳನ್ನು ಹೊಂದಿರುವ ಗ್ರಾಮವು ೧೨೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಇಟ್ಟಿಗೆ ಹಾಗೂ ಗುಡಿಸಲು ಮನೆಗಳಿವೆ. ಗ್ರಾಮದಲ್ಲಿ ಆಶ್ರಯ ಯೋಜನೆ, ಜನತಾ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ಕೆಲವು ಮನೆಗಳು ನಿರ್ಮಾಣವಾಗಿವೆ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ.

ಸಾಂಪ್ರದಾಯಿಕ ಎತ್ತಿನ ಗಾಡಿ ಗ್ರಾಮದಲ್ಲಿ ಆಧುನಿಕ ವಾಹನಗಳಾದ ಬೈಕ್‌ಗಳಿವೆ. ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆಗಳಾಗಿವೆ. ಗ್ರಾಮದಲ್ಲಿ ೧೧ ಮನೆಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ.

ವ್ಯವಸಾಯ ಮುಖ್ಯ ಕಸುಬಾಗಿದ್ದು ರಾಗಿ, ಭತ್ತ, ಜೋಳ, ಅಡಿಕೆ, ತೆಂಗು ಬೆಳೆಯುವರು. ಉಳಿದಂತೆ ತೊಗರಿ, ಅಲಸಂದೆ, ಕಡಲೇಕಾಯಿ ಬೆಳೆಯುತ್ತಾರೆ. ರಾಗಿ, ಕಡಲೇಕಾಯಿ ಗ್ರಾಮದ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ. ಶಿಕ್ಷಣ, ಸಾರಿಗೆ ಇಲಾಖೆಯಲ್ಲಿ ೩ ಜನ ಸೇವೆ ಸಲ್ಲಿಸುತ್ತಿದ್ದಾರೆ.

ಮಧುಗಿರಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದೊಡ್ಡೇರಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡೇರಿ ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿಯು ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ದೊಡ್ಡೇರಿ ಅಂಚೆ ಸಂಪರ್ಕವನ್ನು ಒದಗಿಸುತ್ತದೆ. ಚರ ದೂರವಾಣಿಗಳು ಗ್ರಾಮದಲ್ಲಿವೆ. ೧ ಸ್ತ್ರೀಶಕ್ತಿ ಸಂಘ, ೧ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪೂರಕವಾಗಿವೆ.

ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೬೪.೧%. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ. ಜ್ವರ, ಕೆಮ್ಮು, ಮಲೇರಿಯಾ ಮುಖ್ಯವಾಗಿ ಗ್ರಾಮದಲ್ಲಿ ಕಾಣಿಸಿಕೊಳ್ಳುವ ರೋಗಗಳಾಗಿವೆ.

ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಗಿರೆಗೊಂಡನಹಳ್ಳಿ

ಗಿರೆಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೪.೮೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿ–ಬಿಳಿ ಕಲ್ಲುಗಳಿಂದ ಕೂಡಿದ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ಕಾಡುಹಂದಿ, ಮೊಲ, ಚಿರತೆ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ನವಿಲು, ಗಿಳಿ, ಬೆಳವ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಊರ ಮುಂದಲ ಹಳ್ಳ ಹಾಗೂ ಒಂದು ಕುಂಟೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಯಳವ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೯೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೧೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೫೫ ಮತ್ತು ಹೆಂಗಸರು ೨೫೭ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಗುಡಿಸಲು ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನಗಾಡಿ, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಲಸಂದೆ ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಗ್ರಾಮದಲ್ಲಿ ಶಿಕ್ಷಕ, ಪೊಲೀಸ್, ಐಟಿ–ಬಿಟಿ, ವಕೀಲ, ಬಿಎಸ್‌ಎಫ್, ಬ್ಯಾಂಕ್ ಸೇರಿದಂತೆ ೧೦ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಕುಂಬಾರರು ಮತ್ತು ಟೈಲರಿಂಗ್‌ನಂತಹ ಆಧುನಿಕ ಕೆಲಸ ಮಾಡುವಂತಹ ಒಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡೇರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ದೊಡ್ಡೇರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು

ದೊಡ್ಡೇರಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘ ಹಾಗೂ ೨ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು, ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೩.೨%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗುಣಿದಿಬ್ಬ

ಗುಣಿದಿಬ್ಬ ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಬಾಣಗಾರನಹಳ್ಳಿಯ ಹೊರವಲಯದಲ್ಲಿದೆ. ಒಟ್ಟು ೧೪ ಮನೆಗಳಿದ್ದು ೪೨ ಜನಸಂಖ್ಯೆ ಇದೆ. ಒಕ್ಕಲಿಗ ಹಾಗೂ ಬೋವಿ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ದೊಡ್ಡೇರಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ವ್ಯವಸಾಯ ಮುಖ್ಯ ಕಸುಬಾಗಿದ್ದು ಕೂಲಿ ಮಾಡುವವರು ಇದ್ದಾರೆ. ಪೊಲೀಸ್ ಇಲಾಖೆ ಹಾಗೂ ಅಂಚೆ ಇಲಾಖೆಯಲ್ಲಿ ಇಬ್ಬರು ನೌಕರರಿದ್ದು ಬೋವಿ ಜನಾಂಗ ಕಲ್ಲುಕುಟಿಕ ವೃತ್ತಿ ಮಾಡುತ್ತಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಗಟ್ಟಿಮಲ್ಲನಹಳ್ಳಿ

ಗಟ್ಟಿಮಲ್ಲನಹಳ್ಳಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಕವಣದಲದ ಹೊರವಲಯದಲ್ಲಿದೆ. ಮಲ್ಲಯ್ಯ ಎಂಬ ಹೆಸರಿನಲ್ಲಿ ಗ್ರಾಮ ರಚನೆಯಾಗಿದ್ದು ಗಟ್ಟಿ ವಿಶೇಷಣವನ್ನು ಸೇರಿಸಲಾಗಿದೆ. ಒಟ್ಟು ೩೦ ಮನೆಗಳನ್ನು ಹೊಂದಿದ್ದು ೯೪ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ವೀರಶೈವ ಹಾಗೂ ಒಕ್ಕಲಿಗ ಜನಾಂಗದವರು ಗ್ರಾಮದಲ್ಲಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಕವಣದಲ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಗೊಬಲಗುಟ್ಟೆ

ಗೊಬಲಗುಟ್ಟೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೬.೩೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮದ ಪ್ರಾಚೀನ ಹೆಸರು ಗಂಜಲಗುಂಟೆ. ಗೂಬಲು ಎಂಬ ತೆಲುಗು ಮೂಲದಿಂದ ಕನ್ನಡದಲ್ಲಿ ಗೂಬೆಗುಡ್ಡ ಎಂಬ ಅರ್ಥದಲ್ಲಿ ಗೂಬಲಗುಟ್ಟೆ (ದಿಬ್ಬ) ಎಂದಾಗಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದ ಬೆಟ್ಟದ ಸಾಲುಗಳಿವೆ.

ಗ್ರಾಮ ಕುರುಚಲು ಗಿಡದ ಅರಣ್ಯ ಪ್ರದೇಶ ಹೊಂದಿದ್ದು ಪ್ರಾಣಿಗಳಾದ ಕರಡಿ, ನರಿ, ಜಿಂಕೆ, ಕಡವೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗರುಡ, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಸುವರ್ಣಮುಖಿ ಹೊಳೆ ಹಾಗೂ ಹೊಸಕೆರೆ ಕುಂಟೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಹಳ್ಳಿಕಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೫೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೯೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೬೫ ಮತ್ತು ಹೆಂಗಸರು ೩೨೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಗುಡಿಸಲು ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೨ ಸಾಂಪ್ರದಾಯಿಕ ಎತ್ತಿನಗಾಡಿಯಿದ್ದು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೭೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಜೋಳ, ತೊಗರಿ, ಅಲಸಂದೆ, ಶೇಂಗಾ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು ಹಾಗೂ ಹೂವು ಬೆಳೆಯುವರು. ಅಡಿಕೆ, ತೆಂಗು ಹಾಗೂ ಹೂವು ಗ್ರಾಮದ ವ್ಯಾಪಾರದಲ್ಲಿನ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ. ಗ್ರಾಮದ ಕೆರೆಯಲ್ಲಿ ನೀರು ಇರುವುದರಿಂದ ಇಲ್ಲಿ ಮೀನುಗಾರಿಕೆಯು ನಡೆಯುತ್ತದೆ. ೧೦–೧೫ ಜನ ಈ ಕೆಲಸದಲ್ಲಿ ನಿರತರಾಗಿದ್ದಾರೆ.

ಗ್ರಾಮದಲ್ಲಿ ಶಿಕ್ಷಣ ಇಲಾಖೆ ಹಾಗೂ ಕೆಎಸ್‌ಆರ್ಟಿಸಿ ಸೇರಿದಂತೆ ೪ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಕೆಲಸ ಮಾಡುವಂತಹ ೩ ಜನ ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕವಣದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕವಣದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಹನುಮನಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಇಲ್ಲಿ ಮೊಬೈಲ್‌ನಂತಹ ದೂರಸಂಪರ್ಕ ಸಾಧನಗಳಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೪ ಸ್ತ್ರೀಶಕ್ತಿ ಹಾಗೂ ೪ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ

ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಪ್ರತಿ ವರ್ಷ ಮಾರ್ಚ್ ತಿಂಗಳಿನಲ್ಲಿ ಜಾತ್ರೆ ಹಾಗೂ ತೇರು ಆಚರಿಸುವರು. ಗ್ರಾಮದಲ್ಲಿ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗೊದ್ದನಪಾಳ್ಯ

ಗೊದ್ದನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೬೭.೬೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಒಂದು ದಿನ ಗ್ರಾಮದಲ್ಲಿರುವ ಅರಳಿಕಟ್ಟೆಯ ಮೇಲೆ ಅಂದಿನ ಕಂದಾಯ ಅಧಿಕಾರಿಗಳು ಕಂದಾಯ ವಸೂಲಿಗೆಂದು ಬಂದು ಕುಳಿತಾಗ ಅವರಿಗೆ ಬಹಳ ಗೊದ್ದಗಳು ಮುತ್ತಿಗೆ ಹಾಕಿದ್ದರಿಂದ ಆ ಅಧಿಕಾರಿಗಳು ಗೊದ್ದನಪಾಳ್ಯ ಎಂದು ನಾಮಕರಣ ಮಾಡಿದರಂತೆ. ಇತ್ತೀಚೆಗೆ ಜನರು ಈ ಗ್ರಾಮಕ್ಕೆ ಹೊಸಪಾಳ್ಯ ಎಂದು ನಾಮಕರಣ ಮಾಡಿದ್ದಾರೆ. ಆದರೆ ಸರ್ಕಾರಿ ದಾಖಲೆಯಲ್ಲಿ ಗೊದ್ದನಪಾಳ್ಯ ಎಂದು ಇದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮ ಯಾವುದೇ ರೀತಿಯ ಅರಣ್ಯ ಪ್ರದೇಶ ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಮೊಲ, ಕರಡಿ, ಹಂದಿ ಮೊದಲಾದ ಪ್ರಾಣಿಗಳು ರಾತ್ರಿ ವೇಳೆಯಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಡುಗ, ಗಿಳಿ, ಕಾಗೆ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿ, ಗಿರಿರಾಜ ಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕರು (ಪರಿಶಿಷ್ಟ ಪಂಗಡ), ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಒಟ್ಟು ೧೨೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೯೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೧೩ ಮತ್ತು ಹೆಂಗಸರು ೨೮೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್, ಆಟೋ, ಟೆಂಪೋ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಸೂರ್ಯಕಾಂತಿ, ತೆಂಗು ಮತ್ತು ತರಕಾರಿಗಳನ್ನು ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಶೇರಾ, ತೆಂಗು ಹಾಗೂ ಅಡಿಕೆಯನ್ನು ಬೆಳೆಯುತ್ತಾರೆ. ತೆಂಗು ಹಾಗೂ ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಪ್ರಮುಖ ಸರಕಾಗಿದೆ. ಅಡಿಕೆ ವ್ಯಾಪಾರ ಮುಖ್ಯ ಸರಕಾಗಿದೆ, ರಾಗಿ ಅಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದ್ದು ಆಧುನಿಕ ಡೈರಿ ವ್ಯವಸ್ಥೆಯಿಂದಾಗಿ ಇಲ್ಲಿನ ರೈತರು ಉಪಕಸುಬಾಲಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಗ್ರಾಮದಲ್ಲಿ ಶಿಕ್ಷಣ ಇಲಾಖೆ, ಬ್ಯಾಂಕಿಂಗ್ ಹಾಗೂ ಇಂಜಿನಿಯರಿಂಗ್ ಸೇರಿದಂತೆ ೬ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ

ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕವಣದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕವಣದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಆಗಾಗ ಬರುವ ಖಾಸಗಿ ಬಸ್ಸು ಇಲ್ಲವೇ ಆಟೋ ರಿಕ್ಷಾ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಹನುಮನಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಸ್ಥಿರ ದೂರವಾಣಿ ವ್ಯವಸ್ಥೆ ಇಲ್ಲದ ಪ್ರಯುಕ್ತ ಇಲ್ಲಿ ಚರದೂರವಾಣಿ ವ್ಯವಸ್ಥೆ ಬಹಳ ಹೆಚ್ಚಾಗಿರುವುದು ಕಂಡುಬರುತ್ತದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೭ ಸ್ತ್ರೀಶಕ್ತಿ ಹಾಗೂ ಒಂದೊಂದು ಸ್ವಸಹಾಯ ಸಂಘಗಳಿವೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು, ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮಾರಮ್ಮ, ಆಂಜನೇಯಸ್ವಾಮಿ, ಸಿದ್ದಮ್ಮ, ಮಣ್ಣಮ್ಮ ದೇವಾಲಯವಿದೆ. ಪ್ರತಿ ಆಷಾಢ ಮಾಸದಲ್ಲಿ ಮಾರಮ್ಮ ದೇವಿಗೆ ಬಲಿಯೊಂದಿಗೆ ಆರತಿಯನ್ನು ಸಹ ಬೆಳಗಲಾಗುತ್ತದೆ. ಗ್ರಾಮದಲ್ಲಿ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗರಣಿ

ಗರಣಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೧ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೬೪.೧೯ ಹೆಕ್ಟೇರ್ ಕಂದಾಯ ಗ್ರಾಮವಾಗಿದೆ.

ಮೈಸೂರು ಒಡೆಯರ ಕಾಲದಲ್ಲಿ ಸಾಮ್ರಾಜ್ಯದ ರಕ್ಷಣೆಗೆ ಬೇಕಾದ ಜಟ್ಟಿ ಮತ್ತು ಸೈನಿಕರನ್ನು ಗರಣಿಯ ಗರಡಿ ಮನೆಯಿಂದ ತಯಾರು ಮಾಡಿ ಕಳುಹಿಸುತ್ತಿದ್ದರು. ಆದ್ದರಿಂದ ಈ ಗ್ರಾಮಕ್ಕೆ ಗರಡಿ ಎಂದು ಹೆಸರು ಇದ್ದು ಕಾಲಾಂತರದಲ್ಲಿ ಗರಣಿಯಾಗಿದೆ ಎನ್ನುವುದು ಇಲ್ಲಿನ ಜನರ ಅಭಿಪ್ರಾಯವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ. ಬೆಟ್ಟಗಳ ಸಾಲುಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕಂಡುಬರುತ್ತದೆ ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ.

ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ, ಕೋಗಿಲೆ, ಮೊದಲಾದ ಪಕ್ಷಿಗಳು ಕಂಡು ಬರುತ್ತವೆ, ಮತ್ತು ಗ್ರಾಮದಲ್ಲಿ ಸೀಮೆಹಸು, ಎಮ್ಮೆ, ಕುರಿಗಳು ಮತ್ತು ಕುರಿಗಳು ಮತ್ತು ಮೇಕೆಗಳನ್ನು ಸಾಕುತ್ತಾರೆ, ಸಾಕು ಪಕ್ಕಿಗಳಾದ ನಾಟಿ ಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತದೆ. ಗರಣಿ ಕೆರೆಯಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮವು ಕಿರು ನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ ಗ್ರಾಮದಲ್ಲಿ ಹತ್ತು ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಕುರುಬ ಜನಾಂಗದವರೆ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಲಿಂಗಾಯಿತ, ಕುರುಬ, ಬುಡಬುಡಿಕೆ, ಒಕ್ಕಲಿಗ, ಮಡಿವಾಳ, ಭಜಂತ್ರಿ, ಶೆಟ್ರು, ಬೋವಿ, ಗೊಲ್ಲ, ವಿಶ್ವಕರ್ಮ, ಬ್ರಾಹ್ಮಣ, ಕಮ್ಮಾರ, ಈಡಿಗ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ

ಮಾತನಾಡುತ್ತಾರೆ. ತೆಲುಗು, ಬುಡಬುಡಿಕೆ ಮಾತನಾಡುವವರಿದ್ದಾರೆ.

ಒಟ್ಟು ೬೪೪ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿ ಪ್ರಕಾರ ೨೯೩೩ ಜನ ಸಂಖ್ಯಾ ಪ್ರಮಾಣವನ್ನು ಹೊಂದಿದೆ, ಗಂಡು ೧೪೮೨, ಹೆಣ್ಣು ೧೪೫೧ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

೨೦ ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು ಚರಂಡಿ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೮೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ, ಅವರೆ, ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಗ್ರಂಥಾಲಯವಿದ್ದು ೧೦೦೦ ಪುಸ್ತಕಗಳಿವೆ. ಒಬ್ಬ ಗ್ರಂಥಪಾಲಕರು ಕಾರ್ಯನಿರ್ವಹಿಸುತ್ತಾರೆ

ವೈದ್ಯರು, ಇಂಜಿನಿಯರ್, ವಕೀಲರು, ಶಿಕ್ಷಣ ಇಲಾಖೆ, ಕಂದಾಯ ಇಲಾಖೆ ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ೩೨ ಜನ ಸರಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಐದು ಜನ ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡು ಬರುವುದಿಲ್ಲ. ಗರಣಿ ವಾರಪತ್ರಿಕೆ ಸಂಪಾದಕರಾದ ವಿ.ಜಿ. ಉಮೇಶ್ ಈ ಗ್ರಾಮದವರು. ಪ್ರೊ॥ ರಮೇಶ್ ಗರಣಿ ಇದೇ ಗ್ರಾಮದವರು.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಗರಣಿ ಗ್ರಾಮದಲ್ಲಿ ಗ್ರಾಮ ಪಂಚಾಯತಿಯಿದೆ ಒಟ್ಟು ೪ ಜನ ಸದಸ್ಯರುಗಳಿದ್ದು ಇಬ್ಬರು ಪಂಚಾಯಿತಿಯ ನೌಕರರಾಗಿದ್ದಾರೆ ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಲ್ಲಿ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಗರಣಿ ಅಂಚೆ ಕಛೇರಿಗೆ ಸೇರಿದೆ ಚರದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ ಹಾಗೂ ಗ್ರಾಮದಲ್ಲಿ ಪಶು ಚಿಕಿತ್ಸಾಲಯವಿದೆ ಹಾಗೂ ಆಯುರ್ವೇದ ಆಸ್ಪತ್ರೆ ಇದೆ.

ಸಣ್ಣ ಪುಟ್ಟ ಕಲಹ ವ್ಯಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಬರೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ೫ ಸ್ತ್ರೀಶಕ್ತಿ ಸಂಘಗಳು ಹಾಗೂ ೩ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ಇಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸಹಾಯಕಿಯರಿದ್ದಾರೆ ಗರಣಿ–೧ರಲ್ಲಿ ಒಟ್ಟು–೪೭ ಮಕ್ಕಳಿದ್ದಾರೆ. ಗರಣಿ–೨ರಲ್ಲಿ ೩೮ ಮಕ್ಕಳಿದ್ದಾರೆ. ಸರ್ಕಾರಿ ಪ್ರೌಢಶಾಲೆ ಇದ್ದು ಒಟ್ಟು ೧೨೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೮ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದ್ದು ೧೮೮ ಮಕ್ಕಳು ೬ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಮೆಟ್ರಿಕ್ ಪೂರ್ವ ಬಾಲಕರ ವಿದ್ಯಾರ್ಥಿ ನಿಲಯವಿದೆ. ಗ್ರಾಮದ ಸಾಕ್ಷರತೆ ೬೨.೨೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ದಾಪ್ಯ ವೇತನ, ವಿಕಲಚೇತನ, ವಿಧವಾ ವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ. ಕಾಫಿ, ಟೀ ದೊರೆಯುವ ೫ ಹೋಟೇಲ್ ಇದ್ದು ಏಳು ಅಂಗಡಿಗಳಿವೆ ಈ ಗ್ರಾನದಲ್ಲಿ ಜ್ವರ ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ೩ ವೀರಗಲ್ಲು, ೧ ಕರುಗಲ್ಲು ಇದೆ. ೨ ಕಲ್ಯಾಣಿಗಳಿವೆ.

ಗ್ರಾಮದಲ್ಲಿ ಹನುಮಂತರಾಯ, ಶನಿಮಹಾತ್ಮ, ಮಾರಮ್ಮದೇವಿ, ಪುಟ್ಟಹನುಮಂತರಾಯ, ಈಶ್ವರ, ಪಾತಪ್ಪ, ವೆಂಕಟರಮಣಸ್ವಾಮಿ, ಬಸವಣ್ಣ, ಮಲ್ಲೇಶ್ವರ, ಮೈಲಾರಲಿಂಗೇಶ್ವರ ದೇವಾಲಯಗಳಿದೆ. ಪ್ರತಿವರ್ಷ ವೆಂಕಟರಮಣ, ಹಟ್ಟಿ ಮಾರಮ್ಮ, ಮೈಲಾರಲಿಂಗೇಶ್ವರ, ಹನುಮಂತರಾಯನ ಅದ್ದೂರಿಯಾಗಿ ಜಾತ್ರೆ ನಡೆಯುತ್ತದೆ.

ಅಂದು ಊರಿನ ತುಂಬ ದೇವರ ಉತ್ಸವ ನಡೆಯುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

ಇಲ್ಲಿ ಸುವರ್ಣ ವಾಹಿನಿಯಲ್ಲಿ ಪ್ರಸಾರವಾಗುತ್ತಿರುವ ಅನೇಕ ಕಿರುತೆರೆ ಧಾರಾವಾಹಿಯ ನಿರ್ದೇಶಕರಾದ ರವಿ ಆರ್.ಗರಣಿಯವರು ಈ ಗ್ರಾಮದವರು.

## ಗೌರದಿಮ್ಮನಹಳ್ಳಿ

ಗೌರದಿಮ್ಮನಹಳ್ಳಿಯು ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ಗರಣಿಯ ಹೊರವಲಯದಲ್ಲಿದೆ. ಗೌರತಿಮ್ಮ ಎಂಬ ವ್ಯಕ್ತಿಮೂಲದ ಈ ಹಳ್ಳಿ ಕ್ರಮೇಣ ಗೌರದಿಮ್ಮನಹಳ್ಳಿ ಎಂದಾಗಿದೆ.

ಒಟ್ಟು ೧೫ ಮನೆಗಳನ್ನು ಹೊಂದಿದ್ದು ೬೨ ಜನಸಂಖ್ಯೆಯನ್ನು ಹೊಂದಿದೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ವ್ಯವಸಾಯ ಮತ್ತು ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ. ಗರಣಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಗಿರಿಯಪಾಳ್ಯ

ಗಿರಿಯಪಾಳ್ಯವು ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ಶ್ರೀನಿವಾಸಪುರದ ಹೊರವಲಯದಲ್ಲಿದೆ. ಗ್ರಾಮದಲ್ಲಿ ನೀಲಗಿರಿ ತೋಪು ಇದೆ.

ಒಟ್ಟು ೩೦ ಮನೆಗಳಿದ್ದು ೧೨೨ ಜನಸಂಖ್ಯೆ ಇದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ.

ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಪಶುಸಂಗೋಪನೆ ಹಾಗೂ ವ್ಯವಸಾಯ ಮುಖ್ಯ ಕಸುಬಾಗಿದೆ. ಸಾರಿಗೆ ಹಾಗೂ ಶಿಕ್ಷಣ ಇಲಾಖೆಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದಾರೆ. ಗರಣಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಗಿರೇಗುಂಡನಹಳ್ಳಿ

ಗಿರೇಗುಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೩೨೦.೦೧ ಹೆಕ್ಟೇರ್ಸ್, ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ ಕುರುಬ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ.

ಒಟ್ಟು ೮೬ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೩೮೧ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು-೧೮೯, ಹೆಣ್ಣು-೧೯೨ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಈ ಗ್ರಾಮದಲ್ಲಿ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ..

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ, ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಕಂದಾಯ ಇಲಾಖೆ, ಶಿಕ್ಷಣ ಇಲಾಖೆ, ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ೦೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ, ಕಮ್ಮಾರ ಕೆಲಸ ಮಾಡುವ ಇಬ್ಬರಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಯಲ್ಲೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಇಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಯಲ್ಲೂರು ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಯಲ್ಲೂರು ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ೨೮ ಮಕ್ಕಳಿದ್ದಾರೆ, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು ಒಟ್ಟು ೨೪ ವಿದ್ಯಾರ್ಥಿಗಳು ಇದ್ದಾರೆ. ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ಎರಡು ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಮಾರಮ್ಮದೇವಿ, ಆಂಜನೇಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಗುಟ್ಟೆ

ಗುಟ್ಟೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೮.೩೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗುಟ್ಟೆ ಅಥವಾ ಎತ್ತರದ ದಿಬ್ಬ ಎಂಬ ಅರ್ಥದಲ್ಲಿ ಗುಟ್ಟೆ ಎಂದು ಕರೆಯಲಾಗಿದೆ. ಅಂದರೆ ಈ ಗುಟ್ಟೆಯ ಮೇಲೆ ಕೃಷ್ಣಪ್ಪನಾಯಕ ಕೋಟೆ ಕಟ್ಟಿಕೊಂಡು ವಾಸಿಸುತ್ತಿದ್ದನೆಂಬ ಐತಿಹ್ಯ ಈ ಪ್ರದೇಶದಲ್ಲಿದೆ. ಗುಟ್ಟೆಯ ಬೆಟ್ಟದ ಮೇಲೆ ಇಂದಿಗೂ ಶಿವಲಿಂಗ, ಪುಟ್ಟ ಗುಡಿಯಿದೆ. ಈ ಕಾರಣದಿಂದ ಗ್ರಾಮಕ್ಕೆ ಗುಟ್ಟೆ ಎಂದು ಕರೆಯಲಾಗಿದೆ. ಇಲ್ಲಿಯೂ ಚೌಡೇಶ್ವರಿ ದೇವಾಲಯವಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು, ಕೆಂಪು ಮತ್ತು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ಅಲ್ಲಲ್ಲಿ ಚಿಕ್ಕ ಚಿಕ್ಕ ಪೊದೆಗಳನ್ನು ಕಾಣಬಹುದು.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಕೋಗಿಲೆ, ಗಿಳಿ, ಗೌಜುಗ,

ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಮರಗಳಾದ ಹೊಂಗೆ, ಅರಳಿ, ಬೇವು, ನೇರಳೆ, ಮಾವು, ಹಲಸು ಇತ್ಯಾದಿ ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩ ಸಾರ್ವಜನಿಕ ನಲ್ಲಿಗಳು, ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಭಜಂತ್ರಿ, ಶೆಟ್ಟಿ, ಕುಂಬಾರ, ಲಿಂಗಾಯಿತ, ಒಕ್ಕಲಿಗರು ಗ್ರಾಮದಲ್ಲಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೩೦೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೨೩೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೬೩೭ ಮತ್ತು ಹೆಂಗಸರು ೫೯೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೧೦ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ಅವರೆ ಮತ್ತು ಸೂರ್ಯಕಾಂತಿ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ತಹಸೀಲ್ದಾರ್, ಪಿಡಿಓ, ವಕೀಲ, ಆರ್ಮಿ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ೮ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ನ್ಯಾಯಬೆಲೆ ಅಂಗಡಿಯಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕೊಡಿಗೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ೩ ಜನ ಸದಸ್ಯರು, ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಕೊಡಿಗೇನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೬ ಮಕ್ಕಳಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ೧೫೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ೬ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೬೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಹೋಟೆಲ್‌ಗಳು ಹಾಗೂ ಅಂಗಡಿಗಳಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮವು ಎಲ್ಲಾ ರೀತಿಯ ಜನಪದ ಕ್ಷೇತ್ರಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ.

ಗ್ರಾಮದಲ್ಲಿ ಪುಟ್ಟಪ್ಪ ಗುಡಿ, ಶನಿದೇವರು, ಚೌಡೇಶ್ವರಿ, ಸಪ್ಲಮ್ಮ ಮಾರಮ್ಮ ಮತ್ತು ಆಂಜನೇಯ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಹೂವಿನ ರಥೋತ್ಸವ ಆಂಜನೇಯನ ಪರಿಸೆ ನಡೆಯುತ್ತದೆ. ಸಪ್ಲಮ್ಮ, ಚೌಡಮ್ಮನ ಜಾತ್ರೆ ನಡೆಯುತ್ತದೆ.

## ಗೊಲ್ಲಹಳ್ಳಿ

ಗೊಲ್ಲಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೨೫೬.೫೨ ಹೆಕ್ಟೇರ್ಸ್, ಕಂದಾಯ ಗ್ರಾಮವಾಗಿದೆ. ಜಾತಿ ಮೂಲದಿಂದ ಗ್ರಾಮಕ್ಕೆ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ನಾಯಕ, ಆದಿದ್ರಾವಿಡ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೪೪ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೬೭೧ ಜನಸಂಖ್ಯಾ ಪ್ರಮಾಣವನ್ನು ಹೊಂದಿದ್ದು ಗಂಡು–೩೨೦, ಹೆಣ್ಣು–೩೫೧ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಈ ಗ್ರಾಮದಲ್ಲಿ ಉತ್ತಮ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇಲ್ಲಿನ ರೈತರು ಉಪಕಸುಬಾಗಿದೆ ಒಂದು ಮಿನಿ ಡೈರಿ ಇದೆ.

ಶಿಕ್ಷಣ ಇಲಾಖೆ, ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ. ದೊಡ್ಡಯಲ್ಲೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಒಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ದೊಡ್ಡಯಲ್ಲೂರು ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಯಲ್ಲೂರು ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ಒಬ್ಬರು ಕಾರ್ಯಕರ್ತೆಯಿದ್ದು ಒಬ್ಬ ಸಹಾಯಕಿ ಇದ್ದಾರೆ. ೫೮ ಮಕ್ಕಳಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ೩೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ನಾಲ್ವರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೫.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ೦೩ ಅಂಗಡಿಗಳಿವೆ ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚಂದ್ರಗಿರಿ

ಚಂದ್ರಗಿರಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೫೭.೭೮ ಹೆಕ್ಟೇರ್ ಕಂದಾಯ ಗ್ರಾಮವಾಗಿದೆ. ಈ ಗ್ರಾಮದಲ್ಲಿ ಬೆಟ್ಟವಿದ್ದು ಬೆಟ್ಟ ಹಾಗೂ ಚಂದ್ರ ಎಂಬ ವ್ಯಕ್ತಿ ಹೆಸರು ಕೂಡಿಕೊಂಡು ಚಂದ್ರಗಿರಿ ಆಗಿದೆ.

ಈ ಗ್ರಾಮವು ಬೆಟ್ಟವನ್ನು ಹೊಂದಿದ್ದು ರಾತ್ರಿ ಆಗಸದಲ್ಲಿ ಚಂದ್ರನು ಬೆಟ್ಟದಲ್ಲಿ ಇರುವಂತೆ ಕಾಣುತ್ತದೆ. ಆದ್ದರಿಂದ ಈ ಗ್ರಾಮಕ್ಕೆ ಚಂದ್ರಗಿರಿ ಎಂದು ನಾಮಕರಣ ಮಾಡಿದರೆಂದು ಹಿರಿಯರು ಹೇಳುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪುಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದಲ್ಲಿ ಒಂದು ಗುಟ್ಟೆ ಹಾಗೂ ಒಂದು ಚಂದ್ರಗಿರಿ ಬೆಟ್ಟವಿದೆ, ಒಂದು ತೋಪು ಇದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಚಿರತೆ, ಕಾಡುಮೊಲ, ಕರಡಿ, ಕಾಡುಹಂದಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಹದ್ದು, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಮೇಕೆ, ಕುರಿಗಳನ್ನು ಸಾಕಿದ್ದು ಸಾಕುಪಕ್ಷಿಗಳಾದ ಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮ ಪಂಚಾಯ್ತಿಯು ಕಿರುನೀರು ಸರಬರಾಜು ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ೩೦ ಕ್ಕೂ ಹೆಚ್ಚು ಸಾರ್ವಜನಿಕ ನಲ್ಲಿಗಳಿದ್ದು ನೀರು ಸರಬರಾಜು ನಡೆಯುತ್ತಿದೆ.

ಲಿಂಗಾಯಿತ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ ಜನಾಂಗದವರು ಗ್ರಾಮದಲ್ಲಿದ್ದು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ

ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೨೦೦ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ ರ ಜನಗಣತಿಯ ಪ್ರಕಾರ ೮೩೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗಂಡು ೪೧೬ ಹಾಗೂ ಹೆಣ್ಣು ೪೧೪ ಜನಸಂಖ್ಯೆ ಇದೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೬೩ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ-ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದ್ದು ಸಿಹಿ ಊಟ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಮೂರು ಸಾಂಪ್ರದಾಯಿಕ ಎತ್ತಿನ ಗಾಡಿಗಳಿದ್ದು ಆಧುನಿಕ ವಾಹನಗಳಾದ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳು ಕಂಡುಬರುತ್ತವೆ.

ಸುವರ್ಣ ಗ್ರಾಮ ಯೋಜನೆಯಲ್ಲಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಇದೆ. ಗ್ರಾಮದಲ್ಲಿ ೨೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ಕೆಲವರು ಕೂಲಿಕೆಲಸ ಮಾಡುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಆಹಾರ ಬೆಳೆಯಾಗಿದೆ. ಉಳಿದಂತೆ ತೊಗರಿ, ಶೇಂಗಾ, ಅಲಸಂದೆ ಬೆಳೆಯುತ್ತಾರೆ. ತರಕಾರಿ ಹಾಗೂ ಹೂ ವ್ಯಾಪಾರದ ಬೆಳೆಯಾಗಿದೆ. ಸಾಂಪ್ರದಾಯಿಕ ಶೈಲಿಯ ಒಂದು ಹೈನುಗಾರಿಕೆ ಹಾಗೂ ಒಂದು ಆಧುನಿಕ ಡೈರಿ ಗ್ರಾಮದಲ್ಲಿದೆ.

ಮಿಲಿಟರಿ, ಶಿಕ್ಷಣ ಇಲಾಖೆ, ವಕೀಲರು ಸೇರಿದಂತೆ ೧೦ ಜನ ಸರ್ಕಾರಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮದಲ್ಲಿ ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವವರಿದ್ದು ಕೂಲಿ ಮಾಡುವವರು ಹೆಚ್ಚಾಗಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ, ತುಮಕೂರು ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಚಂದ್ರಗಿರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಮೂವರು ಗ್ರಾಮಪಂಚಾಯ್ತಿ ಸದಸ್ಯರು ಹಾಗೂ ಮೂವರು ಪಂಚಾಯ್ತಿ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಂದ್ರಗಿರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮದಲ್ಲಿ ಅಂಚೆ ಕಛೇರಿ ಇದೆ. ಒಂದು ಸ್ಥಿರ ಹಾಗೂ ೧೦೦ ಕ್ಕೂ ಹೆಚ್ಚು ಚರ ದೂರವಾಣಿ ದೂರಸಂಪರ್ಕ ಸಾಧನಗಳಿವೆ.

ಸಣ್ಣಪುಟ್ಟ ಕಲಹ, ವ್ಯಾಜ್ಯಗಳು ಗ್ರಾಮದ ಹಿರಿಯರು, ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೮ ಸ್ತ್ರೀಶಕ್ತಿಸಂಘಗಳು ಇವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೬೨ ವಿದ್ಯಾರ್ಥಿಗಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಇದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಒಟ್ಟು ೫೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೧.೫%.

ಗ್ರಾಮದಲ್ಲಿ ಸಾಮಾನ್ಯವಾಗಿ ಜ್ವರ, ಕೆಮ್ಮು, ನೆಗಡಿ ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಒಂದು ಐತಿಹಾಸಿಕ ಪ್ರತಿಮೆ ಚಂದ್ರಗಿರಿ ಎನ್ನುವ ಕೋಟೆ ಇದೆ. ಹಿಂದೆ ಈ ಕೋಟೆಗೆ ಬಂಗಾರದ ಗಿರಿಯೆಂತಲೂ ಕರೆಯುತ್ತಿದ್ದುದು ಪ್ರತೀತಿ ಇದೆ. ಒಂದು ಪ್ರಾಚೀನ ಬಾವಿ ಇದೆ. ಗ್ರಾಮದಲ್ಲಿ ೬ ದೇವಾಲಯಗಳಿವೆ. ಮಾರಮ್ಮ, ಆಂಜನೇಯ, ಬಸವಣ್ಣ, ಕಾಂತೇಶ್ವರ, ಲಕ್ಷ್ಮಿ ದೇವಾಲಯ ಹಾಗೂ ಈಶ್ವರ ದೇವಾಲಯಗಳಿವೆ.

ಗ್ರಾಮದಲ್ಲಿ ಪ್ರತಿ ವರ್ಷವೂ ಮಾರಮ್ಮನ ಜಾತ್ರೆಯನ್ನು ಸುತ್ತ ಏಳೂರು ಜನರು ಸೇರಿ ಏಳೂರು ಮಾರಮ್ಮನ ಜಾತ್ರೆ ತುಂಬಾ ವೈಭವದಿಂದ ರಥೋತ್ಸವದ ಜತೆಗೆ ಹಾಗೂ ಹರಕೆ ಮತ್ತು ಬಲಿ ಕೊಡುವುದರೊಂದಿಗೆ ಆಚರಿಸುವರು. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ-

ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚಂದ್ರಗಿರಿ ಗೊಲ್ಲರಹಟ್ಟಿ

ಚಂದ್ರಗಿರಿ ಗೊಲ್ಲರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೫೭.೭೯ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಚಂದ್ರಗಿರಿ ಭೂವಿಸ್ತೀರ್ಣದಲ್ಲಿ ಸೇರಿದೆ.

ಈ ಗ್ರಾಮದಲ್ಲಿ ಅತಿ ಹೆಚ್ಚಾಗಿ ಗೊಲ್ಲ ಜನಾಂಗದವರು ಇದ್ದ ಕಾರಣ ಈ ಹೆಸರನ್ನೇ ನಾಮಕರಣ ಮಾಡಲಾಗಿದೆ ಎಂದು ಹಿರಿಯರು ಹೇಳುತ್ತಾರೆ. ಈ ಗ್ರಾಮದ ಪೂರ್ಣ ಹೆಸರು ಮಲ್ಲೇನಹಳ್ಳಿ ಗೊಲ್ಲರಹಟ್ಟಿ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಈ ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಜಿಂಕೆ, ಕರಡಿ, ಚಿರತೆ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ.

ಪಕ್ಷಿಗಳಾದ ಗಿಳಿ, ಗೊರವಂಕ, ನವಿಲು, ಹದ್ದು ಮೊದಲಾದ ಪಕ್ಷಿಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಗ್ರಾಮದಲ್ಲಿ ನಾಟಿಹಸು, ಸೀಮೆಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩೦ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿವೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೇರೆ ಯಾವುದೇ ಜನಾಂಗವಿರುವುದಿಲ್ಲ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೪೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೮೨೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಅದರಲ್ಲಿ ೪೨೦ ಗಂಡು ಮತ್ತು ೪೨೧ ಜನ ಹೆಂಗಸರು ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಹಾಗೂ ಮಣ್ಣಿನ ಮನೆಗಳಿವೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಐದು ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ಆಧುನಿಕ ವಾಹನವಾದ ದ್ವಿಚಕ್ರ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆಯಾಗಿದೆ. ಗ್ರಾಮದಲ್ಲಿ ೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮದಲ್ಲಿ ಅತಿ ಹೆಚ್ಚು ಕುರಿಗಳನ್ನು ಸಾಕಿದ್ದು ಕುರಿಗಳನ್ನು ವ್ಯಾಪಾರ ಮಾಡುವುದೇ ಜನರ ಮುಖ್ಯ ಕಸುಬಾಗಿದೆ. ಉಳಿದಂತೆ ಕೆಲವರು ಮಾತ್ರ ಸ್ವಲ್ಪ ಪ್ರಮಾಣದ ವ್ಯವಸಾಯ ಮಾಡುತ್ತಾರೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಖಾಸಗಿ ಆಧುನಿಕ ಡೈರಿ ಇದೆ.

ಗ್ರಾಮಕ್ಕೆ ಸೇರಿದಂತೆ ಯಾವುದೇ ಕೆರೆ, ಹಳ್ಳವಿಲ್ಲದ ಕಾರಣ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಚಂದ್ರಗಿರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಪಂಚಾಯ್ತಿಯ ನೌಕರರು ಮತ್ತು ಒಬ್ಬರು ಸದಸ್ಯರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಂದ್ರಗಿರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚಂದ್ರಗಿರಿ ಅಂಚೆ ಕಛೇರಿ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ

ನ್ಯಾಯಾಲಯಗಳವರೆಗೆ ಸಾಗುತ್ತವೆ. ೪ ಸ್ತ್ರೀಶಕ್ತಿ ಸಂಘಗಳು, ೩ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೭೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೫೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು ಇಬ್ಬರು ಅಡುಗೆಯವರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೫೧.೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ೩ ದೇವಾಲಯಗಳಿವೆ. ನರಸಿಂಹಸ್ವಾಮಿ, ಸಿದ್ದಪ್ಪ ಹಾಗೂ ತಿಮ್ಮಪ್ಪ ದೇವಾಲಯಗಳಿವೆ. ಇದರಲ್ಲಿ ನರಸಿಂಹಸ್ವಾಮಿ ದೇವರ ತೇರನ್ನು ಊರಿನಲ್ಲಿ ಎಳೆಯುವುದರೊಂದಿಗೆ ಆಚರಿಸುತ್ತಾರೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

ಗ್ರಾಮದಲ್ಲಿ ರಂಗಪ್ಪ ಎನ್ನುವ ಗೊಲ್ಲ ಜನಾಂಗಕ್ಕೆ ಸೇರಿದವರು ಕೋಲಾಟ ಆಡುವುದರಲ್ಲಿ ಪ್ರಸಿದ್ಧಿಯನ್ನು ಹೊಂದಿದ್ದಾರೆ.

## ಚಂಬೇನಹಳ್ಳಿ

ಚಂಬೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೯.೩೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಶಂಭು ಎಂಬ ಮೂಲದಿಂದ ಚಂಬು > ಚಂಬೇನಹಳ್ಳಿ ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರಿತವಾದ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಜಿಂಕೆ, ಚಿರತೆ, ಕಾಡುಮೊಲ, ತೋಳ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಗೊರವಂಕ, ಗಿಳಿ, ಗುಬ್ಬಚ್ಚಿ, ಬಾತುಕೋಳಿಗಳು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಸುವರ್ಣಮುಖಿ ಹೊಳೆ ಇದ್ದು ನೀರಿಲ್ಲದೆ ಬತ್ತಿಹೋಗಿದೆ. ಗ್ರಾಮದಲ್ಲಿ ಒಂದು ಕೆರೆ ಇದ್ದು ಮಳೆಗಾಲದಲ್ಲಿ ಸ್ವಲ್ಪ ಪ್ರಮಾಣದ ನೀರು ಸಂಗ್ರಹವಾದಾಗ ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಬಳಸಿಕೊಳ್ಳಲಾಗುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬ್ರಾಹ್ಮಣ ಸಮುದಾಯ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ. ಒಟ್ಟು ೬೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೩೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೭೧, ಹೆಂಗಸರು ೧೬೦ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೪ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ನಾಲ್ಕು ಸಾಂಪ್ರದಾಯಿಕ ಎತ್ತಿನ ಗಾಡಿ ಇದೆ. ಒಂದು ಟ್ರ್ಯಾಕ್ಟರ್ ಮತ್ತು ೨೦ ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೧೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ೯೮% ಕೃಷಿಕರು ಗ್ರಾಮದಲ್ಲಿದ್ದಾರೆ. ರಾಗಿ ಮತ್ತು ಭತ್ತ

ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ ಬೆಳೆಯುತ್ತಾರೆ. ರಾಗಿ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಅಡಿಕೆ ಅತಿ ಹೆಚ್ಚಾಗಿ ಬೆಳೆಯಲಾಗುತ್ತಿದ್ದು ವಾಣಿಜ್ಯ ವ್ಯಾಪಾರಕ್ಕಾಗಿಯೇ ಬೆಳೆಯುತ್ತಾರೆ. ಹುಣಸೇಹಣ್ಣನ್ನು ವ್ಯಾಪಾರಕ್ಕಾಗಿ ಬೆಳೆಯುತ್ತಾರೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆ ಸೇರಿದಂತೆ ಒಟ್ಟು ೭ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಒಬ್ಬರು ಇಂಜಿನಿಯರ್ ಆಗಿ ಐಟಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಒಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರಂಟವಾಳಲು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಟವಳಲು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಸಜ್ಜೆಹೊಸಳ್ಳಿ ಅಂಚೆ ಕಚೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳು ಹಾಗೂ ಒಂದು ಸ್ವಸಹಾಯ ಸಂಘವಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆಯಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಹಾಗೂ ಇಬ್ಬರು ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೯.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಒಂದು ಅಂಗಡಿ ಗ್ರಾಮದಲ್ಲಿದೆ.

ಗ್ರಾಮದಲ್ಲಿ ಆಂಜನೇಯ ಹಾಗೂ ಬೇವಿನಾಳಮ್ಮ ದೇವಾಲಯಗಳಿವೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚಿನ್ನೇನಹಳ್ಳಿ

ಚಿನ್ನೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೨೦.೮೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಚಿನ್ನದ ಕೆಲಸ ಅಥವಾ ಒಡವೆ ತಯಾರಿಸುತ್ತಿದ್ದ ಅಕ್ಕಸಾಲಿ ಮೂಲದ ವ್ಯಕ್ತಿ ವೃತ್ತಿ ಕಸುಬು ಮಾಡುತ್ತಿದ್ದ ಕಾರಣದಿಂದ ಚಿನ್ನದ ಒಡವೆ ಮಾಡುವವನ ಹಳ್ಳಿ ಚಿನ್ನೇನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣು ಮಿಶ್ರ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಚಿರತೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳು ೫

ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ, ಆದಿಕರ್ನಾಟಕ ಜನಾಂಗದವರಿದ್ದಾರೆ. ಕುರುಬ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ಈ ಗ್ರಾಮದಲ್ಲಿ ನಾಯಕ ಜನಾಂಗಕ್ಕೆ ಸೇರಿದ ದಾಸಪ್ಪ ಎಂಬ ಮೂಡಲಪಾಯದ ಭಾಗವತರಿದ್ದಾರೆ.

ಒಟ್ಟು ೩೨೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೦೮೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೨೩ ಟ್ರ್ಯಕ್ಟರ್, ಹಾಗೂ ೧೦ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಕೇಂದ್ರವಾಗಿದೆ. ಈ ಗ್ರಾಮದಿಂದ ಮೂವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನ್ನೇನಹಳ್ಳಿಯಲ್ಲಿ ಅಂಚೆ ಕಛೇರಿ ಇದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೦೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಂಬತ್ತು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೪.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ನ್ಯಾಯಬೆಲೆ ಅಂಗಡಿ ಇದೆ.

ಗ್ರಾಮದಲ್ಲಿ ಒಂದು ಅಂಚೆ ಕಛೇರಿ ಹಾಗೂ ಗ್ರಂಥಾಲಯ ಇದೆ. ಸರ್ಕಾರಿ ನೌಕರಿಯಲ್ಲಿ ಪೊಲೀಸ್ ೬ ಜನ, ಇಂಜಿನಿಯರ್‌ಗಳು, ವಕೀಲರು, ಶಿಕ್ಷಕರು ಗ್ರಾಮದಲ್ಲಿ ಉದ್ಯೋಗಸ್ಥರು ಇದ್ದಾರೆ. ಗ್ರಾಮದಲ್ಲಿ ಶನಿದೇವರು, ಮಾರಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಬಲಿ, ಹರಕೆಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚಿಕ್ಕೆರೆ ಗೊಲ್ಲರಹಟ್ಟಿ

ಚಿಕ್ಕೆರೆ ಗೊಲ್ಲರಹಟ್ಟಿ (ಹೆಚ್.ಗೊಲ್ಲರಹಟ್ಟಿ) ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೫೯.೭೯ ಹೆಕ್ಟೇರ್ ಹೊಂದಿದ್ದು

ಮಜರೆ ಗ್ರಾಮವಾಗಿದೆ. ಗ್ರಾಮದ ಭೂವಿಸ್ತೀರ್ಣವು ಹೊಸಕೆರೆ ವಿಸ್ತೀರ್ಣದಲ್ಲಿ ಸೇರಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲು ಹಾಗೂ ಕೆಂಪು ಮಿಶ್ರಿತ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಚಿರತೆ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೨೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೭೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೭ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ೫ ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಇಲ್ಲಿನ ಜನರ ಮುಖ್ಯ ವ್ಯಾಪಾರ ಕುರಿಗಳಾಗಿವೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಹೊಸಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಮೂರು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಹೊಸಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಹೊಸಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ

ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಅಂಗಡಿಯಿದೆ.

ಗ್ರಾಮದಲ್ಲಿ ರಂಗನಾಥಸ್ವಾಮಿ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚಂದ್ರಬಾವಿ

ಚಂದ್ರಬಾವಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೫೬.೨೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮದ ಭೂ ವಿಸ್ತೀರ್ಣವು ಬಿದರಕೆರೆ ಕಾವಲ್ ಭೂ ವಿಸ್ತೀರ್ಣದಲ್ಲಿ ಸೇರಿದೆ.

ಚಂದ್ರಯ್ಯ ಎಂಬುವನು ನಿರ್ಮಿಸಿದ ಬಾವಿಯಿಂದಾಗಿ ಚಂದ್ರಬಾವಿ ಎಂದಾಗಿದೆ. ಮತ್ತೊಂದು ಮೂಲದ ಪ್ರಕಾರ ಚಂದ್ರಣ್ಣ ನಿರ್ಮಿಸಿದ ಪಾಳ್ಯದ ಗ್ರಾಮ ಚಂದ್ರಬಾವಿಯಾಗಿ ನಂತರ ಚಂದ್ರಾಬಾವಿ ಎಂದಾಗಿದೆ.

ಗ್ರಾಮವು ಬೆಟ್ಟದಸಾಲು ಪ್ರದೇಶವಾಗಿದ್ದು ಬಿಳಿಯ ಬಂಡೆಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.ಗ್ರಾಮವು ಬೆಟ್ಟದ ಸಾಲು ಪ್ರದೇಶವಾಗಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳು, ೫ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ವಡ್ಡರು, ಬೋವಿ, ಹೆಳವ, ರೆಡ್ಡಿಗರು, ಕುಂಬಾರ, ಶೆಟ್ಟಿ ಬಣಜಿಗ, ಲಿಂಗಾಯಿತ ಜನಾಂಗದವರಿದ್ದಾರೆ. ಲಿಂಗಾಯಿತ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೮೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೩೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರು ಇದ್ದಾರೆ. ರಾಗಿ, ತೊಗರಿ, ಕಡಲೆ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ, ಕಡಲೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬೇಡತ್ತೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬೇಡತ್ತೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ

ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬೇಡತ್ತೂರು ಅಂಚೆ ಸಂಪರ್ಕ ಒದಗಿಸುತ್ತಿದೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೪.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಹೋಟೆಲ್, ೧ ಮಂಡಿ ಹಾಗೂ ೧ ಅಂಗಡಿಗಳಿವೆ.

ಗ್ರಾಮದಲ್ಲಿ ಕೆಎಸ್‌ಆರ್‌ಟಿಸಿ ಡ್ರೈವರ್, ಒಬ್ಬರು ಇಂಜಿನಿಯರ್, ೪ ಜನ ಸರ್ಕಾರಿ ಉದ್ಯೋಗಸ್ಥರಾಗಿದ್ದಾರೆ. ಗ್ರಾಮದಲ್ಲಿ ಬಡಗಿ ಕೆಲಸ ಹಾಗೂ ಗುಡಿಕಾರರು ೪ ಜನ ಇದ್ದಾರೆ.

ಗ್ರಾಮದಲ್ಲಿ ದತ್ತಾಂಜನೇಯ, ಮಾರಮ್ಮ, ಪೆದ್ದಮ್ಮ, ಗುರುಮೂರ್ತಿ, ಸತ್ಯನಾರಾಯಣ ಸಾಧನೆ, ಸಪ್ಲೆಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಆರತಿ, ಹರಕೆ ಹಾಗೂ ಬಲಿಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚಿನಕವಜ್ರ

ಚಿನಕವಜ್ರ ಗ್ರಾಮವು ಮಧುಗಿರಿ ತಾಲ್ಲೂಕಿನ ದಕ್ಷಿಣ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೨೪.೫೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಚಿನಕ ಎಂದರೆ ಹನಿ ಎಂದು ತೆಲುಗಿನಲ್ಲಿ ಕರೆಯಲಾಗುತ್ತಿದ್ದು ಮಳೆಯ ಹನಿಯನ್ನು ವಜ್ರದ ಹರಳಿನಂತೆ ಭಾವಿಸುವಿಕೆಯಿಂದಾಗಿ ಚಿನಕವಜ್ರ ಎಂದೂ ಚಿಕ್ಕ ವಜ್ರದ ಹಳ್ಳಿ ಎಂದ ಅರ್ಥದಲ್ಲೂ ಚಿನಕವಜ್ರ ಎಂದಾಗಿದೆ. ಮೈಲಾರಲಿಂಗನಿಗೆ ಚಿಕ್ಕ ಚಿಕ್ಕ ವಜ್ರದ ಕಿವಿಯೋಲೆಯ ಹೊಂದಿದ್ದು ತೆಲುಗಿನಲ್ಲಿ ಚಿನಕ (ಚಿಕ್ಕ) ವಜ್ರವಾಗಿದೆ ಎಂದು ಗ್ರಾಮಸ್ಥರ ಅಭಿಪ್ರಾಯವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ತೋಳ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆಯಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳು, ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ಆದಿಕರ್ನಾಟಕ, ಬೋವಿ, ನಾಯಕ, ಕುರುಬ, ವೀರಶೈವ, ಮುಸ್ಲಿಂ ಜನಾಂಗಗಳಿವೆ. ಬೋವಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೨೫೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೪೮೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೨೩ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನಕವಜ್ರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನಕವಜ್ರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನಕವಜ್ರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೯ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೭೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಮೈಲಾರಲಿಂಗೇಶ್ವರ, ಕಾವಲಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚಿನಕವಜ್ರ ಜನತಾ ಕಾಲೋನಿ

ಚಿನಕವಜ್ರ ಜನತಾ ಕಾಲೋನಿಯು ಮಧುಗಿರಿಯ ದಕ್ಷಿಣ ದಿಕ್ಕಿನಲ್ಲಿದ್ದು ಚಿನಕವಜ್ರದ ಹೊರವಲಯದಲ್ಲಿದೆ. ಒಟ್ಟು ೩೨ ಮನೆಗಳನ್ನು ಹೊಂದಿದ್ದು ೧೩೧ ಜನಸಂಖ್ಯೆಯನ್ನು ಹೊಂದಿದೆ. ಸರ್ಕಾರದ ಜನತಾ ಯೋಜನೆಯಡಿ ಮನೆಗಳು ನಿರ್ಮಾಣವಾಗಿವೆ. ನಾಯಕ, ಆದಿಕರ್ನಾಟಕ, ಬೋವಿ, ಕುರುಬ, ಒಕ್ಕಲಿಗ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಜನತಾ ಯೋಜನೆಯಡಿ ಗ್ರಾಮದಲ್ಲಿ ಮನೆಗಳು ನಿರ್ಮಾಣವಾಗಿವೆ.

ಚಿನಕವಜ್ರ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಮತ್ತು ಕೂಲಿ ಮುಖ್ಯ ಕಸುಬಾಗಿದೆ. ಪೊಲೀಸ್, ಸಾರಿಗೆ ಇಲಾಖೆಯಲ್ಲಿ ಮೂರು ಜನ ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮದಲ್ಲಿ ಮೈಲಾರಲಿಂಗೇಶ್ವರ ದೇವಾಲಯವಿದೆ. ದಸರಾ ಹಬ್ಬದಂದು ಮೈಲಾರ ದೇವರಿಗೆ ದೋಣಿಸೇವೆ ಎಂಬ ಆಚರಣೆ ಇದ್ದು ಗೊರವರ ಕುಣಿತ, ಪರಾಕು ಏರ್ಪಡುತ್ತದೆ. ಜಾತ್ಯಾತೀತವಾಗಿ ಗೊರವರ ದೋಣಿಗೆ ಹಾಲು ಹಾಕುವುದು ಇಲ್ಲಿ ವಿಶೇಷವಾಗಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಚಿಕ್ಕೇಗೌಡನರೊಪ್ಪ

ಚಿಕ್ಕೇಗೌಡನರೊಪ್ಪ ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೧ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೧೪೦.೯೫ ಹೆಕ್ಟೇರ್‌ನಲ್ಲಿದ್ದು ಜನವಸತಿ ಇಲ್ಲದ ಬೇಚಾರಕ್ ಗ್ರಾಮರಾಗಿದೆ. ಇಲ್ಲಿ ಹೊಂಗೆ ಮರ, ಜಾಲಿಮರ, ನೀಲಗಿರಿ ಮರಗಳಿವೆ. ದೊಡ್ಡ ವೀರಗೊಂಡನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ.

## ಚಿಕ್ಕನಹಳ್ಳಿ

ಚಿಕ್ಕನಹಳ್ಳಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೪ ಕಿಮೀ ದೂರದಲ್ಲಿದೆ. ಒಟ್ಟು

ಭೌಗೋಳಿಕ ವಿಸ್ತೀರ್ಣವು ೩೫೦.೮೨ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲು ಹಾಗೂ ಕೆಂಪು ಮಿಶ್ರ ಮಣ್ಣಿನಿಂದ ಕೂಡಿದೆ. ಚಿಕ್ಕವನಹಳ್ಳಿ > ಚಿಕ್ಕನಹಳ್ಳಿ ಎಂದಾಗಿದೆ.

ಯಾವುದೇ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ನರಿ, ತೋಳ, ಕರಡಿ, ಮೊಲ ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕಿದ್ದು ನಾಟಿಕೋಳಿಗಳನ್ನು ಸಾಕಿದ್ದಾರೆ. ೮ ರಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬಿದ್ದಿದೆ. ಗ್ರಾಮಕ್ಕೆ ಸೇರಿದಂತೆ ೧ ಹಳ್ಳವಿದೆ. ಸಿದ್ದಾಪುರ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತಿದೆ.

ಒಟ್ಟು ೨೪ ಮನೆಗಳಿದ್ದು ೮೨ ಜನಸಂಖ್ಯೆ ಇದೆ. ಆದಿಕರ್ನಾಟಕ ಜನಾಂಗದವರು ಅಧಿಕ ಸಂಖ್ಯೆಯಲ್ಲಿದ್ದು ಒಕ್ಕಲಿಗ, ನಾಯಕ ಜನಾಂಗ ಕಿರು ಸಮುದಾಯವಾಗಿದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷವಾಗಿದೆ. ವ್ಯವಸಾಯ ಮುಖ್ಯ ಉದ್ಯೋಗವಾಗಿದ್ದು ರಾಗಿ, ಭತ್ತ, ಜೋಳ ಹಾಗೂ ಕಡಲೇಕಾಯಿ ಬೆಳೆಯುವರು. ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ಸಿದ್ದಾಪುರ ಅಂಚೆ ಸಂಪರ್ಕ ಒದಗಿಸುತ್ತಿದೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೫೬% ಇದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ ವೇತನ, ವಿಕಲಚೇತನ, ವಿಧವಾ ವೇತನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಮಾರಮ್ಮನ ದೇವಸ್ಥಾನವಿದೆ. ಮಾರಮ್ಮನಿಗೆ ಆಷಾಢ ಮಾಸದಲ್ಲಿ ಆರತಿ, ಬಾನ, ಬಲಿ ಏರ್ಪಡಿಸುತ್ತಾರೆ. ಮಾರಿ ಉತ್ಸವ ಊರ ಹಬ್ಬವಾಗಿ ನಡೆಯುವುದು ಇಲ್ಲಿನ ವಿಶೇಷ ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ.

## ಚಿಕ್ಕಮಾಲೂರು

ಚಿಕ್ಕಮಾಲೂರು ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೪೭.೪೭ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಮಾಳೂರು ಎಂಬ ಹೆಸರಿನಲ್ಲಿ ಗ್ರಾಮ ರೂಪುಗೊಂಡಿದ್ದು ನಂತರ ಮಾಲೂರು ಎಂದಾಗಿದೆ. ಮಾಳು ಎಂದರೆ ಉಪ್ಪು ತಯಾರಿಕಾ ಸ್ಥಳ ಎಂದು ಅರ್ಥ. ಈಗ ದೊಡ್ಡಮಾಲೂರು ಮತ್ತು ಚಿಕ್ಕಮಾಲೂರು ೨ ಗ್ರಾಮಗಳು ಅಕ್ಕಪಕ್ಕ ಇವೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಕೋಗಿಲೆ, ಗಿಳಿ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೪೭.೪೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಇಲ್ಲಿ ಎರಡು ನೀರಿನ ಟ್ಯಾಂಕ್‌ಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಲಿಂಗಾಯಿತ, ಒಕ್ಕಲಿಗ, ಉಪ್ಪಾರ, ಬೋವಿ. ಆದಿದ್ರಾವಿಡ, ಕುರುಬ, ಮಡಿವಾಳ, ಭಜಂತ್ರಿ, ಶೆಟ್ಟರು, ಗೊಲ್ಲರು ಕಿರು ಸಮುದಾಯವಾಗಿದೆ. ಇಲ್ಲಿ ಕನ್ನಡ ಮತ್ತು ತೆಲುಗು ಭಾಷೆ ಮಾತನಾಡುತ್ತಾರೆ.

ಒಟ್ಟು ೫೫೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೯೧೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೧೧೧ ಮತ್ತು ಹೆಂಗಸರು ೧೦೭೯ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್

ಮನೆ, ಕಲ್ಲಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೦೩ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೧೦ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್, ಕಾರು ಹಾಗೂ ೧೦ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೫೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನಾಂಗದವರು ಇದ್ದಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ಅವರೆ ಮತ್ತು ತೆಂಗನ್ನು ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಹಾಲು ಉತ್ಪಾದಕರ ಸಹಕಾರ ಸಂಘವಿದೆ. ಸಾರಿಗೆ, ಪೊಲೀಸ್, ಶಿಕ್ಷಣ ಇಲಾಖೆಗಳಿಗೆ ಸೇರಿದ ೧೦ ಜನ ಸರ್ಕಾರಿ ನೌಕರರು ಇದ್ದಾರೆ. ನಾಯಕ ಜನಾಂಗದ ೪೦ ವರ್ಷದ ಎಲ್.ಸಿ. ನಾಗರಾಜು ತಹಸೀಲ್ದಾರರಾಗಿದ್ದಾರೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಅನೇಕ ಜನ ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ಇಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಕಂಡುಬರುತ್ತದೆ. ಗ್ರಾಮದಲ್ಲಿ ಕಂದಾಯ ಇಲಾಖೆ ಇದೆ. ಡಿಸಿಸಿ ಬ್ಯಾಂಕ್ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯಿತ್ತಿ ಕ್ಷೇತ್ರ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮ ಪಂಚಾಯ್ತಿ ಕಾರ್ಯಾಲಯ ಗ್ರಾಮದಲ್ಲಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿಕ್ಕಮಾಲೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೯೦ ವಿದ್ಯಾರ್ಥಿಗಳು, ೪ ಜನ ಶಿಕ್ಷಕರಿದ್ದಾರೆ. ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಆರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೧೮%. ಸರ್ಕಾರಿ ಪ್ರೌಢಶಾಲೆಯಲ್ಲಿ ೨೨೦ ಮಕ್ಕಳು, ೯ ಜನ ಶಿಕ್ಷಕರಿದ್ದಾರೆ. ಬಾಲಕ–ಬಾಲಕಿಯರ ಹಾಸ್ಟೆಲ್ ಇದೆ.

ಗ್ರಾಮದ ಕದರಿ ನರಸಿಂಹಸ್ವಾಮಿ ದೇವಾಲಯದ ಎದುರಿನಲ್ಲಿ ಶಿಲಾ ಶಾಸನವಿದೆ. ಇದು ವಿಜಯನಗರದ ಅಚ್ಯುತರಾಯ ಮಹಾರಾಜರ ಕಾಲದ್ದಾಗಿದೆ. ಈ ಶಾಸನದ ಕಾಲವು ಶಾಲಿವಾಹನ ಶಕ ೧೪೫೩ ಅಂದರೆ ಕ್ರಿ.ಶ.೧೫೩೧ ಆಗಿದೆ. ಈ ಶಾಸನದಲ್ಲಿ ಸಂತೆ ಪ್ರಾರಂಭಿಸಿದ್ದನ್ನು ದಾಖಲಿಸಿದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಕಾಫಿ–ಟೀ ದೊರೆಯುವ ಹೋಟೆಲ್‌ಗಳು ಹಾಗೂ ಅಂಗಡಿಗಳಿವೆ. ಈ ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಒಂದು ಗ್ರಂಥಾಲಯವಿದ್ದು ೫೦೦ ಪುಸ್ತಕಗಳು ಹಾಗೂ ಒಬ್ಬರು ಗ್ರಂಥಪಾಲಕರಿದ್ದಾರೆ.

ಗ್ರಾಮದಲ್ಲಿ ಒಂದು ವೀರಗಲ್ಲು ಇದೆ.

ಗ್ರಾಮದಲ್ಲಿ ಕದರಿ ನರಸಿಂಹಸ್ವಾಮಿ, ಈಶ್ವರ, ಬಾಬಯ್ಯ, ಮಾರಮ್ಮ ದೇವಿ ದೇವಾಲಯಗಳಿವೆ.

ಗ್ರಾಮದಲ್ಲಿ ನಾಗರಕಟ್ಟೆಗಳಿವೆ. ಮಾರಮ್ಮ ದೇವಿಯ ಹಬ್ಬವನ್ನು ಆಚರಿಸುವರು. ಗ್ರಾಮದಲ್ಲಿ ಹಿಂದೂ ಹಬ್ಬಗಳನ್ನು (ಯುಗಾದಿ, ದಸರಾ, ದೀಪಾವಳಿ) ತುಂಬಾ ವೈಭವದಿಂದ ಆಚರಿಸುತ್ತಾರೆ. ಕದರಿ ಹುಣ್ಣಿಮೆ ಹಬ್ಬದಲ್ಲಿ ನರಸಿಂಹಸ್ವಾಮಿ ರಥೋತ್ಸವ ನಡೆಯುತ್ತದೆ.

## ಚೆನ್ನಗಿರಿಪಾಳ್ಯ

ಚೆನ್ನಗಿರಿಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೦೪.೯೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಎತ್ತರದ ನಿಸರ್ಗದ ನಡುವೆ ಇರುವ ಗ್ರಾಮವಾಗಿದ್ದು ಚನ್ನಗಿರಿಪಾಳ್ಯ ಎಂದು ಕರೆಯಲಾಗಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ  ಹೊಂಗೆ, ಬೇವು, ನೇರಳೆ, ಅರಳಿ, ಆಲದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಮೊಲ, ಹಂದಿ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಹದ್ದು, ಕೋಗಿಲೆ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೧೮ ಎಮ್ಮೆ, ೧೨೦ ಕುರಿ ಹಾಗೂ ೨೧೮ ಮೇಕೆಗಳನ್ನು ಸಾಕಿದ್ದಾರೆ. ೪೫ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೨ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ತಿಗುಳ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೮೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೭೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ.  ಗಂಡಸರು ೧೯೭ ಮತ್ತು ಹೆಂಗಸರು ೧೭೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ.  ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೫ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಸೂರ್ಯಕಾಂತಿ, ಬಾಳೆ, ದಾಳಿಂಬೆ, ಅಡಿಕೆ ಮತ್ತು ತೆಂಗನ್ನು ಬೆಳೆಯಲಾಗುತ್ತಿದೆ. ಒಂದು ಮಿನಿ ಡೈರಿಯಿದೆ.

ಶಿಕ್ಷಣ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರು, ಟೈಲರಿಂಗ್ ಕೆಲಸ ಮಾಡುವಂತಹ ಒಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೊಂಡವಾಡಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ಕುಡಿಯುವ ನೀರಿನ ಸರಬರಾಜು ಕೊಂಡವಾಡಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೊಂಡವಾಡಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಅಂಗನವಾಡಿಯಲ್ಲಿ ೧೬ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಹಿರಿಯ ಪಾಠಶಾಲೆಯಲ್ಲಿ ೬೨ ವಿದ್ಯಾರ್ಥಿಗಳು, ನಾಲ್ವರು ಶಿಕ್ಷಕರು ಇದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೯.೨%. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೬೨% ಆಗಿದೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮಾರಮ್ಮ ದೇವಾಲಯಗಳಿವೆ. ಗ್ರಾಮದ ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದೇವವಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮಾರಮ್ಮನ ಆರತಿಯನ್ನು ಹರಕೆ ಹಾಗೂ ಬಲಿಯೊಂದಿಗೆ ಆಚರಿಸುತ್ತಾರೆ.

## ಚೆನ್ನಸಾಗರ

ಚೆನ್ನಸಾಗರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೭೦.೭೮ ಹೆಕ್ಟೇರ್ ಹೊಂದಿದ್ದು ಕೋಡಗದಾಲ ಭೂ ವಿಸ್ತೀರ್ಣದಲ್ಲಿ ಸೇರಿರುವ ಮಜರೆ ಗ್ರಾಮವಾಗಿದೆ.

ಜಯಮಂಗಲಿ ನದಿಯ ದಡದಲ್ಲಿರುವುದರಿಂದ ಸೊಗಸಾದ ನೋಟದ ಕಾರಣದಿಂದಾಗಿ ಚನ್ನಸಾಗರ ಎಂದು ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಹೊಂಗೆ, ಅರಳಿ, ಬೇವು, ಅಕೇಶಿಯಾ, ನೀಲಗಿರಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಪಾರಿವಾಳ, ಕೋಗಿಲೆ, ಗೂಬೆ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೧೩೦ ಎಮ್ಮೆ, ೨೧೦ ಕುರಿ, ೪೦ ಮೇಕೆಗಳನ್ನು ಸಾಕಿದ್ದಾರೆ. ೬೦ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಮತ್ತು ಜಯಮಂಗಲಿ ನದಿ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಸಾದರು, ಕುರುಬ, ಶೆಟ್ರು, ಬ್ರಾಹ್ಮಣ, ಲಿಂಗಾಯಿತ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೯೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೦೩ ಮತ್ತು ಹೆಂಗಸರು ೧೯೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್

ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೬ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಡಿಕೆ, ಶೇಂಗಾ, ದಾಳಿಂಬೆ, ಬಾಳೆ ಮತ್ತು ತೆಂಗನ್ನು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಅಂಚೆ ಇಲಾಖೆ, ಶಿಕ್ಷಣ ಇಲಾಖೆ, ವಾರ್ಡನ್ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡಗದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡಗದಾಲ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡಗದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡಗದಾಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ೧೧ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ೩೧ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಶ್ರೀರಾಮ, ನವಗ್ರಹ ದೇವಾಲಯಗಳಿವೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚುಂಚೇನಹಳ್ಳಿ

ಚುಂಚೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೭೨.೨೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಚುಂಚ ಎಂಬ ವ್ಯಕ್ತಿಮೂಲ ಮತ್ತು ಚುಂಚ ಎಂದರೆ ನವಿಲು ಎಂಬ ಅರ್ಥಗಳಿಂದಾಗಿ ಚುಂಚನಹಳ್ಳಿ > ಚುಂಚೇನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ತೋಪು ಇದೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಹೊಂಗೆ, ಅರಳಿ, ಬೇವು, ಹುಣಸೆ, ನೇರಳೆ, ಮಾವು ಮತ್ತು ಹಲಸಿನ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಮೊಲ, ಕರಡಿ, ನರಿ, ತೋಳ, ಕಾಡುಹಂದಿ

ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಪಾರಿವಾಳ, ಗರುಡ, ನವಿಲು, ಗಿಳಿ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ೨ ಗೋಕಟ್ಟೆ ಇದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ, ಕುಂಬಾರ, ನಾಯಕ, ಮಡಿವಾಳ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೦೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೨೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೧೫ ಮತ್ತು ಹೆಂಗಸರು ೨೧೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ಮುಸುಕಿನಜೋಳ, ಶೇಂಗಾ, ದಾಳಿಂಬೆ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ನಾಲ್ಕು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ, ಕುಂಬಾರ ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ೫ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ

ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೩ ಮಕ್ಕಳಿದ್ದಾರೆ. ಇಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಕಾಫಿ ಮತ್ತು ಟೀ ದೊರೆಯುವ ೪ ಹೋಟೆಲ್ ಇದ್ದು ೨ ಅಂಗಡಿಗಳಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಚಿಕ್ಕ ಕೋಟೆ, ಊರ ಬಾಗಿಲು ಇಂದಿಗೂ ಇದೆ.

ಗ್ರಾಮದಲ್ಲಿ ಈಶ್ವರ, ಶನಿಮಹಾತ್ಮ, ವಿನಾಯಕ, ಮುತ್ತುರಾಯ ದೇವಾಲಯಗಳು ಕಂಡುಬರುತ್ತದೆ. ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚಿಕ್ಕತಿಮ್ಮನಹಳ್ಳಿ

ಚಿಕ್ಕತಿಮ್ಮನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೬೦.೫೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಚಿಕ್ಕತಿಮ್ಮ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ಚಿಕ್ಕತಿಮ್ಮನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಮಾವು, ಹಲಸು, ಬೇವು ಮತ್ತು ನೀಲಗಿರಿ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಕೋಗಿಲೆ, ಪಾರಿವಾಳ, ಹದ್ದು, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೬ ಎಮ್ಮೆ, ೮ ಕುರಿ, ೧೦ ಮೇಕೆಗಳನ್ನು ಸಾಕಿದ್ದಾರೆ. ೧೦ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮುಸ್ಲಿಂ, ಲಿಂಗಾಯಿತ, ರೆಡ್ಡಿ, ಸಾದರು, ಲಂಬಾಣಿ, ವಿಶ್ವಕರ್ಮ, ಬೋವಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು, ಲಂಬಾಣಿ ಹಾಗೂ ಉರ್ದು ಮಾತನಾಡುವವರಿದ್ದಾರೆ.

ಒಟ್ಟು ೩೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೯೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೪ ಮತ್ತು ಹೆಂಗಸರು ೪೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೨ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ

ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೭ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ತೊಗರಿ, ಶೇಂಗಾ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಶಿಕ್ಷಣ, ಕಂದಾಯ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೫.೮೬

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಕಾಫಿ ಮತ್ತು ಟೀ ದೊರೆಯುವ ೧ ಹೋಟೆಲ್ ಇದ್ದು ೧ ಅಂಗಡಿಗಳಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮವು ಎಲ್ಲಾ ರೀತಿಯ ಜನಪದ ಕ್ಷೇತ್ರಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ.

ಗ್ರಾಮದಲ್ಲಿ ಮಾರಮ್ಮನ ದೇವಾಲಯ ಕಂಡುಬರುತ್ತದೆ. ನಾಗರಕಟ್ಟೆಗಳಿವೆ. ದೇವರಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚಿಕ್ಕಹೊಸಹಳ್ಳಿ

ಚಿಕ್ಕಹೊಸಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೨೨.೫೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಹೊಸದಾಗಿ ಗ್ರಾಮ ರಚನೆಯಾದಾಗ ಚಿಕ್ಕದು, ದೊಡ್ಡದು ಎಂದಾಗಿ ಚಿಕ್ಕಹೊಸಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಹುಣಸೆ, ಮಾವು, ಹಲಸು, ನೇರಳೆ, ಆಲ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಹದ್ದು, ಗೌಜುಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳು ಮತ್ತು ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮

ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ, ಗೌಡ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಲಿಂಗಾಯಿತ, ತಿಗುಳ, ಗೌಡರು, ಕುರುಬಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೮೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೮೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೯೦ ಮತ್ತು ಹೆಂಗಸರು ೧೯೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೪ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ತೊಗರಿ, ಶೇಂಗಾ, ಮುಸುಕಿನ ಜೋಳ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಫೈರ್ ಇಂಜಿನ್, ಶಿಕ್ಷಣ ಇಲಾಖೆಗೆ ಸೇರಿದ ಮೂರು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬ್ಯಾಲ್ಯ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಬ್ಯಾಲ್ಯ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬ್ಯಾಲ್ಯ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಬ್ಯಾಲ್ಯ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೩.೮೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ ಮತ್ತು

ಟೀ ದೊರೆಯುವ ೨ ಹೋಟೆಲ್ ಇದ್ದು ೩ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚಿಕ್ಕತಿಮ್ಮನಹಳ್ಳಿ (ಬೇವಿನಮರದಪಾಳ್ಯ)

ಚಿಕ್ಕತಿಮ್ಮನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೯.೩೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮದ ಪ್ರಾಚೀನ ಹೆಸರು ಬೇವಿನಮರದಪಾಳ್ಯ. ಗ್ರಾಮಕ್ಕೆ ಈ ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಗ್ರಾಮದ ದ್ವಾರ ಬಾಗಿಲಿನಲ್ಲಿ ಒಂದು ದೊಡ್ಡ ಬೇವಿನಮರ ಇದ್ದುದರಿಂದ ಗ್ರಾಮಕ್ಕೆ ಬೇವಿನ ಮರದಪಾಳ್ಯ ಎಂದು ನಾಮಕರಣ ಮಾಡಿದ್ದರು. ತದನಂತರ ಗ್ರಾಮಕ್ಕೆ ಚಿಕ್ಕತಿಮ್ಮನಹಳ್ಳಿ ಎಂದು ಮರುನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿ–ಬಿಳಿ ಕಲ್ಲುಗಳಿಂದ ಕೂಡಿದ ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಕುರುಚಲು ಗಿಡದ ಅರಣ್ಯ ಪ್ರದೇಶವಿದ್ದು ಪ್ರಾಣಿಗಳಾದ ಜಿಂಕೆ, ಕರಡಿ, ನರಿ, ತೋಳ, ಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕಾಗೆ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೭ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಊರ ಮುಂದಲ ಹಳ್ಳ ಹಾಗೂ ಒಂದು ಕುಂಟೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳಿದ್ದು ೫ ಸಿಸ್ಟರ್ನ್‌ಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೮೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೦೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೯೯ ಮತ್ತು ಹೆಂಗಸರು ೨೦೯ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಇಟ್ಟಿಗೆ ಮನೆ, ಗುಡಿಸಲು ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೪೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಜೋಳ, ತೊಗರಿ, ಅವರೆ, ಶೇಂಗಾ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಹೂವು ಬೆಳೆಯುವರು. ಹೂವು ಗ್ರಾಮದ ವ್ಯಾಪಾರದಲ್ಲಿನ ಪ್ರಮುಖ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಮಿನಿ ಡೈರಿ ಗ್ರಾಮದಲ್ಲಿದೆ.

ಗ್ರಾಮದಲ್ಲಿ ಶಿಕ್ಷಕರು, ಮಿಲಿಟರಿ ಸೇರಿದಂತೆ ೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕವಣದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ

ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕವಣದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕವಣದಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಇಲ್ಲಿ ಮೊಬೈಲ್‌ನಂತಹ ದೂರಸಂಪರ್ಕ ಸಾಧನಗಳಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೬ ಸ್ವಸಹಾಯ ಸಂಘಗಳಿವೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೯ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು, ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೩೭.೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಒಂದು ಹೋಟೆಲ್ ಹಾಗೂ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಬಸವಣ್ಣ, ಜುಂಜಪ್ಪ, ಮಾರಮ್ಮ ದೇವಾಲಯವಿದೆ. ಪ್ರತಿ ವರ್ಷ ಮಾರಮ್ಮನ ಜಾತ್ರಾ ಮಹೋತ್ಸವವನ್ನು ಹರಕೆ ಹಾಗೂ ಬಲಿ ಕೊಡುವುದರೊಂದಿಗೆ ಆಚರಿಸುವರು. ಗ್ರಾಮದಲ್ಲಿ ಒಂದು ಶಿವಾನಂದ ಆಶ್ರಮ ಇದೆ. ಇಲ್ಲಿ ಒಬ್ಬರು ಪೂಜೆ ಮಾಡುವವರೂ ಇದ್ದಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚೀಲನಹಳ್ಳಿ

ಚೀಲನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೨೭೫.೭೧ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ. ಅಕ್ಕವ್ವನ ಬೆಟ್ಟವಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ ಮತ್ತು ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ರಾಂಪುರ ಕಟ್ಟೆ, ಕೆರೆ ಇದೆ. ಇದು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ ಗ್ರಾಮದಲ್ಲಿ ೧೮ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಒಕ್ಕಲಿಗ ಜನಾಂಗದವರೆ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮಡಿವಾಳ, ನಾಯಕ, ಆದಿಕರ್ನಾಟಕ, ಆದಿದ್ರಾವಿಡ, ಗೊಲ್ಲ, ಕಮ್ಮಾರ, ಭೋವಿ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೦೫ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿ ಪ್ರಕಾರ ೫೬೭ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು ३೦४, ಹೆಣ್ಣು ೨೬४ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್ ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ

ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಎತ್ತಿನ ಗಾಡಿಗಳು, ಟ್ರ್ಯಕ್ಟರ್, ಬೈಕ್‌ಗಳು ಮುಂತಾದ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ೬೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಈ ಗ್ರಾಮವು ಉತ್ತಮವಾದ ಚರಂಡಿ ವ್ಯವಸ್ಥೆ ರಸ್ತೆ ಮಾರ್ಗಗಳನ್ನು ಒಳಗೊಂಡಿದೆ ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗ, ಜೋಳ ರಾಗಿ ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ೧ ಡೈರಿಯನ್ನು ಹೊಂದಿದೆ. ಒಬ್ಬರು ವೈದ್ಯರಿದ್ದಾರೆ.

ಸಾರಿಗೆ ಇಲಾಖೆ, ವಿದ್ಯುತ್ ಇಲಾಖೆ, ಶಿಕ್ಷಣ ಇಲಾಖೆಗಳಿಗೆ ಸಂಬಂಧ ಪಟ್ಟಂತೆ ಸೇರಿದ ಒಟ್ಟು ೮ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡು ಬರುವುದಿಲ್ಲ ವ್ಯವಸಾಯವೇ ಮುಖ್ಯ ಕಸುಬಾಗಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಗರಣಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ ಗರಣಿ ಗ್ರಾಮದಲ್ಲಿಯ್ಲೇ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ ಒಟ್ಟು ಒಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ

ಈ ಗ್ರಾಮದಲ್ಲಿ ರಸ್ತೆ ಮಾರ್ಗವಿದ್ದು ಈ ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದೆ ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗರಣಿ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳಿದ್ದಾರೆ ಒಬ್ಬರು ಕಾರ್ಯಕರ್ತೆ ಮತ್ತು ಒಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೊಂದಿದ್ದು ಮೂವರು ಶಿಕ್ಷಕರು, ೭೨ ವಿದ್ಯಾರ್ಥಿಗಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ದಾಪ್ಯವೇತನ, ವಿಕಲಚೇತನವೇತನ, ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು ಎರಡು ಅಂಗಡಿಗಳಿವೆ ಈ ಗ್ರಾಮದಲ್ಲಿ ಜ್ವರ ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡು ಬರುತ್ತವೆ.

ಗ್ರಾಮದಲ್ಲಿ ಆಂಜನೇಯ ಸ್ವಾಮಿ, ಗಣೇಶ ದೇವಾಲಯವಿದೆ, ಶನಿಮಹಾತ್ಮ ದೇವಾಲಯವಿದೆ. ದಂಡಿನಮಾರಮ್ಮ, ಭೂತಪ್ಪ, ಯಲ್ಲೂರು ಮಾರಮ್ಮ, ಶೆಟ್ಟಿಹಳ್ಳಿ ಮಾರಮ್ಮ, ಊರುಮಾರಮ್ಮ, ರಂಗನಾಥಸ್ವಾಮಿ ದೇವಾಲಯಗಳಿವೆ. ಶ್ರಾವಣದಲ್ಲಿ ರಂಗನಾಥಸ್ವಾಮಿ ಜಾತ್ರೆ ನಡೆಯುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚನ್ನಮಲ್ಲನಹಳ್ಳಿ

ಚನ್ನಮಲ್ಲನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೫೪೪.೦೬ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ. ವ್ಯಕ್ತಿಮೂಲದಿಂದ ಗ್ರಾಮಕ್ಕೆ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ. ರಾಮದೇವರ ಬೆಟ್ಟವಿದೆ.

ಗ್ರಾಮವು ೧೮೦೦ ಎಕರೆ ನೀಲಗಿರಿ ಅರಣ್ಯವನ್ನು ಹೊಂದಿದೆ. ಪ್ರಾಣಿಗಳಾದ ಕಾಡುಮೊಲ, ಕರಡಿ, ನರಿ ಕಾಡುಹಂದಿ ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ, ನವಿಲು, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಮತ್ತು

ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ೧ ಹಳ್ಳ ೧ ಕೆರೆಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳಿದ್ದು ೧ ಸಿಸ್ಟನ್‌ಗಳಿವೆ.

ಒಕ್ಕಲಿಗ ಜನಾಂಗದವರೆ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಆದಿದ್ರಾವಿಡ, ಕುಂಬಾರ, ಮಡಿವಾಳ, ವಿಶ್ವಕರ್ಮ ಜನಾಂಗದವರೇ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೩೨ ಮನೆಗಳಿದ್ದು ೨೦೧೧ರ ಜನಗಣತಿ ಪ್ರಕಾರ ಒಟ್ಟು ೬೫೧ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು ೩೪೯, ಹೆಣ್ಣು ೩೦೨ ಜನಸಂಖ್ಯೆ ಇದೆ, ಗ್ರಾಮದಲ್ಲಿ ಕಾಂಕ್ರೀಟ್ ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾಋವಾಗಿದೆ.

ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್‌ಗಳು ಹಾಗೂ ಬೈಕ್‌ಗಳನ್ನು ಹಾಗೂ ಆಟೋಗಳಂತಹ ವಾಹನಗಳಿವೆ. ಈ ಗ್ರಾಮವು ಉತ್ತಮವಾದ ರಸ್ತೆ ವ್ಯವಸ್ಥೆ ಚರಂಡಿ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದ ೫೨ ಮನೆಗಳು ಶೌಚಾಲಯಗಳನ್ನು ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಶೇಂಗಾ ಮುಖ್ಯ ಬೆಳೆಗಳಾಗಿವೆ, ಶೇಂಗ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆಯಲ್ಲಿ ಇದ್ದು ಇದನ್ನು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ.

ಇಂಜಿನಿಯರ್, ಪ್ರಜಾಪ್ರಗತಿ ಸಂಪಾದಕ ಚೆಲುವರಾಜು ಈ ಗ್ರಾಮದವರು. ಶಿಕ್ಷಣ ಇಲಾಖೆ ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ೮ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದಾರೆ. ಹಾಲಿನ ಡೈರಿಯ ಮ್ಯಾನೇಜರ್ ಶ್ರೀನಿವಾಸ ಎನ್ನುವವರು ಈ ಗ್ರಾಮದವರಾಗಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಗರಣಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ ಗರಣಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ ಒಟ್ಟು ಒಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಗರಣಿ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಗರಣಿ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೬ ಮಕ್ಕಳಿದ್ದಾರೆ ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದ್ದು ೩ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು ಎರಡು ಅಂಗಡಿಗಳಿವೆ ಈ ಗ್ರಾಮದಲ್ಲಿ

ಜ್ವರ ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡು ಬರುತ್ತವೆ.

ಗ್ರಾಮದಲ್ಲಿ ಕೊಲ್ಲಾಪುರದಮ್ಮ, ಆಂಜನೇಯ, ಗೌಡಚಂದ್ರ, ಮಾರಮ್ಮ, ಶ್ರೀರಾಮ, ಈಶ್ವರ ದೇವಾಲಯಗಳಿವೆ. ೪ ವೀರಗಲ್ಲು, ೧ ಕರುಗಲ್ಲು, ೨ ಬಾಣಚಿತ್ರದ ಕಲ್ಲುಗಳಿವೆ. ಸುರಭಿ ಗೋಶಾಲೆಯಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚೌಳಹಳ್ಳಿ

ಚೌಳಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೨೩೭.೯೪ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ. ನಿಸರ್ಗ ಕಾರಣದಿಂದ ಚೌಳು ಮಣ್ಣಿನಿಂದ ಕೂಡಿದ ಪ್ರದೇಶವಾದುದರಿಂದ ಚೌಳಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಕಾಡು ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಮತ್ತು ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೯ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳಿಗೆ ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬಲಜಿಗ, ಒಕ್ಕಲಿಗ, ಕುಂಬಾರ, ನಾಯಕ, ರೆಡ್ಡಿ, ಬಳೆಗಾರ ಜನಾಂಗದವರೆ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ.

ಒಟ್ಟು ೧೩೭ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೫೪೫ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು ೨೭೮, ಹೆಣ್ಣು ೨೬೭,ಜನಸಂಖ್ಯೆ ಇದೆ, ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಈ ಗ್ರಾಮದಲ್ಲಿ ಉತ್ತಮವಾದ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೭ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ, ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ, ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ೪ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಐ.ಡಿ.ಹಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಇಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಐ.ಡಿ.ಹಳ್ಳಿ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಐ.ಡಿ.ಹಳ್ಳಿ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೨ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ೫೫ ಮಕ್ಕಳಿದ್ದಾರೆ, ಒಬ್ಬ ಕಾರ್ಯಕರ್ತೆ ಹಾಗೂ ಒಬ್ಬ ಸಹಾಯಕಿ ಇದ್ದಾರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ೨೬ ಮಕ್ಕಳಿದ್ದಾರೆ ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೩.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ದಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ೨ ಅಂಗಡಿಗಳಿವೆ ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ೧ ಕರುಗಲ್ಲು ಇದೆ.

ಗ್ರಾಮದಲ್ಲಿ ಪಾತಾಲಮ್ಮ, ತಾಡಿ ನಾಗಮ್ಮ, ಮುತ್ತುರಾಯ, ಮಾರಮ್ಮದೇವಿ ದೇವಾಲಯಗಳಿವೆ. ಮಾರಮ್ಮ ದೇವಿಗೆ ಪ್ರತಿ ವರ್ಷ ಅದ್ದೂರಿಯಾಗಿ ಜಾತ್ರೆ ನಡೆಯುತ್ತದೆ ಅಂದು ಊರಿನ ತುಂಬ ದೇವರ ಉತ್ಸವ ನಡೆಯುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚಿಕ್ಕದಾಳವಟ್ಟ

ಚಿಕ್ಕದಾಳವಟ್ಟ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೭ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೩೯೭.೩೪ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ.

ಚಿಕ್ಕದೇವರಾಜ ಒಡೆಯರು ತಮ್ಮ ಸೈನಿಕರ ದಳ (ತಂಡ)ವನ್ನು ಇಲ್ಲಿ ಇರಿಸಿದ್ದರಿಂದ ದಳವಟ್ಟ ಎಂಬ ಗ್ರಾಮ ರಚನೆಯಾಗಿದೆ. ಈ ಹೆಸರಿನ ೨ ದಾಳವಟ್ಟಗಳಿದ್ದು ಇದು ಪ್ರಮಾಣದಲ್ಲಿ ಚಿಕ್ಕದಾದ್ದರಿಂದ ಚಿಕ್ಕ ದಾಳವಟ್ಟ ಎಂದು ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಮತ್ತು ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೦೮ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ, ಮುಸ್ಲಿಂ, ಉಪ್ಪಾರ, ನಾಯಕರು, ಸಾದರು, ರೆಡ್ಡಿ, ಅಗಸರು, ಕೊರಚರು, ಬೋವಿ, ಲಂಬಾಣಿ, ಪಿಂಜಾರ, ಕುಂಬಾರ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ಉರ್ದು, ಲಂಬಾಣಿ ಹಾಗೂ ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೪೬೮ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೨೦೨೯ ಜನಸಂಖ್ಯೆ ಹೊಂದಿದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಆಟೋ, ಟ್ರ್ಯಕ್ಟರ್ ಟಾಟಾ ಎಸಿ, ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದೆ, ಚರಂಡಿ ವ್ಯವಸ್ಥೆ, ಕಂಡುಬರುತ್ತದೆ. ಗ್ರಾಮದಲ್ಲಿ ೧೬೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗು ಅಡಿಕೆಯನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇಲ್ಲಿನ ರೈತರ ಉಪಕಸುಬಾಗಿದ್ದು ಒಂದು ಮಿನಿ ಡೈರಿ ಇದೆ ಗ್ರಾಮದಲ್ಲಿ ಅಂಚೆ ಕಛೇರಿಯಿದೆ.

ಶಿಕ್ಷಣ ಇಲಾಖೆ, ಸಾರಿಗೆ ಇಲಾಖೆ, ವಿದ್ಯುತ್ ಇಲಾಖೆ ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ೧೦ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರ್, ಬಡಗಿ, ಕುಂಬಾರ ಗಂಧದಕಡ್ಡಿ ತಯಾರಕರು ಗ್ರಾಮದಲ್ಲಿದ್ದಾರೆ, ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ. ಒಬ್ಬರು ವಕೀಲರು, ಇಬ್ಬರು ಇಂಜಿನಿಯರ್ ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಚಿಕ್ಕದಾಳವಟ್ಟಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಇಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಐ.ಡಿ.ಹಳ್ಳಿ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಚಿಕ್ಕದಾಳವಟ್ಟಿ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೩ ಸ್ತ್ರೀಶಕ್ತಿ ಸಂಘಗಳು ಹಾಗೂ ೨ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ೨೩ ಮಕ್ಕಳಿದ್ದಾರೆ, ಒಬ್ಬರು ಕಾರ್ಯಕರ್ತೆಯಿದ್ದು ಒಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ೧೫೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ, ಇಲ್ಲಿ ೬ ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ ಮತ್ತು ಟೀ ಹಾಗೂ ಲಘು ಉಪಹಾರಗಳಂತಹ ೧ ಹೊಟೇಲ್‌ಗಳಿದ್ದು ೩ ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಮಾರಮ್ಮ, ಸಪ್ಲಮ್ಮ, ಆಂಜನೇಯ, ಪಾತಾಲಮ್ಮ, ಶನಿಮಹಾತ್ಮ ದೇವಾಲಯವಿದ್ದು ಇವುಗಳಲ್ಲಿ ಮಾರಮ್ಮದೇವಿಗೆ ಪ್ರತಿವರ್ಷ ಅದ್ದೂರಿಯಾಗಿ ಜಾತ್ರೆ ನಡೆಯುತ್ತದೆ ಅಂದು ಊರಿನ ತುಂಬ ದೇವರ ಉತ್ಸವ ನಡೆಯುತ್ತದೆ ಹರಕೆ ಹೊರುವ ಬಲಿ ನೀಡುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಚಿಕ್ಕ ಯಲ್ಲೂರು

ಚಿಕ್ಕಯಲ್ಲೂರು ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೧೮೩.೬೭ ಹೆಕ್ಟೇರ್ಸ್, ಕಂದಾಯ ಗ್ರಾಮವಾಗಿದೆ.

ಯಲಕು ಎಂಬ ತೆಲುಗು ಶಬ್ದ ಕನ್ನಡದಲ್ಲಿ ಇಲಿ ಎಂಬ ಅರ್ಥವನ್ನು ಒಳಗೊಂಡಿದ್ದು ಪ್ರಾಣಿ ಮೂಲದಿಂದ ಯಲ್ಲೂರು ಆಗಿದೆ. ಈ ಹೆಸರಿನ ೨ ಗ್ರಾಮಗಳು ರಚನೆಯಾಗಿರುವುದರಿಂದ ಸ್ವರೂಪ ಹಾಗೂ ಹಿರಿತನದ ಆಧಾರದ ಮೇಲೆ ಚಿಕ್ಕ ಹಾಗೂ ದೊಡ್ಡ ಯಲ್ಲೂರು ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ

ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಲಂಬಾಣಿ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ಲಂಬಾಣಿ, ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೫೫ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೨೩೪ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು–೧೨೯, ಹೆಣ್ಣು–೧೦೫ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಈ ಗ್ರಾಮದಲ್ಲಿ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದ ೧೦ ಮನೆಗಳಲ್ಲಿ ಶೌಚಾಲಯ ವ್ಯವಸ್ಥೆಯಿದೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ, ಹಾಗೂ ಸಾರಿಗೆ ಇಲಾಖೆಗಳಿಗೆ ಸೇರಿದ ಒಟ್ಟು ೦೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ. ದೊಡ್ಡಯಲ್ಕೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ದೊಡ್ಡಯಲ್ಕೂರು ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಯಲ್ಕೂರು ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ ಒಟ್ಟು ೧೭ ಮಕ್ಕಳಿದ್ದಾರೆ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು ಒಟ್ಟು ೧೦ ಮಕ್ಕಳಿದ್ದಾರೆ. ಒಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೪.೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು

ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ೧ ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಛತ್ರಪಾಳ್ಯ

ಛತ್ರಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೮೮.೧೫ ಹೆಕ್ಟೇರ್ ಹೊಂದಿದ್ದು ಹನುಮಂತಪುರ ವಿಸ್ತೀರ್ಣದಲ್ಲಿ ಸೇರಿರುವ ಮಜರೆ ಗ್ರಾಮವಾಗಿದೆ. ಅನ್ನಛತ್ರ ನಡೆಸುತ್ತಿದ್ದರಿಂದ ಛತ್ರಪಾಳ್ಯ ಆಗಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮವು ಸ್ವಲ್ಪ ಅರಣ್ಯ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಕರಡಿ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮ ಒಂದು ಹಳ್ಳವಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಲಿಂಗಾಯಿತ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುಂಚಿಟಿಗ ಜನಾಂಗ ಸಮುದಾಯದವರಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರೂ ಗ್ರಾಮದಲ್ಲಿದ್ದಾರೆ.

ಒಟ್ಟು ៩೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೧೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೨೦ ಮತ್ತು ಹೆಂಗಸರು ೯೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೯ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರೂ ಗ್ರಾಮದಲ್ಲಿದ್ದಾರೆ. ತೆಂಗು ಮತ್ತು ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಮಿಡಿಗೇಶಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಮಿಡಿಗೇಶಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಮಿಡಿಗೇಶಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಮಿಡಿಗೇಶಿ ಅಂಚೆ ಸಂಪರ್ಕ ಒದಗಿಸುತ್ತಿದೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೫೧.೪%.

ಗ್ರಾಮದಲ್ಲಿ ಮಾರಮ್ಮನ ಗುಡಿ, ಈಶ್ವರ ದೇವಾಲಯಗಳಿವೆ. ಮಿಡಿಗೇಶಮ್ಮನ ಜಾತ್ರೆಯಲ್ಲಿ ಗ್ರಾಮಸ್ಥರು ಪಾಲ್ಗೊಂಡು ಸಂಭ್ರಮದಿಂದ ಆಚರಿಸುವರು. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ ಹಬ್ಬಗಳನ್ನು ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಇಲ್ಲಿ ಭಕ್ತಪ್ರಹ್ಲಾದ, ಸತ್ಯವರ್ಮನ ಕಥೆ ಎಂಬ ಮೂಡಲಪಾಯ ಪ್ರದರ್ಶಿಸುವ ಕಲೆಗಾರರಿದ್ದಾರೆ. ಬೋವಿ ಜನಾಂಗದ ಹನುಮಂತಪ್ಪ ಭಾಗವತರಾಗಿದ್ದರು. ತಿಮ್ಮಯ್ಯ (೮೦ ವರ್ಷ) ಮೂಡಲಪಾಯ ಯಕ್ಷಗಾನ ಭಾಗವತರಾಗಿದ್ದಾರೆ.

## ಜಯನಗರ (ಹೊಸಗುಡ್ಲು)

ಜಯನಗರವು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಬಡವನಹಳ್ಳಿ ಅಮೃತ್ ಮಹಲ್ ಕಾವಲ್‌ನ ಹೊರವಲಯದಲ್ಲಿರುವ ಮಜರೆ ಗ್ರಾಮ. ಒಟ್ಟು ೫೩ ಮನೆಗಳಿದ್ದು ೨೧೦ ಜನಸಂಖ್ಯೆ ಹೊಂದಿದೆ. ಕುಂಬಾರ ಜನಾಂಗ ಅಧಿಕ ಸಂಖ್ಯೆಯಲ್ಲಿದ್ದು ಒಕ್ಕಲಿಗ, ಆದಿದ್ರಾವಿಡ ಜನಾಂಗ ಕಿರು ಸಮುದಾಯಗಳಾಗಿವೆ. ಕನ್ನಡ ಹಾಗೂ ತೆಲುಗು ಮಾತನಾಡುವರು.೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ರಂಗಾಪುರ ಪಂಚಾಯ್ತಿಯ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ವ್ಯವಸಾಯ, ಕೂಲಿ ಮಾಡುವವರು ಗ್ರಾಮದಲ್ಲಿದ್ದು ಕುಂಬಾರಿಕೆ ಮಾಡುವವರು ೪ ಜನ ಗ್ರಾಮದಲ್ಲಿದ್ದಾರೆ.

ಒಂದು ಅಂಗನವಾಡಿ ಕೇಂದ್ರವಿದ್ದು ೧೨ ಮಕ್ಕಳು, ಒಬ್ಬರು ಕಾರ್ಯಕರ್ತೆ ಇದ್ದಾರೆ. ಸರ್ಕಾರಿ ಕಿರಿಯ ಪಾಠಶಾಲೆಯಲ್ಲಿ ೧೮ ಮಕ್ಕಳು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಪಠ್ಯಪುಸ್ತಕ ವಿತರಣಾ ಸೌಲಭ್ಯಗಳಿವೆ.

ರಾಮನ ದೇವಸ್ಥಾನವಿದೆ. ಶ್ರೀರಾಮ ನವಮಿಯಂದು ವಿಶೇಷ ಪೂಜೆ, ಹರಿಕಥೆ, ಹರಿಸೇವೆಯೂ ರಾತ್ರಿಗೆ ರಾಮದೇವರ ಮೆರವಣಿಗೆಯೂ ಇರುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಜಲತಿಮ್ಮನಹಳ್ಳಿ

ಜಲತಿಮ್ಮನಹಳ್ಳಿಯು ಮಧುಗಿರಿಯ ಕನಪನಾಯಕನಹಳ್ಳಿಯ ಹೊರವಲಯದಲ್ಲಿರುವ ಮಜರೆ ಗ್ರಾಮವಾಗಿದೆ. ಒಟ್ಟು ೬೩ ಮನೆಗಳನ್ನು ಹೊಂದಿದ್ದು ೨೨೫ ಜನಸಂಖ್ಯೆಯನ್ನು ಹೊಂದಿದೆ. ಉಪ್ಪಾರ ಜನಾಂಗದವರು ದೊಡ್ಡ ಸಮುದಾಯವಾಗಿದ್ದು ಕುರುಬ ಹಾಗೂ ರೆಡ್ಡಿ ಜನಾಂಗ ಕಿರುಸಮುದಾಯವಾಗಿದೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಮುದ್ದೇನಹಳ್ಳಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ.

ಗ್ರಾಮದಲ್ಲಿ ಅಂಗನವಾಡಿ ಕೇಂದ್ರವಿದ್ದು ೧೧ ಮಕ್ಕಳು, ಒಬ್ಬರು ಕಾರ್ಯಕರ್ತೆ ಇದ್ದಾರೆ. ಸರ್ಕಾರಿ ಕಿರಿಯ ಪಾಠಶಾಲೆಯಲ್ಲಿ ೧೩ ಮಕ್ಕಳು ಇಬ್ಬರು ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೩% ಇದೆ.

ಗ್ರಾಮದಲ್ಲಿ ರಾಮದೇವರ ದೇವಸ್ಥಾನವಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಜನಕಲೋಟಿ

ಜನಕಲೋಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೫೭೨.೪೧ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ರೆಡ್ಡಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬ್ರಾಹ್ಮಣ, ಶೆಟ್ಟು, ನಾಯಕ, ಕುರುಬ, ಕೊರಚ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೫೧ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೬೯೭ ಜನಸಂಖ್ಯಾ ಪ್ರಮಾಣವನ್ನು ಹೊಂದಿದ್ದು ಗಂಡು ೩೫೦, ಹೆಣ್ಣು ೩೪೭ ಜನಸಂಖ್ಯೆ ಇದೆ, ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಈ ಗ್ರಾಮದಲ್ಲಿ ಉತ್ತಮ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೫೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಇಲ್ಲಿನ ರೈತರು ಉಪ ಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ವಕೀಲ, ಶಿಕ್ಷಣ ಇಲಾಖೆ, ಹಾಗೂ ಸಾರಿಗೆ ಇಲಾಖೆಗಳಿಗೆ ಸೇರಿದ ಒಟ್ಟು ೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿ ಇದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಚಿಕ್ಕದಳವಟ್ಟ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಇಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಐ.ಡಿ.ಹಳ್ಳಿ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಚಿಕ್ಕದಳವಟ್ಟ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಹಾಗೂ ೦೨ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ೫೦ ಮಕ್ಕಳಿದ್ದಾರೆ, ಒಬ್ಬ ಕಾರ್ಯಕರ್ತೆ ಹಾಗೂ ಒಬ್ಬ ಸಹಾಯಕಿ ಇದ್ದಾರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ೪೫ ವಿದ್ಯಾರ್ಥಿಗಳಿದ್ದಾರೆ ಒಟ್ಟು ೦೨ ಶಿಕ್ಷಕರು ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ೧ ಹೊಟೇಲ್‌ಗಳಿದ್ದು ೨ ಅಂಗಡಿಗಳಿವೆ ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮಾರಮ್ಮದೇವಿ ಆಂಜನೇಯ ದೇವಾಲಯಗಳಿವೆ. ಮಾರಮ್ಮದೇವಿಗೆ ಪ್ರತಿ ವರ್ಷ ಅದ್ದೂರಿಯಾಗಿ ಜಾತ್ರೆ ನಡೆಯುತ್ತವೆ ಉಳಿದಂತೆ ಜನರು ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ,

ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಜಡೆಗೊಂಡನಹಳ್ಳಿ

ಜಡೆಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೩೬.೧೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದ ದಕ್ಷಿಣಕ್ಕೆ ವೀರಣ್ಣನ ಬೆಟ್ಟವಿದೆ.ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಚಿರತೆ, ಕರಡಿ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಹದ್ದುಗಳು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಚಿಕ್ಕ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೫ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮುಸ್ಲಿಂ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಮುಸ್ಲಿಂ ಬಾಂಧವರು ಮಾತ್ರ ಉರ್ದು ಮಾತನಾಡುವರು.

ಒಟ್ಟು ೨೦೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೮೯೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೬೦ ಮತ್ತು ಹೆಂಗಸರು ೪೩೪ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೬೩ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಕಾರ್ಮಿಕರು ೪೦% ಕಂಡುಬರುತ್ತಾರೆ. ರಾಗಿ, ಜೋಳ, ಶೇಂಗಾ ಮುಖ್ಯ ಬೆಳೆಯಾಗಿದೆ. ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಶಿಕ್ಷಕರು, ವಕೀಲರು ಹಾಗೂ ಕೆಎಸ್‌ಆರ್‌ಟಿಸಿ ಸೇರಿದಂತೆ ೭ ಜನ ಸರ್ಕಾರಿ ಕೆಲಸದಲ್ಲಿದ್ದು ಟೈಲರ್‌ನಂತಹ ಆಧುನಿಕ ಕೆಲಸ ಮಾಡುವ ಒಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸಿದ್ದಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಮೂವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಇಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಿದ್ದಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ವಡೇರಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ

ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೭೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೯.೬೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಜಂಗಮಯ್ಯನಪಾಳ್ಯ

ಜಂಗಮಯ್ಯನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೨೨೮.೫೬ ಹೆಕ್ಟೇರ್ ಹೊಂದಿದ್ದು ಮಿಡಿಗೇಶಿ ಭೂ ವಿಸ್ತೀರ್ಣದಲ್ಲಿ ಸೇರಿರುವ ಮಜರೆ ಗ್ರಾಮವಾಗಿದೆ. ದೈವ ಕೇಂದ್ರೀಕೃತ ಜಂಗಮಯ್ಯನಪಾಳ್ಯ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮವು ಅರಣ್ಯ ಪ್ರದೇಶವನ್ನು ಹೊಂದಿದ್ದು ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಜಾನುವಾರುಗಳು ಹಾಗೂ ಕೃಷಿಗೆ ಸಾಕಷ್ಟು ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೬ ಸಾರ್ವಜನಿಕ ನಲ್ಲಿಗಳು, ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉಳಿದಂತೆ ತೆಲುಗು, ತಮಿಳು ಮಾತನಾಡುವವರಿದ್ದಾರೆ.

ಒಟ್ಟು ೬೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೯೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೯೮ ಮತ್ತು ಹೆಂಗಸರು ೯೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ. ರಾಗಿ, ಭತ್ತ, ಶೇಂಗಾ ಮತ್ತು ಜೋಳ ಮುಖ್ಯ ಬೆಳೆಯಾಗಿದೆ. ವಾಣಿಜ್ಯ ಬೆಳೆಯಾಗಿ ತೆಂಗು, ಅಡಿಕೆ ಬೆಳೆಯುತ್ತಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಮಿಡಿಗೇಶಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ

ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಮಿಡಿಗೇಶಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಮಿಡಿಗೇಶಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಮಿಡಿಗೇಶಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೪೯.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಮಾರಮ್ಮ, ಲಕ್ಷ್ಮಿ ದೇವಾಲಯಗಳಿವೆ. ಮಿಡಿಗೇಶಮ್ಮ ಜಾತ್ರೆಯನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಜಕ್ಕೇನಹಳ್ಳಿ

ಜಕ್ಕೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೯೭.೨೫ ಹೆಕ್ಟೇರ್. ಸುಮಾರು ೨೦೦ ವರ್ಷಗಳ ಇತಿಹಾಸವನ್ನು ಹೊಂದಿರುವ ಕಂದಾಯ ಗ್ರಾಮವಾಗಿದ್ದು ತುಂಬಾ ಸೊಗಸಾದ ಗ್ರಾಮವಾಗಿ ಕಂಡುಬರುತ್ತದೆ. ಜಕ್ಕಯ್ಯ ಎಂಬ ವ್ಯಕ್ತಿ ಮೂಲದಿಂದ ಜಕ್ಕೇನಹಳ್ಳಿಯಾಗಿದೆ.

ಈ ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರೇಕಲ್ಲು ಬಂಡೆಗಳನ್ನನು ಹೊಂದಿದೆ. ಕಪ್ಪು ಮತ್ತು ಕೆಂಪು ಮರಳುಮಿಶ್ರ ಮಣ್ಣು ಕಂಡುಬರುತ್ತದೆ. ವ್ಯವಸಾಯಕ್ಕೆ ಯೋಗ್ಯ ಫಲವತ್ತಾದ ಭೂಮಿಯನ್ನು ಹೊಂದಿದೆ.

ಈ ಗ್ರಾಮವು ಸಾಮಾಜಿಕ ಅರಣ್ಯವನ್ನು ಹೊಂದಿದೆ. ಇಲ್ಲಿ ಪ್ರಾಣಿಗಳಾದ ಚಿರತೆ, ಕಾಡುಮೊಲ, ಕರಡಿ, ಜಿಂಕೆ, ಕಾಡುಹಂದಿಗಳು ಕಂಡುಬರುತ್ತವೆ. ಇದರ ಜೊತೆಗೆ ಪಕ್ಷಿಗಳಾದ ನವಿಲು, ಗಿಳಿ, ಕಾಡುಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಸಾಕುಪ್ರಾಣಿಗಳಾದ ಮೇಕೆ, ಕುರಿ, ಸೀಮೆಹಸು, ನಾಟಿಹಸು ಮತ್ತು ಎತ್ತುಗಳು ಕಂಡುಬರುತ್ತವೆ. ಇದರ ಜೊತೆಗೆ ಸಾಕುಪಕ್ಷಿಗಳಾದ ಪಾರಿವಾಳ ಹಾಗೂ ಕೋಳಿ ಸುಮಾರು ೫೦೦ ಕ್ಕೂ ಹೆಚ್ಚಿಗೆ ಇವೆ.

ಹವಾಮಾನದ ವಿಚಾರವಾಗಿ ಸುಮಾರು ೨ ವರ್ಷಗಳಿಂದ ಮಳೆಯ ಪ್ರಮಾಣ ತುಂಬಾ ಕಡಿಮೆಯಾಗಿದೆ. ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆಯಾಗಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಈ ಗ್ರಾಮದ ಪೂರ್ವಕ್ಕೆ ಸುವರ್ಣಮುಖಿ ಹೊಳೆ ಇದೆ. ಆದರೆ ಮಳೆಯ ಅಭಾವದಿಂದ ಇದು ಬತ್ತಿಹೋಗಿದೆ. ಈ ಗ್ರಾಮಕ್ಕೆ ಒಂದು ಕೆರೆ ಇದೆ. ಮಳೆಗಾಲದಲ್ಲಿ ೨-೩ ತಿಂಗಳು ನೀರು ನಿಲ್ಲುವುದು ಕಂಡುಬರುತ್ತದೆ. ಈ ನೀರು ಜಾನುವಾರುಗಳಿಗೆ ಹಾಗೂ ಕೃಷಿಗೆ ಬಳಕೆಯಾಗುತ್ತದೆ. ಆದರೆ ಕೆರೆ ಸಂಪೂರ್ಣವಾಗಿ ತುಂಬಿ ಕೋಡಿ ಬಿದ್ದು ಸುಮಾರು ವರ್ಷಗಳು ಕಳೆದಿವೆ.

ಈ ಗ್ರಾಮದಲ್ಲಿ ಕುಡಿಯುವ ನೀರಿನ ಸಲುವಾಗಿ ೧೮ ನಲ್ಲಿಗಳನ್ನು ಗ್ರಾಮಪಂಚಾಯ್ತಿ ವತಿಯಿಂದ ಹಾಕಿಸಿಕೊಡಲಾಗಿದೆ. ಈ ಗ್ರಾಮದಲ್ಲಿ ತೆರೆದ ಬಾವಿ ಇವೆ. ಆದರೆ ನೀರು ಬತ್ತಿಹೋಗಿದೆ. ಗ್ರಾಮದ ಸುತ್ತ ೩ ಕ್ಕೂ ಹೆಚ್ಚು ಕೊಳವೆ ಬಾವಿಗಳು ಕಂಡುಬರುತ್ತವೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಆದಿಕರ್ನಾಟಕ ಜನಾಂಗದವರು, ಆದಿದ್ರಾವಿಡ, ಒಕ್ಕಲಿಗ ಜನಾಂಗದವರು ಗ್ರಾಮದಲ್ಲಿದ್ದು ನಾಯಕ ಜನಾಂಗದವರು ಕಿರು ಸಮುದಾಯವಾಗಿದೆ. ಗ್ರಾಮದಲ್ಲಿ ಜನರು ಮಾತೃಭಾಷೆಯಾಗಿ ಕನ್ನಡವನ್ನು ಬಳಸುತ್ತಾರೆ.

ಒಟ್ಟು ೨೭೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ಸುಮಾರು ೮೭೮ ಜನಸಂಖ್ಯೆಯನ್ನು ಹೊಂದಿದೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ (ಮಂಗಳೂರು ಹೆಂಚು) ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ಈ ಗ್ರಾಮದಲ್ಲಿ ಆಹಾರಕ್ಕೆ ಸಂಬಂಧಿಸಿದಂತೆ ರಾಗಿಮುದ್ದೆ ಮತ್ತು ಅನ್ನ-ಸಾಂಬಾರ್ ಗ್ರಾಮದ ಪ್ರಮುಖ

ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಎರಡು ಸಾಂಪ್ರದಾಯಿಕ ಎತ್ತಿನ ಗಾಡಿಗಳಿದ್ದು ಆಧುನಿಕ ವಾಹನಗಳಾದ ಟ್ರ್ಯಕ್ಟರ್–೫ ಹಾಗೂ ದ್ವಿಚಕ್ರ ವಾಹನಗಳು ೧೦೦ ಕ್ಕೂ ಹೆಚ್ಚು ಇರುವುದು ಕಂಡುಬರುತ್ತದೆ. ಸುವರ್ಣ ಗ್ರಾಮ ಯೋಜನೆಯಲ್ಲಿ ಗ್ರಾಮದಲ್ಲಿ ಎಲ್ಲಾ ರಸ್ತೆ ವ್ಯವಸ್ಥೆ, ಸ್ವಚ್ಛತೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೭೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಸೂರ್ಯಕಾಂತಿ, ತೆಂಗು ಮತ್ತು ಅಡಿಕೆ ಬೆಳೆಗಳನ್ನು ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು ಮತ್ತು ಶೇಂಗಾ ಬೆಳೆಯುತ್ತಾರೆ.

ಸಾಂಪ್ರದಾಯಿಕ ಹೈನುಗಾರಿಕೆ ಹಾಗೂ ಒಂದು ಆಧುನಿಕ ಡೈರಿ ಗ್ರಾಮದಲ್ಲಿದೆ. ಸಮಾಜಕಲ್ಯಾಣ ಇಲಾಖೆ ನೌಕರರು ೫ ಜನ ಮತ್ತು ಒಬ್ಬ ನೀರಗಂಟಿ ಸರ್ಕಾರಿ ನೌಕರರು ಇದ್ದಾರೆ. ಚಲನಚಿತ್ರ ನಟರಾದ ಶಕ್ತಿಪ್ರಸಾದ್, ಅರ್ಜುನ್ ಸರ್ಜಾ, ಚಿರುಸರ್ಜಾ ಹಾಗೂ ಕಿಶೋರ್ ಈ ಗ್ರಾಮದವರು.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ, ತುಮಕೂರು ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ. ಕೋಟಗಾರಲಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಸದರಿ ಗ್ರಾಮದಲ್ಲಿ ೨–೩ ಕಿ.ಮೀ. ಅಂತರದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಇಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಂದ್ರಗಿರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಹಾಗೂ ಖಾಸಗಿ ಬಸ್ಸುಗಳ ವ್ಯವಸ್ಥೆ ಇರುತ್ತದೆ. ಈ ಗ್ರಾಮದಲ್ಲಿ ಸಂಚಾರಿ ದೂರವಾಣಿಯ ವ್ಯವಸ್ಥೆಯಿದೆ.

ಸಣ್ಣಪುಟ್ಟ ಕಲಹ, ವ್ಯಾಜ್ಯಗಳು ಗ್ರಾಮದ ಹಿರಿಯರು, ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೧೦ ಸ್ತ್ರೀಶಕ್ತಿಸಂಘಗಳು ಹಾಗೂ ಒಂದೊಂದು ಧರ್ಮಸ್ಥಳ ಸಂಘಗಳಿವೆ. ಈ ಗ್ರಾಮದಲ್ಲಿ ಗ್ರಂಥಾಲಯವಿದೆ. ಸುಮಾರು ೫೦೦ ಪುಸ್ತಕಗಳಿವೆ. ಒಬ್ಬರು ಗ್ರಂಥಪಾಲಕರು ಇದ್ದಾರೆ.

ಗ್ರಾಮದಲ್ಲಿ ಸಾಮಾನ್ಯವಾಗಿ ಜ್ವರ, ಕೆಮ್ಮು, ನೆಗಡಿ ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದ ಅಂಗನವಾಡಿ ಕೇಂದ್ರದಲ್ಲಿ ೧೮ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ ಪಾಠಶಾಲೆಯಲ್ಲಿ ೪೪ ಮಕ್ಕಳು, ಮೂವರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಸರ್ಕಾರಿ ಪ್ರೌಢಶಾಲೆಯಲ್ಲಿ ೧೩೫ ವಿದ್ಯಾರ್ಥಿಗಳು, ೮ ಜನ ಶಿಕ್ಷಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೬೬.೨%. ರಾಜ್ಯ ಡಿಎಸ್‌ಎಸ್ ಸಂಚಾಲಕ ರಾಜಸಿಂಹ ಈ ಗ್ರಾಮದವರು.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ, ವಿಧವಾ ವೇತನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ. ಕಾಫಿ ಮತ್ತು ಟೀ ನಂತಹ ೪ ಹೋಟೆಲ್ ಮತ್ತು ೫ ಅಂಗಡಿಗಳು ಇವೆ.

ಗ್ರಾಮದಲ್ಲಿ ೪ ದೇವಾಲಯಗಳಿವೆ. ಅಹೋಬಲ ನರಸಿಂಹಸ್ವಾಮಿ ದೇವಾಲಯ, ಮಾರಮ್ಮತಾಯಿ ದೇವಾಲಯ, ಆಂಜನೇಯಸ್ವಾಮಿ ದೇವಾಲಯ, ಬಸವಣ್ಣಸ್ವಾಮಿ ದೇವಾಲಯಗಳಿವೆ. ಅಹೋಬಲಸ್ವಾಮಿ ಜಾತ್ರೆಯ ತುಂಬಾ ವಿಜೃಂಭಣೆಯಿಂದ ನಡೆಯುತ್ತದೆ. ತೇರು ಸಹ ಈ ಜಾತ್ರೆಯಲ್ಲಿ ನಾವು ನೋಡಬಹುದು. ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಜೀವಗೊಂಡನಹಳ್ಳಿ

ಜೀವಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೮೭.೮೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಜೀವೇಗೌಡ ಎಂಬ ವ್ಯಕ್ತಿಮೂಲದಿಂದ ಈ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರಿತವಾದ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಜಿಂಕೆ, ಕರಡಿ, ನರಿ, ತೋಳ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ

ಕಾಣಸಿಗುತ್ತವೆ. ಪಕ್ಷಿಗಳಾದ ಗಿಳಿ, ಮರಕುಟಿಕ, ಸಾಂಬಾರ ಕಾಗೆ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಒಂದು ಕೆರೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟರ್ನ್‌ಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಅಗಸ, ಆದಿಕರ್ನಾಟಕ, ಆದಿದ್ರಾವಿಡ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೧೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೨೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೫೫, ಹೆಂಗಸರು ೨೬೭ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨೩ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ನಾಲ್ಕು ಸಾಂಪ್ರದಾಯಿಕ ಎತ್ತಿನ ಗಾಡಿ ಇದೆ. ಟ್ರ್ಯಕ್ಟರ್ ಮತ್ತು ದ್ವಿಚಕ್ರ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ಕೂಲಿ ಮಾಡುವವರು ೪೦% ಗ್ರಾಮದಲ್ಲಿದ್ದಾರೆ. ಇಲ್ಲಿ ರಾಗಿ ಮತ್ತು ಶೇಂಗಾ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಲಸಂದೆ ಬೆಳೆಯುತ್ತಾರೆ. ಶೇಂಗಾ ಹಾಗೂ ರಾಗಿ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದರೂ ಸಾಕಷ್ಟು ಪ್ರಮಾಣದಲ್ಲಿ ನೀರಿಲ್ಲದ ಕಾರಣ ಯಾವುದೇ ಮೀನುಗಾರಿಕಾ ಚಟುವಟಿಕೆಗಳು ಕಂಡು ಬರುವುದಿಲ್ಲ. ಕಂದಾಯ ಇಲಾಖೆ ಹಾಗೂ ವಕೀಲರು ಸೇರಿದಂತೆ ನಾಲ್ಕು ಜನರು ಸೇವೆ ಸಲ್ಲಿಸುತ್ತಿದ್ದು ಉಳಿದಂತೆ ಗ್ರಾಮದಲ್ಲಿ ಹೆಚ್ಚಾಗಿ ಕೂಲಿ ಮಾಡುವವರೇ ಕಂಡುಬರುತ್ತಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ರಂಟವಳಲು ಗ್ರಾಮ ಪಂಚಾಯ್ತಿಗೆ ಸೇರುತ್ತದೆ. ಗ್ರಾಮದಲ್ಲಿ ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಟವಳಲು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ರಂಟವಳಲು ಅಂಚೆ ಕಚೇರಿಗೆ ಸೇರಿದೆ. ಗ್ರಾಮದಲ್ಲಿ ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ಮೂರು ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿಯಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೫.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ

ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಮೂರು ಅಂಗಡಿಗಳು ಗ್ರಾಮದಲ್ಲಿವೆ.

ಗ್ರಾಮದಲ್ಲಿ ಐತಿಹಾಸಿಕ ಪ್ರತಿಮೆಯಾಗಿ ಒಂದು ಕೋಟೆ ಇದೆ. ಗ್ರಾಮದಲ್ಲಿ ಎರಡು ಆಂಜನೇಯ ಹಾಗೂ ಒಂದು ದೇವಿ ದೇವಾಲಯಗಳಿವೆ. ಗ್ರಾಮದಲ್ಲಿ ಪ್ರತಿ ಜಾತ್ರೆಯನ್ನು ವೈಭವಪೂರ್ಣವಾಗಿ ಆಚರಿಸಲಾಗುತ್ತದೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

### ಜಿ.ಡಿ. ಪಾಳ್ಯ

ಜಿ.ಡಿ. ಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೯೪.೧೧ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮದ ಭೂವಿಸ್ತೀರ್ಣವು ಆರ್.ಗೊಲ್ಲಹಳ್ಳಿ ವಿಸ್ತೀರ್ಣದಲ್ಲಿ ಸೇರಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗೊಲ್ಲ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೯೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೯೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೮ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ರೆಡ್ಡಿಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೮.೮%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಶ್ರೀ ಆಂಜನೇಯಸ್ವಾಮಿ, ಗಣೇಶ, ಮಾರಮ್ಮ, ನಾಗರಕಟ್ಟೆ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಜವನಾಯಕನಪಾಳ್ಯ

ಜವನಾಯಕನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೬೮.೧೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮದ ಭೂ ವಿಸ್ತೀರ್ಣವು ದಾಸೇನಹಳ್ಳಿ ವಿಸ್ತೀರ್ಣದಲ್ಲಿ ಸೇರಿದೆ. ಜವಲಿಂಗ > ಜವನಾಯಕ ಆಗಿ ನಂತರ ಜವನಾಯಕನ ಬೀಡು> ಪಾಳ್ಯ ಆಗಿದೆ. ಇದು ಕುಂಚಿಟಿಗರ ಕಾಗೇನವರ ಮನೆದೇವರಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಮತ್ತು ಕೆಂಪು ಮಿಶ್ರ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದ ಸುತ್ತ ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಚಿರತೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಕಾಗೆ, ಕೋಗಿಲೆ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳಗಳಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೪೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೪೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೧೧ ಮತ್ತು ಹೆಂಗಸರು ೧೨೯ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೯ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎರಡು ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ನೇರಳೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ನೇರಳೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ನೇರಳೇಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೪.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಕಣಿವೇ ರಂಗಪ್ಪ, ತಿಮ್ಮರಾಜಮ್ಮ ಹಾಗೂ ಹಟ್ಟಿಮಾರಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

**ಜೋಗಿಹಳ್ಳಿ**

ಜೋಗಿಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೭.೬೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಜೋಗಿ ವ್ಯಕ್ತಿ ಮೂಲದಿಂದಾಗಿ ಜೋಗಿಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸುತ್ತಮುತ್ತ ಅಡಿಕೆ ಮತ್ತು ತೆಂಗಿನ ತೋಟಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲ.

ಪ್ರಾಣಿಗಳಾದ ಕಾಡುಮೊಲ, ನರಿ, ಕರಡಿ, ಚಿರತೆ, ಜಿಂಕೆ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳು, ೧ ಟ್ಯಾಂಕ್ ಇದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ, ತಿಗುಳ, ಕುರುಬ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೦೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೦೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೫೦ ಮತ್ತು ಹೆಂಗಸರು ೨೫೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ

ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೬ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ಅವರೆ ಬೆಳೆಯಲಾಗುತ್ತಿದ್ದು ಹೂಗಳಾದ ಕಾಕಡ, ಸೇವಂತಿಗೆ, ಚೆಂಡು ಹೂಗಳನ್ನು ಕಾಣಬಹುದು.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇಲ್ಲಿ ಇದೆ. ಸಾರಿಗೆ, ಶಿಕ್ಷಕರು ಮತ್ತು ಪೊಲೀಸರು ಸೇರಿ ೫ ಜನ ಸರ್ಕಾರಿ ನೌಕರರಿದ್ದಾರೆ. ಹಾಗೂ ಟೈಲರಿಂಗ್ ಮಾಡಿದ ಇಬ್ಬರು ಗ್ರಾಮದಲ್ಲಿದ್ದಾರೆ. ಇನ್ನಾವುದೇ ಕೈಗಾರಿಕೆಗಳು ಇಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡಮಾಲೂರು ಜಿಲ್ಲಾ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ದೊಡ್ಡಮಾಲೂರು ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ದೊಡ್ಡಮಾಲೂರು ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ೩೧ ಮಕ್ಕಳು, ಇಬ್ಬರು ಶಿಕ್ಷಕರು ಇದ್ದಾರೆ. ಶಾಲೆಯಲ್ಲಿ ಸಮವಸ್ತ್ರ, ಪಠ್ಯಪುಸ್ತಕ, ಬಿಸಿಯೂಟ, ಶೌಚಾಲಯ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೩.೧೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ ಮತ್ತು ಟೀ ದೊರೆಯುವ ೧ ಹೋಟೆಲ್‌ಗಳು ಹಾಗೂ ೨ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ನರಸಿಂಹಸ್ವಾಮಿ, ಮಾರಮ್ಮ ಮತ್ತು ಆಂಜನೇಯ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಜಾಲಿಹಳ್ಳಿ

ಜಾಲಿಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೯೦.೪೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಜಯಮಂಗಲಿ ನದಿಯ ತಟದಲ್ಲಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಜಾಲಿ ಮರಗಳ ಪ್ರದೇಶವಾದುದರಿಂದ ಜಾಲಿಹಳ್ಳಿ ಎಂದಾಗಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲ. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೧ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩

ಸಾರ್ವಜನಿಕ ನಲ್ಲಿಗಳು, ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಯಾವುದೇ ಜನಾಂಗದವರಿಲ್ಲ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೩೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೫೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೮೬ ಮತ್ತು ಹೆಂಗಸರು ೬೮ ಜನರಿದ್ದಾರೆ. ಗ್ರಾಮದಲ್ಲಿ ಕಲ್ಲಿನ ಮನೆ ಮತ್ತು ಹೆಂಚಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೦ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಇದ್ದು ಸಿಮೆಂಟ್ ರಸ್ತೆ ಇಲ್ಲ, ಚರಂಡಿ ವ್ಯವಸ್ಥೆ ಇಲ್ಲ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯುತ್ತಾರೆ. ಕಾಕಡ ಮತ್ತು ಚೆಂಡು ಹೂ ಬೆಳೆಯುತ್ತಾರೆ. ಮರಗಳಾದ ಅರಳಿ, ತೆಂಗು, ಹುಣಸೆ ಇತ್ಯಾದಿ ಕಂಡುಬರುತ್ತವೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಮಾತ್ರ ಇದೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರ ಹಾಗೂ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ. ಕೊಟ್ಟಿಗೇನಹಳ್ಳಿ ಗ್ರಾಮಪಂಚಾಯಿತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೊಡಿಗೇನಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ೧೦ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೫.೫೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ ಮತ್ತು ಟೀ ದೊರೆಯುವ ೧ ಹೋಟೆಲ್‌ಗಳು ಹಾಗೂ ೧ ಅಂಗಡಿಗಳಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ದಂಡಿಮಾರಮ್ಮದೇವಿ ದೇವಾಲಯವಿದೆ. ೨ ನಾಗರಕಟ್ಟೆಗಳು ಇವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಜವರಯ್ಯನಪಾಳ್ಯ

ಜವರಯ್ಯನಪಾಳ್ಯ ಗ್ರಾಮವು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಮಾದೇನಹಳ್ಳಿಯ ಹೊರವಲಯದಲ್ಲಿದೆ.

ಒಟ್ಟು ೪೨ ಮನೆಗಳನ್ನು ಹೊಂದಿದ್ದು ೧೬೪ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಒಕ್ಕಲಿಗ, ವೀರಶೈವ, ಕುರುಬ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗು ಮಾತನಾಡುವವರು ಇದ್ದಾರೆ.

೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಕವಣದಲ ಗ್ರಾಮಪಂಚಾಯಿತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ವ್ಯವಸಾಯ ಮುಖ್ಯ ಉದ್ಯೋಗವಾಗಿದೆ. ಶಿಕ್ಷಣ ಹಾಗೂ ಪೊಲೀಸ್ ಇಲಾಖೆಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮದಲ್ಲಿ ಗಣೇಶ ದೇವಾಲಯವಿದೆ.

ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಜವನಯ್ಯನಪಾಳ್ಯ

ಜವನಯ್ಯನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೨೧.೯೩ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಮಾದೇನಹಳ್ಳಿ ಭೂ ವಿಸ್ತೀರ್ಣಕ್ಕೆ ಸೇರ್ಪಡೆಯಾಗಿದೆ.

ಸುಮಾರು ವರ್ಷಗಳ ಹಿಂದೆ ಜವನಪ್ಪ ಎಂಬುವರು ವಾಸವಾಗಿದ್ದರು. ಇವರೇ ಈ ಗ್ರಾಮದ ಮೊದಲಿಗರು, ಗ್ರಾಮಕ್ಕೆ ಬುನಾದಿ ಹಾಕಿದ್ದರಿಂದ ಈ ಗ್ರಾಮಕ್ಕೆ ಅವರದೇ ಹೆಸರಿನಿಂದ ಜವನಯ್ಯನಪಾಳ್ಯ ಎಂದು ಕರೆಯಲ್ಪಡುತ್ತಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ ಬಿಳಿ–ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದ ಪಶ್ಚಿಮಕ್ಕೆ ಒಂದು ಚಿಕ್ಕ ಬೆಟ್ಟವನ್ನು ಹೊಂದಿದೆ.

ಗ್ರಾಮ ಸುತ್ತ ಅಡಿಕೆ–ತೆಂಗಿನ ತೋಟಗಳು, ಚಿಕ್ಕ ಚಿಕ್ಕ ಗುಡ್ಡಗಳಿದ್ದು ಪ್ರಾಣಿಗಳಾದ ಕಾಡುಹಂದಿ, ಮೊಲ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಪುರಡೇಹಕ್ಕಿ, ಗೌಡುಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಕುರಿಗಳು, ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಯಾವುದೇ ಹಳ್ಳ ಹರಿಯುವುದಿಲ್ಲ. ಆದರೆ ಮಳೆಗಾಲದಲ್ಲಿ ಮಾತ್ರ ಸುವರ್ಣಮುಖಿ ಹೊಳೆ ಗ್ರಾಮದ ಪೂರ್ವ ದಿಕ್ಕಿನಲ್ಲಿ ಹರಿಯುತ್ತದೆ. ಪ್ರಾಣಿ–ಪಕ್ಷಿಗಳಿಗೆ ನೀರು ಕುಡಿಯಲು ಸಹಕಾರಿಯಾಗಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೫ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗೊಲ್ಲರು ಹಾಗೂ ಆದಿ ದ್ರಾವಿಡರು ಗ್ರಾಮದಲ್ಲಿದ್ದು ಇವರೇ ಈ ಗ್ರಾಮದ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೯೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೩೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೭೫ ಮತ್ತು ಹೆಂಗಸರು ೨೫೯ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೩ ಸಾಂಪ್ರದಾಯಿಕ ಎತ್ತಿನಗಾಡಿ, ೨ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ. ಅಡಿಕೆ, ಹೂವಿನ ಮೊಗ್ಗು ಮತ್ತು ತೆಂಗು ಗ್ರಾಮದ ಪ್ರಮುಖ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯಲ್ಲಿ ಹೈನುಗಾರಿಕೆ ಮಾಡುತ್ತಾರೆ. ಗ್ರಾಮದಲ್ಲಿ ಶಿಕ್ಷಣ ಇಲಾಖೆಗೆ ಸೇರಿದ ಒಬ್ಬರು ಮಾತ್ರ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕವಣದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ

ಸೌಲಭ್ಯವಿಲ್ಲ, ಬರೀ ಆಟೋಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಹನುಮನಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚಿರ ದೂರವಾಣಿ ಸಂಪರ್ಕವಿಲ್ಲದೆ ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. --- ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು, ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೧೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಚಿಲ್ಲರೆ ವ್ಯಾಪಾರ ಮಾಡುವ ೪ ಅಂಗಡಿಗಳು ಗ್ರಾಮದಲ್ಲಿವೆ.

ಗ್ರಾಮದಲ್ಲಿ ಗಣೇಶ ಮತ್ತು ಮಾರಮ್ಮ ತಾಯಿ ದೇವಾಲಯವಿದೆ. ೫ ವರ್ಷಗಳಿಗೆ ಒಂದು ಬಾರಿ ಮಾರಮ್ಮನಿಗೆ ಆರತಿ ಸೇವೆಯನ್ನು ಮಾಡುವುದು ಗಮನಾರ್ಹವಾಗಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಡಿ.ಕೈಮರ ಅಥವಾ ಅಡವಿಕಾಟನಹಳ್ಳಿ

ಡಿ.ಕೈಮರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೪೮.೦೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮದ ಪ್ರಾಚೀನ ಹೆಸರು ಅಡವಿಕಾಟನಹಳ್ಳಿ. ಈ ಗ್ರಾಮವು ಪ್ರಾಚೀನ ಕಾಲದಲ್ಲಿ ಒಂದು ಅಡವಿಯೊಳಗೆ ಇದ್ದುದರಿಂದ ಈ ಗ್ರಾಮಕ್ಕೆ ಅಡವಿಕಾಟನಹಳ್ಳಿ ಎಂದು ನಾಮಕರಣ ಮಾಡಲಾಯಿತು. ಮುಂದೆ ಈ ಹೆಸರು ಜನರ ಬಳಕೆಯಲ್ಲಿ ದೊಡ್ಡೇರಿಯ ಪಕ್ಕದಲ್ಲಿದ್ದುದರಿಂದ ಇದಕ್ಕೆ ಡಿ.ಕೈಮರ ಎಂದು ರೂಪಾಂತರಿಸಿಕೊಂಡರು. ಈಗ ಈ ಹೆಸರಿನಲ್ಲಿಯೇ ಇರುವುದು ಕಂಡುಬರುತ್ತದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಮತ್ತು ಕೆಂಪು ಕಲ್ಲು ಹಾಗೂ ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ಕರಡಿ, ಮೊಲ, ಕಾಡುಹದಿ ಹಾಗೂ ಚಿರತೆಯನ್ನು ಆಗಾಗ್ಗೆ ನೋಡಬಹುದು. ಪಕ್ಷಿಗಳಾದ ಗೊರವಂಕ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ವಿಶೇಷವಾಗಿ ನವಿಲುಗಳು ಸಹ ಕಂಡುಬರುತ್ತವೆ.

ಸಾಕುಪ್ರಾಣಿಗಳಾದ ನಾಟಿಹಸು ಮತ್ತು ಎತ್ತುಗಳನ್ನು ಸಾಕುವವರ ಸಂಖ್ಯೆ ಕಡಿಮೆಯಾಗುತ್ತಿದ್ದು ಗ್ರಾಮದಲ್ಲಿ ಕಡಿಮೆ ಸಂಖ್ಯೆಯ ಹಸು ಮತ್ತು ಎತ್ತುಗಳಿವೆ. ಉಳಿದಂತೆ ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕೆಲವರು ಬೇಟೆ ಕೋಳಿಗಳನ್ನು ಸಹ ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಮತ್ತು ಜಯಮಂಗಲಿ ನದಿ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬೦ ಕ್ಕೂ ಹೆಚ್ಚು ಸಾರ್ವಜನಿಕ ನಲ್ಲಿಗಳಿದ್ದು ೧೦ ಸಿಸ್ಟರ್ನ್‌ಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ಗ್ರಾಮದಲ್ಲಿ ೨೦ ಕ್ಕೂ ಹೆಚ್ಚಿನ ಕುಡಿಯುವ ನೀರಿನ ಬಾವಿಗಳಿದ್ದು ಇಂದು ನೋಡಲು ಒಂದೂ ಉಳಿದಿಲ್ಲ.

ಕುಂಚಿಟಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಹೊಲೆಯರು, ನಾಯಕರು, ಮುಸ್ಲಿಂ ಜನಾಂಗ, ಬ್ರಾಹ್ಮಣರು, ಲಿಂಗಾಯಿತರು, ವಿಶ್ವಕರ್ಮ, ಕಮ್ಮಾರ, ಕುಂಬಾರ ಇನ್ನೂ ಅನೇಕ ಜಾತಿಯ ಜನಾಂಗವನ್ನು ಹೊಂದಿದ್ದು ಮುಸ್ಲಿಂ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಸ್ವಲ್ಪ ತೆಲುಗು ಮತ್ತು ಉರ್ದು ಭಾಷೆಯನ್ನು ಮಾತನಾಡುವ ಜನಾಂಗದವರು ಇದ್ದಾರೆ.

ಒಟ್ಟು ೭೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೩೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೫೫ ಮತ್ತು ಹೆಂಗಸರು ೧೬೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೨ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೪೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯಾಪಾರ ಇಲ್ಲಿನ ಮುಖ್ಯ ಕೆಲಸವಾಗಿದೆ. ಕಾಫಿ ಹಾಗೂ ಟೀ, ತಿಂಡಿಯ ಹೋಟೆಲ್‌ಗಳ ವ್ಯವಸ್ಥೆ ಕೂಡ ಇಲ್ಲಿ ದೊರೆಯುತ್ತದೆ. ಈ ಗ್ರಾಮದಲ್ಲಿ ಕಡಿಮೆ ಪ್ರಮಾಣದಲ್ಲಿ ವ್ಯವಸಾಯವನ್ನು ಮಾಡುತ್ತಾರೆ. ಗ್ರಾಮದಲ್ಲಿ ನೀರಿನ ತೊಂದರೆ ಹೆಚ್ಚಾಗಿದ್ದು ವ್ಯವಸಾಯ ತುಂಬಾ ಕಷ್ಟಕರವಾಗಿದೆ. ಆದರೂ ಸಹ ರಾಗಿ, ಭತ್ತ, ಹೂವಿನ ಗಿಡ, ಜೋಳವನ್ನು ಬೆಳೆಯುತ್ತಾರೆ. ಇದರ ಜೊತೆಗೆ ಮಳೆಯ ಆಶ್ರಯದಲ್ಲಿ ಶೇಂಗಾ, ತೊಗರಿ, ಅವರೆ, ಹುರುಳಿ, ಅಲಸಂದೆ, ಹೆಸರುಕಾಳು ಮುಂತಾದವುಗಳನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇಲ್ಲವಾಗಿದ್ದು ಒಂದು ಆಧುನಿಕ ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಒಂದು ಹಾಲು ಉತ್ಪಾದಕರ ಸಂಘದ ಅವಶ್ಯಕತೆಯಿದೆ ಎಂದು ಜನರ ಅನಿಸಿಕೆಯಾಗಿದೆ.

ಶಿಕ್ಷಣ ಇಲಾಖೆಗೆ ಸೇರಿದ ೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದಾರೆ. ರಾಜ್ಯ ಸರ್ಕಾರದ ಒಂದು ಕಲ್ಪತರು ಗ್ರಾಮೀಣ ಬ್ಯಾಂಕ್ ಇದೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ಶನಿವಾರ ಸಂತೆ ನಡೆಯುತ್ತದೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಸುಮಾರು ೩೦ ಕ್ಕೂ ಹೆಚ್ಚು ಮಹಿಳೆಯರು ಗಾರ್ಮೆಂಟ್ಸ್‌ಗೆ ಹೋಗುತ್ತಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡಗದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ದೊಡ್ಡೇರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸು ಹಾಗೂ ಆಟೋರಿಕ್ಷಾಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ದೊಡ್ಡೇರಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ––– ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೭ ಮಕ್ಕಳಿದ್ದಾರೆ. ಇಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೮.೪%. ಗ್ರಾಮದಲ್ಲಿ ಪಶುವೈದ್ಯಶಾಲೆಯಿದ್ದು

ಒಂದು ಹೋಮಿಯೋಪತಿ ಆಸ್ಪತ್ರೆಯ ವ್ಯವಸ್ಥೆ ಕೂಡ ಇದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೪ ಹೋಟೆಲ್‌ಯಿದ್ದು ೧೫ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಶನಿದೇವರು ಮತ್ತು ಕಣಿವೆಮಾರಮ್ಮ ಮುಂತಾದ ಪ್ರಸಿದ್ಧ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮದೇವಿಯ ಜಾತ್ರೆ ವಿಜೃಂಭಣೆಯಿಂದ ನಡೆಯುತ್ತದೆ. ಗ್ರಾಮದಲ್ಲಿ ಎಲ್ಲಾ ಹಿಂದೂ ಹಾಗೂ ಮುಸ್ಲಿಂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

**ತಿಪ್ಪನಹಳ್ಳಿ**

ತಿಪ್ಪನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೬೪.೧೦ ಹೆಕ್ಟೇರ್‌ಗಳಲ್ಲಿದೆ. ಕಂದಾಯ ಗ್ರಾಮವಾಗಿದೆ. ಇದು ವ್ಯಕ್ತಿ ಹೆಸರಿನ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಒಳ್ಳೆಯ ಕಲ್ಲುಗಳಿಂದ ಕೂಡಿದ್ದು ಕಪ್ಪು, ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದಲ್ಲಿ ಪಶ್ಚಿಮ ದಿಕ್ಕಿಗೆ ನರಿಗುಟ್ಟೆ ಹಾಗೂ ಕರೆಕಲ್ಲು ಗುಟ್ಟೆಗಳಿವೆ.

ಗ್ರಾಮದಲ್ಲಿ ಒಂದು ರಕ್ಷಿತಾರಣ್ಯ ಪ್ರದೇಶವಿದ್ದು ಪ್ರಾಣಿಗಳಾದ ಚಿರತೆ, ಜಿಂಕೆ, ಕಾಡುಹಂದಿ, ಕಾಡುಮೊಲ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಗುಬ್ಬಚ್ಚಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ನಾಟಿ ಹಸು, ಸೀಮೆಹಸು, ಎಮ್ಮೆ, ಎತ್ತುಗಳನ್ನು ಸಾಕಿದ್ದು ಕುರಿ ಹಾಗೂ ಕೋಳಿಗಳನ್ನು ಸಾಕಿದ್ದಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೯ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಪೂರ್ವದಿಕ್ಕಿಗೆ ಸುವರ್ಣಮುಖಿ ಹೊಳೆಯಿದ್ದು ನೀರಿಲ್ಲದೆ ಬತ್ತಿಹೋಗಿದೆ. ಗ್ರಾಮದಲ್ಲಿ ಒಂದು ಈರಣ್ಣಕಟ್ಟೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಗ್ರಾಮ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩೦ ಸಾರ್ವಜನಿಕ ನಲ್ಲಿಗಳಿವೆ. ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ತಿಗುಳ, ನಾಯಕ, ಆದಿದ್ರಾವಿಡ, ಆದಿಕರ್ನಾಟಕ ಜನಾಂಗದವರು ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೨೫೦ ಮನೆಗಳನ್ನು ಹೊಂದಿರುವ ಗ್ರಾಮವು ೧೦೨೧ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗಂಡು ೫೦೪, ಹೆಣ್ಣು ೫೧೭ ಜನಸಂಖ್ಯೆ ಇದೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಹಾಗೂ ಇಟ್ಟಿಗೆ ಮನೆಗಳಿವೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ಇಂದಿರಾ ಆವಾಸ್, ಅಂಬೇಡ್ಕರ್ ವಸತಿ ಯೋಜನೆ, ಜನತಾ, ಆಶ್ರಯ ಯೋಜನೆಯಡಿ ೮೪ ಮನೆಗಳು ನಿರ್ಮಾಣವಾಗಿವೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಸುವರ್ಣ ಗ್ರಾಮಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆಯಾಗಿದೆ. ಗ್ರಾಮದಲ್ಲಿ ೩೭ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅಡಿಕೆ, ತೆಂಗು, ಹೂವು ಬೆಳೆಯಲಾಗುತ್ತದೆ. ಹೂವು ಹಾಗೂ ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಒಂದು ಹೈನುಗಾರಿಕೆ ಇದ್ದು, ಒಂದು ಆಧುನಿಕ ಡೈರಿ ಗ್ರಾಮದಲ್ಲಿದೆ.

ಗ್ರಾಮಕ್ಕೆ ಸೇರಿದಂತೆ ಸುವರ್ಣಮುಖಿ ಹೊಳೆ ಹಾಗೂ ಈರಣ್ಣಕಟ್ಟೆ ಕೆರೆ ಇದ್ದರೂ ಸಾಕಷ್ಟು ನೀರಿಲ್ಲದ ಕಾರಣ ಯಾವುದೇ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ.

ಗ್ರಾಮದಲ್ಲಿ ಐದು ಜನ ಶಿಕ್ಷಕರು ಹಾಗೂ ಒಬ್ಬರು ಪೊಲೀಸ್ ಉದ್ಯೋಗದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ.

ನಿವೃತ್ತ ಐಎಎಸ್ ಅಧಿಕಾರಿ ಚಿಕ್ಕಣ್ಣ ಈ ಗ್ರಾಮದವರೆಂಬುದು ವಿಶೇಷ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ, ತುಮಕೂರು ಲೋಕಸಭಾ ಕ್ಷೇತ್ರ, ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟಿದ್ದು ಬಡವನಹಳ್ಳಿ ಗ್ರಾಮ ಪಂಚಾಯ್ತಿಗೆ ಒಳಪಟ್ಟಿದೆ. ಒಟ್ಟು ಇಬ್ಬರು ಪಂಚಾಯ್ತಿಯ ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿಯ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಡವನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಬೇರೆ ಯಾವುದೇ ಸಂಚಾರಿ ಮಾರ್ಗಗಳಲ್ಲಿ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಬಡವನಹಳ್ಳಿ ಅಂಚೆ ಕಛೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳಿವೆ.

ಸಣ್ಣಪುಟ್ಟ ಕಲಹ, ವ್ಯಾಜ್ಯಗಳು ಗ್ರಾಮದ ಹಿರಿಯರು, ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಒಟ್ಟು ೬೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ ಸೌಲಭ್ಯಗಳಿದೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೬೫.೬%. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ. ಮೂರು ಹೋಟೆಲ್ ಹಾಗೂ ನಾಲ್ಕು ಅಂಗಡಿಗಳಿವೆ.

ಗ್ರಾಮದಲ್ಲಿ ಚೌಡೇಶ್ವರಿ, ಗಣೇಶ, ಕಂಬದರಾಯ, ಮಾರಮ್ಮ ದೇವಾಲಯಗಳಿವೆ. ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ತೊಣಚಗೊಂಡನಹಳ್ಳಿ

ತೊಣಚಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೮೨.೫೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದ್ದು ಸ್ವಚ್ಛ ಗ್ರಾಮವಾಗಿದೆ.

ರತ್ನಗಿರಿ ಮೂಲದ ಹೆಣ್ಣಾದ ತೊಣಚಮ್ಮ ಎನ್ನುವವರನ್ನು ಸಂತೆ ದೊಡ್ಡೇರಿ ಗ್ರಾಮದ ಗೌಡಯ್ಯ ಎಂಬ ವ್ಯಕ್ತಿಯನ್ನು ಮದುವೆಯಾಗಿ ಅವರೊಡನೆ ಜೀವನ ನಡೆಸಿದರು. ಇವರು ಕಾಲವಾದ ನಂತರ ಇವರು ಇದ್ದ ಗ್ರಾಮದ ಎಲ್ಲಾ ರೀತಿಯ ಆಗುಹೋಗುಗಳನ್ನು ತೊಣಚಮ್ಮ ಅವರೇ ನೋಡಿಕೊಳ್ಳುತ್ತಿದ್ದರು. ಹಾಗಾಗಿ ಈ ಗ್ರಾಮಕ್ಕೆ ತೊಣಚಗೊಂಡನಹಳ್ಳಿ ಎಂದು ನಾಮಕರಣ ಮಾಡಿದರು. ತೊಳಸಮ್ಮ > ತೊಣಚನಹಳ್ಳಿ > ತೊಣಚಗೊಂಡನಹಳ್ಳಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣನ್ನು ಹೊಂದಿರುವ ವ್ಯವಸಾಯಕ್ಕೆ ಯೋಗ್ಯವಾದ ಫಲವತ್ತಾದ ಭೂಮಿಯನ್ನು ಹೊಂದಿದೆ.

ಈ ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಜಿಂಕೆ, ಕರಡಿ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಕಾಡು ಪಾರಿವಾಳ, ಗಿಳಿ, ಬೆಳವ, ಸಾಂಬಾರ್ ಕಾಗೆ, ಗೌಜುಗ, ಪುರಡೆ ಹಕ್ಕಿ ಇನ್ನೂ ಹತ್ತು ಹಲವು ಜಾತಿಯ ಪಕ್ಷಿಗಳಿರುವುದನ್ನು ನಾವು ಗಮನಿಸಬಹುದು.

ಸಾಕುಪ್ರಾಣಿಗಳಾದ ನಾಟಿಹಸು, ಸೀಮೆಹಸು, ಕುರಿ, ಮೇಕೆ, ಮೊಲ, ಎಮ್ಮೆ ಎತ್ತುಗಳು ಸಹ ಕಂಡುಬರುವುದರ ಜೊತೆಗೆ ವ್ಯವಸಾಯಕ್ಕೆ ಹಾಗೂ ಹೈನುಗಾರಿಕೆಗೆ ತುಂಬಾ ಸಹಾಯಕವಾಗಿದೆ. ಇದರ ಜೊತೆಗೆ ಸಾಕುಪಕ್ಷಿಗಳಾದ ಕೋಳಿ ಸಹ ಕಂಡುಬರುತ್ತವೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆಯಾಗಿರುವುದು ದಾಖಲೆಯಲ್ಲಿ ಕಂಡುಬರುತ್ತದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ಕ್ಕೂ ಹೆಚ್ಚು ಸಾರ್ವಜನಿಕ ನಲ್ಲಿಗಳು ಹಾಗೂ ೯ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಸಾದರು, ಆದಿಕರ್ನಾಟಕ (ಆದಿದ್ರಾವಿಡ) ಜನಾಂಗ ಚಿಕ್ಕ

ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೪೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೧೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೧೨, ಹೆಂಗಸರು ೩೦೨ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎರಡು ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸೀಮೆಂಟ್ ರಸ್ತೆಯನ್ನು ಹೊಂದಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ४೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಪ್ರಮುಖ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಹೂವು, ತೆಂಗು ಬೆಳೆಯುವರು.

ಗ್ರಾಮದಲ್ಲಿ ಶಿಕ್ಷಣ ಇಲಾಖೆಗೆ ಸೇರಿದ ನಾಲ್ಕು ಜನ ಸರ್ಕಾರಿ ನೌಕರರಾಗಿದ್ದಾರೆ. ಸಾಂಪ್ರದಾಯಿಕ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದಬ್ಬೇಘಟ್ಟ ಗ್ರಾಮಪಂಚಾಯ್ತಿಗೆ ಸೇರುತ್ತದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ದಬ್ಬೇಘಟ್ಟ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ದಬ್ಬೇಘಟ್ಟ ಗ್ರಾಮದ ಅಂಚೆ ಕಚೇರಿಗೆ ಸೇರಿದೆ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘಗಳು, ೮ ಸ್ವಸಹಾಯ ಸಂಘಗಳು ಹಾಗೂ ೩ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ४೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೫४.४%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಒಂದು ಚಿಕ್ಕ ಚಿಲ್ಲರೆ ಅಂಗಡಿ ಇದೆ. ಈ ಗ್ರಾಮದಲ್ಲಿ ೮೦ ರ ವಯೋಮಾನದ ಮುಖವೀಣೆ ನುಡಿಸುವ ನರಸಿಂಹಯ್ಯ ಎಂಬ ಕಲಾವಿದರಿದ್ದಾರೆ.

ಗ್ರಾಮದಲ್ಲಿ ಆಂಜನೇಯ, ಬಿದರಮ್ಮ, ಶನಿದೇವರ ದೇವಾಲಯಗಳಿವೆ. ಪ್ರತಿ ವರ್ಷ ಏಕಾದಶಿ ದಿನ ಶ್ರೀ ಆಂಜನೇಯಸ್ವಾಮಿಯ ಜಾತ್ರೆ ನಡೆಯುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ತಿಪ್ಪಗೊಂಡನಹಳ್ಳಿ

ತಿಪ್ಪಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧४ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೮೮.೩४ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ತಿಪ್ಪಣ್ಣ ಗೌಡ ಎಂಬ ವ್ಯಕ್ತಿಮೂಲದಿಂದ ಈ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣು ಮಿಶ್ರ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಬೆಳ್ಳಕ್ಕಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಮತ್ತು ಹಳ್ಳ ಮಾತ್ರ ಮಳೆಗಾಲದಲ್ಲಿ ಹರಿದು ಈ ಗ್ರಾಮದ ಕೆರೆಗೆ ನೀರನ್ನು ಒದಗಿಸಿ, ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಶೆಟ್ಟಿಬಣಜಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಆದಿಕರ್ನಾಟಕ, ಆದಿದ್ರಾವಿಡ, ಮುಸ್ಲಿಂ, ಬೋವಿ, ಬುಡಬುಡಿಕೆ ಈ ಗ್ರಾಮದಲ್ಲಿದ್ದು ಬುಡಬುಡಿಕೆ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ಬುಡಬುಡಿಕೆ ಹಾಗೂ ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೩೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೪೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎರಡು ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

೯೦% ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ, ಭತ್ತ, ತೆಂಗು, ಹೂ ಮುಖ್ಯ ಬೆಳೆಯಾಗಿದೆ. ಹೂ ಮಾರಾಟ ಮಾಡುವುದು ಮತ್ತು ಹೂ ಕಟ್ಟುವುದು ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚನ್ನೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಗ್ರಾಮದಲ್ಲಿ ಒಂದು ಸಮುದಾಯ ಭವನ ಇದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೪೮.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ

ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ತಿಮ್ಮಪ್ಪ, ಮುತ್ತರಾಯ ದೇವಾಲಯಗಳಿವೆ. ಮುತ್ತುರಾಯನ ಜಾತ್ರೆಯನ್ನು ಆರತಿ, ಹರಕೆಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ತಿಪ್ಪಗೊಂಡನಹಳ್ಳಿ ವಡ್ಡರಹಳ್ಳಿ

ತಿಪ್ಪಗೊಂಡನಹಳ್ಳಿ ವಡ್ಡರಹಳ್ಳಿ ಗ್ರಾಮವು ಮಧುಗಿರಿಯ ಉತ್ತರ ದಿಕ್ಕಿನಲ್ಲಿದ್ದು ತಿಪ್ಪಗೊಂಡನಹಳ್ಳಿಯ ಹೊರವಲಯದಲ್ಲಿದೆ. ಒಟ್ಟು ೨೫ ಮನೆಗಳನ್ನು ಹೊಂದಿದ್ದು ೧೩೬ ಜನಸಂಖ್ಯೆಯನ್ನು ಹೊಂದಿದೆ. ವಡ್ಡರು ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ವ್ಯವಸಾಯ, ಹೂ ಮಾರಾಟ ಹಾಗೂ ಕೂಲಿ ಮಾಡುತ್ತಾರೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಸಾರಿಗೆ, ಅಂಚೆ ಹಾಗೂ ಶಿಕ್ಷಣ ಇಲಾಖೆಯಲ್ಲಿ ೩ ಜನ ಸೇವೆ ಸಲ್ಲಿಸುತ್ತಿದ್ದಾರೆ.

ಚಿನ್ನೇನಹಳ್ಳಿ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ಶಿಕ್ಷಣ, ಅಂಚೆ, ಸಾರಿಗೆ ಸೌಲಭ್ಯ ತಿಪ್ಪಗೊಂಡನಹಳ್ಳಿಯಿಂದ ಪಡೆಯಲಾಗುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ತೋಟಮಡಗಲು

ತೋಟಮಡಗಲು ಗ್ರಾಮವು ಮಧುಗಿರಿ ತಾಲ್ಲೂಕಿನ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೮೮.೧೫ ಹೆಕ್ಟೇರ್ ಹೊಂದಿದ್ದು ಹನುಮಂತಪುರ ಭೂವಿಸ್ತೀರ್ಣದಲ್ಲಿ ಸೇರ್ಪಡೆಯಾಗಿದೆ. ಹೆಚ್ಚು ತೋಟಗಳಿಂದ ಕೂಡಿದ್ದು ತೋಟದಮಡಗು ಕ್ರಮೇಣ ಲಿಖಿತ ರೂಪದಲ್ಲಿ ತೋಟದ ಮಡಿಲು ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ನರಿ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಕಾಗೆ, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಒಂದು ಕೆರೆಯಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಒಂದು ಚಿಕ್ಕ ಹಳ್ಳವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳು, ೫ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮಡಿವಾಳ, ವಿಶ್ವಕರ್ಮ ಜನಾಂಗದವರಿದ್ದು ವಿಶ್ವಕರ್ಮ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಭಾಷಿಕರಿದ್ದಾರೆ.

ಒಟ್ಟು ೧೫೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೫೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೭೦ ಮತ್ತು ಹೆಂಗಸರು ೧೮೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ, ಹೆಂಚಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕವಾದ ೨ ಎತ್ತಿನ ಗಾಡಿಗಳು ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರೂ ಕೂಡ ಕಂಡುಬರುತ್ತಾರೆ. ರಾಗಿ ಮತ್ತು

ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ಜೋಳ ಬೆಳೆಯಲಾಗುತ್ತಿದ್ದು ತೆಂಗು ಹಾಗೂ ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಗ್ರಾಮದಲ್ಲಿ ಶಿಕ್ಷಕರು, ವೈದ್ಯರು ಹಾಗೂ ಪೊಲೀಸರು ಸೇರಿದಂತೆ ೪ ಜನ ನೌಕರರಾಗಿದ್ದಾರೆ. ಇಬ್ಬರು ಟೈಲರ್ ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಮಿಡಿಗೇಶಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಮಿಡಿಗೇಶಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಮಿಡಿಗೇಶಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಮಿಡಿಗೇಶಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೮.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಚೌಡೇಶ್ವರಿ ದೇವಾಲಯವಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ ಹಬ್ಬಗಳನ್ನು ವಿಶೇಷವಾಗಿ ಆಚರಿಸಲಾಗುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ೧೫೫೦ ನೇ ಸಾಲಿಗೆ ಸೇರಿದ ರಂಗನಾಥಸ್ವಾಮಿ ದೇವಾಲಯವಿದೆ. ಇದು ಕುಂಚಿಟಿಗರ ದೇವರಾಗಿರುತ್ತದೆ.

## ತಾಯಗೊಂಡನಹಳ್ಳಿ

ತಾಯಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೩೦.೫೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ತಾಯಿಗೌಡ ಮೂಲದಿಂದ ತಾಗೇನಹಳ್ಳಿಯಾಗಿ ನಂತರ ತಾಯಿಗೊಂಡನಹಳ್ಳಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆಯ

ಗ್ರಾಮವು ಸ್ವಲ್ಪ ಅರಣ್ಯ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಕರಡಿ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಗರುಡ, ಕಾಗೆ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್ ಹಾಗೂ ೧ ಟ್ಯಾಂಕ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಉಳಿದಂತೆ ನಾಯಕ, ಆದಿಕರ್ನಾಟಕ, ಆದಿದ್ರಾವಿಡ, ಅಗಸ ಜನಾಂಗದವರು ಗ್ರಾಮದಲ್ಲಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೭೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೭೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೮೮ ಮತ್ತು ಹೆಂಗಸರು ೩೮೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ, ಇಟ್ಟಿಗೆ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೯ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಆಟೋ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ಎಲ್ಲ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರೂ ಗ್ರಾಮದಲ್ಲಿದ್ದಾರೆ. ರಾಗಿ, ಶೇಂಗಾ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಜೋಳ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ತೆಂಗು ಮತ್ತು ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಪೊಲೀಸ್, ಶಿಕ್ಷಕರು ಸೇರಿದಂತೆ ಇಬ್ಬರು ನೌಕರಿಯಲ್ಲಿದ್ದು ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಬಡಗಿ ಹಾಗೂ ಟೈಲರ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಡಿ.ವಿ. ಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಡಿ.ವಿ. ಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೧೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಹೋಟೆಲ್‌ಗಳು ಹಾಗೂ ೨ ಅಂಗಡಿಗಳಿವೆ. ಗ್ರಾಮದಲ್ಲಿ ಆಂಜನೇಯ, ಮಾರಮ್ಮ ಹಾಗೂ ಕೆಂಚಮ್ಮ ದೇವಾಲಯಗಳಿವೆ. ಮಾರಮ್ಮನ ಜಾತ್ರೆಯನ್ನು ಆಚರಿಸುವರು. ಉಳಿದಂತೆ ಯುಗಾದಿ ಹಾಗೂ ಶಿವರಾತ್ರಿ ವಿಶೇಷವಾಗಿದ್ದು ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ತುಂಗೋಟಿ

ತುಂಗೋಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೬೭.೨೭ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ತುಂಗ + ವಟಿ – ತುಂಗೋಟಿ ಆಗಿದೆ.

ದಿಬ್ಬದ ಮೇಲಿನ ಹಟ್ಟಿ > ಉತ್ತರದ ಹಟ್ಟಿ ಎಂದೂ ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಒಂದು ಬೆಟ್ಟವನ್ನು (ಕೋಟೆಕಲ್ಲಪ್ಪನ ಬೆಟ್ಟ) ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕಾಗೆ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆಯಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಆದಿಕರ್ನಾಟಕ ಜನಾಂಗದವರಿದ್ದು ವೈಷ್ಣವ ಜನಾಂಗ ತುಂಬಾ ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೩೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೦೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೫೪ ಮತ್ತು ಹೆಂಗಸರು ೨೫೪ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ, ಇಟ್ಟಿಗೆ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೨೩ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಆಟೋಗಳು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ, ಶೇಂಗಾ, ಜೋಳ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ತೊಗರಿ, ಅವರೆ, ತೆಂಗು, ಅಡಿಕೆಯನ್ನು ಬೆಳೆಯಲಾಗುತ್ತಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಅರಣ್ಯ ಇಲಾಖೆ, ಕೆಎಸ್‌ಆರ್‌ಟಿಸಿ ಹಾಗೂ ಶಿಕ್ಷಣ ಇಲಾಖೆಗೆ ಸೇರಿದ ೫ ಜನ ನೌಕರರಿದ್ದು ಒಬ್ಬರು ಟೈಲರ್ ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಡಿ.ವಿ. ಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಸಿದ್ದಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೯ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೮

ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೮%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ, ನಾಗರಕಟ್ಟೆ, ಗಣೇಶ ದೇವಾಲಯಗಳಿದ್ದು ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ತವಕದಳ್ಳಿ

ತವಕದಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೫.೫೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಚಿರತೆ, ನರಿ, ತೋಳ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಕೋಡಿಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮುಸ್ಲಿಂ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಮುಸ್ಲಿಂ ಬಾಂಧವರು ಉರ್ದು ಮಾತನ್ನಾಡುವರು.

ಒಟ್ಟು ೧೮೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೮೮೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೧೯ ಮತ್ತು ಹೆಂಗಸರು ೪೪೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೯ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೫ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ, ಮುಸುಕಿನ ಜೋಳ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಕೆಎಸ್‌ಆರ್ಟಿಸ್, ಕೆಇಬಿ ಸೇರಿದಂತೆ ೩೫ ಜನ ಸರ್ಕಾರಿ ನೌಕರರಾಗಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಮರುವೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ

ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಮರುವೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ವಡೇರಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೮ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೭೫ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೫.೧೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಹೋಟೆಲ್‌ಗಳು ಹಾಗೂ ೩ ಅಂಗಡಿಗಳಿವೆ.

ಗ್ರಾಮದಲ್ಲಿ ನರಸಿಂಹಸ್ವಾಮಿ, ಸ್ವಾಳಪ್ಪ, ಶನಿದೇವ, ಬಸವಣ್ಣ, ಲಕ್ಷ್ಮಿ, ಆಂಜನೇಯ, ಮಾರಮ್ಮ, ದಂಡಿನ ಮಾರಮ್ಮ, ಶೆಟ್ಟಿಹಳ್ಳಿ ಮಾರಮ್ಮ ದೇವಾಲಯಗಳಿವೆ. ಮಾರಮ್ಮನ ಜಾತ್ರೆಯನ್ನು ಪ್ರತಿವರ್ಷ ಹರಕೆ ಹಾಗೂ ಬಲಿಯೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ತಿಗಳರಹಳ್ಳಿ

ತಿಗಳರಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೬೦.೭೬ ಹೆಕ್ಟೇರ್ ಹೊಂದಿದ್ದು ವೆಂಕಟಾಪುರ ಭೂವಿಸ್ತೀರ್ಣದೊಳಗೆ ಸೇರಿರುವ ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣು ಮತ್ತು ಮರಳಿನಿಂದ ಕೂಡಿದ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಮೊಲ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ರೀತಿಯ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಪಾರಿವಾಳ, ಗೊರವಂಕ, ಗೀಜುಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೩ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಒಂದು ಹಳೆಯ ಬಾವಿಯನ್ನು ಕಾಣಬಹುದು.

ತಿಗಳ ಜನಾಂಗ ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಭಾಷೆ ಮಾತನಾಡುವವರೂ ಗ್ರಾಮದಲ್ಲಿದ್ದಾರೆ.

ಒಟ್ಟು ೮೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೩೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೨೫ ಮತ್ತು ಹೆಂಗಸರು ೧೦೭ ಜನರಿದ್ದಾರೆ. ಗ್ರಾಮದಲ್ಲಿ ಕಲ್ಲಿನ ಮನೆ ಮತ್ತು ಹೆಂಚಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ.

ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ, ಹುರುಳಿ ಬೆಳೆಯಲಾಗುತ್ತಿದ್ದು ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿ ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಇಲ್ಲಿ ಪೊಲೀಸ್ ಇಲಾಖೆ ಮತ್ತು ಶಿಕ್ಷಣ ಇಲಾಖೆಗೆ ಸೇರಿದ ಒಟ್ಟು ಮೂರು ಜನ ಸರ್ಕಾರಿ ನೌಕರರು ಇದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವವರು ಮತ್ತು ಕೂಲಿ ಮಾಡುವ ಜನರು ಕಂಡುಬರುತ್ತಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಟ್ಟಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೊಡಿಗೇನಹಳ್ಳಿ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಚಿಕ್ಕಮಾಲೂರು ಗ್ರಾಮ ಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿಕ್ಕಮಾಲೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿಲ್ಲ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ನಾಲ್ಕು ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೧೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಟೀ ಹೋಟೆಲ್‌ಗಳು ಹಾಗೂ ೨ ಅಂಗಡಿಗಳಿವೆ. ಜ್ವರ, ಕೆಮ್ಮು ರೋಗಗಳು ಹೆಚ್ಚಾಗಿ ಕಂಡುಬರುತ್ತವೆ. ಗ್ರಾಮವು ಎಲ್ಲಾ ರೀತಿಯ ಜನಪದ ಕ್ಷೇತ್ರಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ.

ಗ್ರಾಮದಲ್ಲಿ ರಾಮದೇವರು, ಚಿಕ್ಕಮ್ಮ, ದೊಡ್ಡಮ್ಮ, ಬಾಬಯ್ಯ, ಶನಿಮಹಾತ್ಮ ದೇವಾಲಯಗಳಿವೆ. ಕೆಂಪಮ್ಮ ಮತ್ತು ಮಾರಮ್ಮನ ಹಬ್ಬವನ್ನು ಆಚರಿಸುವರು. ರಾಮದೇವರ ಜಾತ್ರೆ ನಡೆಸುವರು. ಗ್ರಾಮದ ಹರಿಶ್ಚಂದ್ರ ಎನ್ನುವವರು ನಾಟಕ ಕಲಾವಿದರು. ಗ್ರಾಮದಲ್ಲಿ ಎಲ್ಲಾ ಹಿಂದೂ ಹಬ್ಬಗಳನ್ನು ದೀಪಾವಳಿ ಮತ್ತು ಸಂಕ್ರಾಂತಿಯನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

### ತಿಂಗಳೂರು

ತಿಂಗಳೂರು ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೩೭.೪೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ತಿಂಗಳೊಪ್ಪತ್ತಿನಲ್ಲಿ ಗ್ರಾಮವನ್ನು ನಿರ್ಮಿಸಿದ ಕಾರಣ ತಿಂಗಳಲ್ಲೇ ರೂಪುಗೊಂಡ ಗ್ರಾಮವಾದ ಕಾರಣ ತಿಂಗಳೂರು ಎಂದಾಗಿದೆ.

ಗ್ರಾಮದಲ್ಲಿ ಕೆಂಪು ಮಣ್ಣು, ಕಪ್ಪು ಮಣ್ಣು ಮತ್ತು ಮರಳು ಕಾಣಬಹುದು. ಅಲ್ಲಲ್ಲಿ ತೆಂಗು ಮತ್ತು ಅಡಿಕೆ ತೋಟ ಕಾಣಬಹುದು. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲ. ಪ್ರಾಣಿಗಳಾದ ನರಿ, ತೋಳ, ಕರಡಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು

ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೨ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಪಶ್ಚಿಮ ದಿಕ್ಕಿಗೆ ಕುಮುದ್ವತಿ ನದಿ ಇದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳು, ೮ ಸಿಸ್ಟನ್‌ರ್ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬರು, ಸಾದರು, ನಾಯಕರು, ಲಿಂಗಾಯಿತರು, ಕಮ್ಮಾರರು, ಬೋವಿ, ಭಜಂತ್ರಿ, ಆದಿದ್ರಾವಿಡರ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೩೪೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೩೬೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೬೬೧ ಮತ್ತು ಹೆಂಗಸರು ೭೦೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೨೩ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೧೦ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೫೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ರೇಷ್ಮೆ ಇಲಾಖೆ, ಪ್ರಾಚಾರ್ಯರು, ಶಿಕ್ಷಣ ಇಲಾಖೆ ಮತ್ತು ಪೊಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ೮ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ೩ ಜನ ಗ್ರಾಮದಲ್ಲಿ ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಇಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ವ್ಯಾಪ್ತಿಗೆ, ಕಲಿದೇವಪುರ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕಲಿದೇವಪುರ ಗ್ರಾಮದಲ್ಲಿ ಗ್ರಾಮ ಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಸದಸ್ಯರು ಹಾಗೂ ಪಂಚಾಯ್ತಿ ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಕಛೇರಿಯಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೧ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದ್ದು ೬೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೧೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ ಮತ್ತು ಟೀ ದೊರೆಯುವ ೩ ಹೋಟೆಲ್‌ಗಳು ಇವೆ. ಈ ಗ್ರಾಮದ ಮನೆಗಳನ್ನು ತಿಂಗಳಲ್ಲಿ ನಿರ್ಮಿಸಿದ್ದರಿಂದ ತಿಂಗಳೂರು ಎಂದು ಹೆಸರು ಬಂದಿದೆ.

ಗ್ರಾಮದಲ್ಲಿ ಮಾರಮ್ಮದೇವಿ, ಆಂಜನೇಯ, ದೇವರತೋಪು, ಬೀರಲಿಂಗೇಶ್ವರ, ಚಂದ್ರಮೌಳೇಶ್ವರ, ಬೊಮ್ಮಪ್ಪ ದೇವಾಲಯಗಳಿವೆ. ನಾಗರಕಟ್ಟೆಗಳಿವೆ. ಗ್ರಾಮದಲ್ಲಿ ಮಾರಮ್ಮನ, ಚಂದ್ರಮೌಳೇಶ್ವರ ಹಾಗೂ ಬೊಮ್ಮಪ್ಪನ ಹಬ್ಬ ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

### ತಿರುಮಲದೇವರಹಳ್ಳಿ

ತಿರುಮಲದೇವರಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೯೯.೦೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಈ ಗ್ರಾಮದ ಪ್ರಾಚೀನ ಹೆಸರು ನಾರಗಾನಹಳ್ಳಿ ಎಂಬುದಾಗಿದೆ. ನಂತರ ತಿರುಮಲದೇವರಹಳ್ಳಿ ಆಯಿತು. ಇದಕ್ಕೆ ಸಾಕ್ಷಿ ಗ್ರಾಮದಲ್ಲಿ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನ. ಈ ದೇವರ ಒಕ್ಕಲು ಇಂದಿಗೂ ಸಹ ನರಸಿಂಹ ಎಂಬ ಹೆಸರಿನ ಬಹಳಷ್ಟು ಜನರಿದ್ದಾರೆ. ಗ್ರಾಮದಲ್ಲಿ ಆಂಧ್ರಪ್ರದೇಶ ರಾಜ್ಯದ ಗಡಿ ಇದ್ದು ಈ ಗ್ರಾಮವು ಗಡಿ ಪ್ರದೇಶದ ಕರ್ನಾಟಕದ ಗ್ರಾಮವಾಗಿದೆ. ಆದರೆ ಆಂಧ್ರ ಪ್ರದೇಶದ ತಿರುಪತಿ ಭಕ್ತರು ಇಲ್ಲಿದ್ದುದರಿಂದ ತಿರುಮಲದೇವರಹಳ್ಳಿ ಆಗಿದೆ.

ಗ್ರಾಮದಲ್ಲಿ ಸುತ್ತಲೂ ಕಪ್ಪುಮಣ್ಣು ಅಧಿಕವಿದ್ದು ಕೆಲವೆಡೆ ಚೌಳು ಭೂಮಿ ಸಹ ಇದೆ. ಕುಮುದ್ವತಿ ನದಿ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಉತ್ತರಾಭಿಮುಖವಾಗಿ ಹರಿಯುತ್ತದೆ. ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ಗ್ರಾಮದಲ್ಲಿನ ಪ್ರದೇಶದಲ್ಲಿ ಬೆಟ್ಟ ಗುಡ್ಡಗಳಿಲ್ಲವಾಗಿದ್ದು ವಿಶಾಲ ಬಯಲುಸೀಮೆ ಪ್ರದೇಶವಾಗಿದೆ. ಬೇವು, ಹುಣಸೆ, ಜಾಲಿ, ಬೇಲಿಗಿಡ ಇತ್ಯಾದಿ ಅತ್ಯಲ್ಪ ಗಿಡಮರಗಳಿದ್ದು ಕುರುಚಲು ಕಾಡಾಗಿದೆ. ದಟ್ಟ ಅರಣ್ಯವೇನೂ ಇಲ್ಲ.

ಈ ಪ್ರದೇಶದಲ್ಲಿ ಕಾಡುಮೊಲ, ಕಾಡುಹಂದಿ, ನರಿ, ನಾಗರಹಾವು ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಕೌಜ, ಗೊರವಂಕ, ಬೆಳವ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ನಾಟಿಹಸು, ನಾಟಿ ಎತ್ತು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಪಂದ್ಯದ ಕೋಳಿಗಳು ಪ್ರಸಿದ್ಧಿ. ಕೋಳಿ ಮಾರಾಟ ಇಲ್ಲಿ ಕಾಣಬಹುದಾಗಿದೆ.

ಈ ಗ್ರಾಮಕ್ಕೆ ಕಡಗತ್ತೂರು ಗ್ರಾಮದ ಕೆರೆಯ ನೀರು ಹರಿದುಬರುತ್ತದೆ. ಆ ಮೂಲಕವಾಗಿ ತಿರುಮಲದೇವರಹಳ್ಳಿ ಗ್ರಾಮದ ಜಮೀನುಗಳಿಗೆ ಕಡಗತ್ತೂರು ಗ್ರಾಮದ ಕೆರೆ ನೀರಿನ ಹಕ್ಕಿದೆ. ಗ್ರಾಮದ ಪ್ರಧಾನ ಬೆಳೆ ರಾಗಿ ಮತ್ತು ಮುಸುಕಿನ ಜೋಳ ಬೆಳೆಯಾಗಿದೆ. ಉಪಬೆಳೆಗಳಾಗಿ ಅವರೆ, ಅಲಸಂದೆ, ತೊಗರಿ ಧಾನ್ಯಗಳನ್ನು ಬೆಳೆಯುತ್ತಾರೆ. ರಾಗಿಮುದ್ದೆ ಪ್ರಧಾನ ಆಹಾರ. ಅನ್ನ, ಉಪ್ಪಿಟ್ಟು, ಚಪಾತಿ ಅಮುಖ್ಯ ಆಹಾರವಾಗಿದೆ. ವಿಶೇಷವಾಗಿ ಬಾಡೂಟ, ಕಡುಬು ಆಹಾರವಾಗಿದೆ.

ಗ್ರಾಮದಲ್ಲಿ ಬಹಳಷ್ಟು ಜನ ಗ್ರಾಮಸ್ಥರು ಕೃಷಿಕರು ಇದ್ದಾರೆ. ಗ್ರಾಮಕ್ಕೆ ಸೇರಿದ ಸರ್ಕಾರಿ ಉದ್ಯೋಗಿಗಳೆಂದರೆ ಕೆಇಬಿ ಮ್ಯಾನೇಜರ್ ಒಬ್ಬರು, ಪಿಡಬ್ಲ್ಯೂಡಿ ಇಂಜಿನಿಯರ್ ಒಬ್ಬರು, ಶಿಕ್ಷಕರು ಒಬ್ಬರು ಇದ್ದಾರೆ.

ಗ್ರಾಮದಲ್ಲಿ ಪ್ರಧಾನ ಸಮುದಾಯ ರೆಡ್ಡಿ ಒಕ್ಕಲಿಗರು ಇದ್ದಾರೆ. ಇತರೆ ಭಜಂತ್ರಿ, ಬೋವಿ, ನಾಯಕ, ಮುಸ್ಲಿಂ, ಕುರುಬ, ಆದಿಕರ್ನಾಟಕ, ಉಪ್ಪಾರರು, ಅಗಸರು, ಲಿಂಗಾಯಿತರು, ಶೆಟ್ಟಿ ಬಣಜಿಗ, ಆದಿದ್ರಾವಿಡ ಜನಾಂಗಗಳಿವೆ. ಗ್ರಾಮದಲ್ಲಿ ತೆಲುಗು, ಉರ್ದು ಮತ್ತು ಕನ್ನಡ ಭಾಷೆಗಳನ್ನು ಬಳಸುತ್ತಾರೆ.

೧೩೮ ಮನೆಗಳನ್ನು ಹೊಂದಿರುವ ಈ ಗ್ರಾಮವು ೬೦೪ ಜನಸಂಖ್ಯೆ ಹೊಂದಿದೆ. ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕಡಗತ್ತೂರು ತಾಲ್ಲೂಕು ಪಂಚಾಯ್ತಿ ಮತ್ತು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ.

ಗ್ರಾಮದಲ್ಲಿ ಅಂಗನವಾಡಿ ಕೇಂದ್ರವಿದ್ದು ೧೯ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಕಿರಿಯ ಪ್ರಾಥಮಿಕ ಶಾಲೆಯಲ್ಲಿ ೧೮ ಮಕ್ಕಳು, ಒಬ್ಬರು ಶಿಕ್ಷಕರಿದ್ದಾರೆ. ಸರ್ಕಾರದ ಸಮುದಾಯ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದ ಸಾಕ್ಷರತೆ ಪ್ರಮಾಣ ೭೧%. ಗ್ರಾಮಕ್ಕೆ ರಸ್ತೆ ಸಂಪರ್ಕವಿದ್ದು ಬಸ್ ಸೌಕರ್ಯದ ಕೊರತೆಯಿದೆ. ಗ್ರಾಮದಲ್ಲಿ ನಾಲ್ಕು ಕಿರಾಣಿ ಅಂಗಡಿಗಳಿವೆ. ೪ ಸ್ತ್ರೀಶಕ್ತಿ ಸಂಘಗಳು, ಹಾಲು ಉತ್ಪಾದಕರ ಸಂಘ ಇದೆ.

ಗ್ರಾಮದಲ್ಲಿ ಲಕ್ಷ್ಮೀನರಸಿಂಹಸ್ವಾಮಿ, ಮಾರಮ್ಮ, ಬೊಮ್ಮೇಶ್ವರ ದೇವಸ್ಥಾನಗಳಿವೆ. ವಿಶೇಷವಾಗಿ ಶಿವರಾತ್ರಿ ಹಬ್ಬ, ಯುಗಾದಿ ಹಬ್ಬ, ಶ್ರೀರಾಮನವಮಿ ಹಬ್ಬ, ಗೌರಿ ಹಬ್ಬಗಳನ್ನು ಆಚರಿಸುತ್ತಾರೆ.

## ತೆರಿಯೂರು

ತೆರಿಯೂರು ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿ ೨೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೩೧.೭೫ ಹೆಕ್ಟೇರ್ ಕಂದಾಯ ಗ್ರಾಮವಾಗಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ಹಾಗಾಗಿ ತರಿಯ ಭೂಮಿ ತರಿಯೂರು ಆಗಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಕಂಡುಬರುತ್ತದೆ. ಉಳಿದಂತೆ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಮರಗಳಾದ ಹುಣಸೆ, ಹಲಸು, ಮಾವು ಇತ್ಯಾದಿ ಕಂಡುಬರುತ್ತವೆ. ಗ್ರಾಮದಲ್ಲಿ ಸೀಮೆಹಸು, ಎಮ್ಮೆ, ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕುತ್ತಾರೆ. ವಾರ್ಷಿಕ ಮಳೆ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ. ಕೃಷಿಗೆ ನೀರನ್ನು ಒದಗಿಸುತ್ತದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ.

ಗ್ರಾಮದಲ್ಲಿ ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಭಜಂತ್ರಿ, ಲಿಂಗಾಯಿತ, ನಾಯಕ, ಅಗಸ, ಶೆಟ್ಟಿ, ಒಕ್ಕಲಿಗ ಕಿರು ಸಮುದಾಯವಾಗಿದೆ. ಒಟ್ಟು ೫೫೯ ಮನೆಗಳನ್ನು ಹೊಂದಿರುವ ಗ್ರಾಮವು ಗಂಡು ೧೧೧೫ ಹೆಣ್ಣು ೧೧೧೩ ಸೇರಿ ಒಟ್ಟು ೨೨೨೮ ಜನಸಂಖ್ಯೆ ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಹಾಗೂ ಶೀಟಿನ ಮನೆಗಳಿವೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರ ಜೊತೆಗೆ ಬಾಡೂಟ ವಿಶೇಷ. ಗ್ರಾಮದಲ್ಲಿ ೧೦೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳಿವೆ. ಸೈಕಲ್, ಟಿವಿಎಸ್, ಟ್ರ್ಯಾಕ್ಟರ್, ಆಟೋ ರಿಕ್ಷಾ ಮತ್ತು ದ್ವಿಚಕ್ರ ವಾಹನಗಳಂಥ ಆಧುನಿಕ ವಾಹನಗಳಿವೆ. ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಅವರೆ, ಶೇಂಗಾ ಮತ್ತು ಸೂರ್ಯಕಾಂತಿಯನ್ನು ಬೆಳೆಯುತ್ತಾರೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಕಂದಾಯ ಇಲಾಖೆ, ಶಿಕ್ಷಣ, ಸಾರಿಗೆ ಇಲಾಖೆ ಮತ್ತು ಪೊಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ೭ ಜನ ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕಡಗತ್ತೂರು ತಾಲ್ಲೂಕು ಪಂಚಾಯ್ತಿಗೆ, ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿಗೆ ಸೇರುತ್ತದೆ. ಮುದ್ದೇನಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಒಟ್ಟು ಮೂರು ಜನ ಸದಸ್ಯರುಗಳಿದ್ದು ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆಯ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳು, ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ. ಮೂರು ಸ್ತ್ರೀಶಕ್ತಿ ಸಂಘಗಳು ಮತ್ತು ಒಂದು ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ಎರಡು ಅಂಗನವಾಡಿಗಳಿದ್ದು ೬೮ ಮಕ್ಕಳು, ಇಬ್ಬರು ಕಾರ್ಯಕರ್ತೆಯರು ಮತ್ತು ನಾಲ್ವರು ಸಹಾಯಕಿಯರು ಇದ್ದಾರೆ. ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಪ್ರೌಢಶಾಲೆಯಲ್ಲಿ ೧೦೮ ಮಕ್ಕಳು ಇದ್ದು ೬ ಜನ ಶಿಕ್ಷಕರಿದ್ದಾರೆ. ಅಂಬೇಡ್ಕರ್ ಸನಿವಾಸ ಪ್ರೌಢಶಾಲೆಯಲ್ಲಿ ೧೧೦ ವಿದ್ಯಾರ್ಥಿಗಳು, ೯ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೫೭.೧%.

ಸರ್ಕಾರದ ಸಮುದಾಯ ಸೌಲಭ್ಯಗಳನ್ನು ಈ ಗ್ರಾಮದಲ್ಲಿ ಚಾಲ್ತಿಯಲ್ಲಿವೆ. ಕಾಫಿ ಮತ್ತು ಟೀ ದೊರೆಯುವ ಹೋಟೆಲ್ ಮತ್ತು ೩ ಅಂಗಡಿಗಳಿದ್ದು ಈ ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಈಶ್ವರ, ಆಂಜನೇಯ, ನರಸಿಂಹ, ದಂಡಿನಮಾರಮ್ಮ, ಮೈಲಾರಲಿಂಗ, ಮಾರಮ್ಮ, ಸುಬ್ಬರಾಯ ಮತ್ತು ಆಂಜನೇಯ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಒಂದು ಕಲ್ಯಾಣಿ ಇದೆ. ಸುಬ್ಬರಾಯ ದೇವರಿಗೆ ಜಾತ್ರೆ, ತೇರು, ಮಾರಮ್ಮನ ಆರತಿ, ಬಲಿ ನಡೆಯುತ್ತದೆ.

## ತಗ್ಗಿಹಳ್ಳಿ

ತಗ್ಗಿಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೫.೨೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ತಗ್ಗಿನ ಭೂಪ್ರದೇಶದಲ್ಲಿ ಗ್ರಾಮ ರಚನೆಯಾದ್ದರಿಂದ ತಗ್ಗಿಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಅರಳಿ, ಬೇವು, ತಾರೆ, ಜಾಲಾರಿ, ಮಾವು, ಹಲಸು ಮೊದಲಾದ ಮರಗಳನ್ನು ಹೊಂದಿದೆ. ಪ್ರಾಣಿಗಳಾದ ಕೃಷ್ಣಮೃಗ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗರುಡ, ಕೋಗಿಲೆ, ಗಿಳಿ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೭೨ ಎಮ್ಮೆ, ೨೩ ಕುರಿ, ಮೇಕೆಗಳನ್ನು ಸಾಕಿದ್ದಾರೆ. ೪೬ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಈ ಗ್ರಾಮವು ಪಶು ಚಿಕಿತ್ಸಾಲಯವನ್ನು ಹೊಂದಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿವೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ, ನಾಯಕ, ಮಡಿವಾಳ, ಭಜಂತ್ರಿ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೫೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೧೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೧೩ ಮತ್ತು ಹೆಂಗಸರು ೩೦೪ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೫೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ತೊಗರಿ, ಶೇಂಗಾ, ಮುಸುಕಿನ ಜೋಳ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ರೇಷ್ಮೆ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು

ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಪುರವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಪುರವರದಲ್ಲಿ ಪಂಚಾಯಿತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಪುರವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಪುರವರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೨%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಒಂದು ಕರುಗಲ್ಲು ಇದೆ. ಶ್ರೀ ರಾಮಕೃಷ್ಣ ಆಶ್ರಮ ಇದೆ.

ಗ್ರಾಮದಲ್ಲಿ ಮಾರಮ್ಮ, ಮುತ್ತುರಾಯ, ವೆಂಕಟರಮಣಸ್ವಾಮಿ, ಸಪ್ಲಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಅದ್ದೂರಿಯಾಗಿ ಜಾತ್ರೆ ನಡೆಯುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಪ್ರತಿ ವರ್ಷ ಸಪ್ಲಮ್ಮನ ಜಾತ್ರೆ ನಡೆಯುತ್ತದೆ.

## ತಿಮ್ಮನಹಳ್ಳಿ

ತಿಮ್ಮನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ನಿಟ್ರಹಳ್ಳಿಯ ೫೫೦.೨೪ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ೨೦ ಹೆಕ್ಟೇರ್‌ನಷ್ಟು ಅರಣ್ಯವನ್ನು ಹೊಂದಿದೆ. ಹೊಂಗೆ, ಅರಳಿ, ಮಾವು, ಹಲಸು, ಬೇವು ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಕೃಷ್ಣಮೃಗ, ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಪಾರಿವಾಳ, ಕೋಗಿಲೆ, ಗೂಬೆ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೪೦ ಎಮ್ಮೆ, ೨೦೦ ಕುರಿ, ೧೫೦ ಮೇಕೆ, ೧೦ ಹಂದಿಗಳನ್ನು ಸಾಕಿದ್ದಾರೆ. ೪೮ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಮತ್ತು ಜಯಮಂಗಲಿ ನದಿ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ, ಭಜಂತ್ರಿ, ದರ್ಜಿಗಳು, ಮಡಿವಾಳ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೯೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೯೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೦೩ ಮತ್ತು ಹೆಂಗಸರು ೧೯೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೮ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಡಿಕೆ, ಶೇಂಗಾ, ಬಾಳೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಶಿಕ್ಷಣ ಇಲಾಖೆ ಹಾಗೂ ಸಾರಿಗೆ ಇಲಾಖೆಗಳಿಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಒಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡಗದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಪುರವರದಲ್ಲಿ ಪಂಚಾಯಿತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡಗದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡಗದಾಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ೧೮ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ೨೮ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೭೬%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ರಾಮದೇವರು, ಗಣೇಶ, ಕೊಲ್ಲಾಪುರದಮ್ಮ ದೇವಾಲಯಗಳಿವೆ. ಮಾರಮ್ಮನ ಜಾತ್ರೆ ಆಷಾಢದಲ್ಲಿ ನಡೆಯುತ್ತದೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಬಲಿ ಹಾಗೂ ಹರಕೆಯೊಂದಿಗೆ ಮಾರಮ್ಮನ ಹಬ್ಬವನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

**ತಾಳೇಕೆರೆ**

ತಾಳೇಕೆರೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೮೧.೪೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಪರಿಸರದಲ್ಲಿ ತಾಳೆಮರ ಮತ್ತು ಕಟ್ಟೆ ಇದ್ದ ಕಾರಣ ಅಲ್ಲಿ ಗ್ರಾಮ ರಚನೆಯಾದುದರಿಂದಾಗಿ ತಾಳೆಕೆರೆ ಎಂದು ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚುಕಲ್ಲುಗಳಿಂದ ಕೂಡಿರುವ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ–ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಪಾರ್ವತಯ್ಯನ ಕೆರೆಯಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ಗ್ರಾಮದಲ್ಲಿ ಹೆಚ್ಚಿನ ಕುಡಿಯುವ ನೀರಿನ ಬಾವಿಗಳಿದ್ದು ಇಂದು ನೋಡಲೂ ಒಂದರೆಡು ಬಾವಿಗಳು ಕಾಣಸಿಗುವುದಿಲ್ಲ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ, ಕುಂಬಾರ, ಶೆಟ್ಟಿ ಬಣಜಿಗ, ಬೋವಿ, ಲಂಬಾಣಿ, ಆದಿಕರ್ನಾಟಕ, ಭಜಂತ್ರಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೫೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೭೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೧೯ ಮತ್ತು ಹೆಂಗಸರು ೨೫೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ಪ್ರಮುಖ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡ್ಲಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡ್ಲಾಪುರ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡ್ಲಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ

ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡ್ಲಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೫೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೪.೩೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೧ ಹೋಟೆಲ್‌ಯಿದ್ದು ೨ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ ದೇವಾಲಯವಿದೆ. ಪ್ರತಿ ವರ್ಷ ಅದ್ಧೂರಿಯಾಗಿ ರಾಮನವಮಿ ಮತ್ತು ಹನುಮಜಯಂತಿ ನಡೆಯುತ್ತದೆ. ಅಂದು ಊರಿನ ತುಂಬ ದೇವರ ಉತ್ಸವ ನಡೆಯುತ್ತದೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ತಿಮ್ಮಸಂದ್ರ

ತಿಮ್ಮಸಂದ್ರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೮.೫೨ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ತಿಮ್ಮ ಎಂಬ ವ್ಯಕ್ತಿ ಹಾಗೂ ಸಮುದ್ರ > ಕೆರೆ – ಈ ಎರಡೂ ಮೂಲಗಳಿಂದ ತಿಮ್ಮಸಮುದ್ರ > ತಿಮ್ಮಸಂದ್ರವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ.ಹೊಂಗೆ, ಹುಣಸೆ, ಮಾವು, ಹಲಸು, ನೇರಳೆ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಹದ್ದು, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೮ ಎಮ್ಮೆ, ೬ ಕುರಿ ಮೇಕೆಗಳನ್ನು ಸಾಕಿದ್ದಾರೆ. ೧೫ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೪ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಲಿಂಗಾಯಿತ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೮ ಮತ್ತು ಹೆಂಗಸರು ೧೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ

ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೩ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ಶೇಂಗಾ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಕಂದಾಯ ಇಲಾಖೆಗೆ ಸೇರಿದ ಒಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಕಮ್ಮಾರರು, ಚಮ್ಮಾರರು ಮತ್ತು ಬಡಗಿ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡ್ಲಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡ್ಲಾಪುರ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡ್ಲಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡ್ಲಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮವು ಎಲ್ಲಾ ರೀತಿಯ ಜನಪದ ಕ್ಷೇತ್ರಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ.

ಗ್ರಾಮದಲ್ಲಿ ಮಾರಮ್ಮದೇವಿ, ಆಂಜನೇಯ, ಈಶ್ವರ ಮುಂತಾದ ಪ್ರಸಿದ್ಧ ದೇವಾಲಯಗಳಿವೆ. ನಾಗರಕಟ್ಟೆ ಕಂಡುಬರುತ್ತದೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಬಲಿ ಹಾಗೂ ಹರಕೆಯೊಂದಿಗೆ ಮಾರಮ್ಮನ ಹಬ್ಬವನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ತಿಮ್ಮಲಾಪುರ

ತಿಮ್ಮಲಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೪೯.೬೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ತಿರುಪತಿ ತಿಮ್ಮಪ್ಪನ ಒಕ್ಕಲಾದ ಜನಗಳು ಗ್ರಾಮ ರಚನೆ ಕಾಲಕ್ಕೆ ದೈವಮೂಲವಾಗಿ ತಿಮ್ಮಲಾಪುರ ಎಂದು ಕರೆದುಕೊಂಡಿದ್ದಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ೨೦ ಹೆಕ್ಟೇರ್‌ನಷ್ಟು ಅರಣ್ಯವನ್ನು ಹೊಂದಿದೆ. ಹೊಂಗೆ, ಅರಳಿ, ಮಾವು, ಹಲಸು, ಅಕೇಶಿಯಾ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಮೊಲ, ಕೃಷ್ಣಮೃಗ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಹದ್ದು, ಪಾರಿವಾಳ, ಗೂಬೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ–ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ, ಒಕ್ಕಲಿಗ, ಬುಡಬುಡಿಕೆ, ಬೋವಿ, ವೈಷ್ಣವರು ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಬುಡಬುಡಿಕೆ ಮತ್ತು ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೨೧೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೮೫೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೨೭ ಮತ್ತು ಹೆಂಗಸರು ೪೨೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೪೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಸೂರ್ಯಕಾಂತಿ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಅರಣ್ಯ, ಕೆಎಸ್‌ಆರ್‌ಟಿಸಿ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೬ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೫.೪೫%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಕಾಫಿ ಮತ್ತು ಟೀ ದೊರೆಯುವ ೩ ಹೋಟೆಲ್ ಇದ್ದು ೪ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ೧ ಕರುಗಲ್ಲು, ೧ ಕೋಟೆಯಿದ್ದು ಪಾಳುಬಿದ್ದಿದೆ.

ಗ್ರಾಮದಲ್ಲಿ ಮಾರಮ್ಮನ ಗುಡಿ, ಆಂಜನೇಯ ದೇವಾಲಯಗಳು ಕಂಡುಬರುತ್ತದೆ. ಆಷಾಢದಲ್ಲಿ ಮಾರಮ್ಮನ ಜಾತ್ರೆ ನಡೆಯುತ್ತದೆ. ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದೇವರಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

### ತಿಮ್ಮಲಾಪುರ ಗೇಟ್

ತಿಮ್ಮಲಾಪುರ ಗೇಟ್ ಗ್ರಾಮವು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಿಮ್ಮಲಾಪುರದ ಹೊರವಲಯದಲ್ಲಿದೆ. ಒಟ್ಟು ೩೦ ಮನೆಗಳಿದ್ದು ಒಕ್ಕಲಿಗ ಜನಾಂಗದವರು ಮಾತ್ರ ಇದ್ದಾರೆ. ೭೫ ಜನಸಂಖ್ಯೆ ಇದೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ.

ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ದೊಡ್ಡೇರಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಕೂಲಿ ಹಾಗೂ ವ್ಯವಸಾಯ ಮಾಡುವ ಜನರಿದ್ದಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

### ತಿಮ್ಮಲಾಪುರ ಲಂಬಾಣಿ ತಾಂಡ

ಲಂಬಾಣಿ ತಾಂಡವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೪೯.೬೬ ಹೆಕ್ಟೇರ್ ಭೂವಿಸ್ತೀರ್ಣದಲ್ಲಿ ಸೇರಿರುವ ತಿಮ್ಮಲಾಪುರದ ಮಜರೆ ಗ್ರಾಮವಾಗಿದೆ. ತಿಮ್ಮಲಾಪುರ ತಾಂಡವೆಂತಲೂ ಕರೆಯುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಹೊಂಗೆ, ಹಲಸು, ಮಾವು, ಅರಳಿ ಮರ, ಬೇವಿನ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಕಾಗೆ, ಗೂಬೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಲಂಬಾಣಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡ ಮತ್ತು ಲಂಬಾಣಿ ಆಗಿದ್ದು ಲಂಬಾಣಿ ಭಾಷೆ ಮಾತನಾಡುವ ಜನ ಈ ಗ್ರಾಮದಲ್ಲಿ ಹೆಚ್ಚು ಕಂಡುಬರುತ್ತಾರೆ.

ಒಟ್ಟು ೫೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೬೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೭೦ ಮತ್ತು

ಹೆಂಗಸರು ೯೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಮುಸುಕಿನಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಶಿಕ್ಷಣ ಇಲಾಖೆಗೆ ಸೇರಿದಂತೆ ಒಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ, ಕುರಿ ಕಾಯುವ, ಕುರಿ ಸಾಕಾಣಿಕೆ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ಹನುಮಂತರಾಯ ಎನ್ನುವವರು ನೆಲಮಂಗಲದಲ್ಲಿ ಬಿಇಓ ಆಗಿದ್ದಾರೆ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೯.೬%.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ವೀರಗಲ್ಲು ೧, ಮಾಸ್ತಿಗಲ್ಲು ೧, ಕರುಗಲ್ಲು ಇದೆ. ಕಂಕೀಬಾಯಿ ೫೦ ವರ್ಷದವರು ಕೋಲಾಟ ಆಡುತ್ತಾರೆ. ಇವರ ಕೋಲಾಟ ತಂಡವಿದೆ.

ಗ್ರಾಮದಲ್ಲಿ ಸೇವಾಲಾಲ್, ಮಾರಮ್ಮ (ದಂಡಿನ ಮಾರಮ್ಮ) ದೇವಾಲಯಗಳು ಕಂಡುಬರುತ್ತದೆ. ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದೇವರಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಹೋಳಿ, ದೀಪಾವಳಿ ವಿಶೇಷವಾಗಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ತಿಮ್ಮಲಾಪುರ ಗೊಲ್ಲರಹಟ್ಟಿ (ಟಿ.ಗೊಲ್ಲರಹಟ್ಟಿ)

ಟಿ.ಗೊಲ್ಲರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೪೯.೬೬ ಹೆಕ್ಟೇರ್ ಹೊಂದಿದ್ದು ತಿಮ್ಮಲಾಪುರದ ಭೂ ವಿಸ್ತೀರ್ಣದಲ್ಲಿ ಸೇರಿರುವ ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಹಲಸು, ಮಾವು, ಬೇವು, ಅರಳಿ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕಾಗೆ, ಪಾರಿವಾಳ, ಗೂಬೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೬೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೫೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೨೩ ಮತ್ತು ಹೆಂಗಸರು ೧೩೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಮುಸುಕಿನಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಶಿಕ್ಷಣ ಇಲಾಖೆಗೆ ಸೇರಿದ ಒಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ ಮತ್ತು ಕುರಿ ಸಾಕಾಣಿಕೆ ಮಾಡುವಂತಹ ಜನರು ಕಂಡುಬರುತ್ತಾರೆ. ಒಬ್ಬರು ವಕೀಲರು ಇದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಗ್ರಾಮದ ಸಾಕ್ಷರತೆ ಪ್ರಮಾಣ ೪೪.೮೬% ಇದೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಮುಟ್ಟುಗದ ಮಠವಿದೆ.

ಗ್ರಾಮದಲ್ಲಿ ರಂಗನಾಥಸ್ವಾಮಿ ದೇವಾಲಯ ಕಂಡುಬರುತ್ತದೆ. ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದೇವರಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ತಿಮ್ಮಲಾಪುರ

ತಿಮ್ಮಲಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ

೨೭೬.೭೭ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದ ಸುತ್ತಲೂ ಗುಡ್ಡಗಳಿವೆ.

ಗ್ರಾಮವು ಒಂದು ಅಭಯಾರಣ್ಯವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಚಿರತೆ, ಜಿಂಕೆ, ಕರಡಿ, ತೋಳ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಕೋಗಿಲೆ, ಕಾಗೆ, ಪಾರಿವಾಳ, ಗುಬ್ಬಚ್ಚಿ, ನವಿಲು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಎತ್ತು, ಕುರಿ, ಮೇಕೆಗಳು ಮತ್ತು ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಒಂದು ಹಳ್ಳ ಹಾಗೂ ಒಂದು ಕೆರೆ ಇದೆ. ಗ್ರಾಮದಲ್ಲಿ ಜಾನುವಾರುಗಳಿಗೆ ಹಾಗೂ ಕೃಷಿಗೆ ಸ್ವಲ್ಪ ಪ್ರಮಾಣದ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩೦ ಸಾರ್ವಜನಿಕ ನಲ್ಲಿಗಳು ಹಾಗೂ ಒಂದು ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೨೭೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೨೯೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೬೭೧ ಮತ್ತು ಹೆಂಗಸರು ೬೨೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಮಣ್ಣಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೪ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ ಮತ್ತು ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ಅವರೆ, ತೊಗರಿಯನ್ನು ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಅಡಿಕೆ ಹಾಗೂ ತೆಂಗು ಬೆಳೆಯುತ್ತಾರೆ. ಶೇಂಗಾ, ಅಡಿಕೆ ಹಾಗೂ ತೆಂಗು ಗ್ರಾಮದ ವ್ಯಾಪಾರದ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದ್ದು ಒಂದು ಆಧುನಿಕ ಡೈರಿ ಇದೆ. ಗ್ರಾಮಕ್ಕೆ ಸೇರಿದಂತೆ ಯಾವುದೇ ಕೆರೆ, ಹಳ್ಳವಿಲ್ಲದ ಕಾರಣವಾಗಿ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ.

ಗ್ರಾಮದಲ್ಲಿ ಶಿಕ್ಷಕರಾಗಿ ಇಬ್ಬರು ಸರ್ಕಾರಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದು ಉಳಿದಂತೆ ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಬಡಗಿ, ಒಬ್ಬರು ಕುಂಬಾರರು ಇದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡೇರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ದೊಡ್ಡೇರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮದಲ್ಲಿಯೇ ಅಂಚೆ ಕಛೇರಿಗೆ ಇದೆ. ಗ್ರಾಮದಲ್ಲಿ ಮೊಬೈಲ್‌ಗಳಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ ಹಾಗೂ ೩೫ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೩೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಆರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧%. ಗ್ರಾಮದಲ್ಲಿ ಗ್ರಾಮ ಪಂಚಾಯ್ತಿ ವತಿಯಿಂದ ನಡೆಯುವ ಒಂದು ಗ್ರಂಥಾಲಯವಿದ್ದು ವಿವಿಧ ಪ್ರಕಾರದ ೧೦೦೦ ಪುಸ್ತಕಗಳಿವೆ. ಒಬ್ಬರು ಗ್ರಂಥಪಾಲಕರಿದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಎರಡು ಅಂಗಡಿಗಳು ಗ್ರಾಮದಲ್ಲಿವೆ.

ಗ್ರಾಮದಲ್ಲಿ ಮಾರಮ್ಮ, ಕದರಪ್ಪ, ಕಣಿಮೆ ರಂಗಪ್ಪ, ಶನಿಮಹಾತ್ಮ ಹಾಗೂ ಆಂಜನೇಯ ದೇವಾಲಯಗಳು ಕಂಡುಬರುತ್ತದೆ. ಪ್ರತಿ ವರ್ಷವೂ ಹರಕೆಗಳನ್ನು ಕಟ್ಟಿ ಪ್ರತಿ ೧೧ ವರ್ಷಗಳಿಗೊಮ್ಮೆ ದೊಡ್ಡ ಮಾರಮ್ಮನ ಜಾತ್ರೆಯನ್ನು ಬಲಿಕೊಡುವ ಆಚರಣೆಗಳೊಂದಿಗೆ ಆಚರಿಸುವರು. ಗ್ರಾಮದಲ್ಲಿ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

**ತಾಡಿ**

ತಾಡಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೯೩.೧೧ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ.

ತಾಳೆಮರಗಳ ಬಯಲು, ಸಾಲಿನಿಂದಾಗಿ ತಾಡಿ ಶಬ್ದ ಬಂದಿದ್ದು ಗ್ರಾಮಕ್ಕೂ ಇದೇ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ೩ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವುಗಳನ್ನು ಜಾನುವಾರುಗಳಿಗೆ ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ. ದೊಡ್ಡ ಕೆರೆ, ದೇವರ ಕೆರೆ ಮತ್ತು ಪಾತಾಳಪ್ಪ ಕೆರೆಗಳಿವೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ ನಾಯಕ, ಕುರುಬರು, ಸಾದರು ಜನಾಂಗದವರು ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ.

ಒಟ್ಟು ೩೦೬ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೧೨೯೭ ಜನಸಂಖ್ಯಾ ಪ್ರಮಾಣವನ್ನು ಹೊಂದಿದ್ದು ಗಂಡು ೬೩೫, ಹೆಣ್ಣು ೬೬೨ ಜನಸಂಖ್ಯೆ ಇದೆ, ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಈ ಗ್ರಾಮದಲ್ಲಿ  ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೫೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗನ್ನು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇಲ್ಲಿನ ರೈತರ ಉಪಕಸುಬಾಗಿದೆ ಒಂದು ಮಿನಿ ಡೈರಿ ಇದೆ.

ವಕೀಲರು, ವಿದ್ಯುತ್, ಶಿಕ್ಷಣ ಇಲಾಖೆ, ಸಾರಿಗೆ ಇಲಾಖೆ, ಹಾಗೂ ಪೋಲಿಸ್ ಇಲಾಖೆಗಳಿಗೆ ಸಂಬಂಧಿಸಿದಂತೆ ೧೬ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರ್ ೩ ಜನರಿದ್ದಾರೆ ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಐ.ಡಿ.ಹಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಮೂವರು ಸದಸ್ಯರುಗಳಿದ್ದು ಇಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಐ.ಡಿ.ಹಳ್ಳಿ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಐ.ಡಿ.ಹಳ್ಳಿ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ೫೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಮತ್ತು ಒಬ್ಬ ಸಹಾಯಕಿ ಇದ್ದಾರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ೧೩೮ ವಿದ್ಯಾರ್ಥಿಗಳಿದ್ದಾರೆ ಒಟ್ಟು ೦೪ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೧.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂಬತ್ತು ಹೊಟೇಲ್ ಇದ್ದು, ೦೮ ಅಂಗಡಿಗಳಿವೆ ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ನಾಗಮ್ಮ, ವೀರಚಿಕ್ಕಣ್ಣ, ಏಳುಮಂದಮ್ಮ, ಪಾತಲಪ್ಪ, ಉಡಸಲಮ್ಮ, ಬಸವೇಶ್ವರ, ಬೊಮ್ಮಲಿಂಗೇಶ್ವರ, ಭೂತರಾಯ, ಸಿದ್ದಪ್ಪ, ಓಬಳದೇವ, ಕದರಿನ ಸಿಂಹ, ಅಕ್ಕಮ್ಮ ದೇವಾಲಯಗಳಿವೆ. ಈ ಗ್ರಾಮದಲ್ಲಿ ತಾಡಿ ವೀರನಾಗಮ್ಮನ ಐತಿಹಾಸಿಕ ದೇವಾಲಯವಿದ್ದು ಅಪಾರ ಒಕ್ಕಲನ್ನು ಹೊಂದಿದೆ. ತಾಡಿ ನಾಗಮ್ಮನ ಬೃಹತ್ ಜಾತ್ರೆ ನಡೆಯುತ್ತದೆ. ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

**ತೊಂಡೋಟಿ**

ತೊಂಡೋಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೩ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೭೯೧.೦೩ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ.

ತೊಂಡೋಟಿ ಕರ್ನಾಟಕ–ಆಂಧ್ರದ ಗಡಿ ಪ್ರದೇಶವಾಗಿದ್ದು ಈ ಪ್ರದೇಶಗಳಲ್ಲಿ ಜನಕಲೋಟಿ, ಇಟಕಲೋಟಿ, ಎಲ್ಲೋಟಿ, ಗೌಡೋಟಿ ಎಂಬ ಐದು ಹಟ್ಟಿಗಳ ಜನವಸತಿ ಪ್ರದೇಶವಿದೆ. ಈ ಎಲ್ಲ ಗ್ರಾಮಗಳು ಪಶುಪಾಲನೆ ಗ್ರಾಮಗಳಾಗಿದ್ದು ಈ ಪ್ರದೇಶ ಹುಲ್ಲುಗಾವಲು ಪ್ರದೇಶವೂ ಆಗಿತ್ತು. ಇಲ್ಲಿ ತೊಂಡು ಮೇಯುವ ದನಗಳು (ಕಳ್ಳ ದನಗಳು) ಇರುತ್ತಿದ್ದು ಅಂಥ ಪ್ರದೇಶದಲ್ಲಿ ಜನವಸತಿ ನಿರ್ಮಾವಾಗಿದ್ದರಿಂದ ತುಂಡು ದನಗಳ ಹಟ್ಟಿ > ತುಂಡೋಟಿ ಎಂದು ಕರೆಯಲ್ಪಟ್ಟಿದೆ. ಇದೇ ಮಾದರಿಯ ಐದು ಕಾಡುಗೊಲ್ಲರ ಹಟ್ಟಿಗಳಲ್ಲಿ ತೊಂಡೋಟಿಯೂ ಒಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ. ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು

ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ ಮತ್ತು ಗ್ರಾಮದಲ್ಲಿ ಸೀಮೆಹಸು, ಎಮ್ಮೆ, ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ. ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳಿಗೆ ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಕುರುಬ ಜನಾಂಗ ದೊಡ್ಡ ಸಮುದಾಯವಾಗಿದೆ. ಗೊಲ್ಲ, ಬೋವಿ, ಆದಿಕರ್ನಾಟಕ, ಆದಿದ್ರಾವಿಡ, ಮಡಿವಾಳ, ನಾಯಕ, ಶೆಟ್ರು, ಬ್ರಾಹ್ಮಣ, ರೆಡ್ಡೀಸ್ ಕಿರು ಸಮುದಾಯವಾಗಿದೆ. ಕನ್ನಡ ಹಾಗೂ ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೨೦೦ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ಗಂಡು ೪೨೩, ಹೆಣ್ಣು ೪೧೭ ಒಟ್ಟು ೮೪೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಆಟೋ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಈ ಗ್ರಾಮದಲ್ಲಿ ಉತ್ತಮವಾದ ರಸ್ತೆ ವ್ಯವಸ್ಥೆ ಚರಂಡಿ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೯೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ, ಇಲ್ಲಿನ ರೈತರು ಉಪ ಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಕಾಲೇಜು ಶಿಕ್ಷಣ ಇಲಾಖೆ, ಫುಡ್ ಇನ್ಸ್‌ಪೆಕ್ಟರ್, ಸಾರಿಗೆ ಇಲಾಖೆ, ಪೋಲಿಸ್ ಇಲಾಖೆ, ಶಿಕ್ಷಣ ಇಲಾಖೆಗಳಿಗೆ ಸೇರಿದ ಒಟ್ಟು ೧೦ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಗಂಧದ ಕಡ್ಡಿ ತಯಾರಕರು ಇಬ್ಬರು ಐಸ್ ಕ್ರೀಂ ಮಾಡುವವರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ. ಕಾಲೇಜು ಶಿಕ್ಷಣ ಇಲಾಖೆಯ ನಿವೃತ್ತ ನಿರ್ದೇಶಕ ಟಿ.ಎಚ್. ಈರಣ್ಣ ಚಿಂತಕ, ಲೇಖಕ ನರಸಿಂಹಯ್ಯ ಇದೇ ಗ್ರಾಮದ ನಿವೃತ್ತ ಅಧಿಕಾರಿಗಳು.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಚಿಕ್ಕದಾಳವಟ್ಟ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ಒಟ್ಟು ಇಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಚಿಕ್ಕದಾಳವಟ್ಟ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮವು ಚಿಕ್ಕದಾಳವಟ್ಟ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ೦೩ ಸ್ತ್ರೀಶಕ್ತಿ ಸಂಘಗಳು ಹಾಗೂ ೨ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸ್ವಸಹಾಯ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೧ ಅಂಗನವಾಡಿ ಕೇಂದ್ರವಿದ್ದು ೨೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ೧೬೬ ವಿದ್ಯಾರ್ಥಿಗಳಿದ್ದಾರೆ ಇಲ್ಲಿ ೦೪

ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ, ಸರ್ಕಾರಿ ಪ್ರೌಢಶಾಲೆ ಇದ್ದು ೧೫೮ ವಿದ್ಯಾರ್ಥಿಗಳಿದ್ದಾರೆ. ಇಲ್ಲಿ ೪ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ೧೫೦ ವಿದ್ಯಾರ್ಥಿಗಳು, ೮ ಜನ ಉಪನ್ಯಾಸಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೫೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ೨ ಹೊಟೇಲ್ ಇದ್ದು, ೬ ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಶನಿಮಹಾತ್ಮ, ಸಿದ್ದಪ್ಪನ ಗುಡಿ, ಮಾರಮ್ಮದೇವಿ, ಆಂಜನೇಯ, ಲಕ್ಕಮ್ಮನ ದೇವಾಲಯಗಳಿವೆ. ಮಾರಮ್ಮದೇವಿ ಪ್ರಸಿದ್ಧಿಯನ್ನು ಹೊಂದಿದ್ದು ಪ್ರತಿ ವರ್ಷ ಜಾತ್ರೆ ನೆಡೆಯುತ್ತದೆ ಅಂದು ಊರಿನ ತುಂಬ ದೇವರ ಉತ್ಸವ ನಡೆಯುತ್ತದೆ ಹರಕೆ ಹೋರುವ ಮತ್ತು ಬಲಿ ನೀಡುವ ಆಚರಣೆಗಳು ರೂಢಿಯಲ್ಲಿವೆ ಉಳಿದಂತೆ ಗ್ರಾಮದವರು ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ತುಮ್ಮಲು

ತುಮ್ಮಲು ಎನ್ನುವ ಹಳೆಯ ಗ್ರಾಮವಿದ್ದು ಈಗ ಇದು ಪಾಳುಬಿದ್ದಿದೆ. ಇದಕ್ಕೆ ತೂಬಲಿ ಎಂಬ ಹಳೆಯ ಹೆಸರು ಇತ್ತೆಂದು ಹೇಳುತ್ತಾರೆ. ಇಲ್ಲಿ ಬಸವಣ್ಣನ ದೇವಸ್ಥಾನವಿದೆ. ತುಮ್ಮಲು ತುಂಡೋಟಿಯ ಹೊರವಲಯದಲ್ಲಿದ್ದು ಜನವಸತಿ ಇಲ್ಲದ ಬೇಚಾರಕ್ ಗ್ರಾಮವಾಗಿದೆ. ದೊಡ್ಡದಾಳವಾಟ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ.

## ತಿಪ್ಪಾಪುರ

ತಿಪ್ಪಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೮೬೧.೮೦ ಹೆಕ್ಟೇರ್ಸ್, ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೦೮ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ, ಭಜಂತ್ರಿ, ನಾಯಕ, ಲಂಬಾಣಿ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೩೭೦ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೧೬೬೭ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು–೮೪೭, ಹೆಣ್ಣು–೮೨೦ ಜನಸಂಖ್ಯೆ ಇದೆ, ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಉತ್ತಮ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಒಳಗೊಂಡಿದೆ. ಗ್ರಾಮದಲ್ಲಿ ೧೨೦ ಮನೆಗಳು ಶೌಚಾಲಯ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ, ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ವಿದ್ಯುತ್ ಇಲಾಖೆಗಳಿಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು, ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ. ದೊಡ್ಡಯಲ್ಲೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ಒಟ್ಟು ಇಬ್ಬರು ಸದಸ್ಯರುಗಳಿದ್ದು ಇಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ದೊಡ್ಡಯಲ್ಲೂರು ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ದೊಡ್ಡ ಯಲ್ಲೂರು ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೧ ಅಂಗನವಾಡಿ ಕೇಂದ್ರವಿದ್ದು ೩೮ ಮಕ್ಕಳಿದ್ದಾರೆ ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ೨೧೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ೫ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೩.೩೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂಬತ್ತು ಹೊಟೇಲ್ ಇದ್ದು, ೮ ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಮಾರಮ್ಮದೇವಿ ಆಂಜನೇಯ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ತಿಪ್ಪಾಪುರ ತಾಂಡ

ತಿಪ್ಪಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೩ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೮೬೧.೮೦ ಹೆಕ್ಟೇರ್ ತಿಪ್ಪಾಪುರ ಭೂವಿಸ್ತೀರ್ಣದಲ್ಲಿ ಸೇರಿದ ಮಜರೆ ಗ್ರಾಮವಾಗಿದೆ. ತಿಪ್ಪಣ್ಣ ಎಂಬ ವ್ಯಕ್ತಿ ಮೂಲದ ಹಳ್ಳಿಯಾಗಿದ್ದು ಅದರ ಉಪಗ್ರಾಮ ತಾಂಡವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಲಂಬಾಣಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ ಬೇರೆ ಇಲ್ಲ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ಲಂಬಾಣಿ, ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೫೦ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೧೫೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು–೭೩, ಹೆಣ್ಣು–೭೭ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಈ ಗ್ರಾಮದಲ್ಲಿ ಉತ್ತಮವಾದ ಸಿಮೆಂಟ್ ರಸ್ತೆ, ಚರಂಡಿ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದ ೧೦ ಮನೆಗಳು ಶೌಚಾಲಯ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ, ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ. ದೊಡ್ಡಯಲ್ಲೂಕೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ದೊಡ್ಡಯಲ್ಲೂಕೂರು ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಯಲ್ಲೂಕೂರು ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕಿ ಇದ್ದಾರೆ. ಒಟ್ಟು ೩೫ ಮಕ್ಕಳಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ೩೨ ಮಕ್ಕಳಿದ್ದು ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ಎರಡು ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಸೇವಾಲಾಲ್ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದಬ್ಬೆಘಟ್ಟ

ದಬ್ಬೆಘಟ್ಟ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೫೬.೦೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ದಬ್ಬೆ ಎಂಬ ಸಸ್ಯಮೂಲದಿಂದ ದಬ್ಬೇಘಟ್ಟವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಬಿಳಿ ಮರಳು ಮಿಶ್ರ ಮಣ್ಣನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಆಗಾಗ್ಗೆ ಚಿರತೆಯೂ ಕೂಡ ಗ್ರಾಮದ ಪ್ರಾಣಿಗಳ ಮೇಲೆ ಧಾಳಿ ನಡೆಸಿರುವುದು ಕೇಳಿಬರುತ್ತದೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ವಿಶೇಷವಾಗಿ ನವಿಲುಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿ ಹಸು ಮತ್ತು ಎತ್ತುಗಳನ್ನು ಸಾಕುವವರ ಸಂಖ್ಯೆ ಕಡಿಮೆಯಾಗುತ್ತಿದ್ದು ಕಡಿಮೆ ಸಂಖ್ಯೆ ಹಸು ಮತ್ತು ಎತ್ತುಗಳಿವೆ. ಉಳಿದಂತೆ ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿ ಹಾಗೂ ಕೆಲವರು ಪಾರಿವಾಳಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಯಾವುದೇ ಹೊಳೆ ಹರಿಯುವುದಿಲ್ಲ. ಆದರೂ ಕೂಡ ಒಂದು ಹಳ್ಳ ಮಾತ್ರ ಮಳೆಗಾಲದಲ್ಲಿ ಹರಿದು ಈ ಗ್ರಾಮದ ಕೆರೆಗೆ ನೀರನ್ನು ಒದಗಿಸಿ, ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಆದರೆ ಕೆರೆ ಸಂಪೂರ್ಣವಾಗಿ ತುಂಬಿ, ಕೋಡಿ ಬಿದ್ದು ಬಹಳ ವರ್ಷಗಳೇ ಕಳೆದಿವೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೪ ಕೊಳವೆ ಬಾವಿ, ೨೫ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಆದಿದ್ರಾವಿಡ, ಈಡಿಗರು, ಮಡಿವಾಳರು ಈ ಗ್ರಾಮದಲ್ಲಿದ್ದು ಆದಿದ್ರಾವಿಡರು ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೩೦೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೧೯೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೬೨೦, ಹೆಂಗಸರು ೫೭೮ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೦೪ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಮೂರು ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಗಳಿದ್ದು ಟ್ರ್ಯಾಕ್ಟರ್, ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸೀಮೆಂಟ್ ರಸ್ತೆಯನ್ನು ಹೊಂದಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೫೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಸೂರ್ಯಕಾಂತಿ, ತೆಂಗು, ತರಕಾರಿಗಳನ್ನು ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಶೇಂಗಾ ಮತ್ತು ತೆಂಗು ಬೆಳೆಯುತ್ತಾರೆ. ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ ಹಾಗೂ ಆಧುನಿಕ ಡೈರಿ ವ್ಯವಸ್ಥೆಯಿಂದಾಗಿ ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಇದ್ದರೂ ಬರಗಾಲದ ಕಾರಣವಾಗಿ ಸಾಕಷ್ಟು ಪ್ರಮಾಣದಲ್ಲಿ ನೀರಿಲ್ಲದಿರುವುದರಿಂದ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ.

ಕಂದಾಯ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ವೈದ್ಯಕೀಯ ಇಲಾಖೆಗಳಿಗೆ ಸೇರಿದ ಒಟ್ಟು ಹತ್ತು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಒಬ್ಬರು ಇಂಜಿನಿಯರ್ ಆಗಿ ಐಟಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಸದರಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಟ್ಟು ಮೂರು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು

ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ದಬ್ಬೇಘಟ್ಟ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಹಾಗೂ ಖಾಸಗಿ ಬಸ್ಸು ಹಾಗೂ ಆಟೋ ರಿಕ್ಷಾಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಇದೇ ಗ್ರಾಮದ ಅಂಚೆ ಕಚೇರಿಗೆ ಸೇರಿದೆ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೨೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಆರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಜೊತೆಗೆ ಒಂದು ಸರ್ಕಾರಿ ಸಂಯುಕ್ತ ಪದವಿ ಪೂರ್ವ ಕಾಲೇಜಿನಲ್ಲಿ ಪ್ರೌಢಶಾಲಾ ವಿಭಾಗವಿದ್ದು ೩೨೨ ವಿದ್ಯಾರ್ಥಿಗಲು ಇದ್ದಾರೆ. ಇದರಲ್ಲಿ ಒಟ್ಟು ಹತ್ತು ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು ಎಲ್ಲಾ ಮಕ್ಕಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೩.೧%. ಸರ್ಕಾರಿ ಸಂಯುಕ್ತ ಪದವಿಪೂರ್ವ ಕಾಲೇಜು ಇದ್ದು ಇದರಲ್ಲಿ ೧೨ ಜನ ಉಪನ್ಯಾಸಕರು ಇದ್ದು ೧೪೨ ಮಕ್ಕಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ.

ಗ್ರಾಮ ಪಂಚಾಯ್ತಿ ವತಿಯಿಂದ ನಡೆಯುವ ಗ್ರಂಥಾಲಯವಿದ್ದು ವಿವಿಧ ಪ್ರಕಾರದ ಒಟ್ಟು ೨೦೦೦ ಪುಸ್ತಕಗಳನ್ನು ಹೊಂದಿದ್ದು ಒಬ್ಬರು ಗ್ರಂಥಪಾಲಕರು ಇದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್ ಹಾಗೂ ೫ ಅಂಗಡಿಗಳಿವೆ. ಗ್ರಾಮದಲ್ಲಿ ಸಿದ್ಧರಾಮೇಶ್ವರ, ಶನಿದೇವರು ಹಾಗೂ ಎರಡು ಮೈಲಾರ ಲಿಂಗೇಶ್ವರ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದಾಸರಹಳ್ಳಿ

ದಾಸರಹಳ್ಳಿ ಗ್ರಾಮವು ಕೊಡಿಗೇನಹಳ್ಳಿ ಹೋಬಳಿಗೆ ಸೇರಿದ್ದು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ೨೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೦೫.೦೧ ಹೆಕ್ಟೇರ್ ಕಂದಾಯ ಗ್ರಾಮವಾಗಿದೆ. ಆರಂಭದಲ್ಲಿ ದಾಸಕುಲದ ಒಕ್ಕಲಿಗರು ನೆಲೆಸಿದ್ದರಿಂದ ಗ್ರಾಮಕ್ಕೆ ದಾಸರಹಳ್ಳಿ ಎಂದು ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಕಾಡು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಕಂಡುಬರುತ್ತದೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಸೀಮೆಹಸು, ಎಮ್ಮೆ, ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ. ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಇಲ್ಲಿ ಮಳೆ ವಾರ್ಷಿಕ ಸರಾಸರಿ ೪೫೩.೬ ಮಿಮೀ ಇರುತ್ತದೆ. ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨ ಸಾರ್ವಜನಿಕ ನಲ್ಲಿಗಳಿವೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಕಮ್ಮಾರರು, ಲಿಂಗಾಯಿತರು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದೆ.

ಗ್ರಾಮದಲ್ಲಿ ಒಟ್ಟು ೪೫ ಮನೆಗಳನ್ನು ಹೊಂದಿದ್ದು ಗಂಡು ೧೦೯, ಹೆಣ್ಣು ೯೭ ಸೇರಿ ಒಟ್ಟು ೨೦೬ ಜನಸಂಖ್ಯೆ ಇದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ.

ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್ ವಸತಿ ಹಾಗೂ ಜನತಾ ಯೋಜನೆಯಡಿ ೧೩ ಮನೆಗಳಾಗಿವೆ.

ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಮೂರು ಸಾಂಪ್ರದಾಯಿಕ ಎತ್ತಿನ ಗಾಡಿಗಳಿವೆ. ಸುವರ್ಣ ಗ್ರಾಮ ಯೋಜನೆಯಡಿ ರಸ್ತೆ ಮತ್ತು ಚರಂಡಿ ವ್ಯವಸ್ಥೆ ಇದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಅವರೆ, ಶೇಂಗಾ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಶಿಕ್ಷಕರು ಇಬ್ಬರಿದ್ದಾರೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ, ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರಿದೆ. ಕೊಡಿಗೇನಹಳ್ಳಿ ತಾಲ್ಲೂಕು ಪಂಚಾಯ್ತಿಗೆ ಸೇರಿದೆ. ಕೊಡಿಗೇನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿರುತ್ತದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಚರ ದೂರವಾಣಿಗಳು, ದೂರ ಸಂಪರ್ಕ ಸಾಧನಗಳು ಇಲ್ಲಿವೆ. ಎರಡು ಸ್ತ್ರೀಶಕ್ತಿ ಸಂಘಗಳಿವೆ. ಗ್ರಾಮದ ಸಾಕ್ಷರತೆ ೭೧.೮%.

ಕಾಫಿ ಮತ್ತು ಟೀ ದೊರೆಯುವ ಒಂದು ಹೋಟೆಲ್ ಮತ್ತು ಒಂದು ಅಂಗಡಿ ಇದೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮಾರಮ್ಮ ಗ್ರಾಮದೇವತೆಯಾಗಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದೊಡ್ಡೇನಹಳ್ಳಿ

ದೊಡ್ಡೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೦೧.೯೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಹಿರಿಯವನು ಎಂಬ ಕಾರಣ ಮತ್ತು ಗುರುತಿನಿಂದಾಗಿ ದೊಡ್ಡೇನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಕಂಡುಬರುತ್ತದೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳ ಇದ್ದು ಮಾತ್ರ ಮಳೆಗಾಲದಲ್ಲಿ ಹರಿದು ಈ ಗ್ರಾಮದ ಕೆರೆಗೆ ನೀರನ್ನು ಒದಗಿಸಿ, ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಆದರೆ ಕೆರೆ ಸಂಪೂರ್ಣವಾಗಿ ತುಂಬಿ, ಕೋಡಿ ಬಿದ್ದು ಬಹಳ ವರ್ಷಗಳೇ ಕಳೆದಿವೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿ ಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ, ಆದಿದ್ರಾವಿಡರು ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೦೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೦೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೦೦, ಹೆಂಗಸರು ೧೦೦ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ

ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಐದು ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಗಳಿದ್ದು ಟ್ರ್ಯಕ್ಟರ್, ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ ಹಾಗೂ ಮಿನಿ ಡೈರಿ ವ್ಯವಸ್ಥೆಯಿಂದಾಗಿ ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಕಂದಾಯ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ಮೂರು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತರ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಡಿಗೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಎಲ್ಲಾ ಮಕ್ಕಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೨ ಹೋಟೆಲ್ ಹಾಗೂ ೨ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದ್ಯಾವಗೊಂಡನಹಳ್ಳಿ

ದ್ಯಾವಗೊಂಡನಹಳ್ಳಿ ಗ್ರಾಮವು ಮಧುಗಿರಿಯ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೨೯೮.೨೦ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಭೂಮಿಯನ್ನು ಹೊಂದಿದೆ.

ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಮೊಲ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ.

೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ತೆಲುಗು ಮಾತನಾಡುವವರಿದ್ದಾರೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಒಟ್ಟು ೧೭ ಮನೆಗಳನ್ನು ಹೊಂದಿರುವ ಗ್ರಾಮವು ೬೧ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಒಕ್ಕಲಿಗ, ಕುರುಬ, ಆದಿದ್ರಾವಿಡ, ಆದಿಕರ್ನಾಟಕ ಜನಾಂಗದವರು ಗ್ರಾಮದಲ್ಲಿದ್ದಾರೆ. ವ್ಯವಸಾಯ ಹಾಗೂ ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ. ಮಧುಗಿರಿ

ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಶ್ರಾವಣ ಮಾಸದಲ್ಲಿ ಆರತಿ, ಬಾನ ಸೇವೆ ನಡೆಯುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ದಾಸೇನಹಳ್ಳಿ

ದಾಸೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೬೮.೧೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗುಡ್ಡಗಾಡು ಪ್ರದೇಶವಾಗಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ನರಿ, ತೋಳ, ಚಿರತೆ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ನವಿಲು, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೯೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೪೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೫೧ ಜನ ಮತ್ತು ಹೆಂಗಸರು ೨೯೩ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೪೩ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎರಡು ಸಾಂಪ್ರದಾಯಿಕ ಎತ್ತಿನ ಗಾಡಿಗಳು ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೯ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯವನ್ನು ಕೆಲವೇ ಕೆಲವು ಜನ ಮಾತ್ರ ಮಾಡುತ್ತಿದ್ದು ೮೦% ಜನರು ಕೂಲಿ ಮಾಡುತ್ತಾರೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ನೇರಳೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ನೇರಳೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ನೇರಳೇಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ

ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಹೋಟೆಲ್‌ಗಳು ಹಾಗೂ ೨ ಅಂಗಡಿಗಳಿವೆ.

ಗ್ರಾಮದಲ್ಲಿ ರಂಗನಾಥಸ್ವಾಮಿ, ಯಲ್ಲಮ್ಮ ಹಾಗೂ ಈರಣ್ಣ ದೇವಾಲಯಗಳಿವೆ. ಪ್ರತಿ ವರ್ಷ ಆರತಿಯನ್ನು ಮಾಡುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದಾಸೇನಹಳ್ಳಿ ಜನತಾ ಹೌಸಿಂಗ್ ಕಾಲೋನಿ

ದಾಸೇನಹಳ್ಳಿ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿಯ ಉತ್ತರ ದಿಕ್ಕಿನಲ್ಲಿದ್ದು ದಾಸೇನಹಳ್ಳಿಯ ಹೊರವಲಯದಲ್ಲಿದೆ.

ಒಟ್ಟು ೩೪ ಮನೆಗಳಿದ್ದು ೧೫೨ ಜನಸಂಖ್ಯೆ ಇದೆ. ಬೋವಿ, ನಾಯಕ, ಒಕ್ಕಲಿಗ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ತೆಲುಗು ಮಾತನಾಡುವವರು ಗ್ರಾಮದಲ್ಲಿದ್ದಾರೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ನೇರಳೇಕೆರೆ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಕೂಲಿ ಹಾಗೂ ವ್ಯವಸಾಯ ಮುಖ್ಯ ಕಸುಬಾಗಿದೆ. ಪೊಲೀಸ್ ಹಾಗೂ ಸಾರಿಗೆ ಇಲಾಖೆಯಲ್ಲಿ ಮೂವರು ಸೇವೆ ಸಲ್ಲಿಸುತ್ತಿದ್ದಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ದೊಡ್ಡಗೊಲ್ಲರಹಟ್ಟಿ

ಡಿ.ಗೊಲ್ಲರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೧.೭೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮವು ನೇರಳೇಕೇರೆ ಭೂ ವಿಸ್ತೀರ್ಣಕ್ಕೆ ಸೇರಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದ ಸುತ್ತಲೂ ಗುಡ್ಡೆಗಳಿವೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ನರಿ, ತೋಳ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ, ಮೂರು ಹಳ್ಳ ಹಾಗೂ ಒಂದು ದೊಡ್ಡ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೇರೆ ಯಾವುದೇ ಜನಾಂಗದವರಿಲ್ಲ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೨೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೬೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೪೪ ಮತ್ತು ಹೆಂಗಸರು ೩೧೯ ಜನ ಗ್ರಾಮದಲ್ಲಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೫೧ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು

ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೩ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ೫೦% ಜನ ಮಾಡುತ್ತಿದ್ದು ಕುರಿ ಸಾಕಾಣಿಕೆಯಲ್ಲಿ ತೊಡಗಿದ್ದಾರೆ. ಶೇಂಗಾ, ರಾಗಿ, ಭತ್ತ ಮುಖ್ಯ ಬೆಳೆಗಳಾಗಿವೆ. ಕುರಿ ವ್ಯಾಪಾರ ಗ್ರಾಮದ ಮುಖ್ಯ ಸರಕಾಗಿದೆ. ಶಿಕ್ಷಣ ಇಲಾಖೆಗೆ ಸೇರಿದ ೪ ಜನ ಸರ್ಕಾರಿ ನೌಕರರಾಗಿದ್ದು ಇಬ್ಬರು ಟೈಲರ್‌ಗಳು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ನೇರಳೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ನೇರಳೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ನೇರಳೇಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೯ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೬.೬%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಶ್ರೀಕೃಷ್ಣ, ಚಿತ್ತರಲಿಂಗೇಶ್ವರ, ಜುಂಜಪ್ಪ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದೊಡ್ಡವೀರಗೊಂಡನಹಳ್ಳಿ (ಡಿ.ವಿ.ಹಳ್ಳಿ)

ದೊಡ್ಡವೀರಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೫೬.೩೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ದೊಡ್ಡವೀರ ಎಂಬ ವ್ಯಕ್ತಿ ಗ್ರಾಮದ ಹಿರೀಕನಾಗಿದ್ದು ಗೊಂಡ> ಗೌಡ ರೂಪದಲ್ಲಿ ಈ ಗ್ರಾಮ ರೂಪುಗೊಂಡಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಹಾಗೂ ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಕೋಟೆ ಕಲ್ಲು ರಂಗನಾಥಸ್ವಾಮಿ ಬೆಟ್ಟವಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ಚಿರತೆ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕಾಗೆ, ಕೋಗಿಲೆ, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಈಡಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮುಸ್ಲಿಂ, ನಾಯಕ, ಮಡಿವಾಳ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉಳಿದಂತೆ ಮುಸ್ಲಿಂ ಬಾಂಧವರು ಉರ್ದು ಮಾತನಾಡುವರು.

ಒಟ್ಟು ೧೫೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೮೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೩೫ ಮತ್ತು ಹೆಂಗಸರು ೩೪೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೨೩ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿ, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಬೀಡಿ ಕಾರ್ಮಿಕರೂ ಕೂಡ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಎಣ್ಣೆ ಬೀಜಗಳು ಹಾಗೂ ಹುಣಸೇಹಣ್ಣು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಗ್ರಾಮದಲ್ಲಿ ಶಿಕ್ಷಣ ಇಲಾಖೆ, ಪೊಲೀಸ್, ಕೆಎಸ್‌ಆರ್‌ಟಿಸಿ ಸೇರಿದಂತೆ ೧೦ ಜನ ಸರ್ಕಾರಿ ನೌಕರರಿದ್ದಾರೆ. ಇಬ್ಬರು ವಕೀಲರು ಗ್ರಾಮದಲ್ಲಿದ್ದಾರೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಕಮ್ಮಾರ ಒಬ್ಬರು ಇದ್ದಾರೆ. ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿರುವರು.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನಕವಜ್ರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಡಿ.ವಿ.ಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಡಿ.ವಿ. ಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧೦ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೯ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೪೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಏಳು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೦%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಕಾಫಿ ಮತ್ತು ಟೀ ಹೋಟೆಲ್‌ಗಳು ಹಾಗೂ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಶನಿಮಹಾತ್ಮ, ಮಾರಮ್ಮ ದೇವರು, ಏಳುಮಂದೆಮ್ಮ, ಆಂಜನೇಯ ಸ್ವಾಮಿ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮನಿಗೆ ಆರತಿ ಪೂಜೆ ನೆರವೇರುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ, ರಂಜಾನ್, ಬಕ್ರೀದ್ ಮುಂತಾದ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದೇವರಲಿಂಗಪ್ಪನ ಕಟ್ಟೆ

ದೇವರಲಿಂಗಪ್ಪನಕಟ್ಟೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೯೦.೯೨ ಹೆಕ್ಟೇರ್ ಹೊಂದಿದ್ದು ಕೆ.ಸಿ. ರೊಪ್ಪ ಭೂ ವಿಸ್ತೀರ್ಣದಲ್ಲಿ ಸೇರಿರುವ ಕಂದಾಯ ಗ್ರಾಮವಾಗಿದೆ.

ಬೆಟ್ಟದ ಮೇಲಿರುವ ಗಿಡ ಮರಗಳಿಂದ ಕೂಡಿದ ಗ್ರಾಮವಾಗಿದ್ದು ಮಜರೆ ಗ್ರಾಮವಾಗಿದೆ. ಕಪ್ಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಅರಣ್ಯ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಚಿರತೆ ಹಾಗೂ ಕರಡಿಗಳ ಹಾವಳಿ ಅತಿಯಾಗಿದೆ. ಉಳಿದಂತೆ ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗರುಡ, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕುಂಟೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು, ೧ ಮಿನಿ ಟ್ಯಾಂಕ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಶೆಟ್ಟಿ ಬಣಜಿಗ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಹೆಂಚಿನ ಮನೆ, ಇಟ್ಟಿಗೆ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೩ ಜನ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ.

ವ್ಯವಸಾಯ ಹಾಗೂ ಕೂಲಿ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಅಡಿಕೆ ಮತ್ತು ತೆಂಗು ವಾಣಿಜ್ಯ ಬೆಳೆಗಳಾಗಿವೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡವೀರಗೊಂಡನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ದೊಡ್ಡವೀರಗೊಂಡನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದ ಒಟ್ಟು ಸಾಕ್ಷರತೆ ೬೪.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಡಿ.ವಿ. ಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಮುತ್ತುರಾಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದೊಡ್ಡಹಟ್ಟಿ

ದೊಡ್ಡಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೯೪.೧೧

ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮದ ಭೂ ವಿಸ್ತೀರ್ಣವು ಆರ್.ಗೊಲ್ಲಹಳ್ಳಿ ವಿಸ್ತೀರ್ಣದಲ್ಲಿ ಸೇರಿದೆ.

ಕಾಡುಗೊಲ್ಲರು ಮತ್ತು ಒಕ್ಕಲಿಗರು ವಾಸಿಸುತ್ತಾ ದೊಡ್ಡ ಗ್ರಾಮವಾದುದರಿಂದ ದೊಡ್ಡಹಟ್ಟಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳವಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೪ ಸಾರ್ವಜನಿಕ ನಲ್ಲಿಗಳು, ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗೊಲ್ಲ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೪೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೬೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೯ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ರೆಡ್ಡಿಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ,

ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೯.೭%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಲಕ್ಷ್ಮೀನರಸಿಂಹಸ್ವಾಮಿ, ಮೂಡಲಗಿರಿಯಪ್ಪ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದೊಡ್ಡಮಾಲೂರು

ದೊಡ್ಡಮಾಲೂರು ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೬೦.೧೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.  ಉಪ್ಪಾರ ಜನಾಂಗ ಉಪ್ಪು ತಯಾರಿಕೆಯ ಮಾಳೆಯಿಂದ ಉಪ್ಪಾರಮಾಳೆ ನಂತರ ಮಾಳೂರು > ಮಾಲೂರು ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಕೆಂಪು ಜೇಡಿಮಣ್ಣು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಪಕ್ಕ ಅರಣ್ಯ ಪ್ರದೇಶ ಇದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೌಜುಗ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಗ್ರಾಮದಲ್ಲಿ ಒಂದು ಕೋಳಿ ಫಾರಂ ಇದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ೨ ಟ್ಯಾಂಕ್‌ಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ವೀರಶೈವ, ಒಕ್ಕಲಿಗ, ರೆಡ್ಡಿ, ಮಡಿವಾಳ, ಕುರುಬ, ಬಲಜಿಗ, ವಿಶ್ವಕರ್ಮ, ಸಾದರು, ಶೆಟ್ಟರು, ವೈಷ್ಣವರು, ಆದಿದ್ರಾವಿಡ, ಮುಸ್ಲಿಂ, ಬ್ರಾಹ್ಮಣ, ಭಜಂತ್ರಿ, ಉಪ್ಪಾರ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಸ್ವಲ್ಪ ಜನ ತೆಲುಗು, ಉರ್ದು ಮಾತನಾಡುವವರು ಇದ್ದಾರೆ.

ಒಟ್ಟು ೬೪೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೭೦೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ.  ಗಂಡಸರು ೧೩೭೪ ಮತ್ತು ಹೆಂಗಸರು ೧೩೩೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ.  ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೦೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್, ಕಾರು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಮತ್ತು ರೇಷ್ಮೆ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ಅವರೆ, ಶೇಂಗಾ, ತೆಂಗು ಮತ್ತು ಅಡಿಕೆ ಬೆಳೆಯುತ್ತಾರೆ. ಗ್ರಾಮದಲ್ಲಿ ಕಾಕಡ, ಚೆಂಡು ಹೂ, ಕನಕಾಂಬರ ಬೆಳೆಯುವರು.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ೩ ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ.

ಆಕಾಶವಾಣಿ, ವಾರ್ತಾ-ಪ್ರಸಾರ ಇಲಾಖೆ, ಆರ್‌ಪಿಎಫ್, ರೈಲ್ವೇ, ಸೈನಿಕ, ಪಶುವೈದ್ಯರು, ಕಂದಾಯ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ೧೦ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ೫ ಜನ ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡಮಾಲೂರು ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ದೊಡ್ಡಮಾಲೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ನಾಲ್ಕು ಜನ ಸದಸ್ಯರು, ಇಬ್ಬರು ಪಂಚಾಯ್ತಿ ನೌಕರರಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ದೊಡ್ಡಮಾಲೂರು ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಒಂದು ಪ್ರಾಥಮಿಕ ಆರೋಗ್ಯ ಕೇಂದ್ರವಿದೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ೧೫೬ ಮಕ್ಕಳಿದ್ದಾರೆ. ಇಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೩೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೮ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೬೯%. ದಲಿತ ಸಂಘರ್ಷ ಸಮಿತಿ ಜಾಗೃತವಾಗಿದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ-ಟೀ ದೊರೆಯುವ ೪ ಹೋಟೆಲ್‌ಗಳು ಹಾಗೂ ೬ ಅಂಗಡಿಗಳಿವೆ. ಈ ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ವಾಲ್ಮೀಕಿ ಸಂಘವಿದೆ. ನ್ಯಾಯಬೆಲೆ ಅಂಗಡಿಯಿದೆ.

ಕ್ರಿ.ಶ.೧೫೧೦ ರ ಕೃಷ್ಣದೇವರಾಯನ ಕಾಲದ ಬಂಡೆಗಲ್ಲು ಶಾಸನ ಈ ಗ್ರಾಮದ ಉತ್ತರದಿಕ್ಕಿಗಿದೆ. ಒಂದು ಗ್ರಂಥಾಲಯವಿದೆ. ೬೦೦ ಪುಸ್ತಕಗಳು, ಒಬ್ಬರು ಗ್ರಂಥಪಾಲಕರಿದ್ದಾರೆ.

ಗ್ರಾಮದಲ್ಲಿ ವೆಂಕಟರಮಣಸ್ವಾಮಿ, ರಾಮದೇವರು, ಆಂಜನೇಯ, ಭೂತಪ್ಪ, ಬಾಬಯ್ಯನಗುಡಿ, ವೀರಭದ್ರಯ್ಯ, ಕರಿಯಮ್ಮ, ಮಾರಮ್ಮ, ದುಬ್ಲಮ್ಮ, ಸಪ್ಲಮ್ಮ, ಲಕ್ಕಮ್ಮ, ಮಹೇಶ್ವರಮ್ಮ, ಚೌಡಮ್ಮ, ಕೊಲ್ಲಾಪುರದಮ್ಮ, ಹಟ್ಟಿಮಾರಮ್ಮ, ಸತ್ಯಮ್ಮ ದೇವಾಲಯಗಳಿವೆ. ನಾಗರಕಟ್ಟೆಗಳಿವೆ. ಇವುಗಳಲ್ಲಿ ಮಾರಮ್ಮ ದೇವಿ ಪ್ರಸಿದ್ಧವಾಗಿದ್ದು ಪ್ರತಿವರ್ಷ ಜಾತ್ರೆ ನಡೆಯುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಆಂಜನೇಯನ ಜಾತ್ರೆ ನಡೆಯುತ್ತದೆ. ಹೂವಿನ ತೇರು ನಡೆಯುತ್ತದೆ. ದುರ್ಗಮ್ಮ, ಸಪ್ಲಮ್ಮ ಜಾತ್ರೆಯು ನಡೆಯುತ್ತದೆ.

## ದೊಡ್ಡಮಾಲೂರು ಲಂಬಾಣಿ ತಾಂಡ

ದೊಡ್ಡಮಾಲೂರು ಲಂಬಾಣಿ ತಾಂಡವು ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ದೊಡ್ಡಮಾಲೂರು ಗ್ರಾಮದ ಹೊರವಲಯದಲ್ಲಿದೆ. ಒಟ್ಟು ೪೨ ಮನೆಗಳನ್ನು ಹೊಂದಿದ್ದು ೧೫೮ ಜನಸಂಖ್ಯೆಯನ್ನು ಹೊಂದಿದೆ. ಲಂಬಾಣಿ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ, ಲಂಬಾಣಿ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ದೊಡ್ಡಮಾಲೂರು ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹೂ ಕಟ್ಟುವುದು, ಕೂಲಿ ಮಾಡುವುದು ಇವರ ಉದ್ಯೋಗವಾಗಿದೆ. ಸಾರಿಗೆ ಹಾಗೂ ಆರೋಗ್ಯ ಇಲಾಖೆಯಲ್ಲಿ ನಾಲ್ವರು ಸೇವೆ ಸಲ್ಲಿಸುತ್ತಿದ್ದಾರೆ. ದುರ್ಗಮ್ಮ, ಸಪ್ಲಮ್ಮನ ಜಾತ್ರೆ ಹಾಗೂ ಆಂಜನೇಯ ದೇವರ ಹೂವಿನ ತೇರು ಹಾಗೂ ಜಾತ್ರೆಯನ್ನು ಅದ್ದೂರಿಯಾಗಿ ಆಚರಿಸುತ್ತಾರೆ. ಜನಪದ ಕಲೆಗಳಾದ

ಅಸಾದಿ ಕುಣಿತ, ತಮಟೆ, ಕೋಲುಮೇಳ ಏರ್ಪಾಡಾಗುತ್ತದೆ. ಆರತಿ, ಬಾನ, ಬಲಿ ಸಂಪ್ರದಾಯವಿದ್ದು ಬಾಯಿಬೀಗದ ಆಚರಣೆಯೂ ಇದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ, ಹೋಳಿ ಹಬ್ಬಗಳನ್ನು ಆಚರಿಸುತ್ತಾರೆ.

**ದಂಡಿಪುರ**

ದಂಡಿಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೨೫.೪೯ ಹೆಕ್ಟೇರ್ ಹೊಂದಿದ್ದು ಕೊಡಿಗೇನಹಳ್ಳಿ ಭೂವಿಸ್ತೀರ್ಣದಲ್ಲಿ ಸೇರಿ ಮಜರೆ ಗ್ರಾಮವಾಗಿದೆ. ದೇವರ ಮೂಲದಿಂದ ದಂಡಿಪುರ ಎಂದು ಹೆಸರು ಬಂದಿದೆ.

ಮಧುಗಿರಿ ಪಾಳೆಯಗಾರರು ದಂಡುಬಿಡುತ್ತಿದ್ದ ಸ್ಥಳವಾದುದರಿಂದ ದಂಡೀಪುರ ಎಂದು ಕರೆಯಲಾಗಿದೆ. ವಾರ್ಷಿಕವಾಗಿ ಬೇಟೆ ಪರಿಷೆ ಏರ್ಪಡುತ್ತದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೨ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ನಾಯಕರು, ಆದಿಕರ್ನಾಟಕ, ಅಗಸರು , ಆದಿದ್ರಾವಿಡ, ಭಜಂತ್ರಿ, ಬೋವಿ, ಬ್ರಾಹ್ಮಣ, ಲಿಂಗಾಯಿತ, ಮುಸ್ಲಿಂ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಹಾಗೂ ಉರ್ದು ಮಾತನಾಡುವವರಿದ್ದಾರೆ.

ಒಟ್ಟು ೧೨೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೫೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೫೦ ಮತ್ತು ಹೆಂಗಸರು ೨೦೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಹೆಂಚಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೬ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೫ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ಅವರೆ ಬೆಳೆಯುತ್ತಾರೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕೊಡಿಗೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ನೌಕರರಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೊಡಿಗೇನಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದೆ. ೧೬ ಮಕ್ಕಳು ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ೨೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೬೬%. ನಿಸರ್ಗ ಪ್ರಾಥಮಿಕ ಪ್ರೌಢಶಾಲೆಯಲ್ಲಿ ೧೦೪ ವಿದ್ಯಾರ್ಥಿಗಳು ಹಾಗೂ ೮ ಜನ ಶಿಕ್ಷಕರಿದ್ದಾರೆ ಹಾಗೂ ಐಟಿಐ ಕಾಲೇಜು ಇದ್ದು ೫೩ ವಿದ್ಯಾರ್ಥಿಗಳು, ೫ ಜನ ಶಿಕ್ಷಕರಿದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಟೀ-ಕಾಫಿ ದೊರೆಯುವ ೨ ಹೋಟೆಲ್‌ಗಳು ಹಾಗೂ ೧ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮವು ಎಲ್ಲಾ ರೀತಿಯ ಜನಪದ ಕ್ಷೇತ್ರಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ.

ಗ್ರಾಮದಲ್ಲಿ ದಂಡಿಮಾರಮ್ಮ ಮತ್ತು ಆಂಜನೇಯ, ಸಪ್ಲಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ದಂಡಿ ಮಾರಮ್ಮ, ಸಪ್ಲಮ್ಮ ಆರತಿಯನ್ನು ಬಲಿ ಹಾಗೂ ಹರಕೆಯೊಂದಿಗೆ ಆಚರಿಸುತ್ತಾರೆ.

## ದೇವರತೋಪು

ದೇವರತೋಪು ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೨೫.೪೯ ಹೆಕ್ಟೇರ್ ಹೊಂದಿದ್ದು ಕೊಡಿಗೇನಹಳ್ಳಿ ಭೂ ವಿಸ್ತೀರ್ಣಕ್ಕೆ ಸೇರಿರುವ ಮಜರೆ ಗ್ರಾಮವಾಗಿದೆ.

ಲಕ್ಷ್ಮೀನರಸಿಂಹಸ್ವಾಮಿ ದೇವರ ವನ > ತೋಪು ಇರುವುದರಿಂದ ದೇವರ ತೋಪು ಎಂದಾಗಿದ್ದು ಇಲ್ಲಿ ಪ್ರತಿವರ್ಷ ಜಾತ್ರೆ ನಡೆಯುತ್ತದೆ. ಕೊಡಿಗೇನಹಳ್ಳಿ ಜೋಡಿ ದೇವಾಲಯವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಮಾವಿನ ಮತ್ತು ಹುಣಸೆ ಮರಗಳ ಗುಂಪು ಅಥವಾ ತೋಪನ್ನು ಹೊಂದಿದ್ದು ಪ್ರಾಣಿಗಳಾದ ಕಾಡುಮೊಲ, ತೋಳ, ನರಿ, ಸೀಳುನಾಯಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ನವಿಲು, ಗಿಳಿ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೧ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಯಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ, ನಾಯಕ, ರೆಡ್ಡಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಸಾದರು, ಬೋವಿ, ತಿಗುಳ ಸಮುದಾಯದವರಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಭಾಷೆ ಬಳಕೆಯಲ್ಲಿದೆ.

ಒಟ್ಟು ೩೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೫೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೬ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೫ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ

ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯುತ್ತಾರೆ. ಅಷ್ಟೇ ಅಲ್ಲದೆ ಕಾಕಡ, ಸೇವಂತಿಗೆ, ಕನಕಾಂಬರ ಇತ್ಯಾದಿ ಹೂಗಳನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಶಿಕ್ಷಕರು, ಪೊಲೀಸರು ಸೇರಿದಂತೆ ಮೂರು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕೊಡಿಗೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿರುತ್ತದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರ, ೧೮ ಮಕ್ಕಳು ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಮೂವರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೨.೫೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೧ ಹೋಟೆಲ್‌ಗಳು ಹಾಗೂ ೧ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಪುರವರ ಲಕ್ಷ್ಮೀನರಸಿಂಹಸ್ವಾಮಿ ಮತ್ತು ಆಂಜನೇಯ ದೇವಾಲಯಗಳಿವೆ. ಬಸವಣ್ಣನ ಪುರಾತನ ಶಿಲೆಗಳಿವೆ. ನಾಗರಕಟ್ಟೆಗಳಿವೆ. ಗ್ರಾಮದಲ್ಲಿ ಎಲ್ಲಾ ಹಿಂದೂ ಹಬ್ಬಗಳನ್ನು ವಿಶೇಷವಾಗಿ ಯುಗಾದಿ, ಸಂಕ್ರಾಂತಿ, ದಸರಾ ತುಂಬಾ ವೈಭವದಿಂದ ಆಚರಿಸುತ್ತಾರೆ. ಕಲ್ಲಿನಲ್ಲಿ ಮಾಡಿದ ಎತ್ತಿನ ಗಾಡಿಯಿದೆ.

## ದೊಡ್ಡಹೊಸಹಳ್ಳಿ

ದೊಡ್ಡಹೊಸಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೩೩.೬೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ೪ ಬೆಟ್ಟಗಳಿವೆ. ಹೊಟ್ಟೆ ಬೆಟ್ಟ, ಬ್ಯಾಲ್ಯದ ತಿಪ್ಪೆ, ಶೆಟ್ಟಿಹಳ್ಳಿ ಬೆಟ್ಟ, ಕರಡಿ ಬೆಟ್ಟಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ  ಬೇವು, ಹುಣಸೆ, ನೇರಳೆ, ತಾರೆ, ಜಾಲಾರಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಕೋಗಿಲೆ, ಗಿಳಿ, ಪಾರಿವಾಳ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೬೦ ಎಮ್ಮೆ, ೭೫ ಕುರಿ, ೨೧ ಮೇಕೆಗಳನ್ನು ಸಾಕಿದ್ದಾರೆ. ೬೪ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು

ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಸಾದು ನೇಕಾರ, ಮಡಿವಾಳ, ಭಜಂತ್ರಿ, ಆದಿದ್ರಾವಿಡ, ಆದಿಕರ್ನಾಟಕ, ಮುಸ್ಲಿಂ, ಬ್ರಾಹ್ಮಣ, ಕುರುಬ, ವಿಶ್ವಕರ್ಮ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೩೯೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೫೮೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೭೮೧ ಮತ್ತು ಹೆಂಗಸರು ೮೦೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೧೨ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ, ಮುಸುಕಿನಜೋಳ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಬಾಳೆ, ದಾಳಿಂಬೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಸಿವಿಲ್, ಆರ್‌ಟಿಓ, ಬ್ಯಾಂಕ್, ಮುನ್ಸಿಪಲ್ ಆಫೀಸ್, ಜಿಲ್ಲಾಧಿಕಾರಿ, ಕೆಎಸ್‌ಆರ್‌ಟಿಸಿ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೧೪ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಪುರವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಪುರವರದಲ್ಲಿ ಪಂಚಾಯಿತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಪುರವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಪುರವರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ೭೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೫೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೫ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೨.೯೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೩ ಹೋಟೆಲ್‌ಯಿದ್ದು ೪ ಅಂಗಡಿಗಳಿವೆ.

ಪೂಜಾರ್ ನರಸಪ್ಪ ಮಣೇಸೇವೆ ಕುಣಿತದಲ್ಲಿ ಹೆಸರುವಾಸಿಯಾಗಿದ್ದಾರೆ. ೬೦ ವರ್ಷದ ಬ್ರಾಹ್ಮಣ ಜನಾಂಗದ ವೇಣುಗೋಪಾಲ್ ತಮಟೆ, ನಾಗಸ್ವರ ಹಾಗೂ ನಾಟಕದ ಶಿಕ್ಷಕರಾಗಿದ್ದಾರೆ.

ಗ್ರಾಮದಲ್ಲಿ ನಾಲ್ಕು ನರಸಿಂಹಸ್ವಾಮಿ ದೇವಾಲಯಗಳು, ಮಾರಮ್ಮ, ಆಂಜನೇಯಸ್ವಾಮಿ, ರಾಮದೇವರು, ದಂಡಿಮಾರಮ್ಮ ಮುಂತಾದ ಪ್ರಸಿದ್ಧ ದೇವಾಲಯಗಳಿವೆ. ಅಶ್ವತ್ಥಕಟ್ಟೆಗಳಿವೆ. ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದೊಡ್ಡಗಾಳಿಹಳ್ಳಿ

ದೊಡ್ಡಗಾಳಿಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೨.೮೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗಾಳಿಹಳ್ಳಿ ವಾಯುಮೂಲದಿಂದ ಬಂದಿದ್ದು ಆಂಜನೇಯನಿಗೆ ಪರ್ಯಾಯವಾಗಿ ಬಳಸಿದ್ದಾರೆ. ಎರಡು ಗಾಳಿಹಳ್ಳಿಗಳಿದ್ದು ಅವುಗಳಿಗೆ ದೊಡ್ಡ ಗಾಳಿಹಳ್ಳಿ, ಚಿಕ್ಕಗಾಳಿಹಳ್ಳಿ ಎಂದು ಕರೆದಿದ್ದಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಮಾವು, ನೇರಳೆ, ಹಲಸು ಮತ್ತು ನೀಲಗಿರಿ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಕಾಗೆ, ಗೂಬೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಪ್ಪಾರ, ಕುಂಬಾರ, ಕುರುಬರು, ಮುಸ್ಲಿಂ, ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೩೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೩೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೧೮ ಮತ್ತು ಹೆಂಗಸರು ೩೨೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೯ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ಶೇಂಗಾ, ತೊಗರಿ, ಮುಸುಕಿನ ಜೋಳ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ವೈದ್ಯಕೀಯ, ವಕೀಲ, ವಿದ್ಯುತ್ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೮ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಕುರಿ ಸಾಕಾಣಿಕೆ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ೧ ಟೈಲರ್ ಇದ್ದಾರೆ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ೩೨ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೮೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಕಾಫಿ ಮತ್ತು ಟೀ ದೊರೆಯುವ ೨ ಹೋಟೆಲ್ ಇದ್ದು ೩ ಅಂಗಡಿಗಳಿವೆ. ೧ ಕರಿಗಲ್ಲು ಇದೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ, ಕೆರೆತಿಮ್ಮಪ್ಪ ದೇವಿಯ ದೇವಾಲಯಗಳು ಕಂಡುಬರುತ್ತದೆ. ಆಷಾಢದಲ್ಲಿ ಮಾರಮ್ಮನ ಜಾತ್ರೆ ನಡೆಯುತ್ತದೆ. ಒಕ್ಕಲಿಗ ಸಮುದಾಯದ ಗಾಯಕರು ಹನುಮೇಗೌಡರು ಗ್ರಾಮದಲ್ಲಿದ್ದಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದೊಡ್ಡೇರಿ

ದೊಡ್ಡೇರಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೫೩.೭೭ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ದೊಡ್ಡದಾದ ಕೆರೆಯು ಇದ್ದ ಕಾರಣದಿಂದಾಗಿ ದೊಡ್ಡೇರಿ ಎಂದಾಗಿದೆ. ಹೋಬಳಿ ಕೇಂದ್ರವೂ ಆಗಿದೆ.

ದೊಡ್ಡೇರಿ ಎಂದು ಈ ಗ್ರಾಮಕ್ಕೆ ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಒಂದಾನೊಂದು ಕಾಲದಲ್ಲಿ ಉತ್ತರ ದಿಕ್ಕಿನಲ್ಲಿರುವ ರತ್ನಗಿರಿಯಿಂದ ವ್ಯಾಪಾರಿಗಳು ವ್ಯಾಪಾರಕ್ಕೆ ದಕ್ಷಿಣ ದಿಕ್ಕಿನ ಕಡೆಗೆ ಬಂದರು. ಆದಿ ಮಾರ್ಗದಲ್ಲಿ ಕೋಡಿಲಿಂಗೇಶ್ವರ ದೇವಸ್ಥಾನದಲ್ಲಿ ತಂಗಿದ್ದರು. ಅವರು ವ್ಯಾಪಾರದ ಜೋಳಿಗೆಯನ್ನು ಒಂದು ಮರಕ್ಕೆ ತೂಗಿ ಹಾಕಿದ್ದರು. ನಂತರ ಅವರು ರಾತ್ರಿ ಊಟಕ್ಕಾಗಿ ಅಡುಗೆ ಮಾಡಲು ಪ್ರಯತ್ನಿಸಿದರು. ಎಷ್ಟು ಪ್ರಯತ್ನಿಸಿದರೂ ಒಲೆ ಉರಿಯಲಿಲ್ಲ. ನಂತರ ಅವರು ಹಾಗೆಯೇ ಮಲಗಿದರು. ಬೆಳಿಗ್ಗೆ ತೂಗಿ ಹಾಕಿದ್ದ ಜೋಳಿಗೆಯನ್ನು ತೆಗೆದುಕೊಂಡು ನೋಡಿದಾಗ ಅದರಲ್ಲಿ ಲಿಂಗರೂಪದ ದೊಡ್ಡಕಲ್ಲು ಲಭಿಸಿತು. ಆ ಕಲ್ಲಿಗೆ ಕೋಡಿಲಿಂಗೇಶ್ವರ ಸ್ವಾಮಿ ಎಂದೇ ನಾಮಕರಣ ಮಾಡಿದರು. ಹಾಗೇ ದಾರಿಮಾರ್ಗವಾಗಿ ಮುಂದೆ ಬಂದಾಗ ಒಂದು ದೊಡ್ಡದಾದ ಏರಿ ಕಂಡಿತು. ಆಗ ಈ ಊರಿಗೆ ದೊಡ್ಡೇರಿ ಎಂದೇ ನಾಮಕರಣ ಮಾಡಿದರು. ಇಲ್ಲಿ ಬೃಹತ್ ಕೋಟೆಯ ಬಾಗಿಲು, ಕಂದಕದ ಅವಶೇಷಗಳಿವೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಹಾಗೂ ಕರಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಹಾಗೂ ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಸಣ್ಣ ಸಣ್ಣ ಗುಡ್ಡಗಳಿವೆ. ಗ್ರಾಮದ ಉತ್ತರಕ್ಕೆ ಒಂದು ಚಿಕ್ಕ ಗುಟ್ಟೆ ಇದೆ.

ಗ್ರಾಮವು ಯಾವುದೇ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಚಿರತೆ, ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಬೆಳ್ಳಕ್ಕಿ, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ, ಮೇಕೆಗಳು ಮತ್ತು ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಕೋಡಿಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೪ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ, ತಿಗಳ, ನಾಯಕ, ಗೊಲ್ಲ, ಆದಿ ಕರ್ನಾಟಕ, ಬ್ರಾಹ್ಮಣ, ವೈಷ್ಣವ ಜನಾಂಗದವರಿದ್ದು ಮುಸ್ಲಿಂ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಮುಸ್ಲಿಮರು ಉರ್ದು ಭಾಷೆಯನ್ನು ಬಳಸುತ್ತಾರೆ.

ಒಟ್ಟು ೭೨೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೯೭೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೫೨೨ ಮತ್ತು ಹೆಂಗಸರು ೧೪೫೧ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಮಣ್ಣಿನ ಮನೆ, ಇಟ್ಟಿಗೆ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ ಮತ್ತು ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅಲಸಂದೆ, ಉದ್ದು ಬೆಳೆಯುತ್ತಾರೆ. ವಾಣಿಜ್ಯ ಬೆಳೆಗಳಾದ ಶೇಂಗಾ, ತೆಂಗು ಹಾಗೂ ಅಡಿಕೆಯನ್ನು ಬೆಳೆಯುವರು. ಹೂವು, ತೆಂಗು, ಅಡಿಕೆ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಗ್ರಾಮದಲ್ಲಿದೆ. ಗ್ರಾಮದಲ್ಲಿ ಪೊಲೀಸ್, ಕೆಇಬಿ, ಶಿಕ್ಷಕ, ವೈದ್ಯ, ವಕೀಲ ಸೇರಿದಂತೆ ೬೦ ಜನ ನೌಕರಿಯಲ್ಲಿದ್ದು ಸಾಂಪ್ರದಾಯಿಕ ಉದ್ಯೋಗ ಮಾಡುವ ೫ ಜನ ಬಡಗಿಗಳು, ೧೦ ಜನ ಗುಡಿಕಾರರು ಇದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡೇರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಎಂಟು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಹನ್ನೊಂದು ಜನ ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ದೊಡ್ಡೇರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮದಲ್ಲಿ ಅಂಚೆ ಕಛೇರಿಯಿದೆ. ೨ ಸ್ಥಿರ ಹಾಗೂ ೫೦೦ ಕ್ಕೂ ಹೆಚ್ಚು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ೨೫ ಸ್ತ್ರೀಶಕ್ತಿ ಸಂಘಗಳು, ೬ ಸ್ವಸಹಾಯ ಸಂಘಗಳು ಹಾಗೂ ೪ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ರೈತ ಸೇವಾ ಸಂಘ, ವಿ.ಎಸ್.ಎಸ್. ಕೇಂದ್ರವಿದೆ ಹಾಗೂ ಒಂದು ಚಿಕ್ಕ ಸಂತೆ ನಡೆಯುತ್ತದೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ಅಂಗನವಾಡಿ-೧ ರಲ್ಲಿ ೮೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗನವಾಡಿ-೨ ರಲ್ಲಿ ೫೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೮೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಎಂಟು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೩.೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮಪಂಚಾಯ್ತಿ ವತಿಯಿಂದ ನಡೆಸುವ ಒಂದು ಗ್ರಂಥಾಲಯವಿದ್ದು ಇಲ್ಲಿ ವಿವಿಧ ಪ್ರಕಾರದ ೨೦೦೦ ಪುಸ್ತಕಗಳಿವೆ. ಅದರ ನಿರ್ವಹಣೆಗೆ ಒಬ್ಬರು ಗ್ರಂಥಪಾಲಕರನ್ನು ನೇಮಿಸಲಾಗಿದೆ. ಒಂದು ಕುಟುಂಬ ಕಲ್ಯಾಣ ಆರೋಗ್ಯ ಆಸ್ಪತ್ರೆ ಇದೆ. ಇಲ್ಲಿ ಒಬ್ಬರು ವೈದ್ಯರಿದ್ದಾರೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದ ಮಾಲಿಂಗೇಶ್ವರ ಎಂಬುವವರು ೨೫ ಜನರ ಡೋಲು ಸೆಟ್ ಬಾರಿಸುವ ಒಂದು ತಂಡವನ್ನು ಕಟ್ಟಿದ್ದಾರೆ. ಕದರಪ್ಪ ಎಂಬ ೬೦ ವರ್ಷ ವ್ಯಕ್ತಿಯೊಬ್ಬರು ಭಾಗವತರಾಗಿದ್ದಾರೆ. ಗ್ರಾಮದಲ್ಲಿ ೧೦-೨೦ ನಾಟಕವಾಡುವ ಕಲಾವಿದರಿದ್ದಾರೆ.

ಗ್ರಾಮದಲ್ಲಿ ಕೋಡಿಲಿಂಗೇಶ್ವರ ಸ್ವಾಮಿ, ಆಂಜನೇಯ, ಮಾರಮ್ಮ, ಮಾಂತಗಿ, ಚಿಕ್ಕಮ್ಮ ದೇವಾಲಯಗಳು ಕಂಡುಬರುತ್ತದೆ. ಗ್ರಾಮದಲ್ಲಿ ಒಂದು ಪ್ರಾಚೀನ ಬಾವಿಯು ಇದೆ. ಪ್ರತಿ ವರ್ಷವೂ ವೈಭವಪೂರ್ವಕವಾಗಿ ಶ್ರೀ ಕೋಡಿಲಿಂಗೇಶ್ವರಸ್ವಾಮಿ ತೇರು ಹಾಗೂ ಜಾತ್ರೆಯನ್ನು ಆಚರಿಸುತ್ತಾರೆ. ಮಾರಮ್ಮ ದೇವಿಯ ಆರತಿಯನ್ನು ಬಲಿ ಹಾಗೂ ಹರಕೆ ಕೊಡುವುದರೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮುಸ್ಲಿಂ ಬಾಂಧವರು ರಂಜಾನ್, ಬಕ್ರಿದ್ ಹಬ್ಬಗಳನ್ನು ಆಚರಿಸುತ್ತಾರೆ.

## ದೊಡ್ಡೇರಿ ಗೊಲ್ಲರಹಟ್ಟಿ

ದೊಡ್ಡೇರಿ ಗೊಲ್ಲರಹಟ್ಟಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ದೊಡ್ಡೇರಿಯ ಹೊರವಲಯದಲ್ಲಿದೆ. ದೊಡ್ಡೇರಿ ಮುಖ್ಯ ಗ್ರಾಮಕ್ಕೆ ಸೇರಿರುವುದರಿಂದ ದೊಡ್ಡೇರಿ ಗೊಲ್ಲರಹಟ್ಟಿ ಎಂದು ಕರೆಯಲಾಗುವುದು.

ಒಟ್ಟು ೨೦ ಮನೆಗಳಿದ್ದು ೮೮ ಜನಸಂಖ್ಯೆ ಹೊಂದಿದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಕೂಲಿ ಮಾಡುವವರು ಹಾಗೂ ಕುರಿ ಸಾಕಾಣಿಕೆ ಮುಖ್ಯ ಕಸುಬಾಗಿದೆ. ದೊಡ್ಡೇರಿ ಗ್ರಾಮ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಗ್ರಾಮದಲ್ಲಿ ಚಿತ್ರದೇವರ ಪೌಳಿಯಿದ್ದು ದೀಪಾವಳಿಯಲ್ಲಿ ಏಳು ದಿನಗಳ ಕಾಲ ಹಿರಿಯರ ಹಬ್ಬ, ದೀಪದ ಹಬ್ಬ ಎಂದು ವಿಶೇಷವಾಗಿ ಆಚರಿಸುತ್ತಾರೆ. ಹಿರಿಯರಿಗೆ ಹಾಲು-ತುಪ್ಪ ಹಾಕುವುದು ಇದೇ ಹಬ್ಬದ ವಿಶೇಷವಾಗಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ದಂಡಿನದಿಬ್ಬ (ಬೀಸನಪಾಳ್ಯ)

ದಂಡಿನದಿಬ್ಬ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೫೩.೭೭ ಹೆಕ್ಟೇರ್ ಹೊಂದಿದ್ದು ದೊಡ್ಡೇರಿ ಭೂ ವಿಸ್ತೀರ್ಣದಲ್ಲಿ ಸೇರಿರುವ ಮಜರೆ ಗ್ರಾಮವಾಗಿದೆ. ಈ ಗ್ರಾಮದ ಮೊದಲ ಹೆಸರು ಬೀಸನಪಾಳ್ಯ ಎಂದಿತ್ತು.

ಹಿಂದೆ ಒಂದು ದಿನ ಹೈದರನ ಸೈನಿಕರು ಹಾಗೂ ಹೈದರಾಲಿ ಸಂಚಾರ ಮಾರ್ಗದಲ್ಲಿ ತೆರಳುತ್ತಿದ್ದಾಗ ಈ ಸ್ಥಳದಲ್ಲಿ ಒಂದು ದಿನ ಬೀಡು ಬಿಟ್ಟಿದ್ದರಂತೆ. ಆದ್ದರಿಂದ ಈ ಊರಿಗೆ ದಂಡಿನದಿಬ್ಬ ಎಂದು ನಾಮಕರಣ ಮಾಡಿದರಂತೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ನರಿ, ತೋಳ, ಕರಡಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಯಾವುದೇ ಕೆರೆ ಹಾಗೂ ಹಳ್ಳ ಇಲ್ಲ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೫ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಕ್ಕೂ ಹೆಚ್ಚು ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ, ಕುರುಬ, ನಾಯಕ, ವೈಶ್ಯರು, ಮುಸ್ಲಿಂ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉಳಿದಂತೆ ತೆಲುಗು ಹಾಗೂ ಉರ್ದು ಭಾಷೆಗಳನ್ನು ಮಾತನಾಡುತ್ತಾರೆ.

ಒಟ್ಟು ೧೭೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೨೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೭೫ ಮತ್ತು ಹೆಂಗಸರು ೩೪೫ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೯೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಶೇಂಗಾ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಜೋಳ ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಎರಡು ಆಧುನಿಕ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಎಂಟು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ೮ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡೇರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಡವನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ದೊಡ್ಡೇರಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. --- ಅಂಚೆ ಸಂಪರ್ಕ ಒದಗಿಸುತ್ತಿದೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೭೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು

ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೦೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು, ೩ ಜನ ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೩.೧%. ಸರ್ಕಾರಿ ಪದವಿಪೂರ್ವ ಕಾಲೇಜು ಇದ್ದು ೨೮೦ ವಿದ್ಯಾರ್ಥಿಗಳು, ಒಬ್ಬರು ಪ್ರಾಚಾರ್ಯರು, ೧೧ ಜನ ಉಪನ್ಯಾಸಕರು ಇದ್ದಾರೆ. ಪ್ರಾರ್ಥನಾ ಪಬ್ಲಿಕ್ ಸ್ಕೂಲ್‌ನಲ್ಲಿ ೬೫ ವಿದ್ಯಾರ್ಥಿಗಳು, ೬ ಜನ ಶಿಕ್ಷಕರು, ಒಬ್ಬರು ಸಹಾಯಕರಿದ್ದಾರೆ. ಬಸವೇಶ್ವರ ಗ್ರಾಮಾಂತರ ಕೈಗಾರಿಕಾ ತರಬೇತಿ ಸಂಸ್ಥೆ (ಐಟಿಐ) ಇದ್ದು ೧೨೬ ವಿದ್ಯಾರ್ಥಿಗಳು, ೮ ಜನ ಶಿಕ್ಷಕರು ಹಾಗೂ ಒಬ್ಬರು ಸಹಾಯಕರಿದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೪ ಹೋಟೆಲ್‌ಯಿದ್ದು ೬ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ವೆಂಕಟರಮಣಸ್ವಾಮಿ, ತಿಮ್ಮಪ್ಪ, ಹುಲುಗಮ್ಮ, ಸಿದ್ದಪ್ಪ, ಯಲ್ಲಮ್ಮ, ಗಣೇಶ ಮುಂತಾದ ಪ್ರಸಿದ್ಧ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಸಡಗರ, ಸಂಭ್ರಮದಿಂದ ಆಚರಿಸಲಾಗುತ್ತದೆ. ಹರಕೆ ಹೊರುವ, ಬಲಿ ಕೊಡುವ ಆಚರಣೆಗಳು, ಹೊರಬೀಡು ಬಿಡುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಎಲ್ಲಾ ಹಿಂದೂ ಹಾಗೂ ಮುಸ್ಲಿಂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದೊಡ್ಡದಾಳವಟ್ಟ

ದೊಡ್ಡದಾಳವಟ್ಟ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೨ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೬೯೪.೧೦ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ.

ಚಿಕ್ಕದೇವರಾಜ ಒಡೆಯರು ಸೈನಿಕ ದಳವನ್ನು ಇಲ್ಲಿ ಇರಿಸಿದ್ದರಿಂದಾಗಿ ದಳವಟ್ಟವಾಗಿ ಇದೇ ಗ್ರಾಮದವರು ಬೇರೊಂದು ಕಡೆ ನೆಲೆಸಿ ೨ ಗ್ರಾಮವಾಯಿತು. ಇವು ಚಿಕ್ಕ, ದೊಡ್ಡದಾಳವಟ್ಟವಾದವು.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ. ಜಯಮಂಗಲಿ ನದಿಯಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಶೆಟ್ರು, ನಾಯಕ, ಕುರುಬರು, ಆದಿಕರ್ನಾಟಕ, ಆದಿದ್ರಾವಿಡ, ಬೆಸ್ತ, ಬ್ರಾಹ್ಮಣ, ವಿಶ್ವಕರ್ಮ, ಸಾದರು, ಕುಂಬಾರ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದಲ್ಲಿ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೨೬೫ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೧೧೦೧ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು ೫೭೮, ಹೆಣ್ಣು ೫೨೩ ಜನಸಂಖ್ಯಾ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಈ ಗ್ರಾಮದಲ್ಲಿ ಉತ್ತಮವಾದ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಮತ್ತು ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ, ಇಲ್ಲಿನ ರೈತರು ಉಪ ಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಸಾರಿಗೆ, ಕಂದಾಯ ಇಲಾಖೆ, ಶಿಕ್ಷಣ ಇಲಾಖೆ, ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ೧೦ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ. ಒಬ್ಬರು ವಕೀಲರು, ಒಬ್ಬರು ಇಂಜಿನಿಯರ್, ಒಬ್ಬರು ಕುಂಬಾರಿಕೆ ಮಾಡುವವರಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಚಿಕ್ಕದಾಳವಟ್ಟ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ಒಟ್ಟು ಮೂವರು ಸದಸ್ಯರುಗಳಿದ್ದು ಇಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಚಿಕ್ಕದಾಳವಟ್ಟ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಚಿಕ್ಕದಾಳವಟ್ಟ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳಿದ್ದು ಹಾಗೂ ೨ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೨ ಅಂಗನವಾಡಿ ಕೇಂದ್ರವಿದ್ದು ೪೮ ಮಕ್ಕಳಿದ್ದಾರೆ, ಇಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ೧೬೪ ಮಕ್ಕಳಿದ್ದಾರೆ ಇಲ್ಲಿ ೦೪ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೩.೮೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ೦೪ ಹೋಟೇಲ್ ಇದ್ದು, ೦೮ ಅಂಗಡಿಗಳಿವೆ ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಈಶ್ವರ, ಪಾತಲಪ್ಪ, ವೀರಲಕ್ಷ್ಮಯ್ಯ, ಗಣಪತಿ, ಮಾರಮ್ಮದೇವಿ, ಭೂತಪ್ಪ, ಆಂಜನೇಯ, ಪರಮೇಶ್ವರಿ, ತಿರುಮಲ್ಲಪ್ಪ, ಲಕ್ಷ್ಮೀನರಸಿಂಹಸ್ವಾಮಿ ದೇವಾಲಯಗಳಿವೆ ಇವುಗಳಲ್ಲಿ ಲಕ್ಷ್ಮಿ ನರಸಿಂಹ ಪ್ರಸಿದ್ಧವಾಗಿದ್ದು ಪ್ರತಿ ವರ್ಷ ಆಷಾಢ ಮಾಸದಲ್ಲಿ ಏಕಾದಶಿ ದಿನದಿಂದ ೯ ದಿನಗಳವರೆಗೆ ಜಾತ್ರೆ ನಡೆಯುತ್ತದೆ. ಕರಗ ಹೊರುವುದು ಇಲ್ಲಿನ ಸಂಪ್ರಾದಾಯವಾಗಿದೆ. ಇಲ್ಲಿ ಪ್ರಾಚೀನವಾದ ಕಲ್ಯಾಣಿ ಇದೆ. ಜಾತ್ರೆ ಅದ್ದೂರಿಯಾಗಿ ನಡೆಯುತ್ತದೆ. ಜಿಲ್ಲೆಯಲ್ಲಿಯೇ ಪ್ರಸಿದ್ಧಿ ಹೊಂದಿರುವ ೨ನೇ ತೇರು ಇದಾಗಿದೆ. ಟಾಟಾ–ಬಿರ್ಲಾ ಅವರ ಮನೆದೇವರು ಲಕ್ಷ್ಮಮ್ಮ ಈ ಗ್ರಾಮದಲ್ಲಿದೆ. ಉಳಿದಂತೆ ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ ಹಾಗೂ ಮುಸ್ಲಿಂ ಬಾಂಧವರು ಮುಸ್ಲಿಂ ಹಬ್ಬಗಳನ್ನು ಆಚರಿಸುತ್ತಾರೆ.

## ದೊಡ್ಡ ದಾಳವಾಟ ಟೆಂಪಲ್

ದೊಡ್ಡ ದಾಳವಾಟ ಟೆಂಪಲ್ ಮಧುಗಿರಿ ಪಶ್ಚಿಮ ದಿಕ್ಕಿನಲ್ಲಿದ್ದು ದೊಡ್ಡದಾಳವಾಟದ ಹೊರವಲಯದಲ್ಲಿದೆ. ಇಲ್ಲಿ ಯಾವುದೇ ಜನವಸತಿ ಇಲ್ಲ. ಲಕ್ಷ್ಮೀನರಸಿಂಹಸ್ವಾಮಿಯ ದೇವಾಲಯವಿದೆ. ೧ ಕಲ್ಯಾಣಿ, ೧ ಶಿಲಾಶಾಸನವಿದೆ. ಮಂಟಪಗಳ ಸಾಲುಗಳಿವೆ. ಪ್ರತಿ ವರ್ಷ ಜುಲೈ ತಿಂಗಳಲ್ಲಿ ಏಕಾದಶಿಯ ದಿನ ತೇರು ನಡೆಯುವುದು. ಜಿಲ್ಲೆಯಲ್ಲಿ ಎರಡನೇ ಅತಿ ದೊಡ್ಡ ಜಾತ್ರೆಯಾಗಿದ್ದು ಸಾವಿರಾರು ಭಕ್ತಾದಿಗಳು ಸೇರುವರು. ಒಂಬತ್ತು ದಿನಗಳ ದೊಡ್ಡ ಜಾತ್ರೆ ಇದಾಗಿದೆ. ಗ್ರಾಮವು

ಇಟಕದಿಬ್ಬನಹಳ್ಳಿ ಹೋಬಳಿ ಹಾಗೂ ಚಿಕ್ಕದಾಳವಾಟ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರಿರುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ದಾಸಪ್ಪನಪಾಳ್ಯ

ದಾಸಪ್ಪನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ಮುದ್ದೇನೆರಳೆಕೆರೆ ಭೂ ವಿಸ್ತೀರ್ಣದಲ್ಲಿ ಸೇರಿದೆ ಕಂದಾಯ ಗ್ರಾಮವಾಗಿದೆ. ವ್ಯಕ್ತಿಮೂಲದಿಂದಾಗಿ ದಾಸಪ್ಪನಪಾಳ್ಯ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿದ್ರಾವಿಡ, ಗೊಲ್ಲ, ನಾಯಕ ಜನಾಂಗದವರು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೪೫ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೨೦೬ ಜನಸಂಖ್ಯಾ ಪ್ರಮಾಣ ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಈ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ ಚರಂಡಿ ವ್ಯವಸ್ಥೆ, ಕಂಡುಬರುತ್ತದೆ. ಗ್ರಾಮದಲ್ಲಿ ೨೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿದೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಉಪಕಸುಬಾಗಿ ರೈತರು ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ, ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ೦೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಬ್ರಹ್ಮ ಸಮುದ್ರ ಗ್ರಾಮ ಪಂಚಾಯತ್‌ಗೆ ಒಳಪಟ್ಟಿದೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಚಿಕ್ಕದಾಳವಟ್ಟ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ಬ್ರಹ್ಮಸಮುದ್ರ ಗ್ರಾಮ ಪಂಚಾಯತಿ ಆಡಳಿತ ವ್ಯಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಬ್ರಹ್ಮ ಸಮುದ್ರ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ

ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ. ಗ್ರಾಮದ ಒಟ್ಟು ಸಾಕ್ಷರತೆ ೫೯.೧೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ಎರಡು ಅಂಗಡಿಗಳಿವೆ ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಗವಿಸಿದ್ದೇಶ್ವರ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದಿನ್ನೆ ಗೊಲ್ಲರಹಟ್ಟಿ

ದಿನ್ನೇ ಗೊಲ್ಲರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ಬ್ರಹ್ಮ ಸಮುದ್ರದ ಭೂ ವಿಸ್ತೀರ್ಣದಲ್ಲಿ ಸೇರಿದೆ ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೦೬ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಗೊಲ್ಲರು ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೯೦ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೫೯೮ ಜನಸಂಖ್ಯಾ ಪ್ರಮಾಣ ಹೊಂದಿದೆ ಗಂಡು ೧೯೮, ಹೆಣ್ಣು ೧೦೦ ಜನ ಸಂಖ್ಯೆ ಇದೆ, ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸುವ್ಯವಸ್ಥಿತವಾಗಿದ್ದು ಚರಂಡಿ ವ್ಯವಸ್ಥೆಯನ್ನು ಹೊಂದಿದೆ. ಗ್ರಾಮದಲ್ಲಿ ೩೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಬೆಳೆಯುತ್ತಾರೆ, ತೆಂಗು ಮುಖ್ಯ ಸರಕಾಗಿದೆ. ಕುರಿಪಾಲನೆ ಮಾಡುತ್ತಾರೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಉಪಕಸುಬಾಗಿ ರೈತರು ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಐಟಿ–ಬಿಟಿ ಕ್ಷೇತ್ರದಲ್ಲಿ ಪಂಚಾಯ್ತಿ ಕಾರ್ಯದರ್ಶಿ, ಶಿಕ್ಷಣ ಇಲಾಖೆ, ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ೪ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಉಳಿದಂತೆ ಕಮ್ಮಾರಿಕೆ, ಬಡಗಿ ಕೆಲಸಗಾರರು ಇದ್ದಾರೆ ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಹಾಗೂ

ಬ್ರಹ್ಮ ಸಮುದ್ರ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಬ್ರಹ್ಮ ಸಮುದ್ರ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಬ್ರಹ್ಮ ಸಮುದ್ರ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು ಒಟ್ಟು ೨೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ದಾಪ್ಯವೇತನ, ವಿಕಲಚೇತನವೇತನ, ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ಎರಡು ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕಾಟಲಿಂಗೇಶ್ವರ, ಭೂತಪ್ಪ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದೊಡ್ಡ ಯಲ್ಲೂರು

ದೊಡ್ಡ ಯಲ್ಲೂರು ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೩ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೫೧೫.೧೯ ಹೆಕ್ಟೇರ್ಸ್, ಕಂದಾಯ ಗ್ರಾಮವಾಗಿದೆ. ಯಲ್ಕ ಎಂದರೆ ಇಲಿ ಎಂದೂ ಇಲಿಯ ಹೆಸರಲ್ಲಿ ಯಲ್ಕು ತೆಲುಗಿನ ಶಬ್ದ ಹಾಗೆಯೇ ಉಳಿದು ಯಲ್ಲೂರು ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ೦೬ ಸಿಸ್ಟನ್‌ಗಳಿವೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬ್ರಾಹ್ಮಣ, ನೇಕಾರ, ಒಕ್ಕಲಿಗ, ಕುರುಬ, ಕಮ್ಮಾರ, ಮುಸ್ಲಿಂ, ನಾಯಕ, ಆದಿಕರ್ನಾಟಕ, ಕುಂಬಾರ, ಆದಿದ್ರಾವಿಡ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು, ಉರ್ದು ಮಾತನಾಡುವವರಿದ್ದಾರೆ.

ಒಟ್ಟು ೨೮೯ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೧೧೭೭ ಜನಸಂಖ್ಯೆಯನ್ನು ಹೊಂದಿದ್ದು ಗಂಡು–೫೯೮, ಹೆಣ್ಣು–೫೭೯ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ

ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಈ ಗ್ರಾಮದಲ್ಲಿ ಉತ್ತಮ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮೦ ಮನೆಗಳು ಶೌಚಾಲಯ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ, ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಕೃಷಿ ಇಲಾಖೆ, ಪಿಡಬ್ಲ್ಯೂಡಿ, ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆ, ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ೧೨ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ನಾಲ್ವರು ಗ್ರಾಮದಲ್ಲಿದ್ದು ಊದುಬತ್ತಿ ಕೈಗಾರಿಕೆ, ಹಗ್ಗ ತಯಾರಿಕೆ ಗ್ರಾಮದಲ್ಲಿದೆ. ಒಬ್ಬರು ಕಮ್ಮಾರರು ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ದೊಡ್ಡಯಲ್ಲೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಇಬ್ಬರು ಸದಸ್ಯರುಗಳಿದ್ದು ಇಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ದೊಡ್ಡ ಯಲ್ಲೂರು ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ದೊಡ್ಡ ಯಲ್ಲೂರು ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೩ ಸ್ತ್ರೀಶಕ್ತಿ ಸಂಘಗಳು ಹಾಗೂ ೨ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೨ ಅಂಗನವಾಡಿ ಕೇಂದ್ರವಿದ್ದು ಅಂಗನವಾಡಿ-೦೧ರಲ್ಲಿ ಒಬ್ಬರು ಕಾರ್ಯಕರ್ತೆ ಮತ್ತು ಒಬ್ಬ ಸಹಾಯಕಿ ಇದ್ದಾರೆ ೨೬ ಮಕ್ಕಳು ಇದ್ದಾರೆ. ಅಂಗನವಾಡಿ-೦೨ರಲ್ಲಿ ಒಬ್ಬರು ಕಾರ್ಯಕರ್ತೆ ಮತ್ತು ಒಬ್ಬ ಸಹಾಯಕಿ ಇದ್ದು ೩೬ ಮಕ್ಕಳು ಇದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ೧೮೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ೬ಜನ ಶಿಕ್ಷಕರಿದ್ದಾರೆ. ಉರ್ದು ಕಿರಿಯ ಪ್ರಾಥಮಿಕ ಶಾಲೆ ಇದ್ದು ೬ ವಿದ್ಯಾರ್ಥಿಗಳಿದ್ದಾರೆ. ಇಬ್ಬರು ಶಿಕ್ಷರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಜ್ಞಾನಭಾರತಿ ಪ್ರೌಢಶಾಲೆಯಿದ್ದು ೧೯೫ ವಿದ್ಯಾರ್ಥಿಗಳು ಮತ್ತು ೮ ಜನ ಶಿಕ್ಷಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೬೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ದಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ೦೬ ಹೊಟೇಲ್ ಇದ್ದು, ೧೦ ಅಂಗಡಿಗಳಿವೆ. ವಿಎಸ್ಎಸ್ಎನ್ ಇದೆ. ೧ ಕರುಗಲ್ಲು ಇದೆ. ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮಲ್ಲೇಶ್ವರ, ಚೌಡಮ್ಮ, ಮಾರಮ್ಮದೇವಿ, ಆಂಜನೇಯ ದೇವಾಲಯಗಳಿವೆ. ಇವುಗಳಲ್ಲಿ ಮಾರಮ್ಮ ದೇವಿಗೆ ಪ್ರತಿ ವರ್ಷ ಉತ್ಸವ ನಡೆಯುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಹಾಗೂ ಮುಸ್ಲಿಂ ಭಾಂಧವರು ಮುಸ್ಲಿಂ ಹಬ್ಬಗಳನ್ನು ಆಚರಿಸುತ್ತಾರೆ. ಒಂದು ದರ್ಗಾ ಹಾಗೂ ಒಂದು ಮಸೀದಿ ಇದೆ.

## ದಾದಗೊಂಡನಹಳ್ಳಿ

ದಾದಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೫೪೯.೭೬ ಹೆಕ್ಟೇರ್ಸ್, ಕಂದಾಯ ಗ್ರಾಮವಾಗಿದೆ.

ದಾದಗೌಡ ಎಂಬ ವ್ಯಕ್ತಿ ಮೂಲದಿಂದಾಗಿ ದಾದಗೊಂಡನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಲಂಬಾಣಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕಮ್ಮಾರ, ಉಪ್ಪಾರ, ನೇಕಾರ, ನಾಯಕ, ಆದಿಕರ್ನಾಟಕ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೯೨ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೮೮೪ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಈ ಗ್ರಾಮದಲ್ಲಿ ಉತ್ತಮ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದ ೪೦ ಮನೆಗಳಲ್ಲಿ ಶೌಚಾಲಯ ಸೌಲಭ್ಯವಿದೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯವಾಗಿ ಬೆಳೆಯುತ್ತಾರೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಇಲ್ಲಿನ ರೈತರ ಉಪಕಸುಬಾಗಿ ಹೈನುಗಾರಿಕೆಯನ್ನು ಬಳಸಿಕೊಂಡಿದ್ದಾರೆ. ಒಂದು ಮಿನಿ ಡೈರಿ ಇದೆ.

ಶಿಕ್ಷಣ ಇಲಾಖೆ, ಹಾಗೂ ಸಾರಿಗೆ ಇಲಾಖೆಗಳಿಗೆ ಸೇರಿದ ಒಟ್ಟು ೦೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರ್-೦೧, ಬಡಗಿ-೦೧ ಕಮ್ಮಾರ-೦೧ ಉದ್ಯೋಗ ಮಾಡುವವರು ಇದ್ದಾರೆ, ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಗರಣಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಯಲ್ಕೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಇಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಯಲ್ಕೂರು ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ದೊಡ್ಡ ಯಲ್ಕೂರು ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೧ ಅಂಗನವಾಡಿ ಕೇಂದ್ರವಿದ್ದು ೩೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬ ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು ೬೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ ಇಲ್ಲಿ ೩ ಜನ ಶಿಕ್ಷಕರು

ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಎರಡು ಹೊಟೇಲ್ ಇದ್ದು, ನಾಲ್ಕು ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಮಾರಮ್ಮ, ಸೇವಾಲಾಲ್ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ದೊಡ್ಡಹಟ್ಟಿ

ದೊಡ್ಡಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೦೫.೮೩ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮವು ಗಂಜಲಗುಂಟೆ ವಿಸ್ತೀರ್ಣದಲ್ಲಿ ಸೇರಿಕೊಂಡಿದೆ.

ಹಿಂದಿನಿಂದ ಈ ಗ್ರಾಮದಲ್ಲಿ ಹಿರಿಯರ ಸಮ್ಮುಖದಲ್ಲಿಯೇ ಎಲ್ಲಾ ರೀತಿಯ ಕಲಹಗಳು ತೀರ್ಮಾನವಾಗುತ್ತಿದ್ದು ಯಾವುದೇ ಕಾಲದಲ್ಲೂ ರೂಟರ್ ಅಥವಾ ಪೊಲೀಸ್‌ವರೆವಿಗೂ ಹೋಗುವುದಿಲ್ಲ. ಈ ಗ್ರಾಮಕ್ಕೆ ಹೆಚ್.ಮಧುಚಂದ್ರ ಎನ್ನುವವರ ತೀರ್ಮಾನದೊಂದಿಗೆ ದೊಡ್ಡಹಟ್ಟಿ ಎಂದು ಹೆಸರನ್ನು ನಾಮಕರಣ ಮಾಡಲಾಗಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಮರಡಿ ಗುಡ್ಡ ಪ್ರದೇಶವನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ನರಿ, ತೋಳ, ಚಿರತೆ, ಕರಡಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಒಂದು ಹಳ್ಳ ಇರುವುದರಿಂದ ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೮೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೭೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೯ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ಅವರೆ, ತೊಗರಿ, ರಾಗಿ ಮುಖ್ಯ ಬೆಳೆಯಾಗಿದೆ. ಗ್ರಾಮದಲ್ಲಿ ಕೂಲಿ ಮಾಡುವವರು ಕಂಡುಬರುತ್ತಾರೆ. ಕುರಿ ಹಾಗೂ ಮೇಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗಂಜಲಗುಂಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗಂಜಲಗುಂಟೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಗಂಜಲಗುಂಟೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೬ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೫೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧%.

ಗ್ರಾಮದಲ್ಲಿ ಕಾವಲಮ್ಮ, ಚಿತ್ರಲಿಂಗಯ್ಯ, ತಿಮ್ಮಪ್ಪ, ಕ್ಯಾತೆಲಿಂಗೇಶ್ವರ ಹಾಗೂ ಬಾಲಕೃಷ್ಣ ದೇವಾಲಯಗಳಿದ್ದು ಪ್ರತಿವರ್ಷ ಯುಗಾದಿಯಲ್ಲಿ ತಿಮ್ಮಪ್ಪನ ಜಾತ್ರೆಯನ್ನು ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

## ನಾಗೇನಹಳ್ಳಿ ಗೊಲ್ಲರಹಟ್ಟಿ

ನಾಗೇನಹಳ್ಳಿ ಗೊಲ್ಲರಹಟ್ಟಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ನಾಗೇನಹಳ್ಳಿ ಗ್ರಾಮದ ಹೊರವಲಯದಲ್ಲಿದೆ.

ಒಟ್ಟು ೩೨ ಮನೆಗಳನ್ನು ಹೊಂದಿದ್ದು ೧೪೫ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಪಶುಸಂಗೋಪನೆ ಹಾಗೂ ವ್ಯವಸಾಯ ಮುಖ್ಯ ಉದ್ಯೋಗವಾಗಿದೆ. ಸಾರಿಗೆ ಹಾಗೂ ಅಂಚೆ ಇಲಾಖೆಯಲ್ಲಿ ಮೂರು ಜನ ಸೇವೆ ಸಲ್ಲಿಸುತ್ತಿದ್ದಾರೆ. ಬಡವನಹಳ್ಳಿ ಗ್ರಾಮ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ತಿಮ್ಮಪ್ಪ, ಚಿತ್ರದೇವರ ಪೌಳಿಗಳಿವೆ. ದಸರಾ ಹಾಗೂ ದೀಪಾವಳಿಯ ದಿನಗಳಂದು ದೇವರ ಉತ್ಸವ ಹೊರಡುತ್ತದೆ. ಕೋಲಾಟ ಈ ಗ್ರಾಮದ ವಿಶೇಷ ಮನರಂಜನೆಯಾಗಿರುತ್ತದೆ. ಕದರಯ್ಯ, ಚಿತ್ತಯ್ಯ, ನರಸಿಂಹಣ್ಣ ಕೋಲಾಟದ ಕಲಾವಿದರಾಗಿದ್ದಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ನೀರಕಲ್ಲು

ನೀರಕಲ್ಲು ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೬೭.೪೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಬೆಟ್ಟಗುಡ್ಡಗಳಲ್ಲಿ ನೀರಿನ ಝರಿ ಹರಿಯುತ್ತಿದ್ದ ಕಾರಣ ನೀರ್‌ಗಲ್ಲು > ನೀರಕಲ್ಲು ಆಗಿದೆ. ಆಡುಭಾಷೆಯಲ್ಲಿ ಇಂದಿಗೂ ನೀರುಗಲ್ಲಾಗಿದೆ.

ಗ್ರಾಮವು ಬೆಟ್ಟ ಗುಡ್ಡಗಳ ಪ್ರದೇಶವಾಗಿದ್ದು ಬಿಳಿಕಲ್ಲು ಹಾಗೂ ಕೆಂಪು ಮಿಶ್ರಿತ ಮಣ್ಣಿನಿಂದ ಕೂಡಿದ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಅರಣ್ಯವನ್ನು ಹೊಂದಿದ್ದು ಪ್ರಾಣಿಗಳಾದ ಕಾಡುಹಂದಿ, ಕರಡಿ, ಚಿರತೆ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆಯಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩೦ ಸಾರ್ವಜನಿಕ ನಲ್ಲಿಗಳು ೨

ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಬಣಜಿಗ, ಆದಿದ್ರಾವಿಡ ಹಾಗೂ ವಿಶ್ವಕರ್ಮ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೪೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೩೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೭ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಸಿಹಿ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ತೊಗರಿ, ಅವರೆ ಮತ್ತು ಭತ್ತ ಮುಖ್ಯ ಆಹಾರ ಬೆಳೆಯಾಗಿದೆ. ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಹಾಗೂ ಜೋಳ ಬೆಳೆಯಲಾಗುವುದು.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ನಾಲ್ಕು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನ್ನೇನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರಗಳಿದ್ದು ಅಂಗನವಾಡಿ–೧ ರಲ್ಲಿ ೨೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗನವಾಡಿ–೨ ರಲ್ಲಿ ೪೪ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೪೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಏಳು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಬಡಗಿ ಕೆಲಸದವರು ಒಬ್ಬರು, ಚಿತ್ರಕಲೆ ಮೂರು ಜನ, ಚಮ್ಮಾರರು ಒಬ್ಬರು ಇದ್ದಾರೆ. ಹಾಗೇ ಶಿಕ್ಷಣ, ಪೊಲೀಸ್, ಕೃಷಿ ಇಲಾಖೆ ಹೀಗೆ ಸರ್ಕಾರಿ ಉದ್ಯೋಗದಲ್ಲಿದ್ದಾರೆ.

ಗ್ರಾಮದಲ್ಲಿ ಪಾತಪ್ಪ, ಕಣಿವೆ ಮಾರಮ್ಮ, ಊರುಮಾರಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಊರು ಮಾರಮ್ಮನ ಜಾತ್ರೆಯನ್ನು ಆರತಿ ಹಾಗೂ ಬಲಿಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ನೀರಕಲ್ಲು ಗೊಲ್ಲರಹಟ್ಟಿ

ನೀರಕಲ್ಲು ಗೊಲ್ಲರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೬೭.೪೨ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮವು ನೀರಕಲ್ಲು ಭೂವಿಸ್ತೀರ್ಣದಲ್ಲಿ ಸೇರಿಕೊಂಡಿದೆ.

ಗ್ರಾಮವು ಬೆಟ್ಟಗುಡ್ಡಗಳ ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣು ಮಿಶ್ರ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಬೆಟ್ಟ-ಗುಡ್ಡಗಳ ಪ್ರದೇಶವಾಗಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳು ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೦೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೨೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಒಂದು ಎತ್ತಿನ ಗಾಡಿ ಇದ್ದು ೧೦ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯಿತ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೮.೮%. ಸರ್ಕಾರದ ಸಮುದಾಯ

ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಪಾಲನಾಯಕ, ತಿಮ್ಮಪ್ಪ, ಚಿತ್ತರದೇವರ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ನೀಲಿಹಳ್ಳಿ

ನೀಲಿಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೮೬.೧೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ನೀಲಮ್ಮ ಎಂಬ ವ್ಯಕ್ತಿಮೂಲ ನಂತರ ಬಹುವಚನದಿಂದ ಏಕವಚನಕ್ಕೆ ತಿರುಗಿ ನೀಲಿ + ಹಳ್ಳಿ – ನೀಲಿಹಳ್ಳಿ ಎಂದಾಗಿದೆ.

ಗ್ರಾಮವು ಅರಣ್ಯ ಪ್ರದೇಶವಾಗಿದ್ದು ರಾಮದೇವರ ಬೆಟ್ಟ, ಕೋಡಿಬೆಟ್ಟ, ತಾವಿನಬೆಟ್ಟ, ಎರಬೆಟ್ಟ ಇಂತಹ ಬೆಟ್ಟ ಗುಡ್ಡಗಳನ್ನು ಹೊಂದಿದೆ.

ಗ್ರಾಮವು ಅರಣ್ಯವನ್ನು ಹೊಂದಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ಚಿರತೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ೪ ಹಳ್ಳಗಳಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫೦ ಸಾರ್ವಜನಿಕ ನಲ್ಲಿಗಳು ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ, ನಾಯಕ, ಆದಿಕರ್ನಾಟಕ, ಬೋವಿ, ಕುಂಬಾರ, ವಿಶ್ವಕರ್ಮ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೪೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೫೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨೩ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್, ಆಟೋ, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ಮುಸುಕಿನ ಜೋಳ ಬೆಳೆಯಲಾಗುತ್ತಿದ್ದು ಹುಣಸೇ ಹಣ್ಣಿನ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ

ನೀರಿನ ಸರಬರಾಜು ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನ್ನೇನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘ ಹಾಗೂ ೧ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್ ಹಾಗೂ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಇಬ್ಬರು ಶಿಕ್ಷಕರು, ಇಬ್ಬರು ಪೊಲೀಸರು, ನಾಲ್ಕು ಜನ ಉಪನ್ಯಾಸಕರು, ಬಿಟಿಎಸ್-ಕೆಎಸ್ಆರ್ಟಿಸಿ ಡ್ರೈವರ್ ಒಬ್ಬರು, ಕೆಇಬಿ ನೌಕರರು ಒಬ್ಬರು, ಐದು ಜನ ಮಿಲಿಟರಿ ಸೇವೆಯಲ್ಲಿ, ಒಬ್ಬರು ಅರಣ್ಯ ಇಲಾಖಾ ಸೇವೆಯಲ್ಲಿ, ಒಬ್ಬರು ಬಡಗಿ ಹಾಗೂ ಗುಡಿಕಾರರು ಇದ್ದಾರೆ. ಸಮುದಾಯ ಭವನ ಹಾಗೂ ಸಸ್ಯತೋಟ ಕಂಡುಬರುತ್ತದೆ. ನೀಲಿಹಳ್ಳಿ ಸಿದ್ದರಾಮಯ್ಯ ಲೇಖಕರಾಗಿದ್ದಾರೆ. ಗ್ರಾಮದಲ್ಲಿ ಆಂಜನೇಯ, ಮಾರಮ್ಮ, ಮುತ್ತುರಾಯ ದೇವಾಲಯಗಳಿವೆ. ಪ್ರತಿ ವರ್ಷ ಶ್ರಾವಣ ಮಾಸದಲ್ಲಿ ಮಾರಮ್ಮನ ಜಾತ್ರೆಯನ್ನು ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

**ನೇರಳೇಕೆರೆ**

ನೇರಳೇಕೆರೆ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೦೧೮.೭೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ನರಿ, ಕರಡಿ, ಚಿರತೆ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಡುಗ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಎರಡು ಹಳ್ಳಗಳಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩೦ ಸಾರ್ವಜನಿಕ ನಲ್ಲಿಗಳು, ೧೫ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬ್ರಾಹ್ಮಣ, ಕುಂಬಾರ, ಒಕ್ಕಲಿಗ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ಮುಸ್ಲಿಂ ಜನಾಂಗವು ಉರ್ದು ಮಾತನಾಡುವರು.

ಒಟ್ಟು ೨೮೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೮೦೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ

ಆಹಾರವಾಗಿದೆ. ಸಿಹಿ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರು ೫೦% ಕಂಡುಬರುತ್ತಾರೆ. ಶೇಂಗಾ, ರಾಗಿ, ಭತ್ತ ಮುಖ್ಯ ಬೆಳೆಯಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಕುಂಬಾರ, ಬಡಗಿ, ಚಿತ್ರಕಾಲ ಗ್ರಾಮದಲ್ಲಿದ್ದಾರೆ. ಶಿಕ್ಷಕರು, ಪೊಲೀಸ್, ವೈದ್ಯ, ಅಂಚೆ, ರೆವಿನ್ಯೂ ಸೇರಿದಂತೆ ೨೦ ಜನ ಉದ್ಯೋಗಸ್ಥರಾಗಿದ್ದಾರೆ

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿಯೇ ಗ್ರಾಮಪಂಚಾಯ್ತಿ ಕಛೇರಿ ಇದೆ. ಈ ಗ್ರಾಮದಿಂದ ಮೂರು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಮೂವರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ನೇರಳೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ನೇರಳೇಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿಯೇ ಅಂಚೆ ಕಛೇರಿ ಇದೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘ ಹಾಗೂ ೮ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದು ಇಬ್ಬರು ವೈದ್ಯರಿದ್ದಾರೆ. ಗ್ರಾಮದಲ್ಲಿ ಜ್ವರ, ಕೆಮ್ಮು, ಮಲೇರಿಯಾ, ಕಾಲರಾಗಳಂತಹ ರೋಗಗಳು ಕಂಡುಬರುತ್ತವೆ. ಪಶು ಆರೋಗ್ಯ ಕೇಂದ್ರವು ಗ್ರಾಮದಲ್ಲಿದ್ದು ಇಬ್ಬರು ವೈದ್ಯರಿದ್ದಾರೆ.

ಗ್ರಾಮಪಂಚಾಯ್ತಿ ವತಿಯಿಂದ ನಡೆಯುವ ಒಂದು ಗ್ರಂಥಾಲಯವಿದ್ದು ವಿವಿಧ ಪ್ರಕಾರದ ೧೫೦೦ ಪುಸ್ತಕಗಳು ಇದ್ದು ಒಬ್ಬರು ಗ್ರಂಥಪಾಲಕರಿದ್ದಾರೆ. ಗ್ರಾಮದಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರವಿದೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ಅಂಗನವಾಡಿ-೧ ರಲ್ಲಿ ೨೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೯೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಏಳು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ರಂಗನಾಥ ಗ್ರಾಮಾಂತರ ಪ್ರೌಢಶಾಲೆ ಇದ್ದು ೨೪೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಎಂಟು ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೭.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೪ ಹೋಟೆಲ್‌ಗಳು ಹಾಗೂ ೧೨ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯ, ವೀರಬಾಲಮ್ಮ, ಈರಲಕ್ಕಮ್ಮ, ಹೊಂಗೆಮಾರಮ್ಮ, ವೀರದಿಪ್ಪಮ್ಮ, ಅಶ್ವತ್ಥ ವೃಕ್ಷ ದೇವಾಲಯಗಳಿವೆ. ಪ್ರತಿ ವರ್ಷವೂ ಹೊಂಗೆ ಮಾರಮ್ಮನ ಜಾತ್ರೆ ಆರತಿ, ಮುತ್ತಿನ ಪಲ್ಲಕ್ಕಿಯನ್ನು ಮಾರ್ಚ್ ತಿಂಗಳಲ್ಲಿ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮುಸ್ಲಿಂ ಬಾಂಧವರು ಮುಸ್ಲಿಂ ಹಬ್ಬಗಳನ್ನು ಆಚರಿಸುವರು.

## ನಲ್ಲೆಕಾಮನಹಳ್ಳಿ (ಜಂಗಮಯ್ಯನಪಾಳ್ಯ)

ನಲ್ಲೆಕಾಮನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೧೪.೧೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ನಲ್ಲಕ್ಕಮ್ಮನಹಳ್ಳಿ ಎಂದು ಆಡುಭಾಷೆಯಲ್ಲಿ ಇಂದಿಗೂ ಕರೆಯಲ್ಪಡುವ ಈ ಗ್ರಾಮ ತೆಲುಗಿನ ಕಪ್ಪುಲಕ್ಕಮ್ಮನಪಲ್ಲಿ ಕನ್ನಡದಲ್ಲಿ ನಲ್ಲೆಕಾಮನಹಳ್ಳಿ ಎಂದಾಗಿದೆ. ಗ್ರಾಮವು

ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ತೋಳ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧೦ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಆದಿದ್ರಾವಿಡ, ರೆಡ್ಡಿ, ಮಡಿವಾಳ, ನಾಯಕ, ಲಿಂಗಾಯಿತ, ಶಿಳ್ಳೇಕ್ಯಾತ, ಕಮ್ಮಾರ ಜನಾಂಗದವರಿದ್ದಾರೆ. ಶಿಳ್ಳೇಕ್ಯಾತ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೫೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೮೧೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨೭ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಮಿಡಿಗೇಶಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಮಿಡಿಗೇಶಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಮಿಡಿಗೇಶಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೭೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ,

ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೫೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೬ ಅಂಗಡಿಗಳಿವೆ.

ಲಕ್ಷ್ಮೀನಾರಾಯಣರೆಡ್ಡಿ ಎಂಬ ಸುಪ್ರಸಿದ್ಧ ಪಾರಂಪರಿಕ ವೈದ್ಯರಿದ್ದು ಇವರು ಮೂಳೆ ಮುರಿತಕ್ಕೆ ಖ್ಯಾತ ಚಿಕಿತ್ಸಕರಾಗಿ ರಾಷ್ಟ್ರಮಟ್ಟದಲ್ಲಿ ಹೆಸರಾಗಿದ್ದರು. ಪ್ರಸ್ತುತ ಇವರ ಮಕ್ಕಳು ನಾಟಿ ವೈದ್ಯಕೀಯವನ್ನು ಮುಂದುವರಿಸುತ್ತಿದ್ದಾರೆ.

ಗ್ರಾಮದಲ್ಲಿ ಆಂಜನೇಯ, ಸಿದ್ದೇಶ್ವರ, ಮಾರಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ನಾರಪ್ಪನಹಳ್ಳಿ

ನಾರಪ್ಪನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೬.೦೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬೆಟ್ಟದ ಸಾಲು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಬೆಟ್ಟದ ಸಾಲು ಪ್ರದೇಶವಾಗಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ತೋಳ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಎರಡು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು, ೫ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ರೆಡ್ಡಿ ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ರೆಡ್ಡಿ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೬೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೩೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೯ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ, ಜೋಳ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ. ್ರಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬೇಡತ್ತೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬೇಡತ್ತೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬೇಡತ್ತೂರು ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೫.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ನರಸಿಂಹಸ್ವಾಮಿ ದೇವಾಲಯವಿದೆ. ಪ್ರತಿ ವರ್ಷ ಜಾತ್ರೆಯನ್ನು ಆರತಿ, ಹರಕೆಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ನಾಗಲಾಪುರ

ನಾಗಲಾಪುರ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೪.೧೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ನಾಗದೇವತೆ ತೆಲುಗು ಮೂಲ ನಾಗಲು ಕನ್ನಡದಲ್ಲಿ ನಾಗಲಾಪುರವಾಗಿದೆ.

ಬಾಬುರೆಡ್ಡಿ ಎಂಬ ವ್ಯಕ್ತಿಯು ಈ ಗ್ರಾಮವನ್ನು ಆಳ್ವಿಕೆ ಮಾಡುತ್ತಿದ್ದರು. ಆದ್ದರಿಂದ ಈ ಗ್ರಾಮಕ್ಕೆ ಬಾಬಯ್ಯನಪಾಳ್ಯ ಎಂಬ ಮತ್ತೊಂದು ಹೆಸರಿದೆ.

ಗ್ರಾಮವು ಬೆಟ್ಟದ ಸಾಲು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಬೆಟ್ಟದ ಸಾಲು ಪ್ರದೇಶವಾಗಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳು, ೪ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ರೆಡ್ಡಿಗರು, ಕಮ್ಮಾರ, ಗೊಲ್ಲ, ನಾಯಕ ಜನಾಂಗದವರಿದ್ದಾರೆ. ಕುರುಬ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೨೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೩೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ

ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬೇಡತ್ತೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬೇಡತ್ತೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬೇಡತ್ತೂರು ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೮೦.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಹೋಟೆಲ್‌ಗಳು ಹಾಗೂ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಒಂದು ಹಾಸ್ಟೆಲ್ ಇದೆ. ಪಶುವೈದ್ಯಕೀಯ ಆಸ್ಪತ್ರೆ ಇದ್ದು ವೈದ್ಯರು ಇದ್ದಾರೆ. ಇಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇದೆ.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಆರತಿ ಹಾಗೂ ಬಲಿಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ನಾಗೇನಹಳ್ಳಿ

ನಾಗೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೫೧.೮೯ ಹೆಕ್ಟೇರ್. ಕಂದಾಯ ಗ್ರಾಮವಾಗಿದೆ. ನಾಗಪ್ಪ ಎಂಬ ವ್ಯಕ್ತಿಯಿಂದ ನಾಗನಹಳ್ಳಿ ಎಂಬ ಹೆಸರು ಬಂದಿರಬಹುದು.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕಪ್ಪುಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕರಡಿ, ನರಿ, ತೋಳ ಕಂಡುಬರುತ್ತವೆ. ಉಳಿದಂತೆ ವಿಷಪೂರಿತವಾದ ವಿವಿಧ ಜಾತಿಯ ಹಾವುಗಳು ಕಂಡುಬರುತ್ತವೆ.

ಪಕ್ಷಿಗಳಾದ ಗಿಳಿ, ಮರಕುಟಿಕ, ಹದ್ದು, ಗರುಡ ಮೊದಲಾದವು ಕಂಡುಬರುತ್ತವೆ. ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆಗಳನ್ನು ಸಾಕಿದ್ದು ಕುರಿ ಮೇಕೆಗಳನ್ನು ಸಾಕಿದ್ದಾರೆ. ಉಳಿದಂತೆ ಸಾಕು ಪಕ್ಷಿಗಳಾದ ನಾಟಿ ಕೋಳಿಗಳನ್ನು ಸಾಕಿರುವರು.

ಕಳೆದೆರಡು ವರ್ಷಗಳಿಂದಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ದೊಡ್ಡ ಹಳ್ಳಿಯಿದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ಸ್ವಲ್ಪ ಪ್ರಮಾಣದ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆಬಾವಿಗಳಿದ್ದು ಗ್ರಾಮ ಪಂಚಾಯ್ತಿಯು ಕಿರುನೀರು

ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಹೆಚ್ಚು ಸಾರ್ವಜನಿಕ ನಲ್ಲಿಗಳಿವೆ (೦೮).

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೨೧ ಮನೆಗಳನ್ನು ಹೊಂದಿರುವ ಗ್ರಾಮವು ೬೦೬ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗಂಡು ೩೧೧, ಹೆಣ್ಣು ೨೯೫ ಜನಸಂಖ್ಯೆ ಇದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆಗಳಿವೆ. ರಾಗಿಮುದ್ದೆ ಮತ್ತು ಅನ್ನ ಸಾಂಬಾರ್ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್ ವಸತಿ ಹಾಗೂ ಜನತಾ ಯೋಜನೆಯಡಿ ಕೆಲವು ಮನೆಗಳಾಗಿವೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಮತ್ತು ಶೌಚಾಲಯ ವ್ಯವಸ್ಥೆಗಳು ಆಗಿವೆ. ಗ್ರಾಮದಲ್ಲಿ ೨೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ಜೋಳ, ತೊಗರಿ, ಶೇಂಗಾ ಬೆಳೆಯುತ್ತಾರೆ. ಸಾಂಪ್ರದಾಯಿಕ ಶೈಲಿಯ ಒಂದು ಹೈನುಗಾರಿಕೆ ಹಾಗೂ ಒಂದು ಆಧುನಿಕ ಡೈರಿ ಗ್ರಾಮದಲ್ಲಿದೆ. ಗ್ರಾಮಕ್ಕೆ ಸೇರಿದಂತೆ ದೊಡ್ಡ ಹಳ್ಳವಿದ್ದವರು ನೀರಿಲ್ಲದ ಕಾರಣ ಯಾವುದೇ ಮೀನುಗಾರಿಕಾ ಚಟುವಟಿಕೆಗಳು ಕಂಡುಬರುವುದಿಲ್ಲ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳು ಸೇರಿದಂತೆ ೬ ಜನ ಸರ್ಕಾರಿ ನೌಕರರಿದ್ದು ವಕೀಲರು, ಪ್ರಾಧ್ಯಾಪಕರು, ಡಾಕ್ಟರ್ ಆಗಿಯೂ ಸೇವೆ ಸಲ್ಲಿಸುವ ನಾಲ್ಕು ಜನ ಇದ್ದಾರೆ.

ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ನಡೆಸುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಕೂಲಿಗೆ ಹೋಗುವವರು ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಬಡವನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಗ್ರಾಮದಲ್ಲಿ ಇಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿಯು ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಡವನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಬೇರೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚಂದ್ರಗಿರಿ ಅಂಚೆ ಕಛೇರಿಗೆ ಸೇರಿದೆ. ಗ್ರಾಮದಲ್ಲಿ ಚರ ದೂರವಾಣಿ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ, ವ್ಯಾಜ್ಯಗಳು ಗ್ರಾಮದ ಹಿರಿಯರು, ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಒಂದು ಸ್ತ್ರೀಶಕ್ತಿ ಸಂಘ ಹಾಗೂ ಎಂಟು ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಒಟ್ಟು ೨೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಒಬ್ಬರು ಸಹಾಯಕರು ಹಾಗೂ ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ. ಎರಡು ಅಂಗಡಿಗಳಿವೆ.

ಗ್ರಾಮದಲ್ಲಿ ಮೂರು ದೇವಾಲಯಗಳಿವೆ. ಆಂಜನೇಯ, ಮಾರಮ್ಮ, ಲಕ್ಷ್ಮಿ ದೇವಾಲಯಗಳಿವೆ. ಪ್ರತಿವರ್ಷ ಮಾರಮ್ಮನ ಜಾತ್ರೆಯನ್ನು ಹರಕೆ ಹಾಗೂ ಬಲಿ ಕೊಡುವ ಆಚರಣೆಯೊಂದಿಗೆ ಆಚರಿಸುವರು. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ನಾಗೇನಹಳ್ಳಿ

ನಾಗೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೨೦.೫೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮದಲ್ಲಿನ ನಾಗರಕಲ್ಲುಗಳಿಂದಲೇ

ನಾಗೇನಹಳ್ಳಿ ಎನ್ನುವ ಗ್ರಾಮ ಹೆಸರಾಗಿದೆ ಎಂದು ಗ್ರಾಮಸ್ಥರು ಹೇಳುತ್ತಾರೆ.

ಗ್ರಾಮದ ಬಹಳಷ್ಟು ಜಮೀನು ಖುಷ್ಕಿ ಜಮೀನಾಗಿದ್ದು ಬಾಗಾಯ್ತು ಜಮೀನು ಸಹ ಇಲ್ಲಿದೆ. ತರಿ ಜಮೀನು ಅಲ್ಪ ಪ್ರಮಾಣದಲ್ಲಿದೆ. ಗ್ರಾಮದ ಪಶ್ಚಿಮ ದಿಕ್ಕಿಗೆ ಜಯಮಂಗಲಿ ನದಿಯಿದೆ. ಮಳೆಗಾಲದಲ್ಲಿ ಚೆನ್ನಾಗಿ ಮಳೆ ಸುರಿದಾಗ ಈ ನದಿಯು ಹರಿಯುತ್ತದೆ. ಆಗ ಗ್ರಾಮದಲ್ಲಿ ಅಂತರ್ಜಲ ಮೇಲೇರುತ್ತದೆ.

ಈ ಗ್ರಾಮಕ್ಕೆ ಕೆರೆಯಿಲ್ಲ ಆದರೆ ಕುಂಟೆಗಳಿವೆ. ಅವುಗಳೆಂದರೆ ಕರಿಯಪ್ಪನ ಕುಂಟೆ, ಚೆನ್ನಪ್ಪಯ್ಯನ ಕುಂಟೆ, ಆದಿನಾರಾಯಣಪ್ಪ ಕುಂಟೆ ಎನ್ನುವ ನೀರಿನ ಕುಂಟೆಗಳು ಚೆನ್ನಾಗಿ ಮಳೆ ಸುರಿದಾಗ ತುಂಬುತ್ತವೆ. ಆಗ ದನಕರುಗಳು ಮತ್ತು ಮೇಕೆ, ಕುರಿಗಳಿಗೆ ಕುಡಿಯಲು ನೀರು ದೊರೆಯುತ್ತದೆ. ಅಲ್ಲದೆ ಈ ಕುಂಟೆಗಳ ನೀರು ಭೂಮಿಯಲ್ಲಿ ಇಂಗಲ್ಪಟ್ಟು ಅಂತರ್ಜಲ ಪೂರೈಕೆ ಕಾರಣವಾಗಿದೆ. ನದಿ ಮತ್ತು ಕುಂಟೆಗಳು ಈ ಪ್ರದೇಶದಲ್ಲಿ ಉತ್ತಮವಾದ ಮಳೆಯಾದಾಗ ತುಂಬಿ ಹರಿದು ಅಂತರ್ಜಲವು ಬಹಳ ಬೇಗ ಮೇಲೇರಲು ಕಾರಣವಾಗುತ್ತದೆ. ಈ ಪ್ರದೇಶದಲ್ಲಿ ಮರಳು ಮಿಶ್ರಿತ ಮಣ್ಣಿದೆ. ಅಲ್ಲದೆ ಬಹಳಷ್ಟು ಕೆಂಪು ಮಣ್ಣು ಸಹ ಇಲ್ಲಿದೆ. ನದಿ ಮತ್ತು ಕುಂಟೆಗಳ ನೀರಿನಿಂದ ಗ್ರಾಮಕ್ಕೆ ಕೆರೆಯಿಲ್ಲ ಎಂಬ ಕೊರತೆ ತುಂಬಿದಂತಾಗಿದೆ.

ನಾಗೇನಹಳ್ಳಿ ಗ್ರಾಮದಲ್ಲಿ ರೆಡ್ಡಿ ಒಕ್ಕಲಿಗರು ಜನಾಂಗದವರು ಪ್ರಧಾನ ಸಮುದಾಯದವರಾಗಿದ್ದಾರೆ. ಕುರುಬರು, ನೇಕಾರರು, ನಾಯಕರು, ಅಗಸ ಜನಾಂಗದವರು ಕಿರು ಸಮುದಾಯದವರಾಗಿದ್ದಾರೆ. ಈ ಗ್ರಾಮದಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳು ಬಳಕೆಯಲ್ಲಿವೆ.

ಇಲ್ಲಿ ಕಾಂಕ್ರೀಟ್ ಮನೆಗಳು, ಮಣ್ಣಿನ ಮನೆ, ಗುಡಿಸಲು ಮನೆ, ಹೆಂಚಿನ ಮನೆ, ಕಲ್ನಾರು (ಶೀಟಿನ) ಮನೆಗಳು ಕಂಡುಬರುತ್ತವೆ. ಒಟ್ಟು ೬೮ ಮನೆಗಳನ್ನು ಹೊಂದಿದ್ದು ೨೫೦ ಜನಸಂಖ್ಯೆ ಹೊಂದಿದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ಗ್ರಾಮದ ಪ್ರಧಾನ ಆಹಾರವು ರಾಗಿಮುದ್ದೆಯಾಗಿದೆ. ಅಪ್ರದಾನ ಆಹಾರವಾಗಿ ಚಪಾತಿ, ಅನ್ನ, ಉಪ್ಪಿಟ್ಟನ್ನು ಬಳಸುವರು. ವಿಶೇಷ ಆಹಾರವಾಗಿ ಹೋಳಿಗೆ, ಕಡುಬು, ಬಾಡೂಟವನ್ನು ಗ್ರಾಮದಲ್ಲಿ ಬಳಸುತ್ತಾರೆ.

ಗ್ರಾಮದಲ್ಲಿ ಉತ್ತಮ ರಸ್ತೆ ಸೌಲಭ್ಯವಿದ್ದು ಖಾಸಗಿ ಬಸ್‌ಗಳ ವಿರಳ ಸಂಚಾರವಿದೆ. ಗ್ರಾಮದಲ್ಲಿ ವಿವಿಧ ರೀತಿಯ ವಾಹನಗಳಿವೆ. ಅವುಗಳಲ್ಲಿ ಸಾಂಪ್ರದಾಯಿಕ ವಾಹನಗಳಾದ ಎತ್ತಿನ ಟೈರ್ ಚಕ್ರದ ಗಾಡಿಯು ಇಲ್ಲಿ ಬಳಕೆಯಲ್ಲಿದೆ. ಅಲ್ಲದೆ ಆಧುನಿಕ ವಾಹನಗಳಾದ ಟ್ರ್ಯಕ್ಟರ್‌ಗಳು, ಬೈಕ್‌ಗಳು, ಆಟೋ, ಟಿವಿಎಸ್‌ಗಳು, ಸೈಕಲ್‌ಗಳು ಗ್ರಾಮದಲ್ಲಿ ಜನಸಂಚಾರ ಮತ್ತು ವಸ್ತು ಸಾಗಾಟಕ್ಕೆ ಸಾರಿಗೆ ವ್ಯವಸ್ಥೆಯಲ್ಲಿ ಬಳಸಲ್ಪಡುತ್ತದೆ.

ಈ ಮೂಲಕವಾಗಿ ಗ್ರಾಮದಲ್ಲಿ ಗ್ರಾಮದ ಹೊರಗಿನ ವ್ಯವಸ್ಥೆಯೊಂದಿಗೆ ಸಂಪರ್ಕ ಪಡೆಯುವಂತಾಗುತ್ತದೆ. ಈ ಗ್ರಾಮದಲ್ಲಿ ರಾಗಿ, ಮುಸುಕಿನ ಜೋಳ ಬೆಳೆಯನ್ನು ಮುಖ್ಯ ಬೆಳೆಗಳಾಗಿ ಬೆಳೆಯುತ್ತಾರೆ. ಉಪಬೆಳೆಯಾಗಿ ಉದ್ದು, ಅವರೆ, ತೊಗರಿ, ಅಲಸಂದೆ ಬೆಳೆಗಳನ್ನು ಬೆಳೆಯುತ್ತಾರೆ. ರಾಗಿ ಬೆಳೆಯು ಆಹಾರದ ಪ್ರಧಾನ ಬೆಳೆಯಾಗಿದೆ. ಕೊಳವೆಬಾವಿಗಳ ನೀರಿನಾಶ್ರಯದಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ರೇಷ್ಮೆ ತೋಟ, ಹಿಪ್ಪುನೇರಳೆ ತೋಟಗಳನ್ನು ಬೆಳೆಯುತ್ತಾರೆ. ಈ ಮೂಲಕವಾಗಿ ರೇಷ್ಮೆ ಹುಳು ಸಾಕಾಣಿಕೆ ಮಾಡಿ ರೇಷ್ಮೆ ಗೂಡು ಪಡೆದು ಉತ್ತಮ ಬೆಲೆಗೆ ಮಾರಾಟ ಮಾಡುವರು. ರಾಗಿ, ಮುಸುಕಿನ ಜೋಳ, ರೇಷ್ಮೆ ಗೂಡು, ಮೆಣಸಿನಕಾಯಿ ಇವು ವ್ಯಾಪಾರಗಾರರಿಗೆ ಮಾರಾಟ ಮಾಡಿ ಉತ್ತಮ ಬೆಲೆಯನ್ನು ಪಡೆಯುತ್ತಾರೆ.

ಗ್ರಾಮದ ಪ್ರದೇಶದಲ್ಲಿ ದಟ್ಟಾರಣ್ಯವು ಇಲ್ಲವಾಗಿದ್ದು ಇರುವ ಕುರುಚಲು ಪ್ರದೇಶಗಳ ಕಾಡಿನಲ್ಲಿ ಕಾಡುಮೊಲ, ಕಾಡುಹಂದಿ, ನರಿ, ನಾಗರಹಾವು ಇತ್ಯಾದಿ ಪ್ರಾಣಿಗಳನ್ನು ಕಾಣಬಹುದು. ಅಲ್ಲದೆ ಕೌಜ, ಗೊರವಂಕ, ಬೆಳವ ಇತ್ಯಾದಿ ಪಕ್ಷಿಗಳು ಇಲ್ಲಿ ಕಂಡುಬರುತ್ತವೆ. ಬೇಟೆಯಾಡುವುದು ಸರ್ಕಾರದಿಂದ ನಿಷೇಧಿಸಿರುವುದು ಕಂಡುಬಂದರೂ ತೆರೆ ಮರೆಯಲ್ಲಿ ಪ್ರಾಣಿಗಳ ಬೇಟೆಯಾಡಿ ಮಾಂಸದೂಟ ಮಾಡುವುದು ಇಲ್ಲಿ ತಿಳಿದುಬರುತ್ತದೆ.

ಈ ಗ್ರಾಮದಲ್ಲಿ ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ನಾಲ್ಕು ಸ್ತ್ರೀಶಕ್ತಿ ಸಂಘ, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದೆ. ಈ ಶಾಲೆಯಲ್ಲಿ ಕನ್ನಡ ಮಾಧ್ಯಮವಿದೆ. ಇಲ್ಲಿ ೬ ಬಾಲಕರು ಮತ್ತು ೮ ಬಾಲಕಿಯರು ಸೇರಿ ಒಟ್ಟಾರೆ ೧೪ ಜನ ವಿದ್ಯಾರ್ಥಿಗಳಿದ್ದು ವ್ಯಾಸಂಗ ನಿರತರಾಗಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಈ ಮೂಲಕವಾಗಿ ಶೈಕ್ಷಣಿಕ ಪ್ರಗತಿಗೆ ಈ ಗ್ರಾಮದ ಶಾಲೆಯ ಗ್ರಾಮಕ್ಕೆ ಆಧಾರವಾಗಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಸರ್ಕಾರದ ಸಮುದಾಯ ಸೌಲಭ್ಯಗಳು ಚಾಲ್ತಿಯಲ್ಲಿವೆ. ೫೧.೩೮% ಸಾಕ್ಷರತೆ ಇದೆ.

ನಾಗೇನಹಳ್ಳಿ ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಗೆ ಸೇರಿದ್ದು ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದೆ. ಅಲ್ಲದೆ ಈ ಗ್ರಾಮದಲ್ಲಿ ಕಡಗತ್ತೂರು ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ ಸೇರಿದ್ದು ಕಡಗತ್ತೂರು ಗ್ರಾಮ ಪಂಚಾಯ್ತಿಯ ವ್ಯಾಪ್ತಿಗೆ ಒಳಪಟ್ಟಿದೆ. ತುಮಕೂರು

ಲೋಕಸಭಾ ಕ್ಷೇತ್ರಕ್ಕೆ ಈ ಗ್ರಾಮ ಸೇರಿದೆ. ಒಬ್ಬರು ನೌಕರರಿದ್ದಾರೆ.

ಆಂಜನೇಯ ದೇವಾಲಯವಿದೆ. ನಾಗರ ಕಲ್ಲುಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

**ನವಿಲನಡುಕು**

ನವಿಲನಡುಕು ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೭೮.೧೭ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ನವಿಲುಗಳು ಅಡಗುತ್ತಿದ್ದ ಸ್ಥಳವಾಗಿ ನವಿಲಡಕು ಎಂದಾಗಿದೆ. ನವಿಲಾಡುಕು – ನವಿಲಾಡುಕಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಬೇವು, ಹುಣಸೆ, ನೇರಳೆ, ಹಿಪ್ಪೆ, ಜಾಲಾರಿ ಮತ್ತು ಮಾವಿನ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಕೃಷ್ಣಮೃಗ, ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಕಾಗೆ, ನವಿಲು, ಗರುಡ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೧೩೩ ಎಮ್ಮೆ, ೨೬೬ ಕುರಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೯ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೬೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೦೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೧೨ ಮತ್ತು ಹೆಂಗಸರು ೨೮೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೯ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಮುಸುಕಿನ ಜೋಳ, ಸೂರ್ಯಕಾಂತಿ, ಅಡಿಕೆ ಮತ್ತು ತೆಂಗನ್ನು ಬೆಳೆಯಲಾಗುತ್ತಿದೆ. ಅಡಿಕೆ ಮತ್ತು ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಕಂದಾಯ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೪ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೊಂಡವಾಡಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಂಡವಾಡಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೊಂಡವಾಡಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೭೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂವರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೫.೭%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ವಿಭಿನ್ನ ರೀತಿಯ ಪುಸ್ತಕವನ್ನು ಹೊಂದಿರುವ ಒಂದು ಗ್ರಂಥಾಲಯವಿದ್ದು ಕಾರ್ಯ ನಿರ್ವಹಣೆಗಾಗಿ ಒಬ್ಬರು ಗ್ರಂಥಪಾಲಕರನ್ನು ಆಯೋಜಿಸಲಾಗಿದೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮವು ಎಲ್ಲಾ ರೀತಿಯ ಜನಪದ ಕ್ಷೇತ್ರಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ.

ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೩ ಹೋಟೆಲ್‌ಗಳಿದ್ದು ೫ ಅಂಗಡಿಗಳಿವೆ. ಗ್ರಾಮದಲ್ಲಿ ಆಂಜನೇಯಸ್ವಾಮಿ, ಚೌಡೇಶ್ವರಿ, ರಾಮಲಿಂಗೇಶ್ವರಸ್ವಾಮಿ, ಮುಂತಾದ ಪ್ರಸಿದ್ಧ ದೇವಾಲಯಗಳಿವೆ. ಪ್ರತಿ ವರ್ಷ ಅದ್ಧೂರಿಯಾಗಿ ಜಾತ್ರೆ ನಡೆಯುತ್ತದೆ. ಗ್ರಾಮದ ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದೇವರಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ನಿಟ್ರಹಳ್ಳಿ

ನಿಟ್ರಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೫೦.೨೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ನರಿ, ಹಂದಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಗೂಬೆ, ಕೋಗಿಲೆ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ೭೩ ಎಮ್ಮೆ, ೮೦೭ ಕುರಿ, ೨೭೧ ಮೇಕೆ, ೧೬ ಹಂದಿಗಳನ್ನು ಸಾಕಿದ್ದಾರೆ. ೭೭ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಮತ್ತು ಜಯಮಂಗಲಿ ನದಿ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿದ್ರಾವಿಡ, ಒಕ್ಕಲಿಗ, ನಾಯಕ, ಲಿಂಗಾಯಿತ, ಕುರುಬ, ಬ್ರಾಹ್ಮಣ, ಭಜಂತ್ರಿ, ಅಗಸ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೬೧೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೩೪೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೧೨೮ ಮತ್ತು ಹೆಂಗಸರು ೧೨೧೫ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ, ಭತ್ತ ಮತ್ತು ಮುಸುಕಿನ ಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಸೂರ್ಯಕಾಂತಿ, ಅಡಿಕೆ, ದಾಳಿಂಬೆ, ಬಾಳೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಮತ್ತು ಪಶುಚಿಕಿತ್ಸಾಲಯವನ್ನು ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಕೆಇಬಿ, ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೧೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ಭಜಂತ್ರಿ ಜನಾಂಗದ ೩೮ ವರ್ಷದ ಜಿಲ್ಲಾಧಿಕಾರಿ ಗೋವಿಂದರಾಜು ಈ ಗ್ರಾಮದವರು. ಪ್ರೊ॥ ಎನ್.ರಾಮಯ್ಯ ಗೌರಿಬಿದನೂರಿನ ನ್ಯಾಷನಲ್ ಕಾಲೇಜಿನಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡಗದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಪುರವರದಲ್ಲಿ ಪಂಚಾಯಿತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡಗದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡಗದಾಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ೬೫ ಮಕ್ಕಳಿದ್ದಾರೆ. ಇಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್‍ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೭೫%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕಾಫಿ–ಟೀ

ದೊರೆಯುವ ೨ ಹೋಟೆಲ್‌ಯಿದ್ದು ೫ ಅಂಗಡಿಗಳಿವೆ. ನ್ಯಾಯಬೆಲೆ ಅಂಗಡಿಯಿದೆ.

ಗ್ರಾಮದಲ್ಲಿ ಮಾರಮ್ಮ, ಹನುಮಂತರಾಯ, ದುರ್ಗಮ್ಮ, ಆದಿಲಕ್ಷ್ಮಿ, ಮಹೇಶ್ವರಮ್ಮ, ಲಕ್ಷ್ಮೀದೇವಿ, ಧರ್ಮಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮ ಮತ್ತು ಮಹೇಶ್ವರಮ್ಮನ ಅದ್ಧೂರಿಯಾಗಿ ಜಾತ್ರೆ ನಡೆಯುತ್ತದೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಬಲಿ ಹಾಗೂ ಹರಕೆಯೊಂದಿಗೆ ಮಾರಮ್ಮನ ಹಬ್ಬವನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ನಿಟ್ರಹಳ್ಳಿ ಕ್ರಾಸ್

ನಿಟ್ರಹಳ್ಳಿ ಕ್ರಾಸ್ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೫೨.೨೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಲಿಂಗಜ್ಜನಪಾಳ್ಯವೆಂದು ಕರೆಯುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಹೊಂಗೆ, ಮಾವು, ನೇರಳೆ, ಅಕೇಶಿಯಾ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಪಾರಿವಾಳ, ಕೋಗಿಲೆ, ಗೂಬೆ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆ, ಹಂದಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಮತ್ತು ಜಯಮಂಗಲಿ ನದಿ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಅಗಸ, ಕೋರಮರು, ಬೋವಿ, ಆದಿಕರ್ನಾಟಕ, ಬುಡಬುಡಿಕೆ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೯೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೦೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೦೬ ಮತ್ತು ಹೆಂಗಸರು ೧೯೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೮ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಸೂರ್ಯಕಾಂತಿ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಹಾಗೂ ಪಶು ಚಿಕಿತ್ಸಾಲಯ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ವಿದ್ಯುತ್, ಶಿಕ್ಷಣ, ಸಾರಿಗೆ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೧೦ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡಗದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡಗದಾಲ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡಗದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡಗದಾಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೨೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಸರ್ಕಾರಿ ಪ್ರೌಢಶಾಲೆಯಲ್ಲಿ ೧೫೮ ಮಕ್ಕಳು, ೮ ಜನ ಶಿಕ್ಷಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೫೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೨ ಹೋಟೆಲ್‌ಯಿದ್ದು ೨ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಕಣಿವೆ ಮಾರಮ್ಮದೇವಿ, ರಾಮದೇವರ ದೇವಾಲಯಗಳಿವೆ. ಮಾರಮ್ಮನಿಗೆ ಆರತಿ ಮಾಡುವರು. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ನಂಜಾಪುರ

ನಂಜಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೬.೯೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಹದ್ದು, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ೩ ನಾಟಿಹಸು ಮತ್ತು ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೫ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨ ಸಾರ್ವಜನಿಕ ನಲ್ಲಿಗಳಿದ್ದು

ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೩೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೩೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೭೯ ಮತ್ತು ಹೆಂಗಸರು ೫೫ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೭ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ಮುಸುಕಿನಜೋಳ, ಅಡಿಕೆ ಬಾಳೆ ಮತ್ತು ತೆಂಗನ್ನು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಕಸೂತಿ ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡಗದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡಗದಾಲ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡಗದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡಗದಾಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. --- ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೧ ಹೋಟೆಲ್‌ಯಿದ್ದು ೧ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಉಡಸಲಮ್ಮ ದೇವಾಲಯಗಳಿವೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಬಲಿ ಹಾಗೂ ಹರಕೆಯೊಂದಿಗೆ ಉಡಸಲಮ್ಮನ ಹಬ್ಬವನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ನಾಗಮ್ಮನಪಾಳ್ಯ

ನಾಗಮ್ಮನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೭೦.೭೯ ಹೆಕ್ಟೇರ್ ಹೊಂದಿದ್ದು ಕೋಡಗದಾಲ ಭೂ ವಿಸ್ತೀರ್ಣದಲ್ಲಿ ಸೇರಿರುವ ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಮಾವು, ಅರಳಿ, ಹೊಂಗೆ, ಬೇವು, ಅಕೇಶಿಯಾ, ನೀಲಗಿರಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೧೨೦ ಎಮ್ಮೆ, ೧೯೦ ಕುರಿ, ೩೦ ಮೇಕೆಗಳನ್ನು ಸಾಕಿದ್ದಾರೆ. ೫೦ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಮತ್ತು ಜಯಮಂಗಲಿ ನದಿ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಬಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಅಗಸ, ಒಕ್ಕಲಿಗ, ವಿಶ್ವಕರ್ಮ, ಸಾದರು, ಬ್ರಾಹ್ಮಣ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೭೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೪೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೭೬ ಮತ್ತು ಹೆಂಗಸರು ೧೭೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಡಿಕೆ, ಶೇಂಗಾ, ದಾಳಿಂಬೆ, ಬಾಳೆ ಮತ್ತು ತೆಂಗನ್ನು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಕೆಎಸ್‌ಆರ್‌ಟಿಸಿ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಆರ್ಮಿಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಒಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡಗದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡಗದಾಲ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡಗದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡಗದಾಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೭.೩೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ನ್ಯಾಯಬೆಲೆ ಅಂಗಡಿಯಿದೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮವು ಎಲ್ಲಾ ರೀತಿಯ ಜನಪದ ಕ್ಷೇತ್ರಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ.

ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

**ನರಸಾಪುರ**

ನರಸಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೬.೧೯ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ನೇರಳೆ, ಮಾವು, ಹಲಸು, ಬೇವು ಮತ್ತು ನೀಲಗಿರಿ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಕಾಗ, ಪಾರಿವಾಳ, ಗಿಳಿ, ಗೂಬೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೮ ಎಮ್ಮೆ, ೧೦ ಕುರಿ, ೬ ಮೇಕೆಗಳನ್ನು ಸಾಕಿದ್ದಾರೆ. ೨೧ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬ್ರಾಹ್ಮಣ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ. ಒಟ್ಟು ೧೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೦ ಮತ್ತು ಹೆಂಗಸರು ೨೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೪ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಶೇಂಗಾ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಶಿಕ್ಷಣ ಇಲಾಖೆಗೆ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಕಮ್ಮಾರರು ಮತ್ತು ಟೈಲರಿಂಗ್ ಕೆಲಸ ಮಾಡುವಂತಹ

ಒಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡ್ಲಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡ್ಲಾಪುರ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡ್ಲಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡ್ಲಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಗ್ರಾಮದ ಒಟ್ಟು ಸಾಕ್ಷರತೆಯು ೪೪.೮೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಮುತ್ತುರಾಯ ದೇವಾಲಯವಿದೆ. ಮುತ್ತುರಾಯ ದೇವರಿಗೆ ಆರತಿ ಮಾಡುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ನಲ್ಲಹಳ್ಳಿ

ನಲ್ಲಹಳ್ಳಿ ಗ್ರಾಮವು ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೧೮೦.೮೦ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ನಲ್ಲಪ್ಪ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ನಲ್ಲಹಳ್ಳಿ ಎಂದು ಕರೆಯುತ್ತಾರೆ.

ಬಯಲುನಾಡು ಪ್ರದೇಶವಾಗಿದ್ದು ಕೆಂಪು–ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಭೂಮಿಯನ್ನು ಹೊಂದಿದೆ. ಹೊಲದಲ್ಲಿ ಈ ಗ್ರಾಮ ಇರುವುದರಿಂದ ಪ್ರಾಣಿಗಳಾದ ನರಿ, ತೋಳ, ಕರಡಿ, ಮೊಲ ಹಾಗೂ ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ४೫३.೨ ಮಿಮೀ ಮಳೆ ಬೀಳುತ್ತದೆ. ಬ್ರಹ್ಮಸಮುದ್ರ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಒಟ್ಟು ೧೧ ಮನೆಗಳನ್ನು ಹೊಂದಿದ್ದು ೫೭ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಒಕ್ಕಲಿಗ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗು ಮಾತನಾಡುತ್ತಾರೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ವ್ಯವಸಾಯ ಮುಖ್ಯ ಉದ್ಯೋಗವಾಗಿದ್ದು ರಾಗಿ, ಭತ್ತ, ಶೇಂಗಾ ಬೆಳೆಯುತ್ತಾರೆ. ಶಿಕ್ಷಣ ಇಲಾಖೆಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದಾರೆ.

ಮಧುಗಿರಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಇಟಕದಿಬ್ಬನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬ್ರಹ್ಮಸಮುದ್ರ ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೬.೬% ಇದೆ. ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಪೆಟ್ಟೇನಹಳ್ಳಿ

ಪೆಟ್ಟೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೫೭.೭೮ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮವು ಚಂದ್ರಗಿರಿ ಭೂವಿಸ್ತೀರ್ಣದಲ್ಲಿ ಸೇರಿದ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕಪ್ಪು ಮಣ್ಣಿನ ಮಿಶ್ರ ಫಲವತ್ತಾದ ಭೂಮಿಯನ್ನು ಹೊಂದಿದೆ.

ಪ್ರಾಣಿಗಳಾದ ಕಾಡುಹಂದಿ, ಕರಡಿ, ಕಾಡುಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ

ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳು, ೧ ತೆರೆದ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೪ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿವೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ ಜನಾಂಗ ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೪೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೨೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಹಾಗೂ ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೦ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದ್ದು ಸಿಹಿ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಆಧುನಿಕ ವಾಹನಗಳಾದ ೧೦ ದ್ವಿಚಕ್ರ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆಯನ್ನು ಹೊಂದಿದೆ. ಗ್ರಾಮದಲ್ಲಿ ೭ ಮನೆಗಳು ಶೌಚಾಲಯ ಹೊಂದಿವೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ೯೦% ಕೂಲಿ ಮಾಡುವವರಿದ್ದಾರೆ. ಶೇಂಗಾ, ರಾಗಿ, ತೊಗರಿ, ಹೂ ಬೆಳೆಯಲಾಗುವುದು. ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದ್ದು ಒಂದು ಆಧುನಿಕ ಡೈರಿಯೂ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಕೋಟಗಾರ್ಲಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಚಂದ್ರಗಿರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಪಂಚಾಯ್ತಿಯ ಸದಸ್ಯರು ಹಾಗೂ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಂದ್ರಗಿರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಜಕ್ಕೇನಹಳ್ಳಿ ಅಂಚೆ ಕಛೇರಿ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೨ ಮಕ್ಕಳಿದ್ದಾರೆ (ಗಂಡು–೧೪, ಹೆಣ್ಣು–೮). ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೫೭.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ೫ ಸ್ತ್ರೀಶಕ್ತಿ ಸಂಘಗಳು, ೨ ಅಂಗಡಿಗಳು ಗ್ರಾಮದಲ್ಲಿವೆ. ಗ್ರಾಮದಲ್ಲಿ ಗಣಪತಿ, ಮಾರಮ್ಮ ದೇವಾಲಯಗಳಿದ್ದು ಮಾರಮ್ಮನ ಜಾತ್ರೆಯನ್ನು ಹರಕೆ ಹಾಗೂ ಬಲಿ ನೀಡುವುದರೊಂದಿಗೆ ವೈಭವದಿಂದ ಆಚರಿಸುವರು. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಪುಲಮಘಟ್ಟ

ಪುಲಮಘಟ್ಟ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೮೨.೪೧

ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಹುಲಿ ವಾಸದ ಸ್ಥಳ, ಬೆಟ್ಟ ಎಂಬ ಅರ್ಥದಲ್ಲಿ ಈ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರಿತವಾದ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ತೋಳ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗರುಡ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಮಳೆಗಾಲದಲ್ಲಿ ಸ್ವಲ್ಪ ಪ್ರಮಾಣದ ನೀರು ಸಂಗ್ರಹವಾದಾಗ ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಬಳಸಿಕೊಳ್ಳಲಾಗುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಸಾದರು ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಸಮುದಾಯ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೫೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೫೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೯೧, ಹೆಂಗಸರು ೩೬೫ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೯ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಸಿಹಿ ಊಟ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಮೂರು ಸಾಂಪ್ರದಾಯಿಕ ಎತ್ತಿನ ಗಾಡಿ ಇದೆ. ಟ್ರ್ಯಾಕ್ಟರ್ ಮತ್ತು ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೪೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಶೇಂಗಾ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಸೂರ್ಯಕಾಂತಿ, ಅಡಿಕೆ, ತೆಂಗು ಮತ್ತು ತರಕಾರಿ ಬೆಳೆಯುತ್ತಾರೆ. ಅಡಿಕೆ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಒಂದು ಹೈನುಗಾರಿಕೆ ಹಾಗೂ ಒಂದು ಆಧುನಿಕ ಡೈರಿ ಗ್ರಾಮದಲ್ಲಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಇದ್ದರೂ ಸಾಕಷ್ಟು ಪ್ರಮಾಣದ ನೀರಿಲ್ಲದ ಕಾರಣ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ.

ಗ್ರಾಮದಲ್ಲಿ ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ ಹಾಗೂ ವಕೀಲರು ಸೇರಿದಂತೆ ಒಟ್ಟು ೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವವರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ಎಲ್ಲರೂ ವ್ಯವಸಾಯವನ್ನು ಮಾಡುತ್ತಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರಂಟವಾಳಲು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಟವಳಲು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು

ಗ್ರಾಮವು ರಂಟವಳಲು ಅಂಚೆ ಕಚೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಹಾಗೂ ಇಬ್ಬರು ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೫.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ, ವೀರಭದ್ರಸ್ವಾಮಿ ದೇವಾಲಯಗಳಿವೆ. ಮಾರಮ್ಮನ ಜಾತ್ರೆಯನ್ನು ಹರಕೆ ಹಾಗೂ ಬಲಿ ಕೊಡುವುದರೊಂದಿಗೆ ಆಚರಿಸುವರು. ಉಳಿದಂತೆ ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

**ಪಡಸಾಲಹಟ್ಟಿ**

ಪಡಸಾಲಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೦೫.೩೫ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದಲ್ಲಿ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೭ ಸಾರ್ವಜನಿಕ ನಲ್ಲಿಗಳು, ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗೊಲ್ಲ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೭೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೯೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿ, ಟ್ರ್ಯಕ್ಟರ್, ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

೧೦% ವ್ಯವಸಾಯ ಹಾಗೂ ೯೦% ಕುರಿ ಸಾಕಾಣಿಕೆ ಗ್ರಾಮದ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ, ಭತ್ತ, ಹೂ, ತೆಂಗು ಬೆಳೆಯಲಾಗುವುದು. ಕುರಿ ಸಾಕುವುದು ವ್ಯಾಪಾರದ ಮುಖ್ಯ ಕಸುಬಾಗಿದೆ.

ಸಾಂಪ್ರದಾಯಿಕ ಹೈನುಗಾರಿಕೆ ಗ್ರಾಮದಲ್ಲಿದೆ. ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಹೊಸಕೆರೆ ತಾಲ್ಲೂಕು ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರು ಹಾಗೂ ಒಬ್ಬರು ಸದಸ್ಯರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಹೊಸಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮವು ಹೊಸಕೆರೆ ಅಂಚೆ ಕಛೇರಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಚರ ದೂರವಾಣಿ ದೂರಸಂಪರ್ಕ ಸಾಧನಗಳಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೭೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೪.೩%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್ ಹಾಗೂ ೩ ಅಂಗಡಿಗಳಿವೆ. ನೌಕರಿಯಲ್ಲಿ ಐಟಿಬಿಇ ಇಬ್ಬರು ಸರ್ಕಾರಿ ನೌಕರಿಯಲ್ಲಿದ್ದಾರೆ. ಗ್ರಾಮದಲ್ಲಿ ಒಂದು ಸಮುದಾಯ ಭವನ ಇದೆ.

ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಪ್ರತಿ ವರ್ಷ ಆರತಿ, ಹರಕೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಪಣ್ಣೆ

ಪಣ್ಣೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೮ ಕಿಮೀ ದೂರದಲ್ಲಿರುವ ಜನವಸತಿ ಇಲ್ಲದ ಬೇಚಾರಕ್ ಗ್ರಾಮವಾಗಿದೆ. ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೬೮.೦೯ ಹೆಕ್ಟೇರ್‌ನಲ್ಲಿದೆ. ಬಿಜವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ.

## ಪಾಳ್ಯದಹಳ್ಳಿ

ಪಾಳ್ಯದಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೮ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೧೧೫.೩೩ ಹೆಕ್ಟೇರ್‌ನಲ್ಲಿದ್ದು ಬೇಚಾರಕ್ ಗ್ರಾಮವಾಗಿದೆ. ಗ್ರಾಮವು ಬಿಜವರ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದ್ದು ಜನವಸತಿ ಇಲ್ಲದ ಗ್ರಾಮವಾಗಿದೆ. ಇಲ್ಲಿ ಜಾಲಿ, ನೇರಳೆ, ಹೊಂಗೆ, ಬೇವು ಹಾಗೂ ನೀಲಗಿರಿ ಮರಗಳು ಇರುವುದು ಕಂಡುಬರುತ್ತದೆ.

## ಪೆಮ್ಮಯ್ಯನಪಾಳ್ಯ

ಪೆಮ್ಮಯ್ಯನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೦೩.೩೯ ಹೆಕ್ಟೇರ್ ಹೊಂದಿದ್ದು ಮರಬಳ್ಳಿ ಭೂ ವಿಸ್ತೀರ್ಣದಲ್ಲಿ ಸೇರಿರುವ ಕಂದಾಯ ಗ್ರಾಮವಾಗಿದೆ. ಹಿರಿಕ, ದೊಡ್ಡವನಹಳ್ಳಿ ಎಂಬ ಅರ್ಥದಲ್ಲಿ ಪೆಮ್ಮನಪಾಳ್ಯ ರಚನೆಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಜೇಡಿಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದಲ್ಲಿ ಬೆಟ್ಟ ಹಾಗೂ ಗುಡ್ಡಗಳಿವೆ.

ಗ್ರಾಮವು ನೀಲಗಿರಿ ಅರಣ್ಯ ಪ್ರದೇಶವನ್ನು ಹೊಂದಿದ್ದು ಪ್ರಾಣಿಗಳಾದ ನರಿ, ಕರಡಿ, ಚಿರತೆ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಡುಗ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಕುಂಟೆಯಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೬ ಸಾರ್ವಜನಿಕ ನಲ್ಲಿಗಳು, ೪ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೪೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೧೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೧೦ ಮತ್ತು ಹೆಂಗಸರು ೧೦೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಗ್ರಾಮದಲ್ಲಿ ಒಂದು ಆಧುನಿಕ ಡೈರಿ ಇದೆ. ಶಿಕ್ಷಕರು ಹಾಗೂ ಪೊಲೀಸ್ ಸೇರಿದಂತೆ ಇಬ್ಬರು ಸರ್ಕಾರಿ ನೌಕರರಿದ್ದು ಒಬ್ಬರು ಟೈಲರ್ ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬಿಜವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಿಜವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬಿಜವರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ವಸಹಾಯ ಸಂಘವಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೬೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಅಂಗಡಿಯಿದೆ.

ಗ್ರಾಮದಲ್ಲಿ ಒಂದು ಅಶ್ವತ್ಥಕಟ್ಟೆ ಇದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಪುಟ್ಟೇನಹಳ್ಳಿ

ಪುಟ್ಟೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೭೮.೫೫ ಹೆಕ್ಟೇರ್ ಹೊಂದಿದ್ದು ಶೆಟ್ಟಿಹಳ್ಳಿ ವಿಸ್ತೀರ್ಣದಲ್ಲಿ ಸೇರಿರುವ ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು–ಬಿಳಿಯ ಕಲ್ಲುಗಳಿಂದ ಕೂಡಿದ್ದು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಶೆಟ್ಟಿಹಳ್ಳಿ ಬೆಟ್ಟವನ್ನು ಹೊಂದಿದೆ.

ಗ್ರಾಮವು ಒಂದು ಅರಣ್ಯ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಕರಡಿ, ಚಿರತೆ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಟ್ಟು ೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ.  ಗಂಡಸರು ೪ ಮತ್ತು ಹೆಂಗಸರು ೬ ಜನರಿದ್ದಾರೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ.

ಗ್ರಾಮದಲ್ಲಿ ಶನಿಮಹಾತ್ಮ ದೇವಾಲಯವಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುವರು. ಗ್ರಾಮದಲ್ಲಿ ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಉಳಿದಂತೆ ಯಾವುದೇ ಸೌಲಭ್ಯಗಳು ಕಂಡುಬರುವುದಿಲ್ಲ.

### ಪರ್ತಿಹಳ್ಳಿ

ಪರ್ತಿಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೧೮.೪೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಪರ್ತಿಪಲ್ಲಪ್ಪ ಎಂಬ ವ್ಯಕ್ತಿಯ ಮೂಲದಿಂದ ಪರ್ತಿಪಲ್ಲಿ ಎಂಬ ಗ್ರಾಮದ ಹೆಸರಾಗಿದೆ. ಪರ್ತಿಪಲ್ಲಿ ಎಂಬುದು ಇಲ್ಲಿನ ತೆಲುಗು ಭಾಷೆಯ ಸೊಗಡು ಪಡೆದ ಹೆಸರಾಗಿದೆ. ಇದೇ ಹೆಸರು ಕನ್ನಡ ಭಾಷೆ ಬಳಕೆಯಲ್ಲಿ ಪರ್ತಿಹಳ್ಳಿ ಎಂದು ಬಳಸಲ್ಪಟ್ಟಿದೆ.

ಈ ಗ್ರಾಮವು ಬೆಟ್ಟಗುಡ್ಡಗಳನ್ನು ಹೊಂದಿಲ್ಲ. ಇಲ್ಲಿನ ಪ್ರದೇಶವು ವಿಶಾಲವಾದ ಬಯಲುಸೀಮೆಯಾಗಿದೆ. ಈ ಪ್ರದೇಶದಲ್ಲಿ ಕುಮುದ್ವತಿ ನದಿ ಇದೆ. ಮಳೆಗಾಲದಲ್ಲಿ ತುಂಬಿ ಹರಿಯುತ್ತದೆ. ಹಾಗೆ ಈ ಗ್ರಾಮಕ್ಕೆ ಕೆರೆ ಇದೆ. ಇಲ್ಲಿನ ಪ್ರದೇಶ ಕೆಂಪು ಮಣ್ಣಿನಿಂದ ಕೂಡಿದೆ.

ಈ ಗ್ರಾಮದಲ್ಲಿ ೧೯೮ ಮನೆಗಳಿದ್ದು ೮೬೨ ಜನಸಂಖ್ಯೆ ಪ್ರಮಾಣ ಹೊಂದಿದೆ. ಗ್ರಾಮದಲ್ಲಿ ೬೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ರೆಡ್ಡಿ ಒಕ್ಕಲಿಗರು ಪ್ರಧಾನ ಸಮುದಾಯದವರು. ಉಳಿದಂತೆ ಆದಿದ್ರಾವಿಡ, ಆಚಾರರು, ಬ್ರಾಹ್ಮಣ, ಕುಂಬಾರ ಜನಾಂಗ, ನಾಯಕ, ಆದಿಕರ್ನಾಟಕ, ಬಲಜಿಗ, ಮುಸ್ಲಿಂ, ಅಗಸ, ಭಜಂತ್ರಿ, ಲಿಂಗಾಯಿತ ಜನಾಂಗ ಕಿರುಸಮುದಾಯವಾಗಿದೆ. ಇಲ್ಲಿ ಕನ್ನಡ, ಉರ್ದು ಮತ್ತು ತೆಲುಗು ಭಾಷೆ ಬಳಕೆಯಲ್ಲಿವೆ.

ವಾರ್ಷಿಕವಾಗಿ ೪೫೩.೭ ಮಿಮೀ ಗಳ ಸರಾಸರಿ ಮಳೆ ಪ್ರಮಾಣವಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಈ ಗ್ರಾಮದಲ್ಲಿ ಪ್ರಧಾನ ಬೆಳೆಗಳು, ರಾಗಿ, ಮುಸುಕಿನ ಜೋಳ, ರೇಷ್ಮೆ ಬೆಳೆಗಳಾಗಿವೆ. ಅವರೆ, ಉದ್ದು, ಅಲಸಂದೆ, ತೊಗರಿ ಉಪಬೆಳೆಗಳಾಗಿವೆ. ರಾಗಿ ಆಹಾರ ಬೆಳೆಯಾಗಿದೆ. ರೇಷ್ಮೆ ಗೂಡು, ಮೆಣಸಿನಕಾಯಿ ವಾಣಿಜ್ಯ ಬೆಳೆಗಳಾಗಿವೆ.

ಗ್ರಾಮದಲ್ಲಿ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಬೆಂಗಳೂರಿನ ಖಾಸಗಿ ಕಾರ್ಖಾನೆಗಳಲ್ಲಿ ಗ್ರಾಮದ ೨೨ ಜನ ಕೆಲಸ ಮಾಡುತ್ತಿದ್ದಾರೆ. ವೈದ್ಯರು, ಇಂಜಿನಿಯರ್, ಪೊಲೀಸ್, ಸಾರಿಗೆ ಇಲಾಖೆ ಸೇರಿದಂತೆ ೧೦ ಜನ ಸರ್ಕಾರಿ ನೌಕರರಿದ್ದಾರೆ. ಸರ್ಕಾರಿ ಶಾಲಾ ಶಿಕ್ಷಕರುಗಳು ಇಬ್ಬರಿದ್ದಾರೆ. ಇನ್ನಿತರೆ ಸಣ್ಣ ಕೈಗಾರಿಕೆ ಅಥವಾ ಮಧ್ಯಮ ಕೈಗಾರಿಕೆಗಳು ಇಲ್ಲಿಲ್ಲ. ಒಬ್ಬರು ವೈದ್ಯರು ಹಾಗೂ ನೌಕರರಿದ್ದಾರೆ.

ಈ ಗ್ರಾಮದಲ್ಲಿ ಅಂಗನವಾಡಿ ಕೇಂದ್ರವಿದ್ದು ೩೧ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೨೮ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೯.೨%. ಅಂಚೆ ಕಛೇರಿ, ಹಾಲು ಉತ್ಪಾದಕರ ಸಹಕಾರ ಸಂಘ, ೧ ಹೋಟೆಲ್, ೪ ಕಿರಾಣಿ ಅಂಗಡಿಗಳು, ೯ ಸ್ತ್ರೀಶಕ್ತಿ ಸಂಘಗಳು ಇಲ್ಲಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೯.೯%.

ಗ್ರಾಮದಲ್ಲಿ ಕಾಡು ಇಲ್ಲ. ಇರುವ ಕುರುಚಲು ಪೊದೆಗಳಲ್ಲಿ ದಟ್ಟವಾದ್ದರಿಂದ ಕಾಡುಮೊಲ, ಕಾಡುಹಂದಿ, ನರಿ ಮುಂತಾದ ಕಾಡು ಪ್ರಾಣಿಗಳಿವೆ. ನಾಟಿ ಎತ್ತು, ನಾಟಿ ಹಸು, ಸೀಮೆಹಸು, ಎಮ್ಮೆ, ಮೇಕೆ, ಕುರಿಗಳು ಸಾಕುಪ್ರಾಣಿಗಳಾಗಿವೆ. ಕೋಳಿಹುಂಜಗಳನ್ನು ಸಾಕುತ್ತಾರೆ. ಗ್ರಾಮದ ಮುಖ್ಯ ಆಹಾರ ರಾಗಿಮುದ್ದೆ ಆಗಿದ್ದು ಚಪಾತಿ, ಅನ್ನ, ಉಪ್ಪಿಟ್ಟು ಇವು ವೆ. ಹೋಳಿಗೆ, ಕಡುಬು, ಬಾಡೂಟ ವಿಶೇಷಾಹಾರವಾಗಿವೆ. ವಿಶೇಷ ಹಬ್ಬಗಳ ದಿನಗಳಂದು ಸಿಹಿ ತಿಂಡಿ ತಿನ್ನುವರು.

ಗ್ರಾಮಕ್ಕೆ ಸಾಧಾರಣವಾದ ರಸ್ತೆಯಿದ್ದು ಬಸ್ ಸೌಕರ್ಯ ಇರುವುದಿಲ್ಲ. ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಪರ್ತಿಹಳ್ಳಿ ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ, ಕಡಗತ್ತೂರು ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ ಮತ್ತು ಗ್ರಾಮ ಪಂಚಾಯಿತಿ ಕ್ಷೇತ್ರಕ್ಕೆ ಸೇರಿದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದೆ. ಅಲ್ಲದೆ ಪರ್ತಿಹಳ್ಳಿ ಗ್ರಾಮವು ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಸೇರಿದೆ.

ಗ್ರಾಮದಲ್ಲಿ ಲಕ್ಷ್ಮೀನರಸಿಂಹಸ್ವಾಮಿ, ಬಸರೇಶ್ವರ, ಸುಬ್ರಹ್ಮಣ್ಯೇಶ್ವರ, ಮಾಧವಸ್ವಾಮಿ, ಸಪ್ಲಮ್ಮ, ಮಾರಮ್ಮ ದೇವಸ್ಥಾನಗಳಿವೆ. ಶಿವರಾತ್ರಿ ನಂತರ ಸಪ್ಲಮ್ಮ ದೇವತೆಯ ಜಾತ್ರೆ ನಡೆಯುತ್ತದೆ. ಗ್ರಾಮದಲ್ಲಿ ಯುಗಾದಿ, ಶ್ರೀರಾಮನವಮಿ, ಮಹಾನವಮಿ, ದೀಪಾವಳಿ, ಶಿವರಾತ್ರಿ, ಮೊಹರಂ ಮುಂತಾದ ಹಬ್ಬಗಳನ್ನು ಆಚರಿಸುತ್ತಾರೆ.

## ಪೋಲೇನಹಳ್ಳಿ

ಪೋಲೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿ ೨೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೦೨.೬೮ ಹೆಕ್ಟೇರ್ ಇರುವ ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನಿಂದ ಕೂಡಿದ ಫಲವತ್ತಾದ ಭೂಮಿಯನ್ನು ಹೊಂದಿದೆ ಸಣ್ಣ ಸಣ್ಣ ಗುಡ್ಡಗಳು, ಪೊದೆಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗೀಜುಗ, ಗಿಳಿ, ಪಾರಿವಾಳ ಕಂಡುಬರುತ್ತವೆ. ಹುಣಸೆ, ಮಾವು, ಹಲಸು, ಹೊಂಗೆ ಇತ್ಯಾದಿ ಮರಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಸೀಮೆಹಸು, ಎಮ್ಮೆ, ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ. ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತವೆ. ೪೫೩.೭ ಮಿಮೀ ಮಳೆ ಬೀಳುತ್ತಿದ್ದು ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಹಳೆಯ ಒಂದು ಬಾವಿಯನ್ನು ಕಾಣಬಹುದು.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ..ಶೆಟ್ಟಿಬಣಜಿಗ, ರೆಡ್ಡಿ, ಒಕ್ಕಲಿಗ, ನಾಯಕ, ಭಜಂತ್ರಿ, ಆದಿದ್ರಾವಿಡ, ಮಡಿವಾಳ, ಕುಂಬಾರ, ಮುಸ್ಲಿಂ, ಬ್ರಾಹ್ಮಣ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡ. ತೆಲುಗು ಮತ್ತು ಉರ್ದು ಮಾತನಾಡುವವರಿದ್ದಾರೆ.

ಒಟ್ಟು ೨೭೯ ಮನೆಗಳನ್ನು ಹೊಂದಿರುವ ಗ್ರಾಮವು ಗಂಡು ೬೪೪ ಹೆಣ್ಣು ೬೧೩ ಸೇರಿ ೧೨೫೭ ಜನಸಂಖ್ಯೆಯನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಎತ್ತಿನ ಗಾಡಿಗಳು, ಟ್ರ್ಯಾಕ್ಟರ್, ಆಟೋರಿಕ್ಷಾ ಮತ್ತು ದ್ವಿಚಕ್ರ ವಾಹನಗಳನ್ನು ಗ್ರಾಮದಲ್ಲಿ ಕಾಣಬಹುದು. ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು ಚರಂಡಿ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೭೯ ಮನೆಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಕ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಅವರೆ, ಅಲಸಂದೆ, ಶೇಂಗಾ ಮತ್ತು ಅಡಿಕೆ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಎರಡು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಇಂಜಿನಿಯರ್, ಕಂದಾಯ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ೮ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ

ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಮುದ್ದೇನಹಳ್ಳಿ ಗ್ರಾಮದಲ್ಲಿ ಗ್ರಾಮ ಪಂಚಾಯ್ತಿ ಕಾರ್ಯಾಲಯವಿದೆ. ಒಟ್ಟು ೩ ಜನ ಸದಸ್ಯರುಗಳಿದ್ದು ಒಬ್ಬರು ಪಂಚಾಯ್ತಿಯ ನೌಕರರಿದ್ದಾರೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರುತ್ತದೆ. ಮುದ್ದೇನಹಳ್ಳಿ ತಾಲ್ಲೂಕು ಪಂಚಾಯ್ತಿಗೆ ಸೇರುತ್ತದೆ.

ರಸ್ತೆಯ ಮಾರ್ಗದ ಮೂಲಕ ಗ್ರಾಮವನ್ನು ತಲುಪಬಹುದಾಗಿದ್ದು ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಗ್ರಾಮಕ್ಕೆ ಮುದ್ದೇನಹಳ್ಳಿಯಿಂದ ಅಂಚೆ ವ್ಯವಸ್ಥೆ ಇದೆ. ಎರಡು ಸ್ತ್ರೀಶಕ್ತಿ ಸಂಘಗಳು ಮತ್ತು ಒಂದೊಂದು ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರಗಳಿದ್ದು ೮೨ ಮಕ್ಕಳಿದ್ದಾರೆ. ೪ ಜನ ಕಾರ್ಯಕರ್ತೆಯರು ಮತ್ತು ಇಬ್ಬರು ಸಹಾಯಕಿಯರನ್ನು ಒಳಗೊಂಡಿದೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದೆ. ಇಲ್ಲಿ ೬೫ ಮಕ್ಕಳು ಮೂವರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೪೭%.

ಇಲ್ಲಿ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯ ವೇತನ, ವಿಕಲ ಚೇತನ ಇತ್ಯಾದಿ ಸರ್ಕಾರದ ಸೌಲಭ್ಯಗಳನ್ನು ಹೊಂದಿದೆ. ಕಾಫಿ ಮತ್ತು ಟೀ ದೊರೆಯುವ ೨ ಹೋಟೆಲ್, ೨ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯ, ಪಾತಲಪ್ಪ, ಮುಳಕಟ್ಟಮ್ಮ, ಮೈಲಾರ, ಸಪ್ಲಮ್ಮ, ಗಂಗಮ್ಮ, ಸಾಯಿಬಾಬ ದೇವಾಲಯಗಳು ಮತ್ತು ನಾಗರಕಟ್ಟೆಗಳಿವೆ. ಎಲ್ಲಾ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ. ಗ್ರಾಮವು ಎಲ್ಲಾ ರೀತಿಯ ಜನಪದ ಕ್ಷೇತ್ರಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ. ಗೌರಿ–ಗಣೇಶ ಹಬ್ಬದಂದು ಹೂವಿನ ತೇರು ನಡೆಯುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಪೂಜಾರಹಳ್ಳಿ

ಪೂಜಾರಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೫೧.೩೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮದಲ್ಲಿ ಒಂದು ಪೂಜಾರಳ್ಳಮ್ಮನ ದೇವಾಲಯವಿರುವುದರಿಂದ ಪೂಜಾರಳ್ಳಿ ಎಂದು ನಾಮಕರಣ ಮಾಡಿದ್ದಾರೆ. ಗ್ರಾಮಕ್ಕಿರುವ ಮತ್ತೊಂದು ಕಾವಲಳ್ಳಿ, ಗ್ರಾಮದಿಂದ ಸ್ವಲ್ಪ ದೂರದಲ್ಲಿ ಕಾವಲಮ್ಮನ ಗುಡಿ ಇದೆ. ಆದ ಕಾರಣ ಆ ಹೆಸರನ್ನು ಕರೆಯುತ್ತಾರೆಂದು ಹಿರಿಯರು ಹೇಳುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮದಲ್ಲಿ ಯಾವುದೇ ಅರಣ್ಯ ಪ್ರದೇಶವಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಸುವರ್ಣಮುಖಿ ಹೊಳೆ ಇದ್ದು ನೀರಿಲ್ಲದೆ ಬರಿದಾಗಿದೆ. ಮಳೆಗಾಲದಲ್ಲಿ ಮಾತ್ರ ಸ್ವಲ್ಪ ನೀರು ಸಂಗ್ರಹವಾಗಿ ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಲಿಂಗಾಯಿತ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗಾಣಿಗ, ಕುರುಬ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೩೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೭೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೨೧ ಮತ್ತು

ಹೆಂಗಸರು ೩೫೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಗುಡಿಸಲು ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ಅವರೆ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು ಹಾಗೂ ಹೂವು ಬೆಳೆಯುವರು. ಅಡಿಕೆ, ತೆಂಗು ಹಾಗೂ ಹೂವು ಗ್ರಾಮದ ವ್ಯಾಪಾರದಲ್ಲಿನ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಗ್ರಾಮದಲ್ಲಿದೆ. ಗ್ರಾಮದಲ್ಲಿ ಪೊಲೀಸ್, ಶಿಕ್ಷಣ ಇಲಾಖೆ ಸೇರಿದಂತೆ ೧೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಬಡಗಿ, ಟೈಲರಿಂಗ್‌ನಂತಹ ಆಧುನಿಕ ಕೆಲಸ ಮಾಡುವಂತಹ ೫ ಜನ ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕವಣದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕವಣದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕವಣದಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಇಲ್ಲಿ ಮೊಬೈಲ್‌ನಂತಹ ದೂರಸಂಪರ್ಕ ಸಾಧನಗಳಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು, ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಪೂಜಾರಳ್ಳಮ್ಮ, ಕಾವಲೇಶ್ವರಿ, ಬಸವಣ್ಣ, ಮಾರಮ್ಮ ದೇವಾಲಯವಿದೆ. ೧೫ ವರ್ಷಕ್ಕೊಮ್ಮೆ ಪೂಜಾರಳ್ಳಮ್ಮನ ಜಾತ್ರೆಯನ್ನು ಅದ್ಧೂರಿಯಾಗಿ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಪುರವರ

ಪುರವರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೬೫.೬೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಹೋಬಳಿ ಹಾಗೂ ಜಿಲ್ಲಾ ಪಂಚಾಯ್ತಿ ಕೇಂದ್ರವಾಗಿದೆ. ಮಧುಗಿರಿ ಪಾಳೆಗಾರರ ಮೂಲ ರಾಜಧಾನಿಯಾಗಿದ್ದ ಮುಮ್ಮಡಿ ಪಟ್ಟಣ ನಾಶವಾಗಿ ಅದರ ಸ್ಥಳದಲ್ಲಿಯೇ ಪುರವೊಂದು ಆವರಿಸಿತು. ಹೀಗಾಗಿ ಪುರಾ>ಆವರ - ಪುರಾವರ > ಪುರವರ ಆಗಿದೆ ಎಂದು ತುಮಕೂರು ಜಿಲ್ಲಾ ಸ್ಥಳನಾಮಗಳು ಪುಸ್ತಕದಲ್ಲಿ ಉಲ್ಲೇಖಿಸಿದೆ. (ಡಾ॥ ಶ್ರೀಪಾದ ಭಟ್, ಎಲ್.ಪುಟ್ಟರಾಜು)

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕೃಷ್ಣಮೃಗ, ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಕೋಗಿಲೆ, ಗಿಳಿ, ಪಾರಿವಾಳ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೨೯ ಎಮ್ಮೆ, ೯೧ ಕುರಿ, ೪೮ ಮೇಕೆಗಳನ್ನು ಸಾಕಿದ್ದಾರೆ. ೬೩ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೪ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಂಬಾಣಿ, ಲಿಂಗಾಯಿತ, ಮುಸ್ಲಿಂ, ಸಾದಗೌಡ್ರು, ಈಡಿಗ, ವೀರಶೈವ, ಕುರುಬ, ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉರ್ದು, ಲಂಬಾಣಿ ಹಾಗೂ ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೩೬೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೪೭೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೭೨೭ ಮತ್ತು ಹೆಂಗಸರು ೭೪೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಆಟೋ, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಮುಸುಕಿನಜೋಳ, ಭತ್ತ, ರಾಗಿ, ತೆಂಗು, ಬಾಳೆ, ದಾಳಿಂಬೆ, ಸೂರ್ಯಕಾಂತಿ ಮತ್ತು ತೆಂಗು ಮುಖ್ಯ ಬೆಳೆಯಾಗಿದೆ. ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಎರಡು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ವೈದ್ಯಕೀಯ ಇಲಾಖೆಗಳಿಗೆ ಸೇರಿದ ೪ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಮೂವರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ಖಾಸಗಿ ನೌಕರರು ೩೦ ಕ್ಕೂ ಹೆಚ್ಚಾಗಿದ್ದಾರೆ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಪುರವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಪುರವರದಲ್ಲಿ ಪಂಚಾಯಿತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಮೂವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಇಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಪುರವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ

ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಪುರವರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಜಿಲ್ಲಾ ರಸ್ತೆ ಇದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ೯೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೩೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಏಳು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೨೩%. ಸರ್ಕಾರಿ ಪದವಿ ಪೂರ್ವ ಕಾಲೇಜು ಇದೆ. ಇಲ್ಲಿ ೧೬೦ ವಿದ್ಯಾರ್ಥಿಗಳು ೯ ಶಿಕ್ಷಕರಿದ್ದಾರೆ. ಜ್ಞಾನಸಿಂಧು ಕಾನ್ವೆಂಟ್ ಇದ್ದು ೮೫ ವಿದ್ಯಾರ್ಥಿಗಳು ೮ ಶಿಕ್ಷಕರಿದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ವಿಭಿನ್ನ ರೀತಿಯ ೧೦೦೦ ಪುಸ್ತಕವನ್ನು ಹೊಂದಿರುವ ಒಂದು ಗ್ರಂಥಾಲಯವಿದ್ದು ಕಾರ್ಯ ನಿರ್ವಹಣೆಗಾಗಿ ಒಬ್ಬರು ಗ್ರಂಥಪಾಲಕರನ್ನು ಆಯೋಜಿಸಲಾಗಿದೆ. ಎಸ್‌ಬಿಎಂ, ಎಟಿಎಂ, ಬ್ಯಾಂಕ್ ಇದೆ. ನ್ಯಾಯಬೆಲೆ ಅಂಗಡಿ ಇದೆ. ಗಿರವಿ ಅಂಗಡಿ ಇದೆ. ವಿಘ್ನೇಶ್ವರ ಕಲ್ಯಾಣ ಮಂಟಪವಿದೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಬಿಎಸ್‌ಎನ್‌ಎಲ್ ಟವರ್ ಇದೆ.

ಗ್ರಾಮದಲ್ಲಿ ಕಾಫಿ–ಟೀ, ಟಿಫನ್ ದೊರೆಯುವ ೫ ಹೋಟೆಲ್‌ಯಿದ್ದು ೩೦ ಅಂಗಡಿಗಳಿವೆ. ಕೋಳಿ ಅಂಗಡಿ ೩, ೨ ಪೆಟ್ರೋಲ್ ಬಂಕ್ ಇವೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ, ಮಾರಮ್ಮ, ಲಕ್ಷ್ಮೀನರಸಿಂಹಸ್ವಾಮಿ, ಹಟ್ಟಿ ಮಾರಮ್ಮ, ದಂಡಿನಮಾರಮ್ಮ, ಈಶ್ವರ, ಮದೂಡಮ್ಮ, ದುರ್ಗಮ್ಮ, ಮಾರಮ್ಮ ಮುಂತಾದ ಪ್ರಸಿದ್ಧ ದೇವಾಲಯಗಳಿವೆ. ನಾಗರಕಟ್ಟೆಗಳಿವೆ. ಪ್ರತಿ ವರ್ಷ ಅದ್ದೂರಿಯಾಗಿ ಜಾತ್ರೆ ನಡೆಯುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಇಲ್ಲಿನ ಜಯಮಂಗಲಿ ನದಿ ತೀರದಲ್ಲಿ ಕುರುಬ ಜನಾಂಗದವರು ಬೀರಪ್ಪನ ಬೃಹತ್ ಜಾತ್ರೆ, ಜಲದಿ ಉತ್ಸವ ನಡೆಸುವುದು ವಿಶೇಷವಾಗಿದೆ.

## ಪೆಮ್ಮೇನಹಳ್ಳಿ

ಪೆಮ್ಮೇನಹಳ್ಳಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೧೪೮.೧೮ ಹೆಕ್ಟೇರ್‌ನಲ್ಲಿದ್ದು ಜನವಸತಿ ಇಲ್ಲದ ಬೇಚಾರಕ್ ಗ್ರಾಮವಾಗಿದೆ.

ಗ್ರಾಮವು ದೊಡ್ಡೇರಿ ಹೋಬಳಿ ಹಾಗೂ ದೊಡ್ಡೇರಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ.

## ಪೂಜಾರಹಳ್ಳಿ

ಪೂಜಾರಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೭೭.೪೮ ಹೆಕ್ಟೇರ್ ಹೊಂದಿದ್ದು ಕೊಂಡವಾಡಿ ಭೂವಿಸ್ತೀರ್ಣಕ್ಕೆ ಸೇರಿರುವ ಮಜರೆ ಗ್ರಾಮವಾಗಿದೆ. ಪೂಜಾರರಹಳ್ಳಿ > ಪೂಜಾರ ಹಳ್ಳಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ನೇರಳೆ, ಮಾವು, ಹಲಸು, ನೀಲಗಿರಿ ಮತ್ತು ಜಾಲಾರಿ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಮೊಲ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಪಾರಿವಾಳ, ಹದ್ದು, ಕೋಗಿಲೆ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೮೦ ಎಮ್ಮೆ, ೯೨ ಕುರಿ ಹಾಗೂ ೫೧ ಮೇಕೆಗಳನ್ನು ಸಾಕಿದ್ದಾರೆ. ೧೦೦ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ, ಒಕ್ಕಲಿಗ, ಕುಂಬಾರ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೪೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೯೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಸೂರ್ಯಕಾಂತಿ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯಲಾಗುತ್ತಿದೆ.

ಆರ್ಮಿ ಇಲಾಖೆ, ಶಿಕ್ಷಣ ಇಲಾಖೆಗಳಿಗೆ ಸೇರಿದ ನಾಲ್ವರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ, ಕಮ್ಮಾರರು, ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೊಂಡವಾಡಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಂಡವಾಡಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೊಂಡವಾಡಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ೧೯ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ೩೨ ಮಕ್ಕಳು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೫೭.೬೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮಾರಮ್ಮ ದೇವಾಲಯವಿದೆ. ಗ್ರಾಮದ ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದೇವರಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಪುಲಮಾಚಿ

ಪುಲಮಾಚಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೬೪೫.೯೭ ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಂಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ. ಹೊಸಬೆಟ್ಟ, ಗೋಮಾಳವಿದೆ. ಗುಂಡುತೋಪು ಇದೆ.

ಗ್ರಾಮವು ಸಾಮಾಜಿಕ ಅರಣ್ಯವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಕಾಡುಮೊಲ, ಕರಡಿ, ನರಿ ಕಾಡುಹಂದಿ ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಕೋಗಿಲೆ, ನವಿಲು ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಮತ್ತು ಗ್ರಾಮದಲ್ಲಿ ಮಿಶ್ರ ತಳಿಯ ಪ್ರಾಣಿಗಳು ನಾಟಿ ಹಸುಗಳು, ಎಮ್ಮೆಗಳು, ಕುರಿಗಳು, ಮೇಕೆಗಳು, ಹಂದಿಗಳು, ಕೋಳಿಗಳು ಇದ್ದು ಪಶು ಸಂಗೋಪನೆಯನ್ನು ಮಾಡಲಾಗುತ್ತದೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೯ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮವು ೪ ಕೆರೆಗಳನ್ನು (ದೊಡ್ಡಕೆರೆ, ಚಿಕ್ಕ ಕೆರೆ, ಭೂತಪ್ಪನ ಕೆರೆ, ತಿಮ್ಮದಾಸಣ್ಣ ಕೆರೆ) ಹೊಂದಿದೆ. ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ ಗ್ರಾಮದಲ್ಲಿ ಹತ್ತು ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ, ಒಕ್ಕಲಿಗ, ನಾಯಕ, ಆದಿಕರ್ನಾಟಕ, ಆದಿದ್ರಾವಿಡ, ಈಡಿಗರು, ಶೆಟ್ರು, ಕುರುಬ, ಬ್ರಾಹ್ಮಣ, ಭಜಂತ್ರಿ, ಭೋವಿ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದಲ್ಲಿ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೨೭೯ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೧೨೪೯ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು ೬೧೧, ಹೆಣ್ಣು ೬೩೮ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್ ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆ ವ್ಯವಸ್ಥೆ, ಶೌಚಾಲಯ ವ್ಯವಸ್ಥೆಯನ್ನು ಹೊಂದಿದ್ದು ಚರಂಡಿ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೫೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ ತೆಂಗು ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆಯಲ್ಲಿ ಇದ್ದು ಒಂದು ಮಿನಿ ಡೈರಿ ಇದೆ ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ೪ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡು ಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಗರಣಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ ಗರಣಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ ಒಟ್ಟು ಮೂವರು ಸದಸ್ಯರುಗಳಿದ್ದು ಇಬ್ಬರು ಪಂಚಾಯಿತಿ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಗರಣಿ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಗರಣಿ ಅಂಚೆ ಕಛೇರಿಗೆ

ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೪ ಸ್ತ್ರೀಶಕ್ತಿ ಸಂಘಗಳು ಹಾಗೂ ೨ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರೂ ಸಹಾಯಕಿ ಇದ್ದಾರೆ. ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು (ಹೆಚ್.ಪಿ.ಎಸ್.) ಒಟ್ಟು ೧೫೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ ಇಲ್ಲಿ ೪ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೧.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ದಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು ೪ ಅಂಗಡಿಗಳಿವೆ. ಈ ಗ್ರಾಮದಲ್ಲಿ ಜ್ವರ ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡು ಬರುತ್ತವೆ.

ಗ್ರಾಮದಲ್ಲಿ ಭೂತಪ್ಪ, ಆಂಜನೇಯ, ಲಕ್ಷ್ಮೀನರಸಿಂಹ, ಚತುರಲಿಂಗೇಶ್ವರ, ಯಲ್ಲಮ್ಮ, ರಂಗಪ್ಪ, ರಾಮದೇವರು, ಮಾರಮ್ಮ, ಕೆರೆತಿಮ್ಮಪ್ಪ, ನೀರೆ ಕರಿಯಮ್ಮ, ಕರಿಹೂಜೇನಹಳ್ಳಿ, ಮಾರಮ್ಮ, ಜುಂಜಪ್ಪ ದೇವಾಲಯಗಳಿವೆ. ಮಾರಮ್ಮನಿಗೆ ಆರತಿ, ಬಲಿ ನಡೆಯುತ್ತದೆ. ಗ್ರಾಮದಲ್ಲಿ ಎಸ್.ಹೆಚ್. ಕೆಂಚಪ್ಪ (೬೦ ವರ್ಷ) ಗೊಲ್ಲ ಜನಾಂಗದವರು ನಾಟಕ ಕಲಾವಿದರಾಗಿದ್ದಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬಡವನಹಳ್ಳಿ

ಬಡವನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೧೫.೬೩ ಹೆಕ್ಟೇರ್. ಇದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮಕ್ಕೆ 'ಬಡವನಹಳ್ಳಿ' ಎಂಬ ಹೆಸರು ಬರಲು ಕಾರಣವೆಂದರೆ ಇಲ್ಲಿನ ಹಿರಿಯರು ಹೇಳುವಂತೆ ಹಿಂದೆ ಈ ಊರಿನಲ್ಲಿ ಕುಂಚಿಟಿಗ ಸಮುದಾಯದ 'ಬಡುವ' ಕುಲಕ್ಕೆ ಸೇರಿದವರು ಹೆಚ್ಚಾಗಿ ವಾಸಿಸುತ್ತಿದ್ದರಂತೆ. ಬಡುವನವ ಗೋತ್ರದಿಂದಾಗಿ ಬಡವನಹಳ್ಳಿ ಎಂತಲೂ ಕರೆಯುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು, ಕೆಂಪು ಕಲ್ಲುಗಳಿಂದ ಕೂಡಿದ್ದು ಮರಳುಮಿಶ್ರ, ಕಪ್ಪು ಮತ್ತು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಹಾಗೂ ಕರೆಕಲ್ಲು ಗುಡ್ಡವನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಜಿಂಕೆ, ಕಾಡುಹಂದಿಗಳು ಊರಿನ ಹೊರಗೆ ಕಾಣಸಿಗುತ್ತವೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ.

ಪಕ್ಷಿಗಳಾದ ನವಿಲು, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ನಾಟಿ ಹಸು, ಎತ್ತು, ಎಮ್ಮೆಗಳನ್ನು ಸಾಕಿದ್ದು ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ. ಸಾಕು ಪಕ್ಷಿಗಳಾದ ನಾಟಿ ಕೋಳಿ, ಪಾರಿವಾಳಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೯ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಸುವರ್ಣಮುಖಿ ಹೊಳೆಯಿದ್ದು ನೀರಿಲ್ಲದಂತೆ ಬತ್ತಿಹೋಗಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦೦ ಸಾರ್ವಜನಿಕ ನಲ್ಲಿಗಳಿದ್ದು ಗ್ರಾಮಕ್ಕೆ ನೀರನ್ನು ಒದಗಿಸುತ್ತಿವೆ. ೨೦ ಸಿಸ್ಟರ್ನ್ ಹಾಗೂ ೨ ಟ್ಯಾಂಕ್‌ಗಳಿವೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಅಗಸರು, ಕಮ್ಮಾರ, ಬಡಗಿ ಜನಾಂಗದವರು ಗ್ರಾಮದಲ್ಲಿದ್ದು ಅಗಸ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಉರ್ದು, ತೆಲುಗು ಭಾಷೆಯನ್ನು ಮಾತನಾಡುತ್ತಾರೆ.

ಒಟ್ಟು ೧೦೭೮ ಮನೆಗಳನ್ನು ಹೊಂದಿರುವ ಗ್ರಾಮವು ೪೩೩೨ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗಂಡು ೨೧೬೪, ಹೆಣ್ಣು ೨೧೬೮ ಜನಸಂಖ್ಯೆ ಇದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆಗಳಿವೆ. ರಾಗಿ ಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ವಸತಿ ಯೋಜನೆಗಳಾದ ಆಶ್ರಯ,

ಜನತಾ, ಇಂದಿರಾ ಆವಾಸ್ ಯೋಜನೆಯ ೨೪೩ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ.

೧೫ ಸಾಂಪ್ರದಾಯಿಕ ಎತ್ತಿನ ಗಾಡಿಗಳಿದ್ದು ೧೨ ಕಾರು, ೩ ಲಾರಿ, ೧ ಬಸ್, ೨೫ ಟ್ರ್ಯಾಕ್ಟರ್ ಹಾಗೂ ೫೦೦ ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು ಚರಂಡಿ ವ್ಯವಸ್ಥೆಯನ್ನು ಹೊಂದಿದೆ. ಗ್ರಾಮದಲ್ಲಿ ೮೯೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯವಾದ ಬೆಳೆಗಳಾಗಿವೆ. ಉಳಿದಂತೆ ಕಡಲೆಕಾಯಿ, ತೊಗರಿ, ಅವರೆ, ಅಲಸಂದೆ ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು, ಬಾಳೆ, ರೇಷ್ಮೆ ಬೆಳೆಯುತ್ತಾರೆ. ಇವುಗಳು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಒಂದು ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿಯ ವ್ಯವಸ್ಥೆ ಇದೆ. ಗ್ರಾಮಕ್ಕೆ ಸೇರಿದಂತೆ ಇರುವ ಹೊಳೆಯಲ್ಲಿ ನೀರಿಲ್ಲದ ಕಾರಣ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ.

ವೈದ್ಯರು, ಶಿಕ್ಷಕರು, ಕಂದಾಯ, ವಾಣಿಜ್ಯ ತೆರಿಗೆ, ಸಮಾಜಕಲ್ಯಾಣ, ಸಾರಿಗೆ, ಅಂಚೆ ಇಲಾಖೆಗೆ ಸೇರಿದ ೪೭ ಜನ ಸರ್ಕಾರಿ ನೌಕರರಿದ್ದಾರೆ. ಹಳ್ಳಿದಾಸ ಎಂಬ ನಿವೃತ್ತ ವಾಣಿಜ್ಯ ತೆರಿಗೆ ಕಮೀಷನರ್ ಇದ್ದಾರೆ.

ಸಾಂಪ್ರದಾಯಿಕ ಉದ್ಯೋಗ ಮಾಡುವ ಬಡಿಗ–೫, ಗುಡಿಕಾರರು–೧೦ ಹಾಗೂ ಕಮ್ಮಾರ ೫ ಜನ ಗ್ರಾಮದಲ್ಲಿದ್ದು ಆಧುನಿಕ ಉದ್ಯೋಗ ಮಾಡುವ ಟೈಲರ್‌ಗಳೂ ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಸದರಿ ಗ್ರಾಮದಲ್ಲಿಯೇ ಗ್ರಾಮ ಪಂಚಾಯ್ತಿ ಕಾರ್ಯಾಲಯವಿದೆ. ಒಟ್ಟು ೮ ಜನ ಸದಸ್ಯರನ್ನು ಹೊಂದಿದ್ದು ೩ ಸರ್ಕಾರಿ ಹಾಗೂ ೨೦ ಗ್ರಾಮ ಪಂಚಾಯ್ತಿ ಸಿಬ್ಬಂದಿ ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಈ ಗ್ರಾಮದಲ್ಲಿಯೇ ಪೊಲೀಸ್ ಠಾಣೆಯೂ ಇದೆ. ಕುಡಿಯುವ ನೀರಿನ ಸರಬರಾಜು ಬಡವನಹಳ್ಳಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳು, ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಗ್ರಾಮದಲ್ಲಿ ಒಂದು ಅಂಚೆ ಕಛೇರಿ, ಐದು ಸ್ಥಿರ ದೂರವಾಣಿ, ೨೦೦೦ ಕ್ಕೂ ಹೆಚ್ಚು ಸಂಚಾರಿ ದೂರವಾಣಿಗಳು, ಇ–ಮೇಲ್, ಇಂಟರ್‌ನೆಟ್, ಡಿಟಿಎಚ್, ಕೊರಿಯರ್, ಜಿಪಿಎಸ್‌ನ ವ್ಯವಸ್ಥೆಯನ್ನು ಗ್ರಾಮವು ಹೊಂದಿದೆ.

ಸಣ್ಣ ಪುಟ್ಟ ಕಲಹ, ವ್ಯಾಜ್ಯಗಳು ಇದೇ ಗ್ರಾಮದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿಯೇ ಬಗೆಹರಿಯುತ್ತವೆ. ಉಳಿದಂತೆ ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೧೦ ಸ್ತ್ರೀಶಕ್ತಿ ಸಂಘಗಳು, ೫ ಅಡಮಾನ ಸಂಸ್ಥೆಗಳು ಗ್ರಾಮದಲ್ಲಿವೆ.

ಗ್ರಾಮದಲ್ಲಿ ಒಂದು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಒಂದು ಡಿಸಿಸಿ ಬ್ಯಾಂಕ್, ೨ ಲಾಕರ್ ಹಾಗೂ ಒಂದು ಎಟಿಎಂ ಸೌಲಭ್ಯವಿದೆ.

ಗ್ರಾಮದಲ್ಲಿ ೩ ಅಂಗನವಾಡಿ ಕೇಂದ್ರವಿದ್ದು ಒಟ್ಟು ೧೬೦ ಮಕ್ಕಳು, ಮೂವರು ಕಾರ್ಯಕರ್ತೆ, ಮೂವರು ಸಿಬ್ಬಂದಿ ಇದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ೨೦೨ ವಿದ್ಯಾರ್ಥಿಗಳು, ೮ ಶಿಕ್ಷಕರು, ೩ ಸಿಬ್ಬಂದಿ ವರ್ಗದವರಿದ್ದಾರೆ. ಶ್ರೀರಂಗ ವಿದ್ಯಾಮಂದಿರದಲ್ಲಿ ೫೭೫ ವಿದ್ಯಾರ್ಥಿಗಳು, ೨೩ ಶಿಕ್ಷಕರು, ೩ ಸಿಬ್ಬಂದಿ ವರ್ಗದವರಿದ್ದಾರೆ. ಮುರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ೨೪೫ ವಿದ್ಯಾರ್ಥಿಗಳು, ೯ ಶಿಕ್ಷಕರು ಹಾಗೂ ೬ ಜನ ಸಿಬ್ಬಂದಿ ವರ್ಗದವರಿದ್ದಾರೆ. ಸರ್ಕಾರಿ ಪ್ರೌಢಶಾಲೆ, ಬಡವನಹಳ್ಳಿಯಲ್ಲಿ ೨೮೮ ವಿದ್ಯಾರ್ಥಿಗಳು, ೧೦ ಶಿಕ್ಷಕರು, ೪ ಸಿಬ್ಬಂದಿ ವರ್ಗದವರಿದ್ದಾರೆ ಮತ್ತು ಲೋಕಪಾಲ್ ಇಂಗ್ಲೀಷ್ ಹೈಸ್ಕೂಲ್‌ನಲ್ಲಿ ೪೧೫ ವಿದ್ಯಾರ್ಥಿಗಳು, ೨೦ ಶಿಕ್ಷಕರಿದ್ದಾರೆ.

ಗ್ರಾಮದಲ್ಲಿ ಒಂದು ಗ್ರಂಥಾಲಯವಿದ್ದು ವಿವಿಧ ಪ್ರಕಾರದ ಒಟ್ಟು ೨೦೦೦ ಪುಸ್ತಕಗಳನ್ನು ಹೊಂದಿದ್ದು ಒಬ್ಬರು ಗ್ರಂಥಪಾಲಕರು ಇದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೭೧.೨%.

ಗ್ರಾಮದಲ್ಲಿ ಪಶುವೈದ್ಯಶಾಲೆಯಿದ್ದು ಒಬ್ಬರು ವೈದ್ಯರು ಹಾಗೂ ಇಬ್ಬರು ಸಿಬ್ಬಂದಿ ವರ್ಗದವರಿದ್ದಾರೆ. ಗ್ರಾಮದಲ್ಲಿ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಯಿದ್ದು ಒಬ್ಬರು ವೈದ್ಯರು, ೮ ಜನ ಸಿಬ್ಬಂದಿ ವರ್ಗದವರಿದ್ದಾರೆ. ಜ್ವರ, ಕೆಮ್ಮು, ಮಲೇರಿಯಾ ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನ

ಸೌಲಭ್ಯಗಳು ಚಾಲ್ತಿಯಲ್ಲಿವೆ. ೨೦ ಹೋಟೆಲ್‌ಗಳಿದ್ದು ೫೦ ಅಂಗಡಿಗಳಿವೆ.

ಗ್ರಾಮದಲ್ಲಿ ಆರು ದೇವಾಲಯಗಳಿದ್ದು ಶ್ರೀ ಲಕ್ಷ್ಮೀರಂಗನಾಥಸ್ವಾಮಿ, ಆಂಜನೇಯ, ವಾಸವಿ, ಶನಿಮಹಾತ್ಮ, ನವಗ್ರಹ, ಗಣೇಶ ದೇವಾಲಯಗಳಿವೆ. ೨ ಮಸೀದಿಗಳು, ಒಂದು ಮುಸ್ಲಿಂ ಸ್ಮಶಾನವಿದೆ ಹಾಗೂ ರಂಗಪ್ಪನಾಯಕನ ಕೋಟೆ ಪಾಳೇಗಾರ ವಂಶಸ್ಥರು ಈ ಗ್ರಾಮದಲ್ಲಿ ನೆಲೆಸಿದ್ದಾರೆ.

ಗ್ರಾಮದಲ್ಲಿ ಚೈತ್ರಮಾಸದಲ್ಲಿ ಒಂದು ವಾರಗಳ ಕಾಲ ಶ್ರೀ ಲಕ್ಷ್ಮೀ ರಂಗನಾಥಸ್ವಾಮಿ ಜಾನುವಾರುಗಳ ದೊಡ್ಡ ಜಾತ್ರೆ ನಡೆಯುತ್ತದೆ ಹಾಗೂ ವೈಶಾಖ ಪೌರ್ಣಿಮೆಯ ದಿನದಂದು ರಥೋತ್ಸವ ನಡೆಯುತ್ತದೆ. ಯುಗಾದಿ, ದೀಪಾವಳಿ, ದಸರಾ, ಗೌರಿ–ಗಣೇಶ, ಶಿವರಾತ್ರಿ, ರಂಜಾನ್, ಬಕ್ರೀದ್ ಹಬ್ಬಗಳನ್ನು ಸಡಗರದಿಂದ ಆಚರಿಸುತ್ತಾರೆ. ಪ್ರೊ.ಎನ್.ಶಿವರಾಮಯ್ಯ ಬಡವನಹಳ್ಳಿ ರಂಗಧಾಮ ಎಂಬ ಪುಸ್ತಕ ಬರೆದಿದ್ದಾರೆ.

ಗ್ರಾಮದಲ್ಲಿ ಒಂದು ಬಯಲು ರಂಗಮಂದಿರವಿದೆ. ಒಂದು ಸಿನಿಮಾ ಮಂದಿರವಿದೆ. ಮದಕರಿನಾಯಕನ ಸಂಘ, ದಲಿತ ಸಂಘರ್ಷ ಸಮಿತಿ ಗ್ರಾಮದಲ್ಲಿದೆ.

## ಬಡವನಹಳ್ಳಿ ಜನತಾ ಹೌಸಿಂಗ್ ಕಾಲೋನಿ

ಬಡವನಹಳ್ಳಿ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ಬಡವನಹಳ್ಳಿಯ ಹೊರವಲಯದಲ್ಲಿದೆ. ಸರ್ಕಾರದ ಜನತಾ ಹೌಸಿಂಗ್ ಯೋಜನೆಯಡಿ ಮನೆಗಳು ನಿರ್ಮಾಣವಾಗಿವೆ.

ಒಟ್ಟು ೧೨೦ ಮನೆಗಳಿದ್ದು ೩೬೮ ಜನಸಂಖ್ಯೆ ಇದೆ. ಕುಂಚಿಟಿಗ, ಆದಿಕರ್ನಾಟಕ, ಆದಿದ್ರಾವಿಡ, ಮಡಿವಾಳ ಜನಾಂಗದವರು ಗ್ರಾಮದಲ್ಲಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ.

ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಸುವರ್ಣ ಗ್ರಾಮ ಯೋಜನೆಯಡಿ ರಸ್ತೆ, ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆಯಾಗಿದೆ. ೬೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿ ಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಹಾಗೂ ಕೂಲಿ ಮಾಡುವವರು ಇದ್ದಾರೆ. ಶಿಕ್ಷಣ, ಪೊಲೀಸ್ ಹಾಗೂ ವಿದ್ಯುತ್ ಇಲಾಖೆಯಲ್ಲಿ ೭ ಜನ ಸೇವೆ ಸಲ್ಲಿಸುತ್ತಿದ್ದಾರೆ.

ಬಡವನಹಳ್ಳಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ೨ ಸಿಸ್ಟನ್‌ರ್, ೧೨ ಸಾರ್ವಜನಿಕ ನಲ್ಲಿಗಳಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ೩೮ ಮಕ್ಕಳು, ಒಬ್ಬರು ಕಾರ್ಯಕತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಇಲ್ಲಿ ಶನಿಮಹಾತ್ಮ ದೇವಾಲಯ ಹಾಗೂ ಚಿಕ್ಕಮಾರಮ್ಮನ ಗುಡಿಯಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಬಡವನಹಳ್ಳಿ ಅಮೃತಮಹಲ್ ಕಾವಲ್

ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೪೫೩.೭೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಬಡವನಹಳ್ಳಿ ಭೂ ವಿಸ್ತೀರ್ಣಕ್ಕೆ ಸೇರಿಕೊಂಡಿದೆ.

ಈ ಗ್ರಾಮದ ಹಳೆಯ ಹೆಸರು ಎ.ಎಮ್.ಕಾವಲ್ ಈ ಹೆಸರು ಗ್ರಾಮಕ್ಕೆ ಬರಲು ಕಾರಣವನ್ನು ಹಿರಿಯರು ಹೇಳುವಂತೆ ಈ ಗ್ರಾಮವು ಅರಣ್ಯದ ಮಧ್ಯದಲ್ಲಿ ಇದ್ದುದರಿಂದ ಇದಕ್ಕೆ ಕಾವಲ್ ಎಂದು ನಾಮಕರಣ ಮಾಡಿದ್ದಾರೆಂದು ಹೇಳಲಾಗಿದೆ. ಇತ್ತೀಚಿನದಾಗಿ ಈ ಗಾಮಕ್ಕೆ ಜಯನಗರವೆಂದು ಮರುನಾಮಕರಣ ಮಾಡಿದ್ದಾರೆ. (ಅಮೃತಮಹಲ್ ಕಾವಲ್)

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದಲ್ಲಿ ಮಾರೆಮಡುಗು (ಗುಡ್ಡೆ) ಎನ್ನುವ ಗುಟ್ಟವಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ಜಿಂಕೆ, ಕಾಡುಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ.

ಪಕ್ಷಿಗಳಾದ ನವಿಲು, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಎತ್ತು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ೫೦೦ ಕ್ಕೂ ಹೆಚ್ಚು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಮಾರೇಮಡುಗಿನ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯಿತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಬಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ, ಕಮ್ಮಾರ ಜನಾಂಗದವರು ಗ್ರಾಮದಲ್ಲಿದ್ದು ಆದಿದ್ರಾವಿಡ ಜನಾಂಗದವರು ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೧೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೫೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೯೬, ಹೆಣ್ಣು ೨೬೩ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಜಿಂಕ್‌ಷೀಟ್ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೪೨ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ, ರೊಟ್ಟಿ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

೨ ಸಾಂಪ್ರದಾಯಿಕ ಎತ್ತಿನ ಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಗಳಾಗಿವೆ. ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೨೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಕಡಲೇಬೇಳೆ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಅವರೆ ಮುಂತಾದವುಗಳನ್ನು ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮಕ್ಕೆ ಸೇರಿದಂತೆ ಯಾವುದೇ ಕೆರೆ ಇಲ್ಲವಾದ್ದರಿಂದ, ಹಳ್ಳದಲ್ಲಿ ನೀರಿಲ್ಲವಾದ್ದರಿಂದ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಗ್ರಾಮದಲ್ಲಿ ನಾಲ್ಕು ಜನ ಸರ್ಕಾರಿ ನೌಕರರಿದ್ದು ಸಾಂಪ್ರದಾಯಿಕ ಉದ್ಯೋಗ ಮಾಡುವ ಹತ್ತು ಕುಂಬಾರಿಕೆ, ಒಂದು ಬಡಗಿ ಹಾಗೂ ಒಂದು ಕಮ್ಮಾರ ಕುಟುಂಬ ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಮೂವರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ರಂಗಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಗಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ೧೦೦ ಕ್ಕೂ ಹೆಚ್ಚು ಗ್ರಾಮದಲ್ಲಿವೆ. ಬಡವನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೨ ಸ್ವಶಕ್ತಿ ಸಂಘಗಳು ಗ್ರಾಮದಲ್ಲಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿಯಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಹಾಗೂ ಒಬ್ಬರು ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೫೪.೫%.

ಗ್ರಾಮದಲ್ಲಿ ಜ್ವರ, ಕೆಮ್ಮು, ಮಲೇರಿಯಾದಂಥ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಇಲ್ಲಿ ಯಾವುದೇ ಆಸ್ಪತ್ರೆಯ ಸೌಲಭ್ಯವಿರುವುದಿಲ್ಲ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಮಾರಮ್ಮ ಮತ್ತು ಆಂಜನೇಯ ದೇವಾಲಯಗಳಿದ್ದು ಪ್ರತಿ ವರ್ಷ ಮಾರಮ್ಮನ ಜಾತ್ರಾ ಮಹೋತ್ಸವವನ್ನು ಆಚರಿಸುತ್ತಾರೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬಳೆಹಳ್ಳಿ

ಬಳೆಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೫೭.೭೮ ಹೆಕ್ಟೇರ್. ಸುಮಾರು ೧೫೦ ವರ್ಷಗಳ ಇತಿಹಾಸವನ್ನು ಹೊಂದಿದ್ದು ಮಜರೆ ಗ್ರಾಮವಾಗಿದೆ. ಚಿಕ್ಕ ಗ್ರಾಮವಾದರೂ ಚೊಕ್ಕವಾಗಿ ಕಂಡುಬರುತ್ತದೆ. ಗ್ರಾಮವು ಚಂದ್ರಗಿರಿ ಭೂವಿಸ್ತೀರ್ಣದೊಳಗೆ ಸೇರಿದೆ.

ಈ ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಮತ್ತು ಕೆಂಪುಮಿಶ್ರ ಬೆಣಚುಕಲ್ಲು ಹಾಗೂ ಶೆಟ್‌ಕಲ್ಲು ಸುತ್ತಮುತ್ತ ಕಂಡುಬರುತ್ತದೆ. ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಈ ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ಕಾಡುಹಂದಿ, ಮೊಲ, ಆಗಾಗ್ಗೆ ಚಿರತೆಯ ಧಾಳಿ ಕೂಡ ಗ್ರಾಮದ ಪ್ರಾಣಿಗಳ ಮೇಲೆ ನಡೆಯುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು, ಚೇಳು ಕಂಡುಬರುತ್ತವೆ.

ಪಕ್ಷಿಗಳಾದ ನವಿಲು, ಗೊರವಂಕ, ಕಾಡು ಪಾರಿವಾಳ, ಗೌಜುಗ, ಗಿಳಿ, ಬೆಳವ, ಗುಬ್ಬಚ್ಚಿ, ಮರಕುಟಿಕ ಈ ಎಲ್ಲಾ ಜಾತಿಯ ಪಕ್ಷಿಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಈ ಗ್ರಾಮದಲ್ಲಿ ನಾಟಿಹಸು, ಎತ್ತುಗಳನ್ನು ಸಾಕುವವರ ಸಂಖ್ಯೆ ಅಧಿಕವಾಗಿ ಇದ್ದಾರೆ. ಕಾರಣ ಇಲ್ಲಿನ ಜನ ವ್ಯವಸಾಯವನ್ನು ಮುಖ್ಯ ಕಸುಬು ಮಾಡಿಕೊಂಡಿರುವುದರಿಂದ ಹಸು ಮತ್ತು ಎತ್ತುಗಳ ಸಹಾಯವನ್ನು ಹೆಚ್ಚಿಗೆ ಪಡೆಯುತ್ತಾರೆ. ಅಷ್ಟೇ ಅಲ್ಲದೆ ಹೈನುಗಾರಿಕೆ ಹೊಂದಿರುವುದರಿಂದ ಸೀಮೆಹಸುಗಳು ಸಹ ಕಂಡುಬರುತ್ತವೆ. ಹೆಚ್ಚಿನ ಪ್ರಮಾಣದಲ್ಲಿ ಹಾಲು ಪಡೆದು ಆಧುನಿಕ ಡೈರಿಗೆ ಕೊಡುತ್ತಾರೆ. ಅದರಿಂದ ಹೆಚ್ಚು ಹೆಚ್ಚು ಆದಾಯವನ್ನು ಪಡೆಯುತ್ತಾರೆ. ಮನೆಗೆ ಬೇಕಾದ ಹಾಲು, ಮೊಸರು, ಬೆಣ್ಣೆ ಹಾಗೂ ತುಪ್ಪವನ್ನು ಯಾರೊಬ್ಬರೂ ಸಹ ಅಂಗಡಿಯಿಂದ ಪಡೆಯುವುದಿಲ್ಲ. ಅವರವರ ಮನೆಯಲ್ಲಿ ತಯಾರುಮಾಡಿಕೊಳ್ಳುತ್ತಾರೆ. ಉಳಿದಂತೆ ಕುರಿ, ಮೇಕೆ, ಎಮ್ಮೆಗಳನ್ನು ಸಹ ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದು ಜೊತೆಗೆ ಕೆಲವರು ಪಾರಿವಾಳಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯ ಪ್ರಮಾಣ ತುಂಬಾ ಕಡಿಮೆಯಾಗಿದ್ದು ಸುಮಾರು ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಈ ಗ್ರಾಮದ ಪೂರ್ವ ದಿಕ್ಕಿಗೆ ಸುವರ್ಣಮುಖಿ ಹೊಳೆ ಇದ್ದು ಅದು ಬೇಸಿಗೆಯಲ್ಲಿ ಮಳೆಯಿಲ್ಲದ ಕಾರಣ ಅದರಲ್ಲಿ ನೀರು ಹರಿಯುವುದು ಕಂಡುಬರುವುದಿಲ್ಲ. ಈ ಊರಿಗೆ ಕೆರೆಯ ಸೌಲಭ್ಯ ಇಲ್ಲದ ಕಾರಣ ಕೃಷಿಕರ ಜೀವನ ತುಂಬಾ ಕಷ್ಟಕರವಾಗಿದೆ. ವ್ಯವಸಾಯವನ್ನು ಇಲ್ಲಿನ ಜನ ಹೆಚ್ಚಿಗೆ ಅವಲಂಬಿಸಿರುವುದರಿಂದ ಪ್ರಾಣಿ ಪಕ್ಷಿಗಳಿಗೂ ಸಹ ನೀರಿನ ಅಭಾವ ಎದ್ದು ಕಾಣಿಸುತ್ತದೆ.

ಈ ಗ್ರಾಮಕ್ಕೆ ಕುಡಿಯುವ ನೀರಿನ ಸಲುವಾಗಿ ಒಂದು ಕೊಳವೆ ಬಾವಿ ಇದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸುಮಾರು ೪ ನಲ್ಲಿಗಳಿವೆ.

ಒಕ್ಕಲಿಗ ಜನಾಂಗವೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಅಗಸರು, ನಾಯಕರು ಹಾಗೂ ಲಿಂಗಾಯಿತ ಜನಾಂಗದವರು ಈ ಗ್ರಾಮದಲ್ಲಿದ್ದು ಲಿಂಗಾಯಿತ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೫೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೮೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ೩೫ ಜನ ಪರಿಶಿಷ್ಟ ಜಾತಿಯವರು. ಅದರಲ್ಲಿ ೧೦೫ ಗಂಡು ಮತ್ತು ೯೮ ಜನ ಹೆಂಗಸರು ಇದ್ದಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ (ಮಂಗಳೂರು ಹೆಂಚು) ಹಾಗೂ ಶೀಟಿನ ಮನೆಗಳಿವೆ. ರಾಗಿ ಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಆಧುನಿಕ ವಾಹನವಾದ ೧೦ ದ್ವಿಚಕ್ರ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿಯ ಅಲ್ಲಲ್ಲಿ ಸಿಮೆಂಟ್ ರಸ್ತೆಯನ್ನು ಹೊಂದಿದ್ದು ಚರಂಡಿ ವ್ಯವಸ್ಥೆ

ಹಾಗೂ ಶೌಚಾಲಯ ವ್ಯವಸ್ಥೆಯನ್ನು ಹೊಂದಿದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ತೆಂಗು, ತರಕಾರಿಗಳನ್ನು ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಾಗಿ ಶೇಂಗಾ ಮತ್ತು ಅಡಿಕೆ ಹಾಗೂ ತೆಂಗು ಬೆಳೆಗಳನ್ನು ಬೆಳೆಯುತ್ತಾರೆ. ಅಡಿಕೆ ವ್ಯಾಪಾರದ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ ಹಾಗೂ ಅಧುನಿಕ ಡೈರಿ ಊರಿಗೆ ೫ ಕಿ.ಮೀ. ದೂರದಲ್ಲಿರುವ ಬಡವನಹಳ್ಳಿಯಲ್ಲಿದೆ.

ಈ ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೋಟಗಾರಲಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಸದರಿ ಗ್ರಾಮ ಚಂದ್ರಗಿರಿ ಗ್ರಾಮಪಂಚಾಯ್ತಿಗೆ ಸೇರಿದ ೧ ಗ್ರಾಮ ಪಂಚಾಯ್ತಿ ಸದಸ್ಯರನ್ನು ಹೊಂದಿದ್ದು ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಂದ್ರಗಿರಿ ಪಂಚಾಯ್ತಿಗೆ ಸೇರಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸು, ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಅಂಚೆ ವ್ಯವಸ್ಥೆ ಪಕ್ಕದ ಗ್ರಾಮವಾದ ಜಕ್ಕೇನಹಳ್ಳಿ ಸೇರಿರುತ್ತದೆ.

ಚರ ದೂರವಾಣಿ ಅಂದರೆ ಮೊಬೈಲ್ ಸುಮಾರು ೭೦ ರ ಸಂಖ್ಯೆಯಲ್ಲಿ ಅಂದಾಜು ಲೆಕ್ಕ ದೊರೆತಿದೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ಬಡವನಹಳ್ಳಿ ಪೊಲೀಸ್ ಠಾಣಾ ಮುಖೇನ ಬಗೆಹರಿಯುತ್ತದೆ. ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ತಾಲ್ಲೂಕಿನ ಮಧುಗಿರಿಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಮಾತ್ರ ಇರುವುದು ಕಂಡುಬರುತ್ತದೆ.

ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಒಟ್ಟು ೭ ಜನ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಬಿಸಿಯೂಟದವರು ಒಬ್ಬರು ಇದ್ದಾರೆ. ಶೇ.೭೫ ರಷ್ಟು ಸಾಕ್ಷರ ಗ್ರಾಮವಾಗಿದೆ.

ಆಸ್ಪತ್ರೆ ಬಡವನಹಳ್ಳಿ ವ್ಯಾಪ್ತಿಯಲ್ಲಿ ಇದೆ. ಜನರು ಇದರ ಸಹಾಯ ಪಡೆಯುತ್ತಾರೆ. ಸಾಮಾನ್ಯವಾಗಿ ಜ್ವರ, ಕೆಮ್ಮು, ನೆಗಡಿ ಮೊದಲಾದ ಸಾಮಾನ್ಯ ರೋಗಗಳು. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಕಾಫಿ ಮತ್ತು ಟೀ ಹೋಟೆಲ್ ಇದ್ದು ೧ ಅಂಗಡಿ ಇದೆ.

ಗ್ರಾಮದಲ್ಲಿ ಒಂದು ಗಣಪತಿ ದೇವಸ್ಥಾನ ಮಾತ್ರ ಕಂಡುಬರುತ್ತದೆ. ಚಂದ್ರಗಿರಿ ವ್ಯಾಪ್ತಿಯಲ್ಲಿ ಬರುವ ಚಂದ್ರಗಿರಿ ಮಾರಮ್ಮನ ಜಾತ್ರೆಯಲ್ಲಿ ಈ ಗ್ರಾಮದವರೂ ಸಹ ಭಾಗಿಯಾಗುತ್ತಾರೆ. ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬಂಡೆಮೇಗಲಪಾಳ್ಯ (ಬಿ.ಎಂ ಪಾಳ್ಯ)

ಬಿ.ಎಂ. ಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೫೭.೭೮ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮವು ಚಂದ್ರಗಿರಿ ಭೂವಿಸ್ತೀರ್ಣದಲ್ಲಿ ಸೇರಿದೆ. ಗ್ರಾಮವನ್ನು ಅಮ್ಮಸಂದ್ರವೆಂತಲೂ ಕರೆಯುತ್ತಾರೆ.

ಬಿ.ಎಂ. ಪಾಳ್ಯ ಗ್ರಾಮದ ಪೂರ್ಣ ಹೆಸರು ಬಂಡೇಮೇಗಳ ಪಾಳ್ಯ. ಹಿಂದೆ ಇದನ್ನು ಅಂಸಂದ್ರ ಎಂದು ಕರೆಯುತ್ತಿದ್ದರಂತೆ. ಹಿರಿಯರು ಹೇಳುವಂತೆ ಈ ಗ್ರಾಮವು ಬಂಡೆಯ ಮೇಲೆ ಇರುವುದರಿಂದ ಇದಕ್ಕೆ ಬಂಡೇಮೇಗಳ ಪಾಳ್ಯ ಎಂದು ನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಈ ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ, ನರಿ, ತೋಳ, ಚಿರತೆ ಹಾಗೂ ಕರಡಿ ಮೊದಲಾದ ಪ್ರಾಣಿಗಳು ಆಗಾಗ್ಗೆ ಕಂಡುಬರುತ್ತವೆ.

ಪಕ್ಷಿಗಳಾದ ನವಿಲು, ಗಿಳಿ, ಕಾಗೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ನಾಟಿಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮

ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಮೂರು ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿವೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ. ಉಳಿದಂತೆ ತೆಲುಗು ಭಾಷೆಯನ್ನು ಮಾತನಾಡುವವರಿದ್ದಾರೆ.

ಒಟ್ಟು ೫೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೯೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಅದರಲ್ಲಿ ೧೫೦ ಗಂಡು ಮತ್ತು ೧೪೧ ಜನ ಹೆಂಗಸರು ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಮಣ್ಣಿನ ಮನೆ, ಇಟ್ಟಿಗೆ ಮನೆ ಹಾಗೂ ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೬ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಆಧುನಿಕ ವಾಹನಗಳಾದ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆಯನ್ನು ಹೊಂದಿದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಹಾಗೂ ಬಂಡೆ ವ್ಯಾಪಾರ ಗ್ರಾಮದ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಶೇಂಗಾ ಮತ್ತು ಸೂರ್ಯಕಾಂತಿ ಬೆಳೆಯುತ್ತಾರೆ.

ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಸಾಕಷ್ಟು ಪ್ರಮಾಣದ ನೀರಿಲ್ಲದೆ ಇರುವುದರಿಂದ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಗ್ರಾಮದಲ್ಲಿ ಪೊಲೀಸ್, ಶಿಕ್ಷಕರು ಸೇರಿದಂತೆ ಏಳು ಸರ್ಕಾರಿ ನೌಕಕರಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಚಂದ್ರಗಿರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಇಬ್ಬರು ಪಂಚಾಯ್ತಿಯ ನೌಕರರು ಮತ್ತು ಇಬ್ಬರು ಸದಸ್ಯರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಂದ್ರಗಿರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚಂದ್ರಗಿರಿ ಅಂಚೆ ಕಛೇರಿ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೨ ಸ್ತ್ರೀಶಕ್ತಿ ಸಂಘಗಳು, ೪ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೪೯.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ೨ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯ, ಹಂಪೇದೇವನ ವಿರೂಪಾಕ್ಷ, ಮಾರಮ್ಮನ ದೇವಾಲಯಗಳಿವೆ. ಗ್ರಾಮದಲ್ಲಿ ಪ್ರತಿವರ್ಷ ಮಾರಮ್ಮನ ಜಾತ್ರೆಯನ್ನು ಹರಕೆ ಹಾಗೂ ಬಲಿ ನೀಡುವುದರೊಂದಿಗೆ ವೈಭವದಿಂದ ಆಚರಿಸುವರು. ಚಂದ್ರಗಿರಿ ಜಾತ್ರೆಯನ್ನೂ ಆಚರಿಸುತ್ತಾರೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

# ಬೋರೆಗುಂಟೆ

ಬೋರೆಗುಂಟೆ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೦೬.೯೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮಕ್ಕೆ ಬೋರೆಗುಂಟೆ ಎನ್ನುವ ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಬೋರಣ್ಣ ಎನ್ನುವವರೊಬ್ಬರು ಹುಗ್ಗೆ ಹೊಯ್ದು ನಿರ್ಮಾಣವಾದ ಗ್ರಾಮವಾದ್ದರಿಂದ ಈ ಗ್ರಾಮಕ್ಕೆ ಬೋರೆಗುಂಟೆ ಎಂದು ನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಮತ್ತು ಕಪ್ಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಸ್ವಲ್ಪ ಪ್ರಮಾಣದ ಅರಣ್ಯವನ್ನು ಹೊಂದಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಗೊರವಂಕ, ಗಿಳಿ, ಕಾಡುಕೋಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ನಾಟಿಹಸು, ಎತ್ತು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಯಾವುದೇ ಹೊಳೆ ಹಳ್ಳಗಳು ಹರಿಯುವುದಿಲ್ಲ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೫ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿದ್ದು ೫ ಸಿಸ್ಟರ್ನ್ ಕೂಡ ಇದೆ..

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ನಾಯಕ ಜನಾಂಗ ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೬೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೭೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೨೯, ಹೆಣ್ಣು ೨೪೮ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೮ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಆಧುನಿಕ ವಾಹನಗಳಾದ ದ್ವಿಚಕ್ರ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಗಳಾಗಿವೆ. ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ರಾಗಿ, ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಅವರೆ, ಶೇಂಗಾ ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದರೂ ಬರಗಾಲದ ಕಾರಣವಾಗಿ ನೀರಿಲ್ಲದಂತಾಗಿದೆ. ಮಳೆಗಾಲದಲ್ಲಿ ಕೆರೆಯ ನೀರನ್ನು ಜಾನುವಾರು ಹಾಗೂ ಕೃಷಿಗಾಗಿ ಬಳಸಿಕೊಳ್ಳಲಾಗುತ್ತದೆ. ಉಳಿದಂತೆ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಗ್ರಾಮದಲ್ಲಿ ಇಬ್ಬರು ಸರ್ಕಾರಿ ನೌಕರರಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಒಬ್ಬರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ರಂಗಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಗಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿ

ದೂರಸಂಪರ್ಕ ಸಾಧನಗಳಾಗಿವೆ. ಬಡವನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ಒಂದು ಸ್ತ್ರೀಶಕ್ತಿ ಸಂಘವಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೪.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಎರಡು ದೇವಾಲಯಗಳಿವೆ. ಮುತ್ತುರಾಯ, ಉತ್ತರ ಕೆಂಚಮ್ಮ ದೇವಾಲಯಗಳಿವೆ. ಇವುಗಳಲ್ಲಿ ಮುತ್ತುರಾಯನ ದೇವರ ಜಾತ್ರೆಯನ್ನು ಪ್ರತಿ ವರ್ಷ ಊರಿನಲ್ಲಿ ಉತ್ಸವ ಮಾಡುವುದರೊಂದಿಗೆ ಆಚರಿಸುತ್ತಾರೆ. ಉಳಿದಂತೆ ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಭಸ್ಮಾಂಗಿ ಕಾವಲ್

ಭಸ್ಮಾಂಗಿ ಕಾವಲ್ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೩೭.೦೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮಕ್ಕೆ ಭಸ್ಮಾಂಗಿ ಕಾವಲ್ ಎಂದು ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಈ ಗ್ರಾಮದಲ್ಲಿ ಅತಿ ಹೆಚ್ಚು ಕುರುಚಲು ಸಸ್ಯಗಳು ಬೆಳೆದಿದ್ದು ಕುರುಚಲು ಗಿಡಗಳೇ ತುಂಬಿ ಹೋಗಿತ್ತಂತೆ. ಆದ ಕಾರಣ ಈ ಗ್ರಾಮಕ್ಕೆ ಈ ಹೆಸರನ್ನು ನಾಮಕರಣ ಮಾಡಲಾಗಿದೆ. ಶಿವಮೂಲದ ದೇವಾಲಯವಿದ್ದು ಭಸ್ಮಧಾರಿ ಅಂಗಿ ಆಕೃತಿಯ ಬೆಟ್ಟವಿದೆ. ಹಾಗಾಗಿ ಈ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರಿತವಾ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಭಸ್ಮಾಂಗಿ ಬೆಟ್ಟ ಹಾಗೂ ಎರಡು ತೋಪುಗಳು ಗ್ರಾಮದಲ್ಲಿವೆ.

ಗ್ರಾಮವು ಅರಣ್ಯವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಚಿರತೆ, ನರಿ, ತೋಳ, ಜಿಂಕೆ, ಕಿರುಬ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಉಳಿದಂತೆ ಹಲವು ವಿಷಪೂರಿತ ಹಾವುಗಳಿವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಹೆಚ್ಚು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಎರಡು ಅಕ್ಕ–ತಂಗಿ ಹೊಳೆ ಹಾಗೂ ಒಂದು ಹಳ್ಳವಿದ್ದು ಗ್ರಾಮದಲ್ಲಿ ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೪ ಸಾರ್ವಜನಿಕ ನಲ್ಲಿಗಳು ಹಾಗೂ ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ ಜನಾಂಗದವರು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೮೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೫೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೫೨, ಹೆಂಗಸರು ೨೦೫ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೯ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ

ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಯಾವುದೇ ಸಾಂಪ್ರದಾಯಿಕ ವಾಹನಗಳಿಲ್ಲ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೧೭ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಜೋಳ, ಶೇಂಗಾ ಬೆಳೆಯುತ್ತಾರೆ. ತೆಂಗು ಗ್ರಾಮದ ವಾಣಿಜ್ಯ ಬೆಳೆಯಾಗಿದ್ದು ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳ, ಎರಡು ಹೊಳೆ ಇದ್ದರೂ ನೀರಿಲ್ಲದ ಕಾರಣ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವವರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಸಜ್ಜೆಹೊಸಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಇಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಜ್ಜೆ ಹೊಸಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಕಾರ್ಪೇನಹಳ್ಳಿ ಅಂಚೆ ಕಛೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳು ಹಾಗೂ ಎರಡು ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿಯಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಹಾಗೂ ಒಬ್ಬರು ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೫೧.೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ. ಮೂರು ಹೋಟೆಲ್, ಒಂದು ಛತ್ರ ಮತ್ತು ಮೂರು ಅಂಗಡಿಗಳು ಗ್ರಾಮದಲ್ಲಿವೆ.

ಗ್ರಾಮದಲ್ಲಿ ಒಂದು ಶಿಲಾ ಗೋರಿ, ಸ್ಮಾರಕ ಸ್ತಂಭ ಹಾಗೂ ಒಂದು ಕೋಟೆ ಇದ್ದು ಇದು ಒಂದು ಐತಿಹಾಸಿ ಸ್ಥಳದ ಪ್ರತೀಕವಾಗಿದೆ. ಇಲ್ಲಿ ಮೂರು ದೇವಾಲಯಗಳಿವೆ. ಈರಣ್ಣ ದೇವಸ್ಥಾನ, ಯಲ್ಲಮ್ಮ ಮತ್ತು ಬಸವಂಗಿ ರುದ್ರ.

ಗ್ರಾಮದಲ್ಲಿ ಪ್ರತಿ ವರ್ಷವೂ ಬಸವಂಗಿ ರುದ್ರನ ಜಾತ್ರಾ ಮಹೋತ್ಸವ ಅತ್ಯಂತ ವೈಭವಪೂರ್ಣವಾಗಿ ಆಚರಿಸುತ್ತಾರೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬಸವನಹಳ್ಳಿ

ಬಸವನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೫೫.೫೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮದಲ್ಲಿ ಹೆಚ್ಚು ಬಸವಗಳನ್ನು ಸಾಕುತ್ತಿದ್ದರಂತೆ ಆದ ಕಾರಣ ಹಿರಿಯರು ಹೇಳುವಂತೆ ಬಸವನಹಳ್ಳಿ ಎಂದು ನಾಮಕರಣಗೊಂಡಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕಪ್ಪು ಮಿಶ್ರಿತವಾದ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ, ಕರಡಿಗಳು ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಪಾರಿವಾಳ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ

ಸಾಕುಪಕ್ಷಿಗಳಾದ ನಾಟಿಕೋಳಿಗಳು ೨೦೦ ಕ್ಕೂ ಹೆಚ್ಚು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದಲ್ಲಿ ಒಂದು ಕೆರೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ. ಆದರೆ ಕೆರೆ ಸಂಪೂರ್ಣವಾಗಿ ತುಂಬಿ, ಕೋಡಿ ಬಿದ್ದು ಬಹಳ ವರ್ಷಗಳೇ ಕಳೆದಿವೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೫ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗದವರು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೮೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೮೨೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೧೯, ಹೆಂಗಸರು ೪೦೯ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಇಟ್ಟಿಗೆ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೭೨ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಒಂದು ಸಾಂಪ್ರದಾಯಿಕ ಎತ್ತಿನ ಗಾಡಿ ಇದೆ. ಮೂರು ಟ್ರ್ಯಕ್ಟರ್ ಮತ್ತು ನೂರಕ್ಕಿಂತ ಹೆಚ್ಚು ದ್ವಿಚಕ್ರ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೨೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಜೋಳ, ತೊಗರಿ, ಅವರೆ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಶೇಂಗಾ, ತೆಂಗು ಬೆಳೆಯುತ್ತಾರೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಹಾಗೂ ಒಂದು ಆಧುನಿಕ ಡೈರಿ ಗ್ರಾಮದಲ್ಲಿ ಇದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದರೂ ಬರಗಾಲದ ಕಾರಣ ನೀರಿಲ್ಲದಿರುವುದರಿಂದ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ.

ಗ್ರಾಮದಲ್ಲಿ ಶಿಕ್ಷಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುವ ಇಬ್ಬರು ಶಿಕ್ಷಕರು ಸರ್ಕಾರಿ ನೌಕರರಿದ್ದಾರೆ. ಉಳಿದಂತೆ ಸಾಂಪ್ರದಾಯಿಕ ಉದ್ಯೋಗ ಮಾಡುವ ಕುಂಬಾರ ೩, ಗುಡಿಕಾರ ೧ ಹಾಗೂ ಆಧುನಿಕ ಉದ್ಯೋಗ ಮಾಡುವ ಇಬ್ಬರು ಟೈಲರ್‌ಗಳು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಸಜ್ಜೆಹೊಸಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಇಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಜ್ಜೆ ಹೊಸಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಕಾರ್ಪೆಹಳ್ಳಿ ಅಂಚೆ ಕಚೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘಗಳು, ಹತ್ತು ಧರ್ಮಸ್ಥಳ ಸಂಘಗಳು ಹಾಗೂ ಒಂದು ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿಯಿದ್ದಾರೆ. ಸರ್ಕಾರಿ ಹಿರಿಯ

ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂವರು ಶಿಕ್ಷಕರು ಹಾಗೂ ಇಬ್ಬರು ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೦.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಮೂರು ಹೋಟೆಲ್, ಒಂದು ಛತ್ರ ಮತ್ತು ಮೂರು ಅಂಗಡಿಗಳು ಗ್ರಾಮದಲ್ಲಿವೆ.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ, ಜುಂಜಪ್ಪ ದೇವಾಲಯಗಳಿದ್ದು ಪ್ರತಿ ವರ್ಷವೂ ಜುಂಜಪ್ಪನ ಜಾತ್ರೆಯನ್ನು ಆಚರಿಸುವರು. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬಸವನಹಳ್ಳಿ ಗೊಲ್ಲರಹಟ್ಟಿ

ಬಸವನಹಳ್ಳಿ ಗೊಲ್ಲಹಟ್ಟಿ ಗ್ರಾಮವು ಮಧುಗಿರಿಯ ಉತ್ತರ ದಿಕ್ಕಿನಲ್ಲಿದ್ದು ಬಸವನಹಳ್ಳಿಯ ಹೊರವಲಯದಲ್ಲಿದೆ. ಒಟ್ಟು ೫೦ ಮನೆಗಳನ್ನು ಹೊಂದಿದ್ದು ೧೮೫ ಜನಸಂಖ್ಯೆಯನ್ನು ಹೊಂದಿದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಹೊಸಕೆರೆ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಮತ್ತು ಪಶುಸಂಗೋಪನೆ ಮುಖ್ಯ ಕಸುಬಾಗಿದೆ. ಸಾರಿಗೆ ಇಲಾಖೆಯಲ್ಲಿ ಒಬ್ಬರು ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮದಲ್ಲಿ ಕದಿರಿ ನರಸಿಂಹದೇವರು ಹಾಗೂ ಚಿತ್ರದೇವರ ಪೌಳಿಗಳಿವೆ. ದೀಪಾವಳಿ ಇವರ ದೊಡ್ಡ ಹಬ್ಬವಾಗಿದ್ದು ವಾರಗಳ ಕಾಲ ದೀಪ ಏರಿಸುವ, ದೀಪ ಇಳಿಸುವ ತನಕ ಹಿರಿಯರ ಹಬ್ಬ, ಹಾಲು–ತುಪ್ಪದ ಹಬ್ಬ ಎಂದು ಆಚರಿಸುತ್ತಾರೆ. ಕೋಲಾಟ, ಗಣೆಪದ ಹೇಳುತ್ತಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಬಡಿಗೊಂಡನಹಳ್ಳಿ

ಬಡಿಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೪೭.೭೪ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಕೊಟಗಾರ್ಲಹಳ್ಳಿ ಭೂವಿಸ್ತೀರ್ಣಕ್ಕೆ ಸೇರಿದೆ.

ಬಡಿಗೊಂಡನಹಳ್ಳಿ ಎಂದು ಈ ಗ್ರಾಮಕ್ಕೆ ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಈ ಗ್ರಾಮದಲ್ಲಿ ಕುಂಚಿಟಿಗ ಜನಾಂಗದ ಬಡಿಗ ಮನೆತನದವರು ಹೆಚ್ಚಾಗಿ ಇದ್ದರು. ಆದ ಕಾರಣ ಬಡವನ – ಬಡವಗೌಡ ಮೂಲದಿಂದಾಗಿ ಬಡಿಗೊಂಡನಹಳ್ಳಿ ಎಂದು ನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ, ನರಿ, ತೋಳ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಗೊರವಂಕ, ನವಿಲು, ಗಿಳಿ, ಕಾಗೆ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೩ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಇದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳು ಹಾಗೂ ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಕಮ್ಮಾರ, ಬಡಗಿ, ಆದಿ ಕರ್ನಾಟಕ, ನಾಯಕ, ಮಡಿವಾಳ, ವಿಶ್ವಕರ್ಮ ಜನಾಂಗದವರಿದ್ದು ಮಡಿವಾಳ ಜನಾಂಗ ಕಿರು

ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೨೧೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೧೧೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೨೩, ಹೆಂಗಸರು ೪೯೧ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೭೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎರಡು ಸಾಂಪ್ರದಾಯಿಕ ಎತ್ತಿನ ಗಾಡಿಗಳಿದ್ದು ಟ್ರ್ಯಕ್ಟರ್, ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೩೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಜೋಳ, ಸೂರ್ಯಕಾಂತಿ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಹೂವು, ಅಡಿಕೆ, ತೆಂಗು ಬೆಳೆಯುತ್ತಾರೆ. ಹೂವು ಹಾಗೂ ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಒಂದು ಸಾಂಪ್ರದಾಯಿಕ ಶೈಲಿಯ ಒಂದು ಹೈನುಗಾರಿಕೆ ಹಾಗೂ ಒಂದು ಆಧುನಿಕ ಡೈರಿ ಇದೆ. ಗ್ರಾಮದಲ್ಲಿ ಶಿಕ್ಷಕರು, ಪೊಲೀಸ್, ಶಿಕ್ಷಣ ಇಲಾಖೆ ಸೇರಿದಂತೆ ೫ ಜನ ಸರ್ಕಾರಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಬಡಗಿ ೨, ಗುಡಿಕಾರ ೨, ಕಮ್ಮಾರ ೪ ಜನ ಗ್ರಾಮದಲ್ಲಿದ್ದಾರೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಬೇರೆ ಯಾವುದೇ ಕಾರ್ಖಾನೆಗಳೂ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೊಟಗಾರ್ಲಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ಸದಸ್ಯರು ಹಾಗೂ ಇಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಟಗಾರ್ಲಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಕೊಟಗಾರ್ಲಹಳ್ಳಿ ಅಂಚೆ ಕಚೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘಗಳು ಹಾಗೂ ೪ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೯೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಉನ್ನತೀಕರಿಸಿದ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೪೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಆರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೪.೧%.

ಗ್ರಾಮದಲ್ಲಿ ಒಂದು ಗ್ರಂಥಾಲಯವಿದ್ದು ವಿವಿಧ ಪ್ರಕಾರದ ಒಟ್ಟು ಒಂದು ಸಾವಿರ ಪುಸ್ತಕಗಳಿವೆ. ಒಬ್ಬರು ಗ್ರಂಥಪಾಲಕರಿದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್ ಹಾಗೂ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಪ್ರತಿ ಶಿವರಾತ್ರಿ ಹಾಗೂ ದಸರಾ ಹಬ್ಬದಲ್ಲಿ ಜಾತ್ರೆಯನ್ನು ವೈಭವದಿಂದ ಆಚರಿಸುತ್ತಾರೆ. ಶ್ರೀ ಲಿಂಗೇಶ್ವರ ಸ್ವಾಮಿಯ ತೇರನ್ನು ಊರಿನಲ್ಲಿ ಎಳೆಯುವುದರೊಂದಿಗೆ ಆಚರಿಸುವರು. ಉಳಿದಂತೆ ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬುಳಸಂದ್ರ

ಬುಳಸಂದ್ರ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೪೭.೭೪ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಕೊಟಗಾರ್ಲಹಳ್ಳಿ ಭೂವಿಸ್ತೀರ್ಣಕ್ಕೆ ಸೇರಿದೆ. ಬುಳ್ಳ ಎಂಬ ವ್ಯಕ್ತಿ ಮೂಲದ ಕೆರೆಯಿಂದಾಗಿ ಈ ಹೆಸರು ಬಂದಿದೆ. ಬುಳ್ಳ ಸಮುದ್ರ > ಬುಳ್ಳಸಂದ್ರ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ಚಿರತೆ, ನರಿ, ತೋಳ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಗೊರವಂಕ, ನವಿಲು, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಇದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿ ಹಾಗೂ ೨ ಟ್ಯಾಂಕ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಶೆಟ್ಟಿ ಬಣಜಿಗ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೪೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೨೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೩೮, ಹೆಂಗಸರು ೩೫೪ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೪೬ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎರಡು ಸಾಂಪ್ರದಾಯಿಕ ವಾಹನ ಎತ್ತಿನ ಗಾಡಿಗಳಿದ್ದು ಟ್ರ್ಯಕ್ಟರ್, ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೨೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಜೋಳ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಶೇಂಗಾವನ್ನು ಬೆಳೆಯುತ್ತಾರೆ.

ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮದಲ್ಲಿ ಇಬ್ಬರು ಶಿಕ್ಷಣ ಇಲಾಖೆಯಲ್ಲಿ ಸರ್ಕಾರಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಒಬ್ಬರು ಗ್ರಾಮದಲ್ಲಿದ್ದಾರೆ. ಉಳಿದಂತೆ ಬೇರೆ ಯಾವುದೇ ಕಾರ್ಖಾನೆಗಳೂ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೊಟಗಾರ್ಲಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ಸದಸ್ಯರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಟಗಾರ್ಲಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಕೊಟಗಾರ್ಲಹಳ್ಳಿ ಅಂಚೆ ಕಚೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂವರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೭.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯನ ದೇವಾಲಯವಿದೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬುಳಸಂದ್ರ ಗೊಲ್ಲರಹಟ್ಟಿ

ಬುಳಸಂದ್ರ ಗೊಲ್ಲರಹಟ್ಟಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಬುಳಸಂದ್ರದ ಹೊರವಲಯದಲ್ಲಿದೆ.

ಒಟ್ಟು ೨೫ ಮನೆಗಳಿದ್ದು ೯೮ ಜನಸಂಖ್ಯೆ ಹೊಂದಿದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ४೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಕೊಟಗಾರ್ಲಹಳ್ಳಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಕೂಲಿ ಹಾಗೂ ವ್ಯವಸಾಯ ಮಾಡುವವರು ಪೊಲೀಸ್ ಇಲಾಖೆಯಲ್ಲಿ ಒಬ್ಬರು ಸೇವೆ ಸಲ್ಲಿಸುತ್ತಿದ್ದಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಬೋರಮುತ್ತೇನಹಳ್ಳಿ

ಬೋರಮುತ್ತೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೦.೭೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಬೋರಮುತ್ತೇನಹಳ್ಳಿ ಎಂದು ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಈ ಗ್ರಾಮದಲ್ಲಿ ಅತಿ ಶಕ್ತಿಶಾಲಿಯಾದ ಶನೀಶ್ವರ ದೇವಾಲಯವಿದೆ. ಈ ದೇವಾಲಯದಲ್ಲಿ ಬೋರ ಎನ್ನುವವರು ಪೂಜಾ ಸೇವೆ ಮಾಡುತ್ತ ಜನರ ಕಷ್ಟವನ್ನು ಬಗೆಹರಿಸುತ್ತಿದ್ದರಂತೆ. ಆದ ಕಾರಣ ಈ ಗ್ರಾಮಕ್ಕೆ ಬೋರಮುತ್ತೇನಹಳ್ಳಿ ಎಂದು ನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ಕಾಡುಹಂದಿ, ಕಾಡುಮೊಲ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಪಾರಿವಾಳ, ಗರುಡ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ४೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩४ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಈಡಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುಂಚಿಟಿಗ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೩೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೬೭ ಜನಸಂಖ್ಯೆ

ಪ್ರಮಾಣವನ್ನು ಹೊಂದಿದೆ. ಗಂಡಸರು ೧೨೭, ಹೆಂಗಸರು ೧೪೦ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೬ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಕೆಲವು ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ, ಭತ್ತ, ಶೇಂಗಾ, ಅವರೆ, ತೊಗರಿ, ಸೂರ್ಯಕಾಂತಿ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ತೆಂಗು ಹಾಗೂ ಅಡಿಕೆ ಬೆಳೆಯುತ್ತಾರೆ.

ಗ್ರಾಮದಲ್ಲಿ ಒಬ್ಬರು ಸರ್ಕಾರಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಉಳಿದಂತೆ ಗ್ರಾಮದಲ್ಲಿ ವ್ಯವಸಾಯ ಮಾಡುತ್ತಾರೆ. ಉಳಿದಂತೆ ಬೇರೆ ಯಾವುದೇ ಕಾರ್ಖಾನೆಗಳೂ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೊಟಗಾರ್ಲಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಟಗಾರ್ಲಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ರಂಟವಾಳ ಅಂಚೆ ಕಚೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೭.೨೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಅಂಗಡಿ ಇದೆ.

ಗ್ರಾಮದಲ್ಲಿ ಶನೀಶ್ವರಸ್ವಾಮಿ ಹಾಗೂ ಮಾರಮ್ಮನ ದೇವಾಲಯವಿದೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಭೀಮನಕುಂಟೆ

ಭೀಮನಕುಂಟೆ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೪೭.೭೪ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಕೊಟಗಾರ್ಲಹಳ್ಳಿ ಭೂವಿಸ್ತೀರ್ಣಕ್ಕೆ ಸೇರಿದೆ. ಭೀಮ ಎಂಬ ವ್ಯಕ್ತಿ ಮತ್ತು ಕಟ್ಟೆ ಎರಡೂ ಹೆಸರು ಕೂಡಿಕೊಂಡು ಭೀಮನಕುಂಟೆ ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಜಿಡಿಗುಟ್ಟೆ ಹಾಗೂ ರಂಗಪ್ಪನ ಗುಟ್ಟೆ ಎನ್ನುವ ಎರಡು ಗುಟ್ಟೆಗಳನ್ನು ಹೊಂದಿದೆ.

ಗ್ರಾಮವು ಒಂದು ಕುರುಚಲು ಗಿಡಗಳ ಕಾಡುಪ್ರದೇಶವನ್ನು ಹೊಂದಿರುವಂತೆ ಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ, ಜಿಂಕೆ, ಚಿರತೆ ಹಾಗೂ ಕರಡಿಗಳು ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗೂಬೆ, ಹಾಲಕ್ಕಿ, ಕಾಗೆ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಕೆರೆ ಇದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯಿತ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗಾಣಿಗರು ಹಾಗೂ ಬ್ರಾಹ್ಮಣ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೧೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೭೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೮೪, ಹೆಂಗಸರು ೨೮೯ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅಲಸಂದೆ, ಶೇಂಗಾ ಬೆಳೆಯುತ್ತಾರೆ.

ಗ್ರಾಮದಲ್ಲಿ ಒಂದು ಆಧುನಿಕ ಮಹಿಳಾ ಡೈರಿ ಇದೆ. ಗ್ರಾಮದಲ್ಲಿ ಒಬ್ಬರು ರಿಸರ್ಚ್ ವಿಜ್ಞಾನಿ, ವಕೀಲರು ಹಾಗೂ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಒಬ್ಬರು ಗ್ರಾಮದಲ್ಲಿದ್ದಾರೆ. ಉಳಿದಂತೆ ಬೇರೆ ಯಾವುದೇ ಕಾರ್ಖಾನೆಗಳೂ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯಿತ್ತಿ ಕ್ಷೇತ್ರ ಹಾಗೂ ಕೊಟಗಾರ್ಲಹಳ್ಳಿ ಗ್ರಾಮಪಂಚಾಯಿತ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯಿತ್ತಿಯ ಸದಸ್ಯರು ಹಾಗೂ ಒಬ್ಬರು ಪಂಚಾಯಿತ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಟಗಾರ್ಲಹಳ್ಳಿ ಗ್ರಾಮಪಂಚಾಯಿತ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಕೊಟಗಾರ್ಲಹಳ್ಳಿ ಅಂಚೆ ಕಚೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂವರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೬.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಅಂಗಡಿಯಿದೆ.

ಗ್ರಾಮದಲ್ಲಿ ಆಂಜನೇಯ ಸ್ವಾಮಿ ದೇವಾಲಯವಿದೆ. ಪ್ರತಿವರ್ಷ ಜಾತ್ರಾ ಮಹೋತ್ಸವವನ್ನು ಆಚರಿಸುತ್ತಾರೆ. ಉಳಿದಂತೆ ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

**ಬಿಟ್ಟಿನಕುರಿಕೆ**

ಬಿಟ್ಟಿನಕುರಿಕೆ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೯.೦೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಬೆಟ್ಟಯ್ಯ + ಕೂರಿಗೆ > ಬೆಟ್ಟನಕೂರಿಗೆ > ಬಿಟ್ಟನಕುರಿಕೆ ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಚೌಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಜೆ.ಡಿ. ಗುಟ್ಟೆ ಎನ್ನುವ ಒಂದು ಗುಟ್ಟೆ ಗ್ರಾಮದಲ್ಲಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಮೊಲ, ಕರಡಿ, ನರಿ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಮರಕುಟಿಗ, ಬೆಳ್ಳಕ್ಕಿ, ಕಾಗೆ, ಕೋಗಿಲೆ, ಗಿಳಿ ಮೊದಲಾದವುಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೩ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದಲ್ಲಿ ೧ ಕೆರೆ ಮತ್ತು ೧ ದೊಡ್ಡ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾಕಷ್ಟು ಸಾರ್ವಜನಿಕ ನಲ್ಲಿಗಳು, ೧ ತೊಟ್ಟಿ ಹಾಗೂ ೪ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಕುರುಬ, ಆದಿಕರ್ನಾಟಕ, ನಾಯಕ ಜನಾಂಗದವರಿದ್ದು ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೮೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೫೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೨೭, ಹೆಂಗಸರು ೩೨೯ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್, ಓಮ್ನಿ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೧೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ಕೆಲವರು ಕೂಲಿ ಕೆಲಸ ಮಾಡುವವರಿದ್ದಾರೆ. ರಾಗಿ ಮತ್ತು ಭತ್ತ ಮುಖ್ಯ ಆಹಾರ ಬೆಳೆಗಳಾಗಿದ್ದು ಉಳಿದಂತೆ ಶೇಂಗಾ, ತೊಗರಿ, ಅವರೆ ಬೆಳೆಯುವರು. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು, ಹೂವು ಬೆಳೆಯುತ್ತಾರೆ. ಹೂವಿನ ಮೊಗ್ಗು, ಅಡಿಕೆ ಹಾಗೂ ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಒಂದು ಆಧುನಿಕ ಮಿನಿ ಡೈರಿಯು ಗ್ರಾಮದಲ್ಲಿದೆ.

ಅಂಚೆ ಕಛೇರಿ, ಶಿಕ್ಷಣ ಇಲಾಖೆ, ಕೆಇಬಿ, ಬಿಎಂಟಿಸಿ ಸೇರಿದಂತೆ ೫ ಜನ ಸರ್ಕಾರಿ ನೌಕರರಾಗಿದ್ದು ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಒಬ್ಬರು ವೈದ್ಯರು ಇದ್ದಾರೆ. ಉಳಿದಂತೆ ಬೇರೆ ಯಾವುದೇ ಸಾಂಪ್ರದಾಯಿಕ ಉದ್ಯೋಗ ಕಂಡುಬರುವುದಿಲ್ಲ. ಹೆಚ್ಚಾಗಿ ಹೂವು ಕಟ್ಟುವವರು ಕಂಡುಬರುತ್ತಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದಬ್ಬೇಘಟ್ಟ ಗ್ರಾಮಪಂಚಾಯ್ತಿಗೆ ಸೇರುತ್ತದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ದಬ್ಬೇಘಟ್ಟ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು

ಗ್ರಾಮವು ದಬ್ಬೇಘಟ್ಟ ಗ್ರಾಮದ ಅಂಚೆ ಕಚೇರಿಗೆ ಸೇರಿದೆ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳು ಮತ್ತು ೪ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೫೮.೨೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಸತ್ಯಮ್ಮ, ಆಂಜನೇಯ, ಮಾರಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಆಷಾಢ ಮಾಸದಲ್ಲಿ ಸತ್ಯಮ್ಮ ಹಾಗೂ ಮಾರಮ್ಮನ ಜಾತ್ರೆಯನ್ನು ಬಲಿ, ಹರಕೆಯೊಂದಿಗೆ ಆಚರಿಸುವರು. ಶ್ರಾವಣ ಮಾಸದಲ್ಲಿ ಆಂಜನೇಯಸ್ವಾಮಿ ಆರತಿಯನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬ್ರಹ್ಮದೇವರಹಳ್ಳಿ

ಬ್ರಹ್ಮದೇವರಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೫೪.೬೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಬ್ರಹ್ಮದೇವ ನಂತರ ಬೊಮ್ಮ > ಲಿಖಿತವಾಗಿ ಬ್ರಹ್ಮದೇವರ ಹಳ್ಳಿಯಾಗಿದೆ. ಆಡುಭಾಷೆಯಲ್ಲಿ ಇಂದಿಗೂ ಬೊಮ್ಮದೇವರ ಹಳ್ಳಿ ಎಂದೇ ಕರೆಯುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನಿಂದ ಕೂಡಿದ್ದು ಬೆಟ್ಟ ಗುಡ್ಡಗಳನ್ನು ಹೊಂದಿದೆ.

ಗ್ರಾಮವು ಅರಣ್ಯವನ್ನು ಹೊಂದಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ಚಿರತೆ, ತೋಳಗಳು ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩ ಸಾರ್ವಜನಿಕ ನಲ್ಲಿಗಳು ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ, ನಾಯಕ, ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ಒಟ್ಟು ೧೯೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೮೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೩೨ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೨ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೭– ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನ್ನೇನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ. ಗ್ರಾಮದಲ್ಲಿ ಇಬ್ಬರು ಶಿಕ್ಷಕರು ಸರ್ಕಾರಿ ಉದ್ಯೋಗದಲ್ಲಿದ್ದಾರೆ.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಆರತಿ, ಹರಕೆ ಹಾಗೂ ಬಲಿಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬ್ರಹ್ಮದೇವರಹಳ್ಳಿ ಕಾವಲ್

ಬ್ರಹ್ಮದೇವರಹಳ್ಳಿ ಕಾವಲ್ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೩ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೫೩೫.೦೦ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿರುವ ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಮೊಲ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ.

೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ತೆಲುಗು, ಕನ್ನಡ ಹಾಗೂ ಬುಡಬುಡಿಕೆ ಭಾಷೆ ಮಾತನಾಡುತ್ತಾರೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಅಲೆಮಾರಿ ಜನಾಂಗ ಹಾಗೂ ಬುಡಬುಡಿಕೆ ಜನಾಂಗದವರು ಗ್ರಾಮದಲ್ಲಿದ್ದಾರೆ.

ಒಟ್ಟು ೧೦ ಮನೆಗಳನ್ನು ಹೊಂದಿರುವ ಗ್ರಾಮವು ೫೨ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಇಟ್ಟಿಗೆ ಹಾಗೂ ಗುಡಿಸಲು ಮನೆಗಳಿವೆ. ಗ್ರಾಮದಲ್ಲಿ ಆಶ್ರಯ, ಜನತಾ

ಯೋಜನೆ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ೩ ಮನೆಗಳು ನಿರ್ಮಾಣವಾಗಿವೆ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ.

ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ. ಗ್ರಾಮವು ಮಧುಗಿರಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿಯು ಮಧುಗಿರಿಯಲ್ಲಿದೆ. ಮಿಡಿಗೇಶಿ ಪೋಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ಗ್ರಾಮದಲ್ಲಿ ಯಲ್ಲಮ್ಮ ದೇವಾಲಯವಿದೆ. ಆಷಾಢ ಮಾಸದಲ್ಲಿ ಎಲ್ಲಮ್ಮನಿಗೆ ಆರತಿ, ಬೇಟೆ, ಬಾನ ಊರಹಬ್ಬದ ಸ್ವರೂಪದಲ್ಲಿ ಮಾಡಲಾಗುತ್ತಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಬೆನಕನಹಳ್ಳಿ

ಬೆನಕನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೮೮.೬೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಬೆನಕ ಎಂಬ ವ್ಯಕ್ತಿಮೂಲದಿಂದ ಈ ಹಳ್ಳಿಗೆ ಈ ಹೆಸರು ಬಂದಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ತೋಳ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಮೂರು ಹಳ್ಳಗಳಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು, ೪ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕಮ್ಮ ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗೊಲ್ಲ, ಆದಿದ್ರಾವಿಡ, ಬೋವಿ, ಮಡಿವಾಳ, ಭಜಂತ್ರಿ, ಶೆಟ್ಟಿ ಬಣಜಿಗ ಜನಾಂಗವಿದ್ದು ಶೆಟ್ಟಿ ಬಣಜಿಗ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೦೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೧೧೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಮಿಡಿಗೇಶಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ

ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ರೆಡ್ಡಿಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೫೬.೧%. ಈ ಗ್ರಾಮದ ಭಾಗವತ ಲಕ್ಷ್ಮೀನರಸಯ್ಯ ಅತ್ಯುತ್ತಮ ಯಕ್ಷಗಾನ ಭಾಗವತರಾಗಿ ಹೆಸರಾಗಿದ್ದಾರೆ. ಹನುಮಂತಪ್ಪ ಮದ್ದಲೆ ವಾದಕರಾಗಿ ಹೆಸರಾಗಿದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಮಾರಮ್ಮ ಮತ್ತು ಆಂಜನೇಯ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬೇಡತ್ತೂರು

ಬೇಡತ್ತೂರು ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೪೯.೭೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಬೇಡತಿ > ಬ್ಯಾಡತಿಯ ಊರು ಬೇಡರ ಊರಾಗಿದ್ದು ಕಾಲಘಟ್ಟದಲ್ಲಿ ಬೇಡತಿ ಮೂಲ ಗ್ರಾಮವನ್ನು ತ್ಯಜಿಸಿದ ಕಾರಣ ಬೇಡ ತ್ಯಜಿಸಿದ ಊರಾಗಿ ಬೇಡತ್ತೂರು ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಬೆಟ್ಟ ಸಾಲು ಪ್ರದೇಶವಾಗಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಎರಡು ಹಳ್ಳಗಳಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೫ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫೦ ಸಾರ್ವಜನಿಕ ನಲ್ಲಿಗಳು, ೨೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ರೆಡ್ಡಿ ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಶೆಟ್ಟಿ ಬಣಜಿಗ, ಆದಿಕರ್ನಾಟಕ, ಮಡಿವಾಳ, ಪರಿಶಿಷ್ಟ ಪಂಗಡ, ಕೊರಚರು, ಆದಿದ್ರಾವಿಡ, ರೆಡ್ಡಿ, ಮುಸ್ಲಿಂ, ಕಮ್ಮಾರ, ವಿಶ್ವಕರ್ಮ ಜನಾಂಗದವರಿದ್ದು ವಿಶ್ವಕರ್ಮ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೯೦೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೦೦೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೨೦೦ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಸಿಹಿ ಊಟ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೧೦ ಎತ್ತಿನ ಗಾಡಿಗಳು, ೧೦ ಟ್ರ್ಯಾಕ್ಟರ್ ಹಾಗೂ ೫೦ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ

ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೯೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬೇಡತ್ತೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ನಾಲ್ಕು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಇಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬೇಡತ್ತೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬೇಡತ್ತೂರು ಅಂಚೆ ಸಂಪರ್ಕ ಒದಗಿಸುತ್ತಿದೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೧೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೬ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೬.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಹೋಟೆಲ್‌ಗಳು ಹಾಗೂ ೫ ಅಂಗಡಿಗಳಿವೆ. ಗ್ರಾಮದಲ್ಲಿ ೧೨ ಜನ ಶಿಕ್ಷಕರು, ಒಂದು ಆಸ್ಪತ್ರೆ ಇದ್ದು ವೈದ್ಯರು ಇದ್ದಾರೆ. ಇಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇದೆ.

ಗ್ರಾಮದಲ್ಲಿ ಶನಿಮಹಾತ್ಮ, ಆಂಜನೇಯ ದೇವಾಲಯಗಳಿವೆ. ಪ್ರತಿವರ್ಷ ಆಂಜನೇಯನ ಜಾತ್ರೆಯನ್ನು ಆರತಿ, ಹರಕೆಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

ಮುಖವೀಣೆ ಕಲಾವಿದರಾದ ಹನುಮಂತಪ್ಪ ಹಾಗೂ ಇವರ ಮಗ ನಾರಾಯಣಪ್ಪ, ತಮ್ಮ ಆಂಜಿನಪ್ಪ ಇವರು ಇಲ್ಲಿ ನೆಲೆಸಿದ್ದಾರೆ. ಮೂಡಲಪಾಯಕ್ಕೆ ಬೇಕಾದ ರಂಗಸಜ್ಜಿಗೆ ಒದಗಿಸುವ ೧೫೦ ವರ್ಷಗಳ ಇತಿಹಾಸವಿರುವ ಲೇ॥ ತಿಮ್ಮಯ್ಯನವರ ಮೊಮ್ಮಗ ಬಿ.ಎನ್.ಜಗದೀಶ್ ಇದೇ ಊರಿನವರು. ಮಡಿವಾಳ ವೆಂಕಟರವಣಪ್ಪ ಮೂಡಲಪಾಯ ಭಾಗವತರು ಇಲ್ಲಿ ನೆಲೆಸಿದ್ದಾರೆ.

## ಬಿದರಕೆರೆ

ಬಿದರಕೆರೆ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೨೩.೬೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬೆಟ್ಟದ ಸಾಲು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಬೆಟ್ಟದ ಸಾಲು ಪ್ರದೇಶವಾಗಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ

ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಪರಿಶಿಷ್ಟ ಜಾತಿ, ಆದಿಕರ್ನಾಟಕ, ಶೆಟ್ಟಿ ಬಣಜಿಗ, ಈಡಿಗ, ಶೆಟ್ಟಿ, ಕುಂಬಾರ ಜನಾಂಗವಿದ್ದು, ಈಡಿಗ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೨೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೪೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೯ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರ ಸಂಖ್ಯೆ ಕಡಿಮೆ ಇದ್ದು ರಾಗಿ, ಜೋಳ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬೇಡತ್ತೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಚೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬೇಡತ್ತೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬೇಡತ್ತೂರು ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೨.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೨ ಅಂಗಡಿಗಳಿವೆ. ಗ್ರಾಮದಲ್ಲಿ ಶಿಕ್ಷಣ ಇಲಾಖೆ, ಪೊಲೀಸ್, ಕಂದಾಯ ಇಲಾಖೆಯಲ್ಲಿ ೬ ಜನ ಸರ್ಕಾರಿ ಉದ್ಯೋಗದಲ್ಲಿದ್ದಾರೆ.

ಗ್ರಾಮದಲ್ಲಿ ಹನುಮಂತರಾಯ, ಕಾವಲಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬೆಲ್ಲದಮಡುಗು

ಬೆಲ್ಲದಮಡುಗು ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೯೬.೧೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮದ ಪ್ರಾಚೀನ ಹೆಸರು ಬೆಳೆದಮಡುಗು. ಈ ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ

ಗ್ರಾಮದಲ್ಲಿ ಹೆಚ್ಚಾಗಿ ಹಗೇವುಗಳು ಇದ್ದವು. ಇದರಲ್ಲಿ ಗ್ರಾಮಸ್ಥರು ಬೆಳೆದಂತಹ ಧಾನ್ಯಗಳನ್ನು ಶೇಖರಣೆ ಮಾಡುತ್ತಿದ್ದರಂತೆ. ನೂರಾರು ವರ್ಷಗಳ ಕಾಲ ಕೆಡದಂತೆ ಇಡುತ್ತಿದ್ದರಂತೆ. ಆದ ಕಾರಣ ಈ ಗ್ರಾಮಕ್ಕೆ ಬೆಳೆದಮಡುಗು ಎಂದು ನಾಮಕರಣ ಮಾಡಲಾಗಿದೆ. ನಂತರ ಜನರು ಗ್ರಾಮವನ್ನು ಬೆಲ್ಲದಮಡುಗು ಎಂದು ಕರೆಯುತ್ತಿದ್ದಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಬಸವಣ್ಣನ ಬೆಟ್ಟವಿದೆ. ಗ್ರಾಮವು ಗುಡ್ಡ ಬೆಟ್ಟ ಪ್ರದೇಶವನ್ನು ಹೊಂದಿರುವುದರಿಂದ ಸ್ವಲ್ಪ ಪ್ರಮಾಣದ ಅರಣ್ಯ ಪ್ರದೇಶವಿದೆ. ಇಲ್ಲಿ ಪ್ರಾಣಿಗಳಾದ ನರಿ, ಹಂದಿ, ತೋಳ, ಮೊಲ, ಚಿರತೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆಯಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಕುರುಬ, ಗೊಲ್ಲ, ಕುಂಚಿಟಿಗ, ನಾಯಕ, ವೈಷ್ಣವ, ಲಿಂಗಾಯಿತ ಜನಾಂಗದವರಿದ್ದು ವೈಷ್ಣವ ಜನಾಂಗದವರು ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೨೬೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೧೦೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೬೧ ಮತ್ತು ಹೆಂಗಸರು ೫೪೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಸಿಹಿ ಊಟ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್, ಆಟೋ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಜೋಳ ಮತ್ತು ರಾಗಿ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮದಲ್ಲಿ ಶಿಕ್ಷಣ ಇಲಾಖೆ, ಪೊಲೀಸ್, ವೈದ್ಯರು, ಇಂಜಿನಿಯರ್, ವಕೀಲರು ಸೇರಿದಂತೆ ೧೦ ಜನ ನೌಕರಿಯಲ್ಲಿದ್ದಾರೆ. ಬಿ.ಪಿ. ಗಂಗಾಧರ್ ವಕೀಲರು. ಇವರ ಪುತ್ರ ಜ್ಯೋತಿಪ್ರಕಾಶ್ ಮಿರ್ಜಿ ಐಪಿಎಸ್ ಅಧಿಕಾರಿಗಳಾಗಿದ್ದಾರೆ. ಬಿ.ಎಸ್.ಶಿವಕುಮಾರ್ ಎಂಬ ವಿಭಾಗೀಯ ಡಿವಿಜನಲ್ ಸಿವಿಲ್ ಇಂಜಿನಿಯರ್ ಇದ್ದಾರೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಗುಡಿಕಾರರು ಇದ್ದು ಟೈಲರ್‌ನಂತಹ ಆಧುನಿಕ ಉದ್ಯೋಗ ಮಾಡುವ ಒಬ್ಬರು ಗ್ರಾಮದಲ್ಲಿದ್ದಾರೆ. ಗ್ರಾಮದಲ್ಲಿ ಊಟದ ಎಲೆ ತಯಾರಿಸುವ ಸಣ್ಣ ಕೈಗಾರಿಕೆಯು ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಡಿ.ವಿ. ಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಮೂವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಡಿ.ವಿ. ಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ದಬ್ಬೆಘಟ್ಟ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೬೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ಉನ್ನತೀಕರಿಸಿದ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೧೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಆರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೭೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಅಂಗಡಿಯಿದೆ.

ಗ್ರಾಮದಲ್ಲಿ ಚೌಡೇಶ್ವರಿ, ಕಂಬದ ರಂಗಪ್ಪ, ಬಸವಣ್ಣ, ಜುಂಜಪ್ಪ ದೇವಾಲಯಗಳಿವೆ. ಶ್ರಾವಣ ಮಾಸದಲ್ಲಿ ಪ್ರತಿ ವರ್ಷವೂ ಜುಂಜಪ್ಪನ ಜಾತ್ರೆಯನ್ನು ಆಚರಿಸುವರು. ಉಳಿದಂತೆ ಯುಗಾದಿ, ಶಿವರಾತ್ರಿ, ದೀಪಾವಳಿ ಮೊದಲಾದ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ರೈತಸಂಘ, ದಲಿತ ಸಂಘರ್ಷ ಸಮಿತಿ ಇಂದಿಗೂ ಜಾಗೃತವಾಗಿವೆ.

## ಬೆಲ್ಲದಮಡಗು ಕ್ರಾಸ್

ಬೆಲ್ಲದಮಡಗು ಕ್ರಾಸ್ ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ೧೦ ಕಿಮೀ ದೂರದಲ್ಲಿದೆ. ಬೆಲ್ಲದಮಡಗು ಗ್ರಾಮದ ಹೊರವಲಯದಲ್ಲಿದೆ. ಹೊಸದಾಗಿ ಗ್ರಾಮ ರಚನೆಯಾಗಿದ್ದರಿಂದಾಗಿ ಕೈಮರ ಅಥವಾ ಬೆಲ್ಲದಮಡು ಬಸ್ ನಿಲ್ದಾಣವಾಗಿ ಬೆಲ್ಲದಮಡು ಕ್ರಾಸ್ ಎಂದು ಕರೆಯಲಾಗುವುದು. ಒಟ್ಟು ೫೦ ಮನೆಗಳನ್ನು ಹೊಂದಿದ್ದು ೧೯೪ ಜನಸಂಖ್ಯೆಯನ್ನು ಹೊಂದಿದೆ. ಒಕ್ಕಲಿಗರು ಅಧಿಕ ಸಂಖ್ಯೆಯಲ್ಲಿದ್ದು ನಾಯಕ, ಕುರುಬ ಜನಾಂಗದವರು ಕಿರುಸಮುದಾಯವಾಗಿದೆ. ಗ್ರಾಮದಲ್ಲಿ ಕನ್ನಡ, ತೆಲುಗು ಮಾತನಾಡುತ್ತಾರೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ದೊಡ್ಡವೀರಗೊಂಡನಹಳ್ಳಿ ಗ್ರಾಮಪಂಚಾಯಿತ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಮತ್ತು ಕೂಲಿ ಮುಖ್ಯ ಕಸುಬಾಗಿದೆ. ಶಿಕ್ಷಣ, ಸಾರಿಗೆ ಹಾಗೂ ಆರೋಗ್ಯ ಇಲಾಖೆಯಲ್ಲಿ ಐದು ಜನ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮದಲ್ಲಿ ಮಾರಮ್ಮ ದೇವಾಲಯವಿದೆ. ಮಾರಮ್ಮನಿಗೆ ಆರತಿಯನ್ನು ಹರಕೆ ಹಾಗೂ ಬಲಿಯೊಂದಿಗೆ ಆಚರಿಸುತ್ತಾರೆ. ಅಸಾದಿ ಕುಣಿತ ಇಲ್ಲಿನ ವಿಶೇಷ ಆಕರ್ಷಣೆಯಾಗಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಬನವೇನಹಳ್ಳಿ

ಬನವೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೦೮.೬೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಬಸವಯ್ಯ ಎಂಬುವವನು ಈ ಗ್ರಾಮದ ಮೂಲ ಪುರುಷನಾಗಿದ್ದು ಆತನ ಹೆಸರು ಈ ಗ್ರಾಮಕ್ಕೆ ಇಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿಯ ಕಲ್ಲುಗಳಿಂದ ಕೂಡಿದ್ದು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದ ದಕ್ಷಿಣಕ್ಕೆ ಪೆನುಗೊಂಡೆ ಹಾಗೂ ಉತ್ತರಕ್ಕೆ ವೀರಭದ್ರಸ್ವಾಮಿ ಬೆಟ್ಟವಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಚಿರತೆ, ನರಿ, ತೋಳ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ದೊಡ್ಡ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೬ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೪೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೭೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೯೦ ಮತ್ತು ಹೆಂಗಸರು ೮೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಎತ್ತಿನ ಗಾಡಿ, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ಮುಸಕಿನಜೋಳ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಪೊಲೀಸ್ ಹಾಗೂ ಡಾಕ್ಟರ್ ಸೇರಿದಂತೆ ೪ ಜನ ಸರ್ಕಾರಿ ನೌಕರರಾಗಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಮರುವೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಮರುವೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಗಂಜಲಗುಂಟೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೨ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಮಿನಿ ಅಂಗನವಾಡಿ ಕೇಂದ್ರವಿದ್ದು ೧೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಕಾರ್ಯನಿರ್ವಹಿಸುತ್ತಿದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಹೋಟೆಲ್‌ಗಳು ಹಾಗೂ ೫ ಅಂಗಡಿಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೬೪.೨%.

ಗ್ರಾಮದಲ್ಲಿ ಒಂದು ಮಾರಮ್ಮ ದೇವಾಲಯವಿದ್ದು ಪ್ರತಿ ವರ್ಷ ಫೆಬ್ರವರಿ ತಿಂಗಳಲ್ಲಿ ಹರಕೆ ಹಾಗೂ ಬಲಿಯೊಂದಿಗೆ ಜಾತ್ರೆಯನ್ನು ಆಚರಿಸಲಾಗುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬಂದ್ರೇಹಳ್ಳಿ

ಬಂದ್ರೇಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೨೨.೧೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಬಂದ್ರೆ ಎಂಬ ಸಸ್ಯಮೂಲದಿಂದ ಗ್ರಾಮಕ್ಕೆ ಬಂದ್ರೆಹಳ್ಳಿ ಎಂದು ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಮಲೇರಂಗನಾಥ ಬೆಟ್ಟ (ಮೀನಗೊಂದಿ ರಂಗನಾಥಸ್ವಾಮಿ)ವಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ

ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗುಬ್ಬಚ್ಚಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ದೊಡ್ಡ ಹಳ್ಳ, ಕುಂಟೆ ಹಾಗೂ ಅಚ್ಚಯ್ಯನ ಕಟ್ಟೆಯಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮಡಿವಾಳ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೬೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೮೪೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೩೦ ಮತ್ತು ಹೆಂಗಸರು ೪೧೪ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೩೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೨ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್, ಆಟೋ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಬಂಡೆ ಕೆಲಸ ಮಾಡುವವರು ೫೦% ಜನರಿದ್ದು ಕೇವಲ ವ್ಯವಸಾಯ ಮಾಡುವವರು ೩೦% ಹಾಗೂ ೨೦% ಕೂಲಿ ಮಾಡುವವರಿದ್ದಾರೆ. ಪೊಲೀಸರು, ಶಿಕ್ಷಕರು, ಐಟಿ–ಬಿಟಿ ಸೇರಿದಂತೆ ೧೮ ಜನ ಸರ್ಕಾರಿ ನೌಕರಿಯಲ್ಲಿದ್ದಾರೆ. ಪ್ರೊ. ಮಹಲಿಂಗೇಶ್, ಡಾ.ವಿಜಯ ಮಹಲಿಂಗೇಶ್ ಹಾಗೂ ಕುಮಾರ್ ಸರ್ಕಾರಿ ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಮರುವೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಮೂವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಮರುವೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗಂಜಲಗುಂಟೆ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧೨ ಸ್ತ್ರೀಶಕ್ತಿ ಸಂಘ ಹಾಗೂ ೩ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೬೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ

ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಹೋಟೆಲ್ ಹಾಗೂ ೨ ಅಂಗಡಿಗಳಿವೆ. ಒಂದು ಪ್ರಾಚೀನ ಕಲ್ಯಾಣಿ ಗ್ರಾಮದಲ್ಲಿದೆ.

ಗ್ರಾಮದಲ್ಲಿ ಮೀನಗೊಂದಿ ರಂಗನಾಥಸ್ವಾಮಿ, ಸಿದ್ದೇಶ್ವರ, ಯಲ್ಲಮ್ಮ, ಬಿದಿರಮ್ಮ, ಬಸವಣ್ಣ ಹಾಗೂ ಮಾರಮ್ಮ ದೇವಾಲಯಗಳಿವೆ. ಮೀನಗೊಂದಿ ರಂಗನಾಥಸ್ವಾಮಿಯ ತೇರು ಹಾಗೂ ಜಾತ್ರೆಯನ್ನು ಪ್ರತಿ ವರ್ಷ ಏಪ್ರಿಲ್ ತಿಂಗಳಿನಲ್ಲಿ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮುಸ್ಲಿಂ ಬಾಂಧವರು ಮುಸ್ಲಿಂ ಹಬ್ಬಗಳನ್ನು ಆಚರಿಸುತ್ತಾರೆ. ಇಲ್ಲಿ ಕನಕಕಲಾ ಸಂಘವಿದ್ದು ಡೊಳ್ಳು ಕಲಾತಂಡವಿದೆ. ಲಕ್ಷ್ಮೀಕಾಂತ ಎಂಬ ಕವಿ ಕವನ ಸಂಕಲನ ಪ್ರಕಟಿಸಿದ್ದಾರೆ.

## ಬಿಜವರ

ಬಿಜವರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೯೭.೩೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಮಧುಗಿರಿ ಪಾಳೆಯಗಾರರು ಪುರವರದಿಂದ ಸ್ಥಳಾಂತರಗೊಂಡು ಈಗಿನ ಬಿಜವರ ಗ್ರಾಮದಲ್ಲಿ ಮೊದಲಿಗೆ ಬಿಜ್ಜಮಹಾದೇವಿ (ವಿಜಯಮಹಾದೇವಿ) ಎಂಬ ಗ್ರಾಮದೇವತೆಯನ್ನು ಸ್ಥಾಪಿಸಿದರು. ಇಲ್ಲಿನ ಗ್ರಾಮ ನಿರ್ಮಾಣವು ದೇವತೆಯ ಹೆಸರಾದ ಬಿಜವರದಮ್ಮನ ಹೆಸರಲ್ಲಿ ರೂಪಿತವಾಯಿತು. ಅಲ್ಲಿಂದ ಬಿಜವರ ಆಯಿತು. ಶಾಲಿವಾಹನಶಕ ೧೪೪೬ ರಲ್ಲಿ ಬಿಜವರ ನಿರ್ಮಾಣವಾದ ಬಗೆಗೆ ಶಾಸನದ ಉಲ್ಲೇಖವಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಮಧುಗಿರಿ ಬೆಟ್ಟ ಹಾಗೂ ಗ್ರಾಮದ ಸುತ್ತಲೂ ಸಣ್ಣ ಪುಟ್ಟ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ಚಿರತೆ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩೦ ಸಾರ್ವಜನಿಕ ನಲ್ಲಿಗಳು, ೬ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುಂಚಿಟಿಗ, ಬೇಡರು, ಗೌಡರು, ಲಿಂಗಾಯಿತರು, ಆದಿ ದ್ರಾವಿಡ, ವಿಶ್ವಕರ್ಮ ಜನಾಂಗದವರಿದ್ದಾರೆ. ಕಮ್ಮಾರ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೨೦೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೪೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೦೨ ಮತ್ತು ಹೆಂಗಸರು ೩೪೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೪೭ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ ಮತ್ತು ಜೋಳ ಮುಖ್ಯ ಬೆಳೆಯಾಗಿದೆ. ವಾಣಿಜ್ಯ ಬೆಳೆಯಾಗಿ ತೆಂಗು ಹಾಗೂ ಅಡಿಕೆ ಬೆಳೆಯುತ್ತಾರೆ. ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಸರ್ಕಾರಿ ಡೈರಿ ಹಾಗೂ ಎರಡು ಖಾಸಗಿ ಡೈರಿಗಳಿವೆ. ರೇಷ್ಮೆ ವ್ಯಾಪಾರ ಗ್ರಾಮದಲ್ಲಿದೆ.

ಶಿಕ್ಷಕರು ಹಾಗೂ ವಕೀಲರು ಸೇರಿದಂತೆ ೫ ಜನ ಸರ್ಕಾರಿ ನೌಕರರಾಗಿದ್ದು ತೋರಣ, ಮ್ಯಾಟ್ ಮಾಡುವ ಒಂದು ಸಣ್ಣ ಕೈಗಾರಿಕೆ ಗ್ರಾಮದಲ್ಲಿದೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ೧೦ ಜನ ಗ್ರಾಮದಲ್ಲಿದ್ದಾರೆ. ಪ್ರಾಧ್ಯಾಪಕ ಡಾ.ಬಿ.ಎನ್.ನಾಗಭೂಷಣಯ್ಯ, ಇಂಜಿನಿಯರ್ ಬಿ.ಎನ್.ವೆಂಕಟಸ್ವಾಮಿ, ಮಂಜುನಾಥ್, ವೈದ್ಯರಾದ ಡಾ.ಮಂಜುನಾಥ್ ಈ ಗ್ರಾಮದ ಸರ್ಕಾರಿ ಉದ್ಯೋಗಸ್ಥರಾಗಿದ್ದಾರೆ. ಸಹಾಯಕ ನಿರ್ದೇಶಕರೂ ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬಿಜವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಿಜವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬಿಜವರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೮೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೯.೮೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಹೋಟೆಲ್ ಹಾಗೂ ೨ ಅಂಗಡಿಗಳಿವೆ. ಗ್ರಾಮದಲ್ಲಿ ಒಂದು ಗ್ರಂಥಾಲಯವಿದ್ದು ೧೦೦೦ ಪುಸ್ತಕಗಳು, ಒಬ್ಬರು ಗ್ರಂಥಪಾಲಕರಿದ್ದಾರೆ. ಒಂದು ನರ್ಸ್ ಘಟಕವಿದೆ.

ಗ್ರಾಮದಲ್ಲಿ ವೀರಭದ್ರಸ್ವಾಮಿ, ಗಣೇಶ, ಮಾರಮ್ಮ, ಆಂಜನೇಯ ದೇವಾಲಯಗಳಿವೆ. ಬಿಜವರ ಆಂಜನೇಯನ ಬೃಹತ್ ದೇವಾಲಯವಿದ್ದು ಕಲ್ಯಾಣಿ, ನವಮಂಟಪ, ಗೋಪುರವಿದೆ. ಇಲ್ಲಿನ ಆಂಜನೇಯ ದೇವರನ್ನು ಹನುಮಂತರಾಯನೆಂತಲೂ ಕರೆಯಲಾಗುವುದು. ಇದು ಹಿಂದೆ ಮಧುಗಿರಿ ಪಾಳೆಯಗಾರರ ಕಾಲದಲ್ಲಿ ಪ್ರಸಿದ್ಧಿ ಪಡೆದ ದೈವವಾಗಿತ್ತು. ಗ್ರಾಮದಲ್ಲಿ ಹಿಂದೂ ಹಬ್ಬಗಳಾದ ಯುಗಾದಿ, ದೀಪಾವಳಿ, ಶಿವರಾತ್ರಿ, ಮಹಾನವಮಿ, ಗೌರಿ–ಗಣೇಶನ ಹಬ್ಬವನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬಕಡಿ ಚನ್ನಯ್ಯನಪಾಳ್ಯ

ಬಕಡಿ ಚನ್ನಯ್ಯನಪಾಳ್ಯ (ಬಿ.ಸಿ. ಪಾಳ್ಯ) ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೯೭.೩೪ ಹೆಕ್ಟೇರ್ ಹೊಂದಿದ್ದು ಬಿಜವರ ವಿಸ್ತೀರ್ಣದಲ್ಲಿ ಸೇರಿರುವ ಕಂದಾಯ ಗ್ರಾಮವಾಗಿದೆ.

ಗ್ರಾಮದ ಪೂರ್ಣ ಹೆಸರು ಬಕಡಿ ಚನ್ನಯ್ಯನಪಾಳ್ಯ. ಚನ್ನಯ್ಯ ಎನ್ನುವವರು ಮೊಟ್ಟಮೊದಲು ಪಾಯ ಹಾಕಿ ಮನೆ ಕಟ್ಟಿದ್ದರು. ಹೆಚ್ಚಾಗಿ ಬಂಡೆಗಳು ಇದ್ದ ಕಾರಣ ಬಕಡಿ ಚನ್ನಯ್ಯನ ಪಾಳ್ಯ ಎಂದು ನಾಮಕರಣ ಮಾಡಿದ್ದಾರೆ ಎಂದು ಹಿರಿಯರು ಹೇಳುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಮಲ್ಲೇರಂಗಪ್ಪನಬೆಟ್ಟ, ಚಿಕ್ಕನರಸಯ್ಯನ ಬೆಟ್ಟ, ಈರಣ್ಣನ ಬೆಟ್ಟಗಳಿದ್ದು ಸುತ್ತಲೂ ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಚಿರತೆ, ನರಿ, ತೋಳ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೪೫ ಸಾರ್ವಜನಿಕ ನಲ್ಲಿಗಳು, ೪ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೧೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೧೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೫೬ ಮತ್ತು ಹೆಂಗಸರು ೨೫೭ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೭ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ, ತೊಗರಿ ಮತ್ತು ಮುಸುಕಿನ ಜೋಳ ಮುಖ್ಯ ಬೆಳೆಯಾಗಿದೆ. ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಗ್ರಾಮದಲ್ಲಿ ಹೂ ಕಟ್ಟುವುದು ಹಾಗೂ ಹೂ ಮಾರಾಟ ಮಾಡುವವರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಹಾಲು ಉತ್ಪಾದಕರ ಸಹಕಾರ ಸಂಘವಿದೆ.

ಗ್ರಾಮದಲ್ಲಿ ಇಬ್ಬರು ಪೊಲೀಸ್ ಹಾಗೂ ಒಬ್ಬರು ನ್ಯಾಯಾಧಿಕಾರಿಯಾಗಿ, ಟೈಲರ್‌ನಂತಹ ಆಧುನಿಕ ಉದ್ಯೋಗ ಮಾಡುವವರು ಮೂವರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬಿಜವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಿಜವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬಿಜವರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ, ೨ ಮಂಜುನಾಥ ಸಂಘ ಹಾಗೂ ೧ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಹೋಟೆಲ್ ಹಾಗೂ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಆಂಜನೇಯನ ಆರತಿ ಹಾಗೂ ಮಾರಮ್ಮನ ಜಾತ್ರೆಯನ್ನು ಹರಕೆ ಹಾಗೂ ಬಲಿಯೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬಿಜವರಹಟ್ಟಿ

ಬಿಜವರ ಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೯೭.೩೪ ಹೆಕ್ಟೇರ್ ಹೊಂದಿದ್ದು ಬಿಜವರ ಭೂ ವಿಸ್ತೀರ್ಣದಲ್ಲಿ ಸೇರಿರುವ ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಕೂಲಿ ಮಾಡುವವರ ಸಂಖ್ಯೆ ಅಧಿಕವಾಗಿದ್ದು ಎಲ್ಲರೂ ಕೂಲಿಗಾರರಾಗಿದ್ದಾರೆ. ಕುಡಿಯುವ ನೀರಿನ ಸಲುವಾಗಿ ೧ ಕೊಳವೆಬಾವಿ ಹೊಂದಿದೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಬೇರೆ ಯಾವುದೇ ಜನಾಂಗದವರು ಗ್ರಾಮದಲ್ಲಿ ಕಂಡುಬರುವುದಿಲ್ಲ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಗ್ರಾಮದಲ್ಲಿ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬಿಜವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಿಜವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬಿಜವರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ವೀರಭದ್ರಸ್ವಾಮಿ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬೊಮ್ಮತಿಮ್ಮನಹಳ್ಳಿ

ಬೊಮ್ಮತಿಮ್ಮನಹಳ್ಳಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೪೨೬.೦೭ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಬೊಮ್ಮತಿಮ್ಮಯ್ಯ ಎಂಬ ವ್ಯಕ್ತಿ ಮೂಲದಿಂದಾಗಿ ಬೊಮ್ಮತಿಮ್ಮನಹಳ್ಳಿ ಎಂದು ಕರೆಯಲಾಗಿದೆ.

ಬಯಲುನಾಡು ಪ್ರದೇಶವಾಗಿದ್ದು ಬಿಳಿಕಲ್ಲು ಹಾಗೂ ಕೆಂಪು ಮಣ್ಣಿನ ಭೂಮಿಯನ್ನು ಹೊಂದಿದೆ. ಪ್ರಾಣಿಗಳಾದ ನರಿ, ತೋಳ, ಮೊಲ, ಕರಡಿ ಪಕ್ಷಿಗಳಾದ ನವಿಲು, ಕಾಗೆ, ಕೋಗಿಲೆ, ಗಿಳಿ, ಗೊರವಂಕ ಮೊದಲಾದವುಗಳು ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೨.೩ ಮಿಮೀ ಮಳೆ ಬೀಳುತ್ತದೆ. ಕವಣದಾಲ ಗ್ರಾಮ ಪಂಚಾಯ್ತಿಯ ಕಿರುನೀರು ಸರಬರಾಜು ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಒಟ್ಟು ೪೩ ಮನೆಗಳಿದ್ದು ೧೫೬ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಒಕ್ಕಲಿಗ, ಲಿಂಗಾಯಿತ, ಕುರುಬ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ವ್ಯವಸಾಯ ಮುಖ್ಯ ಉದ್ಯೋಗವಾಗಿದ್ದು ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ. ಶಿಕ್ಷಣ ಹಾಗೂ ಅಂಚೆ ಇಲಾಖೆಯಲ್ಲಿ ೩ ಜನ ಸೇವೆ ಸಲ್ಲಿಸುತ್ತಿದ್ದಾರೆ. ಮಧುಗಿರಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕವಣದಾಲ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿ ನೌಕರರಿದ್ದಾರೆ. ಸರ್ಕಾರದ ಸಮುದಾಯ ಸೌಲಭ್ಯಗಳು ಚಾಲ್ತಿಯಲ್ಲಿವೆ. ೧ ಸ್ತ್ರೀಶಕ್ತಿ ಸಂಘವಿದೆ. ಒಟ್ಟು ಸಾಕ್ಷರತೆ ಪ್ರಮಾಣ ೭೫.೬% ಇದೆ.

ಗ್ರಾಮದಲ್ಲಿ ಕೊಲ್ಲಾಪುರದಮ್ಮ ದೇವಸ್ಥಾನವಿದೆ. ಕೊಲ್ಲಾಪುರದಮ್ಮನಿಗೆ ಆರತಿ ಮಾಡುವರು. ಪ್ರಾಣಿಬಲಿ, ಮೆರವಣಿಗೆ, ಬಾಯಿಬೀಗ ಏರ್ಪಡುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಬಸವನಹಳ್ಳಿ

ಬಸವನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೦೮.೬೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಈರಣ್ಣನ ಬೆಟ್ಟ ಹಾಗೂ ಪುಟ್ಟೇಶ್ವರ ಬೆಟ್ಟಗಳು ಗ್ರಾಮದಲ್ಲಿವೆ.

ಗ್ರಾಮವು ಬೆಟ್ಟ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಕರಡಿ, ನರಿ, ಚಿರತೆ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಕಾಗೆ, ಕೋಗಿಲೆ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ದೊಡ್ಡ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩೩ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನೇಕಾರ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೨೦೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೯೪೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೧೧ ಮತ್ತು ಹೆಂಗಸರು ೪೨೯ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ,

ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೬೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮದಲ್ಲಿ ಕೂಲಿಯನ್ನು ಮಾಡುವವರ ಸಂಖ್ಯೆ ಹೆಚ್ಚಾಗಿದ್ದು ೨೦% ಜನ ಮಾತ್ರ ವ್ಯವಸಾಯ ಮಾಡುತ್ತಾರೆ. ಭತ್ತ, ರಾಗಿ, ಶೇಂಗಾ, ಜೋಳ ಮುಖ್ಯ ಬೆಳೆಯಾಗಿದೆ. ಐಸ್‌ಕ್ರೀಂ ವ್ಯಾಪಾರ, ಹಣ್ಣು ಹಾಗೂ ತರಕಾರಿಗಳನ್ನು ಮಾರುವವರು ಗ್ರಾಮದಲ್ಲಿದ್ದಾರೆ.

ಶಿಕ್ಷಕರು, ಪೊಲೀಸ್, ಕೆಎಸ್‌ಆರ್‌ಟಿಸಿ ಸೇರಿದಂತೆ ೪ ಜನ ಸರ್ಕಾರಿ ನೌಕರರಾಗಿದ್ದು ಕಂದಾಯ ಇಲಾಖೆಯಲ್ಲಿ ಕೆಲಸ ಮಾಡುವವರೂ ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸಿದ್ದಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಿದ್ದಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ವಡೇರಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧೦ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೦.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೫ ಹೋಟೆಲ್‌ಗಳು ಹಾಗೂ ೫ ಅಂಗಡಿಗಳಿವೆ.

ಗ್ರಾಮದಲ್ಲಿ ಈರಣ್ಣನ ದೇವಾಲಯ, ಚೌಡೇಶ್ವರಿ, ಅಮ್ಮಮ್ಮ, ಪುಟ್ಟಲಿಂಗೇಶ್ವರ, ಮಾರಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಜುಲೈ ತಿಂಗಳನಲ್ಲಿ ಮಾರಮ್ಮನ ಜಾತ್ರೆಯನ್ನು ನಡೆಸುವರು. ಬಲಿ ಹಾಗೂ ಹರಕೆ ಆಚರಣೆ ರೂಢಿಯಲ್ಲಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮುಸ್ಲಿಂ ಬಾಂಧವರು ಮುಸ್ಲಿಂ ಹಬ್ಬಗಳನ್ನು ಆಚರಿಸುತ್ತಾರೆ.

## ಬೂದೇನಹಳ್ಳಿ

ಬೂದೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೬೦.೧೯ ಹೆಕ್ಟೇರ್ ಹೊಂದಿದ್ದು ದೊಡ್ಡಮಾಲೂರು ವಿಸ್ತೀರ್ಣಕ್ಕೆ ಸೇರಿದ ಮಜರೆ ಗ್ರಾಮವಾಗಿದೆ.

ಬೂದಿ ಮಣ್ಣಿನ ಸ್ಥಳದಲ್ಲಿ ಗ್ರಾಮ ರಚನೆಯಾದುದರಿಂದ ಬೂದೇನಹಳ್ಳಿ ಎಂದಾಗಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬಿಳಿಯ ಮರಳು ಕಂಡುಬರುತ್ತದೆ. ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೌಜುಗ, ಗಿಳಿ, ಗೊರವಂಕ

ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಈ ಗ್ರಾಮದಲ್ಲಿ ಅಡಿಕೆ ಮತ್ತು ಬಾಳೆಯ ತೋಟಗಳಿವೆ. ಇಲ್ಲಿ ಕಾಕಡ, ಸೇವಂತಿಗೆ, ಕನಕಾಂಬರ ಹೂಗಳನ್ನು ಬೆಳೆಯುತ್ತಾರೆ. ಈ ಗ್ರಾಮದಲ್ಲಿ ಹೊಂಗೆ, ಬೇವು, ಹುಣಸೆ, ನೇರಳೆ, ಮಾವು ಇತ್ಯಾದಿ ಮರಗಳನ್ನು ಕಾಣಬಹುದು.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ಗ್ರಾಮದಲ್ಲಿ ಬಾವಿಗಳಿದ್ದವು.

ರೆಡ್ಡಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದಲ್ಲಿ ನಾಯಕರು, ಲಂಬಾಣಿಗರು, ಸಾದರು, ರೆಡ್ಡಿ, ಲಿಂಗಾಯಿತ, ಬೋವಿ ಜನಾಂಗದವರಿದ್ದಾರೆ. ಹಾವಾಡಿಗ, ಜೈನರು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು, ಲಂಬಾಣಿ ಮಾತನಾಡುವವರಿದ್ದಾರೆ.

ಒಟ್ಟು ೧೨೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೦೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೦ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ೭ ಎತ್ತಿನ ಗಾಡಿಗಳು, ಟ್ರ್ಯಕ್ಟರ್, ಕಾರು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ, ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಎರಡು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಸಾರಿಗೆ, ಅರಣ್ಯ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೧೦ ಜನ ಸರ್ಕಾರಿ ನೌಕರರು ಇದ್ದಾರೆ. ಟೈಲರಿಂಗ್ ಮಾಡಿರುವ ೩ ಜನ ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡಮಾಲೂರು ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ದೊಡ್ಡಮಾಲೂರು ಗ್ರಾಮಪಂಚಾಯ್ತಿಗೆ ಸೇರಿದೆ. ಒಬ್ಬರು ಸದಸ್ಯರು, ಒಬ್ಬರು ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ದೊಡ್ಡಮಾಲೂರು ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ,

ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೭೬%. ಬ್ರೈಟ್ ಪಬ್ಲಿಕ್ ಸ್ಕೂಲ್ ಇಗೆ. ಇಲ್ಲಿ ೧೧೦ ಮಕ್ಕಳು, ೮ ಜನ ಶಿಕ್ಷಕರಿದ್ದಾರೆ. ಈ ಗ್ರಾಮದಲ್ಲಿ ಜ್ವರ ಮತ್ತು ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಲಕ್ಷ್ಮೀನರಸಿಂಹಸ್ವಾಮಿ, ಶನಿಮಹಾತ್ಮ ದೇವಾಲಯಗಳಿವೆ. ಶನಿಮಹಾತ್ಮ ಪ್ರಸಿದ್ಧವಾಗಿದ್ದು ಪ್ರತಿವರ್ಷ ಜಾತ್ರೆ ನಡೆಯುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಗ್ರಾಮದ ದಕ್ಷಿಣದಲ್ಲಿ ಗ್ರಾಮಕ್ಕೆ ಸೇರಿದಂತೆ ವೀರಗಲ್ಲಿದೆ.

ಈ ಗ್ರಾಮಕ್ಕೆ ಪಶ್ಚಿಮ ದಿಕ್ಕಿನಲ್ಲಿ ಬೂದಿಯ ಮಣ್ಣು ಯಥೇಚ್ಛವಾಗಿ ಇರುತ್ತದೆ. ಇದು ಪ್ರಾಚೀನ ಕಾಲದಿಂದಲೂ ಇರುವುದರಿಂದ ಈ ಊರಿಗೆ ಈ ಹೆಸರು ಬಂದಿದೆ.

## ಬೊಮ್ಮೇನಹಳ್ಳಿ

ಬೊಮ್ಮೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೮.೯೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಬೊಮ್ಮಯ್ಯ ಎಂಬ ವ್ಯಕ್ತಿ ಮೂಲದಿಂದಾಗಿ ಬೊಮ್ಮೇನಹಳ್ಳಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಮುಂಗುಸಿ, ತೋಳ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಅರಳಿ ಮರ, ಬೇವು, ನೇರಳೆ, ಮಾವು ಇತ್ಯಾದಿ ಮರಗಳನ್ನು ಕಾಣಬಹುದು. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಪಶ್ಚಿಮಕ್ಕೆ ದಾಸರಹಳ್ಳಿ ಕೆರೆ ಇದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳು, ೧ ಟ್ಯಾಂಕ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಪ್ಪಾರ, ಆದಿದ್ರಾವಿಡ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೩೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೫೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೮೦ ಮತ್ತು ಹೆಂಗಸರು ೨೭೯ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೬ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಶಿಕ್ಷಣ ಇಲಾಖೆ ಹಾಗೂ ಪೋಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ಮೂರು ಜನ ಸರ್ಕಾರಿ

ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ವ್ಯಾಪ್ತಿಗೆ ಒಳಪಟ್ಟಿದೆ. ಕಲಿದೇವಪುರ ತಾಲ್ಲೂಕು ಪಂಚಾಯ್ತಿಗೆ ಸೇರಿದೆ. ಗ್ರಾಮದಲ್ಲಿ ಗ್ರಾಮ ಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. --- ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೩ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೦.೯೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ-ಟೀ ದೊರೆಯುವ ೧ ಹೋಟೆಲ್ ಹಾಗೂ ೨ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡು ಬರುತ್ತವೆ.

ಗ್ರಾಮದಲ್ಲಿ ಅರಳೀಕಟ್ಟೆಯಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬೊಮ್ಮೇನಹಳ್ಳಿ ವಡ್ಡರಹಟ್ಟಿ

ಸಿ.ವಡ್ಡರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೮.೯೨ ಹೆಕ್ಟೇರ್ ಹೊಂದಿದ್ದು ಬೊಮ್ಮನಹಳ್ಳಿಯ ವಿಸ್ತೀರ್ಣದಲ್ಲಿರುವ ಮಜರೆ ಗ್ರಾಮವಾಗಿದೆ. ಜಾತಿ ಮೂಲದಿಂದ ಗ್ರಾಮಕ್ಕೆ ವಡ್ಡರಹಟ್ಟಿ ಎಂಬ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ನರಿ, ಸೀಳುನಾಯಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೨ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ, ಕುರುಬ ಕಿರು ಸಮುದಾಯವಾಗಿದೆ. ಗ್ರಾಮದಲ್ಲಿ ತೆಲುಗು ಮಾತನಾಡುವವರು ಹೆಚ್ಚಿದ್ದಾರೆ.

ಒಟ್ಟು ೧೯೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೫೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೦೦ ಮತ್ತು ಹೆಂಗಸರು ೩೫೦ ಜನರಿದ್ದಾರೆ. ಗ್ರಾಮದಲ್ಲಿ ಹೆಚ್ಚಾಗಿ ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ

ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೬೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯುತ್ತಾರೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಶಿಕ್ಷಣ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ೩ ಜನ ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕಲಿದೇವಪುರ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕಲಿದೇವಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪಾಠಶಾಲೆಯಲ್ಲಿ ೨೨ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೯.೨%. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೪೪.೮೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕೆಮ್ಮು, ಜ್ವರ ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮವು ಎಲ್ಲಾ ರೀತಿಯ ಜನಪದ ಕ್ಷೇತ್ರಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ.

ಗ್ರಾಮದಲ್ಲಿ ಒಂದು ಅರಳಿಕಟ್ಟೆ, ಲಕ್ಷ್ಮೀನರಸಿಂಹಸ್ವಾಮಿ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬೈರಾಪುರ ತಾಂಡ

ಬೈರಾಪುರ ತಾಂಡ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೯೩.೨೭ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮಣ್ಣು ಮತ್ತು ಮರಳು ಕಂಡುಬರುತ್ತದೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಪಕ್ಷಿಗಳಾದ ಗೊರವಂಕ, ಗಿಳಿ, ಪಾರಿವಾಳ ಇತ್ಯಾದಿ ಹಾಗೂ ಅರಳಿ ಮರ, ಮಾವು, ಹೊಂಗೆ ಇತ್ಯಾದಿ ಮರಗಳನ್ನು ಕಾಣಬಹುದು.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೫ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ

ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಲಂಬಾಣಿ ಜನಾಂಗ ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಲಂಬಾಣಿ ಭಾಷೆ ಬಳಕೆಯಲ್ಲಿದೆ.

ಒಟ್ಟು ೩೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೯೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೦ ಮತ್ತು ಹೆಂಗಸರು ೯೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ ಮತ್ತು ಕಲ್ಲಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೫ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ೧೦ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ಅವರೆ ಮತ್ತು ಸೂರ್ಯಕಾಂತಿ ಬೆಳೆಯುತ್ತಾರೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಇಲ್ಲಿ ಶಿಕ್ಷಣ ಇಲಾಖೆ ಸೇರಿದ ಇಬ್ಬರು ಸರ್ಕಾರಿ ನೌಕರರು ಇದ್ದಾರೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಇನ್ನಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕಲಿದೇವಪುರ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕಲಿದೇವಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೫ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ೨೨ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೫.೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೧ ಹೋಟೆಲ್ ಹಾಗೂ ೧ ಅಂಗಡಿಗಳಿವೆ. ಈ ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಸೇವಾಲಾಲ್ ದೇವಾಲಯವಿದೆ. ಗ್ರಾಮದಲ್ಲಿ ಎಲ್ಲಾ ಹಿಂದೂ ಹಬ್ಬಗಳನ್ನು ವಿಶೇಷವಾಗಿ ಹೋಳಿ, ದೀಪಾವಳಿ ಹಾಗೂ ಸೇವಾಲಾಲ್ ಹಬ್ಬವನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬಾಚೇನಹಳ್ಳಿ

ಬಾಚೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೯೯.೬೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಬಾಚ ಎಂಬ ವ್ಯಕ್ತಿ ಮೂಲದಿಂದ ಬಾಚೇನಹಳ್ಳಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲ. ಪಕ್ಷಿಗಳಾದ ಪಾರಿವಾಳ, ಗಿಳಿ ಮೊದಲಾದ ಪಕ್ಷಿಗಳು ನರಿ, ತೋಳ ಇತ್ಯಾದಿ ಪ್ರಾಣಿಗಳು ಅರಳಿಮರ, ಮಾವು, ಹೊಂಗೆಯಂತಹ ಮರಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ

ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩ ಸಾರ್ವಜನಿಕ ನಲ್ಲಿಗಳು, ೧ ಟ್ಯಾಂಕ್ ಇದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ರೆಡ್ಡಿ ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಕುರುಬರು, ನಾಯಕರು, ಅಗಸರು, ಲಿಂಗಾಯಿತರು, ಭಜಂತ್ರಿ, ಬೋವಿ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೭೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೩೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೬೫ ಮತ್ತು ಹೆಂಗಸರು ೧೭೯ ಜನರಿದ್ದಾರೆ. ಗ್ರಾಮದಲ್ಲಿ ಹೆಂಚಿನ ಮನೆ, ಕಲ್ಲಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೩ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ಸಿಮೆಂಟ್ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯುತ್ತಾರೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಶಿಕ್ಷಣ ಇಲಾಖೆ ಮತ್ತು ಸಾರಿಗೆ ಇಲಾಖೆಗಳಿಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಕಲಿದೇವಪುರ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕಲಿದೇವಪುರ ಗ್ರಾಮದಲ್ಲಿ ಗ್ರಾಮ ಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೭.೪೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ ಮತ್ತು ಟೀ ದೊರೆಯುವ ೧ ಹೋಟೆಲ್ ಹಾಗೂ ೨ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಬೊಮ್ಮಪ್ಪ ದೇವಾಲಯ ಮತ್ತು ಅರಳಿಕಟ್ಟೆಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

# ಬಟ್ಟಗೆರೆ

ಬಟ್ಟಗೆರೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೦೪.೯೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಬ್ರಾಹ್ಮಣ ಜನಾಂಗದವರನ್ನು ಭಟ್ಟ ಎಂದು ಕರೆಯುತ್ತಿದ್ದ ಸಂದರ್ಭದಲ್ಲಿ ಬಟ್ಟಗೆರೆ ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಹೊಂಗೆ, ಬೇವು, ನೇರಳೆ, ಅರಳಿ, ಆಲದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಮೊಲ, ಹಂದಿ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಗೊರವಂಕ, ಗೂಬೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ೨೦ ಎಮ್ಮೆ, ೧೫೫ ಕುರಿ ಹಾಗೂ ೩೭೪ ಮೇಕೆಗಳನ್ನು ಸಾಕಿದ್ದಾರೆ. ೫೦ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೨ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೯ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ, ಭಜಂತ್ರಿ, ಕೊಂಗರು, ಶೆಟ್ರು ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೨೦೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೮೭೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೫೦ ಮತ್ತು ಹೆಂಗಸರು ೪೨೧ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೪೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಸೂರ್ಯಕಾಂತಿ, ಬಾಳೆ, ದಾಳಿಂಬೆ, ಅಡಿಕೆ ಮತ್ತು ತೆಂಗನ್ನು ಬೆಳೆಯಲಾಗುತ್ತಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಸಾರಿಗೆ ಇಲಾಖೆಗಳಿಗೆ ಸೇರಿದ ೪ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೊಂಡವಾಡಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ಕುಡಿಯುವ ನೀರಿನ ಸರಬರಾಜು ಕೊಂಡವಾಡಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೊಂಡವಾಡಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೨.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ನ್ಯಾಯಬೆಲೆ ಅಂಗಡಿಯಿದೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೩ ಹೋಟೆಲ್‌ಗಳಿದ್ದು ೫ ಅಂಗಡಿಗಳಿವೆ.

ಗ್ರಾಮದಲ್ಲಿ ಬಸವೇಶ್ವರ ಹಾಗೂ ಮಾರಮ್ಮ ದೇವಾಲಯಗಳಿವೆ. ಗ್ರಾಮದ ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದೇವರಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮಾರಮ್ಮನ ಆರತಿ ಹಾಗೂ ಬಸವಜಯಂತಿಯಂದು ಬಸವೇಶ್ವರನ ಪೂಜೆಯನ್ನು ಮಾಡುವರು.

## ಬ್ಯಾಲ್ಯ

ಬ್ಯಾಲ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೧೮.೭೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಬೆಲಹ ಎಂಬ ಮೂಲ ಹೆಸರು ಬ್ಯಾಲ್ಯ ಎಂದಾಗಿದೆ. ಬೇಲದ ಸಸ್ಯ ಮೂಲದಿಂದ ಈ ಹೆಸರು ಬಂದಿದೆ. ಬೆಲ್ಲ ಮೂಲದ ಕಬ್ಬು ಬೆಳೆಯುತ್ತಿದ್ದರು. ಹಾಗಾಗಿ ಬೆಲ್ಲ ಬ್ಯಾಲ್ಯ ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ಬ್ಯಾಲ್ಯದ ತಿಪ್ಪೆ ಬೆಟ್ಟವಿದೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಬೇವು, ನೇರಳೆ, ಅರಳಿ, ಹೊಂಗೆ, ನೀಲಗಿರಿ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಕೃಷ್ಣಮೃಗ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಹದ್ದು, ಪಾರಿವಾಳ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆ, ಹಂದಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಅಗಸ, ವೀರಶೈವ, ನಾಯಕ, ಕುರುಬ, ಒಕ್ಕಲಿಗ, ಬ್ರಾಹ್ಮಣ,

ಶೆಟ್ಟರು, ಭಜಂತ್ರಿ, ರೆಡ್ಡಿ, ಕೊರಚ, ಜೈನಸ ಮುಸ್ಲಿಂ, ಕ್ರಿಶ್ಚಿಯನ್ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮತ್ತು ಹಿಂದಿ ಮಾತನಾಡುವವರಿದ್ದಾರೆ.

ಒಟ್ಟು ೬೮೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೭೩೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೩೬೧ ಮತ್ತು ಹೆಂಗಸರು ೧೭೩೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೨೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಮುಸುಕಿನಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಸೂರ್ಯಕಾಂತಿ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಹಾಗೂ ಪಶುಚಿಕಿತ್ಸಾಲಯ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ವೈದ್ಯಕೀಯ, ಸಾರಿಗೆ, ವಿದ್ಯುತ್ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೨೦ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬ್ಯಾಲ್ಯ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಬ್ಯಾಲ್ಯ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ನಾಲ್ವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬ್ಯಾಲ್ಯ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಬ್ಯಾಲ್ಯ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಎಸ್.ಬಿ.ಐ. ಬ್ಯಾಂಕ್ ಇದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘ ಹಾಗೂ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಮೂರು ಅಂಗನವಾಡಿ ಕೇಂದ್ರವಿದ್ದು ೧೩೭ ಮಕ್ಕಳಿದ್ದಾರೆ. ಮೂವರು ಕಾರ್ಯಕರ್ತೆ ಹಾಗೂ ಮೂವರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಎಂ.ಹೆಚ್.ಪಿ.ಎಸ್. ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೧೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಏಳು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಪದವಿಪೂರ್ವ ಕಾಲೇಜು ಇದ್ದು ೪೫೦ ವಿದ್ಯಾರ್ಥಿಗಳು, ೧೮ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೮.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಎಸ್‌ಬಿಐ ಬ್ಯಾಂಕ್, ಡಿಸಿಸಿ ಬ್ಯಾಂಕ್, ಅಂಚೆ ಕಛೇರಿಗಳಿವೆ. ಏರ್‌ಟೆಲ್, ಐಡಿಯ, ಬಿಎಸ್‌ಎನ್‌ಎಲ್ ಮೊಬೈಲ್ ಟವರ್‌ಗಳಿವೆ.

ಗ್ರಾಮದಲ್ಲಿ ಸಮುದಾಯಭವನ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇದೆ. ಸಾವಿರಕ್ಕೂ ಹೆಚ್ಚು ಪುಸ್ತಕಗಳನ್ನು ಹೊಂದಿರುವ ಒಂದು ಗ್ರಂಥಾಲಯವಿದ್ದು ಅದರ ನಿರ್ವಹಣೆಗೆ ಒಬ್ಬರು ಗ್ರಂಥಪಾಲಕರನ್ನು

ನೇಮಿಸಲಾಗಿದೆ. ಕಾಫಿ ಮತ್ತು ಟೀ ದೊರೆಯುವ ೫ ಹೋಟೆಲ್ ಇದ್ದು ೮ ಅಂಗಡಿಗಳಿವೆ. ನ್ಯಾಯಬೆಲೆ ಅಂಗಡಿ ಇದೆ. ಪ್ರಾಥಮಿಕ ಆರೋಗ್ಯ ಕೇಂದ್ರವಿದೆ. ಪಶು ಆಸ್ಪತ್ರೆ ಇದೆ. ಆರೋಗ್ಯ ಕೇಂದ್ರ ವಸತಿ ನಿಲಯವಿದೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಈಶ್ವರ, ಗಾಳಿ ಪೂಜಮ್ಮ, ಲಕ್ಷ್ಮೀನರಸಿಂಹ ದೇವಾಲಯಗಳು ಕಂಡುಬರುತ್ತದೆ. ಗ್ರಾಮದಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಈಶ್ವರ ದೇವರ ಜಾತ್ರೆ, ತೇರು ಶಿವರಾತ್ರಿಯಂದು ನಡೆಯುತ್ತದೆ.

ನಾಸಿಕ್‌ಡೋಲು ಕುಣಿತ ಸಂಘವಿದೆ. ಆದಿಕರ್ನಾಟಕ ಜನಾಂಗದ ಚಿಕ್ಕವ್ವ (೬೫ ವರ್ಷ), ಸಂಜೀವಮ್ಮ (೬೫ ವರ್ಷ) ಸೋಬಾನೆ ಪದ ಹಾಡುವ ಕಲಾವಿದರಾಗಿದ್ದಾರೆ.

## ಬ್ರಹಸಮುದ್ರ

ಬ್ರಹ್ಮಸಮುದ್ರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೧೬.೧೦ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ. ಕೆರೆ ಮೂಲದ ಹೆಸರಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೦೬ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಒಕ್ಕಲಿಗ, ಆದಿದ್ರಾವಿಡ, ಭಜಂತ್ರಿ, ಬುಡಬುಡುಕೆ, ರೆಡ್ಡಿ, ಬ್ರಾಹ್ಮಣ, ಶೆಟ್ರು, ವಿಶ್ವಕರ್ಮ, ಅಗಸ ಜನಾಂಗದವರು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೮೧ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೭೬೬ ಜನಸಂಖ್ಯಾ ಪ್ರಮಾಣವನ್ನು ಹೊಂದಿದ್ದು. ಗಂಡು ೩೮೬, ಹೆಣ್ಣು ೩೮೦ ಜನಸಂಖ್ಯಾ ಇದೆ, ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಈ ಗ್ರಾಮದಲ್ಲಿ ಉತ್ತಮ ರಸ್ತೆ ವ್ಯವಸ್ಥೆ ಚರಂಡಿ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೬೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆಯನ್ನು ರೈತರು ಉಪಕಸುಬಾಗಿ ಬಳಸಿಕೊಳ್ಳುತ್ತಾರೆ, ಡೈರಿ ಇದೆ

ಕಂದಾಯ ಇಲಾಖೆ, ಶಿಕ್ಷಣ ಇಲಾಖೆ, ಪೋಲಿಸ್ ಮತ್ತು ಸಾರಿಗೆ ಇಲಾಖೆಗಳಿಗೆ ಸೇರಿದ ಒಟ್ಟು ೦೫ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಅಮೇರಿಕಾದ ಕೃಷಿ ಇಲಾಖೆಯಲ್ಲಿ ಒಬ್ಬರು ಕೆಲಸದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಬ್ರಹ್ಮ ಸಮುದ್ರ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಇಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಬ್ರಹ್ಮ ಸಮುದ್ರ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮವು ಬ್ರಹ್ಮ ಸಮುದ್ರ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ಒಟ್ಟು ೧೨೫ ಮಕ್ಕಳಿದ್ದಾರೆ. ಒಟ್ಟು ೪ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಸುವರ್ಣಮುಖಿ ಸನಿವಾಸ ಪ್ರೌಢಶಾಲೆಯಲ್ಲಿ ೧೮೦ ಮಕ್ಕಳು, ೮ ಜನ ಶಿಕ್ಷಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೨೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂಬತ್ತು ಹೊಟೇಲ್ ಇದ್ದು, ೮ ಅಂಗಡಿಗಳಿವೆ. ಗ್ರಂಥಾಲಯವಿದ್ದು ೭೦೦ ಪುಸ್ತಕಗಳು, ಒಬ್ಬರು ಗ್ರಂಥಪಾಲಕರಿದ್ದಾರೆ. ವಿಎಸ್ಎಸ್ಎನ್ ಇದೆ.

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ೧ ಕರುಗಲ್ಲು ಇದೆ.

ಗ್ರಾಮದಲ್ಲಿ ಶನಿಮಹಾತ್ಮ, ಮಾರಮ್ಮದೇವಿ, ಆಂಜನೇಯ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮಾರಮ್ಮ ದೇವರಿಗೆ ಆರತಿ, ಬಲಿ ನಡೆಸುವರು.

## ಭಕ್ತರಹಳ್ಳಿ

ಭಕ್ತರಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೧.೪೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಕಾವಲಮ್ಮನು ಪ್ರಸಿದ್ಧ ದೇವತೆಯಾಗಿದ್ದು ಇದಕ್ಕೆ ಅಪಾರ ಸಂಖ್ಯೆಯಲ್ಲಿ ಭಕ್ತರಿದ್ದಾರೆ. ಆ ಕಾರಣದಿಂದಲೇ ಭಕ್ತರಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಈರಣ್ಣನ ಗುಟ್ಟೆ ಹಾಗೂ ಸಿದ್ಲುಗುಟ್ಟೆಗಳಿವೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಮೊಲ, ಕಾಡುಹಂದಿ, ನರಿ, ತೋಳ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಮರಕುಟಿಗ, ನವಿಲು, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಗೊಂದಿಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೪ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೮ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ ಜನಾಂಗ ಚಿಕ್ಕ

ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೨೨೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೨೧೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೬೧೨ ಮತ್ತು ಹೆಂಗಸರು ೫೯೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೩೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ೩೦% ಜನ ಕೂಲಿ ಮಾಡುವವರಿದ್ದಾರೆ. ಶೇಂಗಾ, ಜೋಳ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಶಿಕ್ಷಣ ಇಲಾಖೆ, ಪೊಲೀಸ್, ಡಾಕ್ಟರ್, ಇಂಜಿನಿಯರ್ ಸೇರಿದಂತೆ ೮ ಜನ ಸರ್ಕಾರಿ ನೌಕರರಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಮರುವೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ನಾಲ್ವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಮರುವೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ವಡೇರಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ४೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೫೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ಜೆ.ಎಸ್. ರೆಸಿಡೆನ್ಷಿಯಲ್ ಪ್ರೌಢಶಾಲೆ ಇದ್ದು ೧೦೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಎಂಟು ಜನ ಶಿಕ್ಷಕರು ಹಾಗೂ ಇಬ್ಬರು ಸಹಾಯಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೦.೧೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಕಾವಲೇಶ್ವರ, ನರಸಿಂಹಸ್ವಾಮಿ, ಚೌಡೇಶ್ವರಿ, ಮಾರಮ್ಮ ದೇವಾಲಯಗಳಿವೆ. ಜುಲೈನಲ್ಲಿ ಪ್ರತಿ ವರ್ಷ ಕಾವಲೇಶ್ವರ ಆರತಿ ಹಾಗೂ ಮಾರ್ಚ್‌ನಲ್ಲಿ ಮಾರಮ್ಮನ ಆರತಿಯನ್ನು ಹರಕೆ ಹಾಗೂ ಬಲಿಯೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

ಭಕ್ತರಹಳ್ಳಿ ಕಾಮರಾಜು ಬಂಡಾಯ ಸಾಹಿತ್ಯ ಸಂಘಟನೆಯಲ್ಲಿ ಇವರು ಒಬ್ಬರಾಗಿದ್ದು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಡಾ.ಕಾವಲಮ್ಮ ಮಧುಗಿರಿ ಕುರಿತು ಸಂಶೋಧನೆ ನಡೆಸಿ ಪುಸ್ತಕ ಪ್ರಕಟಿಸಿದ್ದು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಇತಿಹಾಸ ಪ್ರಾಧ್ಯಾಪಕಿ, ಅಂಕಣ ಬರಹಗಾರ್ತಿಯಾಗಿದ್ದಾರೆ.

## ಬೆಣಚಕಲ್ಲಹಟ್ಟಿ

ಬೆಣಚಕಲ್ಲಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ದಕ್ಷಿಣ ದಿಕ್ಕಿನಲ್ಲಿದ್ದು ಚಿನಕವಜ್ರ ಗ್ರಾಮದ

ಹೊರವಲಯದಲ್ಲಿದೆ. ಒಟ್ಟು ೨೫ ಮನೆಗಳನ್ನು ಹೊಂದಿದ್ದು ೮೪ ಜನಸಂಖ್ಯೆಯನ್ನು ಹೊಂದಿದೆ. ಗೊಲ್ಲ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಜನತಾ ಯೋಜನೆಯಡಿ ಗ್ರಾಮದಲ್ಲಿ ಮನೆಗಳು ನಿರ್ಮಾಣವಾಗಿವೆ.

ಚಿನಕವಜ್ರ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಮತ್ತು ಕೂಲಿ ಮುಖ್ಯ ಕಸುಬಾಗಿದೆ. ಶಿಕ್ಷಣ ಮತ್ತು ಸಾರಿಗೆ ಇಲಾಖೆಯಲ್ಲಿ ಮೂರು ಜನ ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮದಲ್ಲಿ ಮೈಲಾರಲಿಂಗೇಶ್ವರ ದೇವಾಲಯವಿದೆ. ಯುಗಾದಿಯ ದಿನ ಮೈಲಾರದೇವರ ಗುಡ್ಡದ ಪೂಜೆ ವಿಶೇಷವಾಗಿರುತ್ತದೆ. ಗೊರಪ್ಪಗಳಿಗೆ ಎಡೆ ಅರ್ಪಿಸುವುದು ಇಲ್ಲಿನ ಸಂಪ್ರದಾಯವಾಗಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಬಡಚೌಡನಹಳ್ಳಿ

ಬಡಚೌಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ನಿಟ್ರಹಳ್ಳಿಯ ೫೫೦.೨೪ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ಅರಣ್ಯವನ್ನು ಹೊಂದಿಲ್ಲದಿದ್ದರೂ ಹೊಂಗೆ, ಮಾವು, ಹಲಸು, ಬೇವು, ಅರಳಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಮೊಲ, ನರಿ, ತೋಳ, ಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಕಾಗೆ, ಕೋಗಿಲೆ, ಗೂಬೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆ, ಹಂದಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಮತ್ತು ಜಯಮಂಗಲಿ ನದಿ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೭ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕ್ರೈಸ್ತರು, ಕುರುಬ, ಬೋವಿ, ಮಡಿವಾಳ, ಆದಿದ್ರಾವಿಡ, ಉಪ್ಪಾರ, ನೇಕಾರ, ಗಾಣಿಗಶೆಟ್ರು ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು, ಹಿಂದಿ ಮಾತನಾಡುವವರಿದ್ದಾರೆ.

ಒಟ್ಟು ೮೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೯೦ ಮತ್ತು ಹೆಂಗಸರು ೧೯೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೭ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಡಿಕೆ, ಶೇಂಗಾ, ಬಾಳೆ, ದಾಳಿಂಬೆ ಮತ್ತು ತೆಂಗನ್ನು

ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಕೆಎಸ್‌ಆರ್‌ಟಿಸಿ, ಕೆಇಬಿ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೬ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಜನರು ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡಗದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಪುರವರದಲ್ಲಿ ಪಂಚಾಯಿತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡಗದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡಗದಾಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಅಂಗನವಾಡಿ ಕೇಂದ್ರವಿದ್ದು ೧೮ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ೫೩ ವಿದ್ಯಾರ್ಥಿಗಳು, ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೨೮%.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ ದೇವಾಲಯವಿದೆ. ನಾಗರಕಟ್ಟೆ ಕಂಡುಬರುತ್ತದೆ. ಆಂಜನೇಯಸ್ವಾಮಿಗೆ ಆರತಿ ಮಾಡುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಭೈರವನಗರ

ಭೈರವನಗರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೨೨.೦೫ ಹೆಕ್ಟೇರ್ ಹೊಂದಿದ್ದು ಸುಣ್ಣವಾಡಿ ಭೂ ವಿಸ್ತೀರ್ಣದಲ್ಲಿ ಸೇರಿರುವ ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಹೊಂಗೆ, ಅರಳಿ, ಮಾವು, ಅಕೇಶಿಯಾ, ನೀಲಗಿರಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಕೋಗಿಲೆ, ಗೂಬೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೨೮ ಎಮ್ಮೆ, ೩೧೮ ಕುರಿ, ೧೫೭ ಮೇಕೆಗಳನ್ನು ಸಾಕಿದ್ದಾರೆ. ೨೫ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಮತ್ತು ಜಯಮಂಗಲಿ ನದಿ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳಿದ್ದು

ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೦೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೬೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೭೮ ಮತ್ತು ಹೆಂಗಸರು ೧೮೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೫ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ, ಮುಸುಕಿನಜೋಳ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ಶೇಂಗಾ, ತೊಗರಿ, ದಾಳಿಂಬೆ, ಬಾಳೆ, ಸೂರ್ಯಕಾಂತಿ ಮತ್ತು ತೆಂಗನ್ನು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಮೂವರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡಗದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡಗದಾಲ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡಗದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡಗದಾಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ೧೪ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ೨೩ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೫೦.೯೮%.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯ ದೇವಾಲಯಗಳಿವೆ. ಬೂದಿ ಚಂದ್ರಯ್ಯನ ಮಠವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬಡಕನಹಳ್ಳಿ

ಬಡಕನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೫೬.೨೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಬಡಕ್ಕೆ ಎಂಬ ವ್ಯಕ್ತಿ ಮೂಲದಿಂದಾಗಿ ಗ್ರಾಮವು ಬಡಕನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚುಕಲ್ಲುಗಳಿಂದ ಕೂಡಿರುವ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ–ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ಗ್ರಾಮದಲ್ಲಿ ಹೆಚ್ಚಿನ ಕುಡಿಯುವ ನೀರಿನ ಬಾವಿಗಳಿದ್ದು ಇಂದು ನೋಡಲೂ ಒಂದರೆಡು ಬಾವಿಗಳು ಕಾಣಸಿಗುವುದಿಲ್ಲ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ, ಆದಿಕರ್ನಾಟಕ, ಆದಿದ್ರಾವಿಡ, ಕುಂಬಾರ, ಉಪ್ಪಾರ, ಬ್ರಾಹ್ಮಣ, ಶೆಟ್ರು, ಸಾದರು, ಶೆಟ್ಟಿ ಬಣಜಿಗ, ವಿಶ್ವಕರ್ಮ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೯೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೯೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೫೧ ಮತ್ತು ಹೆಂಗಸರು ೩೪೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಕೆಎಸ್‌ಆರ್‌ಟಿಸಿ, ಸರ್ವೆ ಆಫೀಸ್, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೬ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡ್ಲಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡ್ಲಾಪುರ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡ್ಲಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡ್ಲಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ––– ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೪೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಐವರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೧ ಹೋಟೆಲ್‌ಯಿದ್ದು ೨ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಮಾರಮ್ಮದೇವಿ, ಶನಿಮಹಾತ್ಮ, ಆಂಜನೇಯ ದೇವಾಲಯಗಳಿವೆ. ಪ್ರತಿ ವರ್ಷ ಅದ್ದೂರಿಯಾಗಿ ಜಾತ್ರೆ ನಡೆಯುತ್ತದೆ. ಅಂದು ಊರಿನ ತುಂಬ ದೇವರ ಉತ್ಸವ ನಡೆಯುತ್ತದೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಬಲಿ ಹಾಗೂ ಹರಕೆಯೊಂದಿಗೆ ಮಾರಮ್ಮನ ಹಬ್ಬವನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬೀರನಹಳ್ಳಿ

ಬೀರನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೭.೬೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ನೇರಳೆ, ಮಾವು, ಹಲಸು ಮತ್ತು ನೀಲಗಿರಿ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಕೋಗಿಲೆ, ಪಾರಿವಾಳ, ಹದ್ದು, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ೪೦ ಕುರಿ, ೧೮ ಮೇಕೆ, ೨೦ ಹಂದಿಗಳನ್ನು ಸಾಕಿದ್ದಾರೆ. ೨೫ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೩೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೧೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೩ ಮತ್ತು ಹೆಂಗಸರು ೬೪ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೨ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಶೇಂಗಾ, ದಾಳಿಂಬೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಕೆಇಬಿ, ಶಿಕ್ಷಣ, ಮಿಲಿಟರಿ, ಪೊಲೀಸ್ ಇಲಾಖೆಗೆ ಸೇರಿದ ೬ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಕುರಿ ಸಾಕಾಣಿಕೆ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡ್ಲಾಪುರ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡ್ಲಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡ್ಲಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ೭೪.೪೬% ಗ್ರಾಮದ ಸಾಕ್ಷರತೆ ಇದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಕಾಫಿ ಮತ್ತು ಟೀ ದೊರೆಯುವ ೧ ಹೋಟೆಲ್ ಇದ್ದು ೨ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಕೋಡ್ಲಾಪುರ ಕೆರೆಕೋಡಿಯಲ್ಲಿ ಈ ದೇವಾಲಯವಿದೆ.

ಗ್ರಾಮದಲ್ಲಿ ಪುರಾತನ ಕಾಲದ ಸೂರ್ಯನಾರಾಯಣಸ್ವಾಮಿ, ಧರ್ಮಮ್ಮ ದೇವಾಲಯಗಳಿವೆ. ನಾಗರಕಟ್ಟೆ ಕಂಡುಬರುತ್ತದೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಬಲಿ ಹಾಗೂ ಹರಕೆಯೊಂದಿಗೆ ಧರ್ಮಮ್ಮನ ಹಬ್ಬವನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಭೂತನಹಳ್ಳಿ

ಭೂತನಹಳ್ಳಿ ಗ್ರಾಮವು ಮಧುಗಿರಿಯ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೬೨.೮೯ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಭೂತಪ್ಪ ದೇವರ ಒಕ್ಕಲಾದ ಭೂತಣ್ಣ ಎಂಬ ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ಭೂತನಹಳ್ಳಿ ಎಂದು ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿರುವ ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಮೊಲ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ.

೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಗ್ರಾಮಪಂಚಾಯ್ತಿಯು

ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨ ಸಿಸ್ಟರ್ನ್, ೧ ಕೊಳವೆ ಬಾವಿ, ೮ ಸಾರ್ವಜನಿಕ ನಲ್ಲಿಗಳಿವೆ. ಒಕ್ಕಲಿಗ ಜನಾಂಗದವರು ದೊಡ್ಡ ಸಮುದಾಯದವರಾಗಿದ್ದಾರೆ. ತಿಗುಳ, ಲಿಂಗಾಯಿ ಕಿರು ಸಮುದಾಯವಾಗಿದೆ.

ಒಟ್ಟು ೧೩೪ ಮನೆಗಳನ್ನು ಹೊಂದಿರುವ ಗ್ರಾಮವು ೫೩೪ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಇಟ್ಟಿಗೆ ಹಾಗೂ ಗುಡಿಸಲು ಮನೆಗಳಿವೆ. ಗ್ರಾಮದಲ್ಲಿ ಆಶ್ರಯ, ಜನತಾ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ಕೆಲವು ಮನೆಗಳು ನಿರ್ಮಾಣವಾಗಿವೆ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ.

ಸಾಂಪ್ರದಾಯಿಕ ಎತ್ತಿನಗಾಡಿ ಗ್ರಾಮದಲ್ಲಿದ್ದು ಆಧುನಿಕ ವಾಹನಗಳಾದ ಟ್ರ್ಯಾಕ್ಟರ್ ಹಾಗೂ ಬೈಕ್‌ಗಳಿವೆ. ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆಗಳಾಗಿವೆ. ಗ್ರಾಮದಲ್ಲಿ ೩೧ ಮನೆಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ.

ವ್ಯವಸಾಯ ಮುಖ್ಯ ಕಸುಬಾಗಿದ್ದು ರಾಗಿ, ಭತ್ತ, ಜೋಳ, ಅಡಿಕೆ, ತೆಂಗು ಬೆಳೆಯುವರು. ಉಳಿದಂತೆ ತೊಗರಿ, ಅಲಸಂದೆ, ಕಡಲೇಕಾಯಿ ಬೆಳೆಯುತ್ತಾರೆ. ಭತ್ತ, ರಾಗಿ ಗ್ರಾಮದ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ. ೧ ಡೈರಿಯಿದೆ. ಸಾರಿಗೆ ಶಿಕ್ಷಣ, ಪೊಲೀಸ್ ಹಾಗೂ ಆರೋಗ್ಯ ಇಲಾಖೆಯಲ್ಲಿ ಐದು ಜನ ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದೊಡ್ಡೇರಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡೇರಿ ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿಯು ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೋಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿ ನೌಕರರಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ದೊಡ್ಡೇರಿ ಅಂಚೆ ಸಂಪರ್ಕವನ್ನು ಒದಗಿಸುತ್ತದೆ. ಚರ ದೂರವಾಣಿಗಳು ಗ್ರಾಮದಲ್ಲಿವೆ. ೧ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪೂರಕವಾಗಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ೧೧ ಮಕ್ಕಳು, ಒಬ್ಬರು ಕಾರ್ಯಕರ್ತೆ ಮತ್ತು ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಒಟ್ಟು ೩೬ ವಿದ್ಯಾರ್ಥಿಗಳು, ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಪಠ್ಯಪುಸ್ತಕ, ಸಮವಸ್ತ್ರ, ಶೌಚಾಲಯ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೬೯.೧% ಆಗಿದೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಹೋಟೆಲ್ ಮತ್ತು ೧ ಅಂಗಡಿಯಿದೆ. ಜ್ವರ, ಕೆಮ್ಮು, ಮಲೇರಿಯಾ ಗ್ರಾಮದಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವ ರೋಗಗಳಾಗಿವೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ ದೇವಾಲಯ, ಅರಳಿಕಟ್ಟೆಯಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಬೇಗೂರು ದಾಸರಹಳ್ಳಿ

ಬೇಗೂರು ದಾಸರಹಳ್ಳಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೧೬೦.೧೦ ಹೆಕ್ಟೇರ್‌ನಲ್ಲಿದ್ದು ಜನವಸತಿ ಇಲ್ಲದ ಬೇಚಾರಕ್ ಗ್ರಾಮವಾಗಿದೆ.

ಗ್ರಾಮವು ದೊಡ್ಡೇರಿ ಹೋಬಳಿ ಹಾಗೂ ದೊಡ್ಡೇರಿ ಗ್ರಾಮ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ.

## ಬಾಣಗಾರಹಳ್ಳಿ

ಬಾಣಗಾರಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೭.೦೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಬಾಣಗಾರಹಳ್ಳಿಯ ಪ್ರಾಚೀನ ಹೆಸರು ಬಂಗಾರದ ಹಳ್ಳಿ. ರಂಗನಾಥಸ್ವಾಮಿ ದೇವಸ್ಥಾನದಲ್ಲಿ ಬಿಟ್ಟಂತಹ ಬಾಣ ಈ ಪ್ರದೇಶದಲ್ಲಿ ಬಂದು ಬಿದ್ದಿತಂತೆ. ಬಾಣವು ಬಿದ್ದ ಸ್ಥಳದಲ್ಲಿ ಸ್ಥಾಪನೆಯಾದ ಗ್ರಾಮವೇ ಬಾಣಗಾರಹಳ್ಳಿ ಎಂದು ಹಿರಿಯರು ಹೇಳುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿ ಕಲ್ಲುಗಳಿಂದ ಕೂಡಿದ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ಕೋತಿ, ನರಿ, ಕರಡಿ, ಚಿರತೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಬೆಳ್ಳಕ್ಕಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಒಂದು ಜಾಲಿಹಳ್ಳವಿದ್ದು ಇದು ತಿಮ್ಮಲಾಪುರದಿಂದ ವೆಂಕಟಾಪುರದವರೆಗೆ ಗ್ರಾಮದಲ್ಲಿಂದ ಹರಿದು ಹೋಗುತ್ತದೆ. ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೭೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೮೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೯೯ ಮತ್ತು ಹೆಂಗಸರು ೧೮೪ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಗುಡಿಸಲು ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ೨ ಸಾಂಪ್ರದಾಯಿಕ ಎತ್ತಿನಗಾಡಿ, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಲಸಂದೆ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಗ್ರಾಮದಲ್ಲಿ ಒಬ್ಬರು ಶಿಕ್ಷಕರು ಮತ್ತು ಟೈಲರಿಂಗ್‌ನಂತಹ ಆಧುನಿಕ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡೇರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ದೊಡ್ಡೇರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕವಣದಾಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ––– ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೨ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೯ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು, ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೩.೬%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಮಾರಿ ಗುಡಿಯಿದೆ. ಪ್ರತಿ ವರ್ಷ ಜುಲೈ ತಿಂಗಳಲ್ಲಿ ಅದ್ದೂರಿಯಾದ ಜಾತ್ರೆಯು ಹರಕೆ ಹಾಗೂ ಬಲಿಯೊಂದು

ನಡೆಯುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬಾಣಗಾರನಹಳ್ಳಿ ಬೋವಿ ಕಾಲೋನಿ

ಬಾಣಗಾರನಹಳ್ಳಿ ಬೋವಿ ಕಾಲೋನಿಯು ಮಧುಗಿರಿ ಪಶ್ಚಿಮ ದಿಕ್ಕಿನಲ್ಲಿದ್ದು ಬಾಣಗಾರನಹಳ್ಳಿಯ ಹೊರವಲಯದಲ್ಲಿದೆ.

ಒಟ್ಟು ೨೦ ಮನೆಗಳಿದ್ದು ೭೨ ಜನಸಂಖ್ಯೆ ಇದೆ. ಬೋವಿ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ತೆಲುಗು ಮಾತನಾಡುವವರು ಗ್ರಾಮದಲ್ಲಿದ್ದಾರೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ದೊಡ್ಡೇರಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಕೂಲಿ ಹಾಗೂ ವ್ಯವಸಾಯ ಮುಖ್ಯ ಕಸುಬಾಗಿದೆ. ಪೊಲೀಸ್ ಇಲಾಖೆಯಲೇಲಿ ಒಬ್ಬರು ಸೇವೆ ಸಲ್ಲಿಸುತ್ತಿದ್ದಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಬೊಮ್ಮಯ್ಯನಪಾಳ್ಯ

ಬೊಮ್ಮಯ್ಯನಪಾಳ್ಯವು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಕವಣದಲದ ಹೊರವಲಯದಲ್ಲಿದೆ. ಒಟ್ಟು ೨೫ ಮನೆಗಳಿದ್ದು ೯೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ವೀರಶೈವ, ಒಕ್ಕಲಿಗ, ನಾಯಕ ಹಾಗೂ ಆದಿಕರ್ನಾಟಕ ಜನಾಂಗದವರು ಗ್ರಾಮದಲ್ಲಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ವ್ಯವಸಾಯ ಮುಖ್ಯ ಕಸುಬಾಗಿದ್ದು ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ. ಕವಣದಲ ಗ್ರಾಮ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಬಡ್ಡಯ್ಯನಹಟ್ಟಿ

ಬಡ್ಡಯ್ಯನಹಟ್ಟಿಯು ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ಗರಣಿಯ ಹೊರವಲಯದಲ್ಲಿದೆ. ಬಡ್ಡಯ್ಯ ಎಂಬ ವ್ಯಕ್ತಿ ಮೂಲದಿಂದಾಗಿ ಗ್ರಾಮಕ್ಕೆ ಬಡ್ಡಯ್ಯನಹಟ್ಟಿ ಎಂದಾಗಿದೆ.

ಒಟ್ಟು ೨೪ ಮನೆಗಳಿದ್ದು ೧೧೨ ಜನಸಂಖ್ಯೆ ಇದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ.

ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಪಶುಸಂಗೋಪನೆ ಮುಖ್ಯ ಕಸುಬಾಗಿದೆ. ಪೊಲೀಸ್ ಹಾಗೂ ಶಿಕ್ಷಣ ಇಲಾಖೆಯಲ್ಲಿ ೩ ಜನ ಸೇವೆ ಸಲ್ಲಿಸುತ್ತಿದ್ದಾರೆ. ಗರಣಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಬ್ರಹ್ಮಸಮುದ್ರ ಕ್ರಾಸ್

ಬ್ರಹ್ಮಸಮುದ್ರ ಕ್ರಾಸ್ ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ಬ್ರಹ್ಮಸಮುದ್ರದ ಹೊರವಲಯದಲ್ಲಿ ೧೬ ಕಿ.ಮೀ ದೂರದಲ್ಲಿದೆ. ರಸ್ತೆ ಬದಿ ಹೊಸದಾಗಿ ವಸತಿ ನಿರ್ಮಿಸಿಕೊಂಡ ಕಾರಣ ಬ್ರಹ್ಮಸಂದ್ರ ಕ್ರಾಸ್ ಎಂದು ಕರೆಯುತ್ತಾರೆ.

ಒಟ್ಟು ೮ ಮನೆಗಳನ್ನು ಹೊಂದಿದ್ದು ೨೬ ಜನಸಂಖ್ಯೆಯನ್ನು ಹೊಂದಿದೆ. ಆದಿಕರ್ನಾಟಕ, ಒಕ್ಕಲಿಗ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಬ್ರಹ್ಮಸಮುದ್ರ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ಸುವರ್ಣಮುಖಿ ಸನಿವಾಸ ಪ್ರೌಢಶಾಲೆಯಿದ್ದು ೧೮೦ ಮಕ್ಕಳು, ೧೦ ಶಿಕ್ಷಕರು, ೩ ಸಹಾಯಕರಿದ್ದಾರೆ.

ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಬಂಡೇನಹಳ್ಳಿ

ಬಂಡೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ೨೦ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ಬ್ರಹ್ಮ ಸಮುದ್ರದ ಭೂ ವಿಸ್ತೀರ್ಣಕ್ಕೆ ಸೇರಿಕೊಂಡಿದೆ, ಕಂದಾಯ ಗ್ರಾಮವಾಗಿದೆ. ಬಂಡೆ ಮೇಲೆ ಮನೆ ಕಟ್ಟಿದ್ದರಿಂದಾಗಿ ಬಂಡೇನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ. ೧ ಬೆಟ್ಟವಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ೧ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೦೫ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಪ್ಪಾರ, ಬೋವಿ, ಬುಡಬುಡಿಕೆ ಜನಾಂಗದವರು ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ.

ಒಟ್ಟು ೩೧೧ ಮನೆಗಳನ್ನು ಹೊಂದಿರುವ ಗ್ರಾಮವು ೨೦೦೧ರ ಜನಗಣತಿಯ ಪ್ರಕಾರ ೧೪೪೮ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ, ಗಂಡು ೭೪೦, ಹೆಣ್ಣು ೭೦೮ ಜನಸಂಖ್ಯೆ ಇದೆ, ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ವ್ಯವಸ್ಥಿತವಾಗಿದ್ದು ವ್ಯವಸ್ಥೆ ಚರಂಡಿ ವ್ಯವಸ್ಥೆ ಇದೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು, ಇದು ಒಂದು ಉಪಕಸುಬಾಗಿ ರೈತರು ತೊಡಗಿದ್ದಾರೆ, ಒಂದು ಡೈರಿ ಇದೆ, ಗ್ರಂಥಾಲಯ ಇದೆ ೧೦೦೦ ಪುಸ್ತಕಗಳಿವೆ.

ಕಂದಾಯ ಇಲಾಖೆ, ಶಿಕ್ಷಣ ಇಲಾಖೆ, ಹಾಗೂ ಪೋಲಿಸ್ ಇಲಾಖೆ, ಸಾರಿಗೆ ಇಲಾಖೆಗಳಿಗೆ ಸಂಬಂಧಪಟ್ಟ ಅಧಿಕಾರಿಗಳು ಅಥವಾ ನೌಕರರು ೧೦ ಜನ ಇದ್ದಾರೆ ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಬ್ರಹ್ಮ ಸಮುದ್ರ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಇಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಬ್ರಹ್ಮ ಸಮುದ್ರ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಬ್ರಹ್ಮ ಸಮುದ್ರ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ಒಬ್ಬರು ಸಹಾಯಕಿ ಒಬ್ಬರು ಕಾರ್ಯಕರ್ತೆ ಹಾಗೂ ೨೪ ಮಕ್ಕಳಿದ್ದಾರೆ. ಸರ್ಕಾರಿ ಪ್ರಾಥಮಿಕ ಶಾಲೆ ೩೬

ವಿದ್ಯಾರ್ಥಿಗಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ೨ ಅಂಗಡಿಗಳಿವೆ ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಆಂಜನೇಯ, ತಿಮ್ಮಪ್ಪ, ಹಟ್ಟಿ ಮಾರಮ್ಮ, ಮಾದೇಮಾರಮ್ಮ, ಯಲ್ಲೂರ ಮಾರಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬ್ಯಾಡರಹಳ್ಳಿ

ಬ್ಯಾಡರಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೬.೦೩ ಹೆಕ್ಟೇರ್ಸ್, ಕಂದಾಯ ಗ್ರಾಮವಾಗಿದೆ. ಜಾತಿ ಮೂಲದಿಂದ ಗ್ರಾಮಕ್ಕೆ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನೇಕಾರ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೬೪ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೨೫೦ ಜನಸಂಖ್ಯಾ ಪ್ರಮಾಣವನ್ನು ಹೊಂದಿರುವುದಾಗಿದೆ. ಗಂಡು-೧೧೮, ಹೆಣ್ಣು-೧೩೨ ಜನಸಂಖ್ಯೆ ಹೊಂದಿದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿ ಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದ ಎಲ್ಲಾರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು ಚರಂಡಿ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಇದು ಒಂದು ರೈತರ ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ, ಸಾರಿಗೆ ಇಲಾಖೆಗೆ ಸೇರಿದ ಒಟ್ಟು ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ,

ದೊಡ್ಡಯಲ್ಲೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ದೊಡ್ಡಯಲ್ಲೂರು ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಯಲ್ಲೂರು ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಒಟ್ಟು ೧೨ ಮಕ್ಕಳಿದ್ದಾರೆ ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು ೨೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಸೌಲಭ್ಯ ಇದೆ. ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೬.೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ಎರಡು ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಬಡೋಬನಹಳ್ಳಿ

ಬಡೋಬನಹಳ್ಳಿ ಗ್ರಾಮವು ಮಧುಗಿರಿಯ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೩ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೮೪.೧೮ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಓಬಳನರಸಿಂಹಸ್ವಾಮಿ ಒಕ್ಕಲಾದುದರಿಂದ ಆ ಮನೆತನದ ಓಬಣ್ಣ ಎಂಬುವವನು ಮೊದಲು ಜನವಸತಿ ನಿರ್ಮಿಸಿಕೊಂಡ ಕಾರಣ ಅವನನ್ನು ಅನ್ವರ್ಥವಾಗಿ ಬಡಓಬಣ್ಣ ಎಂದು ಕರೆಯುತ್ತಿದ್ದರಿಂದಾಗಿ ಗ್ರಾಮಕ್ಕೆ ಬಡೋಬನಹಳ್ಳಿ ಎಂದು ಹೆಸರಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿರುವ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಮೊಲ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ.

೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ತೆಲುಗು ಮಾತನಾಡುವವರಿದ್ದಾರೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಒಂದು ಹಳ್ಳವಿದೆ. ಗ್ರಾಮದಲ್ಲಿ ೨ ಸಿಸ್ಟರ್ನ್, ೧ ಕೊಳವೆ ಬಾವಿ, ೧೦ ಸಾರ್ವಜನಿಕ ನಲ್ಲಿಗಳಿವೆ. ಒಕ್ಕಲಿಗ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ.

ಒಟ್ಟು ೩೫ ಮನೆಗಳನ್ನು ಹೊಂದಿರುವ ಗ್ರಾಮವು ೧೩೨ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಇಟ್ಟಿಗೆ ಹಾಗೂ ಗುಡಿಸಲು ಮನೆಗಳಿವೆ. ಗ್ರಾಮದಲ್ಲಿ ಆಶ್ರಯ, ಜನತಾ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ೧೨ ಮನೆಗಳು ನಿರ್ಮಾಣವಾಗಿವೆ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ.

ಸಾಂಪ್ರದಾಯಿಕ ಎತ್ತಿನಗಾಡಿ ಗ್ರಾಮದಲ್ಲಿದ್ದು ಆಧುನಿಕ ವಾಹನಗಳಾದ ಬೈಕ್‌ಗಳಿವೆ. ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆಗಳಾಗಿವೆ. ಗ್ರಾಮದಲ್ಲಿ ೧೧ ಮನೆಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ.

ವ್ಯವಸಾಯ ಮುಖ್ಯ ಕಸುಬಾಗಿದ್ದು ರಾಗಿ, ಭತ್ತ, ಜೋಳ, ಅಡಿಕೆ, ತೆಂಗು ಬೆಳೆಯುವರು. ಉಳಿದಂತೆ

ತೊಗರಿ, ಅಲಸಂದೆ, ಕಡಲೇಕಾಯಿ ಬೆಳೆಯುತ್ತಾರೆ. ಭತ್ತ, ಜೋಳ ಗ್ರಾಮದ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ. ಶಿಕ್ಷಣ ಇಲಾಖೆಯಲ್ಲಿ ನಾಲ್ವರು ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಮಿಡಿಗೇಶಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಹಾಗೂ ರಂಟವಳಲು ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿಯು ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೋಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಪಂಚಾಯ್ತಿ ನೌಕರರಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ರಂಟವಳಲು ಅಂಚೆ ಸಂಪರ್ಕವನ್ನು ಒದಗಿಸುತ್ತದೆ. ಚರ ದೂರವಾಣಿಗಳು ಗ್ರಾಮದಲ್ಲಿವೆ. ೧ ಸ್ತ್ರೀಶಕ್ತಿ ಸಂಘ, ೧ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪೂರಕವಾಗಿವೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೬೪.೨% ಆಗಿದೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ. ಜ್ವರ, ಕೆಮ್ಮು, ಮಲೇರಿಯಾ ಗ್ರಾಮದಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವ ರೋಗಗಳಾಗಿವೆ. ಗ್ರಾಮದಲ್ಲಿ ಮಾರಮ್ಮ ದೇವಾಲಯವಿದೆ. ಮಾರಮ್ಮನಿಗೆ ಆರತಿ ಮಾಡುವರು. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಮಂಡಿತಿಮ್ಮನಹಳ್ಳಿ

ಮಂಡಿ ತಿಮ್ಮನಹಳ್ಳಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೪ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೯೬.೮೪ ಹೆಕ್ಟೇರ್‌ನಲ್ಲಿದ್ದು ಜನವಸತಿ ಇಲ್ಲದ ಬೇಚಾರಕ್ ಗ್ರಾಮವಾಗಿದೆ. ಗ್ರಾಮದಲ್ಲಿ ಶನಿಮಹಾತ್ಮ ದೇವಾಲಯವಿದೆ. ಬಡೋಬನಹಳ್ಳಿಯವರಿಂದ ಪೂಜೆ ನಡೆಯುತ್ತದೆ.

ಗ್ರಾಮವು ಮಿಡಿಗೇಶಿ ಹೋಬಳಿ ರಂಟವಳಲು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ

## ಮರಿತಿಮ್ಮನಹಳ್ಳಿ

ಮರಿತಿಮ್ಮನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೭೩.೭೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಕಣಿವೆರಂಗಪ್ಪನ ಗುಡ್ಡವಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಮೊಲ, ಚಿರತೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಕಾಗೆ, ಕೋಗಿಲೆ, ಗಿಳಿ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಚಿಕ್ಕಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೨ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೨೧೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೦೦೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೨೫ ಮತ್ತು ಹೆಂಗಸರು ೪೭೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೭೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ

ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೭ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ಮುಸುಕಿನ ಜೋಳ, ರಾಗಿ, ತೆಂಗು ಮತ್ತು ಅಡಿಕೆ ಮುಖ್ಯ ಬೆಳೆಯಾಗಿದೆ. ಮುಸುಕಿನ ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಕೆರೆಯಲ್ಲಿ ಮೀನುಗಾರಿಕೆ ನಡೆಯುತ್ತಿದ್ದು ೧೨ ಜನ ಮೀನುಗಾರಿಕಾ ಚಟುವಟಿಕೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವರು. ಶಿಕ್ಷಣ ಇಲಾಖೆಯಲ್ಲಿ ಸೇರಿದ ಇಬ್ಬರು ಸರ್ಕಾರಿ ನೌಕರಿಯಲ್ಲಿದ್ದು ಉಳಿದಂತೆ ಇಬ್ಬರು ಟೈಲರ್‌ಗಳು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸಿದ್ದಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಮೂವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಿದ್ದಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಸಿದ್ದಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೩%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಆಂಜನೇಯ ಹಾಗೂ ಕಣಿವೆ ರಂಗಪ್ಪ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮಲ್ಲೇನಹಳ್ಳಿ

ಮಲ್ಲೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೫೭.೭೮ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮವು ಚಂದ್ರಗಿರಿ ಭೂವಿಸ್ತೀರ್ಣದಲ್ಲಿ ಸೇರಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಚಂದ್ರಗಿರಿ ಬೆಟ್ಟ ಹೊಂದಿಕೊಂಡಂತೆ ಇದೆ. ಮಲ್ಲಯ್ಯ ಎಂಬ ವ್ಯಕ್ತಿ ಮೂಲದಿಂದ ಮಲ್ಲೇನಹಳ್ಳಿ ಆಗಿದೆ.

ಈ ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ, ಚಿರತೆ ಹಾಗೂ ಅತಿ ಹೆಚ್ಚು ಕರಡಿಗಳು ಕಂಡುಬರುತ್ತವೆ.

ಪಕ್ಷಿಗಳಾದ ಗಿಳಿಗಳು ಅತಿ ಹೆಚ್ಚಾಗಿದ್ದು ಕಾಗೆ, ಕೋಗಿಲೆ, ನವಿಲು, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮದಲ್ಲಿ ನಾಟಿಹಸು, ಸೀಮೆಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕುಂಬಾರಳ್ಳಿ ಹೊಳೆ ಹಾಗೂ ಒಂದು ಕೆರೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳಿವೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ ಜನಾಂಗ ಕಿರು ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ. ಒಟ್ಟು ೧೩೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೦೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಅದರಲ್ಲಿ ೩೦೪ ಗಂಡು ಮತ್ತು ೨೯೯ ಜನ ಹೆಂಗಸರು ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಹಾಗೂ ಗುಡಿಸಲು ಮನೆಗಳಿವೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಎರಡು ಸಾಂಪ್ರದಾಯಿಕ ಎತ್ತಿನ ಗಾಡಿಗಳಿದ್ದು ಆಧುನಿಕ ವಾಹನಗಳಾದ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆಯನ್ನು ಹೊಂದಿದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ಹೊಂದಿವೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಹೂವು, ತೊಗರಿ, ಅಡಿಕೆ ಹಾಗೂ ತೆಂಗು ಬೆಳೆಯುತ್ತಾರೆ. ಹೂವು ಹಾಗೂ ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಹಾಗೂ ಮೂರು ಆಧುನಿಕ ಡೈರಿಗಳಿವೆ. ಗ್ರಾಮದಲ್ಲಿ ಸರ್ಕಾರಿ ನೌಕರಿಯಲ್ಲಿ ಮೂವರು ಕರ್ತವ್ಯನಿರತರಾಗಿದ್ದು ಟೈಲರಿಂಗ್‌ನಂತಹ ಆಧುನಿಕ ಕೆಲಸ ಮಾಡುವ ಒಬ್ಬರು ಗ್ರಾಮದಲ್ಲಿದ್ದಾರೆ. ಉಳಿದಂತೆ ಕೂಲಿ ಮಾಡುವವರು ಗ್ರಾಮದಲ್ಲಿ ಕಂಡುಬರುತ್ತಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಚಂದ್ರಗಿರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಇಬ್ಬರು ಪಂಚಾಯ್ತಿಯ ನೌಕರರು ಮತ್ತು ಇಬ್ಬರು ಸದಸ್ಯರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಂದ್ರಗಿರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚಂದ್ರಗಿರಿ ಅಂಚೆ ಕಛೇರಿ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೩ ಸ್ತ್ರೀಶಕ್ತಿ ಸಂಘಗಳು, ೩ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೯ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು ಇಬ್ಬರು ಅಡುಗೆಯವರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೦.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ೩ ಅಂಗಡಿಗಳು ಹಾಗೂ ೨ ಹೋಟೆಲ್‌ಗಳಿವೆ.

ಗ್ರಾಮದಲ್ಲಿ ವೀರಾಂಜನೇಯ ದೇವಸ್ಥಾನ, ಮಾರಮ್ಮ, ಭೂತಪ್ಪ, ಮುತ್ತುರಾಯ ದೇವಾಲಯಗಳಿವೆ. ಗ್ರಾಮದಲ್ಲಿ ಪ್ರತಿವರ್ಷ ಮಾರಮ್ಮನ ಜಾತ್ರೆಯನ್ನು ಹರಕೆ ಹಾಗೂ ಬಲಿ ನೀಡುವುದರೊಂದಿಗೆ ವೈಭವದಿಂದ ಆಚರಿಸುವರು. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮಾರಿಪಾಳ್ಯ

ಮಾರಿಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೫೨.೧೬ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮವು ಕೂನ್ನಹಳ್ಳಿ ಭೂವಿಸ್ತೀರ್ಣದಲ್ಲಿ ಸೇರಿದೆ.

ಈ ಗ್ರಾಮಕ್ಕೆ ಮಾರಿಪಾಳ್ಯ ಎಂದು ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಮಾರಕ್ಕ ಎನ್ನುವ ಕುಂಚಿಟಿಗ ಮತಸ್ಥ ಹೆಂಗಸು ಹುಗ್ಗೆ ಹೊಯ್ದು ಕೇವಲ ೨೦ ಕುಂಟೆ ಸರಹದ್‌ನಲ್ಲಿ ಒಂದು ಚಿಕ್ಕ ಕಲ್ಲನ್ನು

ಇಟ್ಟು ಪೂಜಿಸಿ ಆ ದೇವರಿಗೆ ಮಾರಕ್ಕ ಎನ್ನುವ ಹೆಸರಿಟ್ಟಂತೆ. ಅಂದಿನಿಂದ ಜನರು ಈ ಊರಿಗೆ ಮಾರಕ್ಕನಪಾಳ್ಯ ಹೊಸ ಮಾರಿಪಾಳ್ಯ ಎಂದು ನಾಮಕರಣ ಮಾಡಿದರಂತೆ. ಆದರೆ ಈಗ ಇದನ್ನು ಮಾರಿಪಾಳ್ಯ ಎಂದು ಕರೆಯುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕರಡಿ, ಜಿಂಕೆ, ಚಿರತೆಗಳು ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕಾಡು ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ೫೦೦ ಕ್ಕೂ ಹೆಚ್ಚು ಕಂಡುಬರುತ್ತದೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ನೀರು ಹರಿಯುವ ಗುಂಡಿ ಇದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ಎರಡು ಬಾವಿಗಳು ಹಾಗೂ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಜಗ್ ನಲ್ಲಿ ೨ ಹಾಗೂ ೪ ಟ್ಯಾಂಕ್‌ಗಳು, ೧ ತೊಟ್ಟಿ ಇದೆ. ೧೫ ಕ್ಕೂ ಹೆಚ್ಚು ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗದವರು ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೯೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೪೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೭೯, ಹೆಣ್ಣು ೧೬೯ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೬ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಮೂರು ಸಾಂಪ್ರದಾಯಿಕ ಎತ್ತಿನ ಗಾಡಿಯಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಅಲಸಂದೆ, ಹತ್ತಿ, ಹುರುಳಿ, ಅವರೆ ಮುಂತಾದವುಗಳನ್ನು ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು, ಹತ್ತಿ ಬೆಳೆಯುತ್ತಾರೆ. ಇವುಗಳುಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ ಮತ್ತು ಮಹಿಳಾ ಹಾಲು ಉತ್ಪಾದಕರ ಸಂಘದ ಡೈರಿ.

ಗ್ರಾಮಕ್ಕೆ ಸೇರಿದಂತೆ ಯಾವುದೇ ಕೆರೆ ಇಲ್ಲದ ಕಾರಣ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಗ್ರಾಮದಲ್ಲಿ ಐಟಿ–ಬಿಟಿಯಲ್ಲಿ ಒಬ್ಬರು, ನಿವೃತ್ತ ಮಿಲಿಟರಿ ಯೋಧರು ಹಾಗೂ ಒಬ್ಬರು ಪೊಲೀಸ್ ಇಲಾಖೆಯಲ್ಲಿ ಉದ್ಯೋಗ ಮಾಡುವವರಿದ್ದಾರೆ. ಸಾಂಪ್ರದಾಯಿಕ ಉದ್ಯೋಗ ನಡೆಸುವ ಗುಡಿಕಾರರು ೯, ಅರ್ಚಕರು ೧, ಗಾಣಿಗರು ಒಬ್ಬರು ಇದ್ದು ಆಧುನಿಕ ಉದ್ಯೋಗವಾದ ಟೈಲರ್ ಇಬ್ಬರು ಗ್ರಾಮದ್ಲಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ರಂಗಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಇಬ್ಬರು ಪಂಚಾಯ್ತಿಯ ಸದಸ್ಯರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಗಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ಒಂದು ಸ್ತ್ರೀಶಕ್ತಿ ಸಂಘ, ಮೂರು ಮಂಜುನಾಥ ಸಂಘ ಹಾಗೂ ಎರಡು ಸ್ವಸಹಾಯ ಸಂಘಗಳಿವೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿಯಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಹಾಗೂ ಒಬ್ಬರು ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೪೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಮಾರಕ್ಕನ ದೇವಾಲಯ ಹಾಗೂ ಆಂಜನೇಯನ ದೇವಾಲಯವಿದೆ. ವಿಶೇಷವಾಗಿ ಶ್ರಾವಣ ಶನಿವಾರ ಆಂಜನೇಯ ಸ್ವಾಮಿ ಉತ್ಸವ ಮಾಡಿ ತದನಂತರ ಮಂಗಳವಾರದಿಂದ ಮಾರಿ ಹಬ್ಬವನ್ನು ಹರಕೆ ಹರಕೆ ಹೊರುವ ಮತ್ತು ಬಲಿ ನೀಡುವ ಮೂಲಕ ಅತಿ ಸಡಗರದ ಜಾತ್ರೆಯನ್ನು ಆಚರಿಸುವ ರೂಢಿಯಲ್ಲಿವೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮುತ್ಯಾಲಮ್ಮನಹಳ್ಳಿ

ಮುತ್ಯಾಲಮ್ಮನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೬೩.೮೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮದ್ಲಲಿ ಮುತ್ಯಾಲಮ್ಮ ದೇವತೆಯ ದೇವಸ್ಥಾನ ಇದ್ದು ಭಕ್ತಿಯಿಂದ ಪೂಜಿಸುತ್ತಾರೆ. ಈ ದೇವತೆಯ ಹೆಸರಿನ ಸ್ಮರಣೆಯಿಂದಲೇ ಈ ಹೆಸರು ಗ್ರಾಮಕ್ಕೆ ಬಂದಿದೆ.

ಗ್ರಾಮವು ಪ್ರದೇಶದಲ್ಲಿ ಬೆಟ್ಟ ಗುಡ್ಡಗಳಿಲ್ಲ. ವಿಶಾಲವಾದ ಬಯಲುನಾಡು ಪ್ರದೇಶವಾಗಿದೆ.

ಗ್ರಾಮವು ಕುರುಚಲು ಪ್ರದೇಶವನ್ನು ಹೊಂದಿ ಪ್ರಾಣಿಗಳಾದ ಕಾಡುಮೊಲ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಬೆಳವ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕುರಿ ಮೇಕೆಗಳನ್ನು ಸಾಕುವುದರಿಂದ ಗ್ರಾಮಸ್ಥರಿಗೆ ಆರ್ಥಿಕ ಶಕ್ತಿ ಲಭಿಸಿದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೫೫೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಈ ಗ್ರಾಮದ ಪ್ರದೇಶದಲ್ಲಿ ಜಯಮಂಗಲಿ ನದಿಯ ಹರಿವಿನ ಪ್ರದೇಶವಿದೆ. ಮಳೆಗಾಲದಲ್ಲಿ ಚೆನ್ನಾಗಿ ಮಳೆಯಾದಾಗ ಈ ನದಿಯು ತುಂಬಿ ಹರಿಯುತ್ತದೆ. ಆಗ ಅಂತರ್ಜಲಮಟ್ಟ ಏರುತ್ತದೆ. ಗ್ರಾಮದಲ್ಲಿ ಕೆರೆಯಿಲ್ಲ

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಕುಂಬಾರರು ಇದ್ದು ಈ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಭಾಷೆಯೂ ಬಳಕೆಯಲ್ಲಿದೆ.

ಒಟ್ಟು ೧೩೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೫೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೯೧ ಮತ್ತು ಹೆಂಗಸರು ೨೬೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಮಣ್ಣಿನ ಮನೆ ಮತ್ತು ಶೀಟಿನ ಮನೆಗಳಿವೆ. ಅಲ್ಲಲ್ಲಿ ಗುಡಿಸಲುಗಳನ್ನು ಕಾಣಬಹುದು. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಗ್ರಾಮದ ಪ್ರಮುಖ ಆಹಾರವಾಗಿದೆ. ಅನ್ನ, ದೋಸೆ,

ಚಪಾತಿ ಅಮುಖ್ಯ ಆಹಾರವಾಗಿದೆ. ಹೋಳಿಗೆ, ಕಡುಬು, ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ, ಮುಸುಕಿನ ಜೋಳ, ರೇಷ್ಮೆ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ಉದ್ದು, ತೊಗರಿ, ಅಲಸಂದೆ, ರೇಷ್ಮೆ, ಸೂರ್ಯಕಾಂತಿ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸುದ್ದೇಕುಂಟೆ ತಾಲ್ಲೂಕು ಪಂಚಾಯ್ತಿ, ಸಿಂಗನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಸದಸ್ಯರು ಹಾಗೂ ಇಬ್ಬರು ನೌಕರರಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಶಿಕ್ಷಣ, ಪೊಲೀಸ್, ಕೆಎಸ್‌ಆರ್‌ಟಿಸಿ ಸೇರಿದಂತೆ ೫ ಜನ ಸರ್ಕಾರಿ ನೌಕರರಿದ್ದಾರೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ೧೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಒಬ್ಬರು ಶಿಕ್ಷಕರಿದ್ದಾರೆ. ಗ್ರಾಮದಲ್ಲಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದ್ದು ೩೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಹೋಟೆಲ್ ಹಾಗೂ ೨ ಕಿರಾಣಿ ಅಂಗಡಿಗಳಿವೆ. ಊರ ಹೊರಗೆ ಸಾಮಾನ್ಯ ಸ್ಮಶಾನ ಇದೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮುತ್ಯಾಲಮ್ಮ, ಅಕ್ಕಮ್ಮ, ಸುಬ್ರಹ್ಮಣ್ಯ ದೇವಾಲಯಗಳಿವೆ. ಮುತ್ಯಾಲಮ್ಮ ಗ್ರಾಮದ ಗ್ರಾಮದೇವತೆ. ಅಕ್ಕಮ್ಮ ದೇವಸ್ಥಾನವು ಗ್ರಾಮಕ್ಕೆ ಸ್ವಲ್ಪ ದೂರದಲ್ಲಿದೆ. ಸುಬ್ರಹ್ಮಣ್ಯ ದೇವಾಲಯವು ಪ್ರಾಚೀನ ದೇವಾಲಯವಾಗಿದ್ದು ಮುಜರಾಯಿ ಇಲಾಖೆಯ ಅಧೀನದಲ್ಲಿದೆ. ಗ್ರಾಮದಲ್ಲಿ ಎಲ್ಲಾ ಹಿಂದೂ ಹಬ್ಬಗಳನ್ನು ವಿಶೇಷವಾಗಿ ಶ್ರೀರಾಮನವಮಿ, ಶಿವರಾತ್ರಿ ಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮುತ್ಯಾಲಮ್ಮ ದೇವರಿಗೆ ಆಷಾಢ ಮಾಸದಲ್ಲಿ ಬಲಿ ಮತ್ತು ಹರಕೆಯೊಂದಿಗೆ ಜಾತ್ರೆ ನಡೆಯುತ್ತದೆ. ತೇರು ನಡೆಯುವುದು. ೭ ಜನ ಮಾರಿಯರ ಹೆಸರಿರುವ ದೇವಸ್ಥಾನವೆಂದು ಪ್ರತೀತಿಯಿದೆ.

## ಮಾಯಗೊಂಡನಹಳ್ಳಿ

ಮಾಯಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೨೪.೦೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಮಾಯಗೌಡ ಎಂಬ ವ್ಯಕ್ತಿ ಈ ಗ್ರಾಮದ ಸ್ಥಾಪಕನಾದುದರಿಂದ ಆತನ ಹೆಸರನ್ನೇ ಇಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರಿತವಾದ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ, ನರಿ, ತೋಳ, ಕರಡಿ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ

ನವಿಲು, ಗೊರವಂಕ, ಕಾಗೆ, ಕೋಗಿಲೆ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ೧೦೦ ಕ್ಕೂ ಹೆಚ್ಚು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೨ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಒಂದು ಕೆರೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೫ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ತಿಗುಳ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೧೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೪೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೩೧, ಹೆಂಗಸರು ೨೧೦ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೩೨ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ನಾಲ್ಕು ಸಾಂಪ್ರದಾಯಿಕ ಎತ್ತಿನ ಗಾಡಿ ಇದೆ. ಟ್ರ್ಯಕ್ಟರ್ ಮತ್ತು ದ್ವಿಚಕ್ರ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಸೂರ್ಯಕಾಂತಿ, ತೆಂಗು ಹಾಗೂ ಅಡಿಕೆ ಬೆಳೆಯುತ್ತಾರೆ. ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಹಾಗೂ ಒಂದು ಆಧುನಿಕ ಡೈರಿ ಗ್ರಾಮದಲ್ಲಿ ಇದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದರೂ ಸಾಕಷ್ಟು ಪ್ರಮಾಣದ ನೀರಿಲ್ಲದ ಕಾರಣ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ.

ಗ್ರಾಮದಲ್ಲಿ ಪೊಲೀಸ್, ಶಿಕ್ಷಕರು ಹಾಗೂ ಇಂಜಿನಿಯರ್ ಸೇರಿದಂತೆ ಹತ್ತು ಜನ ಸರ್ಕಾರದ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ರಂಟವಳಲು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಸೇರಿದೆ. ಗ್ರಾಮದಲ್ಲಿ ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಟವಳಲು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ರಂಟವಳಲು ಅಂಚೆ ಕಚೇರಿ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿಯಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೭.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಎರಡು ಹೋಟೆಲ್ ಮತ್ತು ಎರಡು ಅಂಗಡಿಗಳು ಗ್ರಾಮದಲ್ಲಿವೆ.

ಗ್ರಾಮದಲ್ಲಿ ಆಂಜನೇಯ ದೇವಾಲಯವಿದ್ದು ಪ್ರತಿ ವರ್ಷ ಆರತಿಯನ್ನು ಮಾಡುವರು. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮಲ್ಲನಾಯಕನಹಳ್ಳಿ

ಮಲ್ಲನಾಯಕನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೭೫.೭೭ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬೆಟ್ಟದ ಸಾಲು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಬೆಟ್ಟದ ಸಾಲು ಪ್ರದೇಶವಾಗಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳ, ೨ ಕಟ್ಟೆ ಹಾಗೂ ಅಮ್ಮನಕೆರೆ, ರೆಡ್ಡಿಗರ ಕಟ್ಟೆ ಇದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆಬಾವಿ, ಕಟ್ಟೆಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ರೆಡ್ಡಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಆದಿಕರ್ನಾಟಕ, ಆದಿದ್ರಾವಿಡ, ಮಡಿವಾಳ, ಬ್ರಾಹ್ಮಣ, ಶೆಟ್ಟರು, ಬಣಜಿಗ, ರೆಡ್ಡಿ, ಗೊಲ್ಲ, ಮುಸ್ಲಿಂ ಜನಾಂಗದವರಿದ್ದಾರೆ. ಶೆಟ್ಟಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೨೪೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೦೪೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೯೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಸಿಹಿ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿ, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ರೆಡ್ಡಿಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಪ್ರೌಢಶಾಲೆ ಇದ್ದು ಒಟ್ಟು ೨೦೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೮.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಸರ್ಕಾರಿ ನೌಕರಿಯಲ್ಲಿ ಶಿಕ್ಷಕರು, ಕೆಎಸ್‌ಆರ್ಟಿಸಿ, ಕಂದಾಯ ಇಲಾಖೆಯಲ್ಲಿ ಉದ್ಯೋಗಸ್ಥರಾಗಿದ್ದಾರೆ. ಗುಡಿಕಾರರು ಇಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮದಲ್ಲಿ ಹನುಮಂತ, ಮೈಲಾರಲಿಂಗ, ನರಸಿಂಹಸ್ವಾಮಿ ದೇವಾಲಯಗಳಿವೆ. ಪ್ರತಿ ವರ್ಷ ಹನುಮಂತನ ಜಾತ್ರೆಯನ್ನು ಆರತಿ, ಹರಕೆಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮಲ್ಲನಾಯಕನಹಳ್ಳಿ ಗೊಲ್ಲರಹಟ್ಟಿ

ಎಂ.ಗೊಲ್ಲರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೭೫.೭೭ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮವು ಮಲ್ಲನಾಯಕನಹಳ್ಳಿ ಭೂವಿಸ್ತೀರ್ಣದಲ್ಲಿ ಸೇರಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆಯಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿದ್ರಾವಿಡ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೬೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೮೦೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨೩೧ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ರೆಡ್ಡಿಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೨ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೭೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೨.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಹೋಟೆಲ್ ಹಾಗೂ ೨ ಅಂಗಡಿಗಳಿವೆ. ಗ್ರಾಮದಲ್ಲಿ ಒಂದು ಗ್ರಂಥಾಲಯ ಇದೆ.

ಗ್ರಾಮದಲ್ಲಿ ಈರಮುದ್ದಯ್ಯ, ಬಳೆಕಟ್ಟೆ ಸಿದ್ದೇಶ್ವರನ ದೇವಾಲಯಗಳಿವೆ. ಊರ ಹಬ್ಬವನ್ನು ಅಕ್ಟೋಬರ್ ತಿಂಗಳಿನಲ್ಲಿ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮಿಡಿಗೇಶಿ

ಮಿಡಿಗೇಶಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೨೨೮.೫೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮಕ್ಕೆ ಮಿಡಿಗೇಶಿ ಎಂಬ ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಹಿಂದೆ ಇದನ್ನು ನಾಗರೆಡ್ಡಿ ಎಂಬ ಪಾಳೆಯಗಾರ ಕಟ್ಟಿಸಿದನು. ಈತನ ಮಹಾರಾಣಿ ಮಿಡಿಗೇಶಿ ಎಂದರೆ ಉದ್ದನೆಯ ತಲೆಗೂದಲನ್ನು ಉಳ್ಳವಳಾದ್ದರಿಂದ ಈ ಊರಿಗೆ ಮಿಡಿಗೇಶಿ ಎಂದೇ ಹೆಸರಾಯಿತು.

ಭೌಗೋಳಿಕವಾಗಿ ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸುತ್ತಲೂ ಬೆಟ್ಟಗಳ ಸಾಲು ಹೊಂದಿದೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಹದ್ದು, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಒಂದು ಕೆರೆ ಇದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೪ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೪೦ ಸಾರ್ವಜನಿಕ ನಲ್ಲಿಗಳು, ೨

ಟ್ಯಾಂಕ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ, ಆದಿ ಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ, ಜೈನರು, ಮುಸ್ಲಿಂ, ಕುರುಬ, ಕುಂಬಾರ, ಆದಿಕರ್ನಾಟಕ, ಆದಿದ್ರಾವಿಡ, ಕಮ್ಮಾರ, ಅಗಸ, ವೈಶ್ಯ, ಬಣಜಿಗ, ಒಕ್ಕಲಿಗ ಜನಾಂಗದವರಿದ್ದು ಜೈನ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ಉಳಿದಂತೆ ಉರ್ದು, ತೆಲುಗು, ತಮಿಳು ಮಾತನಾಡುವವರು ಗ್ರಾಮದಲ್ಲಿರುವರು.

ಒಟ್ಟು ೧೦೬೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೯೭೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೪೭೨ ಮತ್ತು ಹೆಂಗಸರು ೧೪೯೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨೨೦ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಆಟೋ, ಲಾರಿ, ಕಾರು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ. ರಾಗಿ, ತೆಂಗು, ಅಡಿಕೆ ಮತ್ತು ಭತ್ತ ಬೆಳೆಯುತ್ತಾರೆ. ವ್ಯಾಪಾರ ಮಾಡುವವರ ಸಂಖ್ಯೆ ೫೦% ಕಂಡುಬರುತ್ತದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಹಾಲು ಉತ್ಪಾದಕರ ಸಹಕಾರಿ ಸಂಘವಿದೆ.

ಗ್ರಾಮದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಗೋವಿಂದರಾಜು ಸೇರಿದಂತೆ, ಕೆಎಸ್‌ಆರ್‌ಟಿಸಿ, ಪೊಲೀಸ್, ಶಿಕ್ಷಣ ಇಲಾಖೆ. ವೈದ್ಯರು, ಇಂಜಿನಿಯರ್, ವಕೀಲರು, ಕಂದಾಯ ಇಲಾಖೆ, ಅರಣ್ಯ ಇಲಾಖೆ ಸೇರಿದಂತೆ ೧೪೦ ಜನ ನೌಕರಿಯಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಐದು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ನಾಲ್ವರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಮಿಡಿಗೇಶಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮದಲ್ಲಿಯೇ ಅಂಚೆ ವ್ಯವಸ್ಥೆ ಇದ್ದು ೩ ಸ್ಥಿರ ದೂರವಾಣಿ ಹಾಗೂ ೮೦೦ ಚರ ದೂರವಾಣಿ ಸಂಪರ್ಕ ಸಾಧನಗಳಿವೆ. ತಂತಿ ವ್ಯವಸ್ಥೆ, ಇ–ಮೇಲ್, ಇಂಟರ್‌ನೆಟ್, ಡಿಟಿಎಚ್, ಕೊರಿಯರ್ ಮೊದಲಾದ ಸೌಲಭ್ಯಗಳು ಲಭ್ಯವಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨೦ ಸ್ತ್ರೀಶಕ್ತಿ ಸಂಘ ಹಾಗೂ ೨೦ ಸ್ವಸಹಾಯ ಸಂಘಗಳಿವೆ. ಗ್ರಾಮದಲ್ಲಿ ಕರ್ನಾಟಕ ಬ್ಯಾಂಕ್, ಕಾವೇರಿ ಕಲ್ಪತರು ಬ್ಯಾಂಕ್, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘವಿದೆ. ಪೊಲೀಸ್ ಠಾಣೆಯು ಗ್ರಾಮದಲ್ಲಿದೆ. ನಾಡ ಕಛೇರಿಯೂ ಇದೆ. ಗ್ರಾಮದಲ್ಲಿ ಒಂದು ಗ್ರಂಥಾಲಯವಿದ್ದು ವಿವಿಧ ಪ್ರಕಾರದ ಒಟ್ಟು ೨೦೦೦ ಪುಸ್ತಕಗಳು ಹಾಗೂ ಒಬ್ಬರು ಗ್ರಂಥಪಾಲಕರಿದ್ದಾರೆ. ಗ್ರಾಮದಲ್ಲಿ ಪ್ರತಿ ವಾರ ಸಂತೆ ನಡೆಯುತ್ತದೆ. ಮಾರುಕಟ್ಟೆ, ಸಮುದಾಯ ಭವನ ಹಾಗೂ ೧ ಛತ್ರವಿದೆ.

ಗ್ರಾಮದಲ್ಲಿ ಐದು ಅಂಗನವಾಡಿ ಕೇಂದ್ರಗಳಿವೆ. ಅಂಗನವಾಡಿ–೧ ರಲ್ಲಿ ೭೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗನವಾಡಿ–೨ ರಲ್ಲಿ ೮೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗನವಾಡಿ–೩ ರಲ್ಲಿ ೪೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗನವಾಡಿ–೪ ರಲ್ಲಿ ೫೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗನವಾಡಿ–

೫ ರಲ್ಲಿ ೮೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಸರ್ಕಾರಿ ಜಿಎಲ್‌ಪಿಎಸ್ ಶಾಲೆ ಇದ್ದು ಒಟ್ಟು ೧೨೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಆರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಜಿಹೆಚ್‌ಪಿಎಸ್ ಶಾಲೆಯಲ್ಲಿ ಒಟ್ಟು ೨೪೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೧೦೭ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಯುಎಲ್‌ಪಿಎಸ್ ಶಾಲೆಯಲ್ಲಿ ಒಟ್ಟು ೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಜಿಹೆಚ್‌ಎಸ್ ಶಾಲೆ ಇದ್ದು ಒಟ್ಟು ೧೬೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಎಂಟು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ಶಾರದಾಂಬ ಕಾನ್ವೆಂಟ್ ಇದ್ದು (ಎಲ್‌ಕೆಜಿಯಿಂದ ೧೦ನೇ ತರಗತಿ) ೨೪೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೧೪ ಜನ ಶಿಕ್ಷಕರಿದ್ದಾರೆ. ಎಂಇಇಸ್ ಶಾಲೆ ಇದ್ದು (ಎಲ್‌ಕೆಜಿಯಿಂದ ೧೦ನೇ ತರಗತಿ) ಒಟ್ಟು ೩೭೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೧೭ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಎಸ್‌ಎಲ್‌ಎನ್ ಪ್ರೌಢಶಾಲೆ ಇದ್ದು ಒಟ್ಟು ೧೧೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೮ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೪.೩%. ಸರ್ಕಾರಿ ಪ್ರೌಢಶಾಲೆ, ಸರ್ಕಾರಿ ಪದವಿಪೂರ್ವ ಕಾಲೇಜು, ಪ್ರಸ್ತುತ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆರಂಭಗೊಂಡಿದೆ. ಇಲ್ಲಿ ೬ ವೀರಗಲ್ಲು, ಮಾಸ್ತಿಕಲ್ಲು, ಶಾಸನಗಳಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧೬ ಹೋಟೆಲ್‌ಗಳು ಹಾಗೂ ೪೦ ಅಂಗಡಿಗಳಿವೆ. ಒಂದು ಇಂಡಿಯನ್ ಪೆಟ್ರೋಲ್ ಬಂಕ್, ೩ ಜವಳಿ ಅಂಗಡಿಗಳಿವೆ.

ಮಿಡಿಗೇಶಿ ಬಳಿಯಲ್ಲಿ ದೊರೆತಿರುವ ಕ್ರಿ.ಶ.೭೫೦ ರಲ್ಲಿನ ೯೯ ನೇ ಮಿಡಿಗೇಶಿ ಶಾಸನವು ಗಂಗವಾಡಿಯ ಶ್ರೀಪುರುಷನ ಮೇಲೆ ರಾಷ್ಟ್ರಕೂಟರ ೧ನೇ ಕೃಷ್ಣ (ಕನ್ನರ) ನು ದಂಡೆತ್ತಿ ಬಂದು ಯುದ್ಧ ಮಾಡಿದ್ದನ್ನು ಹೇಳುತ್ತದೆ. ಈ ಮೂಲಕ ಮಿಡಿಗೇಶಿಯು ಗಂಗವಾಡಿ ೯೬೦೦೦ ಕ್ಕೆ ಸೇರಿತ್ತು ಎಂದು ತಿಳಿದುಬಂದಿದೆ. ನಂತರ ಗ್ರಾಮದಲ್ಲಿ ರೆಡ್ಡಿ ಜನಾಂಗದ ನಾಗರೆಡ್ಡಿ ಎಂಬ ರಾಜನಿದ್ದ. ಅವನು ಒಂದು ಕೋಟೆಯನ್ನು ಕಟ್ಟಿದ. ಪಕ್ಕದಲ್ಲೇ ಏಕಶಿಲಾ ಬೆಟ್ಟವನ್ನು ಹೊಂದಿದೆ. ಆದರೆ ಇಂದು ಈ ಗ್ರಾಮದಲ್ಲಿ ರೆಡ್ಡಿ ಜನಾಂಗದವರು ಒಬ್ಬರೂ ಇಲ್ಲದಂತಾಗಿದೆ. ೧೩೭೦ ರ ಮಿಡಿಗೇಶಿ ೭೪ ನೇ ಶಾಸನ ದೊರೆತಿದೆ.

ಗ್ರಾಮದಲ್ಲಿ ಕನ್ನೇರಮ್ಮ, ತಿಪ್ಪೇಸ್ವಾಮಿ, ಮೈಲಾರಲಿಂಗೇಶ್ವರ, ಭೂತಪ್ಪ, ರೇಖಾಚಿತ್ರ (ಮಿಡಿಗೇಶಮ್ಮ), ಅಂಕಾಳಮ್ಮ, ಲಕ್ಷ್ಮಿ, ಬಸವೇಶ್ವರ, ಶಿವ, ನವಗ್ರಹ, ದುರ್ಗಮ್ಮ, ವೀರಭದ್ರಸ್ವಾಮಿ, ಊರ ಮಾರಮ್ಮ, ವೆಂಕಟರಮಣಸ್ವಾಮಿ, ಲಕ್ಕಮ್ಮ, ಕಟ್ಟಿನ ಮಾರಮ್ಮ, ಆಂಜನೇಯ, ಈಶ್ವರ, ನಾರಾಯಣ, ಈರಣ್ಣ, ನಾಗರಕಟ್ಟೆ, ಮಾರಮ್ಮ ಸೇರಿದಂತೆ ನೂರಕ್ಕೂ ಹೆಚ್ಚು ದೇವಾಲಯಗಳಿವೆ. ಒಂದು ಮಸೀದಿ, ಜೈನ ಮಂದಿರ ಬೆಟ್ಟದ ಮೇಲಿದೆ. ಮುಸ್ಲಿಂ ಸ್ಮಶಾನ ಹಾಗೂ ಹಿಂದೂ ಸ್ಮಶಾನವೂ ಪ್ರತ್ಯೇಕವಾಗಿದೆ.

ಗ್ರಾಮದಲ್ಲಿ ವೀರಭದ್ರಸ್ವಾಮಿ ಹಾಗೂ ವೆಂಕಟರಮಣಸ್ವಾಮಿಯ ತೇರು ಹಾಗೂ ಜಾತ್ರೆಯನ್ನು ಆಚರಿಸುತ್ತಾರೆ. ಮಿಡಿಗೇಶಮ್ಮನ ಜಾತ್ರೆಯನ್ನು ಅತಿ ವೈಭವದಿಂದ ಆಚರಿಸುವರು. ಉಳಿದಂತೆ ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮಾಡಗಾನಹಟ್ಟಿ

ಮಾಡಗಾನಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೨೪.೫೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಚಿಕನವಜ್ರ ವಿಸ್ತೀರ್ಣಕ್ಕೆ ಸೇರಿದೆ. ಮೂಡಲ ದೇವರ ಹಟ್ಟಿ ಕ್ರಮೇಣ ಮಾಡಗಾನಹಟ್ಟಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಮತ್ತು ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಹಾಗೂ ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಶೆಟ್ಟಿಹಳ್ಳಿ ಬೆಟ್ಟ ಇದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಆಗಾಗ್ಗೆ ಚಿರತೆಯ ಧಾಳಿಯೂ ಕೂಡ ಗ್ರಾಮದ ಪ್ರಾಣಿಗಳ ಮೇಲೆ ನಡೆಯುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು ಮತ್ತು ಎತ್ತುಗಳನ್ನು ಸಾಕುವವರ ಸಂಖ್ಯೆ ಕಡಿಮೆಯಾಗುತ್ತಿದ್ದು ಗ್ರಾಮದಲ್ಲಿ ಕಡಿಮೆ ಸಂಖ್ಯೆಯ ಹಸು ಮತ್ತು ಎತ್ತುಗಳಿವೆ. ಉಳಿದಂತೆ ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಜೊತೆಗೆ ಕೆಲವರು ಪಾರಿವಾಳಗಳನ್ನು ಸಾಕಿದ್ದಾರೆಯ

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು, ೪ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೨೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೮೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೯೦ ಮತ್ತು ಹೆಂಗಸರು ೧೯೧ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೩ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ೩೦% ನಷ್ಟು ಜನ ವ್ಯವಸಾಯ ಮಾಡುತ್ತಿದ್ದು ಕುರಿ ಸಾಕಾಣಿಕೆ ಮತ್ತು ವ್ಯಾಪಾರ ಇಲ್ಲಿನ ಮುಖ್ಯ ಕಸುಬಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇಲ್ಲವಾಗಿದ್ದು ಆಧುನಿಕ ಡೈರಿ ವ್ಯವಸ್ಥೆಯಿಂದಾಗಿ ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕೆಎಸ್‌ಆರ್‌ಟಿಸಿ, ಪೊಲೀಸ್ ಸೇರಿದಂತೆ ಮೂವರು ಸರ್ಕಾರಿ ನೌಕರಿಯಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ೨೦ ಜನ ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನಕವಜ್ರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನಕವಜ್ರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನಕವಜ್ರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೩ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೫ ಅಂಗಡಿಗಳಿವೆ.

ಗ್ರಾಮದಲ್ಲಿ ಬಸವನಗುಡಿ, ಮುತ್ತುರಾಯ, ಭೂತಪ್ಪನ ಗುಡಿ ಇದ್ದು ಭೂತಪ್ಪದೇವರ ಹಬ್ಬವನ್ನು ಬಲಿ ಹಾಗೂ ಹರಕೆಯೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

ದಾಸಪ್ಪ ಎಂಬ ೫೯ ವರ್ಷ ವಯಸ್ಸಿನ ಕಾಡುಗೊಲ್ಲರ ಕಾವ್ಯ ಹಾಡುಗಾರ ಈ ಗ್ರಾಮದವರಾಗಿದ್ದು ಕಾಡುಗೊಲ್ಲರ ಜುಂಜಪ್ಪನ ಕಾವ್ಯವನ್ನು ಹಾಡಿ, ಹಂಪಿ ಕನ್ನಡ ವಿಶ್ವವಿದ್ಯಾಲಯ ತನ್ನ ಜನಪದ ಮಹಾಕಾವ್ಯಮಾಲೆಯಲ್ಲಿ ಪ್ರಕಟಿಸಿದೆ. ಇವರಿಗೆ ಕರ್ನಾಟಕ ಜಾನಪದ ಅಕಾಡೆಮಿ ಪ್ರಶಸ್ತಿ ಲಭಿಸಿದೆ.

## ಮಾರೀಬೀಳು

ಮಾರೀಬೀಳು ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ದಕ್ಷಿಣ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೦೦೭.೫೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮದ ಭೂ ವಿಸ್ತೀರ್ಣವು ಕಮ್ಮನಕೋಟೆ ವಿಸ್ತೀರ್ಣದಲ್ಲಿ ಸೇರಿದೆ. ಇದು ಶಕ್ತಿದೇವತೆಗಳ ನೆಲೆಯಾಗಿದ್ದು ಮಾರಿದೇವತೆಯ ದತ್ತಿರೂಪದ ಜಮೀನು ಇದ್ದು ಆ ಕಾರಣದಿಂದಲೇ ಗ್ರಾಮಕ್ಕೆ ಮಾರೀಬೀಳು ಎಂದು ಹೆಸರಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ತೋಳ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕಟ್ಟೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಕಟ್ಟೆಗಳು, ಹಳ್ಳಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧ ಸಿಸ್ಟರ್ನ್ ಇದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಕುರುಬ, ಆದಿಕರ್ನಾಟಕ ಜನಾಂಗದವರಿದ್ದಾರೆ. ಬೋವಿ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೭೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೯೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೯ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನಕವಜ್ರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು

ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನಕವಜ್ರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನಕವಜ್ರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೬.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಮಾರಮ್ಮ, ಸಪ್ಲಮ್ಮ, ಕುಕ್ಲಮ್ಮ, ಕರಿಯಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಗೋರಿಕಲ್ಲು ರಂಗನಾಥ ಈ ಗ್ರಾಮಕ್ಕೆ ಪಶ್ಚಿಮ ದಿಕ್ಕಿನಲ್ಲಿ ಸುಮಾರು ೪೦೫ ಕಿ.ಮೀ. ಅಂತರದಲ್ಲಿ ಪಾಳುಬಿದ್ದ ಊರಿನ ಕುರುಹುಗಳು ಕಂಡುಬರುತ್ತವೆ.

## ಮದ್ಲೇರಹಳ್ಳಿ

ಮದ್ಲೇರಹಳ್ಳಿ ಗ್ರಾಮವು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೯ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೧೯೫.೩೦ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಯಕ್ಷಗಾನಕ್ಕೆ ಮದ್ದಲೆ ಬಾರಿಸುತ್ತಿದ್ದ ಕಲಾವಿದ ಇಲ್ಲಿ ಇದ್ದು, ಆ ಕಾರಣದಿಂದಾಗಿಯೇ ಮದ್ಲೇನಹಳ್ಳಿ > ಮದ್ಲೇರಹಳ್ಳಿ ಎಂದಾಗಿದೆ.

ಬಯಲುನಾಡು ಪ್ರದೇಶವಾಗಿದ್ದು ಬಿಳಿಕಲ್ಲು, ಕೆಂಪು ಮಿಶ್ರ ಮಣ್ಣಿನ ಭೂಮಿಯನ್ನು ಹೊಂದಿದೆ. ಪ್ರಾಣಿಗಳಾದ ನರಿ, ತೋಳ, ಕರಡಿ, ಮೊಲ ಹಾಗೂ ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ದೊಡ್ಡವೀರಗೊಂಡನಹಳ್ಳಿ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಒಟ್ಟು ೧೫ ಮನೆಗಳನ್ನು ಹೊಂದಿದ್ದು ೫೨ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಒಕ್ಕಲಿಗ, ನಾಯಕ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ವ್ಯವಸಾಯ ಹಾಗೂ ಕೂಲಿ ಮಾಡುವವರು, ಸಾರಿಗೆ ಇಲಾಖೆಯಲ್ಲಿ ಒಬ್ಬರು ಸೇವೆ ಸಲ್ಲಿಸುತ್ತಿದ್ದಾರೆ.

ಮಧುಗಿರಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡವೀರಗೊಂಡನಹಳ್ಳಿ ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಮಾರಮ್ಮನ ದೇವಸ್ಥಾನವಿದೆ. ಊರಹಬ್ಬವಾಗಿ ಮಾರಮ್ಮನ ಜಾತ್ರೆ ನಡೆಯುತ್ತದೆ. ಆರತಿ, ಬಾನ, ಬ್ಯಾಟೆ, ಹರಕೆ ಸಂಪ್ರದಾಯವಿದೆ. ಜನಪದ ಕಲೆಗಳಾದ ಅಸಾದಿ ಕುಣಿತ, ಕೋಲುಮೇಳದ ಆಚರಣೆ ಇದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಮರುವೇಕೆರೆ

ಮರುವೇಕೆರೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೦೩.೩೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮ ಕೆರೆಯ ಕೋಡಿಗೆ ಹೊಂದಿಕೊಂಡಂತಿದ್ದುದರಿಂದ ಮರುವೆ> ಕೆರೆ ಕೋಡಿ ಎಂಬ ತೆಲುಗು ಶಬ್ದದಿಂದ ಮರುವೇಕೆರೆ ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿಯ ಕಲ್ಲುಗಳಿಂದ ಕೂಡಿದ್ದು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಮೀನಗೊಂದಿ ರಂಗನಾಥ ಬೆಟ್ಟ ಗ್ರಾಮದಲ್ಲಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕಾಗೆ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೮ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಹಾಗೂ ಮುಸ್ಲಿಂ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ, ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಮುಸ್ಲಿಂ ಬಾಂಧವರು ಉರ್ದು ಭಾಷೆಯನ್ನು ಮಾತನಾಡುತ್ತಾರೆ.

ಒಟ್ಟು ೪೫೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೫೭೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೮೦೨ ಮತ್ತು ಹೆಂಗಸರು ೭೭೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ, ಇಟ್ಟಿಗೆ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೬೩ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್, ಆಟೋ, ಟೆಂಪೋ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೫೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಗ್ರಾಮದಲ್ಲಿ ೪೦% ಮಾತ್ರ ಮಾಡುವವರಿದ್ದು ಶೇಂಗಾ, ರಾಗಿ, ಭತ್ತ ಬೆಳೆಯುವರು. ಉಳಿದಂತೆ ೬೦% ಜನರು ಬೀಡಿ ವರ್ಕ್‌ಶಾಪ್ ನಡೆಸುತ್ತಾರೆ.

ಗ್ರಾಮದಲ್ಲಿ ಒಂದು ಆಧುನಿಕ ಡ್ಯೆರಿ ಇದೆ. ಪೊಲೀಸ್, ಶಿಕ್ಷಣ ಇಲಾಖೆ, ಕಂದಾಯ, ವೈದ್ಯರು ಹಾಗೂ ಕೆಎಸ್‌ಆರ್‌ಟಿಸಿಗೆ ಸೇರಿರುವ ೧೬ ಜನ ನೌಕರರಾಗಿದ್ದಾರೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ೪ ಬಡಗಿ ಹಾಗೂ ಇಬ್ಬರು ಟ್ಯೆಲರ್ ಗ್ರಾಮದಲ್ಲಿದ್ದಾರೆ. ಡ್ರೈವರ್ ೪ ಜನ ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಸದರಿ ಗ್ರಾಮದಲ್ಲಿಯೇ ಗ್ರಾಮ ಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಮೂವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಇಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಮರುವೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗಂಜಲಗುಂಟೆ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ೧೦೦ ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೮

ಸ್ತ್ರೀಶಕ್ತಿ ಸಂಘ ಹಾಗೂ ೧೦ ಸ್ವಸಹಾಯ ಸಂಘಗಳಿವೆ. ಇಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇದೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರಗಳಿವೆ. ಅಂಗನವಾಡಿ-೧ ರಲ್ಲಿ ೫೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗನವಾಡಿ-೨ ರಲ್ಲಿ ೫೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೧.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೪ ಹೋಟೆಲ್‌ಗಳು ಹಾಗೂ ೮ ಅಂಗಡಿಗಳಿವೆ.

ಗ್ರಾಮಪಂಚಾಯ್ತಿ ವತಿಯಿಂದ ನಡೆಯುವ ಒಂದು ಗ್ರಂಥಾಲಯವಿದ್ದು ವಿವಿದ ಪ್ರಕಾರದ ೯೦೦ ಪುಸ್ತಕಗಳು, ಒಬ್ಬರು ಗ್ರಂಥಪಾಲಕರಿದ್ದಾರೆ. ಕುಟುಂಬ ಕಲ್ಯಾಣ ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದು ಒಬ್ಬರು ವೈದ್ಯರಿದ್ದಾರೆ.

ಗ್ರಾಮದಲ್ಲಿ ರಂಗನಾಥಸ್ವಾಮಿ, ಆಂಜನೇಯ, ಬಸವಣ್ಣ, ಮಾರಮ್ಮ ದೇವಾಲಯಗಳಿವೆ. ಏಪ್ರಿಲ್‌ನಲ್ಲಿ ರಂಗನಾಥಸ್ವಾಮಿ ಜಾತ್ರೆಯನ್ನು ತೇರನ್ನು ಎಳೆಯುವುದರೊಂದಿಗೆ ಆಚರಿಸುವರು. ಮಾರಮ್ಮನ ಹಬ್ಬವನ್ನು ಬಲಿ ಹಾಗೂ ಹರಕೆಯೊಂದಿಗೆ ಆಚರಿಸುತ್ತಾರೆ. ಮುಸ್ಲಿಂ ಮಸೀದಿ ಇದೆ. ಇಲ್ಲಿನ ಮುಸ್ಲಿಂ ದೇವರಲ್ಲಿ ತುಂಬ ನಂಬಿಕೆಯನ್ನು ಇಟ್ಟು ಬೇರೆ ಬೇರೆ ಜಿಲ್ಲೆಗಳಿಂದ ಎಲ್ಲಾ ಜಾತಿಯವರು ಬಂದು ಅವರ ಕಷ್ಟಗಳನ್ನು ಬಗೆಹರಿಸಿಕೊಳ್ಳುತ್ತಾರೆ. ಇದು ಇಲ್ಲಿನ ವಿಶೇಷತೆಯಾಗಿದೆ.

ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ, ಮಾರ್ನವಮಿ, ದೀಪಾವಳಿಯನ್ನು ಆಚರಿಸಲಾಗುತ್ತಿದ್ದು ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಈದ್, ರಂಜಾನ್, ಬಕ್ರೀದ್ ಹಬ್ಬಗಳನ್ನು ಆಚರಿಸುತ್ತಾರೆ.

## ಮರಬಳ್ಳಿ

ಮರಬಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೦೬.೩೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಮರ-ಬಳ್ಳಿ > ಕುರುಚಲು ಕಾಡು ಎಂಬ ಅರ್ಥದಲ್ಲಿ ಮರಬಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು-ಬಿಳಿಯ ಕಲ್ಲುಗಳಿಂದ ಕೂಡಿದ್ದು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಮರಗುಟ್ಟೆ ಹಾಗೂ ಪಿಳಿಂಬೆಟ್ಟಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ಚಿರತೆ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳು, ೪ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೯೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೬೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೨೦ ಮತ್ತು ಹೆಂಗಸರು ೧೪೫ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು

ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೨೩ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಶಿಕ್ಷಕರು, ಆರೋಗ್ಯ ಇಲಾಖೆಗೆ ಸೇರಿದಂತೆ ನಾಲ್ಕು ಜನ ಸರ್ಕಾರಿ ನೌಕರರಾಗಿದ್ದು ಇಬ್ಬರು ಟೈಲರ್ ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬಿಜವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಿಜವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬಿಜವರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ, ೧ ಮಂಜುನಾಥ ಸಂಘ ಹಾಗೂ ೩ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಹೋಟೆಲ್‌ಗಳು ಹಾಗೂ ೫ ಅಂಗಡಿಗಳಿವೆ.

ಗ್ರಾಮದಲ್ಲಿ ಮಾರಮ್ಮ ದೇವಾಲಯ ಹಾಗೂ ೩ ಅಶ್ವತ್ಥ ಕಟ್ಟೆಗಳಿವೆ. ಪ್ರತಿ ವರ್ಷ ಆಷಾಢದಲ್ಲಿ ಮಾರಮ್ಮನ ಜಾತ್ರೆಯನ್ನು ಹರಕೆ ಹಾಗೂ ಬಲಿಯೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮುದ್ದೇನೇರಳೆಕೆರೆ

ಮುದ್ದೇನೇರಳೆಕೆರೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೭೧೮.೩೩ ಹೆಕ್ಟೇರ್ಸ್, ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭

ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಹತ್ತು ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೦೮ ನಲ್ಲಿಗಳಿದ್ದು ಮೂರು ಸಿಸ್ಟನ್‌ಗಳಿವೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ, ಆದಿಕರ್ನಾಟಕ, ಆದಿದ್ರಾವಿಡ, ನಾಯಕ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ.

ಒಟ್ಟು ೨೭೩ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೧೧೩೧ ಜನಸಂಖ್ಯಾ ಪ್ರಮಾಣವನ್ನು ಹೊಂದಿದ್ದು ಗಂಡು-೫೭೦, ಹೆಣ್ಣು-೫೬೧ ಜನ ಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಚರಂಡಿ ವ್ಯವಸ್ಥೆ ಶೌಚಾಲಯ ವ್ಯವಸ್ಥೆ ರಸ್ತೆ ವ್ಯವಸ್ಥೆ ಕಂಡುಬರುತ್ತದೆ.. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇಲ್ಲಿನ ರೈತರು ಉಪಕಸುಬಾಗಿದೆ ಒಂದು ಡೈರಿ ಇದೆ. ಗ್ರಂಥಾಲಯವಿದೆ. ೧೨೦೦ ಪುಸ್ತಕಗಳಿದ್ದು ಒಬ್ಬ ಅಧಿಕಾರಿ ಇದ್ದಾರೆ.

ಕಂದಾಯ ಇಲಾಖೆ, ಶಿಕ್ಷಣ ಇಲಾಖೆ, ಹಾಗೂ ಪೋಲಿಸ್ ಮತ್ತು ಸಾರಿಗೆ ಇಲಾಖೆಗಳಿಗೆ ಸೇರಿದ ಒಟ್ಟು ೦೫ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಕುಂಬಾರ, ಬಡಗಿ, ಬೆಲ್ದಾರಾ ಕೆಲಸದವರು ಇದ್ದಾರೆ, ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಬ್ರಹ್ಮಸಮುದ್ರ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಇಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಬ್ರಹ್ಮ ಸಮುದ್ರ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಬ್ರಹ್ಮಸಮುದ್ರ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ೪೮ ಮಕ್ಕಳಿದ್ದಾರೆ, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದ್ದು ಒಟ್ಟು ೧೨೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ, ಒಟ್ಟು ಮೂವರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ದಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ೦೪ ಹೊಟೇಲ್ ಇದ್ದು, ೦೪ ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಮಾರಮ್ಮದೇವಿ, ಆಂಜನೇಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ,

ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮಾರಮ್ಮ ಟೆಂಪಲ್ ಕ್ರಾಸ್

ಮಾರಮ್ಮ ಟೆಂಪಲ್ ಕ್ರಾಸ್ ಮರಬಳ್ಳಿ ಗ್ರಾಮದ ಹೊರವಲಯದಲ್ಲಿದೆ. ಮರಬಳ್ಳಿ ಮಾರಮ್ಮ ದೇವಸ್ಥಾನಕ್ಕೆ ಹೋಗುವ ದಾರಿಯಲ್ಲಿರುವುದರಿಂದ ಮಾರಮ್ಮ ಟೆಂಪಲ್ ಕ್ರಾಸ್ ಎಂದು ಕರೆಯುವರು.

ಒಟ್ಟು ೧೨ ಮನೆಗಳಿದ್ದು ೪೪ ಜನಸಂಖ್ಯೆ ಇದೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ.

ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ವ್ಯವಸಾಯ ಹಾಗೂ ಕೂಲಿ ಮಾಡುವವರು ಇದ್ದಾರೆ. ಇಬ್ಬರು ಶಿಕ್ಷಕರು ಹಾಗೂ ಒಬ್ಬರು ಸಾರಿಗೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಹಸು, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ಮರಬಳ್ಳಿ ಮಾರಮ್ಮನ ಜಾತ್ರೆಯಲ್ಲಿ ಪಾಲ್ಗೊಳ್ಳುವರು.

ಬಿಜವರ ಗ್ರಾಮಪಂಚಾಯಿತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಮಲ್ಲೇನಹಳ್ಳಿ

ಮಲ್ಲೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೬೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಮಲ್ಲಯ್ಯ ಎಂಬ ವ್ಯಕ್ತಿ ಮೂಲದಿಂದಾಗಿ ಮಲ್ಲನಹಳ್ಳಿ – ಮಲ್ಲೇನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಮತ್ತು ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರಿತ ಮಣ್ಣಿನಿಂದ ಕೂಡಿದ್ದು ಗ್ರಾಮದ ಸುತ್ತಲೂ ಬೆಟ್ಟ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಚಿರತೆ, ನರಿ, ತೋಳ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ, ಒಂದು ದೊಡ್ಡ ಹಳ್ಳ ಹಾಗೂ ೬ ಚಿಕ್ಕ ಹಳ್ಳಗಳಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೯ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯಿತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೭ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳು, ಒಂದು ತೆರೆದ ಬಾವಿಯಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೧೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೧೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೪೭ ಮತ್ತು ಹೆಂಗಸರು ೩೬೭ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೯ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ, ತೊಗರಿ ಮತ್ತು ಮುಸುಕಿನ ಜೋಳ ಮುಖ್ಯ

ಬೆಳೆಸುಗಿದೆ. ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಹಾಲು ಉತ್ಪಾದಕರ ಸಹಕಾರ ಸಂಘವಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗಂಜಲಗುಂಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗಂಜಲಗುಂಟೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘ ಹಾಗೂ ೨ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೪೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಅಂಗಡಿಗಳಿವೆ. ಒಂದು ಸಮುದಾಯ ಭವನವಿದೆ.

ಗ್ರಾಮದಲ್ಲಿ ನರಸಿಂಹಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿ ಇದ್ದು ರಂಗರಾಜು ೩೭ ವರ್ಷ ಮಡಿವಾಳ ಜನಾಂಗದವರು ನಾಟಕ ಕಲಿಸಿಕೊಡುವ ಶಿಕ್ಷಕರಾಗಿದ್ದಾರೆ. ೧೯ ನಾಟಕ ಕಲಾವಿದರ ಗುಂಪು ಅಥವಾ ಸಂಘ ಮಾಡಿಕೊಂಡಿದ್ದಾರೆ. ಗ್ರಾಮದ ಎಲ್ಲಾ ಜಾನಪದ ಕೆಲಸಗಳಲ್ಲಿ ತೊಡಗುತ್ತಾರೆ.

ಗ್ರಾಮದಲ್ಲಿ ನರಸಿಂಹಸ್ವಾಮಿ, ಊರುಮಾರಮ್ಮ ಹಾಗೂ ಶನಿಮಹಾತ್ಮ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಹರಕೆ ಹಾಗೂ ಬಲಿಯೊಂದಿಗೆ ಆಚರಿಸಲಾಗುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮಲ್ಲೇನಹಳ್ಳಿ ಗೊಲ್ಲರಹಟ್ಟಿ

ಮಲ್ಲೇನಹಳ್ಳಿ ಗೊಲ್ಲರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೬೬.೩೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಹಾಗೂ ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕಾಗೆ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ದೊಡ್ಡ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೪ ಸಾರ್ವಜನಿಕ ನಲ್ಲಿಗಳು, ೧

ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಬೇರೆ ಯಾವುದೇ ಜನಾಂಗದವರಿಲ್ಲ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೨೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೦ ಮತ್ತು ಹೆಂಗಸರು ೩೪ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೭ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಕುರಿ ಹಾಗೂ ಮೇಕೆ ಸಾಕಾಣಿಕೆ ಹಾಗೂ ಮಾರಾಟ ಮಾಡುವುದು ಇಲ್ಲಿನ ಜನರ ಮುಖ್ಯ ಕಸುಬಾಗಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗಂಜಲಗುಂಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗಂಜಲಗುಂಟೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಗಂಜಲಗುಂಟೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೬%.

ಗ್ರಾಮದಲ್ಲಿ ಒಂದು ಶನಿಮಹಾತ್ಮ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮುದ್ದೇನಹಳ್ಳಿ

ಮುದ್ದೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೫೦.೮೭ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಅರಣ್ಯ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಚಿರತೆ, ನರಿ, ತೋಳ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ೧೫ ನಲ್ಲಿಗಳು, ೨ ಸಿಸ್ಟರ್ನ್‌ಗಳಿವೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮಡಿವಾಳ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೨೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೩೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೮೨ ಮತ್ತು ಹೆಂಗಸರು ೩೫೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೨೯ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ, ಮುಸುಕಿನ ಜೋಳ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಬಡಗಿ ಹಾಗೂ ಇಬ್ಬರು ಗುಡಿಕಾರರು ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗಂಜಲಗುಂಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗಂಜಲಗುಂಟೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ಸುವರ್ಣಮುಖಿ ಗ್ರಾಮಾಂತರ ಸರ್ಕಾರಿ ಸನಿವಾಸ ಪ್ರೌಢಶಾಲೆ ಇದ್ದು ೧೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಎಂಟು ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೯.೪೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಚೌಡಮ್ಮ, ಲಕ್ಕಮ್ಮ, ತಿಮ್ಮಪ್ಪ, ವೆಂಕಟರಮಣ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮುದ್ದೇನಹಳ್ಳಿ ಜನತಾ ಹೌಸಿಂಗ್ ಕಾಲೋನಿ

ಮುದ್ದೇನಹಳ್ಳಿ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿಯ ಉತ್ತರ ದಿಕ್ಕಿನಲ್ಲಿದ್ದು ಮುದ್ದೇನಹಳ್ಳಿಯ ಹೊರವಲಯದಲ್ಲಿದೆ. ಒಟ್ಟು ೨೯ ಮನೆಗಳನ್ನು ಹೊಂದಿದ್ದು ೧೨೬ ಜನಸಂಖ್ಯೆಯನ್ನು ಹೊಂದಿದೆ. ಸರ್ಕಾರದ ಜನತಾ ಯೋಜನೆಯಡಿ ಮನೆಗಳು ನಿರ್ಮಾಣವಾಗಿವೆ. ನಾಯಕ, ಮಡಿವಾಳ, ಗೊಲ್ಲ, ಒಕ್ಕಲಿಗ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಗಂಜಲಗುಂಟೆ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಮತ್ತು ಕೂಲಿ ಮುಖ್ಯ ಕಸುಬಾಗಿದೆ. ಪೊಲೀಸ್, ಶಿಕ್ಷಣ ಇಲಾಖೆಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದಾರೆ. ಶಿಕ್ಷಣ, ಸಾರಿಗೆ, ಅಂಚೆ ಸೌಲಭ್ಯ ಮುದ್ದೇನಹಳ್ಳಿಯ ಮೂಲಕ ಒದಗಿಸಲಾಗಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಮುದ್ದೇನಹಳ್ಳಿ ಗೊಲ್ಲರಹಟ್ಟಿ

ಮುದ್ದೇನಹಳ್ಳಿ ಗೊಲ್ಲರಹಟ್ಟಿಯು ಮಧುಗಿರಿಯ ಉತ್ತರ ದಿಕ್ಕಿನಲ್ಲಿದ್ದು ಮುದ್ದೇನಹಳ್ಳಿಯ ಹೊರವಲಯದಲ್ಲಿದೆ.

ಒಟ್ಟು ೪೨ ಮನೆಗಳಿದ್ದು ೧೫೪ ಜನಸಂಖ್ಯೆ ಇದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ.

ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ವ್ಯವಸಾಯ ಹಾಗೂ ಪಶುಸಂಗೋಪನೆ ಮಾಡುವರು. ಅಂಚೆ ಹಾಗೂ ಶಿಕ್ಷಣ ಇಲಾಖೆಯಲ್ಲಿ ೪ ಜನ ಸೇವೆ ಸಲ್ಲಿಸುತ್ತಿದ್ದಾರೆ. ಒಬ್ಬರು ಟೈಲರ್ ಇದ್ದಾರೆ. ಗಂಜಲಗುಂಟೆ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಹಟ್ಟಿಮಾರಮ್ಮ ದೇವಸ್ಥಾನವಿದೆ. ಹಟ್ಟಿ ಮಾರಮ್ಮನಿಗೆ ಆರತಿ ಮಾಡುವರು. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಮುದ್ದಯ್ಯನಪಾಳ್ಯ

ಮುದ್ದಯ್ಯನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೨.೭೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಮಲ್ಲೇರಂಗಪ್ಪನ ಬೆಟ್ಟ, ದೋಣಿ ಬೆಟ್ಟ, ಚಿಕ್ಕಬೆಟ್ಟಯ್ಯನ ಬೆಟ್ಟಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಚಿರತೆ, ಕರಡಿ, ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆಯಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳು ಹಾಗೂ ಒಂದು ತೆರೆದ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಹಾಗೂ ಆದಿ ದ್ರಾವಿಡ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮುಸ್ಲಿಂ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಮುಸ್ಲಿಂ ಜನಾಂಗದವರು ಉರ್ದು ಭಾಷೆ ಮಾತನಾಡುತ್ತಾರೆ.

ಒಟ್ಟು ೧೧೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೭೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್, ಆಟೋ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ತೆಂಗು ಮತ್ತು ಅಡಿಕೆ ಮುಖ್ಯ ಬೆಳೆಯಾಗಿದೆ. ಅಡಿಕೆ ಮತ್ತು ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಶಿಕ್ಷಕರು, ಐಟಿ–ಬಿಟಿ ಸೇರಿದಂತೆ ೪ ಜನ ಸರ್ಕಾರಿ ನೌಕರಿಯಲ್ಲಿರುವರು.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗಂಜಲಗುಂಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಮೂವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್

ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗಂಜಲಗುಂಟೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಗಂಜಲಗುಂಟೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೭ ಸ್ತ್ರೀಶಕ್ತಿ ಸಂಘ, ೨ ಮಂಜುನಾಥ ಸಂಘಗಳು ಹಾಗೂ ೧ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೧.೮%. ಗ್ರಾಮದಲ್ಲಿ ಒಂದು ಸಮುದಾಯ ಭವನವಿದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಹೋಟೆಲ್‌ಗಳು ಹಾಗೂ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಎರಡು ಮಾರಮ್ಮನ, ಬಸವೇಶ್ವರನ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮನ ತೇರು, ಆರತಿಯನ್ನು ಬಲಿ ಹಾಗೂ ಹರಕೆಯೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮಿಡತರಹಳ್ಳಿ

ಮಿಡತರಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೨೩.೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗಿಡ–ಮರಗಳ ಸಸ್ಯ ಮೂಲದಿಂದ ಮಿಡ+ತರು > ಹಳ್ಳಿಯಾಗಿ ಮಿಡತರಹಳ್ಳಿ ಎಂದಾಗಿದೆ. ಚಿಕ್ಕ ಗಿಡಗಳ ಹಳ್ಳಿ ಎಂಬ ಅರ್ಥವಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಕಣಿವೆ ರಂಗಪ್ಪನ ಬೆಟ್ಟವಿದೆ.

ಗ್ರಾಮವು ಬೆಟ್ಟ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ನರಿ, ತೋಳ, ಚಿರತೆ, ಮೊಲ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗರುಡ, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಶೆಟ್ಟಿಬಣಜಿಗ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೯೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೨೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೧೨ ಮತ್ತು ಹೆಂಗಸರು ೨೧೫ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೬ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ

ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ಭತ್ತ, ರಾಗಿ, ಅಡಿಕೆ ಮತ್ತು ತೆಂಗು ಬೆಳೆಯುವರು. ಅಡಿಕೆ ಹಾಗೂ ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಗ್ರಾಮದಲ್ಲಿ ಒಂದು ಆಧುನಿಕ ಮಿನಿ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸಿದ್ದಾಪುರ, ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಿದ್ದಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಿದ್ದಾಪುರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೮ ಸ್ತ್ರೀಶಕ್ತಿ ಸಂಘ ಹಾಗೂ ೧೦ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ನರಸಿಂಹಸ್ವಾಮಿ, ಜುಂಜಪ್ಪ, ಮಾರಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಅಕ್ಟೋಬರ್‌ನಲ್ಲಿ ನರಸಿಂಹಸ್ವಾಮಿ ಜಾತ್ರೆ ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮಿಡಿತರಹಳ್ಳಿ ಗೊಲ್ಲರಹಟ್ಟಿ

ಮಿಡಿತರಹಳ್ಳಿ ಗೊಲ್ಲರಹಟ್ಟಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಮಿಡಿತರಹಳ್ಳಿಯ ಹೊರವಲಯದಲ್ಲಿದೆ. ಒಟ್ಟು ೧೮ ಮನೆಗಳಿದ್ದು ೪೫ ಜನಸಂಖ್ಯೆ ಇದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ಪಶುಸಂಗೋಪನೆ ಹಾಗೂ ವ್ಯವಸಾಯ ಮಾಡುವವರು, ಪೊಲೀಸ್ ಹಾಗೂ ಸಾರಿಗೆ ಇಲಾಖೆಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದೆ. ಬಾಡೂಟ ವಿಶೇಷ ಆಹಾರವಾಗಿದೆ.

ಸಿದ್ದಾಪುರ ಗ್ರಾಮ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತಿದೆ. ಗ್ರಾಮದಲ್ಲಿ ಚಿತ್ರದೇವರು, ನರಸಿಂಹನ ಪೌಳಿಗಳಿದ್ದು ದೀಪಾವಳಿ ಹಬ್ಬದಂದು ವಿಶೇಷ ಉತ್ಸವ ಹೊರಡುತ್ತದೆ.

ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಮಿಡಿತರಹಳ್ಳಿ ಜನತಾ ಹೌಸಿಂಗ್ ಕಾಲೋನಿ

ಮಿಡಿತರಹಳ್ಳಿ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿಯ ಉತ್ತರ ದಿಕ್ಕಿನಲ್ಲಿದ್ದು ಮಿಡಿತರಹಳ್ಳಿಯ ಹೊರವಲಯದಲ್ಲಿದೆ. ಹಾಗಾಗಿ ಮಿಡಿತರಹಳ್ಳಿ ಜನತಾ ಕಾಲೋನಿ ಎಂದು ಕರೆಯುತ್ತಾರೆ.

ಒಟ್ಟು ೨೮ ಮನೆಗಳಿದ್ದು ೧೨೪ ಜನಸಂಖ್ಯೆ ಹೊಂದಿದೆ. ಒಕ್ಕಲಿಗ, ಆದಿಕರ್ನಾಟಕ, ಬೋವಿ, ನಾಯಕ ಜನಾಂಗದವರಿದ್ದಾರೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದೆ. ಬಾಡೂಟ ವಿಶೇಷ ಆಹಾರವಾಗಿದೆ.

ಸಿದ್ದಾಪುರ ಗ್ರಾಮಪಂಚಾಯ್ತಿಯು ಕಿರು ನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಮರಿತಿಮ್ಮನಹಳ್ಳಿ ಗೊಲ್ಲರಹಟ್ಟಿ

ಮರಿತಿಮ್ಮನಹಳ್ಳಿ ಗೊಲ್ಲರಹಟ್ಟಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಮರಿತಿಮ್ಮನಹಳ್ಳಿಯ ಹೊರವಲಯದಲ್ಲಿದೆ. ಕುರಿ ಪೋಷಣೆಯ ವ್ಯಕ್ತಿಯನ್ನು ಮರಿತಿಮ್ಮ ಎಂಬ ವಿಶೇಷಣದೊಂದಿಗೆ ಮರಿತಿಮ್ಮನಹಳ್ಳಿ ಎಂದು ಕರೆಯಲಾಗಿದೆ.

ಒಟ್ಟು ೩೨ ಮನೆಗಳಿದ್ದು ೧೩೪ ಜನಸಂಖ್ಯೆ ಹೊಂದಿದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ಕನ್ನಡ, ತೆಲುಗು ಮಾತನಾಡುವರು. ವ್ಯವಸಾಯ ಹಾಗೂ ಕುರಿ ಸಾಕಾಣಿಕೆ ಮುಖ್ಯ ಕಸುಬಾಗಿದೆ.

ಸಿದ್ದಾಪುರ ಗ್ರಾಮ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದೆ. ಬಾಡೂಟ ವಿಶೇಷ ಆಹಾರವಾಗಿದೆ.

ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಮುದ್ದೇನಹಳ್ಳಿ

ಮುದ್ದೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿನಲ್ಲಿ ೩೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೧೮.೬೧ ಹೆಕ್ಟೇರ್‌ಗಳು. ಈ ಗ್ರಾಮದ ಬಳಿಯಿದ್ದ ಪ್ರಾಚೀನ ಬಾವಿಯಲ್ಲಿ ಸಿಹೀನೀರು ಇತ್ತಂತೆ. ಆಗ ದಾರಿಹೋಕರೆಲ್ಲರೂ ಈ ಪ್ರಾಚೀನ ಸಿಹಿ ನೀರಿನ ಬಾವಿಯ ಬಳಿಯಲ್ಲಿ ತಮ್ಮ ಬುತ್ತಿ ಬಿಚ್ಚಿ ಮೆಣಸಿನಕಾಯಿ ಮತ್ತು ಉಪ್ಪು, ಹುಣಸೇಹಣ್ಣಿನಿಂದ ಗೊಜ್ಜು ಮಾಡಿ ಮುದ್ದೆ ಊಟ ಮಾಡಿದ ಕಾರಣ ಮುದ್ದೇನಹಳ್ಳಿ ಎಂದು ಗ್ರಾಮದ ಹೆಸರು ಬಂದಿದೆ ಎನ್ನುತ್ತಾರೆ. ಆದರೂ ವ್ಯಕ್ತಿಮೂಲದ ಹೆಸರಾಗಿರುವುದು ವಾಸ್ತವದ ಸಂಗತಿಯಾಗಿದೆ. ಮುದ್ದಯ್ಯ ಎಂಬ ವ್ಯಕ್ತಿ ಮೂಲದಿಂದಾಗಿ ಮುದ್ದೇನಹಳ್ಳಿ ಎಂದಾಗಿದೆ.

ಈ ಗ್ರಾಮದ ದಕ್ಷಿಣಕ್ಕೆ ಕೆಂಪು ಮಣ್ಣು ಇದೆ. ಪೂರ್ವ ಮತ್ತು ಪಶ್ಚಿಮ ದಿಕ್ಕುಗಳಲ್ಲೂ ಇದೆ. ಉತ್ತರ ದಿಕ್ಕಿನಲ್ಲಿ ಪೂರ್ವಾಭಿಮುಖವಾಗಿ ಜಯಮಂಗಲಿ ನದಿ ಕಂಡುಬರುತ್ತದೆ. ಇಲ್ಲಿ ಕೆರೆಗಳಿಲ್ಲ, ಕುಂಟೆಗಳಿವೆ. ಸರಾಸರಿ ಮಳೆಯು ೪೫೩.೨ ಮಿಮೀ ಇರುತ್ತದೆ. ರಾಗಿ, ಮುಸುಕಿನ ಜೋಳ ಬೆಳೆಗಳು ಪ್ರಧಾನವಾದ ಬೆಳೆಗಳಾಗಿವೆ. ಇನ್ನುಳಿದಂತೆ ಅವರೆ, ಅಲಸಂದೆ, ತೊಗರಿ, ಉದ್ದು ಇತ್ಯಾದಿ ಉಪಬೆಳೆಗಳು ಇವೆ. ಕುರುಚಲು ಕಾಡು ಕಂಡುಬಂದಿದ್ದು ದಟ್ಟಾರಣ್ಯವಿಲ್ಲ.

ಗ್ರಾಮದಲ್ಲಿ ಒಟ್ಟು ೧೬೩ ಮನೆ, ೭೦೩ ಜನಸಂಖ್ಯೆ ಇದೆ. ನಾಯಕ ಜನಾಂಗದವರು ಪ್ರಧಾನ ಸಮುದಾಯ. ಇನ್ನುಳಿದ ಸಮುದಾಯಗಳೆಂದರೆ ಒಕ್ಕಲಿಗ, ಕುರುಬರು, ಶೆಟ್ಟಿಬಣಜಿಗ, ಮುಸ್ಲಿಂ, ಆದಿಕರ್ನಾಟಕ, ಆದಿದ್ರಾವಿಡ, ಕುರುಬರು, ಅಗಸರು, ಕುಂಬಾರರು, ದಾಸರು ಇತ್ಯಾದಿ ಇದ್ದಾರೆ. ಒಟ್ಟು ೫೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ ಇದೆ. ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಇದ್ದು ಒಬ್ಬ ವೈದ್ಯರು ಮತ್ತು ಸಹಾಯಕರು ಒಬ್ಬರು ಸೇರಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಇದ್ದು ೮೦ ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ. ೬ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೯.೨%. ಅಂಗನವಾಡಿಯಿದ್ದು ೩೨ ಮಕ್ಕಳು, ಒಬ್ಬರು ಸಹಾಯಕರು, ಒಬ್ಬರು ಕಾರ್ಯಕರ್ತೆಯಿದ್ದಾರೆ. ಇಂಜಿನಿಯರ್, ಶಿಕ್ಷಕರು, ಪೊಲೀಸ್ ಸೇರಿದಂತೆ ೫ ಜನ ಸರ್ಕಾರಿ ನೌಕರರಾಗಿದ್ದಾರೆ.

ಗ್ರಾಮಕ್ಕೆ ಉತ್ತಮ ಟಾರ್ ರಸ್ತೆ ಇದೆ. ಬಸ್ ಸಂಚಾರ ಸೌಲಭ್ಯವಿದೆ. ಗ್ರಾಮದಲ್ಲಿ ಟ್ರ್ಯಾಕ್ಟರ್, ಜೀಪ್, ಬೈಕ್, ಟಿವಿಎಸ್, ಸೈಕಲ್ ಇತ್ಯಾದಿ ವಾಹನಗಳಿವೆ.

ಗ್ರಾಮದಲ್ಲಿ ರಾಗಿಮುದ್ದೆ ಪ್ರಮುಖ ಆಹಾರ. ರಾಗಿಮುದ್ದೆ ಮತ್ತು ಸೊಪ್ಪಿನ ಸಾರು ಸಾಮಾನ್ಯ ಆಹಾರ. ವಿಶೇಷವಾಗಿ ಬಾಡೂಟವು ವಿಶೇಷ ಆಹಾರವಾಗಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ವ್ಯಾಪ್ತಿಗೆ ಸೇರಿದೆಯಲ್ಲದೆ ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ ಕಡಗತ್ತೂರು ತಾಲ್ಲೂಕು ಪಂಚಾಯಿತಿ ಕ್ಷೇತ್ರಕ್ಕೆ ಸೇರಿದೆ. ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ೮ ಸ್ತ್ರೀಶಕ್ತಿ ಸಂಘಗಳಿವೆ. ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ. ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೫೫.೬೮%. ಸರ್ಕಾರದ ಸಮುದಾಯ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ರಾಗಿ ಮತ್ತು ಮುಸುಕಿನಜೋಳ ಮುಖ್ಯ ಆಹಾರ. ಅಮುಖ್ಯ ಅವರೆ, ತೊಗರಿಗಳಾಗಿವೆ. ಗ್ರಾಮದಲ್ಲಿ ನಾಟಿಹಸು, ಸೀಮೆಹಸು, ಮೇಕೆ, ಎಮ್ಮೆ, ಕುರಿಗಳನ್ನು ಸಾಕುತ್ತಾರೆ. ಗ್ರಾಮದಲ್ಲಿ ೪ ಅಂಗಡಿಗಳು, ೨ ಹೋಟೆಲ್ ಇವೆ. ಗ್ರಾಮದಲ್ಲಿ ಕಾಡುಹಂದಿ, ಮೊಲ, ನರಿ ಇತ್ಯಾದಿ ಪ್ರಾಣಿಗಳಿದ್ದು ಕೌಜುಗ, ಗೊರವಂಕ, ಬೆಳವ ಮುಂತಾದ ಪಕ್ಷಿಗಳಿವೆ. ಕೋಳಿ, ಹುಂಜಗಳಂಥ ಸಾಕುಪಕ್ಷಿಗಳಿವೆ.

ಗ್ರಾಮದಲ್ಲಿ ಒಂದು ವೀರಗಲ್ಲು ಇದೆ. ಗ್ರಾಮದಲ್ಲಿ ಯುಗಾದಿ, ಮಹಾನವಮಿ, ಶಿವರಾತ್ರಿ ಇತ್ಯಾದಿ ಹಬ್ಬಗಳನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಮಾರಮ್ಮ ದೇವತೆಗೆ ಆಷಾಢ ಮಾಸದಲ್ಲಿ ವಿಶೇಷವಾಗಿ ಆರತಿ ಆಚರಿಸುತ್ತಾರೆ.

## ಮುತ್ತುರಾಯನಹಳ್ಳಿ

ಮುತ್ತುರಾಯನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೪೯.೨೪ ಹೆಕ್ಟೇರ್ ಹೊಂದಿದ್ದು ಅಡವಿ ನಾಗೇನಹಳ್ಳಿ ವಿಸ್ತೀರ್ಣದೊಳಗೆ ಸೇರಿ ಮಜರೆ ಗ್ರಾಮವಾಗಿದೆ. ಮುತ್ತುರಾಯ ದೇವರ ಮೂಲದಿಂದ ಮುತ್ತುರಾಯನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣು ಮತ್ತು ಮರಳು ಇರುವ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಜಿಂಕೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಕೆಲವು ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಕಾಗೆ, ಗುಬ್ಬಚ್ಚಿ, ಕೋಗಿಲೆ, ಬೆಳವ, ಗೀಜುಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೧ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಎರಡು ಬಾವಿಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಪ್ಪಾರ, ವಿಶ್ವಕರ್ಮ ಚಿಕ್ಕ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೯೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೮೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೯೦ ಮತ್ತು ಹೆಂಗಸರು ೮೫ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆಗಳಿವೆ. ಅಲ್ಲಲ್ಲಿ ಗುಡಿಸಲುಗಳನ್ನು ಕಾಣಬಹುದು. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಶಿಕ್ಷಕರು ಮತ್ತು ಪೊಲೀಸರು ಸೇರಿದಂತೆ ೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ. ಇಂಜಿನಿಯರ್ ಒಬ್ಬರಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸುದ್ದೇಕುಂಟೆ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ

ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಿಂಗನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ೩೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೧ ಹೋಟೆಲ್ ಹಾಗೂ ೧ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮಾರಮ್ಮ, ಮುತ್ತುರಾಯನ ದೇವಾಲಯಗಳಿವೆ. ಪ್ರತಿ ವರ್ಷ ಮುತ್ತುರಾಯನ ಹಬ್ಬ ಮಾಡುವರು. ಗ್ರಾಮದಲ್ಲಿ ಹಿಂದೂ ಹಬ್ಬಗಳನ್ನು ವಿಶೇಷವಾಗಿ ಯುಗಾದಿ, ಸಂಕ್ರಾಂತಿ, ಶಿವರಾತ್ರಿ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮೈದನಹಳ್ಳಿ

ಮೈದನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೭೦.೬೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಮೈದುನನಿಗಾಗಿ ತನ್ನ ಅತ್ತಿಗೆ ಹೊಸದಾಗಿ ಗೃಹ ರಚಿಸಿಕೊಟ್ಟು ಗ್ರಾಮ ರಚನೆಗೆ ಕಾರಣವಾದುದರಿಂದ ಮೈದುನಹಳ್ಳಿ ಎಂದು ಕರೆಯಲಾಗಿದೆ ಎಂದು ಗ್ರಾಮಸ್ಥರ ಅಭಿಪ್ರಾಯವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣು ಮತ್ತು ಮರಳು ಇರುವ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳು ಮತ್ತು ಪೊದೆಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕರಡಿ, ತೋಳ, ನರಿಗಳು ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಬೆಳವ, ಪಾರಿವಾಳ, ಗೀಜುಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ೨ ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳು, ೪ ಸಿಸ್ಟರ್ನ್‌ಗಳಿದ್ದು ೨ ಬಾವಿಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ, ಆದಿದ್ರಾವಿಡ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಸಾದರ ಗೌಡರು, ನಾಯಕ, ರೆಡ್ಡಿ, ಕುರುಬ, ಅಗಸ, ಭಜಂತ್ರಿ, ಶೆಟ್ರು, ಬ್ರಾಹ್ಮಣ, ಉಪ್ಪಾರ, ಕುಂಬಾರ, ಕಮ್ಮಾರ, ವಿಶ್ವಕರ್ಮ, ಬೋವಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೩೪೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೪೮೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೭೪೨ ಮತ್ತು ಹೆಂಗಸರು ೭೪೪ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ಅಲ್ಲಲ್ಲಿ ಗುಡಿಸಲುಗಳನ್ನು ಕಾಣಬಹುದು. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್

ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ ಮತ್ತು ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೮ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ. ಇಲ್ಲಿ ಜಯಮಂಗಲಿ ಕೃಷ್ಣಮೃಗ ಸಂರಕ್ಷಣಾ ಧಾಮವಿದ್ದು ೧೦೦೦ ಜಿಂಕೆಗಳಿವೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಕಂದಾಯ, ಸಾರಿಗೆ, ಕೃಷಿ, ಅರಣ್ಯ, ಶಿಕ್ಷಕರು ಮತ್ತು ಪೊಲೀಸರು ಸೇರಿದಂತೆ ೩೬ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ನಾಲ್ವರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸುದ್ದೇಕುಂಟೆ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಸಿಂಗನಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಇಬ್ಬರು ಸದಸ್ಯರು, ಒಬ್ಬರು ನೌಕರರಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಿಂಗನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೩೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ (ಉನ್ನತೀಕರಿಸಿದ ಶಾಲೆ) ಇದ್ದು ಒಟ್ಟು ೧೯೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಏಳು ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕೃಷ್ಣಮೃಗ ಉದ್ಯಾನವನ ಕಂಡುಬರುತ್ತದೆ.

ಗ್ರಾಮದಲ್ಲಿ ಮಾರಮ್ಮ, ಮುದ್ದಮ್ಮ, ಆಂಜನೇಯ, ಸಾಯಿಬಾಬ, ಈಶ್ವರ, ಶ್ರೀರಾಮ, ನವಗ್ರಹ, ಗಣೇಶ, ಜಲದುರ್ಗಮ್ಮ, ಚಾಮುಂಡೇಶ್ವರಿ, ಕಾಳಿಕಾದೇವಿ, ಕೆಂಪಮ್ಮ, ಭೂತಪ್ಪ, ಕಾಟೆಂರಾಯ, ಗಂಗಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ, ರಾಮನವಮಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

ಗ್ರಾಮದಲ್ಲಿ ೩ ವೀರಗಲ್ಲ, ೨ ಮಾಸ್ತಿಗಲ್ಲು, ೧ ಕರುಗಲ್ಲು ಇದೆ. ಎಂ.ಜಿ. ಗಂಗಾಧರಯ್ಯ ೫೮ ವರ್ಷದ ಆದಿದ್ರಾವಿಡ ಜನಾಂಗದವರಾಗಿದ್ದು ಹರಿಕಥೆ, ಜಾನಪದ ಗೀತೆ, ದೇಶಭಕ್ತಿ ಗೀತೆ, ಶನಿಮಹಾತ್ಮ ಗಾತೆ ಹಾಡುವವರಾಗಿದ್ದಾರೆ. ಪಾಳುಬಿದ್ದ ಕೋಟೆ, ಊರಬಾಗಿಲು ಇದೆ.

## ಮಸರಪಡಿ

ಮಸರಪಡಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೫೯.೭೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಮಧುಗಿರಿ ಪಾಳೆಯಗಾರರಿಗೆ ಈ ಪ್ರದೇಶದಿಂದ ಹಾಲು–ಮೊಸರು ಪಡೆಯುತ್ತಿದ್ದರಿಂದಾಗಿ ಮೊಸರುಪಡಿ

ಎಂಬ ಗ್ರಾಮ ರಚನೆಗೆ ಕಾರಣ ಎಂದು ಗ್ರಾಮದ ಹಿರಿಯರ ಅಭಿಪ್ರಾಯವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಬೆಳವ, ಗೊರವಂಕ, ಗೌಜುಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಅರಳೀಮರ, ಹುಣಸೆ, ಮಾವು ಇತ್ಯಾದಿ ಮರಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೯ ಸಾರ್ವಜನಿಕ ನಲ್ಲಿಗಳು, ೪ ಸಿಸ್ಟರ್ನ್‌ಗಳು ಹಾಗೂ ೨ ಬಾವಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ರೆಡ್ಡಿ, ಗೊಲ್ಲ, ಭಜಂತ್ರಿ, ಅಗಸ, ನಾಯಕ, ಆದಿದ್ರಾವಿಡ, ಮುಸ್ಲಿಂ, ದಾಸರು ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು, ಉರ್ದು ಮಾತನಾಡುವವರಿದ್ದಾರೆ.

ಒಟ್ಟು ೨೮೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೧೮೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೭೯ ಮತ್ತು ಹೆಂಗಸರು ೬೦೪ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ಅಲ್ಲಲ್ಲಿ ಗುಡಿಸಲುಗಳನ್ನು ಕಾಣಬಹುದು. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೯ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಸ್ವಲ್ಪ ಭಾಗ ಸಿಮೆಂಟ್ ಮತ್ತು ಜಲ್ಲಿ ಕಾಣಬಹುದು. ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೭೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಸೂರ್ಯಕಾಂತಿ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಫುಡ್ ಇನ್ಸ್‌ಪೆಕ್ಟರ್, ಕೆಎಸ್‌ಆರ್‌ಟಿಸಿ ಇಲಾಖೆ, ಶಿಕ್ಷಕರು ಮತ್ತು ಪೊಲೀಸರು ಸೇರಿದಂತೆ ೪ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಒಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸುದ್ದೇಕುಂಟೆ ತಾಲ್ಲೂಕು ಪಂಚಾಯಿತ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಸಿಂಗನಹಳ್ಳಿ ಗ್ರಾಮಪಂಚಾಯ್ತಿಗೆ ಸೇರುತ್ತದೆ. ಇಬ್ಬರು ಸದಸ್ಯರು, ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಿಂಗನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೨ ಮಕ್ಕಳಿದ್ದಾರೆ. ಕಾರ್ಯಕರ್ತೆ ಹಾಗೂ ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೧೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ೬ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೫.೩೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಟೀ–ಕಾಫಿ ದೊರೆಯುವ ೩ ಹೋಟೆಲ್‌ಗಳು ಹಾಗೂ ೫ ಅಂಗಡಿಗಳಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಒಂದು ಮಸೀದಿ ಇದೆ.

ಗ್ರಾಮದಲ್ಲಿ ಮಾರಮ್ಮ, ಸಪ್ಲಮ್ಮ, ಕಾಲಮ್ಮ, ಆಂಜನೇಯ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಾಗೂ ಮುಸ್ಲಿಂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮರಗಮ್ಮ, ಆಂಜನೇಯ ಜಾತ್ರೆ ನಡೆಯುತ್ತದೆ.

## ಮೌಲಾನಾಬೇಗ್‌ಪಾಳ್ಯ

ಮೌಲಾನಾಬೇಗ್ ಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿದೆ. ಈ ಗ್ರಾಮವು ಮುತ್ಯಾಲಮ್ಮನಹಳ್ಳಿ ವಿಸ್ತೀರ್ಣದಲ್ಲಿ ಸೇರಿರುವ ಮಜರೆ ಗ್ರಾಮವಾಗಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೦.೨೦ ಹೆಕ್ಟೇರ್‌ಗಳಾಗಿವೆ.

ಪ್ರಾಚೀನ ಕಾಲದಲ್ಲಿ ಮೌಲಾನಾಬೇಗ್ ಎಂಬ ಮುಸ್ಲಿಂ ಜನಾಂಗದ ವ್ಯಕ್ತಿ ಇಲ್ಲಿ ನೆಲೆಸಿ ವಾಸಿಸಿದ್ದರಿಂದ ಕುಟುಂಬಗಳ ಸಂಖ್ಯೆಯೂ ಬೆಳೆದು ಈ ಗ್ರಾಮಕ್ಕೆ ಮೌಲಾನಾಬೇಗ್ ಪಾಳ್ಯ ಎಂದು ಹೆಸರಾಗಿದೆ.

ಗ್ರಾಮ ಪೊದೆಗಳಲ್ಲಿ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗೌಜುಗ, ಬೆಳವ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ನಾಟಿಹಸು, ಎತ್ತು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೫೫೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಒಂದೇ ದಿನದಲ್ಲಿ ೮೫ ಮಿಮೀ ಮಳೆ ಬಿದ್ದಂತಹ ದಾಖಲೆಯಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆಯಿರುವುದಿಲ್ಲ. ಆದರೆ ಜಯಮಂಗಲಿ ನದಿಯಿದೆ. ಈ ನದಿಯು ಮಳೆಗಾಲದಲ್ಲಿ ಚೆನ್ನಾಗಿ ಮಳೆ ಸುರಿದಾಗ ತುಂಬಿ ಹರಿಯುತ್ತದೆ. ಆಗ ಗ್ರಾಮದಲ್ಲಿ ಅಂತರ್ಜಲಮಟ್ಟ ಮೇಲೇರುತ್ತದೆ. ಉತ್ತಮ ಮಳೆಯಿಂದ ಉತ್ತಮ ಬೆಳೆಯುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಮುಸ್ಲಿಂ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉರ್ದು ಭಾಷೆ ಮಾತನಾಡುವವರಿದ್ದಾರೆ.

ಒಟ್ಟು ೪೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೩೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ಅಲ್ಲಲ್ಲಿ ಗುಡಿಸಲುಗಳನ್ನು ಕಾಣಬಹುದು. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ಗ್ರಾಮದಲ್ಲಿ ೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಈ ಗ್ರಾಮದ ಪ್ರಧಾನ ಆಹಾರವು ರಾಗಿಮುದ್ದೆ, ಬಿರಿಯಾನಿಯಾಗಿದೆ. ಅಮುಖ್ಯವಾದ ಆಹಾರವಾಗಿ ಅನ್ನ, ಚಪಾತಿ, ದೋಸೆ ಆಗಿದೆ. ವಿಶೇಷ ಆಹಾರವಾಗಿ ಹೋಳಿಗೆ, ಕಡುಬು, ಬಾಡೂಟಗಳಿವೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ದ್ವಿಚಕ್ರ ವಾಹನ ಬೈಕ್, ಟಿವಿಎಸ್‌ಗಳಂತಹ ಆಧುನಿಕ ವಾಹನಗಳಿವೆ.

ಈ ಗ್ರಾಮಕ್ಕೆ ಮಣ್ಣಿನ ರಸ್ತೆಯಿದೆ. ಇಲ್ಲಿ ಬಸ್ ಸೌಲಭ್ಯ ಇರುವುದಿಲ್ಲ. ಇತರೆ ಗ್ರಾಮಗಳಿಗೆ ತೆರಳಿ ಬಸ್ ಹತ್ತಿ ಬೇರೆಡೆ ಸಂಚರಿಸಬೇಕಾದಂತಹ ದುಃಸ್ಥಿತಿ ಈ ಗ್ರಾಮದ ಗ್ರಾಮಸ್ಥರದಾಗಿದೆ.

ಈ ಗ್ರಾಮದಲ್ಲಿ ಬಾಗಾಯ್ತು, ತರಿ ಭೂಮಿಗಿಂತಲೂ ಖುಷ್ಕಿ ಭೂಮಿಯು ಅಧಿಕವಾಗಿದೆ. ಈ ಪ್ರದೇಶದಲ್ಲಿ ರಾಗಿ, ಮುಸುಕಿನ ಜೋಳ ಪ್ರಧಾನ ಬೆಳೆಗಿದೆ. ಇಳಿದಂತೆ ಉದ್ದು, ಅವರೆ, ಅಲಸಂದೆ, ತೊಗರಿ ಉಪಬೆಳೆಗಳಾಗಿವೆ. ರಾಗಿ ಆಹಾರ ಬೆಳೆಗಿದೆ. ಮುಸುಕಿನಜೋಳ, ರಾಗಿ, ಮೆಣಸಿನಕಾಯಿ ಬೆಳೆಯನ್ನನು ರೈತರು ಮಾರಾಟ ಮಾಡಿ ಹಣವನ್ನು ಸೂಕ್ತ ಪ್ರಮಾಣದಲ್ಲಿ ಪಡೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಗ್ರಾಮದಲ್ಲಿ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ಆದರೆ ಸರ್ಕಾರಿ ಉದ್ಯೋಗಿಗಳು ಗ್ರಾಮದಲ್ಲಿ ಬೆಂಗಳೂರಿನ ಖಾಸಗಿ ಕಾರ್ಖಾನೆಗೆ ಗ್ರಾಮದ ೧೨ ಜನರು ಕೆಲಸಗಾರರಾಗಿ ಹೋಗಿದ್ದಾರೆ. ಗ್ರಾಮದಲ್ಲಿ ಬಡಗಿ, ಗಾರೆ ಕೆಲಸದವರು ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸುದ್ದೇಕುಂಟೆ ತಾಲ್ಲೂಕು ಪಂಚಾಯ್ತಿ, ಸಿಂಗನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೫ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿಉರ್ದು ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ೨೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ವಿದ್ಯಾರ್ಥಿಗಳು ಶೂನ್ಯ ಪ್ರಮಾಣದಲ್ಲಿರುವುದು ದುರಂತವೇ ಸರಿ ಎನ್ನುವಂತಾಗಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಕಿರಾಣಿ ಅಂಗಡಿ ಇದೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಮುಸ್ಲಿಮರ ಮಸೀದಿ ಇದೆ. ಗ್ರಾಮದಲ್ಲಿ ಹಿಂದೂ–ಮುಸ್ಲಿಂ ಸಾಮರಸ್ಯವಿದೆ. ರಂಜಾನ್, ಬಕ್ರಿದ್, ಮೊಹರಂ, ಯುಗಾದಿ, ಶಿವರಾತ್ರಿ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮುಳಬಾಗಿಲಪಾಳ್ಯ

ಮುಳಬಾಗಿಲಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೦೯.೨೫ ಹೆಕ್ಟೇರ್ ಹೊಂದಿದ್ದು ಅಗ್ರಹಾರ ಗ್ರಾಮದ ಭೂವಿಸ್ತೀರ್ಣದಲ್ಲಿ ಸೇರಿರುವ ಮಜರೆ ಗ್ರಾಮವಾಗಿದೆ.

ಮೂಡಲ ಬಾಗಿಲ ಪಾಳ್ಯ > ಊರು – ಮುಳುಬಾಗಿಲಾಗಿದೆ. ಪಾಳ್ಯ ಪುಟ್ಟ ಮನೆಗಳ ಗ್ರಾಮ. ಅದರಿಂದಾಗಿ ಮುಳಬಾಗಿಲ ಪಾಳ್ಯವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ರಾಘಲಬಂಡೆ ಇದೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಹೊಂಗೆ, ಹುಣಸೆ, ಅರಳಿ, ಮಾವು, ಹಲಸು, ಅಕೇಶಿಯಾ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಮೊಲ, ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಹದ್ದು, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳು ಮತ್ತು ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ३೨ ರಿಂದ ३४ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೭೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೯೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೪೨ ಮತ್ತು ಹೆಂಗಸರು ೨೫೭ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ತೊಗರಿ, ಶೇಂಗಾ, ಸೂರ್ಯಕಾಂತಿ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬ್ಯಾಲ್ಯ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಬ್ಯಾಲ್ಯ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬ್ಯಾಲ್ಯ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಬ್ಯಾಲ್ಯ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಒಂದು ಅಂಗನವಾಡಿ ಕೇಂದ್ರವಿದ್ದು ೨೫ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ೪೫ ಮಕ್ಕಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೪೮.೧೯%.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಈರದಿಮ್ಮಮ್ಮ, ಮುತ್ತುರಾಯ, ವೆಂಕಟರಮಣಸ್ವಾಮಿ ದೇವಾಲಯಗಳು ಕಂಡುಬರುತ್ತದೆ. ಗ್ರಾಮದಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ,

ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮುದ್ದಲಿಂಗಯ್ಯನಪಾಳ್ಯ

ಮುದ್ದಲಿಂಗಯ್ಯನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೧೮.೭೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಮುದ್ದಲಿಂಗಯ್ಯ ಎಂಬ ವ್ಯಕ್ತಿ ಮೂಲದಿಂದಾಗಿ ಮುದ್ದಲಿಂಗಯ್ಯನಪಾಳ್ಯ ಗ್ರಾಮದ ಹೆಸರು ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ಅರಣ್ಯವನ್ನು ಹೊಂದಿಲ್ಲದಿದ್ದರೂ ಬೇವು, ನೇರಳೆ, ಅರಳಿ, ಹೊಂಗೆ, ನೀಲಗಿರಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಕೃಷ್ಣಮೃಗ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಹದ್ದು, ಪಾರಿವಾಳ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳು, ಹಂದಿಗಳು ಮತ್ತು ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಸಾದರು ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೧೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೩೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೨೨ ಮತ್ತು ಹೆಂಗಸರು ೨೧೫ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಮುಸುಕಿನಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಸೂರ್ಯಕಾಂತಿ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ನಾಲ್ಕು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದಾರೆ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬ್ಯಾಲ್ಯ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಬ್ಯಾಲ್ಯ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬ್ಯಾಲ್ಯ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಬ್ಯಾಲ್ಯ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ಧರ್ಮಸ್ಥಳ ಸಂಘಗಳಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದ ಸಾಕ್ಷರತಾ ಪ್ರಮಾಣ ೫೭.೩೦%.

ಗ್ರಾಮದಲ್ಲಿ ಬಸವಣ್ಣನ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮೇಕೆತಿಮ್ಮನಹಳ್ಳಿ

ಮೇಕೆತಿಮ್ಮನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೨೦೧.೨೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ಅರಣ್ಯವನ್ನು ಹೊಂದಿಲ್ಲದಿದ್ದರೂ ಮಾವು, ಹಲಸು, ನೇರಳೆ, ಅರಳಿ, ಬೇವು ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಪಾರಿವಾಳ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳು ಮತ್ತು ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೩ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೬ ಮತ್ತು ಹೆಂಗಸರು ೩೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ---- ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಮುಸುಕಿನಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಬಾಳೆ, ದಾಳಿಂಬೆ ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬ್ಯಾಲ್ಯ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಬ್ಯಾಲ್ಯ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬ್ಯಾಲ್ಯ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಬ್ಯಾಲ್ಯ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘವಿದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ ಮತ್ತು ಟೀ ದೊರೆಯುವ ೧ ಹೋಟೆಲ್ ಇದ್ದು ೧ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೫೪.೩%.

ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮಾದೇನಹಳ್ಳಿ

ಮಾದೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೨೧.೯೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಕಾಗೆ, ಗಿಳಿ, ಕಾಡು ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ವಿಶೇಷವಾಗಿ ನವಿಲುಗಳ ಸಹ ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಎತ್ತು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿ, ಬಾಯ್ಲರ್ ಕೋಳಿ, ಗಿರಿರಾಜ ಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೩ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಹಾಗೂ ಆದಿ ದ್ರಾವಿಡ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುಂಚಿಟಿಗ, ಲಿಂಗಾಯಿತ, ಕಮ್ಮಾರ, ಕುರುಬರು, ವೈಶ್ಯರು ಜನಾಂಗದವರಿದ್ದಾರೆ. ಗೊಲ್ಲ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೯೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೦೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೯೬ ಮತ್ತು ಹೆಂಗಸರು ೨೧೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ, ಜೋಳ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಸೂರ್ಯಕಾಂತಿಯನ್ನು ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಶೇಂಗಾ ಮತ್ತು ಮುಸುಕಿನ ಜೋಳವನ್ನು ಬೆಳೆಯುತ್ತಾರೆ.

ಹೈನುಗಾರಿಕೆಯಲ್ಲಿ ಸಾಂಪ್ರದಾಯಿಕ ಹಾಗೂ ಆಧುನಿಕ ಎರಡು ರೀತಿಯಲ್ಲಿಯೂ ಈ ಗ್ರಾಮವಿರುವುದು ಕಂಡುಬರುತ್ತದೆ.

ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ನ್ಯಾಯಾಂಗ ವ್ಯವಸ್ಥೆಗೆ ಸಂಬಂಧಿಸಿದ ಸುಮಾರು ೧೦ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಕಮ್ಮಾರರು ಮತ್ತು ಒಬ್ಬರು ಗುಡಿಕಾರರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕವಣದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕವಣದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಮತ್ತು ಆಟೋ ರಿಕ್ಷಾಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಹನುಮನಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂವರು ಶಿಕ್ಷಕರು, ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೦.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೧ ಚಿಕ್ಕ ಅಂಗಡಿಯಿದೆ.

ಗ್ರಾಮದಲ್ಲಿ ಆಂಜನೇಯ, ಬಸವಣ್ಣ, ಲಕ್ಷ್ಮಿ ದೇವರು, ಬಿದರಮ್ಮ ದೇವಾಲಯವಿದೆ. ಮಾರಮ್ಮದೇವಿಯ ಜಾತ್ರೆಯು ಬಲಿಯೊಂದಿಗೆ ವಿಜೃಂಭಣೆಯಿಂದ ನಡೆಯುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮುದ್ದಪ್ಪನಪಾಳ್ಯ

ಮುದ್ದಪ್ಪನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೯.೭೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮದ ಪ್ರಾಚೀನ ಹೆಸರು ಗುಡ್ಡೇದಾಸಪ್ಪನಪಾಳ್ಯ ಎಂದಾಗಿತ್ತು. ಈ ಗ್ರಾಮವು ಗುಡ್ಡೆಯ ಮೇಲಿರುವುದರಿಂದ ಈ ಗ್ರಾಮಕ್ಕೆ ದಾಸಪ್ಪ ಎನ್ನುವವರು ತಮ್ಮ ಹೆಸರಿನೊಂದಿಗೆ ಗುಡ್ಡೆಯನ್ನು ಸೇರಿಸಿಕೊಂಡು ಗುಡ್ಡೆ ದಾಸಪ್ಪನಪಾಳ್ಯ ಎಂದು ನಾಮಕರಣ ಮಾಡಿಕೊಂಡರು. ಕೆಲವು ಕಾಲಗಳ ತರುವಾಯ ಇವರ ಮಗನಾದ ಮುದ್ದಪ್ಪನು ತನ್ನ ಹೆಸರನ್ನು ಈ ಗ್ರಾಮಕ್ಕೆ ಇಟ್ಟು ಮುದ್ದಪ್ಪನಪಾಳ್ಯ ಎಂದು ಮರುನಾಮಕರಣ ಮಾಡಿದನೆನ್ನುವ ವಾಡಿಕೆಯಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿ ಕಲ್ಲುಗಳಿಂದ ಕೂಡಿದ ಕಪ್ಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸುತ್ತಲೂ ಗುಡ್ಡಗಳಿವೆ.

ಗ್ರಾಮವು ಗುಡ್ಡಗಳನ್ನು ಹೊಂದಿರುವುದರ ಜೊತೆಗೆ ಸಣ್ಣ ಸಣ್ಣ ಗುಂಪು ಸಸ್ಯಗಳನ್ನು ಹೊಂದಿದೆ. ಇದರಲ್ಲಿ ಪ್ರಾಣಿಗಳಾದ ಕಾಡುಹಂದಿ, ಮೊಲ, ಕರಡಿ ಕೆಲವೊಂದು ಸಂದರ್ಭದಲ್ಲಿ ಚಿರತೆಗಳು ಸಹ ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕಾಗೆ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದ ಹೊರವಲಯದಲ್ಲಿ ನೀಲಗಿರಿ ಅರಣ್ಯ ಕಂಡುಬರುತ್ತದೆ. ಗ್ರಾಮದಲ್ಲಿ ಸುವರ್ಣಮುಖಿ ಹೊಳೆ ಹರಿಯುತ್ತದೆ. ಒಂದು ಸೀಳು ಹಳ್ಳ ಕೂಡ ಹರಿಯುತ್ತದೆ. ಒಂದು ವಿಶಾಲವಾದ ಕೆರೆಯು ಗ್ರಾಮದಲ್ಲಿದೆ. ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ೨ ಸಿಸ್ಟರ್ನ್‌ಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಕೆಲವೊಮ್ಮೆ ನೀರಿನ ಅಭಾವವಾಗುತ್ತದೆ. ಗ್ರಾಮಪಂಚಾಯ್ತಿ ಆಡಳಿತ ಮಂಡಳಿ ಇದನ್ನು ಬಗೆಹರಿಸುವ ಪ್ರಯತ್ನದಲ್ಲಿದೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೇರೆ ಯಾವುದೇ ಜನಾಂಗದವರಿಲ್ಲ. ಯಾವುದೇ ಕೋಮು ಗಲಭೆಗೆ ಅವಕಾಶವಿರುವುದಿಲ್ಲ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೭೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೨೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೧೩ ಮತ್ತು ಹೆಂಗಸರು ೨೦೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಖೀರು, ಪಾಯಸ, ಕಡುಬು, ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್, ಟಿಲ್ಲರ್, ಆಟೋ, ಕಾರು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಹೂವು, ಅಡಿಕೆ, ತೆಂಗು ರಾಗಿ ಇಲ್ಲಿನ ವಾಣಿಜ್ಯ ಬೆಳೆಗಳಾಗಿವೆ. ಹೂವು, ಅಡಿಕೆ ಮತ್ತು ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯಲ್ಲಿ ಹೈನುಗಾರಿಕೆ ಇಲ್ಲವಾಗಿದ್ದು ಆಧುನಿಕ ಡೈರಿ ವ್ಯವಸ್ಥೆಯಿಂದಾಗಿ ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಗ್ರಾಮಕ್ಕೆ ಸೇರಿದಂತೆ ಕೆರೆ ಇದ್ದರೂ ಬರಗಾಲದ ಕಾರಣವಾಗಿ ನೀರಿಲ್ಲದಿರುವುದರಿಂದ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ.

ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಇಬ್ಬರು ಸರ್ಕಾರಿ ನೌಕರರು ಇದ್ದು ಒಬ್ಬರು ಇಂಜಿನಿಯರ್ ಆಗಿ ಐಟಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕವಣದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಆಟೋರಿಕ್ಷಾಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಹನುಮನಹಳ್ಳಿ ಅಂಚೆ ವ್ಯಾಪ್ತಿಗೆ

ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. --- ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು, ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೪.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮುದ್ದುಮಲ್ಲನಹಳ್ಳಿ

ಮುದ್ದುಮಲ್ಲನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೪೬೪.೧೯ ಹೆಕ್ಟೇರ್ ಗರಣಿ ಭೂ ವಿಸ್ತೀರ್ಣದಲ್ಲಿ ಸೇರಿದ ಕಂದಾಯ ಗ್ರಾಮವಾಗಿದೆ. ವ್ಯಕ್ತಿಮೂಲದಿಂದ ಗ್ರಾಮಕ್ಕೆ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ ಮತ್ತು ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ ಗ್ರಾಮದಲ್ಲಿ ಹತ್ತು ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಕುರುಬ ಜನಾಂಗದವರೆ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ, ಒಕ್ಕಲಿಗ, ಆದಿಕರ್ನಾಟಕ, ನಾಯಕ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದಲ್ಲಿ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೯೭ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೫೬೮ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು ೩೧೮, ಹೆಣ್ಣು ೨೫೦ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್ ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಮತ್ತು ಆಟೋಗಳಂತಹ ಆಧುನಿಕ ವಾಹನಗಳಿವೆ ಈ ಗ್ರಾಮವು ಉತ್ತಮವಾದ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಕಂಡುಬರುತ್ತದೆ.. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ

ಅವರೆ ಶೇಂಗಾ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಗ್ರಾಮದಲ್ಲಿ ಪೋಲಿಸ್ ಇಲಾಖೆಗೆ ಸೇರಿದ ಒಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡು ಬರುವುದಿಲ್ಲ. ಒಬ್ಬರು ಐಟಿ–ಬಿಟಿ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಗರಣಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಗರಣಿ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಗರಣಿ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೆ ಬಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೩ ಮಕ್ಕಳಿದ್ದಾರೆ ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಕಿರಿಯ ಪ್ರಾಥಮಿಕ (ಎಲ್.ಪಿ.ಎಸ್.) ಶಾಲೆಯಿದ್ದು ೨೪ ಮಕ್ಕಳಿದ್ದಾರೆ ಈ ಶಾಲೆಗೆ ಇಬ್ಬರು ಶಿಕ್ಷಕರಿದ್ದು ಉಚಿತ ಶಿಕ್ಷಣ ನೀಡಲಾಗುತ್ತಿದೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೩೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ದಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು ಎರಡು ಅಂಗಡಿಗಳಿವೆ ಈ ಗ್ರಾಮದಲ್ಲಿ ಜ್ವರ ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡು ಬರುತ್ತವೆ.

ಗ್ರಾಮದಲ್ಲಿ ಶನಿಮಹಾತ್ಮ ದೇವಾಲಯವಿದೆ. ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮಾದೇನಹಳ್ಳಿ

ಮಾದೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ಗರಣಿ ಭೂ ವಿಸ್ತೀರ್ಣಕ್ಕೆ ಸೇರಿರುತ್ತದೆ ಮಜರೆ ಗ್ರಾಮವಾಗಿದೆ. ಮಾದ ಎಂಬ ವ್ಯಕ್ತಿ ಮೂಲದಿಂದ ಮಾದೇನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮದಲ್ಲಿ ಅರಣ್ಯ ಪ್ರದೇಶವಿದ್ದು ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ೧ ಹಳ್ಳ ಇದ್ದು ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳು ಮತ್ತು ೪ ಟ್ಯಾಂಕ್, ೪ ನಲ್ಲಿಗಳಿವೆ.

ಒಕ್ಕಲಿಗ ಜನಾಂಗದವರು ಅಧಿಕ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ರೆಡ್ಡಿ, ಕಮ್ಮಾರ, ಬೋವಿ, ಆದಿದ್ರಾವಿಡ, ಆದಿ ಕರ್ನಾಟಕ ಕಿರು

ಸಮುದಾಯವಾಗಿದೆ. ಗ್ರಾಮದಲ್ಲಿ ಕನ್ನಡ ಹಾಗೂ ತೆಲುಗು ಭಾಷೆ ಮಾತನಾಡುತ್ತಾರೆ.

ಒಟ್ಟು ೯೭ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೪೪೬ ಜನಸಂಖ್ಯೆಯನ್ನು ಹೊಂದಿದೆ ಗಂಡು ೨೨೬, ಹೆಣ್ಣು ೨೨೦ ಹೊಂದಿದೆ ಗ್ರಾಮದಲ್ಲಿ ಕಾಂಕ್ರೀಟ್ ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್, ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದ ಉತ್ತಮ ರಸ್ತೆವ್ಯವಸ್ಥೆ, ಚರಂಡಿ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಬೆಳೆ ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆಯಲ್ಲಿ ಇಲ್ಲಿನ ಜನ ತೊಡಗಿದ್ದಾರೆ.

ಬಿಲ್ ಕಲೆಕ್ಟರ್, ಪಿಡಿಓ, ಶಿಕ್ಷಣ ಇಲಾಖೆ ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ೬ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ವ್ಯವಸಾಯನ್ನೇ ಮುಖ್ಯ ಕಸುಬಾಗಿಸಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಗರಣಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ ಗರಣಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ಒಟ್ಟು ಒಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಗರಣಿ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಗರಣಿ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೦೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು ಒಟ್ಟು ಇಬ್ಬರು ಶಿಕ್ಷಕರಿದ್ದು ೧೭ ಮಕ್ಕಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೭.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೋಟೇಲ್ ಇದ್ದು ಎರಡು ಅಂಗಡಿಗಳಿವೆ ಈ ಗ್ರಾಮದಲ್ಲಿ ಜ್ವರ ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡು ಬರುತ್ತವೆ.

ಗ್ರಾಮದಲ್ಲಿ ಹನುಮಂತರಾಯ, ಮಾಗೋಡು ರಂಗಪ್ಪ, ಓಬಳ ನರಸಿಂಹ, ಶೆಟ್ಟಿಹಳ್ಳಿ ಮಾರಮ್ಮ, ಮಾರಮ್ಮ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮಾರಮ್ಮನಿಗೆ ಆರತಿ ಹಾಗೂ ಬಲಿ ನೀಡುವರು.

## ಮಾರುತಿಪುರ

ಮಾರುತಿಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ಸೋಬೇನಹಳ್ಳಿ ಭೂ ವಿಸ್ತೀರ್ಣದಲ್ಲಿ ಸೇರಿದೆ, ಕಂದಾಯ ಗ್ರಾಮವಾಗಿದೆ. ಗ್ರಾಮಕ್ಕೆ ಮಾರುತಿ ದೇವಾಲಯವಿದೆ. ದೈವೀ ಮೂಲವಿರುವ ಗ್ರಾಮಕ್ಕೆ ಈ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ. ಅಕ್ಕಮ್ಮನವರ ಬೆಟ್ಟವಿದೆ.

ಗ್ರಾಮವು ರಕ್ಷಿತ ಅರಣ್ಯವನ್ನು ಹೊಂದಿದ್ದು ಪ್ರಾಣಿಗಳಾದ ಕಾಡುಮೊಲ, ಕರಡಿ, ನರಿ, ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ನಾಯಕ, ಮಡಿವಾಳ, ರೆಡ್ಡಿ, ಒಕ್ಕಲಿಗ, ಬೋವಿ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ.

ಒಟ್ಟು ೯೮ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೫೫೬ ಜನಸಂಖ್ಯಾ ಪ್ರಮಾಣ ಹೊಂದಿದೆ ಗಂಡು–೨೭೦, ಹೆಣ್ಣು–೨೯೦ ಜನ ಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು ಚರಂಡಿ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಇದು ಒಂದು ಉಪಕಸುಬಾಗಿ ರೈತರು ತೊಡಗಿಕೊಂಡಿದ್ದಾರೆ.

ಮಿಲಿಟರಿ, ಸರ್ವೇ ಇಲಾಖೆ, ಶಿಕ್ಷಣ ಇಲಾಖೆ, ಹಾಗೂ ಪೋಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ೬ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ, ಕಮ್ಮಾರಿಕೆ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಬ್ರಹ್ಮ ಸಮುದ್ರ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಒಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಬ್ರಹ್ಮ ಸಮುದ್ರ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಬ್ರಹ್ಮಸಮುದ್ರ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೨ ಅಂಗನವಾಡಿ ಕೇಂದ್ರವಿದ್ದು ೪೦ ಮಕ್ಕಳಿದ್ದಾರೆ, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು ಒಟ್ಟು ೪೦ ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ,

ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ಎರಡು ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಮಾರುತಿ, ಶನಿಮಹಾತ್ಮ, ಮುತ್ತುರಾಯ, ಮಾರಮ್ಮ, ಪಟಾಲಮ್ಮ ದೇವಾಲಯಗಳಿವೆ. ಶ್ರಾವಣದಲ್ಲಿ ಆಂಜನೇಯನ ಆರತಿ, ಮುತ್ತುರಾಯ, ಶನಿಮಹಾತ್ಮ, ಆರತಿ ಆಷಾಢದಲ್ಲಿ ಮಾರಮ್ಮನಿಗೆ ಹರಕೆ ಹಾಗೂ ಬಲಿ ನೀಡುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಮುದ್ದನೇರಳೇಕೆರೆ ಜನತಾ ಹೌಸಿಂಗ್ ಕಾಲೋನಿ

ಮುದ್ದನೇರಳೇಕೆರೆ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ಮುದ್ದನೇರಳೇಕೆರೆಯ ಹೊರವಲಯದಲ್ಲಿದೆ.

ಒಟ್ಟು ೮೧ ಮನೆಗಳನ್ನು ಹೊಂದಿದ್ದು ೩೩೪ ಜನಸಂಖ್ಯೆಯನ್ನು ಹೊಂದಿದೆ. ಬೋವಿ, ಆದಿಕರ್ನಾಟಕ, ಆದಿದ್ರಾವಿಡ, ಒಕ್ಕಲಿಗ ಜನಾಂಗದವರು ಗ್ರಾಮದಲ್ಲಿದ್ದಾರೆ. ಜನತಾ ಹೌಸಿಂಗ್ ಯೋಜನೆಯಡಿ ಮನೆಗಳು ನಿರ್ಮಾಣವಾಗಿವೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಮುದ್ದನೇರಳೇಕೆರೆ ಮುಖ್ಯ ಗ್ರಾಮದೊಂದಿಗೆ ಶಿಕ್ಷಣ, ಸಾರಿಗೆ ಸಂಪರ್ಕ ಹೊಂದಿದೆ. ಬ್ರಹ್ಮಸಮುದ್ರ ಪಂಚಾಯಿತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ವ್ಯವಸಾಯ ಮುಖ್ಯ ಕಸುಬಾಗಿದ್ದು ಹೂ ಕಟ್ಟುವುದು, ಬೀಡಿ ಸುತ್ತುವುದು ಹಾಗೂ ಕೂಲಿ ಮಾಡುವವರಿದ್ದಾರೆ. ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಯರ್ರಗುಂಟೆ ಹೊಸಹಳ್ಳಿ

ವೈ. ಹೊಸಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೩೪೦.೧೨ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗುಂಡಗಲ್ಲು ವಿಸ್ತೀರ್ಣದಲ್ಲಿ ಸೇರಿದೆ. ಹೊಸದಾಗಿ ನಿರ್ಮಾಣವಾದ ಗ್ರಾಮವಾದ್ದರಿಂದ ಹೊಸಹಳ್ಳಿ ಎಂದು ನಾಮಕರಣ ಮಾಡಲಾಗಿದೆ. ಯರೆಯ ಮಣ್ಣಿನ ಜಾಗದ ಹಳ್ಳಿ ಎಂದು ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಉಳಿದಂತೆ ಹಲವು ವಿಷಪೂರಿತ ಜಾತಿಯ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯಿತ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನೇಕಾರರು, ಕುಂಬಾರರು, ರೆಡ್ಡಿ, ಕುರುಬ ಮತ್ತು ಶೆಟ್ಟಿ ಬಣಜಿಗರು ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೪೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೯೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೦೧ ಮತ್ತು ಹೆಂಗಸರು ೨೬೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ,

ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೫೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೪ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೪೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ಅವರೆ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅಷ್ಟೂ ಅಲ್ಲದೆ ಕಾಕಡ, ಸೇವಂತಿಗೆ, ಚೆಂಡು ಹೂ ಬೆಳೆಯುತ್ತಾರೆ.

ಸಾರಿಗೆ ಮತ್ತು ಶಿಕ್ಷಣಕ್ಕೆ ಸಂಬಂಧಿಸಿದ ಇಬ್ಬರು ಸರ್ಕಾರಿ ನೌಕರರು ಇದ್ದಾರೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಕಲಿದೇವಪುರ ತಾಲ್ಲೂಕು ಪಂಚಾಯ್ತಿ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಖಾಸಗಿ ಬಸ್ಸುಗಳ ಸೌಲಭ್ಯವಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೮ ಮಕ್ಕಳಿದ್ದಾರೆ. ಹಾಗೂ ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದ್ದು ೨೨ ಮಕ್ಕಳು ಮತ್ತು ಇಬ್ಬರು ಶಿಕ್ಷಕರಿದ್ದಾರೆ. ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೪೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮಸ್ಥರು ಎಲ್ಲಾ ರೀತಿಯ ಜನಪದ ಕ್ಷೇತ್ರಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಗ್ರಾಮದಲ್ಲಿ ಅಶ್ವತ್ಥಕಟ್ಟೆಯಿದೆ. ರಂಗನಾಥಸ್ವಾಮಿ, ಶನಿಮಹಾತ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಯಾಕಾರ್ಲಹಳ್ಳಿ

ಯಾಕಾರ್ಲಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿನಲ್ಲಿ ೩೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೮೧.೬೪ ಹೆಕ್ಟೇರ್‌ಗಳು. ಈ ಗ್ರಾಮವು ಕುಮುದ್ವತಿ ನದಿಯ ಸಮೀಪದಲ್ಲಿದೆ. ಈ ಪ್ರದೇಶದಲ್ಲಿ ಬೆಟ್ಟ–ಗುಡ್ಡಗಳಿಲ್ಲ. ಆದರೆ ವಿಶಾಲವಾದಂತಹ ಬಯಲು ಸೀಮೆಯ ಪ್ರದೇಶವಿದೆ. ಸುತ್ತಲೂ ಕೆಂಪು ಮಣ್ಣು ಒಂದು ಕೆರೆ ಇದೆ. ಗ್ರಾಮಕ್ಕೆ ಸೇರಿದಂತೆ ಗಂಗಮ್ಮನಕುಂಟೆ ಇದೆ.

ಈ ಗ್ರಾಮದಲ್ಲಿ ಸಾದರ, ಗೌಡರು ಎಂಬ ಜನಾಂಗವು ಪ್ರಧಾನ ಸಮುದಾಯದವರಾಗಿದ್ದಾರೆ. ಇನ್ನುಳಿದಂತೆ ಕುರುಬರು, ಅಗಸರು, ಕುಂಬಾರರು, ನಾಯಕ, ಉಪ್ಪಾರ, ಆದಿದ್ರಾವಿಡ, ಶೆಟ್ಟಿ ಬಣಜಿಗರು, ತಿಗಳ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದಲ್ಲಿ ಕನ್ನಡ ಮತ್ತು ತೆಲುಗು ಭಾಷೆಗಳು ಬಳಕೆಯಲ್ಲಿವೆ.

ಗ್ರಾಮದಲ್ಲಿ ಅಂಗನವಾಡಿ ಕೇಂದ್ರವಿದ್ದು ೪೦ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಸರ್ಕಾರಿ ಪ್ರೌಢಶಾಲೆ, ೧೫

ಸ್ತ್ರೀಶಕ್ತಿ ಸಂಘಗಳು ಒಂದು ಹಾಲು ಉತ್ಪಾದಕರ ಸಹಕಾರ ಸಂಘ, ೫ ಕಿರಾಣಿ ಅಂಗಡಿಗಳು ಇರುತ್ತವೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಗಂಡು ೫೦, ಹೆಣ್ಣು ೬೦ ಇದ್ದು ಪ್ರೌಢಶಾಲೆಯಲ್ಲಿ ೧೦೦ ಗಂಡು, ೫೦ ಹೆಣ್ಣು ಮಕ್ಕಳಿದ್ದು ವ್ಯಾಸಂಗ ಮಾಡುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೫%.

ಗ್ರಾಮದಲ್ಲಿ ಕೆರೆ ಅಂಗಳದಲ್ಲಿ ೧೮ ಹೆಕ್ಟೇರ್‌ಗಳ ನಾಟಿ ಜಾಲಿ ಮರಗಳ ಅರಣ್ಯವಿದೆ. ಇಲ್ಲಿರುವ ಕುರುಚಲು ಪೊದೆಗಳ ಕಾಡಿನಲ್ಲಿ ಕಾಡುಮೊಲ, ಹಂದಿ, ನರಿ ಮುಂತಾದ ಪ್ರಾಣಿಗಳಿವೆ. ಅಲ್ಲದೆ ಕೌಜುಗ, ಬೆಳವ, ಗೊರವಂಕ ಮುಂತಾದ ಪಕ್ಷಿಗಳು ಇವೆ.

ಗ್ರಾಮದಲ್ಲಿ ನಾಟಿಹಸು, ನಾಟಿ ಎತ್ತು, ಸೀಮೆಹಸು, ಎಮ್ಮೆ, ಕುರಿ, ಮೇಕೆಗಳು ಸಾಕುಪ್ರಾಣಿಗಳಾಗಿವೆ. ಕೋಳಿಗಳು ಮತ್ತು ಹುಂಜಗಳು ಸಾಕು ಪಕ್ಷಿಗಳಾಗಿವೆ. ಇಲ್ಲಿನ ಮಳೆ ಪ್ರಮಾಣ ೪೫೩.೩ ಮಿಮೀ ಇರುತ್ತದೆ.

ಗ್ರಾಮದಲ್ಲಿ ಒಟ್ಟು ೨೯೪ ಮನೆಗಳು, ೧೨೦೦ ಜನಸಂಖ್ಯೆ ಇದೆ. ಇದರಲ್ಲಿ ೫೮೩ ಪುರುಷರು, ೬೧೭ ಮಹಿಳೆಯರಿದ್ದಾರೆ. ಇಲ್ಲಿ ನಾಟಿ ವೈದ್ಯ ಜಗನ್ನಾಥ ಜನಗಳಿಗೆ ಮತ್ತು ದನ–ಕರುಗಳಿಗೆ ಸಹ ವೈದ್ಯ ಮಾಡುತ್ತಾರೆ. ಗ್ರಾಮದಲ್ಲಿ ೨೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮದಲ್ಲಿ ಕೃಷಿಕರು ಮತ್ತು ಕೃಷಿ ಕಾರ್ಮಿಕರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಕುಂಬಾರಿಕೆ ವೃತ್ತಿಯ ಎರಡು ಮನೆಗಳಿವೆ. ಗಾರೆ ಕೆಲಸದವರು ೨೮ ಜನರಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು, ಡಿಡಿಪಿಐ ಒಬ್ಬರು ಇದ್ದಾರೆ. ಪಿಯು ಕಾಲೇಜಿನ ಪ್ರಾಂಶುಪಾಲರಾದ ವೈ.ಆರ್. ಚಿನ್ನಹನುಮಯ್ಯ ಇದೇ ಗ್ರಾಮದವರು. ೨೬ ಜನ ಸರ್ಕಾರಿ ನೌಕರರಿದ್ದಾರೆ.

ಈ ಗ್ರಾಮದಲ್ಲಿ ರಾಗಿಮುದ್ದೆ ಮುಖ್ಯ ಆಹಾರ. ಅನ್ನ, ಉಪ್ಪಿಟ್ಟು, ಚಪಾತಿ ಅಮುಖ್ಯ ಆಹಾರವಾಗಿದೆ. ಬಾಡೂಟ, ಹೋಳಿಗೆ ವಿಶೇಷ ಆಹಾರವಾಗಿದೆ.

ಮಕಾರ್ಲಹಳ್ಳಿ ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ, ಕೊಡಿಗೇನಹಳ್ಳಿ ಜಿಲ್ಲಾಪಂಚಾಯ್ತಿ ಕ್ಷೇತ್ರಕ್ಕೆ, ಕಲಿದೇವಪುರ ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ, ಕಡಗತ್ತೂರು ಗ್ರಾಮಪಂಚಾಯ್ತಿ ಕ್ಷೇತ್ರಕ್ಕೆ ಸೇರಿದೆ. ತುಮಕೂರು ಲೋಕಸಭಾ ವ್ಯಾಪ್ತಿಗೆ ಒಳಪಟ್ಟಿದೆ. ಇಬ್ಬರು ಸದಸ್ಯರು, ಒಬ್ಬರು ಪಂಚಾಯ್ತಿ ನೌಕರರಿದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಕಲಚೇತನ, ವಿಧವಾ ವೇತನ ಮೊದಲಾದವುಗಳು ಚಾಲ್ತಿಯಲ್ಲಿವೆ. ಪಾಂಡುರಂಗ ಭಜನಾ ಮಂಡಳಿ, ಚಕ್ಕಲು ಭಜನಾ ಮಂಡಲಿ ಇದೆ. ಸಂಜೀವರಾಯಪ್ಪ ಇದರ ಮುಖ್ಯಸ್ಥರು.

ಗ್ರಾಮದಲ್ಲಿ ಆಂಜನೇಯ, ರಂಗನಾಥ, ಸಪ್ಲಮ್ಮ, ಶನೀಶ್ವರ, ವೀರಬ್ರಹ್ಮಯ್ಯ, ಚೌಡೇಶ್ವರಿ, ಸುಂಕ್ಲಮ್ಮ ದೇವಾಲಯಗಳಿದ್ದು ರಂಗನಾಥಸ್ವಾಮಿ, ಸಪ್ಲಮ್ಮ, ಸುಂಕ್ಲಮ್ಮ, ಚೌಡೇಶ್ವರಿಗೆ ಜಾತ್ರೆಯನ್ನು ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಯರ್ರನಪಾಳ್ಯ

ಯರ್ರನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೭.೦೦ ಹೆಕ್ಟೇರ್ ಹೊಂದಿದ್ದು ಸಿದ್ದನಹಳ್ಳಿಯ ಮಜರೆ ಗ್ರಾಮವಾಗಿದೆ. ಕೆಂಚಪ್ಪ ಎಂಬ ವ್ಯಕ್ತಿಮೂಲದಿಂದಾಗಿ ತೆಲುಗಿಗೆ ತಿರುಗಿ ಯರ್ರನಪಾಳ್ಯವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಅರಳಿ, ಬೇವು, ನೀಲಗಿರಿ, ಅಕೇಶಿಯಾ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಕಾಗೆ, ಗೌಜುಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ

ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಭಜಂತ್ರಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೨೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೧೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೩ ಮತ್ತು ಹೆಂಗಸರು ೬೪ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೩ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಮುಸುಕಿನಜೋಳ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ಅವರೆ, ಶೇಂಗಾ, ದಾಳಿಂಬೆ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ವಿದ್ಯುತ್ ಇಲಾಖೆಗಳಿಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ, ಕಮ್ಮಾರರು ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಕಾಫಿ ಮತ್ತು ಟೀ ದೊರೆಯುವ ೧ ಹೋಟೆಲ್ ಇದ್ದು ೧ ಅಂಗಡಿಯಿದೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಯರಗುಂಟೆ

ಯರಗುಂಟೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೪೪೨.೪೧ ಹೆಕ್ಟೇರ್ಸ್ ಇದೆ, ಕಂದಾಯ ಗ್ರಾಮವಾಗಿದೆ.

ಯರಗುಂಟೆ ಎಂಬ ತೆಲುಗಿನ ಪದವು ಕನ್ನಡದಲ್ಲಿ ಕೆಂಪುಕುಂಟೆ ಎಂಬ ಅರ್ಥ ಹೊಂದಿದ್ದು ಕೆಂಪು ಭೂಮಿ,

ಹೊಂಡದ ನೀರಿನ ಸ್ಥಳ ಎಂಬ ಅರ್ಥದಲ್ಲಿ ಯರಗುಂಟೆ ಎಂಬ ಅರ್ಥವಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಕುಂಚಿಟಿಗ, ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಆದಿದ್ರಾವಿಡ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೨೧೯ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೯೮೪ ಜನಸಂಖ್ಯಾ ಪ್ರಮಾಣವನ್ನು ಹೊಂದಿದ್ದು ಗಂಡು–೫೧೯, ಹೆಣ್ಣು–೪೬೫ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಉತ್ತಮ ಚರಂಡಿ ವ್ಯವಸ್ಥೆ ಶೌಚಾಲಯ ವ್ಯವಸ್ಥೆ ರಸ್ತೆ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೫೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಉಪಕಸುಬಾಗಿ ರೈತರು ಹೈನುಗಾರಿಕೆಯಲ್ಲಿ ತೊಡಗಿದ್ದಾರೆ.

ವಕೀಲ, ವೈದ್ಯಕೀಯ ಇಲಾಖೆ, ಶಿಕ್ಷಣ ಇಲಾಖೆ, ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ೬ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಬ್ರಹ್ಮ ಸಮುದ್ರ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಇಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಬ್ರಹ್ಮ ಸಮುದ್ರ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಬ್ರಹ್ಮಸಮುದ್ರ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ

ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬ ಸಹಾಯಕಿ ಇದ್ದಾರೆ. ಒಟ್ಟು ೨೨ ಮಕ್ಕಳಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ೪೩ ವಿದ್ಯಾರ್ಥಿಗಳಿದ್ದು ೩ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಪಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ಎರಡು ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಶನಿಮಹಾತ್ಮ, ಪಾತಲಿಂಗಪ್ಪ, ಬೀರಲಿಂಗಪ್ಪ, ಹಟ್ಟಿಮಾರಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಯರಮಲ್ಲನಹಳ್ಳಿ

ಯರಮಲ್ಲನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೯.೮೦ ಹೆಕ್ಟೇರ್ಸ್, ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೬ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೦೨ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ರೆಡ್ಡಿ, ಉಪ್ಪಾರ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೪೬ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೨೧೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದ್ದು ಗಂಡು-೧೧೫, ಹೆಣ್ಣು-೯೫ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೨ ಮನೆಗಳು ಶೌಚಾಲಯ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಇದು ಇಲ್ಲಿನ ರೈತರ ಉಪಕಸುಬಾಗಿದೆ ಒಂದು ಮಿನಿ ಡೈರಿ ಇದೆ.

ಶಿಕ್ಷಣ ಇಲಾಖೆ, ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ. ದೊಡ್ಡಯಲ್ಲೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ದೊಡ್ಡಯಲ್ಲೂರು ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಯಲ್ಲೂರು ಅಂಚೆ ಕಛೇರಿಗೆ ಸೇರಿದೆ. ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೧ ಅಂಗನವಾಡಿ ಕೇಂದ್ರವಿದ್ದು ೨೭ ಮಕ್ಕಳಿದ್ದಾರೆ, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು ೨೧ ವಿದ್ಯಾರ್ಥಿಗಳಿದ್ದಾರೆ. ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ದಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ಎರಡು ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ರಂಗಾಪುರ

ರಂಗಾಪುರ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೭೫.೧೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ರಂಗನಾಥ ದೇವಾಲಯ ಈ ಗ್ರಾಮದ ಪ್ರಮುಖ ಧಾರ್ಮಿಕ ನೆಲೆಯಾಗಿದ್ದು ಆ ಕಾರಣದಿಂದ ರಂಗಾಪುರ ಎಂದು ಹೆಸರಾಗಿದೆ.

ಈ ಗ್ರಾಮಕ್ಕೆ ರಂಗಾಪುರ ಎಂಬ ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ರಂಗಪ್ಪ ಎನ್ನುವವರು ಹುಗ್ಗೆ ಹೊಯ್ದು ನಿರ್ಮಾಣವಾದ ಗ್ರಾಮವಾದ್ದರಿಂದ ಹಾಗೂ ಇಲ್ಲಿನ ಕುಂಚಿಟಿಗ ಜನಾಂಗಕ್ಕೆ ಸೇರಿದ ಬಡುವ ಕುಲದವರು ದೊಡ್ಡ ಸಮುದಾಯದವರಾಗಿದ್ದು ಇವರ ಮನೆ ದೇವರು ರಂಗಪ್ಪ ಆದ್ದರಿಂದ ಈ ಗ್ರಾಮಕ್ಕೆ ರಂಗಾಪುರ ಎನ್ನುವ ಹೆಸರನ್ನು ನಾಮಕರಣ ಮಾಡಲಾಗಿದೆ ಎನ್ನುವ ಪ್ರತೀತಿ ಇದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರೇ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರಿತ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದಲ್ಲಿ ಕೆರೆಮುಂದಲ ಗುಟ್ಟೆ, ಚಿಕ್ಕಬೆಳೆ, ಮರೆಮಡುಗು ಎಂಬ ಗುಟ್ಟೆಗಳು ಇವೆ.

ಗ್ರಾಮವು ಸ್ವಲ್ಪ ಪ್ರಮಾಣದ ಅರಣ್ಯವನ್ನು ಹೊಂದಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಚಿರತೆ, ಜಿಂಕೆ, ಕರಡಿ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ.

ಪಕ್ಷಿಗಳಾದ ಗೊರವಂಕ, ನವಿಲು, ಗಿಳಿ, ಗೌಜುಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎತ್ತು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ೨೦೦ ಕ್ಕೂ ಹೆಚ್ಚಾಗಿ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೫೫೦ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಹೊಳೆ ಇದ್ದು ನೀರಿಲ್ಲದಂತೆ ಬತ್ತಿಹೋಗಿದೆ. ಮಳೆಗಾಲದಲ್ಲಿ ಸ್ವಲ್ಪ ಪ್ರಮಾಣದ ನೀರು ಶೇಖರಗೊಂಡಾಗ ಗ್ರಾಮದಲ್ಲಿ ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಬಳಸಿಕೊಳ್ಳಲಾಗುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳು, ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳಿದ್ದು ಒಂದು ಕೆರೆಯನ್ನು ಕೂಡ ಗ್ರಾಮ ಹೊಂದಿದ್ದು ನೀರಿಲ್ಲದಂತೆ ಬರಿದಾಗಿದೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮುಸ್ಲಿಂ, ನಾಯಕರು, ಆದಿಕರ್ನಾಟಕ, ಮಡಿವಾಳ, ತಿಗಳ ಜನಾಂಗದವರು ಗ್ರಾಮದಲ್ಲಿದ್ದು ಮುಸ್ಲಿಂ ಜನಾಂಗ ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ. ಉಳಿದಂತೆ ಮುಸ್ಲಿಮರು ಉರ್ದು ಭಾಷೆಯನ್ನು ಮಾತನಾಡುತ್ತಾರೆ.

ಒಟ್ಟು ೨೩೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೦೫೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೩೩, ಹೆಣ್ಣು ೫೨೩ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಆದರೆ ಬಡುವನರ ಕುಲದವರು ತಿನ್ನುವುದಿಲ್ಲ.

ಗ್ರಾಮದಲ್ಲಿ ಸಾಂಪ್ರದಾಯಿಕ ವಾಹನವಾದ ಎತ್ತಿನ ಬಂಡಿ, ಆಧುನಿಕ ವಾಹನಗಳಾದ ಟ್ರ್ಯಾಕ್ಟರ್, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆಯನ್ನು ಹೊಂದಿದೆ. ಗ್ರಾಮದಲ್ಲಿ ೧೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿದೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ರಾಗಿ, ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಅವರೆ ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಗಳಾಗಿ ಹೂವು, ಅಡಿಕೆ, ತೆಂಗು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಹೊಳೆ, ಒಂದು ಕೆರೆ ಇದ್ದರೂ ಬರಗಾಲದ ಕಾರಣವಾಗಿ ನೀರಿಲ್ಲದೆ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಗ್ರಾಮದಲ್ಲಿ ಕಾಲೇಜು ಶಿಕ್ಷಣ ಇಲಾಖೆಯ ಪ್ರೊ||ಮಹಾಲಿಂಗಯ್ಯ ಸೇರಿದಂತೆ ಸರ್ಕಾರಿ ನೌಕರರಿದ್ದು ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಮೂವರು ಗ್ರಾಮದಲ್ಲಿದ್ದಾರೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದ್ದು ಒಂದು ಆಧುನಿಕ ಡೈರಿಯೂ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ರಂಗಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಮೂವರು ಪಂಚಾಯ್ತಿಯ ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಗಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮ ಬಡವನಹಳ್ಳಿ ಅಂಚೆ ಕಛೇರಿ ವ್ಯಾಪ್ತಿಗೆ ಒಳಪಟ್ಟಿದೆ. ನೂರಕ್ಕಿಂತ ಹೆಚ್ಚು ಚರ ದೂರವಾಣಿ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ಮೂರು ಸ್ತ್ರೀಶಕ್ತಿ ಸಂಘ, ಹತ್ತು ಸ್ವಸಹಾಯ ಸಂಘಗಳು ಹಾಗೂ ಒಂದು ಧರ್ಮಸ್ಥಳ ಸಂಘವಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ३೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಐವರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದು ಒಬ್ಬರು ಸಹಾಯಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೨.೪%.

ಗ್ರಾಮಪಂಚಾಯ್ತಿ ವತಿಯಿಂದ ನಡೆಯುವ ಒಂದು ಗ್ರಂಥಾಲಯವಿದ್ದು ವಿವಿಧ ಪ್ರಕಾರದ ಒಟ್ಟು ೧೦೦೦ ಪುಸ್ತಕಗಳನ್ನು ಹೊಂದಿದ್ದು ಒಬ್ಬರು ಗ್ರಂಥಪಾಲಕರು ಇದ್ದಾರೆ.

ಗ್ರಾಮದಲ್ಲಿ ಒಂದು ನಾಟಿ ಔಷಧ ಪದ್ಧತಿ ಇದೆ. ಹಿರಿಯರಾದ ರಂಗಪ್ಪಜ್ರ ಮುಖ್ಯವಾಗಿ ಹಾವು ಕಚ್ಚಿದರೆ

ಔಷಧ ನೀಡುತ್ತಾರೆ. ಉಳಿದಂತೆ ಚೇಳು, ಮಂಡರಗಪ್ಪೆ, ಹಬ್ಬೆಹುಳು ಇತ್ಯಾದಿಗಳಿಗೂ ಔಷಧ ನೀಡುತ್ತಾರೆ. ಸಾಮಾನ್ಯವಾಗಿ ಗ್ರಾಮದಲ್ಲಿ ಜ್ವರ, ಕೆಮ್ಮು, ಬೇಧಿ, ವಾಂತಿ, ಮಲೇರಿಯಾ ರೋಗಗಳು ಕಂಡುಬರುತ್ತವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ೩ ಅಂಗಡಿಗಳು ಹಾಗೂ ಒಂದು ಹೋಟೆಲ್ ಗ್ರಾಮದಲ್ಲಿವೆ.

ಗ್ರಾಮದಲ್ಲಿ ಚೌಡೇಶ್ವರಿ, ಆಂಜನೇಯ ದೇವಾಲಯವಿದ್ದು ವಿಶೇಷವಾಗಿ ಹನುಮಂತರಾಯನ ಜಾತ್ರೆಯನ್ನು ಡಿಸೆಂಬರ್ ತಿಂಗಳಲ್ಲಿ ಅತಿ ಸಡಗರದಿಂದ ಉತ್ಸವದೊಂದಿಗೆ ಆಚರಿಸುವರು. ಉಳಿದಂತೆ ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮುಸ್ಲಿಮರು ರಂಜಾನ್, ಬಕ್ರೀದ್‌ನಂಥ ಮುಸ್ಲಿಂ ಹಬ್ಬಗಳನ್ನು ಸಂಭ್ರಮದಿಂದ ಆಚರಿಸುತ್ತಾರೆ. ಜನಪದ ಕಾವ್ಯ ಹಾಡುಗಾರ್ತಿ ಸಣ್ಣಮ್ಮ ಇದೇ ಗ್ರಾಮದವರು.

## ರಂಗಾಪುರ ಗೊಲ್ಲರಹಟ್ಟಿ

ರಂಗಾಪುರ ಗೊಲ್ಲರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೭೫.೧೧ ಹೆಕ್ಟೇರ್ ಹೊಂದಿದ್ದು ರಂಗಾಪುರ ಭೂವಿಸ್ತೀರ್ಣದಲ್ಲಿ ಸೇರಿದ್ದು ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿ ಕಲ್ಲುಗಳಿಂದ ಕೂಡಿದ್ದು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ಮೊಲ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಹೆಚ್ಚು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದಲ್ಲಿ ಸುವರ್ಣಮುಖಿ ಹೊಳೆಯಿದ್ದು ನೀರಿಲ್ಲದೆ ಬತ್ತಿಹೋಗಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳು ಹಾಗೂ ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಬೇರೆ ಯಾವುದೇ ಜನಾಂಗದವರಿಲ್ಲ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೩೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೨೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೬೫, ಹೆಣ್ಣು ೫೬ ಇದ್ದಾರೆ. ಗ್ರಾಮದಲ್ಲಿ ಕಲ್ಲಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಕೆಲವು ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಕುರಿ ಮಾರುವುದು, ಕುರಿ ಸಾಕಾಣಿಕೆ ಗ್ರಾಮದ ಮುಖ್ಯ ಕಸುಬಾಗಿದ್ದು ೫ ಜನರು ಮಾತ್ರ ವ್ಯವಸಾಯ ಮಾಡುತ್ತಾರೆ. ಶೇಂಗಾ ಮುಖ್ಯ ಬೆಳೆಯಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮಕ್ಕೆ ಸರಿಯಾಗಿ ನೀರಿಲ್ಲವಾದ್ದರಿಂದ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ರಂಗಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ

ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಗಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ರಂಗಾಪುರ ಅಂಚೆ ಕಛೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿಯಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಹಾಗೂ ಒಬ್ಬರು ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ದುರ್ಗಮ್ಮ, ಮಾರಮ್ಮ ದೇವಾಲಯವಿದ್ದು ಪ್ರತಿ ವರ್ಷ ಮಾರಮ್ಮನ ಜಾತ್ರಾ ಮಹೋತ್ಸವವನ್ನು ಅತ್ಯಂತ ವೈಭವಪೂರ್ಣವಾಗಿ ಆಚರಿಸುತ್ತಾರೆ. ಅಂದು ಊರಿನ ತುಂಬ ದೇವರ ಉತ್ಸವ ನಡೆಯುತ್ತದೆ. ಹರಕೆ ಹೊರುವ ಮತ್ತು ಬಲಿ ನೀಡುವ ಆಚರಣೆಗಳು ರೂಢಿಯಲ್ಲಿವೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ರಂಟವಾಳಲು

ರಂಟವಾಳಲು ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೧೫.೧೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಇದು ರೆಂಟ್ ಎಂಬ ಇಂಗ್ಲೀಷ್ ಮೂಲದ ಕಂದಾಯ ಕಟ್ಟುವವರು ಎಂಬ ಹಾಗೂ ವಾಳ್ಳ್ ಎಂಬ ತೆಲುಗು ಪದ ಕೂಡಿ ಕಂದಾಯ ಕಟ್ಟುವ ಗ್ರಾಮ ಎಂಬ ಅರ್ಥವಿದೆ. ಇಂಗ್ಲೀಷ್ ಮತ್ತು ತೆಲುಗು ಎರಡರ ಸಮ್ಮಿಶ್ರವಾಗಿ ರಂಟವಾಳಲು ಆಗಿದೆ. ರೆಂಟುವಾಳ್ಳು > ರಂಟವಾಳಲು ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರಿತವಾದ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕರಡಿ, ಕಾಡುಮೊಲ, ನರಿ, ತೋಳ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗಿಡುಗ, ಹದ್ದು, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದಲ್ಲಿ ಒಂದು ಕೆರೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೫೦ಕ್ಕೂ ಹೆಚ್ಚು ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಕ್ಕೂ ಹೆಚ್ಚು ಸಾರ್ವಜನಿಕ ನಲ್ಲಿಗಳಿದ್ದು ಮೂರು ಸಿಸ್ಟರ್ನ್‌ಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ, ಆದಿದ್ರಾವಿಡ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುಂಬಾರ, ನಾಯಕ, ಸಾದರ ಜನಾಂಗದವರು ಗ್ರಾಮದಲ್ಲಿದ್ದು ಕುಂಬಾರ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ. ಉಳಿದಂತೆ ಕೆಲವರು ತೆಲುಗು ಭಾಷೆಯನ್ನು ಮಾತನಾಡುತ್ತಾರೆ.

ಒಟ್ಟು ೩೯೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೪೦೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೭೨೧, ಹೆಂಗಸರು ೬೭೯ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೯೩ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಒಂದು ಸಾಂಪ್ರದಾಯಿಕ ಎತ್ತಿನ ಗಾಡಿ ಇದೆ. ಟ್ರ್ಯಕ್ಟರ್ ಮತ್ತು ದ್ವಿಚಕ್ರ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೫೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತರಕಾರಿ, ಅಡಿಕೆ, ತೆಂಗು, ಶೇಂಗಾ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು ಹಾಗೂ ತರಕಾರಿ ಬೆಳೆಯುತ್ತಾರೆ. ಇವು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಹಾಗೂ ಎರಡು ಸರ್ಕಾರಿ ಮಿನಿ ಡೈರಿ ಗ್ರಾಮದಲ್ಲಿ ಇದೆ. ಗ್ರಾಮದಲ್ಲಿ ಶಿಕ್ಷಣ, ಸಾರಿಗೆ, ವಿದ್ಯುತ್ ಇಲಾಖೆಗಳಿಗೆ ಸೇರಿದ ಹತ್ತು ಜನ ಸರ್ಕಾರದ ವಿವಿಧ ಹುದ್ದೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಕುಂಬಾರ, ಒಬ್ಬರು ಬಡಗಿ, ಮೂವರು ಗುಡಿಕಾರರು ಹಾಗೂ ಮೂವರು ಚಿತ್ರಕಾರರು ಗ್ರಾಮದಲ್ಲಿದ್ದಾರೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಐದು ಜನ ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಸದರಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಗ್ರಾಮದಲ್ಲಿ ನಾಲ್ಕು ಜನ ಸದಸ್ಯರು ಹಾಗೂ ಐದು ಜನ ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಟವಳಲು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮದಲ್ಲಿಯೇ ಅಂಚೆ ಕಚೇರಿ ಇದೆ. ಒಂದು ಸ್ಥಿರ ದೂರವಾಣಿ ಹಾಗೂ ಐನೂರಕ್ಕೂ ಹೆಚ್ಚು ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರಗಳಿವೆ. ಅಂಗನವಾಡಿ ಒಂದರಲ್ಲಿ ೫೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿಯಿದ್ದಾರೆ. ಅಂಗನವಾಡಿ ಎರಡರಲ್ಲಿ ೪೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಕಾರ್ಯ ನಿರ್ವಹಿಸುತ್ತಿರುವರು. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೦೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಎಂಟು ಜನ ಶಿಕ್ಷಕರು ಹಾಗೂ ಇಬ್ಬರು ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಅರವಿಂದ ಗ್ರಾಮಾಂತರ ಪ್ರೌಢಶಾಲೆ ಇದ್ದು ಒಟ್ಟು ೧೬೧ ವಿದ್ಯಾರ್ಥಿಗಳಿದ್ದಾರೆ. ಎಂಟು ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿರುವರು. ನಿವೇದಿತ ಪ್ರಾಥಮಿಕ ಪಾಠಶಾಲೆ ಇದ್ದು ೧೨೫ ವಿದ್ಯಾರ್ಥಿಗಳು ಹಾಗೂ ಎಂಟು ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೨.೪%. ಗ್ರಾಮದಲ್ಲಿ ಪೂರಕ ಗ್ರಂಥಾಲಯ ಸಾಕ್ಷರ ಭಾರತ್ ಇದ್ದು ೨೦೦೦ ಪುಸ್ತಕಗಳನ್ನು ಹೊಂದಿದೆ. ಒಬ್ಬರು ಗ್ರಂಥಪಾಲಕರು ಇದ್ದಾರೆ. ಗ್ರಾಮದಲ್ಲಿ ಒಂದು ಪಶುವೈದ್ಯಶಾಲೆ ಇದ್ದು ಒಬ್ಬರು ವೈದ್ಯರಿದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಎರಡು ಹೋಟೆಲ್ ಮತ್ತು ನಾಲ್ಕು ಅಂಗಡಿಗಳು ಗ್ರಾಮದಲ್ಲಿವೆ.

ಗ್ರಾಮದಲ್ಲಿ ಐತಿಹಾಸಿಕ ಪ್ರತಿಮೆಯಾಗಿ ಒಂದು ಕೋಟೆ ಇದೆ. ಗ್ರಾಮದಲ್ಲಿ ಐದು ದೇವಾಲಯಗಳಿವೆ. ರಾಮೇಶ್ವರ, ಆಂಜನೇಯ, ತಿಮ್ಮಪ್ಪ, ಮೈಲಾರ ಲಿಂಗೇಶ್ವರ, ಗೋಪುರ ಸ್ವಾಮಿ ದೇವಾಲಯಗಳಿವೆ. ಗ್ರಾಮದಲ್ಲಿ ಪ್ರತಿ ದಸರಾ ಹಬ್ಬದಲ್ಲಿ ಶ್ರೀ ರಾಮೇಶ್ವರ ಸ್ವಾಮಿಯ ಜಾತ್ರೆಯನ್ನು ವೈಭವಪೂರ್ಣವಾಗಿ ಆಚರಿಸಲಾಗುತ್ತದೆ. ಉಳಿದಂತೆ

ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ರೆಡ್ಡಿಹಳ್ಳಿ

ರೆಡ್ಡಿಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೨೫.೧೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ರೆಡ್ಡಿ ಜನಾಂಗಿಕ ಪ್ರಭಾವದಿಂದಾಗಿ ರೆಡ್ಡಿಹಳ್ಳಿ ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳಗಳಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩ ಸಾರ್ವಜನಿಕ ನಲ್ಲಿಗಳು, ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಆದಿದ್ರಾವಿಡ, ಬೋವಿ, ನಾಯಕ ಬಣಜಿಗ, ಮಡಿವಾಳ, ವೈಷ್ಣವ, ಲಿಂಗಾಯಿತ, ಭಜಂತ್ರಿ ಹಾಗೂ ಗೊಲ್ಲ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೮೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೯೮೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೯ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ನಾಲ್ಕು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ರೆಡ್ಡಿಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೪ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೦೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ಸುವರ್ಣಮುಖಿ ಗ್ರಾಮಾಂತರ ಸರ್ಕಾರಿ ಸನಿವಾಸ ಪ್ರೌಢಶಾಲೆ ಇದ್ದು ೧೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಎಂಟು ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೪.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಹೋಟೆಲ್‌ಗಳು ಹಾಗೂ ೫ ಅಂಗಡಿಗಳಿವೆ. ನ್ಯಾಯಬೆಲೆ ಅಂಗಡಿ ಇದೆ.

ಗ್ರಾಮದಲ್ಲಿ ಒಂದು ಹಾಸ್ಟೆಲ್ ಇದೆ. ಪಶುವೈದ್ಯಕೀಯ ಆಸ್ಪತ್ರೆ ಇದ್ದು ವೈದ್ಯರು ಇದ್ದಾರೆ. ಇಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇದೆ.

ಗ್ರಾಮದಲ್ಲಿ ಕಾವಲೇಶ್ವರಿ, ಹನುಮಂತರಾಯ, ಕೊಲ್ಲಾಪುರದಮ್ಮ, ಮಹೇಶ್ವರಮ್ಮ, ಮಾರಮ್ಮ (ದಂಡಿನ), ಓಬಳದೇವರು, ನರಸಿಂಹಸ್ವಾಮಿ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ರೆಡ್ಡಿಹಳ್ಳಿ ಗೊಲ್ಲರಹಟ್ಟಿ

ರೆಡ್ಡಿಹಳ್ಳಿ ಗೊಲ್ಲರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೨೫.೧೬ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮದ ಭೂವಿಸ್ತೀರ್ಣವು ರೆಡ್ಡಿಹಳ್ಳಿ ಗ್ರಾಮದ ವಿಸ್ತೀರ್ಣದಲ್ಲಿ ಸೇರಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ತೋಳ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳವಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಯಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೬೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೮೦೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೭ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಆಹಾರ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ರೆಡ್ಡಿಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ದಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೪ ಅಂಗಡಿಗಳಿವೆ.

ಗ್ರಾಮದಲ್ಲಿ ಮಲೆರಂಗನಾಥಸ್ವಾಮಿ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ರೆಡ್ಡಿಹಳ್ಳಿ ಗೊಲ್ಲಹಳ್ಳಿ

ರೆಡ್ಡಿಹಳ್ಳಿ ಗೊಲ್ಲಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೫೪.೧೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ತೋಳ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳಗಳಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು, ೪ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಆದಿದ್ರಾವಿಡ, ನಾಯಕ, ಗೊಲ್ಲ., ಬಣಜಿಗ, ಜೈನರು,

ವೈಷ್ಣವರು, ಮರಾಠ ಜನಾಂಗದವರಿದ್ದಾರೆ. ಮರಾಠ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೫೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೦೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ರೆಡ್ಡಿಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೨ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೫೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೩.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೧ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯ, ತಿಪ್ಪೇಸ್ವಾಮಿ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ರಂಗನಾಥಪುರ

ರಂಗನಾಥಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೬೬.೧೧ ಹೆಕ್ಟೇರ್ ಹೊಂದಿದ್ದು ಸೋಮಲಾಪುರ ಭೂ ವಿಸ್ತೀರ್ಣಕ್ಕೆ ಸೇರಿದ ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಕರೆಕಲ್ಲು ರಂಗನಾಥಸ್ವಾಮಿ ಬೆಟ್ಟವಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಜಿಂಕೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ

ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಹೂವಾಡಿಗ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೪೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೭೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೩೬ ಮತ್ತು ಹೆಂಗಸರು ೧೪೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಆಟೋ, ಟೆಂಪೋ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೯ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೆಲವರು ಕೂಲಿ ಕಾರ್ಮಿಕರು ಇದ್ದಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಜೋಳ, ಶೇಂಗಾ ಬೆಳೆಯಲಾಗುತ್ತಿದ್ದು ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು ಬೆಳೆಯುತ್ತಾರೆ. ಹೂವು, ಮೊಗ್ಗು ಹಾಗೂ ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಶಿಕ್ಷಣ ಇಲಾಖೆಯಲ್ಲಿ ಇಬ್ಬರು ಸರ್ಕಾರಿ ನೌಕರರಾಗಿದ್ದಾರೆ. ಉಳಿದಂತೆ ಬೇರೆ ಯಾವುದೇ ಕೈಗಾರಿಕೆಗಳಾಗಲಿ, ಸಾಂಪ್ರದಾಯಿಕ ಉದ್ಯೋಗವಾಗಲಿ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಡಿ.ವಿ. ಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಡಿ.ವಿ.ಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಡಿ.ವಿ.ಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ, ೨ ಧರ್ಮಸ್ಥಳ ಸಂಘ ಹಾಗೂ ೨ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೨೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೪ ಅಂಗಡಿಗಳು ಹಾಗೂ ಒಂದು ಸೈಕಲ್ ಶಾಪ್ ಗ್ರಾಮದಲ್ಲಿದೆ.

ಗ್ರಾಮದಲ್ಲಿ ದಂಡಿನಮಾರಮ್ಮ ದೇವಾಲಯವಿದೆ. ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಹರಕೆ ಹಾಗೂ ಬಲಿ ಕೊಡುವುದರೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ

ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ರಂಗನಾಯಕನರೊಪ್ಪ

ರಂಗನಾಯಕನರೊಪ್ಪ ಗ್ರಾಮವು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೭ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೫೦.೯೪ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ರಂಗನಾಯಕ ಎಂಬ ಪಾಳೆಯಗಾರನ ಹೆಸರಿನಲ್ಲಿ ಗ್ರಾಮ ರಚನೆಯಾಗಿದೆ.

ಬಯಲುನಾಡು ಪ್ರದೇಶವಾಗಿದ್ದು ಬಿಳಿಕಲ್ಲು, ಕೆಂಪು ಮಿಶ್ರ ಮಣ್ಣಿನ ಭೂಮಿಯನ್ನು ಹೊಂದಿದೆ. ಪ್ರಾಣಿಗಳಾದ ನರಿ, ತೋಳ, ಕರಡಿ, ಮೊಲ ಹಾಗೂ ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ದೊಡ್ಡವೀರಗೊಂಡನಹಳ್ಳಿ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಒಟ್ಟು ೧೫೭ ಮನೆಗಳನ್ನು ಹೊಂದಿದ್ದು ೬೨೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಆದಿಕರ್ನಾಟಕ, ಆದಿದ್ರಾವಿಡ ಹಾಗೂ ಒಕ್ಕಲಿಗ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ತೆಲುಗು ಮಾತನಾಡುವವರಿದ್ದಾರೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ವ್ಯವಸಾಯ ಮುಖ್ಯ ಉದ್ಯೋಗವಾಗಿದ್ದು ರಾಗಿ, ಭತ್ತ, ಜೋಳ ಬೆಳೆಯುವರು. ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ. ಶಿಕ್ಷಣ, ಸಾರಿಗೆ ಹಾಗೂ ವಿದ್ಯುತ್ ಇಲಾಖೆಯಲ್ಲಿ ನಾಲ್ವರು ಸೇವೆ ಸಲ್ಲಿಸುತ್ತಿದ್ದಾರೆ. ಒಂದು ಮಿನಿ ಡೈರಿ ಇದೆ.

ಮಧುಗಿರಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡವೀರಗೊಂಡನಹಳ್ಳಿ ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ. ಒಬ್ಬರು ಸದಸ್ಯರು ಹಾಗೂ ಒಬ್ಬರು ನೌಕರರಿದ್ದಾರೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ. ೨ ಸ್ತ್ರೀಶಕ್ತಿ ಹಾಗೂ ೧ ಸ್ವಸಹಾಯ ಸಂಘವಿದೆ. ಒಂದು ಅಂಗಡಿ ಇದೆ.

ಅಂಗನವಾಡಿ ಕೇಂದ್ರವಿದ್ದು ೨೧ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ೩೨ ಮಕ್ಕಳು, ಇಬ್ಬರು ಶಿಕ್ಷಕಿಯರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಪಠ್ಯಪುಸ್ತಕ, ಸಮವಸ್ತ್ರ ಹಾಗೂ ಶೌಚಾಲಯ ಸೌಲಭ್ಯಗಳು ಶಾಲೆಯಲ್ಲಿವೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೬೧.೨% ಇದೆ.

ಗ್ರಾಮದಲ್ಲಿ ಆಂಜನೇಯನ ದೇವಸ್ಥಾನವಿದೆ. ಯುಗಾದಿಯಂದು ಕೋಲುಬೇಟೆ ಹೋಗಿ ಶಿಕಾರಿ ಮಾಡಿ, ಯುದ್ಧೋತ್ಸವದ ಮಾದರಿಯಲ್ಲಿ ಆಂಜನೇಯನ ಮೆರವಣಿಗೆ ನಡೆಯುತ್ತದೆ. ಕೋಲಾಟ, ಭಜನೆ, ತಮಟೆ ಕುಣಿತ ನಡೆಯುತ್ತದೆ. ಆಂಜನೇಯನಿಗೆ ಆರತಿಯನ್ನು ಇಡೀ ದಿನ ಬೆಳಗಲಾಗುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ರಂಗೇನಹಳ್ಳಿ

ರಂಗೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೭ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೧೧೯.೭೨ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಇದೊಂದು ವ್ಯಕ್ತಿ ಮೂಲದ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು-ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಯಾವುದೇ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕೋತಿ, ನರಿ, ತೋಳ, ಚಿರತೆ ಹಾಗೂ ಪಕ್ಷಿಗಳಾದ ಗಿಳಿ, ಕೋಗಿಲೆ, ಕಾಗೆ, ಗೊರವಂಕ, ಗುಬ್ಬಚ್ಚಿ ಕಂಡುಬರುತ್ತವೆ.

ಒಟ್ಟು ೩೫ ಮನೆಗಳಿದ್ದು ೧೪೮ ಜನಸಂಖ್ಯೆ ಇದೆ. ಒಕ್ಕಲಿಗ ಜನಾಂಗದವರು ದೊಡ್ಡ ಸಮುದಾಯದವರಾಗಿದ್ದು ಕುಂಬಾರ ಜನಾಂಗದವರು ಕಿರುಸಮುದಾಯವಾಗಿದೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಗ್ರಾಮದಲ್ಲಿ ಕಾಂಕ್ರೀಟ್, ಇಟ್ಟಿಗೆ ಹಾಗೂ ಶೀಟಿನ ಮನೆಗಳಿವೆ.

ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಸುವರ್ಣ ಗ್ರಾಮ ಯೋಜನೆಯಡಿ ರಸ್ತೆ, ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆಯಾಗಿದೆ. ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿ ಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಹಾಗೂ ಕೂಲಿ ಮಾಡುವವರು ಇದ್ದಾರೆ. ಇಬ್ಬರು ಶಿಕ್ಷಕರು ಹಾಗೂ ಇಬ್ಬರು ಕುಂಬಾರಿಕೆ ಕಾರ್ಯ ನಿರ್ವಹಿಸುತ್ತಿದ್ದಾರೆ. ಸಾಂಪ್ರದಾಯಿಕ ಎತ್ತಿನಗಾಡಿ ಗ್ರಾಮದಲ್ಲಿದ್ದು ಆಧುನಿಕ

ವಾಹನಗಳಾದ ಟ್ರ್ಯಾಕ್ಟರ್ ಹಾಗೂ ಬೈಕ್‌ಗಳಿವೆ. ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆಗಳಾಗಿವೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ.

ವ್ಯವಸಾಯ ಮುಖ್ಯ ಕಸುಬಾಗಿದ್ದು ರಾಗಿ, ಭತ್ತ, ಜೋಳ, ಅಡಿಕೆ, ತೆಂಗು ಬೆಳೆಯುವರು. ಉಳಿದಂತೆ ತೊಗರಿ, ಅಲಸಂದೆ, ಕಡಲೇಕಾಯಿ ಬೆಳೆಯುತ್ತಾರೆ. ಭತ್ತ, ರಾಗಿ ಗ್ರಾಮದ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ. ೧ ಡೈರಿಯಿದೆ. ಸಾರಿಗೆ ಶಿಕ್ಷಣ, ಪೊಲೀಸ್ ಹಾಗೂ ಆರೋಗ್ಯ ಇಲಾಖೆಯಲ್ಲಿ ಐದು ಜನ ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬಿಜವರ ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿಯು ಮಧುಗಿರಿಯಲ್ಲಿದೆ. ಮಧುಗಿರಿ ಪೋಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಬಿಜವರ ಅಂಚೆ ಸಂಪರ್ಕವನ್ನು ಒದಗಿಸುತ್ತದೆ. ಚರ ದೂರವಾಣಿಗಳು ಗ್ರಾಮದಲ್ಲಿವೆ. ೧ ಸ್ತ್ರೀಶಕ್ತಿ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪೂರಕವಾಗಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ದಾಪ್ಯವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಚರದೂರವಾಣಿಗಳು ಗ್ರಾಮದಲ್ಲಿವೆ. ಬಿಜವರ ಅಂಚೆ ಸಂಪರ್ಕ ಒದಗಿಸುತ್ತಿದೆ. ಒಂದು ಸ್ತ್ರೀಶಕ್ತಿ ಸಂಘವಿದೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ದಾಪ್ಯ, ವಿಕಲಚೇತನ, ವಿಧವಾ ವೇತನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ. ಮಾರಮ್ಮನ ದೇವಸ್ಥಾನವಿದೆ. ಮಾರಮ್ಮನಿಗೆ ಆರತಿಯನ್ನು ಹರಕೆ ಹಾಗೂ ಬಲಿ ನೀಡುವುದರೊಂದಿಗೆ ಆಚರಿಸುತ್ತಾರೆ. ಸಿಡಿ, ಬಾಯಿಬೀಗದ ಆಚರಣೆ, ಆಸಾದಿ ಕುಣಿತವಿರುತ್ತದೆ. ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ರೆಡ್ಡಿಹಳ್ಳಿ

ರೆಡ್ಡಿಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೦೦.೫೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗೌಜುಗ, ಬೆಳವ, ಗಿಳಿ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೩ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ತಿಗುಳ, ರೆಡ್ಡಿಗರು, ಬೋವಿ, ಮರಾಠಿ, ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು, ಮರಾಠಿ ಮಾತನಾಡುವವರಿದ್ದಾರೆ.

ಒಟ್ಟು ೯೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೯೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೯೩ ಮತ್ತು ಹೆಂಗಸರು ೨೦೧ ಜನರಿದ್ದಾರೆ. ಗ್ರಾಮದಲ್ಲಿ ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ೪ ಸಾಂಪ್ರದಾಯಿಕ ಎತ್ತಿನ

ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲ ರಸ್ತೆಗಳು ಸಿಮೆಂಟ್ ರಸ್ತೆಗಳಾಗಿವೆ. ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ ಮತ್ತು ತೆಂಗು ಬೆಳೆಯುತ್ತಾರೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಸಾರಿಗೆ, ಬಿಎಸ್‌ಎನ್‌ಎಲ್, ವಕೀಲ, ಕೆಇಬಿ, ಶಿಕ್ಷಕರು ಮತ್ತು ಪೊಲೀಸರು ಸೇರಿದಂತೆ ೧೦ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರ ಹಾಗೂ ಸುದ್ದೇಕುಂಟೆ ತಾಲ್ಲೂಕು ಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಸಿಂಗನಹಳ್ಳಿಯಲ್ಲಿ ಗ್ರಾಮಪಂಚಾಯಿತಿ ಕಾರ್ಯಾಲಯವಿದೆ. ಒಬ್ಬರು ಸದಸ್ಯರು, ಒಬ್ಬರು ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಿಂಗನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೧ ಹೋಟೆಲ್ ಹಾಗೂ ೨ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಶ್ರೀ ಕಂಬದ ಲಕ್ಷ್ಮೀನರಸಿಂಹಸ್ವಾಮಿ, ಸಪ್ಲಮ್ಮ ದೇವಾಲಯಗಳಿವೆ. ನಾಗರಕಟ್ಟೆಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಶ್ರೀ ಲಕ್ಷ್ಮೀನರಸಿಂಹಸ್ವಾಮಿ ಜಾತ್ರೆ, ಹೂವಿನ ತೇರು, ರಥೋತ್ಸವ, ಸಪ್ಲಮ್ಮ ದೇವರಿಗೆ ಆರತಿ, ಬಲಿ ನೀಡುವರು.

## ರಂಗನಹಳ್ಳಿ

ರಂಗನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೨೧.೩೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ವ್ಯಕ್ತಿಮೂಲದಿಂದ ರಂಗನಹಳ್ಳಿ ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಹೊಂಗೆ, ಅರಳಿ, ಮಾವು, ನೇರಳೆ, ತಾರೆ, ಜಾಲಾರಿ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕೃಷ್ಣಮೃಗ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಪಾರಿವಾಳ, ಕಾಗೆ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೩೭ ಎಮ್ಮೆ, ೧೧ ಕುರಿ ಹಾಗೂ ಮೇಕೆಗಳನ್ನು ಸಾಕಿದ್ದಾರೆ. ೧೪೪೮ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ

ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ, ಮಡಿವಾಳ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೫೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೧೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೧೦ ಮತ್ತು ಹೆಂಗಸರು ೧೦೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಮುಸುಕಿನಜೋಳ, ಅಡಿಕೆ ಮತ್ತು ತೆಂಗನ್ನು ಬೆಳೆಯಲಾಗುತ್ತಿದೆ. ತೆಂಗು ಮತ್ತು ಅಡಿಕೆ ಗ್ರಾಮದಲ್ಲಿನ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೊಂಡವಾಡಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಂಡವಾಡಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೊಂಡವಾಡಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೩.೨%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೨ ಹೋಟೆಲ್‌ಗಳಿದ್ದು ೩ ಅಂಗಡಿಗಳಿವೆ. ಗ್ರಾಮದಲ್ಲಿಕನಕ ದೇವಾಲಯಗಳಿವೆ. ನಾಗರಕಟ್ಟೆಗಳಿವೆ. ಗ್ರಾಮದ ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದೇವರಲ್ಲಿ

ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ರಘುವನಹಳ್ಳಿ

ರಘುವನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೯೯.೦೭ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ರಘು, ರಾಘವಪ್ಪ ಎಂಬ ವ್ಯಕ್ತಿ ಮೂಲದಿಂದಾಗಿ ಆತನೇ ಗ್ರಾಮ ರಚನೆಕಾರನಾದುದರಿಂದ ರಘುವನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ರಂಗನಾಥಸ್ವಾಮಿ ಬೆಟ್ಟವಿದೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಅರಳಿ, ಹೊಂಗೆ, ಬೇವು, ನೀಲಗಿರಿ, ಮಾವು, ಹಲಸು ಮತ್ತು ಅಕೇಶಿಯಾ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಮೊಲ, ನರಿ, ತೋಳ, ಕಾಡುಹಂದಿ, ಕೃಷ್ಣಮೃಗ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಕಾಗೆ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬರು, ಭಜಂತ್ರಿ, ರಜಪೂತ, ಶೆಟ್ಟಿ ಬಣಜಿಗ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೦೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೯೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೪೨ ಮತ್ತು ಹೆಂಗಸರು ೨೫೭ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಮುಸುಕಿನಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಮೂವರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು

ಬಿಇಓ ಕೆಂಪರಾಜು ಸೇರಿದಂತೆ ಒಟ್ಟು ೭ ಜನ ಸರ್ಕಾರಿ ನೌಕರರಿದ್ದಾರೆ. ಇಬ್ಬರು ಟೈಲರ್ ಇದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೮.೧%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಕಾಫಿ ಮತ್ತು ಟೀ ದೊರೆಯುವ ೪ ಹೋಟೆಲ್ ಇದ್ದು ೫ ಅಂಗಡಿಗಳಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಹರಿಕಥೆ ಮಾಡುವ ಅಡುವಪ್ಪ (೬೫ ವರ್ಷ) ಹಾಗೂ ಗೋವಿಂದಪ್ಪ (೬೦ ವರ್ಷ) ಇದೇ ಗ್ರಾಮದವರು.

ಗ್ರಾಮದಲ್ಲಿ ಲಕ್ಷ್ಮಿ, ಆಂಜನೇಯಸ್ವಾಮಿ, ಮಾರಮ್ಮ, ಶನಿಮಹಾತ್ಮ, ದಂಡಿನಮಾರಮ್ಮ ದೇವಾಲಯಗಳು ಕಂಡುಬರುತ್ತದೆ. ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದೇವರಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ದಂಡಿನಮಾರಮ್ಮನ ಜಾತ್ರೆ ನಡೆಯುತ್ತದೆ.

## ರಜಪೂತರ ಪಾಳ್ಯ

ರಜಪೂತರಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೯೯.೦೭ ಹೆಕ್ಟೇರ್ ಹೊಂದಿದ್ದು ರಘುವನಹಳ್ಳಿಯ ಭೂವಿಸ್ತೀರ್ಣದಲ್ಲಿ ಸೇರಿರುವ ಮಜರೆ ಗ್ರಾಮವಾಗಿದೆ.

ರಜಪೂತ ಜನಾಂಗ ಅಥವಾ ಆ ಜನಾಂಗದ ವ್ಯಕ್ತಿ ಗ್ರಾಮ ನಿರ್ಮಿಸಿದ್ದರಿಂದಾಗಿ ರಜಪೂತರಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಹೊಂಗೆ, ಹಲಸು, ಮಾವು, ಬೇವು, ಅಕೇಶಿಯಾ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗರುಡ, ಕೋಗಿಲೆ, ಪಾರಿವಾಳ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ

ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ರಜಪೂತ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೪೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೧೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೦೫ ಮತ್ತು ಹೆಂಗಸರು ೧೦೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಮುಸುಕಿನಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಸೂರ್ಯಕಾಂತಿ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ. ಕೆಎಸ್‌ಆರ್‌ಟಿಸಿ, ಕೃಷಿ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೯.೫೭%.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ನಾಗರಕಲ್ಲು ಇದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ರಾಮನಹಳ್ಳಿ

ರಾಮನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೯೧.೧೮ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ರಾಮ ಎಂಬ ವ್ಯಕ್ತಿ ಮೂಲದಿಂದಾಗಿ ರಾಮನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಹುಣಸೆ, ಹಲಸು, ಮಾವು ಮತ್ತು ನೀಲಗಿರಿ

ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಪಾರಿವಾಳ, ಗೊರವಂಕ, ಹದ್ದು, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ, ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೪೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೭೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೮೪ ಮತ್ತು ಹೆಂಗಸರು ೯೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೩ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ಶೇಂಗಾ, ಮುಸುಕಿನ ಜೋಳ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೫೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಮಾರಮ್ಮ, ಈಶ್ವರನ ದೇವಾಲಯಗಳು ಕಂಡುಬರುತ್ತದೆ. ಜನರು ದೇವರಿಗೆ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ರಾಚಯ್ಯನಪಾಳ್ಯ

ರಾಚಯ್ಯನಪಾಳ್ಯ ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಪೂಜಾರಹಳ್ಳಿಯ ಹೊರವಲಯದಲ್ಲಿದೆ. ಒಟ್ಟು ೨೨ ಮನೆಗಳಿದ್ದು ೭೬ ಜನಸಂಖ್ಯೆಯನ್ನು ಹೊಂದಿದೆ. ಕುರುಬ ಹಾಗೂ ವೀರಶೈವ ಜನಾಂಗದವರು ಗ್ರಾಮದಲ್ಲಿದ್ದಾರೆ.

೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಕವಣದಲ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಮುಖ್ಯ ಗ್ರಾಮ ಪೂಜಾರಹಳ್ಳಿಯಲ್ಲಿ ಶಾಲೆ ಹಾಗೂ ವಿವಿಧ ಸೌಲಭ್ಯ ಪಡೆಯುತ್ತಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ರಂಗನಪಾಳ್ಯ

ರಂಗನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ಒಟ್ಟು ಭೌಗೋಳಿಕ ವಿಸ್ತೀರ್ಣ ೧೫೮.೭೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ ಕೆಂಪು – ಕಪ್ಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ನರಿಗುಟ್ಟೆ, ಕರಿಕಲ್ಲು ಗುಟ್ಟೆ, ರಕ್ಷಿತಾರಣ್ಯ ಹೊಂದಿದೆ. ಗ್ರಾಮವು ನರಿಗುಟ್ಟೆ, ಕರಿಕಲ್ಲು ಗುಟ್ಟೆ ರಕ್ಷಿತಾರಕ್ಷಣ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಕರಡಿ, ಕಾಡುಹಂದಿ, ಜಿಂಕೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದ ಪೂರ್ವದಿಕ್ಕಿನಲ್ಲಿ ಈರಣ್ಣಕಟ್ಟೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳಿದ್ದು ೫ ಸಿಸ್ಟರ್ನ್‌ಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ತಿಗಳರ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೨೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೨೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ೨ ಟ್ರ್ಯಕ್ಟರ್, ೨೫ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ, ಭತ್ತ, ತೊಗರಿ, ಅಡಿಕೆ, ತೆಂಗು, ಹೂ ಬೆಳೆಯುತ್ತಾರೆ. ಹೂವಿನ ಮೊಗ್ಗು ಹಾಗೂ ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಪ್ರಮುಖ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದ್ದು ಆಧುನಿಕ ಡೈರಿ ವ್ಯವಸ್ಥೆಯಿಂದಾಗಿ ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ

ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕವಣದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕವಣದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಬಡವನಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ೫೦೦ ಕ್ಕೂ ಹೆಚ್ಚು ಮೊಬೈಲ್‌ಗಳಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೪ ಸ್ತ್ರೀಶಕ್ತಿ, ೨ ಮಂಜುನಾಥ ಹಾಗೂ ೭ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು, ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ೩ ಹೋಟೆಲ್ ಹಾಗೂ ೪ ಅಂಗಡಿಗಳಿವೆ.

ಗ್ರಾಮದಲ್ಲಿ ಚೌಡೇಶ್ವರಿ, ಗಣೇಶ, ಕಂಬದರಾಯ, ಮಾರಮ್ಮ ದೇವಾಲಯವಿದೆ. ಮಾರಮ್ಮನ ಜಾತ್ರೆಯನ್ನು ಆಚರಿಸುವರು. ಗ್ರಾಮದಲ್ಲಿ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಲಿಂಗಸಂದ್ರ

ಲಿಂಗಸಂದ್ರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮದಿಕ್ಕಿನಲ್ಲಿದೆ. ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೦೫.೧೪ ಹೆಕ್ಟೇರ್ ಕಂದಾಯ ಗ್ರಾಮವಾಗಿದೆ.

ಈ ಗ್ರಾಮದ ಪ್ರಾಚೀನ ಹೆಸರು ಹೊಸಮನೆ. ಹಳ್ಳಿಯ ಹಿರಿಯರು ಹೇಳುವಂತೆ ಬಹಳ ವರ್ಷಗಳ ಹಿಂದೆ ಪುರಾತನ ಕಾಲದಲ್ಲಿ ಶ್ರೀಮಂತ ವ್ಯಕ್ತಿಯೊಬ್ಬ ಹೊಸದಾಗಿ ಮನೆಯೊಂದನ್ನು ಕಟ್ಟಿಸಿದನಂತೆ. ಊರಿನ ಜನರ ವಾಡಿಕೆಯಲ್ಲಿ ಹೊಸಮನೆ ಎಂದು ಈ ಊರಿಗೆ ನಾಮಕರಣಗೊಂಡಿದೆ. ತದನಂತರ ಈ ಊರಿನಲ್ಲಿ ಲಿಂಗಾಯಿತ ಜನಾಂಗದವರು ಅತಿ ಹೆಚ್ಚಾಗಿ ಇದ್ದುದರಿಂದ ಲಿಂಗಸಂದ್ರ ಎಂದು ಮರುನಾಮಕರಣ ಮಾಡಲಾಗಿದೆ ಎಂದು ಹಿರಿಯರು ಹೇಳುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿ ಕಲ್ಲುಗಳಿಂದ ಕೂಡಿದೆ. ಕೆಂಪುಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ಕಾಡುಹಂದಿ, ಕಾಡುಮೊಲಗಳು ಊರ ಹೊರಗೆ ಕಾಣಸಿಗುತ್ತವೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ನಾಟಿಹಸು, ಸೀಮೆಹಸುಗಳನ್ನು ಸಾಕಿದ್ದು ಜನರು ಕುರಿ ಮತ್ತು ಮೇಕೆಗಳನ್ನು ಕೂಡ ಸಾಕಿರುವುದು ಕಂಡುಬರುತ್ತದೆ. ಸಾಕುಪಕ್ಷಿಗಳಾದ ನಾಟಿ ಕೋಳಿಯನ್ನು ಸಾಕಿದ್ದು ಕಡಿಮೆ ಪ್ರಮಾಣದಲ್ಲಿ ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಸುವರ್ಣಮುಖಿ ಹೊಳೆಯಿದ್ದು ನೀರಿಲ್ಲದಂತೆ ಬತ್ತಿಹೋಗಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮ ಪಂಚಾಯ್ತಿಯು ಕಿರುನೀರು ಸರಬರಾಜು ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ೧೫ ಕ್ಕೂ ಹೆಚ್ಚು ಸಾರ್ವಜನಿಕ ನಲ್ಲಿಗಳಿದ್ದು ನೀರು ಸರಬರಾಜು ನಡೆಯುತ್ತಿದೆ. ಲಿಂಗಾಯಿತ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ತಿಗುಳ, ಬಡಗಿ ಜನಾಂಗದವರು ಗ್ರಾಮದಲ್ಲಿದ್ದು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೬೦ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ ರ ಜನಗಣತಿಯ ಪ್ರಕಾರ ೩೫೯ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗಂಡು ೧೬೭ ಹಾಗೂ ಹೆಣ್ಣು ೧೯೨ ಜನಸಂಖ್ಯೆ ಇದೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಇಟ್ಟಿಗೆ ಮನೆ ಹಾಗೂ ಕೆಲವು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ-ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದ್ದು ಸಿಹಿ ಊಟ ವಿಶೇಷ ಆಹಾರವಾಗಿದೆ.

ಆಧುನಿಕ ವಾಹನಗಳಾದ ಟ್ರ್ಯಕ್ಟರ್-೧ ಹಾಗೂ ದ್ವಿಚಕ್ರ ವಾಹನಗಳು ೧೦ ಕಂಡುಬರುತ್ತವೆ. ಸುವರ್ಣ ಗ್ರಾಮ ಯೋಜನೆಯಲ್ಲಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ ಇದೆ. ಗ್ರಾಮದಲ್ಲಿ ೧೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಸೂರ್ಯಕಾಂತಿ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ವೀಳೆದೆಲೆ, ಹೂವು ಬೆಳೆಯುತ್ತಾರೆ. ಅಡಿಕೆ, ವೀಳೆದೆಲೆ ಮತ್ತು ಹೂವು ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಒಂದು ಹೈನುಗಾರಿಕೆ ಇದೆ. ಗ್ರಾಮದ ಹೊಳೆಯಲ್ಲಿ ನೀರಿಲ್ಲದ ಕಾರಣ ಮೀನುಗಾರಿಕಾ ಚಟುವಟಿಕೆ ನಡೆಯುವುದಿಲ್ಲ.

ಈ ಗ್ರಾಮದಲ್ಲಿ ಇಬ್ಬರು ಸರ್ಕಾರಿ ನೌಕರಿಯಲ್ಲಿದ್ದು ಇಬ್ಬರೂ ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಗ್ರಾಮದಲ್ಲಿ ಸಾಂಪ್ರದಾಯಿಕ ಉದ್ಯೋಗ ನಡೆಸುವ ಒಬ್ಬರು ಬಡಗಿಇದ್ದು ಆಧುನಿಕ ಉದ್ಯೋಗವಾದ ಟೈಲರ್ ಮೂವರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ, ತುಮಕೂರು ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಬಡವನಹಳ್ಳಿ ಗ್ರಾಮಪಂಚಾಯ್ತಿಗೆ ಸೇರುತ್ತದೆ. ಒಬ್ಬರು ಗ್ರಾಮಪಂಚಾಯ್ತಿ ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಡವನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮದಲ್ಲಿ ಸಂಪರ್ಕ ಸಾಧನವಾದ ಚರ ದೂರವಾಣಿಗಳಿವೆ. ಉಳಿದಂತೆ ಯಾವುದೇ ಅಂಚೆ ಹಾಗೂ ಸ್ಥಿರ ದೂರವಾಣಿ ಸಂಪರ್ಕ ಕಂಡುಬರುತ್ತಿಲ್ಲ.

ಸಣ್ಣಪುಟ್ಟ ಕಲಹ, ವ್ಯಾಜ್ಯಗಳು ಗ್ರಾಮದ ಹಿರಿಯರು, ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೨ ಸ್ತ್ರೀಶಕ್ತಿ ಸಂಘಗಳು, ಒಂದು ಧರ್ಮಸ್ಥಳ ಸಂಘ ಹಾಗೂ ೩ ಸ್ವಸಹಾಯ ಸಂಘಗಳು ಇವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೮ ವಿದ್ಯಾರ್ಥಿಗಳಿದ್ದಾರೆ. ಒಬ್ಬರು ಕಾರ್ಯಕರ್ತೆ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಒಟ್ಟು ೧೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೮.೭%.

ಗ್ರಾಮದಲ್ಲಿ ಸಾಮಾನ್ಯವಾಗಿ ಜ್ವರ, ಕೆಮ್ಮು, ನೆಗಡಿ ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಒಂದು ಲಿಂಗೇಶ್ವರ ದೇವಾಲಯವಿದ್ದು ಗ್ರಾಮದವರು ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಹರಕೆಯನ್ನು ಹೊರುವ ಆಚರಣೆಯು ರೂಢಿಯಲ್ಲಿದೆ.

## ಲಕ್ಷ್ಮೀದೇವಿಪುರ

ಲಕ್ಷ್ಮೀದೇವಿಪುರ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೯೦.೮೭ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಲಕ್ಷ್ಮೀದೇವತೆಯ ಮೂಲದಿಂದ ಲಕ್ಷ್ಮೀದೇವಿಪುರ ಎಂದಾಗಿದ್ದು ಇದು ಕರ್ನಾಟಕ-ಆಂಧ್ರಪ್ರದೇಶದ ಮಡಕಶಿರಾ ತಾಲ್ಲೂಕಿನ ಗಡಿಗೆ ಹೊಂದಿಕೊಂಡಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಒಂದು ಗುಡ್ಡ ಇದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಕಾಗೆ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳು, ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಈಡಿಗ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ಒಟ್ಟು ೭೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೭೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಸಿಹಿ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಎತ್ತಿನ ಗಾಡಿ, ಟ್ರ್ಯಾಕ್ಟರ್ ಹಾಗೂ ೫ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರು ೭೦ ಜನ ಗ್ರಾಮದಲ್ಲಿದ್ದಾರೆ. ಶೇಂಗಾ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಹೊಸಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಹೊಸಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಹೊಸಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘವಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಅಂಗಡಿಯಿದೆ.

ಗ್ರಾಮದಲ್ಲಿ ಲಕ್ಷ್ಮಿ ಮತ್ತು ಮಾರಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ

ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಲಕ್ಲೀಹಟ್ಟಿ

ಲಕ್ಲೀಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೧೪.೧೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ನಲ್ಲೆಕಾಮನಹಳ್ಳಿ ಭೂವಿಸ್ತೀರ್ಣಕ್ಕೆ ಸೇರಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೨೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೧೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೩೨ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿ, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಮಿಡಿಗೇಶಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಮಿಡಿಗೇಶಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಮಿಡಿಗೇಶಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ

ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೫೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೬.೪%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಪಾತಲಿಂಗೇಶ್ವರ, ಜುಂಜಪ್ಪ, ಚನ್ನಕೇಶವ, ಸಿದ್ದೇಶ್ವರ, ಕಾಟಲಿಂಗೇಶ್ವರ, ಕರಿಓಬೇನಹಳ್ಳಿ ಮಾರಕ್ಕ, ಬೆಳಗೆರೆ ರಂಗಪ್ಪ, ಶಿವ, ಚಿತ್ರಲಿಂಗೇಶ್ವರ, ಶನಿಮಹಾತ್ಮ ದೇವಾಲಯಗಳಿವೆ. ಉಳಿದಂತೆ ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಲಕ್ಷ್ಮೀಪುರ

ಲಕ್ಷ್ಮೀಪುರವು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೯ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೫೭.೮೪ ಹೆಕ್ಟೇರ್‌ನಲ್ಲಿದ್ದು ಜನವಸತಿ ಇಲ್ಲದ ಬೇಚಾರಕ್ ಗ್ರಾಮವಾಗಿದೆ.

ಗ್ರಾಮವು ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಮರುವೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

## ಲಕ್ಷ್ಮಣಪಾಳ್ಯ

ಲಕ್ಷ್ಮಣಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ದೊಡ್ಡಹೊಸಹಳ್ಳಿಯ ೪೩೩.೬೫ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಬೇವು, ಹುಣಸೆ, ನೇರಳೆ, ಜಾಲಾರಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕಾಗೆ, ಪಾರಿವಾಳ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ತಿಗುಳ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೯೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೭೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೨೯ ಮತ್ತು ಹೆಂಗಸರು ೧೪೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೩ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ,

ಮುಸುಕಿನಜೋಳ, ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಡಿಕೆ, ಶೇಂಗಾ, ಬಾಳೆ, ತೆಂಗು ಮತ್ತು ಅಡಿಕೆಯನ್ನು ಬೆಳೆಯುತ್ತಾರೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಪುರವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಪುರವರದಲ್ಲಿ ಪಂಚಾಯಿತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಪುರವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಪುರವರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಒಂದು ಅಂಗನವಾಡಿ ಕೇಂದ್ರವಿದ್ದು ೧೨ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪಾಠಶಾಲೆಯಿದ್ದು ೨೧ ವಿದ್ಯಾರ್ಥಿಗಳು, ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೪೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಸಪ್ಲಮ್ಮ, ವೆಂಕಟರಮಣಸ್ವಾಮಿ ದೇವಾಲಯಗಳಿವೆ. ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಸಪ್ಲಮ್ಮನಿಗೆ ಆರತಿ ಮಾಡುತ್ತಾರೆ.

## ಲಿಂಗಜ್ಜನಪಾಳ್ಯ

ಲಿಂಗಜ್ಜನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ನಿಟ್ರಹಳ್ಳಿಯ ೫೫೫೦.೨೪ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಲಿಂಗಜ್ಜ ಎನ್ನುವ ವ್ಯಕ್ತಿಮೂಲದಿಂದ ಗ್ರಾಮಕ್ಕೆ ಈ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಹೊಂಗೆ, ಮಾವು, ಹಲಸು, ಬೇವು, ಅರಳಿ, ನೀಲಗಿರಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಕೃಷ್ಣಮೃಗ, ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಕಾಗೆ, ಕೋಗಿಲೆ, ಗೂಬೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆ ಹಾಗೂ ಹಂದಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಮತ್ತು ಜಯಮಂಗಲಿ ನದಿ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೯ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಒಟ್ಟು ೭೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೩೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೬೯ ಮತ್ತು ಹೆಂಗಸರು ೧೬೫ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೬ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಡಿಕೆ, ಶೇಂಗಾ, ಬಾಳೆ, ದಾಳಿಂಬೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಕಂದಾಯ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಕಮ್ಮಾರರು, ಚಮ್ಮಾರರು, ಬಡಗಿ ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡಗದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಪುರವರದಲ್ಲಿ ಪಂಚಾಯಿತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡಗದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡಗದಾಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮವು ಎಲ್ಲಾ ರೀತಿಯ ಜನಪದ ಕ್ಷೇತ್ರಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ.

ಗ್ರಾಮದಲ್ಲಿ ಈಶ್ವರ, ರಂಗನಾಥಸ್ವಾಮಿ, ಆಂಜನೇಯಸ್ವಾಮಿ ಮುಂತಾದ ಪ್ರಸಿದ್ಧ ದೇವಾಲಯಗಳಿವೆ. ನಾಗರಕಟ್ಟೆ ಕಂಡುಬರುತ್ತದೆ. ಪ್ರತಿವರ್ಷ ಅದ್ಧೂರಿಯಾಗಿ ಜಾತ್ರೆ ನಡೆಯುತ್ತವೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಬಲಿ ಹಾಗೂ ಹರಕೆಯೊಂದಿಗೆ ಮಾರಮ್ಮನ ಹಬ್ಬವನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಲಕ್ಷ್ಮೀಪುರ

ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೬೭.೪೭ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಲಕ್ಷ್ಮೀ ದೇವರ ಹೆಸರಿನಲ್ಲಿ ಗ್ರಾಮ ರಚನೆಯಾಗಿದೆ. ಲಕ್ಷ್ಮೀ ಎನ್ನುವವರ

ವ್ಯಕ್ತಿ ಮೂಲದಿಂದಲೂ ಗ್ರಾಮಕ್ಕೆ ಹೆಸರು ಬಂದಿರಬಹುದು.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಕಾಡು ಪ್ರಾಣಿಗಳಾದ ಕಾಡುಹಂದಿ, ಮೊಲ, ಕರಡಿ, ನರಿ, ತೋಳ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ, ನವಿಲು, ಬೆಳವ, ಸಾಂಬಾರ ಕಾಗೆ ಮೊದಲಾದವುಗಳು ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎತ್ತು, ಎಮ್ಮೆ, ಕುರಿ, ಮೇಕೆ ಹಾಗೂ ನಾಟಿ ಕೋಳಿಗಳನ್ನು ಸಾಕಿದ್ದಾರೆ.

ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಗ್ರಾಮ ಪಂಚಾಯ್ತಿಯು ಕಿರುನೀರು ಸರಬರಾಜು ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨ ಸಿಸ್ಟರ್ನ್, ೧ ಕೊಳವೆ ಬಾವಿ, ೧೨ ಸಾರ್ವಜನಿಕ ನಲ್ಲಿಗಳಿವೆ. ಒಕ್ಕಲಿಗ ಜನಾಂಗದವರು ದೊಡ್ಡ ಸಮುದಾಯದವರಾಗಿದ್ದಾರೆ. ಆದಿಕರ್ನಾಟಕ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೫೦ ಮನೆಗಳನ್ನು ಹೊಂದಿರುವ ಗ್ರಾಮವು ೨೨೦ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ, ಹೆಂಚಿನ ಮನೆ, ಇಟ್ಟಿಗೆ ಮನೆ ಹಾಗೂ ಗುಡಿಸಲು ಮನೆಗಳಿವೆ. ಗ್ರಾಮದಲ್ಲಿ ಆಶ್ರಯ ಯೋಜನೆ, ಜನತಾ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ಕೆಲವು ಮನೆಗಳು ನಿರ್ಮಾಣವಾಗಿವೆ. ಭಾಗ್ಯಜ್ಯೋತಿ, ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ, ಅನ್ನ-ಸಾಂಬಾರ್, ರೊಟ್ಟಿ ಮುಖ್ಯ ಆಹಾರವಾಗಿದ್ದು ಪಾಯಸ, ಹೋಳಿಗೆ, ಬಾಡೂಟ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿ ಗ್ರಾಮದಲ್ಲಿದ್ದು ಆಧುನಿಕ ವಾಹನಗಳಾದ ಬೈಕ್‌ಗಳಿವೆ. ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆಗಳಾಗಿವೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ.

ವ್ಯವಸಾಯ ಮುಖ್ಯ ಕಸುಬಾಗಿದ್ದು ರಾಗಿ, ಭತ್ತ, ಜೋಳ, ಅಡಿಕೆ, ತೆಂಗು ಬೆಳೆಯುವರು. ಉಳಿದಂತೆ ತೊಗರಿ, ಅಲಸಂದೆ, ಕಡಲೆಕಾಯಿ ಬೆಳೆಯುತ್ತಾರೆ. ಜೋಳ, ಭತ್ತ ಗ್ರಾಮದ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ. ಸಾರಿಗೆ, ಶಿಕ್ಷಣ ಹಾಗೂ ಪೊಲೀಸ್ ಇಲಾಖೆಯಲ್ಲಿ ೪ ಜನ ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದೊಡ್ಡೇರಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡೇರಿ ಗ್ರಾಮ ಪಂಚಾಯ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿಯು ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ದೊಡ್ಡೇರಿ ಅಂಚೆ ಸಂಪರ್ಕವನ್ನು ಒದಗಿಸುತ್ತಿದೆ. ಚರ ದೂರವಾಣಿಗಳು ಗ್ರಾಮದಲ್ಲಿವೆ. ೧ ಸ್ತ್ರೀಶಕ್ತಿ ಸಂಘ, ೧ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪೂರಕವಾಗಿವೆ.

ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೬೬.೩%. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯ, ವಿಕಲಚೇತನ ಹಾಗೂ ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ. ೧ ಹೋಟೆಲ್, ೧ ಅಂಗಡಿಗಳಿವೆ. ಜ್ವರ, ಕೆಮ್ಮು, ಮಲೇರಿಯಾ ಮುಖ್ಯವಾಗಿ ಗ್ರಾಮದಲ್ಲಿ ಕಾಣಿಸಿಕೊಳ್ಳುವ ರೋಗಗಳಾಗಿವೆ.

ಗ್ರಾಮದಲ್ಲಿ ಹನುಮಂತರಾಯಸ್ವಾಮಿ ದೇವಸ್ಥಾನವಿದೆ. ಶ್ರಾವಣ ಮಾಸದಲ್ಲಿ ಹನುಮಂತರಾಯ ದೇವರಿಗೆ ಆರತಿ, ಬಾನ, ಹರಿಸೇವೆ ನಡೆಯುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ವೆಂಕಟೇಶಪುರ

ವೆಂಕಟೇಶಪುರ ಗ್ರಾಮವು ಮಧುಗಿರಿಯ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೧೬೪.೭೮ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ತಿರುಪತಿ ತಿಮ್ಮಪ್ಪನ ಒಕ್ಕಲಾಗಿರುವ ಕುಟುಂಬಗಳು ಇಲ್ಲಿ ಮೊದಲಿಗೆ ಜನವಸತಿ ರಚಿಸಿಕೊಂಡ ಕಾರಣ ತಮ್ಮ ಗ್ರಾಮಕ್ಕೆ ವೆಂಕಟೇಶಪುರ ಎಂದು ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಕಲ್ಲುಗಳಿಂದ ಕೂಡಿರುವ ಕಪ್ಪುಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಮೊಲ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ.

೧೦ ಡಿಗ್ರಿಯಿಂದ ೧೨ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಒಂದು ಹಳ್ಳವಿದೆ. ಗ್ರಾಮದಲ್ಲಿ ೧ ಕೊಳವೆ ಬಾವಿ, ೬ ಸಾರ್ವಜನಿಕ ನಲ್ಲಿಗಳಿವೆ. ಒಕ್ಕಲಿಗ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ.

ಒಟ್ಟು ೧೬ ಮನೆಗಳನ್ನು ಹೊಂದಿರುವ ಗ್ರಾಮವು ೭೧ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್, ಕಲ್ಲಿನ, ಮಣ್ಣಿನ, ಹೆಂಚಿನ, ಇಟ್ಟಿಗೆ ಹಾಗೂ ಗುಡಿಸಲು ಮನೆಗಳಿವೆ. ಗ್ರಾಮದಲ್ಲಿ ಆಶ್ರಯ, ಜನತಾ ಯೋಜನೆ, ಅಂಬೇಡ್ಕರ್ ವಸತಿ ಯೋಜನೆ ಹಾಗೂ ಇಂದಿರಾ ಆವಾಸ್ ಯೋಜನೆಯಡಿ ೪ ಮನೆಗಳು ನಿರ್ಮಾಣವಾಗಿವೆ. ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ.

ಸಾಂಪ್ರದಾಯಿಕ ಎತ್ತಿನಗಾಡಿ ಗ್ರಾಮದಲ್ಲಿದ್ದು ಆಧುನಿಕ ವಾಹನಗಳಾದ ಬೈಕ್‌ಗಳಿವೆ. ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆಗಳಾಗಿವೆ. ಗ್ರಾಮದಲ್ಲಿ ೪ ಮನೆಗಳು ಶೌಚಾಲಯ ವ್ಯವಸ್ಥೆಯನ್ನು ಹೊಂದಿವೆ.

ವ್ಯವಸಾಯ ಮುಖ್ಯ ಕಸುಬಾಗಿದ್ದು ರಾಗಿ, ಭತ್ತ, ಜೋಳ, ಅಡಿಕೆ, ತೆಂಗು ಬೆಳೆಯುವರು. ಉಳಿದಂತೆ ತೊಗರಿ, ಅಲಸಂದೆ, ಕಡಲೇಕಾಯಿ ಬೆಳೆಯುತ್ತಾರೆ. ಜೋಳ ಗ್ರಾಮದ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ. ಸಾರಿಗೆ ಇಲಾಖೆಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದೊಡ್ಡೇರಿ ತಾಲ್ಲೂಕು ಪಂಚಾಯ್ತಿ ಕ್ಷೇತ್ರ ಹಾಗೂ ಬಡವನಹಳ್ಳಿ ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿಯು ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೋಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಬಡವನಹಳ್ಳಿ ಅಂಚೆ ಸಂಪರ್ಕವನ್ನು ಒದಗಿಸುತ್ತದೆ. ಚರ ದೂರವಾಣಿಗಳು ಗ್ರಾಮದಲ್ಲಿವೆ. ೧ ಸ್ತ್ರೀಶಕ್ತಿ ಸಂಘ, ೧ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘಗಳಿದ್ದು ಮಹಿಳೆಯರ ಆರ್ಥಿಕ ಸ್ವಾವಲಂಬನೆಗೆ ಪೂರಕವಾಗಿವೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೬೫% ಆಗಿದೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ. ಜ್ವರ, ಕೆಮ್ಮು, ಮಲೇರಿಯಾ ಗ್ರಾಮದಲ್ಲಿ ಮುಖ್ಯವಾಗಿ ಕಾಣಿಸಿಕೊಳ್ಳುವ ರೋಗಗಳಾಗಿವೆ.

ಗ್ರಾಮದಲ್ಲಿ ಮಾರಮ್ಮನ ಗುಡಿಯಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ವಿ.ಡಿ.ಜಿ ಪಾಳ್ಯ

ವಿ.ಡಿ.ಜಿ ಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೨.೬೧ ಹೆಕ್ಟೇರ್ ಮಜರೆ ಗ್ರಾಮವಾಗಿದ್ದು ಸಿಡಿದರಗಲ್ಲು ಭೂವಿಸ್ತೀರ್ಣಕ್ಕೆ ಸೇರಿದೆ. ಈ ಗ್ರಾಮದ ಪೂರ್ಣ ಹೆಸರು ವೆಂಕಟದಾಸೇಗೌಡನ ಪಾಳ್ಯ ಎಂದು, ಜನರ ವಾಡಿಕೆಯಲ್ಲಿ ವಿ.ಡಿ.ಜಿ ಪಾಳ್ಯವಾಗಿ ರೂಪಾಂತರಗೊಂಡಿದೆ. ವೆಂಕಟೇಗೌಡ ಎಂಬುವವನು ಈ ಗ್ರಾಮದ ಮೂಲ ಪುರುಷನಾದ್ದರಿಂದ ಆತನ ಹೆಸರಿನಲ್ಲಿ ಗ್ರಾಮ ರಚನೆಯಾಗಿದೆ.

ಈ ಗ್ರಾಮದಲ್ಲಿ ಸುಮಾರು ವರ್ಷಗಳ ಕೆಳಗೆ ವೆಂಕಟದಾಸೇಗೌಡ ಎನ್ನುವವರು ವಾಸವಾಗಿದ್ದು ಜನರ ಕಷ್ಟ-ಸುಖಗಳಲ್ಲಿ ಭಾಗಿಯಾಗಿ ಅವರಿಗೆ ಸಹಾಯ, ಮಾರ್ಗದರ್ಶನವನ್ನು ನೀಡುತ್ತಿದ್ದರಂತೆ. ಜನರಲ್ಲಿ ಪ್ರಖ್ಯಾತಿಯನ್ನು ಹೊಂದಿದ ಇವರ ಹೆಸರನ್ನು ಈ ಊರಿಗೆ ನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಕಲ್ಲುಗಳಿಂದ ಕೂಡಿದೆ. ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಕಾಡುಪ್ರದೇಶವನ್ನು ಹೊಂದಿಲ್ಲದಿದ್ದರೂ ಕೂಡ ಕೋತಿಗಳು, ಕಾಡುಹಂದಿ, ಕಾಡುಮೊಲ ಇತ್ಯಾದಿ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಕೋಗಿಲೆ, ಗಿಳಿ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಈ ಗ್ರಾಮದಲ್ಲಿ

ಹಸು ಮತ್ತು ಎಮ್ಮೆಗಳನ್ನು ಸಾಕಿದ್ದು ಇದರ ಜೊತೆ ಕುರಿ ಮತ್ತು ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿ ಕೋಳಿಗಳನ್ನು ಗ್ರಾಮಸ್ಥರು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೨.೯ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಸುವರ್ಣಮುಖಿ ಹೊಳೆಯಿದ್ದು ನೀರಿಲ್ಲದಂತೆ ಬತ್ತಿಹೋಗಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦೦ಕ್ಕೂ ಹೆಚ್ಚು ನಲ್ಲಿಗಳಿದ್ದು ಒಂದು ಸಿಸ್ಟರ್ನ್ ಇದೆ. ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಅಗಸರು, ಹೊಲೆಯ ಜನಾಂಗದವರು ಗ್ರಾಮದಲ್ಲಿದ್ದು ಅತಿ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡವನ್ನೇ ಬಳಸುತ್ತಾರೆ.

ಒಟ್ಟು ೧೨೦ ಮನೆಗಳನ್ನು ಹೊಂದಿರುವ ಗ್ರಾಮವು ೩೮೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡು ೧೮೯, ಹೆಣ್ಣು ೨೦೦ ಜನಸಂಖ್ಯೆಯನ್ನು ಹೊಂದಿದೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೩೨ ಫಲಾನುಭವಿ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ.

ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಮಣ್ಣಿನ ಮನೆ, ಇಟ್ಟಿಗೆ ಮನೆಗಳಿವೆ. ರಾಗಿಮುದ್ದೆ ಮತ್ತು ಅನ್ನ ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಈ ಗ್ರಾಮದಲ್ಲಿ ಯಾವುದೇ ಸಾಂಪ್ರದಾಯಿಕ ವಾಹನಗಳಿಲ್ಲ. ಆದರೆ ಆಧುನಿಕ ವಾಹನಗಳಾದ ಟ್ರ್ಯಕ್ಟರ ಮತ್ತು ದ್ವಿಚಕ್ರ ವಾಹನಗಳಿವೆ.

ಸುವರ್ಣಗ್ರಾಮ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಗಳಾಗಿದ್ದು ಚರಂಡಿ, ಶೌಚಾಲಯ ವ್ಯವಸ್ಥೆಯನ್ನು ಹೊಂದಿದೆ. ಗ್ರಾಮದಲ್ಲಿ ೩೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯವು ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಜೋಳ, ತೊಗರಿ ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಾಗಿ ಅಡಿಕೆ ಮತ್ತು ತೆಂಗು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಒಂದು ಸಾಂಪ್ರದಾಯಿಕವಾದ ಹೈನುಗಾರಿಕೆ ಇದೆ. ಗ್ರಾಮದಲ್ಲಿರುವ ಹೊಳೆ ಬತ್ತಿಹೋಗಿರುವುದರಿಂದ ಯಾವುದೇ ಮೀನುಗಾರಿಕೆ ಚಟುವಟಿಕೆಗಳು ನಡೆಯುವುದಿಲ್ಲ. ಈ ಗ್ರಾಮದಲ್ಲಿ ಇಬ್ಬರು ಸರ್ಕಾರಿ ನೌಕರಿಯಲ್ಲಿದ್ದು ಇಬ್ಬರೂ ಕೂಡ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಟೈಲರ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಬಡವನಹಳ್ಳಿ ಗ್ರಾಮ ಪಂಚಾಯ್ತಿಗೆ ಸೇರುತ್ತದೆ. ಇಲ್ಲಿ ೨ ಜನ ಸದಸ್ಯರಿದ್ದು ಈ ಗ್ರಾಮದಲ್ಲಿ ಒಬ್ಬ ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಡವನಹಳ್ಳಿ ಗ್ರಾಮ ಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮದಲ್ಲಿ ಕೇವಲ ಚರ ದೂರವಾಣಿಗಳ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣ–ಪುಟ್ಟ ಕಲಹ, ವ್ಯಾಜ್ಯಗಳು ಗ್ರಾಮದ ಹಿರಿಯರು, ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದಂತೆ ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತದೆ. ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಒಟ್ಟು ೧೧ ವಿದ್ಯಾರ್ಥಿಗಳು ಉಚಿತ ಶಿಕ್ಷಣವನ್ನು ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು ಇಬ್ಬರು ಸಿಬ್ಬಂದಿ ವರ್ಗದವರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೫೫.೮%.

ಗ್ರಾಮದಲ್ಲಿ ಯಾವುದೇ ಆಸ್ಪತ್ರೆಗಳಿಲ್ಲ. ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಒಂದು ರಾಮನ ದೇವಸ್ಥಾನವಿದೆ. ಈ ಗ್ರಾಮದಲ್ಲಿ ಜನರು ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ,

ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವೆಂಕಟದಾಸೇಗೌಡನ ಪಾಳ್ಯ (ವಿ.ಡಿ.ಜಿ. ಪಾಳ್ಯ) ಜನತಾ ಹೌಸಿಂಗ್ ಕಾಲೋನಿ

ವೆಂಕಟದಾಸೇಗೌಡನಪಾಳ್ಯ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ವೆಂಕಟದಾಸೇಗೌಡನಪಾಳ್ಯದ ಹೊರವಲಯದಲ್ಲಿದೆ. ಸರ್ಕಾರದ ಜನತಾ ಹೌಸಿಂಗ್ ಯೋಜನೆಯಡಿ ಮನೆಗಳು ನಿರ್ಮಾಣವಾಗಿವೆ.

ಒಟ್ಟು ೩೮ ಮನೆಗಳಿದ್ದು ೧೩೫ ಜನಸಂಖ್ಯೆ ಇದೆ. ಒಕ್ಕಲಿಗ, ಆದಿದ್ರಾವಿಡ, ಆದಿಕರ್ನಾಟಕ, ಮಡಿವಾಳ ಜನಾಂಗದವರು ಗ್ರಾಮದಲ್ಲಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ.

ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಸುವರ್ಣ ಗ್ರಾಮ ಯೋಜನೆಯಡಿ ರಸ್ತೆ, ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆಯಾಗಿದೆ. ೧೯ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿ ಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಹಾಗೂ ಕೂಲಿ ಮಾಡುವವರು ಇದ್ದಾರೆ. ಇಬ್ಬರು ಶಿಕ್ಷಕರು ಹಾಗೂ ಒಬ್ಬರು ಅಂಚೆ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಬಡವನಹಳ್ಳಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ವೀರಣ್ಣನಹಳ್ಳಿ

ವೀರಣ್ಣನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೬೬.೬೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮಕ್ಕೆ ವೀರಣ್ಣನಹಳ್ಳಿ ಎಂದು ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ವೀರಣ್ಣ ಎನ್ನುವವರೊಬ್ಬ ಹುಗ್ಗೆ ಹೊಯ್ದು ಈ ಗ್ರಾಮದ ನಿರ್ಮಾಣವಾಯಿತಂತೆ. ಆದ್ದರಿಂದ ಗ್ರಾಮಕ್ಕೆ ವೀರಣ್ಣಹಳ್ಳಿ ಎಂದು ನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿ ಕಲ್ಲುಗಳಿಂದ ಕೂಡಿದ್ದು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ನರಿ, ತೋಳ, ಜಿಂಕೆ, ಕರಡಿ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಗೊರವಂಕ, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಹೆಚ್ಚು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೨ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಮಳೆಗಾಲದಲ್ಲಿ ಸ್ವಲ್ಪ ನೀರು ಬಂದಾಗ ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಕ್ಕೂ ಹೆಚ್ಚು ಸಾರ್ವಜನಿಕ ನಲ್ಲಿಗಳು ಹಾಗೂ ಒಂದು ನೀರಿನ ತೊಟ್ಟಿಯಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿ ಕರ್ನಾಟಕ ಜನಾಂಗದವರು ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೪೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೧೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೮೬, ಹೆಣ್ಣು ೩೩೨ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೩೨ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ, ರೊಟ್ಟಿ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೧೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಶೇಂಗಾ, ಅವರೆ ಮುಂತಾದವುಗಳನ್ನು ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಾಗಿ ಹೂವು, ಅಡಿಕೆ, ತೆಂಗು ಬೆಳೆಯುತ್ತಾರೆ. ಇವುಗಳೇ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಬರಗಾಲದ ಕಾರಣವಾಗಿ ಸರಿಯಾಗಿ ನೀರಿಲ್ಲವಾದ್ದರಿಂದ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಗ್ರಾಮದಲ್ಲಿ ಇಬ್ಬರು ಸರ್ಕಾರಿ ನೌಕರಿಯಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಮೂವರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ರಂಗಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರಂಗಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳು ಹಾಗೂ ಐದು ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆಯಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂವರು ಶಿಕ್ಷಕರು ಹಾಗೂ ಇಬ್ಬರು ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೪೫.೬%.

ಗ್ರಾಮದಲ್ಲಿ ಸಾಮಾನ್ಯವಾಗಿ ಕೆಮ್ಮು, ಮಲೇರಿಯಾ, ಜ್ವರಗಳಂತಹ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಉಳಿದಂತೆ ಯಾವುದೇ ಆಸ್ಪತ್ರೆಗಳಿಲ್ಲ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಮಾರಮ್ಮನ ಹಾಗೂ ಕೆಂಚಮ್ಮನ ದೇವಾಲಯವಿದ್ದು ಪ್ರತಿ ವರ್ಷ ಮಾರಮ್ಮನ ಜಾತ್ರಾ ಮಹೋತ್ಸವವನ್ನು ಅತ್ಯಂತ ವೈಭವಪೂರ್ಣವಾಗಿ ಆಚರಿಸುತ್ತಾರೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವೀರಕ್ಯಾತನಪಾಳ್ಯ

ವೀರಕ್ಯಾತನಪಾಳ್ಯವು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಕೊಟಗಾರ್ಲಹಳ್ಳಿಯ ಹೊರವಲಯದಲ್ಲಿರುವ ಜನವಸತಿ ಗ್ರಾಮವಾಗಿದೆ.

ಒಟ್ಟು ೨೬ ಮನೆಗಳಿದ್ದು ೯೮ ಜನಸಂಖ್ಯೆ ಇದೆ. ಬಲಜಿಗ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಪಡಿತರ, ಶಿಕ್ಷಣವನ್ನು ಕೋಟಗಾರ್ಲಹಳ್ಳಿಯಿಂದ ಪಡೆಯುತ್ತಾರೆ.

ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ವ್ಯವಸಾಯ ಮುಖ್ಯ ಕಸುಬಾಗಿದೆ. ಪೊಲೀಸ್ ಹಾಗೂ ಶಿಕ್ಷಣ ಇಲಾಖೆಯಲ್ಲಿ ೩ ಜನ ಸೇವೆ ಸಲ್ಲಿಸುತ್ತಿದ್ದಾರೆ. ಕೊಟಗಾರ್ಲಹಳ್ಳಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ವಿಠಲಾಪುರ

ವಿಠಲಾಪುರ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೮೭.೮೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮದ ಪ್ರಾಚೀನ ಹೆಸರು ಕದಿರೇನಹಳ್ಳಿ. ಈ ಗ್ರಾಮಕ್ಕೆ ಹಿರಿಯರು ಹೇಳುವಂತೆ ಹಿಂದೆ ಕದುರಪ್ಪ ಎನ್ನುವವರು ಹುಗ್ಗೆ ಒಯ್ದು ಕಟ್ಟಿದ ಕಾರಣ ಈ ಹೆಸರನ್ನು ನಾಮಕರಣ ಮಾಡಲಾಗುತ್ತಿತ್ತು. ಆದರೆ ಗ್ರಾಮದಲ್ಲಿ ವಿಠಲನ ಭಜನೆ ಅತಿ ಹೆಚ್ಚಾಗಿ ಮಾಡುವುದರಿಂದ ವಿಠಲಾಪುರ ಎಂದು ಮರು ನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ, ಕರಡಿ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಗೊರವಂಕ, ನವಿಲು, ಗಿಳಿ, ರಣಹದ್ದು, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೨ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಹಳ್ಳ ಹಾಗೂ ಕೆರೆ ಇದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೬ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಶೆಟ್ಟಿಬಣಜಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮುಸ್ಲಿಂ, ಕುಂಚಿಟಿಗ, ಆದಿ ಕರ್ನಾಟಕ, ನಾಯಕ ಜನಾಂಗದವರು ಗ್ರಾಮದಲ್ಲಿದ್ದು ನಾಯಕ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ. ಒಟ್ಟು ೧೪೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೦೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೫೦, ಹೆಂಗಸರು ೩೫೦ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೨೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ, ಭತ್ತ, ಶೇಂಗಾ, ಅವರೆ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ತೆಂಗು ಮತ್ತು ಅಡಿಕೆ ಬೆಳೆಯುತ್ತಾರೆ.

ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಗ್ರಾಮದಲ್ಲಿ ಶಿಕ್ಷಕ, ವಕೀಲ ಸೇರಿದಂತೆ ನಾಲ್ಕು ಜನ ಸರ್ಕಾರಿ ನೌಕರರು ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಟಗಾರ್ಲಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಟಗಾರ್ಲಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ರಂಟವಾಳ ಅಂಚೆ ಕಚೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ

ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೭೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂವರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೮.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಮುತ್ತುರಾಯನ, ಶನಿಮಹಾತ್ಮನ ದೇವಾಲಯವಿದೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವಿರುಪಗೊಂಡನಹಳ್ಳಿ

ವಿರುಪಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೪೭.೭೪ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಕೊಟಗಾರ್ಲಹಳ್ಳಿ ಭೂವಿಸ್ತೀರ್ಣಕ್ಕೆ ಸೇರಿದೆ.

ಈ ಗ್ರಾಮಕ್ಕೆ ವಿರುಪಗೊಂಡನಹಳ್ಳಿ ಎಂದು ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಈ ಗ್ರಾಮವನ್ನು ಒಂದಾನೊಂದು ಕಾಲದಲ್ಲಿ ವೀರಪ್ಪ ಎನ್ನುವವರು ಬಂದು ನೆಲೆಸಿ ಈ ಊರನ್ನು ಕಟ್ಟಿದರಂತೆ. ಆದ ಕಾರಣ ಅವರ ಹೆಸರಿನೊಂದಿಗೆ ನಾಮಕರಣ ಮಾಡಿ ಈ ಊರನ್ನು ವಿರುಪಗೊಂಡನಹಳ್ಳಿ ಎಂದು ಕರೆಯುತ್ತಾರೆ ಎಂಬ ಪ್ರತೀತಿ ಇದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ಕಾಡುಹಂದಿ, ಮುಳ್ಳುಹಂದಿ, ಮೊಲ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಗೊರವಂಕ, ನವಿಲು, ಗಿಳಿ, ಕಾಗೆ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಎತ್ತು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಇದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ತೆರೆದ ಬಾವಿಗಳು ಹಾಗೂ ೫ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯಿತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮುಸ್ಲಿಂ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೧೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೬೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೧೨, ಹೆಂಗಸರು ೨೪೮ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೩೧ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ನಾಲ್ಕು ಸಾಂಪ್ರದಾಯಿಕ ವಾಹನಗಳಿದ್ದು ಟ್ರ್ಯಾಕ್ಟರ್, ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ಕಚ್ಚಾ ರಸ್ತೆ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ,

ಶೇಂಗಾ, ಅವರೆ, ಅಡಿಕೆ, ತೆಂಗು ಬೆಳೆಯುತ್ತಾರೆ. ಗ್ರಾಮದ ಕೆರೆಯಲ್ಲಿ ಬರಗಾಲದ ಕಾರಣ ಸಾಕಷ್ಟು ಪ್ರಮಾಣದಲ್ಲಿ ನೀರಿಲ್ಲದಿರುವುದರಿಂದ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ.

ಗ್ರಾಮದಲ್ಲಿ ಶಿಕ್ಷಕರು ಹಾಗೂ ಉಪನ್ಯಾಸಕರು ಸೇರಿ ಇಬ್ಬರು ಸರ್ಕಾರಿ ನೌಕರಿಯಲ್ಲಿದ್ದಾರೆ. ಉಳಿದಂತೆ ಎಲ್ಲರೂ ವ್ಯವಸಾಯ ಮಾಡುತ್ತಿದ್ದು ಕೆಲವರು ಮಾತ್ರ ಕೂಲಿ ಮಾಡುತ್ತಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೊಟಗಾರ್ಲಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಟಗಾರ್ಲಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಕೊಟಗಾರ್ಲಹಳ್ಳಿ ಅಂಚೆ ಕಚೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೫೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೦.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ರಂಗಪ್ಪ, ಭೂತಪ್ಪ ದೇವಾಲಯಗಳಿವೆ. ಪ್ರತಿ ವರ್ಷವೂ ಭೂತಪ್ಪನ ಜಾತ್ರೆಯನ್ನು ಹರಕೆ ಹಾಗೂ ಬಲಿ ನೀಡುವ ಆಚರಣೆಗಳೊಂದಿಗೆ ಆಚರಿಸುವರು. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವೆಂಕಟಾಪುರ

ವೆಂಕಟಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ೨೦ ಕಿಮೀ ದೂರದಲ್ಲಿದೆ. ಇದರ ಭೌಗೋಳಿಕ ವಿಸ್ತೀರ್ಣ ೧೬೦.೭೬ ಹೆಕ್ಟೇರ್ಸ್ ಇದ್ದು ಕಂದಾಯ ಗ್ರಾಮವಾಗಿದೆ. ವೆಂಕಟೇಶ್ವರ ದೇವಸ್ಥಾನ ಇರುವ ಕಾರಣದಿಂದ ಗ್ರಾಮ ರಚನೆಯ ಕಾಲದಲ್ಲಿ ವೆಂಕಟಾಪುರ ಎಂದು ಕರೆದಿದ್ದಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿಕಂಡುಬರುತ್ತದೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆ ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೮ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳು ಮತ್ತು ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಸಾದರು ಜನಾಂಗ ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ, ಕುಂಬಾರ, ತಿಗುಳ ಜನಾಂಗ ಕಿರು ಸಮುದಾಯವಾಗಿದೆ. ಕನ್ನಡ, ತೆಲುಗು ಮಾತನಾಡುತ್ತಾರೆ.

ಒಟ್ಟು ೧೦೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೪೯ ಜನಸಂಖ್ಯೆ

ಪ್ರಮಾಣವನ್ನು ಹೊಂದಿದೆ. ಗಂಡಸರು ೨೨೭, ಹೆಂಗಸರು ೨೨೨ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ನಾಲ್ಕು ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಗಳಿದ್ದು ಟ್ರ್ಯಕ್ಟರ್, ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸೀಮೆಂಟ್ ರಸ್ತೆಯನ್ನು ಹೊಂದಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ಮೂರು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಮತ್ತು ಗ್ರಾಮಪಂಚಾಯ್ತಿಗೆ ಸೇರುತ್ತದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಡಿಗೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೫೬.೧೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಟೀ–ಕಾಫಿ ದೊರೆಯುವ ೧ ಹೋಟೆಲ್ ಹಾಗೂ ೧ ಅಂಗಡಿಗಳಿವೆ. ಕೆಮ್ಮು, ಜ್ವರ ಸಾಮಾನ್ಯ ಕಾಯಿಲೆಗಳಾಗಿವೆ. ಗ್ರಾಮದಲ್ಲಿ ಬಸವೇಶ್ವರ, ರಂಗನಾಥಸ್ವಾಮಿ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವರದನಹಳ್ಳಿ

ವರದನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೮೦.೫೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಕಂಡುಬರುತ್ತದೆ. ಉಳಿದಂತೆ ಕೆಲವು ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳು ಇವೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೫ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ

ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳು, ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗ ಬಿಟ್ಟು ಯಾವುದೇ ಜನಾಂಗ ಕಂಡುಬರುವುದಿಲ್ಲ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೨೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೧೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೬೧, ಹೆಂಗಸರು ೪೯ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಮೂರು ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಗಳಿದ್ದು ಟ್ರ್ಯಕ್ಟರ್, ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸೀಮೆಂಟ್ ರಸ್ತೆಯನ್ನು ಹೊಂದಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರವ್ಯಾಪ್ತಿಗೆ ಸೇರಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಡಿಗೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘವಿದೆ. ವಾರ್ಡ್‌ನ ಒಟ್ಟು ಸಾಕ್ಷರತೆ ೩೬.೩೬%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಕೆಮ್ಮು ಮತ್ತು ನೆಗಡಿ ಸಾಮಾನ್ಯ ಕಾಯಿಲೆಗಳಾಗಿವೆ.

ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವೀರಚೆನ್ನೇನಹಳ್ಳಿ

ವೀರಚೆನ್ನೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೯.೦೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ವೀರಚನ್ನ ಎಂಬ ವ್ಯಕ್ತಿ ಮೂಲದಿಂದ ಈ ಹೆಸರು ಬಂದಿದೆ.

ಗ್ರಾಮವು ಅರಣ್ಯ ಪ್ರದೇಶವನ್ನು ಹೊಂದಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣು ಮಿಶ್ರ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಅರಣ್ಯವನ್ನು ಹೊಂದಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಹಳ್ಳವಿದ್ದು ಇದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩ ಸಾರ್ವಜನಿಕ ನಲ್ಲಿಗಳು ೪ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಮುಸ್ಲಿಂ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ಮುಸ್ಲಿಂ ಜನಾಂಗ ಉರ್ದು ಮಾತನಾಡುವರು.

ಒಟ್ಟು ೮೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೩೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೨ ಟ್ರ್ಯಕ್ಟರ್, ಹಾಗೂ ೨೦ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಜೋಳವು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನ್ನೇನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೨.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಸಿಆರ್‌ಪಿ ಡಾಕ್ಟರ್‌ಗಳು ಒಟ್ಟು ೧೨ ಜನ ಸರ್ಕಾರಿ ನೌಕರಿಯಲ್ಲಿದ್ದಾರೆ

ಗ್ರಾಮದಲ್ಲಿ ರಾಮದೇವರ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವೀರಾಪುರ

ವೀರಾಪುರ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೦೧೮.೭೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮವು ನೇರಳೇಕೆರೆ ಭೂವಿಸ್ತೀರ್ಣದಲ್ಲಿ ಸೇರಿದೆ. ವೀರದೇವಣ್ಣ ಎಂಬ ವೀರಗಾರನಿಂದಾಗಿ ಈ ಗ್ರಾಮಕ್ಕೆ

ವೀರಾಪುರ ಎಂಬ ಹೆಸರು ಬಂದಿದೆ. ವೀರದೇವನ ದೇವಾಲಯವೂ ಇಲ್ಲಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ನರಿ, ಕರಡಿ, ಚಿರತೆ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಕಾಗೆ, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ, ಒಂದು ಹಳ್ಳ ಹಾಗೂ ಕೆಂಚೇಗೌಡನ ಕಟ್ಟೆ ಇದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಲಿಂಗಾಯಿತ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕಮ್ಮಾರ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೬೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೬೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ.  ಗಂಡಸರು ೩೧೦ ಮತ್ತು ಹೆಂಗಸರು ೩೫೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆಗಳಿವೆ.  ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೫೯ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಸಿಹಿ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಒಬ್ಬರು ಕಮ್ಮಾರರು ಹಾಗೂ ಒಬ್ಬರು ಬಡಗಿ ಇದ್ದಾರೆ.

ಗ್ರಾಮದಲ್ಲಿ ಎರಡು ಸಾಂಪ್ರದಾಯಿಕ ಎತ್ತಿನ ಗಾಡಿಗಳು ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ನೇರಳೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ನೇರಳೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ನೇರಳೇಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧೦ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಶಿಕ್ಷಕರು, ಪೊಲೀಸ್, ವಕೀಲರು, ಡಾಕ್ಟರ್, ಅರಣ್ಯ ಇಲಾಖೆ, ಐಟಿ–ಬಿಟಿ ಹಾಗೂ ಕೆಎಸ್ಆರ್‌ಟಿಸಿ ಸೇರಿದಂತೆ ೨೬ ಜನ ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ,

ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೩.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಕರಿಯಮ್ಮ, ಆಂಜನೇಯ, ಶನೇಶ್ವರ, ಏಳುಮರದಮ್ಮ, ವೀರದೇವಣ್ಣ ಹಾಗೂ ಮುನೇಶ್ವರ ದೇವಾಲಯಗಳಿವೆ. ಪ್ರತಿ ವರ್ಷ ಏಳುಮರದಮ್ಮನ ಜಾತ್ರೆಯನ್ನು ಆರತಿ ಹಾಗೂ ಹರಕೆಯೊಂದಿಗೆ ಆಚರಿಸಲಾಗುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವಸಂತರಾಯನರೊಪ್ಪ

ವಸಂತರಾಯನರೊಪ್ಪ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ದಕ್ಷಿಣ ದಿಕ್ಕಿನಲ್ಲಿದ್ದು ಚಿನಕವಜ್ರ ಗ್ರಾಮದ ಹೊರವಲಯದಲ್ಲಿದೆ. ವಸಂತರಾಯ ಎಂಬ ವ್ಯಕ್ತಿ ಮೂಲದಿಂದಾಗಿ ಗ್ರಾಮಕ್ಕೆ ಈ ಹೆಸರು ಬಂದಿದೆ. ಇಂದು ಇದರ ಪಕ್ಕದಲ್ಲಿಯೇ ಇದರ ಹೆಸರಿನ ಮತ್ತೊಂದು ಜನತಾ ಕಾಲೋನಿಯೂ ರಚನೆಯಾಗಿದೆ.

ಒಟ್ಟು ೨೦ ಮನೆಗಳನ್ನು ಹೊಂದಿದ್ದು ೬೪ ಜನಸಂಖ್ಯೆಯನ್ನು ಹೊಂದಿದೆ. ನಾಯಕ, ಒಕ್ಕಲಿಗ, ಆದಿದ್ರಾವಿಡ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಚಿನಕವಜ್ರ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಮುಖ್ಯ ಕಸುಬಾಗಿದೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ ದೇವಾಲಯವಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ವಸಂತರಾಯನರೊಪ್ಪ ಜನತಾ ಹೌಸಿಂಗ್ ಕಾಲೋನಿ

ವಸಂತರಾಯನರೊಪ್ಪ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿಯ ದಕ್ಷಿಣ ದಿಕ್ಕಿನಲ್ಲಿದ್ದು ವಸಂತರಾಯನರೊಪ್ಪದ ಗ್ರಾಮದ ಹೊರವಲಯದಲ್ಲಿದೆ. ಸರ್ಕಾರದ ಜನತಾ ಹೌಸಿಂಗ್ ಯೋಜನೆಯಡಿ ಮನೆಗಳು ನಿರ್ಮಾಣವಾಗಿವೆ. ವಸಂತರಾಯ ಎಂಬ ಬ್ರಾಹ್ಮಣ ಮೂಲದ ವ್ಯಕ್ತಿಯು ಮೊದಲಿಗೆ ಜನವಸತಿ ನಿರ್ಮಿಸಿಕೊಂಡು ನಂತರ ಗ್ರಾಮ ಬೆಳೆದು ಆತನ ಹೆಸರನ್ನೇ ಗ್ರಾಮಕ್ಕೆ ಇಡಲಾಗಿದೆ.

ಒಟ್ಟು ೩೦ ಮನೆಗಳನ್ನು ಹೊಂದಿದ್ದು ೧೪೦ ಜನಸಂಖ್ಯೆಯನ್ನು ಹೊಂದಿದೆ. ಒಕ್ಕಲಿಗ, ನಾಯಕ, ಆದಿದ್ರಾವಿಡ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಚಿನಕವಜ್ರ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಹಾಗೂ ಕೂಲಿ ಮಾಡುವವರಿದ್ದಾರೆ. ಪೊಲೀಸ್, ಅಂಚೆ ಹಾಗೂ ಶಿಕ್ಷಣ ಇಲಾಖೆಯಲ್ಲಿ ೩ ಜನ ಸೇವೆ ಸಲ್ಲಿಸುತ್ತಿದ್ದಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ವಜ್ರದಹಳ್ಳಿ

ವಜ್ರದಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೬೮.೫೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮಕ್ಕೆ ಈ ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಹಿಂದೆ ಒಂದು ದಿನ ರತ್ನಗಿರಿ ರಾಜರು ಮಧುಗಿರಿ ಮಾರ್ಗವಾಗಿ ಚಲಿಸುವಾಗ ಒಂದು ವಜ್ರದ ಕಲ್ಲು ಮುತ್ತುರಾಯಸ್ವಾಮಿ ದೇವಾಲಯದ ಮುಂದೆ ಬಿದ್ದು ಬಿಟ್ಟಿತಂತೆ. ಅದನ್ನು ಕಂಡ ಜನರು ವಜ್ರ ಸಿಕ್ಕಿದ ಊರು ವಜ್ರದ ಊರು, ವಜ್ರದ ಹಳ್ಳಿ ಎಂದು ನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದ ಸುತ್ತಲೂ ಗುಡ್ಡಗಳನ್ನು ಹೊಂದಿದೆ. ಗ್ರಾಮವು ಕಣಿವೆ ರಂಗಪ್ಪನ ಬೆಟ್ಟಕ್ಕೆ ಹೊಂದಿಕೊಂಡಿದೆ.

ಗ್ರಾಮವು ಚಿಕ್ಕ ಅರಣ್ಯ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಚಿರತೆ, ಕರಡಿ, ತೋಳ, ನರಿ, ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ವಿಷಪೂರಿತವಾದ ಹಲವು ಜಾತಿಯ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಡುಗ, ಗುಬ್ಬಚ್ಚಿ, ಹದ್ದು, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ

ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗೊಲ್ಲ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಮಡಿವಾಳ, ಒಕ್ಕಲಿಗ ಜನಾಂಗದವರು ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೧೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೫೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೩೭ ಮತ್ತು ಹೆಂಗಸರು ೨೨೧ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೨೭ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೨ ಎತ್ತಿನ ಗಾಡಿಗಳು, ೨ ಆಟೋ, ೧ ಟ್ರ್ಯಾಕ್ಟರ್ ಹಾಗೂ ೧೦ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಅವರೆ, ಅಲಸಂದೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮದಲ್ಲಿ ಶಿಕ್ಷಣ ಇಲಾಖೆ, ರೈಲ್ವೇ ಹಾಗೂ ಮಿಲಿಟರಿ ಸೇರಿದಂತೆ ೫ ಜನ ಸರ್ಕಾರಿ ನೌಕರರಾಗಿದ್ದಾರೆ. ಉಳಿದಂತೆ ಬೇರೆ ಯಾವುದೇ ಉದ್ಯೋಗಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡೇರಿ ತಾಲ್ಲೂಕು ಪಂಚಾಯ್ತಿ, ಡಿ.ವಿ. ಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಡಿ.ವಿ. ಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಡಿ.ವಿ.ಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೫.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಮುತ್ತುರಾಯಸ್ವಾಮಿ, ಭೂತಪ್ಪ ದೇವಾಲಯಗಳಿವೆ. ಮುತ್ತುರಾಯನ ಆರತಿ ಹಾಗೂ ಭೂತಪ್ಪನ ಆರತಿಯನ್ನು ಆಚರಿಸುವರು. ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ ಮುಂತಾದ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವಜ್ರದಹಳ್ಳಿ ಗೊಲ್ಲರಹಟ್ಟಿ

ವಜ್ರದಹಳ್ಳಿ ಗೊಲ್ಲರಹಟ್ಟಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ವಜ್ರದಹಳ್ಳಿಯ ಹೊರವಲಯದಲ್ಲಿದೆ. ಒಟ್ಟು ೨೫ ಮನೆಗಳನ್ನು ಹೊಂದಿದ್ದು ೭೮ ಜನಸಂಖ್ಯೆಯನ್ನು ಹೊಂದಿದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ದೊಡ್ಡವೀರಗೊಂಡನಹಳ್ಳಿ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಮತ್ತು ಕೂಲಿ ಮುಖ್ಯ ಕಸುಬಾಗಿದೆ.

ಚಿತ್ರದೇವರು, ಕದ್ರಿ ನರಸಿಂಹ ಹಾಗೂ ಆಂಜನೇಯನ ಪೌಳಿಗಳಿದ್ದು ದಸರಾ ಹಬ್ಬದಂದು ದೇವರ ಉತ್ಸವ, ಜನಪದ ಕಲೆಗಳಾದ ಕೋಲಾಟ, ಭಜನೆಗಳೊಂದಿಗೆ ಹೊರಡುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ವೆಂಕಟಾಪುರ

ವೆಂಕಟಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೧.೫೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ದೈವಮೂಲವಾಗಿ ವೆಂಕಟಾಪುರವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಮಲೇ ರಂಗಪ್ಪನ ಬೆಟ್ಟ ಗ್ರಾಮದಲ್ಲಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ, ಚಿರತೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಗೊಂದಿಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುಂಚಿಟಿಗ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೦೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೭೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೩೫ ಮತ್ತು ಹೆಂಗಸರು ೨೩೭ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೨೩ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೨ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮದಲ್ಲಿ ಒಂದು ತೊಟ್ಟಿಯಲ್ಲಿ ಮೀನುಗಾರಿಕೆಯು ನಡೆಯುತ್ತಿದೆ. ಗ್ರಾಮದಲ್ಲಿ ಕೂಲಿ ಮಾಡುವವರು

ಹೆಚ್ಚಾಗಿದ್ದು ೨೦% ಭಾಗ ಮಾತ್ರ ವ್ಯವಸಾಯ ಮಾಡುತ್ತಾರೆ. ರಾಗಿ, ಭತ್ತ, ಶೇಂಗಾ ಬೆಳೆಯುವರು. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ. ಗ್ರಾಮದಲ್ಲಿ ಒಬ್ಬರು ಪೊಲೀಸ್ ನೌಕರಿಯಲ್ಲಿದ್ದು ಉಳಿದಂತೆ ಬೇರೆ ಯಾವುದೇ ಸಾಂಪ್ರದಾಯಿಕ ಉದ್ಯೋಗಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಮರುವೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಮರುವೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ವಡೇರಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೫.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಓಬಳ ನರಸಿಂಹ, ಆಂಜನೇಯ, ದಂಡಿ ಮಾರಮ್ಮ ಗೂ ವಲಸೇಮಾರಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮ ಜಾತ್ರೆಯನ್ನು ಹರಕೆ ಹಾಗೂ ಬಲಿಯೊಂದಿಗೆ ಆಚರಿಸುವರು. ಗ್ರಾಮದಲ್ಲಿ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವೀರೇನಹಳ್ಳಿ ತಾಂಡ

ವೀರೇನಹಳ್ಳಿ ತಾಂಡ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೨೬.೫೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ವೀರನಾಯ್ಕ ವ್ಯಕ್ತಿ ಮತ್ತು ಲಂಬಾಣಿ ಜನಾಂಗ ವಾಸಿಸುವ ತಾಣ – ವೀರೇನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಜೇಡಿ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದಲ್ಲಿ ಬೆಟ್ಟ ಹಾಗೂ ಗುಡ್ಡಗಳಿವೆ.

ಗ್ರಾಮವು ನೀಲಗಿರಿ ಅರಣ್ಯ ಪ್ರದೇಶವನ್ನು ಹೊಂದಿದ್ದು ಪ್ರಾಣಿಗಳಾದ ನರಿ, ಕರಡಿ, ಚಿರತೆ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಡುಗ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಕುಂಟೆಯಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೬ ಸಾರ್ವಜನಿಕ ನಲ್ಲಿಗಳು, ೪ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಲಂಬಾಣಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ

ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉಳಿದಂತೆ ಲಂಬಾಣಿ ಭಾಷೆಯನ್ನು ಬಳಸುವರು.

ಒಟ್ಟು ೬೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೨೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೧೭ ಮತ್ತು ಹೆಂಗಸರು ೧೧೯ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೧ ಸಾಂಪ್ರದಾಯಿಕ ಎತ್ತಿನ ಗಾಡಿ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

೩೦% ನಷ್ಟು ಜನ ಮಾತ್ರ ವ್ಯವಸಾಯ ಮಾಡುತ್ತಿದ್ದು ಕೂಲಿ ಮಾಡುವವರ ಸಂಖ್ಯೆ ಅಧಿಕವಾಗಿ ಕಂಡುಬರುತ್ತದೆ. ಶೇಂಗಾ, ಭತ್ತ, ರಾಗಿ ಬೆಳೆಯುವರು. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ.

ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬಿಜವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಿಜವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬಿಜವರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ, ೧ ಮಂಜುನಾಥ ಸಂಘ ಹಾಗೂ ೧ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಸುನಂದಮ್ಮ (೬೦ ವರ್ಷ) ಹಾಗೂ ದೇವುಲಮ್ಮ (೫೫ ವರ್ಷ) ಕೋಲಾಟ ಆಟಗಾರ್ತಿಯಾಗಿದ್ದು ಜನಪ್ರಿಯತೆ ಗಳಿಸಿದ್ದಾರೆ.

ಗ್ರಾಮದಲ್ಲಿ ಸೇವಾಲಾಲ್ ದೇವಾಲಯವಿದೆ. ಹೋಳಿ ಹಬ್ಬ ಆಚರಣೆ ವಿಶೇಷವಾಗಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವಡೇರಹಳ್ಳಿ

ವಡೇರಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೩೩.೮೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕುರುಬರ ಕುಲಗುರುಗಳಾದ ಒಡೆಯರು ಮೂಲದಿಂದ ವಡೇರಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಿಶ್ರ ಕಲ್ಲುಗಳಿಂದ ಕೂಡಿದ್ದು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಈರಣ್ಣನ ಬೆಟ್ಟ ಗ್ರಾಮದಲ್ಲಿದೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ಚಿರತೆ, ನರಿ, ತೋಳ, ಮೊಲ ಮೊದಲಾದ ಪ್ರಾಣಿಗಳು

ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಹದ್ದು, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೮೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕುಂಟೆ ಹಾಗೂ ಒಂದು ಚಿಕ್ಕಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೬ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೭೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೪೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೪೧ ಮತ್ತು ಹೆಂಗಸರು ೩೪೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೫೬ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ಮುಸುಕಿನ ಜೋಳ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಮುಸುಕಿನ ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಉಳಿದಂತೆ ಕೆಲವರು ಕೂಲಿ ಮಾಡುವವರಿದ್ದಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಶಿಕ್ಷಣ ಇಲಾಖೆ, ಪೊಲೀಸ್, ಡಾಕ್ಟರ್ ಹಾಗೂ ಐಟಿ–ಬಿಟಿ ಸೇರಿದಂತೆ ೭ ಜನ ಸರ್ಕಾರಿ ನೌಕರರಾಗಿದ್ದು ಇಬ್ಬರು ಟೈಲರ್‌ಗಳು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸಿದ್ದಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಿದ್ದಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮದಲ್ಲಿ ಅಂಚೆ ಕಛೇರಿ ಇದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೫೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ಜ್ಞಾನಭಾರತಿ ಪ್ರೌಢಶಾಲೆ ಇದ್ದು ೯೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಆರು ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ

ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೪ ಅಂಗಡಿಗಳಿವೆ. ಕರ್ನಾಟಕ ಚಿತ್ರಕಲಾ ಪರಿಷತ್ತಿನ ಕಾರ್ಯದರ್ಶಿ, ಕಲಾವಿದ ಎಂ.ಎಸ್. ನಂಜುಂಡರಾವ್ ಇದೇ ಗ್ರಾಮದವರು.

ಗ್ರಾಮದಲ್ಲಿ ಆಂಜನೇಯ, ಮಾರಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಹರಕೆ ಹಾಗೂ ಬಲಿಯೊಂದಿಗೆ ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವೀರಾಪುರ

ವೀರಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೪೭.೪೭ ಹೆಕ್ಟೇರ್‌ನ ಚಿಕ್ಕಮಾಲೂರು ವಿಸ್ತೀರ್ಣದಲ್ಲಿ ಸೇರಿದ ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮತ್ತು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿ ಮತ್ತು ಪಕ್ಷಿಗಳಾದ ಗಿಳಿ, ಪಾರಿವಾಳ, ಗೀಜುಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೨ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಇಲ್ಲಿ ಪ್ರಮುಖ ಹೂಗಳಾದ ಗುಲಾಬಿ, ಸೇವಂತಿಗೆ, ಕಾಕಡ ಕಂಡುಬರುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಈ ಗ್ರಾಮದಲ್ಲಿ ಅರಳಿ, ಬೇವು, ಹುಣಸೆ, ನೇರಳೆ ಇತ್ಯಾದಿ ಮರಗಳನ್ನು ಕಾಣಬಹುದು.

ವೀರಶೈವರೇ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕರು, ತಿಗಳರು, ಸಾದರು, ವಿಶ್ವಕರ್ಮ, ಮಡಿವಾಳರು ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೯೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೯೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ.  ಗಂಡಸರು ೧೦೦ ಮತ್ತು ಹೆಂಗಸರು ೯೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ.  ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ಅವರೆ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಒಂದು ಮಿನಿ ಡೈರಿಯಿದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಒಬ್ಬರು ವಿಧಾನಸೌಧದಲ್ಲಿ ಗುಮಾಸ್ತರು ಹಾಗೂ ಶಿಕ್ಷಕರು ಸೇರಿದಂತೆ ೪ ಜನ ಸರ್ಕಾರಿ ನೌಕರರಾಗಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿಕ್ಕಮಾಲೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ

ಸಂಚಾರಿ ಮಾರ್ಗಗಳಿಲ್ಲ. ಅಂಚೆ ಕಛೇರಿಯನ್ನು ಈ ಗ್ರಾಮದಲ್ಲಿ ಕಾಣಬಹುದು. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ಸ್ತ್ರೀಶಕ್ತಿ ಸಂಘ ಹಾಗೂ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೭%. ವೀರಗಾಸೆ ಕಲಾ ತಂಡವಿದ್ದು ಸ್ಥಳೀಯವಾಗಿ ಪ್ರಸಿದ್ಧವಾಗಿದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಈ ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ರಾಮದೇವರು, ವೀರಭದ್ರಸ್ವಾಮಿ, ವೀರನಾಗಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ರಾಮನವಮಿಯಂದು ರಾಮದೇವರ ಜಾತ್ರೆ ನಡೆಯುತ್ತದೆ.

## ವೆಂಗಳಮ್ಮನಹಳ್ಳಿ

ವೆಂಗಳಮ್ಮನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿ ೩೫ ಕಿ.ಮೀ. ದೂರದಲ್ಲಿದೆ. ಗ್ರಾಮದ ಒಟ್ಟು ಭೌಗೋಳಿಕ ವಿಸ್ತೀರ್ಣವು ೫೧೭.೧೩ ಹೆಕ್ಟೇರ್‌ಗಳಾಗಿದೆ. ಗ್ರಾಮಕ್ಕೆ ವೆಂಗಳಮ್ಮನಹಳ್ಳಿ ಎಂದು ಹೆಸರು ಬರಲು ವೆಂಗಳಮ್ಮ ಎಂಬ ಪ್ರಾಚೀನ ಮಹಿಳೆಯ ಜ್ಞಾಪಕಾರ್ಥವೇ ಕಾರಣವಾಗಿದೆಯೆಂದು ಗ್ರಾಮಸ್ಥರು ಹೇಳುತ್ತಾರೆ.

ಈ ಗ್ರಾಮದ ಪ್ರದೇಶದಲ್ಲಿ ಬೆಟ್ಟಗುಡ್ಡಗಳಿಲ್ಲ. ಇದು ಬಯಲುನಾಡಿನ ಪ್ರದೇಶವಾಗಿದೆ. ಗ್ರಾಮದ ಸುತ್ತಲೂ ಕೆಂಪುಮಣ್ಣಿದೆ. ಗ್ರಾಮಕ್ಕೆ ಕೆರೆಯಿದೆ, ಒಂದು ಕುಂಟೆಯಿದೆ. ಕುಮುದ್ವತಿ ನದಿಯು ಪಕ್ಕದ ಗ್ರಾಮಗಳಲ್ಲಿ ಮಳೆಗಾಲದಲ್ಲಿ ತುಂಬಿ ಹರಿದಾಗ ವೆಂಗಳಮ್ಮನಹಳ್ಳಿ ಗ್ರಾಮದ ಜಮೀನುಗಳ ಜನ ಕೆಲವು ಕೊಳವೆ ಬಾವಿಗಳ ಅಂತರ್ಜಲ ಮಟ್ಟ ಏರಿಕೆಯಾಗುತ್ತದೆ. ಗ್ರಾಮದಲ್ಲಿ ತರಿ ಮತ್ತು ಬಾಗಾಯ್ತು ಭೂಮಿಗಿಂತಲೂ ಅಧಿಕವಾಗಿ ಖುಷ್ಕಿ ಭೂಮಿಯಿದೆ.

ಒಟ್ಟಾರೆಯಾಗಿ ಖುಷ್ಕಿ ಭೂಮಿಯು ೭೩೩.೩೫ ಹೆಕ್ಟೇರ್‌ಗಳಷ್ಟಿದೆ. ಈ ಪ್ರದೇಶವು ಮಳೆ ಕೊರತೆ ಎದುರಿಸುತ್ತದೆ ಆದರೂ ಸಹ ಕೆಲವು ವರ್ಷಗಳಲ್ಲಿ ಉತ್ತಮ ಮಳೆಯಾಗಿದೆ. ಒಂದೇ ದಿನ ೮೫ ಮಿಮೀ ಗಳಷ್ಟು ಮಳೆ ಬಿದ್ದ ದಾಖಲೆಯಿದೆ. ದಿನೇ ದಿನೇ ಮಳೆಯ ಪ್ರಮಾಣವು ಕಡಿಮೆಯಾಗುತ್ತಿದೆ ಎಂದು ಗ್ರಾಮಸ್ಥರು ಹೇಳುತ್ತಾರೆ. ಮಳೆ ವರದಿಯಲ್ಲಿ ಸಹ ಮಳೆ ಕೊರತೆಯ ದಾಖಲೆ ಕಾಣುತ್ತದೆ. ಈ ಗ್ರಾಮದಲ್ಲಿ ರಾಗಿ, ಮುಸುಕಿನಜೋಳ ಬೆಳೆಗಳು ಪ್ರಧಾನ ಬೆಳೆಗಳಾಗಿವೆ. ಅವರೆ, ಅಲಸಂದೆ, ತೊಗರಿ ಉಪಬೆಳೆಗಳಾಗಿವೆ. ಇದರಲ್ಲಿ ರಾಗಿಯು ಆಹಾರ ಬೆಳೆಯಾಗಿದೆ.

ಈ ಪ್ರದೇಶದಲ್ಲಿ ನೆಲಗಡಲೆಯನ್ನು ಹಿಂದೆ ಹೆಚ್ಚಾಗಿ ಮಳೆಯಾಶ್ರಯದಲ್ಲಿ ರೈತರು ಬೆಳೆಯುತ್ತಿದ್ದರು. ಆದರೆ ಇತ್ತೀಚೆಗೆ ರಾಗಿ ಮತ್ತು ಮುಸುಕಿನ ಜೋಳದ ಬೆಳೆಗಳು ಪ್ರಮುಖವಾಗಿವೆ.

ಈ ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ, ಅಂಗನವಾಡಿ ಕೇಂದ್ರ ಇದ್ದು ೨೦ ಮಕ್ಕಳು ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಈ ಶಾಲೆಯಲ್ಲಿ ೨೧ ವಿದ್ಯಾರ್ಥಿಗಳು ಅಧ್ಯಯನ ಮಾಡುತ್ತಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೯.೨%.

ಗ್ರಾಮಕ್ಕೆ ಉತ್ತಮ ರಸ್ತೆಯಿದ್ದು ಬಸ್ ಸಂಚಾರ ಸೌಲಭ್ಯದ ಕೊರತೆಯಿದೆ. ಗ್ರಾಮದಲ್ಲಿ ಟ್ರ್ಯಾಕ್ಟರ್, ಬೈಕ್, ಟಿವಿಎಸ್, ಸೈಕಲ್‌ಗಳು ಸಂಚಾರಕ್ಕೆ ಮತ್ತು ಸಾಗಾಟಕ್ಕೆ ಬಳಸುತ್ತಾರೆ.

ಗ್ರಾಮದಲ್ಲಿ ನಾಯಕ ಪ್ರಧಾನ ಸಮುದಾಯ. ಉಪ್ಪಾರರು, ಆದಿ ದ್ರಾವಿಡ, ರೆಡ್ಡಿ, ಒಕ್ಕಲಿಗ, ಮುಸ್ಲಿಂ, ಮಡಿವಾಳ ಇತ್ಯಾದಿಯವರು ಕಿರು ಸಮುದಾಯಗಳಾಗಿವೆ. ಕನ್ನಡ, ತೆಲುಗು, ಉರ್ದು ಇಲ್ಲಿನ ಬಳಕೆಯಲ್ಲಿರುವ ಭಾಷೆಗಳಾಗಿವೆ.

ಈ ಗ್ರಾಮದಲ್ಲಿ ರಾಗಿಮುದ್ದೆ ಮತ್ತು ಸೊಪ್ಪಿನ ಸಾರು ಪ್ರಧಾನ ಆಹಾರ. ಅನ್ನ, ಚಪಾತಿ, ಉಪ್ಪಿಟ್ಟು ಅಮುಖ್ಯ ಆಹಾರವಾಗಿದೆ. ಸಾಂದರ್ಭಿಕ ವಿಶೇಷ ಆಹಾರವಾಗಿ ಹೋಳಿಗೆ, ಕಡುಬು ಸಿಹಿ ಆಹಾರಗಳನ್ನು ಗ್ರಾಮಸ್ಥರು ಬಳಸುತ್ತಾರೆ. ಅದರಲ್ಲಿ ಹಬ್ಬಗಳ ಸಂದರ್ಭದಲ್ಲಿ ವಿಶೇಷ ಆಹಾರವು ಬಳಸಲ್ಪಡುತ್ತಾರೆ. ಅಲ್ಲದೆ ಮಾಂಸಾಹಾರಿಗಳು

ವಿಶೇಷಾಹಾರವಾಗಿ ಬಾಡೂಟವನ್ನು ಬಳಸುತ್ತಾರೆ. ಅದರಲ್ಲೂ ಹಬ್ಬಗಳ ಮಾರನೆಯ ದಿನದ ಕರಿ ಹಬ್ಬದಲ್ಲಿ ಬಾಡೂಟವು ನಿಶ್ಚಿತವಾದ ವಿಶೇಷಾಹಾರವಾಗಿ ಬಳಸಲ್ಪಡುತ್ತದೆ. ಇನ್ನುಳಿದಂತೆ ಆಗಾಗ್ಗೆ ಸಾಂದರ್ಭಿಕವಾಗಿಯೂ ಸಹ ಬಾಡೂಟವು ಬಳಸಲ್ಪಡುತ್ತದೆ. ಒಟ್ಟು ೧೨೬ ಮನೆಗಳು, ೫೭೭೮ ಜನಸಂಖ್ಯೆ ಹೊಂದಿದೆ. ಗ್ರಾಮದ ೧೨೬ ಮನೆಗಳು ಶೌಚಾಲಯದ ಬಳಕೆಯನ್ನು ಹೊಂದಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೯೨%.

ಗ್ರಾಮದಲ್ಲಿ ಕಾಂಕ್ರೀಟ್ ಮನೆಗಳು, ಮಣ್ಣಿನ ಮನೆಗಳು, ಗುಡಿಸಲು ಮನೆಗಳು, ಹೆಂಚಿನ ಮನೆ, ಕಲ್ನಾರು (ಶೀಟಿನ) ಮನೆಗಳು ಕಂಡುಬರುತ್ತವೆ.

ಈ ಗ್ರಾಮದಲ್ಲಿ ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ಸೇರಿದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರಕ್ಕೆ ಕಡಗತ್ತೂರು ತಾಲ್ಲೂಕು ಪಂಚಾಯ್ತಿ ಕ್ಷೇತ್ರಕ್ಕೆ, ಮುದ್ದೇನಹಳ್ಳಿ ಗ್ರಾಮಪಂಚಾಯ್ತಿ ಕ್ಷೇತ್ರಕ್ಕೆ ಈ ಗ್ರಾಮವು ಸೇರಿದೆ. ಅಲ್ಲದೆ ವೆಂಗಳಮ್ಮನಹಳ್ಳಿ ಗ್ರಾಮವು ತುಮಕೂರು ಲೋಕಸಭಾ ವ್ಯಾಪ್ತಿಗೆ ಸೇರುತ್ತದೆ. ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ, ತಿರುಮಲಕೊಂಡಪ್ಪ, ಪಾತಲಪ್ಪ, ಬೀಸೆಮಲ್ಲಪ್ಪ, ಕಾಟಿಮಪ್ಪ ದೇವಾಲಯವಿದೆ. ಆಂಜನೇಯಸ್ವಾಮಿಯ ಹೂವಿನ ತೇರು ಎಳೆಯುತ್ತಾರೆ. ಈ ಗ್ರಾಮದ ಯುಗಾದಿ, ಶ್ರೀರಾಮನವಮಿ, ಗೌರಿಹಬ್ಬ ವಿಶೇಷವಾಗಿ ಆಚರಿಸುತ್ತಾರೆ. ಇನ್ನುಳಿದಂತೆ ವಿಶೇಷವಾದ ಆಚರಣೆಗಳೇನೂ ಇರುವುದಿಲ್ಲ. ಶ್ರೀರಾಮನವಮಿ ಹಬ್ಬದ ದಿನ ಹೆಸರುಬೇಳೆ ಮತ್ತು ಪಾನಕವನ್ನು ಸಾಮೂಹಿಕವಾಗಿ ಸಾಂಪ್ರದಾಯಿಕವಾಗಿ ಹಂಚಲಾಗುತ್ತದೆ.

## ವೀರನಾಗೇನಹಳ್ಳಿ

ವೀರನಾಗೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೮೧.೨೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ವೀರನಾಗಮ್ಮ ದೇವತೆಯ ಮೂಲದಿಂದ ಆ ಒಕ್ಕಲುಗಳು ಗ್ರಾಮ ರಚನೆಯ ಕಾಲದಲ್ಲಿ ದೈವ ಮೂಲದಿಂದ ವೀರನಾಗೇನಹಳ್ಳಿ ಎಂದು ಕರೆದಿದ್ದಾರೆ. ಗ್ರಾಮದ ಗಡಿಗೆ ವೀರನಾಗಮ್ಮನ ದೇವಾಲಯವಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚುಕಲ್ಲುಗಳಿಂದ ಕೂಡಿರುವ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ಕಾಡುಹಂದಿ, ಕಾಡುನಾಯಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಪಾರಿವಾಳ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ಗ್ರಾಮದಲ್ಲಿ ಹೆಚ್ಚಿನ ಕುಡಿಯುವ ನೀರಿನ ಬಾವಿಗಳಿದ್ದು ಇಂದು ಕಡಿಮೆ ಪ್ರಮಾಣದಲ್ಲಿ ಕಾಣಸಿಗುತ್ತವೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೬೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೬೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೦೦ ಮತ್ತು ಹೆಂಗಸರು ೩೬೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ

ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೪ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೪೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಮೂವರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡ್ಲಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡ್ಲಾಪುರ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡ್ಲಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡ್ಲಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೮೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂವರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೨.೧೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೨ ಹೋಟೆಲ್‌ಯಿದ್ದು ೨ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮಾರಮ್ಮದೇವಿ, ಅಶ್ವತ್ಥನಾರಾಯಣಸ್ವಾಮಿ, ರಾಮದೇವರು ದೇವಾಲಯಗಳಿವೆ. ಮಾರಮ್ಮನಿಗೆ ಪ್ರತಿ ವರ್ಷ ಅದ್ದೂರಿಯಾಗಿ ಜಾತ್ರೆ ನಡೆಯುತ್ತದೆ. ಅಂದು ಊರಿನ ತುಂಬ ದೇವರ ಉತ್ಸವ ನಡೆಯುತ್ತದೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಬಲಿ ಹಾಗೂ ಹರಕೆಯೊಂದಿಗೆ ಮಾರಮ್ಮನ ಹಬ್ಬವನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವಡ್ಡರಹಟ್ಟಿ

ವಡ್ಡರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೮೧.೨೩ ಹೆಕ್ಟೇರ್ ಹೊಂದಿದ್ದು ವೀರನಾಗೇನಹಳ್ಳಿಯ

ಮಜರೆ ಗ್ರಾಮವಾಗಿದೆ. ವಡ್ಡ ಜನಾಂಗ ಮೂಲದಿಂದಾಗಿ ವಡ್ಡರಹಟ್ಟಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ಕಾಡುನಾಯಿ, ಕಾಡುಹಂದಿ, ಕಾಡುಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಗೌಜುಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೫೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೭೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ, ಭತ್ತ, ಶೇಂಗಾ, ಅವರೆ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಕಂದಾಯ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಮೂವರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದಾರೆ. ಒಬ್ಬರು ಟೈಲರ್ ಇದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡ್ಲಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡ್ಲಾಪುರ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡ್ಲಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡ್ಲಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೦.೯೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ

ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಶ್ರೀ ರೇಣುಕಾ ಯಲ್ಲಮ್ಮ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವಡ್ಡರಹಟ್ಟಿ

ವಡ್ಡರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೮೯.೨೫ ಹೆಕ್ಟೇರ್ ಹೊಂದಿದ್ದು ಅಗ್ರಹಾರ ಭೂ ವಿಸ್ತೀರ್ಣದಲ್ಲಿ ಸೇರಿರುವ ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ಅರಣ್ಯವನ್ನು ಹೊಂದಿಲ್ಲದಿದ್ದರೂ ಹೊಂಗೆ, ಹುಣಸೆ, ಮಾವು, ಬೇವು, ಹಲಸು, ಅಕೇಶಿಯಾ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಮೊಲ, ನರಿ, ತೋಳ, ಕಾಡುಹಂದಿ, ಕೃಷ್ಣಮೃಗ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಹದ್ದು, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳು ಮತ್ತು ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೭ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೭೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೦೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೦೫ ಮತ್ತು ಹೆಂಗಸರು ೨೦೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ತೊಗರಿ, ಶೇಂಗಾ, ಸೂರ್ಯಕಾಂತಿ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಶಿಕ್ಷಣ ಇಲಾಖೆ ಹಾಗೂ ವಿದ್ಯುತ್ ಇಲಾಖೆಗಳಿಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಒಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬ್ಯಾಲ್ಯ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಬ್ಯಾಲ್ಯ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ.

ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬ್ಯಾಲ್ಯ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಬ್ಯಾಲ್ಯ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಗ್ರಾಮದಲ್ಲಿ ೪೮.೧೯% ಸಾಕ್ಷರತೆ ಇದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ರೇಣುಕಾ ಯಲ್ಲಮ್ಮ ದೇವರ ದೇವಾಲಯವಿದೆ. ಗ್ರಾಮದಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವಡ್ಡರಹಟ್ಟಿ

ವಡ್ಡರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದಿಂದ ಪೂರ್ವ ದಿಕ್ಕಿನಲ್ಲಿ ೨೨ ಕಿ.ಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೬೪.೧೯ ಹೆಕ್ಟೇರ್‌ನಲ್ಲಿ ಗರಣಿ ಭೂ ವಿಸ್ತೀರ್ಣಕ್ಕೆ ಸೇರಿದ ಕಂದಾಯ ಗ್ರಾಮವಾಗಿದೆ. ಜಾತಿ ಮೂಲದಿಂದ ಗ್ರಾಮಕ್ಕೆ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ರಕ್ಷಿತ ಅರಣ್ಯವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ, ನರಿ ಕಂಡು ಬರುತ್ತವೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಗಳು ಕಂಡುಬರುತ್ತವೆ ಮತ್ತು ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ ಗ್ರಾಮದಲ್ಲಿ ಹತ್ತು ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ ಹಿಂದಿನ ದಿನಗಳಲ್ಲಿ ಗ್ರಾಮದಲ್ಲಿ ಹೆಚ್ಚಿನ ಕುಡಿಯುವ ನೀರಿನ ಬಾವಿಗಳಿದ್ದು ಇಂದು ನೋಡಲು ಒಂದು ಬಾವಿಯೂ ಉಳಿದಿಲ್ಲ.

ವಡ್ಡರು ಜನಾಂಗದವರೆ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದಲ್ಲಿ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೬೨ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೧೪೧ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು ೭೧ ಹಡಣ್ಣು ೭೦ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್ ಮನೆ ಕಲ್ಲಿನಮನೆ ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಮತ್ತು ಆಟೋಗಳಂತಹ ಆಧುನಿಕ ವಾಹನಗಳಿವೆ ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮವು ಎಲ್ಲಾ ರಸ್ತೆಗಳು ಹೊಂದಿದ್ದು ಚರಂಡಿ ವ್ಯವಸ್ಥೆ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ

ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ವಿಧಾನಸೌಧದಲ್ಲಿ ಒಬ್ಬರು ಕೆಲಸದಲ್ಲಿದ್ದು ಶಿಕ್ಷಣ ಇಲಾಖೆ ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ಮೂರು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡು ಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಗರಣಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಗರಣಿ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂವಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಗರಣಿ ಆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರು ಸಮ್ಮುಖದಲ್ಲಿಯೆ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನುಹೊಂದಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೫ ಮಕ್ಕಳಿದ್ದಾರೆ ಒಬ್ಬರು ಕಾರ್ಯಕರ್ತೆ ಸುಜಾತಮ್ಮ ಮತ್ತು ಒಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು ಒಟ್ಟು ೨೪ ವಿಧ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ ವೃದ್ದಾಪ್ಯ ವೇತನ, ವಿಕಲಚೇತನ ವೇತನ, ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೋಟೇಲ್ ಇದ್ದು ಎರಡು ಅಂಗಡಿಗಳಿವೆ ಈ ಗ್ರಾಮದಲ್ಲಿ ಜ್ವರ ಕೆಮ್ಮು ಮೊದಲಾದ ಸಾಮನ್ಯ ರೋಗಗಳು ಕಂಡು ಬರುತ್ತವೆ.

ಗ್ರಾಮದಲ್ಲಿ ಯಲ್ಲಮ್ಮ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವಿಠಲಾಪುರ

ವಿಠಲಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೯ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೩೨೬.೪೧ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ. ವಿಷ್ಣುವಿನ ಮೂಲವಾಗಿ ವಿಠಲ ಹೆಸರಿನ ಗ್ರಾಮವಾಗಿ ವಿಠಲಾಪುರ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ៦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಕುರುಬ

ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೨೦ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೫೦೦ ಜನಸಂಖ್ಯೆ ಗಂಡು ೨೫೭, ಹೆಣ್ಣು ೨೪೩ ಜನಸಂಖ್ಯೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಆಟೋ ಹಾಗೂ ದ್ವಿಚಕ್ರ ವಾಹನಗಳಿವೆ. ಈ ಗ್ರಾಮದಲ್ಲಿ ಉತ್ತಮವಾದ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇಲ್ಲಿನ ಜನರ ಉಪಕಸುಬಾಗಿದೆ ಒಂದು ಮಿನಿ ಡೈರಿ ಇದೆ.

ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆಗಳಿಗೆ ಸಂಬಂಧಿಸಿದಂತೆ ೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರ್-೦೧ ಉದ್ಯೋಗ ಮಾಡುವವರು ಇದ್ದಾರೆ ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ. ಎಎಸ್‌ಐ ಕೊಂಡಜ್ಜಿ ಈ ಗ್ರಾಮದವರು.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಚಿಕ್ಕದಾಳವಟ್ಟ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ಒಟ್ಟು ಒಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಚಿಕ್ಕದಾಳವಟ್ಟ ಐ.ಡಿ.ಹಳ್ಳಿ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಚಿಕ್ಕದಾಳವಟ್ಟ ಅಂಚೆ ಕಛೇರಿಗೆ ಸೇರಿದೆ. ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ೪೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ ಗ್ರಾಮದಲ್ಲಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ೪೪ ವಿದ್ಯಾರ್ಥಿಗಳಿದ್ದಾರೆ. ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ೨ ಅಂಗಡಿಗಳಿವೆ.

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಶನಿಮಹಾತ್ಮ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಶಂಕರಾಪುರ

ಶಂಕರಾಪುರ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೪೫೭.೭೮ ಹೆಕ್ಟೇರ್ ಹೊಂದಿದ್ದು ಗ್ರಾಮವು ಚಂದ್ರಗಿರಿ ಭೂವಿಸ್ತೀರ್ಣದಲ್ಲಿ ಸೇರಿದ್ದು ಮಜರೆ ಗ್ರಾಮವಾಗಿದೆ. ಶಂಕರ - ಶಿವನ ಮೂಲದಿಂದ ಶಂಕರಾಪುರವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ

ಭೂಮಿಯನ್ನು ಹೊಂದಿದೆ. ಚಂದ್ರಗಿರಿ ಬೆಟ್ಟವನ್ನು ಹೊಂದಿದೆ. ಗ್ರಾಮವು ಬೆಟ್ಟಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಕಾಡುಹಂದಿ, ಮೊಲ, ನರಿ ಮೊದಲಾದ ಪ್ರಾಣಿಗಳು ಆಗಾಗ್ಗೆ ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಹದ್ದು, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಹಸು, ಎಮ್ಮೆ, ಕುರಿಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿವೆ.

ಲಿಂಗಾಯಿತ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ ಜನಾಂಗ ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೫೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೯೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಅದರಲ್ಲಿ ೯೮ ಗಂಡು ಮತ್ತು ೯೩ ಜನ ಹೆಂಗಸರು ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಮಣ್ಣಿನ ಮನೆ, ಇಟ್ಟಿಗೆ ಮನೆ ಹಾಗೂ ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨೬ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಆಧುನಿಕ ವಾಹನಗಳಾದ ಟ್ರ್ಯಕ್ಟರ್ ಹಾಗೂ ೧೫ ದ್ವಿಚಕ್ರ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆಯನ್ನು ಹೊಂದಿದೆ. ಗ್ರಾಮದಲ್ಲಿ ೬ ಮನೆಗಲು ಶೌಚಾಲಯ ಹೊಂದಿವೆ.

ವ್ಯವಸಾಯ ೩೦% ಇದ್ದು ೭೦% ಕೂಲಿ ಮಾಡುವವರಿದ್ದಾರೆ. ಶೇಂಗಾ, ತರಕಾರಿ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದ್ದು ರಾಗಿ, ಭತ್ತ, ತೊಗರಿ, ಅವರೆ ಬೆಳೆಯುವರು.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದ್ದು ಮಿನಿ ಡೈರಿಯೂ ಇದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಸಾಕಷ್ಟು ಪ್ರಮಾಣದ ನೀರಿಲ್ಲದೆ ಇರುವುದರಿಂದ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಮಿಲಿಟರಿ ಹಾಗೂ ಕೆಎಸ್‌ಆರ್‌ಟಿಸಿಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದು ಒಬ್ಬರು ಟೈಲರ್ ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಕೋಟಗಾರ್ಲಹಳ್ಳಿ ತಾಲ್ಲೂಕು ಪಂಚಾಯ್ತಿ ಹಾಗೂ ಚಂದ್ರಗಿರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಂದ್ರಗಿರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚಂದ್ರಗಿರಿ ಅಂಚೆ ಕಛೇರಿ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೧ ಸ್ತ್ರೀಶಕ್ತಿ ಸಂಘ, ೨ ಸ್ವಸಹಾಯ ಸಂಘಗಳಿವೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೪೯.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಮಾರಮ್ಮ, ಬಸವಣ್ಣ, ಈಶ್ವರ ದೇವಾಲಯಗಳಿದ್ದು ಮಾರಮ್ಮನ ಜಾತ್ರೆಯನ್ನು ಹರಕೆ ಹಾಗೂ ಬಲಿ ನೀಡುವುದರೊಂದಿಗೆ ವೈಭವದಿಂದ ಆಚರಿಸುವರು. ಶಿವರಾತ್ರಿ ಹಬ್ಬವನ್ನು ವಿಶೇಷವಾದ ಭಜನೆ, ಜಾಗರಣೆಯೊಂದಿಗೆ ಆಚರಿಸುವರು. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಶಿವನಗೆರೆ

ಶಿವನಗೆರೆ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೩೩.೧೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಸುಮಾರು ೨೫೦ ವರ್ಷಗಳ ಇತಿಹಾಸವನ್ನು ಹೊಂದಿರುವ ಒಂದು ಸುಂದರ ಗ್ರಾಮವಾಗಿದೆ. ಹೊನ್ನೇಶ್ವರ ಈ ಗ್ರಾಮದ ಮುಖ್ಯ ದೈವವಾಗಿದ್ದು ಪಕ್ಕದಲ್ಲಿ ಕೆರೆಯೂ ಇದೆ. ಶಿವನ + ಗೆರೆ > ಕೆರೆ – ಶಿವನಗೆರೆಯಾಗಿದೆ.

ಈ ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರಿತವಾದ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಈ ಗ್ರಾಮ ಒಂದು ಮಾವಿನ ತೋಪನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಆಗಾಗ್ಗೆ ಚಿರತೆಯ ದಾಳಿಯು ಕೂಡ ಗ್ರಾಮದ ಪ್ರಾಣಿಗಳ ಮೇಲೆ ನಡೆಯುತ್ತದೆ. ಉಳಿದಂತೆ ಹಲವು ವಿಷಪೂರಿತ ಹಾವುಗಳಿವೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ವಿಶೇಷವಾಗಿ ನೂರಕ್ಕೂ ಹೆಚ್ಚು ನವಿಲುಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಎತ್ತು, ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಮತ್ತು ಚೇಟಿ ಕೋಳಿಗಳು ಹೆಚ್ಚು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಯಾವುದೇ ರೀತಿಯ ಹೊಳೆಯ ಹರಿಯುವುದಿಲ್ಲ. ಸಣ್ಣ ಹಳ್ಳಗಳು ಎರಡು ಕೆರೆಗೆ ಮಳೆಗಾಲದಲ್ಲಿ ನೀರು ತುಂಬುತ್ತದೆ. ಈ ಕೆರೆಯ ನೀರನ್ನು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ. ಆದರೆ ಕೆರೆ ಸಂಪೂರ್ಣವಾಗಿ ತುಂಬಿ, ಕೋಡಿ ಬಿದ್ದು ಬಹಳ ವರ್ಷಗಳೇ ಕಳೆದಿವೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಹೆಚ್ಚು ಸಾರ್ವಜನಿಕ ನಲ್ಲಿಗಳು, ಒಂದು ಟ್ಯಾಂಕ್ ಹಾಗೂ ೨೦ ಕ್ಕೂ ಹೆಚ್ಚು ಕುಡಿಯುವ ನೀರಿನ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದಲ್ಲಿ ಅನೇಕ ಜಾತಿಯ ಜನರು ಸಹ ವಾಸವಾಗಿದ್ದಾರೆ. ಬ್ರಾಹ್ಮಣ ಜಾತಿಯವರು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ. ಒಟ್ಟು ೨೫೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೧೯೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೯೩, ಹೆಂಗಸರು ೫೯೭ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಂಗಳೂರು ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೭೨ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎರಡು ಸಾಂಪ್ರದಾಯಿಕ ಎತ್ತಿನ ಗಾಡಿಗಳಿದ್ದು ನಾಲ್ಕು ಟ್ರ್ಯಾಕ್ಟರ್, ೫೦ ಕ್ಕೂ ಹೆಚ್ಚು ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೬೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿವೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಸೂರ್ಯಕಾಂತಿ, ತೆಂಗು ಮತ್ತು

ತರಕಾರಿಗಳನ್ನು ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಆಧುನಿಕ ಡೈರಿ ವ್ಯವಸ್ಥೆಯಿಂದಾಗಿ ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಇಲ್ಲಿ ಒಂದು ಹಾಲು ಉತ್ಪಾದಕರ ಸಂಘದ ಕೋರಿಕೆ ಸರ್ಕಾರಕ್ಕೆ ಇದೆ.

ಗ್ರಾಮಕ್ಕೆ ಸೇರಿದಂತೆ ಕೆರೆಗಳು ಇದ್ದರೂ ನೀರಿನ ಅಭಾವ ಹೆಚ್ಚು ಕಂಡುಬರುತ್ತದೆ. ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ನ್ಯಾಯಾಲಯ ಇಲಾಖೆಗೆ ಸೇರಿದ ಒಟ್ಟು ಹತ್ತು ಜನ ಸರ್ಕಾರಿ ನೌಕರರು ಗ್ರಾಮದಲ್ಲಿರುವುದು ಕಂಡುಬರುತ್ತದೆ. ಗ್ರಾಮದಲ್ಲಿ ಉದ್ಯೋಗಕ್ಕೆ ಸಂಬಂಧಿಸಿದಂತೆ ಕುಂಬಾರರು (೨), ಬಡಿಗತನ (೮), ಗುಡಿಕಾರರು (೪) ಹಾಗೂ ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವವರು ಐದು ಜನರಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಸಜ್ಜೆಹೊಸಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ನಾಲ್ವರು ಸದಸ್ಯರನ್ನು ಸಜ್ಜೆ ಹೊಸಳ್ಳಿ ಗ್ರಾಮಪಂಚಾಯ್ತಿಗೆ ಆಯ್ಕೆ ಮಾಡಲಾಗಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಜ್ಜೆ ಹೊಸಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಖಾಸಗಿ ಬಸ್ಸಿನ ಸಂಚಾರ ವ್ಯವಸ್ಥೆ ಇರುವುದನ್ನು ಗಮನಿಸಬಹುದು. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವನ್ನು ಪಕ್ಕದ ಗ್ರಾಮವಾದ ಜಕ್ಕೇನಹಳ್ಳಿಯಿಂದ ಪೂರೈಸಲಾಗುತ್ತಿದೆ.. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘಗಳು ಹಾಗೂ ೬ ಮಂಜುನಾಥ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೯೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿಯಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೯೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ಸರ್ಕಾರಿ ಪ್ರೌಢಶಾಲೆಯು ಸಹ ಇರುವುದು ಕಂಡುಬರುತ್ತದೆ, ಈ ಶಾಲೆಯ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ ೫೮ ಇರುತ್ತದೆ. ಇಲ್ಲಿಹತ್ತು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೩.೯%. ಶಾಲೆಗಳಲ್ಲಿ ಎಲ್ಲಾ ತರಹದ ಪಠ್ಯ, ಪಠ್ಯೇತರ ಚಟುವಟಿಕೆಗಳು ಸುಗಮವಾಗಿ ನಡೆಯುತ್ತಿದ್ದು ೬೩.೯% ಸಾಕ್ಷರ ಗ್ರಾಮವಾಗಿದೆ.

ಈ ಗ್ರಾಮದಲ್ಲಿ ಯಾವುದೇ ರೀತಿಯ ಆಸ್ಪತ್ರೆ ಸೌಲಭ್ಯವಿರುವುದಿಲ್ಲ. ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ನಾಲ್ಕು ಕಾಫಿ ಮತ್ತು ಟೀ ಹೋಟೆಲ್, ಐದು ಅಂಗಡಿಗಳು ಮತ್ತು ಇತರೆ ಸಣ್ಣ ಪುಟ್ಟ ವ್ಯಾಪಾರಿಗಳು ಗ್ರಾಮದಲ್ಲಿದ್ದಾರೆ.

ಗ್ರಾಮದಲ್ಲಿ ಒಟ್ಟು ನಾಲ್ಕು ದೇವಾಲಯಗಳು ಇರುವುದನ್ನು ನೋಡಬಹುದು. ಹೊನ್ನೇಶ್ವರಸ್ವಾಮಿ, ಆಂಜನೇಯಸ್ವಾಮಿ, ಮಾರಮ್ಮ, ಕೆಂಚಪ್ಪ ಎನ್ನುವ ದೇವರುಗಳು ಇದ್ದು ಶ್ರಾವಣ ಮಾಸದಲ್ಲಿ ಕೆಂಚಪ್ಪದೇವರ ಜಾತ್ರೆ ನಡೆಯುತತದೆ. ಹಾಗೂ ಇನ್ನೂ ಮುಖ್ಯ ವಿಚಾರವೆಂದರೆ ಶಿವನಗೆರೆ ಎಂದು ನಾಮಕರಣ ಮಾಡಲು ಕಾರಣವೆಂದರೆ ಕೆರೆಯ ಬಳಿ ಇರುವ ಹೊನ್ನೆಶ್ವರ ದ್ವರರು ಕೆರೆಯ ಬಳಿ ಇದ್ದುದರಿಂದ ಹಿಂದಿನ ಹೆಸರು ಶಿವನಕೆರೆ ಈ ಒಂದು ಹೆಸರು ಕಾಲಗಳು ಕಳೆದಂತೆ ಬದಲಾವಣೆಗೆ ಬಂದಿರುವುದು ಕಂಡುಬರುತ್ತದೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಶಿವನಗೆರೆ ಗೊಲ್ಲರಹಟ್ಟಿ

ಶಿವನಗೆರೆ ಗೊಲ್ಲರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೩೩.೧೬ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ.

ಸುಮಾರು ೨೫೦ ಕ್ಕೂ ಹೆಚ್ಚು ವರ್ಷಗಳ ಇತಿಹಾಸವನ್ನು ಹೊಂದಿದ್ದು ಶಿವನಗೆರೆ ಭೂ ವಿಸ್ತೀರ್ಣಕ್ಕೆ ಸೇರಿಕೊಂಡಿದೆ.

ಈ ಗ್ರಾಮದ ಪ್ರಾಚೀನ ಹೆಸರು ಗೊಲ್ಲರಹಟ್ಟಿ. ಗೊಲ್ಲರಹಟ್ಟಿ ಎಂದು ಕರೆದರೆ ವಿಳಾಸ ಸರಿಯಾಗಿ ಸಿಗುವುದಿಲ್ಲವೆಂದು ತಿಳಿದ ಒಬ್ಬ ಶಿಕ್ಷಕರು ಈ ಗ್ರಾಮದ ಮುಂದೆ ಎಸ್ ಎಂದರೆ ಶಿವನಗೆರೆ ಎಂದು ಅರ್ಥ. ಏಕೆಂದರೆ ಈ ಒಂದು ಹಟ್ಟಿ ಶಿವನಗೆರೆಗೆ ಸೇರಿದ್ದರಿಂದ ಈ ಗ್ರಾಮಕ್ಕೆ ಶಿವನಗೆರೆ ಗೊಲ್ಲರಹಟ್ಟಿ ಅಥವಾ ಎಸ್.ಗೊಲ್ಲರಹಟ್ಟಿ ಎಂದು ನಾಮಕರಣ ಮಾಡಿದರು. ಹಾಗಾಗಿ ಅಂದಿನಿಂದ ಇಂದಿನವರೆಗೆ ಎಸ್.ಗೊಲ್ಲರಹಟ್ಟಿ ಎಂದು ಜನರು ಕರೆದುಕೊಂಡು ಬಂದಿದ್ದಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರಿತವಾದ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮವು ಯಾವುದೇ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಚಿರತೆ, ನರಿ, ತೋಳ, ಜಿಂಕೆ, ಕಿರುಬ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಹೆಚ್ಚು ಕಂಡುಬರುತ್ತದೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳು ಇದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೮೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೬೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೩೨, ಹೆಂಗಸರು ೨೩೦ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೦ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಯಾವುದೇ ಸಾಂಪ್ರದಾಯಿಕ ವಾಹನಗಳಿಲ್ಲ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ಹೊಂದಿವೆ. ಅಂಗನವಾಡಿ ಕೇಂದ್ರದಲ್ಲಿ ೨೫ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕಿ ಇದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೩%.

ಈ ಗ್ರಾಮದಲ್ಲಿ ಆಸ್ಪತ್ರೆ, ಸಮುದಾಯ ಸೌಲಭ್ಯ, ರಸ್ತೆ ಮತ್ತು ಚರಂಡಿ ವ್ಯವಸ್ಥೆ, ಅಂಗಡಿ, ಹೋಟೆಲ್, ಕೆರೆ, ಹೊಳೆ, ಹಳ್ಳ ಸರ್ಕಾರಿ ಶಾಲೆಯ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ, ಸಂಪರ್ಕ, ಸ್ತ್ರೀಶಕ್ತಿ ಸಂಘಗಳ ವ್ಯವಸ್ಥೆ, ಬ್ಯಾಂಕುಗಳು, ಡೈರಿ, ಬಸ್ಸುಗಳ ಸೌಲಭ್ಯ ಹೀಗೆ ಎಲ್ಲಾ ರೀತಿಯ ವ್ಯವಸ್ಥೆಯಿಂದ ಈ ಗೊಲ್ಲರ ಹಟ್ಟಿ ಗ್ರಾಮ ವಂಚಿತವಾಗಿದೆ. ಯಾವುದೇ ರೀತಿಯ ಹಬ್ಬ ಜಾತ್ರೆಗಳು ನಡೆಯುವುದಿಲ್ಲ. ಹಬ್ಬಕ್ಕೆ ಸಂಬಂಧಿಸಿದಂತೆ ಶಿವನಗೆರೆಗೆ ಹೋಗುತ್ತಾರೆ. ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

ದೇವರಿಗೆ ಸಂಬಂಧಿಸಿದಂತೆ ಭೂತಪ್ಪ ಎನ್ನುವ ದೇವರಿದೆ. ಸಾಕು ಪಕ್ಷಿಗಳಾದ ಕೋಳಿಗಳಿವೆ. ಸಾಕು ಪ್ರಾಣಿಗಳಾದ ಕುರಿ, ಮೇಕೆ, ಹಸು, ಎತ್ತು, ಎಮ್ಮೆ ಕಂಡುಬರುತ್ತವೆ. ಎಲ್ಲಾ ರೀತಿಯ ಮಿಕ್ಕುಳಿದ ಸೌಲಭ್ಯವನ್ನು ಬಯಸಿ ಇವರು ಶಿವನಗೆರೆಗೆ ಹೋಗಬೇಕು. ಇನ್ನುಳಿದ ಯಾವುದೇ ರೀತಿಯ ಸೌಲಭ್ಯ ಈ ಗ್ರಾಮದಲ್ಲಿ ಇರುವುದಿಲ್ಲ. ಕೇವಲ ಒಂದೇ ಒಂದು ರೈತರ ಕೊಳವೆ ಬಾವಿಯಿಂದ ನೀರು ದೊರೆಯುತ್ತದೆ.

## ಶ್ರವಣಗುಡಿ

ಶ್ರವಣಗುಡಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೭.೪೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಜೈನ ಸನ್ಯಾಸಿಗಳು ವಾಸಿಸುತ್ತಿದ್ದ ಕಾರಣ ಶ್ರವಣರ ಗುಡಿ > ಶ್ರವಣಗುಡಿ ಎಂದಾಗಿದೆ. ಗ್ರಾಮವು ಬೆಟ್ಟಸಾಲು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಬೆಟ್ಟದ ಸಾಲು ಪ್ರದೇಶವಾಗಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ಚಿರತೆ,

ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩ ಸಾರ್ವಜನಿಕ ನಲ್ಲಿಗಳು, ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಶೆಟ್ಟಿ ಬಣಜಿಗ, ಕುಂಬಾರ, ಗೊಲ್ಲ, ನಾಯಕ ಜನರಿದ್ದಾರೆ. ವೈಷ್ಣವ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೮೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೨೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೪೭೨ ಮತ್ತು ಹೆಂಗಸರು ೧೪೯೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೯ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಸಿಹಿ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಒಬ್ಬರು ಬಡಗಿ ಕೆಲಸ ಮಾಡುವವರಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬೇಡತ್ತೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬೇಡತ್ತೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬೇಡತ್ತೂರು ಅಂಚೆ ಸಂಪರ್ಕ ಒದಗಿಸುತ್ತಿದೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಶ್ರವಣಗುಡಿಯಲ್ಲಿ ೧೦ ವೀರಗಲ್ಲುಗಳು, ೪ ಮಾಸ್ತಿಗಲ್ಲುಗಳು ದೊರೆತಿದ್ದು ಮಹತ್ವದವಾಗಿವೆ. ಗ್ರಾಮದಲ್ಲಿ ಆಂಜನೇಯ ಹಾಗೂ ಮಾರಮ್ಮನ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಹರಕೆ ಮತ್ತು ಬಲಿಯೊಂದು ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಶ್ರೀರಾಂಪುರ

ತಾಳೇಕೆರೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೧೩.೮೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಕೊಂಗರಾಮಯ್ಯನ ಪಾಳ್ಯವೆಂತಲೂ ಕರೆಯುತ್ತಾರೆ. ಕೊಂಗ ಜನಾಂಗದ ಮೂಲದಿಂದ ಗ್ರಾಮಕ್ಕೆ ಹೆಸರು ಬಂದಿದೆ. ಶ್ರೀರಾಮದೇವರ ಮೂಲದಿಂದಾಗಿ ಶ್ರೀರಾಮಪುರ ಎಂದು ಗ್ರಾಮ ರಚನೆಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಪ್ರಾಣಿಗಳಾದ ಕೃಷ್ಣಮೃಗ, ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗರುಡ, ಕೋಗಿಲೆ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ–ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೯ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಹಿಂದಿನ ದಿನಗಳಲ್ಲಿ ಗ್ರಾಮದಲ್ಲಿ ಹೆಚ್ಚಿನ ಕುಡಿಯುವ ನೀರಿನ ಬಾವಿಗಳಿದ್ದು ಇಂದು ನೋಡಲೂ ಒಂದರೆಡು ಬಾವಿಗಳು ಕಾಣಸಿಗುವುದಿಲ್ಲ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಭಜಂತ್ರಿ, ಆದಿಕರ್ನಾಟಕ, ಒಕ್ಕಲಿಗ, ಮಡಿವಾಳ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೬೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೫೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೭೦ ಮತ್ತು ಹೆಂಗಸರು ೨೮೯ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಅಡಿಕೆ, ತೆಂಗು, ದಾಳಿಂಬೆ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ.

ಶಿಕ್ಷಣ ಇಲಾಖೆಗೆ ಸೇರಿದ ಒಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿ ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡ್ಲಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡ್ಲಾಪುರ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡ್ಲಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ

ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡ್ಲಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೪೪.೮೬%. ೧ ರೀರಗಲ್ಲು ಇದೆ. ಗ್ರಾಮದಲ್ಲಿ ಜುಂಜಪ್ಪ, ಶನಿಮಹಾತ್ಮ, ರಾಮದೇವರ ದೇವಾಲಯಗಳಿವೆ. ೩ ಅಶ್ವತ್ಥಕಟ್ಟೆ ಇದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಶ್ರೀ ಕನಕ ಯುವಕ ಸಂಘವಿದೆ.

## ಶೆಟ್ಟಿಹಳ್ಳಿ

ಶೆಟ್ಟಿಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೭೮.೫೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು–ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮತ್ತು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಜಾನಕಲ್ಲು ಬೆಟ್ಟ, ಶೆಟ್ಟಿಹಳ್ಳಿ ಬೆಟ್ಟ, ಓಬಳದೇವರ ಬೆಟ್ಟ ಗ್ರಾಮದಲ್ಲಿವೆ.

ಗ್ರಾಮವು ಅರಣ್ಯ ಪ್ರದೇಶವನ್ನು ಹೊಂದಿದ್ದು ಪ್ರಾಣಿಗಳಾದ ನರಿ, ಕರಡಿ, ಚಿರತೆ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಡುಗ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಶೆಟ್ಟಿಹಳ್ಳಿ ಕೆರೆಯಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳು, ೫ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗ್ರಾಮದಲ್ಲಿ ಶೆಟ್ಟರು ಸಮುದಾಯದವರು ಮೊದಲು ವ್ಯಾಪಾರ ಮಾರ್ಗವಾಗಿ ಇಲ್ಲಿಗೆ ಬಂದು ನೆಲೆಸಿದ ಕಾರಣ ಶೆಟ್ಟಿಹಳ್ಳಿ ಎಂದು ನಾಮಕರಣ ಮಾಡಲಾಗಿದೆ ಎಂದು ಹಿರಿಯರು ಹೇಳುತ್ತಾರೆ.

ಶೆಟ್ಟರು ಹಾಗೂ ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಭಜಂತ್ರಿ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೨೪೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೮೨೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೨೬ ಮತ್ತು ಹೆಂಗಸರು ೩೯೯ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೬೩ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೪೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

೭೦% ನಷ್ಟು ಜನ ಮಾತ್ರ ವ್ಯವಸಾಯ ಮಾಡುತ್ತಿದ್ದು ಕೂಲಿ ಮಾಡುವವರ ಸಂಖ್ಯೆ ಅಧಿಕವಾಗಿ ಕಂಡುಬರುತ್ತದೆ. ಶೇಂಗಾ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇಲ್ಲ ಒಂದು ಆಧುನಿಕ ಡೈರಿ ಇದೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ. ಉಪನ್ಯಾಸಕರು, ಶಿಕ್ಷಕರು ಹಾಗೂ ಲಾಯರ್ ಸೇರಿದಂತೆ ೪ ಜನ ಸರ್ಕಾರಿ ನೌಕರರಾಗಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬಿಜವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ನಾಲ್ಕು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಿಜವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬಿಜವರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೩ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೭೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೦೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಐದು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೨%.

ಗ್ರಾಮದಲ್ಲಿ ಸಾರ್ವಜನಿಕ ಗ್ರಂಥಾಲಯವಿದ್ದು ಮುಚ್ಚಲ್ಪಟ್ಟಿದೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ೪ ಜನ ಬಡಗಿಗಳು, ೨೦ ಕ್ಕಿಂತ ಹೆಚ್ಚು ಜನ ಗಾರೆ ಕೆಲಸ ಮಾಡುವವರಿದ್ದು ಹಸು ವ್ಯಾಪಾರ ಮಾಡುವುದು ಕಂಡುಬರುತ್ತದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೪ ಹೋಟೆಲ್‌ಗಳು ಹಾಗೂ ೪ ಅಂಗಡಿ ಹಾಗೂ ಒಂದು ಸಮುದಾಯ ಭವನವಿದೆ. ಗ್ರಾಮದಲ್ಲಿ ಒಂದು ಪಶು ಆಸ್ಪತ್ರೆ ಇದ್ದು ಒಬ್ಬರು ವೈದ್ಯರಿದ್ದಾರೆ.

ಗ್ರಾಮದಲ್ಲಿ ಒಂದು ಶೆಟ್ಟಿಹಳ್ಳಿ ಮಾರಮ್ಮ ಹಾಗೂ ಹನುಮಂತರಾಯ ದೇವಾಲಯವಿದ್ದು ಪ್ರತಿ ವರ್ಷ ಮಾರಮ್ಮನ ಜಾತ್ರೆ ಆಚರಿಸುವರು. ಬಲಿ ಹಾಗೂ ಹರಕೆ ನೀಡುವ ಆಚರಣೆಗಳು ರೂಢಿಯಲ್ಲಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಶಂಭೋನಹಳ್ಳಿ

ಶಂಭೋನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೩೨.೮೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಶಿವ > ಶಂಭು > ಶಂಭುವಿನಹಳ್ಳಿ > ಶಂಭೋನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಚಿರತೆ, ನರಿ, ತೋಳ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ದೊಡ್ಡ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೯ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಲಿಂಗಾಯಿತ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೇಡ, ಆದಿಕರ್ನಾಟಕ, ಮುಸ್ಲಿಂ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೬೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೦೫೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೩೦ ಮತ್ತು ಹೆಂಗಸರು ೫೨೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೫೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಕ್ಟರ್, ಆಟೋ, ಟೆಂಪೋ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮದಲ್ಲಿ ವ್ಯವಸಾಯ ಮಾಡುವವರ ಸಂಖ್ಯೆ ವಿರಳವಾಗಿದ್ದು ಕೂಲಿ ಮಾಡುವವರು ಹೆಚ್ಚಾಗಿದ್ದಾರೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮದಲ್ಲಿ ಒಂದು ನ್ಯಾಯಬೆಲೆ ಅಂಗಡಿ ಇದೆ. ಶಿಕ್ಷಕ ಹಾಗೂ ಪೊಲೀಸ್ ಸೇರಿದಂತೆ ೬ ಜನ ಸರ್ಕಾರಿ ನೌಕರರಾಗಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗಂಜಲಗುಂಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗಂಜಲಗುಂಟೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಗಂಜಲಗುಂಟೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೫.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಸಿದ್ದಬೆಟ್ಟಯ್ಯ, ಬಸವಣ್ಣ ಹಾಗೂ ಶನಿಮಹಾತ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಆದರೆ ಯುಗಾದಿ ಇವರಿಗೆ ಮರಣದ ಸೂಚಕ ಎಂದು ಈ ಹಬ್ಬವನ್ನು ಇಂದಿಗೂ ಆಚರಿಸುವುದಿಲ್ಲ. ಈ ಗ್ರಾಮದಲ್ಲಿ ಯುಗಾದಿಯ ಒಂದು ವಾರ ಹಿಂದೆ ಹಾಗೂ ಮುಂದೆ ದೇವರ ಪೂಜೆಯಾಗಲಿ, ಸಿಹಿ ಪದಾರ್ಥವನ್ನಾಗಲಿ, ಒಲ್ಲರಣೆಯನ್ನು ಸಹ ಹಾಕುವುದಿಲ್ಲ. ಹೊಸ ಬಟ್ಟೆ ತೊಡುವುದಿಲ್ಲ. ಸೂತಕದ ಛಾಯೆಯಂತಿರುವ ಹಬ್ಬವೆಂದು ಈ ರೀತಿ ನಡೆಸಿಕೊಂಡು ಬರುತ್ತಿದ್ದಾರೆ. ಈ ಊರಿನ ಗಂಡಸರು ಹಿಂದೆ ಬಟ್ಟೆ, ಮಾವು–ಬೇವು ತರಲು ಹೋದವರು ಬರಲಿಲ್ಲ. ಆದ ಕಾರಣವೆಂದು ಹಿರಿಯರು

ಹೇಳುತ್ತಾರೆ. ಮಧುಗಿರಿ ಪಾಳೆಯಗಾರರ ವಂಶಸ್ಥರು ಈಗಲೂ ಈ ಗ್ರಾಮದಲ್ಲಿದ್ದಾರೆ.

## ಶಂಬೋನಹಳ್ಳಿ ಕ್ರಾಸ್

ಶಂಬೋನಹಳ್ಳಿ ಕ್ರಾಸ್ ಮಧುಗಿರಿಯ ಉತ್ತರ ದಿಕ್ಕಿನಲ್ಲಿದ್ದು ಶಂಬೋನಹಳ್ಳಿಯ ಹೊರವಲಯದಲ್ಲಿದೆ.

ಒಟ್ಟು ೫೦ ಮನೆಗಳಿದ್ದು ೨೨೦ ಜನಸಂಖ್ಯೆ ಇದೆ. ಲಿಂಗಾಯಿತ, ಆದಿಕರ್ನಾಟಕ, ಮುಸ್ಲಿಂ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ತೆಲುಗು, ಉರ್ದು ಮಾತನಾಡುವವರು ಗ್ರಾಮದಲ್ಲಿದ್ದಾರೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಕೂಲಿ ಹಾಗೂ ವ್ಯವಸಾಯ ಮುಖ್ಯ ಕಸುಬಾಗಿದೆ. ಮಲೆರಂಗಪ್ಪನ ಬೆಟ್ಟವಿದೆ. ಮಧುಗಿರಿಯಿಂದ ಕೊಡಿಗೇನಹಳ್ಳಿ ಮಾರ್ಗದ ರಸ್ತೆಯಿದೆ. ಗ್ರಾಮದಲ್ಲಿ ಯುಗಾದಿ ಹಬ್ಬವನ್ನು ಆಚರಿಸುವುದಿಲ್ಲ. ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಶ್ರಾವಂಡನಹಳ್ಳಿ

ಶ್ರಾವಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೬೧.೦೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಶ್ರವಣಗೊಂಡನಹಳ್ಳಿ - ಶ್ರಾವಂಡನಹಳ್ಳಿ ಎಂದಾಗಿದ್ದು ಜೈನರ ವಾಸಸ್ಥಳ ಎಂಬ ಅರ್ಥದಲ್ಲಿ ಗ್ರಾಮ ರಚನೆಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ೧೦೧ ಎಕರೆ ಅರಣ್ಯ ಪ್ರದೇಶವನ್ನು ಹೊಂದಿದ್ದು ಪ್ರಾಣಿಗಳಾದ ಕಾಡುಮೊಲ, ನರಿ, ಕರಡಿ, ಚಿರತೆ, ಜಿಂಕೆ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ, ಗುಬ್ಬಚ್ಚಿ, ನವಿಲು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳು ಹಾಗೂ ೨ ಟ್ಯಾಂಕ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಹಳೆಯ ೩ ಬಾವಿಗಳನ್ನು ಕಾಣಬಹುದು.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಸಾದರು, ಜೈನರು, ನಾಯಕ, ಲಂಬಾಣಿ, ಕುರುಬರು, ಮಡಿವಾಳ, ಭಜಂತ್ರಿ, ಮುಸ್ಲಿಂ, ಶೆಟ್ಟರು, ಆದಿದ್ರಾವಿಡ, ರೆಡ್ಡಿ, ಕ್ರಿಶ್ಚಿಯನ್, ಕುಂಬಾರ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು, ಲಂಬಾಣಿ, ಇಂಗ್ಲೀಷ್, ಉರ್ದು ಮಾತನಾಡುವವರಿದ್ದಾರೆ.

ಒಟ್ಟು ೪೮೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೯೨೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೯೫೬ ಮತ್ತು ಹೆಂಗಸರು ೯೬೭ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೨೧ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೧೦ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್, ಕಾರು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು,

ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಈ ಗ್ರಾಮದಲ್ಲಿ ಪ್ರಾಥಮಿಕ ಆರೋಗ್ಯಕೇಂದ್ರ ಹಾಗೂ ಪಶು ಚಿಕಿತ್ಸಾಲಯವನ್ನು ಕಾಣಬಹುದು. ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ೬ ಜನ ಸರ್ಕಾರಿ ನೌಕರರು ಹಾಗೂ ಇಬ್ಬರು ವಕೀಲರಿದ್ದಾರೆ. ಒಬ್ಬರು ಇಂಜಿನಿಯರ್, ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಇಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡಮಾಲೂರು ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ದೊಡ್ಡ ಮಾಲೂರಿನಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ನಾಲ್ಕು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ದೊಡ್ಡಮಾಲೂರು ಅಂಚೆ ಸಂಪರ್ಕ ಒದಗಿಸುತ್ತಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ೫೦ ಮತ್ತು ೫೫ ಮಕ್ಕಳಿದ್ದಾರೆ. ಇಬ್ಬರು ಕಾರ್ಯಕರ್ತೆಯರು, ಇಬ್ಬರು ಸಹಾಯಕಿಯರಿ ಇದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೨೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಐದು ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಶ್ರೀ ಮಾದೇಶ್ವರ ಗ್ರಾಮಾಂತರ ಪ್ರೌಢಶಾಲೆಯಲ್ಲಿ ೧೩೦ ಮಕ್ಕಳು, ೯ ಜನ ಶಿಕ್ಷಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೪ ಅಂಗಡಿಗಳಿವೆ. ನ್ಯಾಯಬೆಲೆ ಅಂಗಡಿಯಿದೆ. ಸ್ಟೇಟ್ ಬ್ಯಾಂಕ್ ಮೈಸೂರು ಶಾಖೆಯಿದೆ.

ಗ್ರಾಮದಲ್ಲಿ ಚೋಳ ಮನೋಹರನ್ ಉಲ್ಲೇಖದ ಶಾಸನ ದೊರೆತಿದೆ. ಇಲ್ಲಿ ಮಹದೇಶ್ವರ ಜಾತ್ರೆ ನಡೆಯುತ್ತದೆ. ಗ್ರಾಮದಲ್ಲಿ ಮಹದೇಶ್ವರ, ಸಿದ್ದೇಶ್ವರ, ದಂಡಿನಮಾರಮ್ಮ, ಶನಿಮಹಾತ್ಮ, ಚಿಕ್ಕಮ್ಮ, ದೊಡ್ಡಮ್ಮ ದೇವಾಲಯಗಳಿವೆ. ದಂಡಿಮಾರಮ್ಮದೇವಿಯ ಜಾತ್ರೆಯು ಅದ್ದೂರಿಯಾಗಿ ನಡೆಯುತ್ತದೆ. ಗ್ರಾಮದಲ್ಲಿ ಎಲ್ಲಾ ಹಿಂದೂ ಹಬ್ಬಗಳನ್ನು ವಿಶೇಷವಾಗಿ ಯುಗಾದಿ, ಶಿವರಾತ್ರಿ, ದಸರಾ ತುಂಬಾ ವೈಭವದಿಂದ ಆಚರಿಸುತ್ತಾರೆ. ಒಂದು ಚರ್ಚ್ ಇದೆ. ಕಗ್ಗಲಪ್ಪ ಎಂಬ ೫೦ ವರ್ಷದವರು ಮೂಳೆ ಕಟ್ಟುವ ನಾಟಿ ಪದ್ಧತಿ ವೈದ್ಯರಿದ್ದಾರೆ. ಪಶು ಆಸ್ಪತ್ರೆ ಇದೆ.

## ಶಿವಪುರ

ಶಿವಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೯.೮೯ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಮಾವು, ಹುಣಸೆ, ನೇರಳೆ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಕೋಗಿಲೆ, ಹದ್ದು, ಕಾಗೆ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಲಿಂಗಾಯಿತ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ ಒಕ್ಕಲಿಗರು ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೧ ಮತ್ತು ಹೆಂಗಸರು ೧೯ ಜನರಿದ್ದಾರೆ. ಗ್ರಾಮದಲ್ಲಿ ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಗ್ರಾಮದಲ್ಲಿ ಕಮ್ಮಾರರು, ಚಮ್ಮಾರರು ಮತ್ತು ಕುರಿ ಸಾಕಾಣಿಕೆ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೬೧%. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಶೀಬಿನಯ್ಯನಪಾಳ್ಯ

ಶೀಬಿನಯ್ಯನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮೧೫.೨೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮದ ಪ್ರಾಚೀನ ಹೆಸರು ಚೆನ್ನಮ್ಮನಪಾಳ್ಯ. ಗ್ರಾಮಕ್ಕೆ ಈ ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಚೆನ್ನಮ್ಮ ಎನ್ನುವವರು ಈ ಗ್ರಾಮದಲ್ಲಿ ನೆಲೆಸಿದ್ದರಂತೆ. ಆಕೆ ತುಂಬಾ ಬುದ್ಧಿವಂತಳು, ಸ್ನೇಹಪ್ರಿಯಳು, ಕರುಣಾಮಯಿ. ಆದ್ದರಿಂದ ಗ್ರಾಮಕ್ಕೆ ಅವಳ ಹೆಸರನ್ನೇ ನಾಮಕರಣ ಮಾಡಲಾಯಿತು. ತದನಂತರ ಗ್ರಾಮಕ್ಕೆ ಶೀಬಿನಯ್ಯನಪಾಳ್ಯ ಎಂದು ಮರುನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿ–ಬಿಳಿ ಕಲ್ಲುಗಳಿಂದ ಕೂಡಿದ ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದ ಸುತ್ತ ಸಣ್ಣ ಗುಡ್ಡಗಳಿವೆ. ಜುಂಜಪ್ಪನ ಗುಡ್ಡೆ ಹಾಗೂ ಹೊಸ ಕಟ್ಟೆಗಳಿವೆ.

ಗ್ರಾಮ ಕುರುಚಲು ಗಿಡದ ಅರಣ್ಯ ಪ್ರದೇಶವಿದ್ದು ಪ್ರಾಣಿಗಳಾದ ಹಂದಿ, ಚಿರತೆ, ಮೊಲ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕಾಗೆ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ಒಂದು ಹಳ್ಳ ಹಾಗೂ ಒಂದು ಹೊಸಕಟ್ಟೆ ಕೆರೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳಿದ್ದು ೫ ಸಿಸ್ಟರ್ನ್‌ಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೭೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೮೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೩೦ ಮತ್ತು ಹೆಂಗಸರು ೨೫೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಗುಡಿಸಲು ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಎತ್ತಿನಗಾಡಿಯಿದ್ದು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ಹೂವು ಬೆಳೆಯುತ್ತಾರೆ. ಶೇಂಗಾ ಹಾಗೂ ಹೂವು ಗ್ರಾಮದ ವ್ಯಾಪಾರದಲ್ಲಿನ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ.

ಗ್ರಾಮದಲ್ಲಿ ಶಿಕ್ಷಣ ಇಲಾಖೆ ಹಾಗೂ ಕೆಎಸ್‌ಆರ್‌ಟಿಸಿ ಸೇರಿದಂತೆ ೪ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಬಡಗಿ, ೩ ಜನ ಕಮ್ಮಾರರು, ಟೈಲರಿಂಗ್‌ನಂತಹ ಆಧುನಿಕ ಕೆಲಸ ಮಾಡುವಂತಹ ಒಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕವಣದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕವಣದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕವಣದಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಇಲ್ಲಿ ಮೊಬೈಲ್‌ನಂತಹ ದೂರಸಂಪರ್ಕ ಸಾಧನಗಳಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು, ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೩.೮%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಕೊಲ್ಲಾಪುರದಮ್ಮ, ದಂಡಿನಮಾರಮ್ಮ, ಜುಂಜಪ್ಪ ದೇವಾಲಯವಿದೆ. ಪ್ರತಿ ವರ್ಷ ಕೊಲ್ಲಾಪುರದಮ್ಮನ ಆರತಿಯನ್ನು ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಶ್ರೀನಿವಾಸಪುರ

ಶ್ರೀನಿವಾಸಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೯ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೪೨೯.೧೦ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ. ವ್ಯಕ್ತಿ ಮೂಲದಿಂದ ಗ್ರಾಮಕ್ಕೆ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ. ಅಯ್ಯನತೋಪು, ದೊಡ್ಡಚಿಕ್ಕಯ್ಯನ ತೋಪು ಇದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ ಮತ್ತು ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದಲ್ಲಿ ಭೂತಪ್ಪನ ಕೆರೆಯಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ ಗ್ರಾಮದಲ್ಲಿ ಹತ್ತು ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಗೊಲ್ಲ ಜನಾಂಗದವರೆ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ, ನಾಯಕ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದಲ್ಲಿ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ.

ಒಟ್ಟು ೯೮ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೪೬೪ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು ೨೩೦, ಹೆಣ್ಣು ೨೩೪ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್ ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ

ಈ ಗ್ರಾಮವು ರಸ್ತೆಗಳು ಮತ್ತು ಚರಂಡಿ ವ್ಯವಸ್ಥೆ ಶೌಚಾಲಯ ವ್ಯವಸ್ಥೆಯನ್ನು ಒಳಗೊಂಡಿದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮುಂತಾದ ಬೆಳೆಗಳನ್ನು ಬೆಳೆಯುತ್ತಾರೆ ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ಮೂರು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡು ಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಗರಣಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ ಒಟ್ಟು ಒಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಗರಣಿ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಕಾರ್ಯ ನಿರ್ವಹಿಸುತ್ತಿದ್ದಾರೆ ಈ ಅಂಗನವಾಡಿ ಕೇಂದ್ರದಲ್ಲಿ ಒಟ್ಟು ೨೭ ವಿದ್ಯಾರ್ಥಿಗಳಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ಒಟ್ಟು ೫೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರ ಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೯.೩೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು ಎರಡು ಅಂಗಡಿಗಳಿವೆ ಈ ಗ್ರಾಮದಲ್ಲಿ ಜ್ವರ ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡು ಬರುತ್ತವೆ. ೧ ಕರುಗಲ್ಲು ಇದೆ.

ಗ್ರಾಮದಲ್ಲಿ ವೆಂಕಟರಮಣಸ್ವಾಮಿ, ಕೊಲ್ಲಾಪುರದಮ್ಮ, ಪಾಲನಾಯಕ, ಗೌಡಚಂದ್ರ, ಮಾರಮ್ಮ, ಭೂತಪ್ಪ ದೇವಾಲಯಗಳಿವೆ. ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಶ್ಯಾನಗನಹಳ್ಳಿ

ಶ್ಯಾನಗನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೧ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೧೫೩.೩೫ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ. ಶ್ಯಾನುಭೋಗ ಶಬ್ದ ಕಾಲಾಂತರದಲ್ಲಿ ಶ್ಯಾನಗ ಆಗಿ ಶ್ಯಾನಗನಹಳ್ಳಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪಾಡುಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೦೨ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಸಾದರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ರೆಡ್ಡಿ, ನಾಯಕ ಜನಾಂಗ ಕಿರು ಸಮುದಾಯವಾಗಿದೆ ಎಸ್.ಸಿ. ಜನಾಂಗ ಇಲ್ಲವೇ ಇಲ್ಲ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ

ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೫೬ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೨೩೯ ಜನಸಂಖ್ಯೆ ಇದೆ. ಗಂಡು ೧೨೩, ಹೆಣ್ಣು ೧೧೬ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಈ ಗ್ರಾಮದಲ್ಲಿ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗು ತರಕಾರಿಗಳನ್ನು ಬೆಳೆಯುತ್ತಾರೆ,

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ, ಹಾಗೂ ಸಾರಿಗೆ ಇಲಾಖೆಗಳಿಗೆ ಸೇರಿದ ಒಟ್ಟು ೦೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಚಿಕ್ಕದಾಳವಟ್ಟ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಚಿಕ್ಕದಾಳವಟ್ಟ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಗರಣಿ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ೨೩ ಮಕ್ಕಳಿದ್ದು ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯನ್ನು ಹೊಂದಿದ್ದು ೫೭ ವಿದ್ಯಾರ್ಥಿಗಳು ಉಚಿತ ವಿದ್ಯಾಭ್ಯಾಸ ಪಡೆಯುತ್ತಿದ್ದಾರೆ, ಒಟ್ಟು ೩ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೭.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೋಟೇಲ್ ಇದ್ದು, ಎರಡು ಅಂಗಡಿಗಳಿವೆ. ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮಾರಮ್ಮದೇವಿ, ಆಂಜನೇಯ ದೇವಾಲಯಗಳಿವೆ. ಮಾರಮ್ಮದೇವಿಗೆ ಪ್ರತಿ ವರ್ಷ ಅದ್ದೂರಿಯಾಗಿ ಜಾತ್ರೆ ನಡೆಯುತ್ತದೆ. ಹರಕೆ ಹೊರುವ ಮತ್ತು ಬಲಿ ನೀಡುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಶೋಬೇನಹಳ್ಳಿ

ಶೋಬೇನಹಳ್ಳಿ ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೭ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೫೩೨.೦೦ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ.

ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಕಲ್ಲು, ಕಪ್ಪು ಮಣ್ಣಿನ ಭೂಮಿಯನ್ನು ಹೊಂದಿದೆ. ೫೦ ಹೆಕ್ಟೇರ್ ರಕ್ಷಿತ ಅರಣ್ಯವನ್ನು ಹೊಂದಿರುವುದರಿಂದ ಪ್ರಾಣಿಗಳಾದ ನರಿ,

ತೋಳ, ಕರಡಿ, ಮೊಲ ಹಾಗೂ ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ. ಬ್ರಹ್ಮಸಮುದ್ರ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಒಟ್ಟು ೭೪ ಮನೆಗಳನ್ನು ಹೊಂದಿದ್ದು ೨೫೮ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಒಕ್ಕಲಿಗ, ನಾಯಕ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ವ್ಯವಸಾಯ ಮುಖ್ಯ ಉದ್ಯೋಗವಾಗಿದ್ದು ರಾಗಿ, ಭತ್ತ, ಶೇಂಗಾ ಬೆಳೆಯುತ್ತಾರೆ. ಶಿಕ್ಷಣ ಹಾಗೂ ಪೊಲೀಸ್ ಇಲಾಖೆಯಲ್ಲಿ ಐದು ಜನ ಸೇವೆ ಸಲ್ಲಿಸುತ್ತಿದ್ದಾರೆ.

ಮಧುಗಿರಿ ವಿಧಾನಸಭಾಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಇಟಕದಿಬ್ಬನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬ್ರಹ್ಮಸಮುದ್ರ ಗ್ರಾಮಪಂಚಾಯ್ತಿ ಆಡಳಿತಕ್ಕೆ ಒಳಪಟ್ಟಿದೆ. ಒಬ್ಬರು ಸದಸ್ಯರು ಹಾಗೂ ಒಬ್ಬರು ಪಂಚಾಯ್ತಿ ನೌಕರರಾಗಿದ್ದಾರೆ. ಬ್ರಹ್ಮಸಮುದ್ರ ಅಂಚೆ ಸಂಪರ್ಕ ಒದಗಿಸುತ್ತಿದೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲ ಚೇತನ, ವಿಧವಾ ವೇತನ ಸೌಲಭ್ಯಗಳು ಚಾಲ್ತಿಯಲ್ಲಿವೆ. ಒಂದು ಸ್ತ್ರೀಶಕ್ತಿ ಸಂಘ ಹಾಗೂ ಒಂದು ಸ್ವಸಹಾಯ ಸಂಘವಿದೆ.

ಅಂಗನವಾಡಿ ಕೇಂದ್ರವಿದ್ದು ೧೨ ಮಕ್ಕಳು, ಒಬ್ಬರು ಕಾರ್ಯಕರ್ತೆ ಇದ್ದಾರೆ. ಸರ್ಕಾರಿ ಕಿರಿಯ ಪಾಠಶಾಲೆಯಲ್ಲಿ ೧೯ ಮಕ್ಕಳು ಇಬ್ಬರು ಶಿಕ್ಷಕರಿದ್ದಾರೆ. ಬಿಸಿಯೂಟ, ಕ್ಷೀರಭಾಗ್ಯ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೯.೪೨% ಇದೆ.

ಗ್ರಾಮದಲ್ಲಿ ಶನಿಮಹಾತ್ಮ, ಬೇಡರ ಕಣ್ಣಪ್ಪ, ಮಾರಮ್ಮನ ದೇವಸ್ಥಾನವಿದೆ. ಮಾರಮ್ಮನ ಆರತಿಯನ್ನು ಹರಕೆ ಹಾಗೂ ಬಲಿಯೊಂದಿಗೆ ಆಚರಿಸುತ್ತಾರೆ. ಇದು ಊರ ಹಬ್ಬವಾಗಿದೆ. ಈ ಸಂದರ್ಭದಲ್ಲಿ ಜನಪದ ಕಲೆಗಳಾದ ಕೋಲಾಟ, ತಮಟೆ ಹಾಗೂ ಅಸಾದಿ ಕುಣಿತ ಏರ್ಪಡುತ್ತದೆ. ಸರಗ ಹಾಕುವ ವಿಶೇಷ ಸಂಪ್ರದಾಯವಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ. ಗೋವಿಂದಪ್ಪ ಎನ್ನುವ ೪೦ ವರ್ಷ ನಾಯಕ ಜನಾಂಗದವರು ನಾಟಕ ಕಲಾವಿದರಾಗಿದ್ದಾರೆ. ಮಾರಣ್ಣ ಎನ್ನುವವರು ಶನಿಮಹಾತ್ಮನ ಕಥೆ ಓದುವವರಾಗಿದ್ದಾರೆ.

## ಸಿಡಿದರಗಲ್ಲು

ಸಿಡಿದರಗಲ್ಲು ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೨.೬೧ ಹೆಕ್ಟೇರ್ ಕಂದಾಯ ಗ್ರಾಮವಾಗಿದ್ದು ೧೫೯೭ ಜನಸಂಖ್ಯೆಯನ್ನು ಹೊಂದಿದೆ.

ಈ ಗ್ರಾಮಕ್ಕೆ ಸಿಡಿದರಗಲ್ಲು ಎನ್ನುವ ಹೆಸರು ಬಂದಿದ್ದಕ್ಕೆ ಕಾರಣವನ್ನು ಹಿರಿಯರು ಹೇಳುವಂತೆ ಬಹಳ ವರ್ಷಗಳ ಹಿಂದೆ ಒಬ್ಬ ಬಳೆ ಮಾರುವವನೊಬ್ಬನು ಊರೂರಿಗೆ ಬಳೆ ಮಾರುವ ಸಲುವಾಗಿ ಬಂದಿದ್ದಾಗ ಒಂದು ದಿನ ಈ ಊರಿನ ಒಂದು ಗುಟ್ಟದ ಮೇಲೆ ಅಡುಗೆ ಮಾಡುತ್ತಿರುವಾಗ ಕಾದ ಕಲ್ಲು ಸಿಡಿದುಬಿತ್ತಂತೆ. ಆದ ಕಾರಣ ಈ ಊರಿಗೆ ಸಿಡಿದರಗಲ್ಲು ಎನ್ನುವ ಹೆಸರನ್ನು ನಾಮಕರಣ ಮಾಡಿದ್ದಾರಂತೆ.

ಈ ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕಪ್ಪು ಮತ್ತು ಬಿಳಿ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದ ಪಶ್ಚಿಮಕ್ಕೆ ಕರೆಕಲ್ಲಿನ ಬಂಡೆಗಳು, ಅರೆಗುಟ್ಟೆ, ದೋಪುಗುಂಟೆ, ಬಾಣದಗುಟ್ಟೆ, ಕಿರುಬನಗುಟ್ಟೆಗಳಂತಹ ಗುಟ್ಟೆಗಳನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಕೂಡ ಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ, ಕರಡಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ.

ಪಕ್ಷಿಗಳಾದ ನವಿಲು, ಕೋಗಿಲೆ ಮೊದಲಾದ ಪಕ್ಷಿಗಳು ಕೂಡ ಕಂಡುಬರುತ್ತವೆ. ಈ ಗ್ರಾಮದಲ್ಲಿ ಜನರು ನಾಟಿಹಸು, ಸೀಮೆಹಸು, ಎಮ್ಮೆಗಳನ್ನು ಸಾಕಿದ್ದು ಕುರಿ-ಮೇಕೆಗಳನ್ನು ಸಾಕಿರುವುದು ಕೂಡ ಕಂಡುಬರುತ್ತದೆ. ಸಾಕು ಪಕ್ಷಿಗಳಾದ ನಾಟಿಕೋಳಿಗಳು ಒಂದು ಸಾವಿರಕ್ಕೂ ಅಧಿಕವಾಗಿರುವುದು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆಯ ಪ್ರಮಾಣವು ಕಡಿಮೆಯಾಗಿದ್ದು ವಾರ್ಷಿಕ ಸರಾಸರಿ ೪೫೫.೯ ಮಿಮೀ ಮಳೆ ಬಿದ್ದಿರುವುದು ಕಂಡುಬರುತ್ತದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಸುವರ್ಣಮುಖಿ ಎಂಬ ಹೊಳೆ ಇದ್ದು ನೀರಿಲ್ಲದಂತೆ ಬತ್ತಿಹೋಗಿದೆ. ಯಾವುದೇ ಹಳ್ಳಗಳು ಇಲ್ಲದ ಕಾರಣ ಗ್ರಾಮಕ್ಕೆ ಕುಡಿಯುವ ನೀರಿನ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಮೂರು ಕೊಳವೆ ಬಾವಿಗಳಿವೆ.

ಈ ಒಂದು ಗ್ರಾಮದಲ್ಲಿ ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕಮ್ಮಾರ, ಬಡಗಿ ಜನಾಂಗದವರು ಗ್ರಾಮದಲ್ಲಿದ್ದು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆಯು ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೮೫೦ ಮನೆಗಳನ್ನು ಹೊಂದಿರುವ ಗ್ರಾಮವು ೨೦೦೧ ರ ಜನಗಣತಿ ಪ್ರಕಾರ ೧೨೯೭ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗಂಡು ೬೬೫, ಹೆಣ್ಣು ೬೩೨ ಜನಸಂಖ್ಯೆ ಇದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಹೆಂಚಿನ ಮನೆ, ಇಡಿಕೆ ಮನೆಗಳು ಕಂಡುಬರುತ್ತವೆ.

ಈ ಗ್ರಾಮದಲ್ಲಿ ರಾಗಿಮುದ್ದೆ ಮತ್ತು ಅನ್ನ ಸಾಂಬಾರ್ ಪ್ರಮುಖವಾದ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಇಂದಿರಾ ಆವಾಸ್, ಆಶ್ರಯ, ಅಂಬೇಡ್ಕರ್ ವಸತಿ ಹಾಗೂ ಜನತಾ ಯೋಜನೆಯಡಿ ೧೮೨ ಮನೆಗಳಾಗಿವೆ. ಇಲ್ಲಿ ಒಂದು ಸಾಂಪ್ರದಾಯಿಕ ಎತ್ತಿನಗಾಡಿ ಇದ್ದು ದ್ವಿಚಕ್ರ ವಾಹನಗಳು ಹಾಗೂ ಟ್ರ್ಯಕ್ಟರ್‌ಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ರಸ್ತೆ ವ್ಯವಸ್ಥೆ ಹಾಗೂ ಚರಂಡಿ ವ್ಯವಸ್ಥೆಯನ್ನು ಹೊಂದಿದೆ. ಗ್ರಾಮದಲ್ಲಿ ೧೫೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ. ವ್ಯವಸಾಯವು ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಜೋಳಗಳಂತಹ ಮುಂತಾದ ಬೆಳೆಗಳನ್ನು ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಾಗಿ ಹೂವಿನ ಗಿಡ, ಅಡಿಕೆ, ತೆಂಗನ್ನು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯವಾದಂತಹ ಸರಕಾಗಿದೆ.

ಪೊಲೀಸ್, ಶಿಕ್ಷಕರು, ವಕೀಲರು ಸೇರಿದಂತೆ ೧೭ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಇದರಲ್ಲಿ ಐದು ಜನ ಇಂಜಿನಿಯರ್ ಆಗಿ ಐಟಿ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈ ಗ್ರಾಮದಲ್ಲಿ ಸಾಂಪ್ರದಾಯಿಕ ಉದ್ಯೋಗ ಮಾಡುವಂತಹ ಕಮ್ಮಾರ-೩, ಚಿತ್ರಕಾರ-೧ ಹಾಗೂ ಬಡಿಗತನ-೧ ಇದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ೬ ಜನ ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಒಟ್ಟು ೪ ಜನ ಸದಸ್ಯರನ್ನು ಹೊಂದಿದ್ದು ಈ ಗ್ರಾಮದ ಒಬ್ಬ ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿಯು ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಡವನಹಳ್ಳಿ ಗ್ರಾಮ ಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಬೇರೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮವು ಅಂಚೆ ವ್ಯವಸ್ಥೆಯನ್ನು ಹೊಂದಿದ್ದು ಸ್ಥಿರ ದೂರವಾಣಿ ಹಾಗೂ ೬೦೦ ಕ್ಕೂ ಹೆಚ್ಚು ಚರ ದೂರವಾಮಿಗಳು ದೂರಸಂಪರ್ಕವಾದ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ, ವ್ಯಾಜ್ಯಗಳು ಗ್ರಾಮದ ಹಿರಿಯರು, ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಈ ಗ್ರಾಮದಲ್ಲಿ ನಾಲ್ಕು ಸ್ತ್ರೀಶಕ್ತಿ ಸಂಘಗಳು ಹಾಗೂ ಒಂದು ಧರ್ಮಸ್ಥಳ ಸಂಘವಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೭೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ಒಟ್ಟು ೧೩೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂವರು ಶಿಕ್ಷಕಿಯರು ಹಾಗೂ ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೩%. ಗ್ರಾಮದಲ್ಲಿ ಯಾವುದೇ ಆಸ್ಪತ್ರೆಗಳಿಲ್ಲ. ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾ ವೇತನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ. ಕಾಫಿ ಮತ್ತು ಟೀನಂತಹ ಒಂದು ಹೋಟೆಲ್ ಇದ್ದು ಮೂರು ಅಂಗಡಿಗಳಿವೆ.

ಗ್ರಾಮದಲ್ಲಿ ಐದು ದೇವಾಲಯಗಳಿವೆ. ರಂಗನಾಥಸ್ವಾಮಿ ದೇವಾಲಯ, ಆಂಜನೇಯ (ಮಾರುತಿ), ಮಾರಮ್ಮ, ಬಸವಣ್ಣ, ಎಲ್ಲಮ್ಮನ ದೇವಾಲಯಗಳಿವೆ. ಈ ಗ್ರಾಮದವರು ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಪ್ರತಿ ವರ್ಷ ಅದ್ದೂರಿಯಿಂದ ಮಾರಮ್ಮನ ಜಾತ್ರೆ ಹಾಗೂ ಉತ್ಸವಗಳನ್ನು ನಡೆಸುತ್ತಾರೆ. ಹರಕೆ ಹೊರುವ ಮತ್ತು ಬಲಿ ನೀಡುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಹಲವು ಜನ ರಂಗಭೂಮಿಯಲ್ಲಿ ತೊಡಗಿಸಿಕೊಂಡಿದ್ದು ನಾಟಕ ಕ್ಷೇತ್ರದಲ್ಲಿ ಬಹಳ ಆಸಕ್ತಿ ಉಳ್ಳವರಾಗಿದ್ದಾರೆ.

ಗ್ರಾಮದಲ್ಲಿ ವರ್ಷಕ್ಕೊಮ್ಮೆ ಹಲವಾರು ಸಾಮಾಜಿಕ ಹಾಗೂ ಪೌರಾಣಿಕ ನಾಟಕಗಳನ್ನು ಅಭಿನಯಿಸುತ್ತಾರೆ.

ಈ ಗ್ರಾಮದಲ್ಲಿ ೪೮ ವರ್ಷದ ಬ್ರಹ್ಮಾಚಾರ್ಯ ಎನ್ನುವವರು ಹಾಗೂ ೪೧ ವರ್ಷದ ಶ್ರೀನಿವಾಸಾಚಾರ್ಯ ಎನ್ನುವವರು ವಿಶ್ವಕರ್ಮ ಜನಾಂಗದವರು. ಇವರು ನಾಟಕ ಕಲಿಸುವ ಶಿಕ್ಷಕರಾಗಿದ್ದು ಈ ಗ್ರಾಮದಲ್ಲಿ ೧೫ ರಿಂದ ೨೦ ಜನ ನಾಟಕವನ್ನು ಆಡುವ ಕಲಾವಿದರಿದ್ದಾರೆ.

## ಸರ್ಜಮ್ಮನಹಳ್ಳಿ

ಸರ್ಜಮ್ಮನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೩೭.೪೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಸರ್ಜಮ್ಮನಹಳ್ಳಿ ಎಂದು ಈ ಗ್ರಾಮಕ್ಕೆ ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ರತ್ನಗಿರಿಯ ಪಾಳೆಯಗಾರರು ತನ್ನ ಮಗಳಾದ ಅಂದ ಸರ್ಜಮ್ಮನನ್ನು ಮದುವೆ ಮಾಡಿಸಿ ಈ ಊರಿಗೆ ಸೊಸೆಯಾಗಿ ಕಳುಹಿಸಿದರಂತೆ. ಆದ ಕಾರಣ ಪಾಳೇಗಾರರ ಮಗಳ ಹೆಸರನ್ನೇ ಈ ಗ್ರಾಮಕ್ಕೆ ನಾಮಕರಣ ಮಾಡಲಾಗಿದೆ ಎಂದು ಹೇಳುತ್ತಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಈ ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ಚಿರತೆ, ನರಿ, ತೋಳ, ಕಾಡುಹಂದಿ ಕಂಡುಬರುತ್ತವೆ.

ಪಕ್ಷಿಗಳಾದ ಗಿಳಿ, ನವಿಲು, ಮರಕುಟಿಕ, ಗುಬ್ಬಚ್ಚಿ, ಕಾಗೆ ಮೊದಲಾದ ಪಕ್ಷಿಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ.

ಗ್ರಾಮದಲ್ಲಿ ನಾಟಿಹಸು, ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಕುಡಿಯುವ ನೀರಿನ ಸಲುವಾಗಿ ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗೊಲ್ಲ, ನಾಯಕ, ಆದಿಕರ್ನಾಟಕ ಜನಾಂಗದವರು ಕಿರು ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೫೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೯೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಅದರಲ್ಲಿ ೧೪೩ ಗಂಡು ಮತ್ತು ೧೪೭ ಜನ ಹೆಂಗಸರು ಇದ್ದಾರೆ.

ಎರಡು ಸಾಂಪ್ರದಾಯಿಕ ಎತ್ತಿನ ಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ಆಧುನಿಕ ವಾಹನವಾದ ದ್ವಿಚಕ್ರ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿಯ ರಸ್ತೆಯನ್ನು ವ್ಯವಸ್ಥೆಯನ್ನು ಹೊಂದಿದೆ. ಗ್ರಾಮದಲ್ಲಿ ೧೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ರಾಗಿ, ಭತ್ತ, ತೆಂಗು ಮತ್ತು ಹೂವು ಬೆಳೆಯುತ್ತಾರೆ. ತೆಂಗು ಹಾಗೂ ಹೂವು ಗ್ರಾಮದ ವ್ಯಾಪಾರದಲ್ಲಿನ ಬಹುಮುಖ್ಯ ಸರಕಾಗಿದೆ. ಗ್ರಾಮದಲ್ಲಿ ಕೂಲಿ ಮಾಡುವವರೂ ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಚಂದ್ರಗಿರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಟಗಾರ್ಲಹಳ್ಳಿ ತಾಲ್ಲೂಕು ಪಂಚಾಯ್ತಿ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಂದ್ರಗಿರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚಂದ್ರಗಿರಿ ಅಂಚೆ ಕಛೇರಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಚರ ದೂರವಾಣಿ ದೂರಸಂಪರ್ಕ ಸಾಧನಗಳಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ಬಡವನಹಳ್ಳಿ ಪೊಲೀಸ್ ಠಾಣಾ ಮುಖೇನ ಬಗೆಹರಿಯುತ್ತದೆ. ನ್ಯಾಯಾಲಯಗಳಿಗೆ ಸಂಬಂಧಿಸಿದಂತೆ ತಾಲ್ಲೂಕಿನ ಮಧುಗಿರಿಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಬ್ಬರು ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೫೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಮೂರು ದೇವಾಲಯಗಳಿವೆ. ಆಂಜನೇಯ, ಲಕ್ಷ್ಮಿ ಹಾಗೂ ಬಸವಣ್ಣ ದೇವಸ್ಥಾನಗಳಿವೆ. ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಸೋದೇನಹಳ್ಳಿ

ಸೋದೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೨೪.೧೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಸಾವಂದಿಹಳ್ಳಿ > ಸೋದೇನಹಳ್ಳಿ. ಸಾವಂದಯ್ಯ – ವೀರಭದ್ರ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಈ ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ, ನರಿ, ತೋಳ, ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗಿಡುಗ, ಮರಕುಟಿಕ ಮೊದಲಾದ ಪಕ್ಷಿಗಳು ಅಧಿಕ ಸಂಖ್ಯೆಯಲ್ಲಿ ಕಂಡುಬರುತ್ತವೆ. ಗ್ರಾಮದಲ್ಲಿ ಎಮ್ಮೆ, ಹಸು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ತುಂಬಿ, ಹರಿದು ತುಂಬಾ ವರ್ಷಗಳೇ ಕಳೆದಿವೆ. ಮಳೆಗಾಲದಲ್ಲಿ ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩೦ ಕ್ಕಿಂತ ಹೆಚ್ಚು ಸಾರ್ವಜನಿಕ ನಲ್ಲಿಗಳಿದ್ದು ೨ ಟ್ಯಾಂಕ್‌ಗಳಿವೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಈಡಿಗರು, ವಿಶ್ವಕರ್ಮ, ಕೊರಮ ಜನಾಂಗದವರು ಗ್ರಾಮದಲ್ಲಿದ್ದು ವಿಶ್ವಕರ್ಮ ಜನಾಂಗ ಕಿರು ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೨೧೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೯೧೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಅದರಲ್ಲಿ ೪೯೯ ಗಂಡು ಮತ್ತು ೪೧೬ ಜನ ಹೆಂಗಸರು ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆಗಳಿವೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳ ಜೊತೆಗೆ ಆಧುನಿಕ ವಾಹನವಾದ ದ್ವಿಚಕ್ರ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆಯನ್ನು ಹೊಂದಿದೆ. ಗ್ರಾಮದಲ್‌ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ಶೇಂಗಾ, ರಾಗಿ ಮತ್ತು ಜೋಳ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಅವರೆ, ಸೂರ್ಯಕಾಂತಿ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ತೆಂಗು, ಮುಸುಕಿನಜೋಳ ಬೆಳೆಯುತ್ತಾರೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆಯಿದ್ದರೂ ಬರಗಾಲದ ಕಾರಣವಾಗಿ ನೀರಿಲ್ಲದಿರುವುದರಿಂದ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಒಬ್ಬರು ಪೊಲೀಸ್ ಇಲಾಖೆಯಲ್ಲಿ ಸರ್ಕಾರಿ ನೌಕರಿಯಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವವರು

ಮೂವರು ಗಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಚಂದ್ರಗಿರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಇಬ್ಬರು ಪಂಚಾಯ್ತಿಯ ನೌಕರರು ಮತ್ತು ಒಬ್ಬರು ಸದಸ್ಯರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಂದ್ರಗಿರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚಂದ್ರಗಿರಿ ಅಂಚೆ ಕಛೇರಿ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ೩ ಸ್ತ್ರೀಶಕ್ತಿ ಸಂಘಗಳು, ೧೧ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೭೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೨೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಐದು ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದು ಇಬ್ಬರು ಅಡುಗೆಯವರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೫೬.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ೫ ಅಂಗಡಿಗಳು ಹಾಗೂ ೧ ಹೋಟೆಲ್‌ಗಳಿವೆ.

ಗ್ರಾಮದಲ್ಲಿ ೫ ದೇವಾಲಯಗಳಿವೆ. ರಂಗನಾಥಸ್ವಾಮಿ, ಆಂಜನೇಯ, ಆನೆಲಿಂಗೇಶ್ವರ, ಮಾರಮ್ಮ, ಈಶ್ವರ ದೇವಾಲಯಗಳಿವೆ. ಗ್ರಾಮದಲ್ಲಿ ಪ್ರತಿವರ್ಷ ಶ್ರೀ ರಂಗನಾಥಸ್ವಾಮಿ ಜಾತ್ರೆಯನ್ನು ವೈಭವದಿಂದ ಆಚರಿಸುವರು. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಸಜ್ಜೆ ಹೊಸಳ್ಳಿ

ಸಜ್ಜೆಹೊಸಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೪.೧೪ ಹೆಕ್ಟೇರ್ ಸುಮಾರು ೩೦೦ ವರ್ಷಗಳ ಇತಿಹಾಸವನ್ನು ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಈ ಗ್ರಾಮಕ್ಕೆ ಸಜ್ಜೆಹೊಸಳ್ಳಿ ಎಂದು ನಾಮಕರಣ ಮಾಡಲು ಒಂದು ಕಾರಣವಿದೆ. ಮುಂಚೆ ಈ ಗ್ರಾಮಕ್ಕೆ ಬರೀ ಹೊಸಳ್ಳಿ ಎಂದು ಹೆಸರಿತ್ತು. ಆದರೆ ಈ ಗ್ರಾಮದಲ್ಲಿ ಹೆಚ್ಚು ಸಜ್ಜೆ ಕಾಳುಗಳನ್ನು ಬೆಳೆಯುತ್ತಿದ್ದರು. ಆದ ಕಾರಣ ಈ ಗ್ರಾಮಕ್ಕೆ ಸಜ್ಜೆಹೊಸಳ್ಳಿ ಎಂದು ನಾಮಕರಣ ಮಾಡಲಾಯಿತು.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಮತ್ತು ಕಪ್ಪು ಕಲ್ಲುಗಳಿಂದ ಕೂಡಿದ್ದು ಕಪ್ಪು ಮತ್ತು ಬಿಳಿಮಣ್ಣಿನ ಫಲವತ್ತಾದ ವ್ಯವಸಾಯ ಯೋಗ್ಯ ಭೂಮಿಯನ್ನು ಹೊಂದಿದೆ.

ಈ ಗ್ರಾಮದ ಹೊರಭಾಗದಲ್ಲಿ ರಕ್ಷಿತಾರಣ್ಯವಿದ್ದು ಪ್ರಾಣಿಗಳಾದ ಕಾಡುಹಂದಿ, ಜಿಂಕೆ, ಕರಡಿ, ಕಾಡುಮೊಲ ಮೊದಲಾದ ಪ್ರಾಣಿಗಳು ಕಾಣಸಿಗುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೌಜುಗ, ಬೆಳವ ಕಾಗೆ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎತ್ತು, ಎಮ್ಮೆ, ಸೀಮೆಹಸು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಹೆಚ್ಚು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಈ ಗ್ರಾಮಕ್ಕೆ ಯಾವುದೇ ರೀತಿಯ ನೀರಿನ ವ್ಯವಸ್ಥೆ ಇಲ್ಲದೇ ಇದ್ದು ಪ್ರಾಣಿ–ಪಕ್ಷಿಗಳಿಗೆ ಕುಡಿಯುವ ನೀರಿನ ತೊಂದರೆ ಉಂಟಾಗಿದೆ. ೧ ಬಾವಿಯಿದ್ದು ಯಾವುದೇ ಬಾವಿಯಲ್ಲೂ ನೀರಿನ ಅಂಶ ಇರುವುದು ಕಂಡುಬಂದಿಲ್ಲ. ಸಂಪೂರ್ಣವಾಗಿ ಬತ್ತಿಹೋಗಿವೆ. ೨ ಕೊಳವೆಬಾವಿಗಳಿದ್ದು ರೈತರಿಗೆ ಸ್ವಲ್ಪ ಮಟ್ಟಿಗೆ ಸಹಾಯಕವಾಗಿವೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಗ್ರಾಮದಲ್ಲಿ ೫೦ ಸಾರ್ವಜನಿಕ ನಲ್ಲಿಗಳು ಇದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿದ್ರಾವಿಡ, ಆದಿಕರ್ನಾಟಕ, ನಾಯಕ, ಗೊಲ್ಲ ಜನಾಂಗದವರು ಸಹ ಇರುವುದು ಕಂಡುಬರುತ್ತದೆ. ಅಲ್ಪಸಂಖ್ಯಾತರಾದ ಮುಸ್ಲಿಂ ಜನಾಂಗದವರು ಸಹ ಇರುವುದು ಕಂಡುಬರುತ್ತದೆ. ನಾಯಕ ಜನಾಂಗದವರು ಕಿರು ಸಮುದಾಯದವರಾಗಿದ್ದಾರೆ. ಇಲ್ಲಿ ಮುಸ್ಲಿಂ ಜನಾಂಗ ಇದ್ದರೂ ಸಹ ಅವರೂ ಕನ್ನಡ ಭಾಷೆಯನ್ನು ಹೆಚ್ಚಿಗೆ ಬಳಸುವುದು ಗಮನಾರ್ಹವಾಗಿದೆ. ಮಾತೃಭಾಷೆಯಾದ ಕನ್ನಡವನ್ನು ಹೆಚ್ಚಿಗೆ ಬಳಸುವುದು ನಾವು ನೋಡಬಹುದಾಗಿದೆ.

ಒಟ್ಟು ೩೭೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೧೧೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೬೧೨, ಹೆಂಗಸರು ೫೦೪ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ (ಮಂಗಳೂರು ಹೆಂಚು) ಮತ್ತು ಜಿಂಕ್ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ, ರೊಟ್ಟಿ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಐದು ಸಾಂಪ್ರದಾಯಿಕ ಎತ್ತಿನ ಗಾಡಿಗಳಿದ್ದು ೧೦ ಟ್ರ್ಯಕ್ಟರ್ ಹಾಗೂ ನೂರಕ್ಕೂ ಹೆಚ್ಚು ದ್ವಿಚಕ್ರ ವಾಹನಗಳಿರುವುದನ್ನು ನೋಡಬಹುದು.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೭೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಗ್ರಾಮದ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ. ಉಳಿದಂತೆ ತೊಗರಿ, ಅವರೆ, ಸೂರ್ಯಕಾಂತಿ, ತೆಂಗು ಮತ್ತು ಅಡಿಕೆ ಮುಂತಾದವುಗಳನ್ನು ಬೆಳೆಯಲಾಗುತ್ತದೆ. ವಾಣಿಜ್ಯ ಬೆಳೆಯಾಗಿ ಅಡಿಕೆಯನ್ನು ಬೆಳೆಯುತ್ತಾರೆ. ೯೦% ಕೃಷಿಯನ್ನು ನಂಬಿರುವ ಜನರನ್ನು ನಾವು ಈ ಗ್ರಾಮದಲ್ಲಿ ಗುರುತಿಸಬಹುದು.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಹಾಗೂ ಆಧುನಿಕ ಹೈನುಗಾರಿಕೆ ಎರಡೂ ಇದೆ. ಗ್ರಾಮದಲ್ಲಿ ಶಿಕ್ಷಣ ಇಲಾಖೆ, ಪೊಲೀಸ್ ಹಾಗೂ ಇತರೆ ನಾನಾ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಸುಮಾರು ೧೫ ಜನ ನೌಕರರು ಇದ್ದಾರೆ. ಗ್ರಾಮದಲ್ಲಿ ಸಾಂಪ್ರದಾಯಿಕ ಉದ್ಯೋಗ ಮಾಡುವವರಿದ್ದು ಟೈಲರ್‌ಗಳೂ ಇದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ರಂಗಾಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರು ಇದ್ದಾರೆ. ಸದರಿ ಗ್ರಾಮದಲ್ಲಿ ಗ್ರಾಮ ಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಜ್ಜೆಹೊಸಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ಒಟ್ಟು ನಾಲ್ಕು ಜನ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಖಾಸಗಿ ಮತ್ತು ಸರ್ಕಾರಿ (ಕೆಎಸ್‌ಆರ್ಟಿಸಿ) ಬಸ್ಸುಗಳ ಸೌಲಭ್ಯವಿದೆ. ಈ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘಗಳು ಹಾಗೂ ಆರು ಧರ್ಮಸ್ಥಳ ಸಂಘಗಳಿವೆ.

ಗ್ರಾಮಪಂಚಾಯ್ತಿ ವತಿಯಿಂದ ನಡೆಯುವ ಒಂದು ಗ್ರಂಥಾಲಯ ಗ್ರಾಮದಲ್ಲಿದ್ದು ವಿವಿಧ ಪ್ರಕಾರದ ೧೦೦೦ ಪುಸ್ತಕಗಳಿದ್ದು ಇಬ್ಬರು ಗ್ರಂಥ ಪಾಲಕರಿದ್ದಾರೆ. ಗ್ರಾಮದಲ್ಲಿ ವಿ.ಎಸ್.ಎಸ್.ಎನ್ ಇದ್ದು, ಆಯುರ್ವೇದ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಶಾಖೆಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೮ ಮಕ್ಕಳಿದ್ದಾರೆ (ಗಂಡು – ೪, ಹೆಣ್ಣು – ೧೪). ಒಬ್ಬರು ಕಾರ್ಯಕರ್ತೆಯಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೧೫ ವಿದ್ಯಾರ್ಥಿಗಳು (ಹೆಣ್ಣು–೪೮, ಗಂಡು ೬೭) ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಐವರು ಶಿಕ್ಷಕರು ಹಾಗೂ ಮೂವರು ಸಹಾಯಕರು ಕಾರ್ಯ ನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ,

ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೯%. ಇದೇ ಗ್ರಾಮದಲ್ಲಿ ಸುವರ್ಣಮುಖಿ ಸ್ಥಳೀಯ ಪ್ರೌಢಶಾಲೆಯಿದ್ದು ಇಲ್ಲಿ ಒಟ್ಟು ೧೨೩ ವಿದ್ಯಾರ್ಥಿಗಳು (ಗಂಡು೬೮, ಹೆಣ್ಣು-೫೫) ಇದ್ದಾರೆ. ಆರು ಜನ ಶಿಕ್ಷಕರು ಮತ್ತು ೪ ಜನ ಸಹಾಯಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೬೬.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೫ ಹೋಟೆಲ್, ೬ ಅಂಗಡಿಗಳು ಹಾಗೂ ಒಂದು ವಿದ್ಯಾರ್ಥಿನಿಲಯ (ವಸತಿ) ಇದೆ.

ಗ್ರಾಮದಲ್ಲಿ ಗಣೇಶ, ಮಾರಮ್ಮ, ಆಂಜನೇಯ, ಶನಿಮಹಾತ್ಮ ಮತ್ತು ಮುತ್ತರಾಯನ ದೇವಾಲಯವಿದ್ದು ಪ್ರತಿ ವರ್ಷ ಮಾರಮ್ಮನ ಜಾತ್ರಾ ಮಹೋತ್ಸವವನ್ನು ಅತ್ಯಂತ ವೈಭವಪೂರ್ಣವಾಗಿ ಬಲಿ ಹಾಗೂ ಹರಕೆಯೊಂದಿಗೆ ಆಚರಿಸುತ್ತಾರೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮುಸ್ಲಿಂ ಬಾಂಧವರು ಮುಸ್ಲಿಂ ಹಬ್ಬಗಳನ್ನು ಆಚರಿಸುತ್ತಾರೆ.

## ಸಜ್ಜೆ ಹೊಸಹಳ್ಳಿ ಆದಿಕರ್ನಾಟಕ ಕಾಲೋನಿ

ಸಜ್ಜೆಹೊಸಳ್ಳಿ ಆದಿಕರ್ನಾಟಕ ಕಾಲೋನಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಸಜ್ಜೆಹೊಸಳ್ಳಿಯ ಹೊರವಲಯದಲ್ಲಿದೆ.

ಒಟ್ಟು ೫೮ ಮನೆಗಳಿದ್ದು ೧೮೫ ಜನಸಂಖ್ಯೆ ಇದೆ. ಆದಿಕರ್ನಾಟಕ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ.

ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ವ್ಯವಸಾಯ ಹಾಗೂ ಕೂಲಿ ಮಾಡುವವರಿದ್ದಾರೆ. ಪೊಲೀಸ್ ಹಾಗೂ ಶಿಕ್ಷಣ ಇಲಾಖೆಯಲ್ಲಿ ೩ ಜನ ಸೇವೆ ಸಲ್ಲಿಸುತ್ತಿದ್ದಾರೆ. ಸಜ್ಜೆಹೊಸಹಳ್ಳಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಮಾರಮ್ಮನ ಗುಡಿಯಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಸಿಂಗರಾವುತನಹಳ್ಳಿ

ಸಿಂಗರಾವುತನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೮.೩೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಸಿಂಗರಾವುತ ಎಂಬ ವ್ಯಕ್ತಿಮೂಲದಿಂದ ಗ್ರಾಮಕ್ಕೆ ಈ ಹೆಸರು ಬಂದಿದೆ.

ಈ ಗ್ರಾಮದ ಪ್ರಾಚೀನ ಹೆಸರು ಚಿನ್ನದಹಳ್ಳಿ. ಅತಿ ಫಲವತ್ತಾದ ಭೂಮಿಯನ್ನು ಹೊಂದಿರುವುದರಿಂದ ಈ ಗ್ರಾಮಕ್ಕೆ ಚಿನ್ನದ ಹಳ್ಳಿ ಎಂದು ನಾಮಕರಣ ಮಾಡಲಾಗಿದೆ ಎಂದು ಹಿರಿಯರು ಹೇಳುತ್ತಾರೆ. ಆದರೆ ಇತ್ತೀಚಿನ ದಿನಗಳಲ್ಲಿ ಸಿಂಗಾರವತ್‌ನಹಳ್ಳಿ ಎಂದು ಮರು ನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿ ಕಲ್ಲುಗಳಿಂದ ಕೂಡಿದ್ದು ಕಪ್ಪು ಮತ್ತು ಬಿಳಿ ಮಿಶ್ರಿತವಾದ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕರಡಿ, ಜಿಂಕೆ, ಕತ್ತೆಕಿರುಬ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಪಕ್ಷಿಗಳಾದ ಹದ್ದು, ಗಿಳಿ, ಕೌಜುಗ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ನಾಟಿಹಸು, ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಹೆಚ್ಚು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಸುವರ್ಣಮುಖಿ ಹೊಳೆ ಇದ್ದು ನೀರಿಲ್ಲದೆ ಬತ್ತಿಹೋಗಿದೆ. ಮಳೆಗಾಲದಲ್ಲಿ ಸ್ವಲ್ಪ ಪ್ರಮಾಣದಲ್ಲಿ ನೀರು ಬಂದಾಗ ಮಾತ್ರ ಜಾನುವಾರುಗಳಿಗೆ ಹಾಗೂ ಕೃಷಿಗೆ ನೀರನ್ನು ಒದಗಿಸುತ್ತದೆ. ಸುವರ್ಣಮುಖಿ ಹೊಳೆ ಹರಿದು ಸುಮಾರು ವರ್ಷಗಳೇ ಕಳೆದವು ಎಂದು ಗ್ರಾಮಸ್ಥರು ಹೇಳುತ್ತಾರೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೪ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳಿದ್ದು

ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಲಿಂಗಾಯಿತ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗದವರು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೩೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೭೧೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೩೬೩, ಹೆಂಗಸರು ೩೫೨ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೬೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಒಂದು ಸಾಂಪ್ರದಾಯಿಕ ಎತ್ತಿನ ಗಾಡಿಯಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೩೭ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಜೋಳ, ಹಲಸಂದೆ ಬೆಳೆಯುತ್ತಾರೆ. ವಾಣಿಜ್ಯ ಬೆಳೆಯಾಗಿ ಶೇಂಗಾ, ತೆಂಗು, ಅಡಿಕೆ ಬೆಳೆಯುತ್ತಾರೆ. ತೆಂಗು ಮತ್ತು ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮಕ್ಕೆ ಸೇರಿದಂತೆ ಹೊಳೆ ಇದ್ದರೂ ನೀರಿಲ್ಲದ ಕಾರಣ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ. ಗ್ರಾಮದಲ್ಲಿ ಶಿಕ್ಷಕರು, ಇಂಜಿನಿಯರ್ ಸೇರಿದಂತೆ ಒಟ್ಟು ೧೦ ನೌಕರರು ಇದ್ದಾರೆ. ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವವರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಸಜ್ಜೆಹೊಸಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ನಾಲ್ಕು ಜನ ಸದಸ್ಯರು ಹಾಗೂ ಮೂವರು ಪಂಚಾಯ್ತಿಯ ನೌಕರರು ಇದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಜ್ಜೆ ಹೊಸಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಕಾರ್ಪೆನಹಳ್ಳಿ ಅಂಚೆ ಕಛೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ಒಂದು ಸ್ತ್ರೀಶಕ್ತಿ ಸಂಘವಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿಯಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದು ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೩.೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಎರಡು ಅಂಗಡಿಗಳು ಗ್ರಾಮದಲ್ಲಿವೆ.

ಗ್ರಾಮದಲ್ಲಿ ಆರು ದೇವಾಲಯಗಳಿವೆ. ಶ್ರೀಶೈಲ ಮಲ್ಲಿಕಾರ್ಜುನ, ಆಂಜನೇಯ, ಭಸ್ಮಾಂಗಿ ರುದ್ರ, ದುರ್ಗಮ್ಮ, ಯಲ್ಲಮ್ಮ, ಹೆಂಜಾರಪ್ಪ ದೇವಸ್ಥಾನಗಳಿವೆ. ಪ್ರತಿ ವರ್ಷವೂ ಭಸ್ಮಾಂಗಿ ಜಾತ್ರಾ ಮಹೋತ್ಸವ ಅತ್ಯಂತ ವೈಭವಪೂರ್ಣವಾಗಿ ಆಚರಿಸುತ್ತಾರೆ. ಉಳಿದಂತೆ ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಸತ್ತಿಗೇನಹಳ್ಳಿ

ಸತ್ತಿಗೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ.

ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೫೭.೨೬ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಸತ್ಯಪ್ಪ ಎಂಬ ವ್ಯಕ್ತಿ ಮೂಲ ಕ್ರಮೇಣ ಸತ್ತಿಗೆ ಆಗಿ ಸತ್ತಿಗೇನಹಳ್ಳಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ, ಒಂದು ಹಳ್ಳ ಹಾಗೂ ಒಂದು ಕಲ್ಯಾಣಿಯಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳು, ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಬೋವಿ, ಎಸ್.ಸಿ, ಮುಂತಾದ ಜನಾಂಗದವರಿದ್ದಾರೆ. ಬೋವಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೮೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೮೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೬ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ರೆಡ್ಡಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ರೆಡ್ಡಿಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ಸ್ತ್ರೀಶಕ್ತಿ ಸಂಘ ಹಾಗೂ ೮ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು

ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೨.೮%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ. ಸರ್ಕಾರಿ ಉದ್ಯೋಗದಲ್ಲಿ ೩ ಜನ ಶಿಕ್ಷಕರಿದ್ದಾರೆ.

ಗ್ರಾಮದಲ್ಲಿ ೪ ಕಲ್ಯಾಣಿ ಇದೆ. ಆಂಜನೇಯ, ಚಾಮುಂಡೇಶ್ವರಿ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಸೋಮಲಾರ

ಸೋಮಲಾರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೬೬.೦೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಶಿವನ ಮೂಲದಿಂದ ಸೋಮಲಾರ ಆಗಿದೆ. ಚಂದ್ರ > ಸೋಮನನ್ನು ಹಾರವಾಗಿ ಧರಿಸಿದವನಾದ ಶಿವನಪುರ ಎಂಬ ಅರ್ಥದಲ್ಲಿ ಈ ಶಬ್ದ ಬಳಕೆಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕಪ್ಪು ಹಾಗೂ ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸುತ್ತಲೂ ಬೆಟ್ಟಗಳನ್ನು ಹೊಂದಿದೆ. ಆವೇಕಟ್ಟೆ, ಕೆ.ಸಿ.ರೊಪ್ಪ ಹಾಗೂ ಜವಲಿಂಗಪ್ಪ ಗುಟ್ಟೆ ಇವೆ. ಗ್ರಾಮವು ಅರಣ್ಯ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಚಿರತೆ, ನರಿ, ತೋಳ, ಕರಡಿ ಮೊದಲಾದ ಪ್ರಾಣಿಗಳು ಹೆಚ್ಚಾಗಿ ಕಂಡುಬರುತ್ತವೆ. ಪಕ್ಷಿಗಳಾದ ನವಿಲುಗಳು ಸಾವಿರಕ್ಕೂ ಹೆಚ್ಚಾಗಿ ಕಾಣಸಿಗುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಸಣ್ಣ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಶೆಟ್‌ಬಣಜಿಗ ಜನಾಂಗ ಕಿರು ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೭೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೧೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೫೬ ಮತ್ತು ಹೆಂಗಸರು ೧೬೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಹಾಗೂ ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಒಂದು ಸಾಂಪ್ರದಾಯಿಕ ಎತ್ತಿನ ಗಾಡಿ, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮದಲ್ಲಿ ೯೦% ವ್ಯವಸಾಯಗಾರರಿದ್ದು ಉಳಿದಂತೆ ಗಾರೆ ಕೆಲಸ ಹಾಗೂ ಕೂಲಿ ಮಾಡುವವರಿದ್ದಾರೆ. ಶೇಂಗಾ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಅಡಿಕೆ ಹಾಗೂ ತೆಂಗು ವಾಣಿಜ್ಯ ಬೆಳೆಗಳಾಗಿವೆ.

ಗ್ರಾಮದಲ್ಲಿ ಒಂದು ಮಿನಿ ಡೈರಿಯಿದೆ. ಗ್ರಾಮದ ಹೊಂಡದಲ್ಲಿ ಮೀನುಗಾರಿಕಾ ಚಟುವಟಿಕೆಗಳು ನಡೆಯುತ್ತವೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಡಿ.ವಿ. ಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು

ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಡಿ.ವಿ.ಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಡಿ.ವಿ.ಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಡಿ.ವಿ. ಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಧರ್ಮಸ್ಥಳ ಸಂಘ, ೨ ಸ್ತ್ರೀಶಕ್ತಿ ಸಂಘ ಹಾಗೂ ೨ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೭ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಅಂಗಡಿಯಿದೆ.

ಗ್ರಾಮದಲ್ಲಿ ಆಂಜನೇಯ ದೇವಸ್ಥಾನ, ಅರಳೀಕಟ್ಟೆ ಹಾಗೂ ಅಶ್ವತ್ಥ ಕಟೆಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಸೋಂಪುರ

ಸೋಂಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೬.೨೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಶಕ್ತಿದೇವತೆಗಳ ಬಂಟನಾದ ಸೋಮದೇವತೆಯ ಹೆಸರಿನಿಂದಾಗಿ ಸೋಮಪುರ ನಂತರ ಸೋಂಪುರವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಮಲೇರಂಗನಾಥಸ್ವಾಮಿ ಬೆಟ್ಟ ಇದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ನರಿ, ತೋಳ, ಚಿರತೆ ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಪಾರಿವಾಳ, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಲಿಂಗಾಯಿತ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ವೈಷ್ಣವ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೦೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೭೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೩೦ ಮತ್ತು ಹೆಂಗಸರು ೨೪೪ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೪ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವವರೂ ಗ್ರಾಮದಲ್ಲಿದ್ದಾರೆ. ಶೇಂಗಾ, ಜೋಳ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಶಿಕ್ಷಣ ಇಲಾಖೆ, ಪೊಲೀಸ್, ನರ್ಸ್ ಸೇರಿದಂತೆ ೪ ಜನ ಸರ್ಕಾರಿ ನೌಕರರಾಗಿದ್ದು ಸಾಂಪ್ರದಾಯಿಕ ಉದ್ಯೋಗ ಮಾಡುವ ಗುಡಿಕಾರರು ಒಬ್ಬರು ಗ್ರಾಮದಲ್ಲಿರುವರು.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಮರುವೇಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಮರುವೇಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗಂಜಲಗುಂಟೆ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೫ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಲಕ್ಷ್ಮಿ, ಏಳುಮಂದೆಮ್ಮ, ಊರಮಾರಮ್ಮ, ದಂಡಿನಮಾರಮ್ಮ, ಬಸವಣ್ಣ ದೇವಾಲಯಗಳಿವೆ. ಏಳುಮಂದಮ್ಮ ಹಾಗೂ ಊರು ಮಾರಮ್ಮನ ಜಾತ್ರೆಯನ್ನು ೨೦ ವರ್ಷಗಳಿಗೊಮ್ಮೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಸೋಗೇನಹಳ್ಳಿ

ಸೋಗೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೨೮.೦೭ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗರಿ ಗುಡಿಸಲಿನಿಂದ ಮನನೆ ನಿರ್ಮಿಸಿಕೊಂಡು ನಂತರ ಊರು ಬೆಳೆಯಿತು. ಬಹಳ ಜನ ಸೋಗೆ ಮನೆಯಲ್ಲಿ ವಾಸವಾಗಿದ್ದ ನಿಸರ್ಗತನದಿಂದ ಸೋಗೇನಹಳ್ಳಿ ಎಂದು ಕರೆದರು.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು–ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮಕ್ಕೆ ಹೊಂದಿಕೊಂಡಂತೆ ಜನಕಲ್ಲು ಬೆಟ್ಟ ಮತ್ತು ಬ್ಯಾಲ್ಯ ಬೆಟ್ಟವಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಚಿರತೆ, ತೋಳ, ನರಿ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮

ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು, ೫ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಲಿಂಗಾಯಿತ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೦೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೫೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೧೯ ಮತ್ತು ಹೆಂಗಸರು ೨೩೧ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ, ತೊಗರಿ ಮತ್ತು ಮುಸುಕಿನ ಜೋಳ ಮುಖ್ಯ ಬೆಳೆಯಾಗಿದೆ. ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಗ್ರಾಮದಲ್ಲಿ ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬಿಜವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಿಜವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬಿಜವರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘ, ೨ ಮಂಜುನಾಥ ಸಂಘ ಹಾಗೂ ೨ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೯ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೯.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಮಹದೇಶ್ವರ, ಮಾರಮ್ಮ, ಮಧುರಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮನ ಜಾತ್ರೆಯನ್ನು ಆರತಿ ಮತ್ತು ಬಲಿಯೊಂದಿಗೆ ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಸೋಗೇನಹಳ್ಳಿ ಗೊಲ್ಲರಹಟ್ಟಿ

ಸೋಗೇನಹಳ್ಳಿ ಗೊಲ್ಲರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೨೮.೦೭ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮವು ಸೋಗೇನಹಳ್ಳಿ ಭೂ ವಿಸ್ತೀರ್ಣದಲ್ಲಿ ಸೇರಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಹಾಗೂ ಕಪ್ಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಜಾನಕಲ್ ಬೆಟ್ಟ, ಸೂಜಿಗಲ್ ಬೆಟ್ಟ, ಶೆಟ್ಟಿಹಳ್ಳಿ ಬೆಟ್ಟ ಹಾಗೂ ಈರಣ್ಣನ ಬೆಟ್ಟವಿದೆ.

ಗ್ರಾಮವು ಒಂದು ಸೂಜಿಗಲ್ ಅರಣ್ಯ ಪ್ರದೇಶವಿರುವುದರಿಂದ ಪ್ರಾಣಿಗಳಾದ ಚಿರತೆ, ನರಿ, ಕರಡಿ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕುಂಟೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು, ೩ ಟ್ಯಾಂಕ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಬೇರೆ ಯಾವುದೇ ಜನಾಂಗದವರಿಲ್ಲ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೮೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೧೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೦೬ ಮತ್ತು ಹೆಂಗಸರು ೨೦೯ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೨೬ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೭ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ತರಕಾರಿ, ಹೂವು ಬೆಳೆಯುವರು. ಕುರಿ ವ್ಯಾಪಾರ ಅಧಿಕವಾಗಿ ಕಂಡುಬರುತ್ತದೆ. ಗ್ರಾಮದಲ್ಲಿ ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆಯು ಕಂಡುಬರುತ್ತದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬಿಜವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬಿಜವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಬಿಜವರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೪ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೫.೩೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ೪೫ ವರ್ಷದ ಗೊಲ್ಲ ಜನಾಂಗದ ಈರಣ್ಣ ಎನ್ನುವವರು ಕೋಲಾಟ ಹೇಳಿಕೊಡುತ್ತಿದ್ದು ೧೫ ಜನರ ಗುಂಪು ಇದೆ. ಗ್ರಾಮವು ಎಲ್ಲಾ ರೀತಿಯ ಜಾನಪದ ಕೆಲಸಗಳಲ್ಲಿ ತೊಡಗಿಸಿಕೊಂಡಿದೆ.

ಗ್ರಾಮದಲ್ಲಿ ಕ್ಯಾತೆಲಿಂಗಪ್ಪ ದೇವಾಲಯ, ರಂಗನಾಥಸ್ವಾಮಿ, ವೀರಣ್ಣಸ್ವಾಮಿ ದೇವಾಲಯವಿದ್ದು ಪ್ರತಿ ವರ್ಷ ಹಾಲು ಹಬ್ಬವನ್ನು ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

**ಸೋಗೇನಹಳ್ಳಿ ಹಳೇಹಟ್ಟಿ**

ಸೋಗೇನಹಳ್ಳಿ ಹಳೇಹಟ್ಟಿ (ಹಳೇ ಗೊಲ್ಲರಹಟ್ಟಿ) ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೩ ಕಿಮೀ ದೂರದಲ್ಲಿದೆ. ಸೋಗೇನಹಳ್ಳಿಯ ಹೊರವಲಯದಲ್ಲಿದೆ.

ಒಟ್ಟು ೨೪ ಮನೆಗಳಿದ್ದು ೧೩೨ ಜನಸಂಖ್ಯೆ ಇದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ ಹಾಗೂ ೩೨ ರಿಂದ ೩೪ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶವಿದೆ. ೪೫೩.೨ ಮಿಮೀ ಮಳೆ ಬೀಳುತ್ತದೆ.

ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ಹಸು, ಎಮ್ಮೆ, ಕುರಿ ಹಾಗೂ ನಾಟಿ ಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಹಾಗೂ ಕೂಲಿ ಮಾಡುವವರು ಇದ್ದಾರೆ. ಒಬ್ಬರು ಸಾರಿಗೆ ಇಲಾಖೆಯಲ್ಲಿ ಹಾಗೂ ಒಬ್ಬರು ಶಿಕ್ಷಣ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ಬಿಜವರ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಕ್ಯಾತೆಲಿಂಗಪ್ಪ ದೇವಸ್ಥಾನವಿದೆ. ದೀಪಾವಳಿಯಂದು ಕ್ಯಾತೆದೇವರ ಉತ್ಸವ ಹೊರಡುತ್ತದೆ. ಕೋಲಾಟ ವಿಶೇಷ ಮನರಂಜನೆಯಾಗಿರುತ್ತದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

**ಸಿದ್ದಾಪುರ**

ಸಿದ್ದಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೧೮.೬೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮಕ್ಕೆ ಸಿದ್ದಾಪುರ ಎಂದು ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಹಿಂದೆ ಅನೇಕ ಸಿದ್ಧರು, ಮಹಾಪುರುಷರು ತಪಸ್ಸನ್ನು ಮಾಡಿ ಸಿದ್ಧಿಯನ್ನು ಪಡೆದಂಥ ಸ್ಥಳವಾದ್ದರಿಂದ ಈ ಗ್ರಾಮಕ್ಕೆ ಸಿದ್ದರಪುರ > ಸಿದ್ದಾಪುರ ಎಂದು ನಾಮಕರಣ ಮಾಡಲಾಗಿದೆ. ಸಿದ್ದರು ನೆಲೆಸಿದ್ದ ಸ್ಥಳವೇ ಸಿದ್ದಾಪುರ ಗ್ರಾಮವೆಂದು ಹೆಸರಾಗಿದೆ. ಗ್ರಾಮದಲ್ಲಿ ಕೋಟೆಯಿದೆ ಮತ್ತು ಸುತ್ತಲು ಕಂದಕವಿದೆ. ಇಲ್ಲಿ ದೊರೆತಿರುವ ಮಧುಗಿರಿ ೨೧ನೇ ಶಾಸನವು ತಿಳಿಸುವಂತೆ ವಿಜಯನಗರದರಸರ ಕಾಲದಲ್ಲಿ ಬಿಜ್ಜಾವರದ ಮುಮ್ಮಡಿ ಚಿಕ್ಕಪ್ಪಗೌಡನು ೧೫೯೩ ರಲ್ಲಿ ಕಟ್ಟಿಸಿದ ಗ್ರಾಮವಿದೆಂದು ತಿಳಿದುಬರುತ್ತದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಮಧುಗಿರಿ ಬೆಟ್ಟ ಹಾಗೂ ಗ್ರಾಮದ ಸುತ್ತಲೂ ಚಿಕ್ಕ ಚಿಕ್ಕ ಗುಡ್ಡಗಳು ಕಂಡುಬರುತ್ತವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ನರಿ, ಚಿರತೆ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಚಿಕ್ಕ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳು ಹಾಗೂ ೧ ಟ್ಯಾಂಕ್ ಇದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ,

ತಿಗುಳ, ಮಡಿವಾಳ, ಬೋವಿ, ಬಲಜಿಗ, ಕೊರಮ, ಲಿಂಗಾಯಿತ, ವಿಶ್ವಕರ್ಮ, ನಾಯಕ, ಶೆಟ್ರು, ಸಾದರು, ಭಜಂತ್ರಿ, ಬ್ರಾಹ್ಮಣ ಹಾಗೂ ಮುಸ್ಲಿಂ ಜನಾಂಗದವರು ಗ್ರಾಮದಲ್ಲಿದ್ದು ಮುಸ್ಲಿಂ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉಳಿದಂತೆ ಉರ್ದು, ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೭೪೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೧೩೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೫೮೬ ಮತ್ತು ಹೆಂಗಸರು ೧೫೪೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೨೧೪ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೩ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್, ಆಟೋ ಹಾಗೂ ೧೦ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೯೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಹಾಗೂ ಕೂಲಿ ಮಾಡುವವರು ಸಮಾನ ಪ್ರಮಾಣದಲ್ಲಿದ್ದು ರಾಗಿ, ಭತ್ತ, ತೆಂಗು, ಅಡಿಕೆ, ಶೇಂಗಾ ಮತ್ತು ಜೋಳ ಮುಖ್ಯ ಬೆಳೆಯಾಗಿದೆ. ತೆಂಗು, ಅಡಿಕೆ, ಹೂವು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಶಿಕ್ಷಕರು, ವೈದ್ಯರು, ಇಂಜಿನಿಯರ್, ಪೊಲೀಸ್ ಸೇರಿದಂತೆ ೧೨ ಜನ ನೌಕರರಾಗಿದ್ದಾರೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಬಡಗಿ ಹಾಗೂ ಇಬ್ಬರು ಗುಡಿಕಾರರಿದ್ದು ೬ ಜನ ಟೈಲರ್‌ಗಳಿದ್ದಾರೆ. ರಾಜು ಪತ್ರಕರ್ತರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಮೂವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಇಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಿದ್ದಾಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮದಲ್ಲಿಯೇ ಅಂಚೆ ಕಛೇರಿ ಇದ್ದು ೨೫೦ ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಮೂರು ಅಂಗನವಾಡಿ ಕೇಂದ್ರಗಳಿದ್ದು ಅಂಗನವಾಡಿ–೧ ರಲ್ಲಿ ೬೯ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗನವಾಡಿ–೨ ರಲ್ಲಿ ೮೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗನವಾಡಿ–೩ ರಲ್ಲಿ ೪೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೪೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಏಳು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೬.೧೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೪ ಹೋಟೆಲ್‌ಗಳು ಹಾಗೂ ೬ ಅಂಗಡಿಗಳಿವೆ. ಗ್ರಾಮದಲ್ಲಿ ಬಾಳಯ್ಯನ ಮಠವಿದೆ.

ಗ್ರಾಮದಲ್ಲಿ ಚೌಡೇಶ್ವರ, ಪುಟ್ಟೇಶ್ವರ, ಓಬಳಸ್ವಾಮಿ, ಪಾಳೇಶ್ವರ, ಶನಿದೇವರು, ಗಣೇಶ, ವೀರಭದ್ರಸ್ವಾಮಿ, ಬಸವನಗುಡಿ, ಆಂಜನೇಯ, ಮಾರಮ್ಮ ದೇವಾಲಯಗಳಿವೆ. ಕಾರ್ತೀಕ ಮಾಸದಲ್ಲಿ ಆಂಜನೇಯಸ್ವಾಮಿ ತೇರನ್ನು ಹಾಗೂ ಜುಲೈನಲ್ಲಿ ಮಾರಮ್ಮನ ಜಾತ್ರೆಯನ್ನು ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ

ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಗುರು ನಂಜಮ್ಮನ ಮಠವಿದೆ.

ಇಲ್ಲಿ ಕಾಲಭೈರವ ಮತ್ತು ನಂದಿ ಗುಡಿಗಳ ಮುಂಭಾಗದಲ್ಲಿ ಶಿಲಾ ಶಾಸನವಿದೆ. ಇಲ್ಲಿ ಕೆರೆಯ ಎಡಭಾಗಕ್ಕೆ ಚೋಳೇಶ್ವರ ಸ್ವಾಮಿ ದೇವಾಲಯವಿದೆ. ರಂಗಪ್ಪ ಎನ್ನುವ ಆದಿಕರ್ನಾಟಕ ಜನಾಂಗದವರು ಮುಖವೀಣೆ ಕಲಾವಿದರಾಗಿದ್ದು ರಾಜ್ಯಮಟ್ಟದ ದಲಿತ ಜನಪದ ಕಲೋತ್ಸವ ಪ್ರಶಸ್ತಿ ಪಡೆದಿದ್ದಾರೆ. ಕಂಬಣ್ಣ ಎನ್ನುವವರು ಆರ್ಕೆಸ್ಟ್ರಾ ಕಲಾವಿದರಾಗಿದ್ದಾರೆ. ಜೀ ಟಿವಿಯಲ್ಲಿ ಅಕ್ಷರಮಾಲೆ ಕಾರ್ಯಕ್ರಮದಲ್ಲಿ ವಾಯ್‌ಲಿನ್ ನಡಿಸುವವರಾಗಿದ್ದಾರೆ. ಚಿಕ್ಕಣ್ಣ ಮುಖವೀಣೆ ಕಲಾವಿದರಾಗಿದ್ದಾರೆ.

### ಸಿದ್ದಾಪುರ ಗೇಟ್

ಸಿದ್ದಾಪುರ ಗೇಟ್ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೧೮.೬೨ ಹೆಕ್ಟೇರ್ ಹೊಂದಿದ್ದು ಸಿದ್ದಾಪುರ ಭೂ ವಿಸ್ತೀರ್ಣದಲ್ಲಿ ಸೇರಿರುವ ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಮಧುಗಿರಿ ಬೆಟ್ಟ ಹಾಗೂ ಸಣ್ಣ ಸಣ್ಣ ಗುಡಿಗಳು ಗ್ರಾಮದಲ್ಲಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಹದ್ದು, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಚಿಕ್ಕ ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೮ ಸಾರ್ವಜನಿಕ ನಲ್ಲಿಗಳು, ೨ ಟ್ಯಾಂಕ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಒಕ್ಕಲಿಗ, ಬಲಜಿಗ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೦೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೨೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೧೪ ಮತ್ತು ಹೆಂಗಸರು ೨೧೫ ಜನರಿದ್ದಾರೆ. ಗ್ರಾಮದಲ್ಲಿ ಇಟ್ಟಿಗೆ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್, ಆಟೋ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

೩೦% ಜನ ಮಾತ್ರ ವ್ಯವಸಾಯ ಮಾಡುತ್ತಿದ್ದು ರಾಗಿ, ಶೇಂಗಾ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಕೂಲಿ ಮಾಡುವವರು ಹಾಗೂ ಸಣ್ಣ ಪುಟ್ಟ ಉದ್ಯೋಗ ಮಾಡುವವರು ಕಂಡುಬರುತ್ತಾರೆ. ಬೀದಿಬದಿ ವ್ಯಾಪಾರ, ತಳ್ಳುವ ಗಾಡಿ, ಐಸ್‌ಕ್ರೀಂ ವ್ಯಾಪಾರ ಮಾಡುವವರಿದ್ದಾರೆ. ಈ ಗ್ರಾಮದ ಡಾ.ಎಸ್.ಟಿ. ರಂಗಪ್ಪ ಕಾಲೇಜು ಶಿಕ್ಷಣ ಇಲಾಖೆಯಲ್ಲಿ ಪ್ರಾಧ್ಯಾಪಕರಾಗಿದ್ದಾರೆ. ಗ್ರಾಮದಲ್ಲಿ ಒಂದು ಆಧುನಿಕ ಡೈರಿ ಹಾಗೂ ಹಾಲು ಉತ್ಪಾದಕರ ಸಹಕಾರ ಸಂಘ ಇದೆ.

ಗ್ರಾಮದಲ್ಲಿ ಶಿಕ್ಷಣ ಇಲಾಖೆ, ಪೊಲೀಸ್, ಕೆಎಸ್‌ಆರ್‌ಟಿಸಿ ಸೇರಿದಂತೆ ೮ ಜನ ನೌಕರರಾಗಿದ್ದಾರೆ. ಉಳಿದಂತೆ ಇಬ್ಬರು ಬಡಗಿ, ಇಬ್ಬರು ಗುಡಿಕಾರ, ಒಬ್ಬರು ಕಮ್ಮಾರರು ಹಾಗೂ ಇಬ್ಬರು ಟೈಲರ್ ಗ್ರಾಮದಲ್ಲಿರುವರು.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯಿತಿ ಕ್ಷೇತ್ರ ಹಾಗೂ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯಿತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯಿತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಸಿದ್ದಾಪುರ ಗ್ರಾಮಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಸಿದ್ದಾಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ೧೦೦ ಕ್ಕೂ ಹೆಚ್ಚು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೬ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರಗಳಿದ್ದು ಅಂಗನವಾಡಿ-೧ ರಲ್ಲಿ ೨೩ ಮಕ್ಕಳಿದ್ದಾರೆ. ಇಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗನವಾಡಿ-೨ ರಲ್ಲಿ ೨೨ ಮಕ್ಕಳಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಆರ್ಯಭಾರತಿ ಪ್ರೌಢಶಾಲೆ ಇದ್ದು ೯೦ ವಿದ್ಯಾರ್ಥಿಗಳಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೫.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಗುರುನಂಜಮ್ಮನ ಮಠ, ಆಂಜನೇಯ, ಮಾರಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಆಂಜನೇಯನ ಆರತಿ ಹಾಗೂ ಮಾರಮ್ಮನ ಜಾತ್ರೆಯನ್ನು ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಸಿದ್ದಾಪುರ ಎ.ಕೆ. ಕಾಲೋನಿ

ಸಿದ್ದಾಪುರ ಎ.ಕೆ. ಕಾಲೋನಿಯು ಸಿದ್ದಾಪುರದ ಹೊಸ ಬಡಾವಣೆಯಾಗಿದ್ದು ಸಿದ್ದಾಪುರದ ಹೊರ ವಲಯದಲ್ಲಿ ಮಧುಗಿರಿ-ಸಿರಾ ಮುಖ್ಯ ರಸ್ತೆಯ ಬದಿಗಿದೆ. ಇದೊಂದು ಆದಿಕರ್ನಾಟಕ ಜನಾಂಗದ ಪ್ರತ್ಯೇಕ ವಸತಿ ಗ್ರಾಮವಾಗಿರುವುದರಿಂದ ಸಿದ್ದಾಪುರ ಎ.ಕೆ. ಕಾಲೋನಿ ಎಂದು ಕರೆಯುತ್ತಾರೆ. ಸಿರಾ ಗೇಟ್ ಎಂತಲೂ ಕರೆಯುವುದು ವಾಡಿಕೆಯಲ್ಲಿದೆ.

ಒಟ್ಟು ೬೫ ಮನೆಗಳಿದ್ದು ४೧೦ ಜನಸಂಖ್ಯೆ ಹೊಂದಿದೆ. ಆದಿಕರ್ನಾಟಕ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ವ್ಯವಸಾಯ ಹಾಗೂ ಕೂಲಿ ಮಾಡುವವರು, ಪೊಲೀಸ್ ಹಾಗೂ ಸಾರಿಗೆ ಇಲಾಖೆಯಲ್ಲಿ ೩ ಜನ ಸೇವೆ ಸಲ್ಲಿಸುತ್ತಿದ್ದಾರೆ. ಈ ಬಡಾವಣೆಯಲ್ಲಿ ಮುಖವೀಣೆ ಕಲಾವಿದ ಹನುಮಯ್ಯ ನೆಲೆಸಿದ್ದು ಸ್ಥಳೀಯವಾಗಿ ಗುರುತಿಸಿಕೊಂಡಿರುವ ಮುಖವೀಣೆ ಕಲಾವಿದರಾಗಿದ್ದಾರೆ.

ಸಿದ್ದಾಪುರ ಗ್ರಾಮ ಪಂಚಾಯಿತಿಯು ಕಿರುನೀರು ಸರಬರಾಜು ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತಿದೆ. ೧ ಅಂಗನವಾಡಿ ಕೇಂದ್ರವಿದ್ದು ೨೧ ಮಕ್ಕಳು, ಒಬ್ಬರು ಕಾರ್ಯಕರ್ತೆ ಇದ್ದಾರೆ. ಉಳಿದೆಲ್ಲಾ ಸೌಕರ್ಯವು ಮಧುಗಿರಿ ಪುರಸಭೆಯಿಂದ ಪಡೆಯಲಾಗುತ್ತಿದೆ.

ಗ್ರಾಮದಲ್ಲಿ ಮಾರಮ್ಮ, ಬಸವನಗುಡಿ ಇದೆ. ಸಿದ್ದಾಪುರದಲ್ಲಿನ ಆಂಜನೇಯನ ತೇರು ಹಾಗೂ ಜಾತ್ರೆಯಲ್ಲಿ ಪಾಲ್ಗೊಳ್ಳುವರು. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ ಹಬ್ಬಗಳನ್ನು ಆಚರಿಸುತ್ತಾರೆ.

## ಸೂರನಾಗೇನಹಳ್ಳಿ

ಸೂರೇನಾಗೇನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೦४.೫೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಶೂರನಾಗ ಎಂಬ ವ್ಯಕ್ತಿ ಮೂಲದಿಂದ ಶೂರನಾಗೇನಹಳ್ಳಿ - ಸೂರನಾಗೇನಹಳ್ಳಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣು ಮತ್ತು ಮರಳು ಇರುವ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದಲ್ಲಿ ಸಣ್ಣ ಸಣ್ಣ ಗುಡ್ಡಗಳಿವೆ ಮತ್ತು ತೋಟಗಳನ್ನು ಕಾಣಬಹುದು.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಸೀಳುನಾಯಿ, ನರಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ, ಕುರುಬ, ಕುಂಬಾರ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೫೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೨೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೭೧ ಮತ್ತು ಹೆಂಗಸರು ೧೫೪ ಜನರಿದ್ದಾರೆ. ಗ್ರಾಮದಲ್ಲಿ ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೪ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಒಂದು ಡೈರಿ ಇದೆ. ಶಿಕ್ಷಣ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ದೊಡ್ಡಮಾಲೂರು ಗ್ರಾಮ ಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೪ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಮೂವರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೭೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯ ದೇವಾಲಯಗಳಿವೆ. ಗ್ರಾಮದಲ್ಲಿ ಎಲ್ಲಾ ಹಿಂದೂ ಹಬ್ಬಗಳನ್ನು ವಿಶೇಷವಾಗಿ ಯುಗಾದಿ ಮತ್ತು ದೀಪಾವಳಿಯನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಆಂಜನೇಯಸ್ವಾಮಿ ಆರತಿಯನ್ನು ಮಾಡುತ್ತಾರೆ.

## ಸುದ್ದೇಕುಂಟೆ

ಸುದ್ದೇಕುಂಟೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ೩೦ ಕಿಮೀ ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೦೫೬.೬೫ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ. ಸಿದ್ದೆ ಅಥವಾ ಸುದ್ದೇ ಮಣ್ಣಿನಿಂದ ಕೂಡಿರುವ ಕೆರೆ ಅಥವಾ ಕಟ್ಟೆ ಎಂಬ ಪ್ರಾಕೃತಿಕ ಹೆಸರಿನಲ್ಲಿ ಸುದ್ದೇಕುಂಟೆ ಗ್ರಾಮ ರಚನೆಯಾಗಿದೆ. ಸಿದ್ದೇಕುಂಟೆ > ಸುದ್ದೇಕುಂಟೆ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣು ಮತ್ತು ಮರಳು ಕಂಡುಬರುತ್ತದೆ. ಸಣ್ಣ ಸಣ್ಣ ಗುಡ್ಡಗಳು ಮತ್ತು ಪೊದೆಗಳು ಕಂಡುಬರುತ್ತವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಕಂಡುಬರುತ್ತವೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಸೀಮೆಹಸು, ಎಮ್ಮೆ, ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫ ಸಾರ್ವಜನಿಕ ನಲ್ಲಿಗಳು, ೨ ಬಾವಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ, ಗೊಲ್ಲ, ಮಡಿವಾಳ, ನಾಯಕ, ಶೆಟ್ರು, ಬಟ್ಟರಾಜರು, ಭಜಂತ್ರಿ, ಮುಸ್ಲಿಂ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮತ್ತು ಉರ್ದು ಮಾತನಾಡುತ್ತಾರೆ.

ಒಟ್ಟು ೩೪೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೪೭೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೭೫೨ ಮತ್ತು ಹೆಂಗಸರು ೭೨೭ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್, ಆಟೋರಿಕ್ಷಾ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದ ಎಲ್ಲ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೪೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ಅವರೆ ಮತ್ತು ಅಡಿಕೆ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಎರಡು ಡೈರಿಗಳಿವೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಒಟ್ಟು ಆರು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಒಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯಿತಿ ಕ್ಷೇತ್ರ ಹಾಗೂ ಕಡಗತ್ತೂರು ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ

ವ್ಯಾಪ್ತಿಗೆ ಒಳಪಟ್ಟಿದೆ. ಮುದ್ದೇನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಗೆ ಸೇರಿರುತ್ತದೆ. ಇಬ್ಬರು ಸದಸ್ಯರು, ಒಬ್ಬರು ನೌಕರರಾಗಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಮುದ್ದೇನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ೬೫ ಮಕ್ಕಳಿದ್ದಾರೆ. ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ೫೪ ಮಕ್ಕಳು ಮತ್ತು ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಸಮವಸ್ತ್ರ, ಪಠ್ಯಪುಸ್ತಕ, ಶೌಚಾಲಯ ಸೌಲಭ್ಯವಿದೆ. ಸರ್ಕಾರಿ ಪ್ರೌಢಶಾಲೆಯಲ್ಲಿ ೧೨೦ ಮಕ್ಕಳು, ೮ ಜನ ಶಿಕ್ಷಕರಿದ್ದಾರೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೩೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ-ಟೀ ದೊರೆಯುವ ೨ ಹೋಟೆಲ್‌ಗಳು ಹಾಗೂ ೩ ಅಂಗಡಿಗಳಿವೆ. ನ್ಯಾಯಬೆಲೆ ಅಂಗಡಿಯಿದೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಮಾರಮ್ಮದೇವಿ, ಆಂಜನೇಯ ದೇವಾಲಯಗಳಿವೆ. ಮಾರಮ್ಮನ ಆರತಿ ಮಾಡುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಸಿಂಗನಹಳ್ಳಿ

ಸಿಂಗನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೦೬.೧೧ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ನರಸಿಂಗ ಎಂಬ ವ್ಯಕ್ತಿ ಮೂಲದ ಈ ಹಳ್ಳಿ ನರ ಎಂಬ ಪೂರ್ವಪದ ಲೋಪವಾಗಿದ್ದು ಉತ್ತರ ಪದ ಸಿಂಗ ಮಾತ್ರ ಉಳಿದು ಸಿಂಗನಹಳ್ಳಿಯಾಗಿದೆ. ಕದರಿ ನರಸಿಂಹನ ಒಕ್ಕಲು ಈ ಗ್ರಾಮದಲ್ಲಿ ಹೆಚ್ಚಾಗಿದ್ದಾರೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮತ್ತು ಕಪ್ಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಅರಳೀಮರ, ಹುಣಸೆ, ಮಾವು ಇತ್ಯಾದಿ ಮರಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೬ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ. ಒಂದು ಬಾವಿ ಕಂಡುಬರುತ್ತದೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಸಾದರು, ಒಕ್ಕಲಿಗರು, ಕುರುಬ, ಶೆಟ್ರು, ನಾಯಕ, ಮಡಿವಾಳ, ಕುಂಬಾರ, ಮುಸ್ಲಿಂ, ಈಡಿಗ, ಉಪ್ಪಾರ, ಆದಿದ್ರಾವಿಡ ಮತ್ತು ಲಿಂಗಾಯಿತರ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು, ಉರ್ದು ಮಾತನಾಡುವವರಿದ್ದಾರೆ.

ಒಟ್ಟು ೪೦೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೬೩೧ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೮೧೭ ಮತ್ತು ಹೆಂಗಸರು ೮೧೪ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಇಟ್ಟಿಗೆ ಮನೆ ಮತ್ತು ಶೀಟಿನ ಮನೆಗಳಿವೆ. ಅಲ್ಲಲ್ಲಿ ಗುಡಿಸಲುಗಳನ್ನು ಕಾಣಬಹುದು. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೯೭ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅಲಸಂದೆ, ಶೇಂಗಾ ಮತ್ತು ಸೂರ್ಯಕಾಂತಿ ಬೆಳೆಯುತ್ತಾರೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿದ್ದಾರೆ. ಶಿಕ್ಷಕರು ಮತ್ತು ಪೊಲೀಸರು ಸೇರಿದಂತೆ ೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ನಂತಹ ಆಧುನಿಕ ಉದ್ಯೋಗ ಮಾಡುವ ಮೂವರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಸುದ್ದೇಕುಂಟೆ ತಾಲ್ಲೂಕು ಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಸಿಂಗನಹಳ್ಳಿಯಲ್ಲಿ ಗ್ರಾಮ ಪಂಚಾಯ್ತಿ ಕಾರ್ಯಾಲಯವಿದೆ. ೩ ಜನ ಸದಸ್ಯರು, ಇಬ್ಬರು ನೌಕರರಿದ್ದಾರೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಮತ್ತು ಖಾಸಗಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ––– ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ೨ ಅಂಗನವಾಡಿ ಕೇಂದ್ರವಿದ್ದು ೧೧೬ ಮಕ್ಕಳಿದ್ದಾರೆ. ಇಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೮೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ೬ ಜನ ಶಿಕ್ಷಕರಿದ್ದಾರೆ. ಪ್ರಿಯದರ್ಶಿನಿ ಗ್ರಾಮಾಂತರ ಪ್ರೌಢಶಾಲೆಯಲ್ಲಿ ೧೧೦ ವಿದ್ಯಾರ್ಥಿಗಳು, ೯ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೬೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೪ ಹೋಟೆಲ್‌ಗಳು ಹಾಗೂ ೪ ಅಂಗಡಿಗಳಿವೆ. ಕೃಷಿ ಪತ್ತಿನ ಸಹಕಾರ ಸಂಘವಿದೆ. ಗ್ರಂಥಾಲಯವಿದ್ದು ೫೫೦ ಪುಸ್ತಕಗಳು, ಒಬ್ಬರು ಗ್ರಂಥಪಾಲಕರಿದ್ದಾರೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ೩ ವೀರಗಲ್ಲುಗಳಿವೆ.

ಗ್ರಾಮದಲ್ಲಿ ಚೌಡೇಶ್ವರಿ (ಮುಜರಾಯಿ), ರಾಮದೇವರು, ಧರ್ಮಮ್ಮ, ಸಪ್ಲಮ್ಮ, ಆದಿತಿಮ್ಮಪ್ಪ, ಬೀರದೇವರು, ನರಸಿಂಹಸ್ವಾಮಿ, ಹಟ್ಟಿಮಾರಮ್ಮ, ರಂಗದ್ಯಾಮ ದೇವರ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ, ರಂಜಾನ್, ಬಕ್ರೀದ್ ಮುಂತಾದ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ೫ ವರ್ಷಗಳಿಗೊಮ್ಮೆ ಚೌಡೇಶ್ವರಿ ಜಾತ್ರೆ ನಡೆಯುತ್ತದೆ.

## ಸಂಕಾಪುರ

ಸಂಕಾಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೪.೪೫ ಹೆಕ್ಟೇರ್ ಹೊಂದಿದ್ದು ಕಂದಾಯ

ಗ್ರಾಮವಾಗಿದೆ. ಶಂಕರಪುರ ಜನ ಬಳಕೆಯಲ್ಲಿ ಶಂಕಾಪುರ > ಸಂಕಾಪುರವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ  ಹೊಂಗೆ, ಅರಳಿ, ಬೇವು, ಮಾವಿನ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಕೃಷ್ಣಮೃಗ, ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಗೌಜುಗ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ೫ ಎಮ್ಮೆ, ೧೦ ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೪ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುಂಬಾರ, ಉಪ್ಪಾರ, ಮಡಿವಾಳ, ಭಜಂತ್ರಿ, ಮುಸ್ಲಿಂ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು, ಉರ್ದು ಮಾತನಾಡುವವರಿದ್ದಾರೆ.

ಒಟ್ಟು ೯೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೭೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ.  ಗಂಡಸರು ೧೭೮ ಮತ್ತು ಹೆಂಗಸರು ೧೯೭ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ.  ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೨ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ಜೋಳ, ಬಾಳೆ, ಸೂರ್ಯಕಾಂತಿ, ದಾಳಿಂಬೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಇಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಪುರವರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಪುರವರದಲ್ಲಿ ಪಂಚಾಯಿತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಪುರವರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಪುರವರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೩ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೩.೭೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮವು ಎಲ್ಲಾ ರೀತಿಯ ಜನಪದ ಕ್ಷೇತ್ರಗಳಲ್ಲಿ ಮತ್ತು ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಂಡಿದೆ.

ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೨ ಹೋಟೆಲ್‌ಯಿದ್ದು ೪ ಅಂಗಡಿಗಳಿವೆ.

ಗ್ರಾಮದಲ್ಲಿ ಮಾರಮ್ಮದೇವಿ, ಲಕ್ಷ್ಮೀನರಸಿಂಹಸ್ವಾಮಿ, ಆಂಜನೇಯ ಮುಂತಾದ ಪ್ರಸಿದ್ಧ ದೇವಾಲಯಗಳಿವೆ. ಇವುಗಳಲ್ಲಿ ಮಾರಮ್ಮ ದೇವಿಗೆ ಪ್ರತಿ ವರ್ಷ ಅದ್ದೂರಿಯಾಗಿ ಜಾತ್ರೆ ನಡೆಯುತ್ತದೆ. ಹರಕೆ ಹೊರುವ, ಬಲಿ ನೀಡುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಕುಂಬಾರ ಜನಾಂಗದ ೬೦ ವರ್ಷ ವಯಸ್ಸಿನ ಬೈಯಣ್ಣ ನಾಟಕ ಕಲಿಸುವ ಶಿಕ್ಷಕರಾಗಿದ್ದು ೨೦ ಜನರ ತಂಡವಿದೆ.

## ಸುಣ್ಣವಾಡಿ

ಸುಣ್ಣವಾಡಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೨೨.೦೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಸುಣ್ಣ ಸುಡುವ ಪ್ರದೇಶ ಎತ್ತರದ ದಿಬ್ಬವಾಗಿದ್ದು ಆ ಪರಿಸರದಲ್ಲಿ ಗ್ರಾಮ ರಚನೆಯಾದುದರಿಂದ ಸುಣ್ಣ ಸುಡುವ ಊರಾಗಿ ನಂತರ ಸುಣ್ಣವಾಡಿಯಾಗಿದೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಹೊಂಗೆ, ಅರಳಿ, ಮಾವು, ಅಕೇಶಿಯಾ, ನೀಲಗಿರಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಕೋಗಿಲೆ, ಗೂಬೆ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೨೮ ಎಮ್ಮೆ, ೩೧೮ ಕುರಿ, ೧೫೭ ಮೇಕೆಗಳನ್ನು ಸಾಕಿದ್ದಾರೆ. ೨೫ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಮತ್ತು ಜಯಮಂಗಲಿ ನದಿ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ, ಗೊಲ್ಲ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ

ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೨೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೨೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೫೬ ಮತ್ತು ಹೆಂಗಸರು ೨೭೧ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೪೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ, ಮುಸುಕಿನಜೋಳ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ದಾಳಿಂಬೆ, ಬಾಳೆ, ಸೂರ್ಯಕಾಂತಿ ಮತ್ತು ತೆಂಗನ್ನು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ಪ್ರಮುಖ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಸಾರಿಗೆ ಇಲಾಖೆಗಳಿಗೆ ಸೇರಿದ ನಾಲ್ಕು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಒಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡಗದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡಗದಾಲ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡಗದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡಗದಾಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೮.೧೯%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೩ ಹೋಟೆಲ್‌ಯಿದ್ದು ೩ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯ, ಬಸವಣ್ಣ ದೇವಾಲಯಗಳಿವೆ. ಶ್ರೀರಾಮನವಮಿ ಹಾಗೂ ಬಸವ ಜಯಂತಿಯನ್ನು ವಿಶೇಷವಾಗಿ ಆಚರಿಸುತ್ತಾರೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಸಂಜೀವಪುರ

ಸಂಜೀವಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ

೧೧೦.೨೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಹೊಂಗೆ, ಮಾವು, ಬೇವು, ಅಕೇಶಿಯಾ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಕೋಗಿಲೆ, ಹದ್ದು, ಕಾಗೆ, ಗರುಡ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೭೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೪೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೭೬ ಮತ್ತು ಹೆಂಗಸರು ೧೭೨ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಮುಸುಕಿನಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಶೇಂಗಾ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಪೊಲೀಸ್, ಶಿಕ್ಷಣ, ಬ್ಯಾಂಕ್ ಮ್ಯಾನೇಜರ್ (ಎಸ್‌ಬಿಎಮ್), ವಕೀಲರು, ಡಾಕ್ಟರ್, ಪಿಡಿಓ ಇಲಾಖೆಗೆ ಸೇರಿದ ೧೫ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಬಡಗಿ ಕೆಲಸ ಮಾಡುವಂತಹ ೨ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೪೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಕಾಫಿ ಮತ್ತು ಟೀ ದೊರೆಯುವ ೪ ಹೋಟೆಲ್ ಇದ್ದು ೫ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಆಂಜನಮ್ಮ ೬೦ ವರ್ಷದ ಗಾಯಕಿ, ಚಿಕ್ಕಮ್ಮ ಹಾಗೂ ಕದ್ರಮ್ಮ ೭೦ ವರ್ಷದವರು ಸೋಬಾನೆ ಪದ ಹಾಡುವವರು ಗ್ರಾಮದಲ್ಲಿದ್ದಾರೆ.

ಗ್ರಾಮದಲ್ಲಿ ಮಾರಮ್ಮನ ಗುಡಿ, ಕೆಂಪಮ್ಮ, ಆಂಜನೇಯ ಸ್ವಾಮಿ ದೇವಾಲಯಗಳು ಕಂಡುಬರುತ್ತದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಸಿದ್ದನಹಳ್ಳಿ

ಸಿದ್ದನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೩.೭೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಸಿದ್ದನಾಯಕ ಎಂಬ ವ್ಯಕ್ತಿ ಇಲ್ಲಿ ಕೋಟೆ ನಿರ್ಮಿಸಿಕೊಂಡು ಆಳ್ವಿಕೆ ಮಾಡಿದ ಕಾರಣದಿಂದಾಗಿ ಆತನ ಹೆಸರಿನಲ್ಲಿ ಗ್ರಾಮ ರಚನೆಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಬಾಗೆ, ಅತ್ತಿ, ಅಸರಿ, ನೀಲಗಿರಿ, ಅಕೇಶಿಯಾ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಕತ್ತೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಪಾರಿವಾಳ, ಗಿಳಿ, ನವಿಲು, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆ, ಹಂದಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೧ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ, ಕುರುಬ, ವಿಶ್ವಕರ್ಮ, ಬ್ರಾಹ್ಮಣರು, ಒಕ್ಕಲಿಗ, ಬೋವಿ, ಶೆಟ್ರು, ಅಗಸ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೨೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೭೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೧೮ ಮತ್ತು ಹೆಂಗಸರು ೨೫೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೮ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಮೆಕ್ಕೆಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ಬಾಳೆ, ಶೇಂಗಾ, ದಾಳಿಂಬೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಪಿಡಬ್ಲ್ಯೂಡಿ ಇಲಾಖೆ, ಪಿಡಿಓ, ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ೬ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಮೂರು ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ. ಪ್ರೊ॥ ಬರಗೂರು ರಾಮಚಂದ್ರಪ್ಪನವರು ಈ ಗ್ರಾಮದಲ್ಲಿ ವೈವಾಹಿಕ ಸಂಬಂಧ ಮಾಡಿದ್ದಾರೆ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಒಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೭೪.೩೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಕಾಫಿ ಮತ್ತು ಟೀ ದೊರೆಯುವ ೫ ಹೋಟೆಲ್ ಇದ್ದು ೬ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಶೆಟ್ಟಿಹಳ್ಳಿ ಮಾರಮ್ಮದೇವಿ, ಆಂಜನೇಯ, ಬಸವೇಶ್ವರ, (ಈಶ್ವರ), ಲಕ್ಷ್ಮಿ ದೇವಾಲಯಗಳು ಕಂಡುಬರುತ್ತದೆ. ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಸಿಂಗ್ರಿಗೊಂಡನಹಳ್ಳಿ

ಸಿಂಗ್ರಿಗೊಂಡನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೫.೫೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಸಿಂಗಾರಗೌಡನು ಈ ಗ್ರಾಮ ಸ್ಥಾಪಿಸಿದ್ದರಿಂದಾಗಿ ಆತನ ಹೆಸರನ್ನೇ ಗ್ರಾಮಕ್ಕೆ ಇಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಹೊಂಗೆ, ಹಲಸು, ಅತ್ತಿ, ನೀಲಗಿರಿ, ಅಕೇಶಿಯ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ಮೊಲ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗೌಜುಗ, ಗಿಳಿ, ಪಾರಿವಾಳ, ಹದ್ದು, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳು ಮತ್ತು ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ, ಹಳ್ಳ ಮತ್ತು ಜಯಮಂಗಲಿ ನದಿ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಮುಸ್ಲಿಂ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿದ್ರಾವಿಡ, ಉಪ್ಪಾರ, ನಾಯಕ, ಲಿಂಗಾಯಿತ, ಬಲಜಿಗ, ಬ್ರಾಹ್ಮಣ, ಬೋವಿ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉರ್ದು ಹಾಗೂ ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೮೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೦೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೦೫ ಮತ್ತು ಹೆಂಗಸರು ೨೦೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೧೦ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ಶೇಂಗಾ, ತೊಗರಿ, ಬಾಳೆ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ. ತೆಂಗು ಮತ್ತು ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆಗೆ ಸೇರಿದ ನಾಲ್ಕು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬ್ಯಾಲ್ಯ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಬ್ಯಾಲ್ಯ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬ್ಯಾಲ್ಯ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಬ್ಯಾಲ್ಯ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ

ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೨.೨೫%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಕಾಫಿ ಮತ್ತು ಟೀ ದೊರೆಯುವ ೩ ಹೋಟೆಲ್ ಇದ್ದು ೪ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮಹೇಶ್ವರ, ಈಶ್ವರ, ಆಂಜನೇಯ, ಶೆಟ್ಟಿಹಳ್ಳಿ ಮಾರಮ್ಮ, ಮುತ್ತುರಾಯ ದೇವಾಲಯಗಳು ಕಂಡುಬರುತ್ತದೆ. ನಾಗರಕಟ್ಟೆಗಳು ಕಂಡುಬರುತ್ತವೆ. ಗ್ರಾಮದಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಸಂಜೀವಪುರ

ದೊಡ್ಡೇರಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೯೬.೩೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ಗ್ರಾಮದ ಉತ್ತರಕ್ಕೆ ಒಂದು ಚಿಕ್ಕ ಗುಟ್ಟೆ ಇದೆ.

ಗ್ರಾಮವು ತಿಮ್ಮಲಾಪುರ ಅರಣ್ಯಕ್ಕೆ ಹೊಂದಿಕೊಂಡಿರುವುದರಿಂದ ಪ್ರಾಣಿಗಳಾದ ಚಿರತೆ, ಕರಡಿ, ಕಾಡುಹಂದಿ, ಕಾಡುಮೊಲ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ರಣಹದ್ದು, ಕಾಗೆ, ಕೋಗಿಲೆ, ಗಿಳಿ, ಗೂಬೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ, ಮೇಕೆಗಳು ಮತ್ತು ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿ ಕರ್ನಾಟಕರು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೧೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೯೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೯೨ ಮತ್ತು ಹೆಂಗಸರು ೩೦೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಮಣ್ಣಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ ಮತ್ತು ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ಜೋಳ, ತೊಗರಿಯನ್ನು ಬೆಳೆಯುತ್ತಾರೆ. ಶೇಂಗಾ ಹಾಗೂ ರಾಗಿ ಗ್ರಾಮದ ವ್ಯಾಪಾರದ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ. ಗ್ರಾಮಕ್ಕೆ ಸೇರಿದಂತೆ ಯಾವುದೇ ಕೆರೆ, ಹಳ್ಳವಿಲ್ಲದ ಕಾರಣವಾಗಿ ಯಾವುದೇ ರೀತಿಯ ಮೀನುಗಾರಿಕಾ ಚಟುವಟಿಕೆಗಳು ನಡೆಯುವುದಿಲ್ಲ.

ಗ್ರಾಮದಲ್ಲಿ ಶಿಕ್ಷಕರಾಗಿ ಇಬ್ಬರು ಸರ್ಕಾರಿ ನೌಕರರಾಗಿ ಸೇವೆ ಸಲ್ಲಿಸುತ್ತಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ದೊಡ್ಡೇರಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ದೊಡ್ಡೇರಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ತಿರುಮಲಾಪುರ ಅಂಚೆ ಕಛೇರಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಮೊಬೈಲ್‌ಗಳಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೧.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಆಂಜನೇಯ, ಹನುಮಪ್ಪ, ಸಿದ್ದಯ್ಯ ಹಾಗೂ ಮೂಡಲಗಿರಿ ತಿಮ್ಮಪ್ಪ ದೇವಾಲಯಗಳು ಕಂಡುಬರುತ್ತದೆ. ಪ್ರತಿ ವರ್ಷವೂ ಶ್ರೀ ಸಿದ್ದಯ್ಯ ಸ್ವಾಮಿಯ ಜಾತ್ರೆಯನ್ನು ಆಚರಿಸುತ್ತಾರೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಸಾದರಹಳ್ಳಿ

ಸಾದರಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೨೯೭.೨೬ ಹೆಕ್ಟೇರ್ಸ್, ಕಂದಾಯ ಗ್ರಾಮವಾಗಿದೆ. ಜಾತಿ ಮೂಲದಿಂದ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಆದಿಕರ್ನಾಟಕ ಜನಾಂಗದವರು ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಕುಂಚಿಟಿಗ, ಒಕ್ಕಲಿಗ, ವೈಷ್ಣವರು,

ಉಪ್ಪಾರರು, ವೀರಶೈವರು, ಗೊಲ್ಲರು, ಸಾದರು ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೮೬ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೩೬೫ ಜನಸಂಖ್ಯಾ ಪ್ರಮಾಣವನ್ನು ಹೊಂದಿರುವ ಗಂಡು-೧೭೩, ಹೆಣ್ಣು-೧೯೨ ಇದ್ದಾರೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ಗ್ರಾಮದ ಮುಖ್ಯ ಆಹಾರ ರಾಗಿಮುದ್ದೆ ಮತ್ತು ಅನ್ನ, ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಈ ಗ್ರಾಮದಲ್ಲಿ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೬ ಮನೆಗಳು ಶೌಚಾಲಯ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಈರುಳ್ಳಿ, ಮೆಣಸಿನಕಾಯಿ ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಇಲ್ಲಿನ ರೈತರ ಉಪಕಸುಬಾಗಿದೆ ಸಾರಿಗೆ, ಸಮಾಜಕಲ್ಯಾಣ, ಶಿಕ್ಷಣ ಇಲಾಖೆಗಳಿಗೆ ಸಂಬಂಧಿಸಿದ ೮ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ. ನಿವೃತ್ತ ಜಿಲ್ಲಾ ಸಮಾಜಕಲ್ಯಾಣಾಧಿಕಾರಿ ಇದೇ ಊರಿನವರು.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಗರಣಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಯಲ್ಕೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಯಲ್ಕೂರು ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮವು ದೊಡ್ಡ ಯಲ್ಕೂರು ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ, ಒಬ್ಬ ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ೩೦ ವಿದ್ಯಾರ್ಥಿಗಳಿದ್ದು, ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೨೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಎರಡು ಹೊಟೇಲ್ ಇದ್ದು, ಮೂರು ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಶನಿಮಹಾತ್ಮ, ವೀರತಾಯಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹೊನ್ನಾಪುರ

ಹೊನ್ನಾಪುರ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೭೪೭.೭೪ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಕೋಟಗಾರ್ಲಹಳ್ಳಿ ಭೂ ವಿಸ್ತೀರ್ಣಕ್ಕೆ ಸೇರಿಕೊಂಡಿದೆ.

ಹೊನ್ನಾಪುರ ಎಂದು ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಈ ಗ್ರಾಮವು ಹಿಂದೆ ಅತ್ಯಂತ ಶ್ರೀಮಂತವಾಗಿತ್ತಂತೆ. ಈ ಗ್ರಾಮದಿಂದ ಮೈಸೂರಿನವರೆಗೆ ಹೊನ್ನನ್ನು ಬಿತ್ತುತ್ತಿದ್ದರಂತೆ, ಸೇರುಗಳಲ್ಲಿ ಅಳೆಯುತ್ತಿದ್ದರಂತೆ. ಸರ್ಕಾರವು ನಿಮ್ಮ ಊರಿಗೆ ಕೆರೆ ಕಟ್ಟಿಸುತ್ತೇನೆಂದು ಹೇಳಿದ್ದಕ್ಕೆ ಊರಿನವರು ಬೇಡ, ನಮಗೆ ಒಂದು ಭದ್ರವಾದ ಕೋಟೆಯನ್ನು ಕಟ್ಟಿಸಿಕೊಡಿ ಹೊನ್ನನ್ನು ರಕ್ಷಿಸಿಕೊಳ್ಳುತ್ತೇವೆ ಎಂದರಂತೆ ಆದ ಕಾರಣ

ಈ ಗ್ರಾಮಕ್ಕೆ ಹೊನ್ನಾಪುರ ಎಂದು ನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ಜಿಂಕೆ, ಚಿರತೆ, ನರಿ, ತೋಳ ಮೊದಲಾದ ಪ್ರಾಣಿಗಳು ಗ್ರಾಮದ ಹೊರಗೆ ಕಾಣಸಿಗುತ್ತವೆ. ಉಳಿದಂತೆ ಹಲವು ಜಾತಿಯ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗುಬ್ಬಚ್ಚಿ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಎಮ್ಮೆ, ಹಸು, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಉಳಿದಂತೆ ಸಾಕುಪಕ್ಷಿಗಳಾದ ನಾಟಿಕೋಳಿಗಳು ಕಂಡುಬರುತ್ತದೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದಲ್ಲಿ ಆದಿಕರ್ನಾಟಕ, ಬ್ರಾಹ್ಮಣ, ಮಡಿವಾಳ, ನಾಯಕ, ಗೊಲ್ಲ ಜನಾಂಗದವರಿದ್ದು ಮಡಿವಾಳ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡ ಭಾಷೆಯನ್ನೇ ಬಳಸುತ್ತಾರೆ.

ಒಟ್ಟು ೧೭೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೧೩೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೫೬, ಹೆಂಗಸರು ೫೭೭ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೬೨ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ನಾಲ್ಕು ಸಾಂಪ್ರದಾಯಿಕ ಎತ್ತಿನ ಗಾಡಿ ಇದೆ. ಟ್ರ್ಯಾಕ್ಟರ್ ಮತ್ತು ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೬೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ಸೂರ್ಯಕಾಂತಿ, ಶೇಂಗಾ, ರಾಗಿ ಮುಖ್ಯ ಬೆಳೆಯಾಗಿದೆ. ರಾಗಿ ಹಾಗೂ ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಪೊಲೀಸರು, ವೈದ್ಯರು, ಶಿಕ್ಷಕರು, ಉಪನ್ಯಾಸಕರು, ನರ್ಸ್, ಐಟಿ–ಬಿಟಿ ಸೇರಿದಂತೆ ೩೨ ಜನ ಸರ್ಕಾರಿ ನೌಕರರಿದ್ದು ಉಳಿದಂತೆ ಟೈಲರಿಂಗ್ ನಂತಹ ಉದ್ಯೋಗ ಮಾಡುವವರು ಇಬ್ಬರು ಜನರಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಟಗಾರ್ಲಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗ್ರಾಮದಲ್ಲಿ ಇಬ್ಬರು ಪಂಚಾಯ್ತಿ ಸದಸ್ಯರಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಟಗಾರ್ಲಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಕೋಟಗಾರ್ಲಹಳ್ಳಿ ಅಂಚೆ ಕಚೇರಿಗೆ ಸೇರಿದೆ. ಚರ ದೂರವಾಣಿ ದೂರಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘ ಹಾಗೂ ೬ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಇಬ್ಬರು ಸದಸ್ಯರು ಇದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೨೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಆರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೫೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ರಾಜ್ಯ ಸರ್ಕಾರದ ವಿಎಸ್‌ಎಸ್ ಎಣ್ಣೆ ಬೀಜ ಸಹಕಾರ ಸಂಘವಿದೆ.

ಗ್ರಾಮದಲ್ಲಿ ಪ್ರತಿಮೆಯಾದ ಒಂದು ಕೋಟೆ ಇದೆ. ಹೊನ್ನು ರಕ್ಷಿಸಲು ಕಟ್ಟಿಸಲ್ಪಟ್ಟ ಕೋಟೆ ಇದೆ. ಒಂದು ಆಂಜನೇಯ ದೇವಾಲಯವಿದೆ. ಉಳಿದಂತೆ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹಳೆತಿಮ್ಮನಹಳ್ಳಿ

ಹಳೆತಿಮ್ಮನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೯೮.೮೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ತಿಮ್ಮನಹಳ್ಳಿ ಪ್ರಾಚೀನ ಗ್ರಾಮವಾಗಿದ್ದು ೨ ತಿಮ್ಮನಹಳ್ಳಿಗಳಿರುವುದರಿಂದ ಹಳೆ ತಿಮ್ಮನಹಳ್ಳಿ ಎಂದಾಗಿದೆ. ಪಕ್ಕದಲ್ಲಿ ತಿಮ್ಮಲಾಪುರ ಗ್ರಾಮವಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಹಲಸು, ಮಾವು, ನೇರಳೆ, ಹೊಂಗೆ, ನೀಲಗಿರಿ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಪಾರಿವಾಳ, ಗಿಳಿ, ಗೊರವಂಕ, ಗೂಬೆ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ, ರೆಡ್ಡಿ, ಸಾದರು, ಬೋವಿ, ಲಂಬಾಣಿ, ವಿಶ್ವಕರ್ಮ, ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಹಾಗೂ ಉರ್ದು ಮಾತನಾಡುವವರರಿದ್ದಾರೆ.

ಒಟ್ಟು ೧೦೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೬೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೭೮ ಮತ್ತು ಹೆಂಗಸರು ೧೮೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೩೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ತೊಗರಿ, ದಾಳಿಂಬೆ, ಸೂರ್ಯಕಾಂತಿ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಪೊಲೀಸ್, ವಿದ್ಯುತ್, ಬ್ಯಾಂಕ್ (ಎಸ್‌ಬಿಎಂ), ಶಿಕ್ಷಣ ಇಲಾಖೆಗೆ ಸೇರಿದ ೮ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದಾರೆ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗೊಂದಿಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಗೊಂದಿಹಳ್ಳಿ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗೊಂದಿಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗೊಂದಿಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೮.೮೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಕಾಫಿ ಮತ್ತು ಟೀ ದೊರೆಯುವ ೩ ಹೋಟೆಲ್ ಇದ್ದು ೩ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಅಜ್ಜಪ್ಪಯ್ಯ, ಆಂಜನೇಯಸ್ವಾಮಿ, ಲಕ್ಷ್ಮಿ ದೇವಾಲಯಗಳು ಕಂಡುಬರುತ್ತದೆ. ಗ್ರಾಮದ ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹುಡುಗನಹಟ್ಟಿಪಾಳ್ಯ

ಹುಡುಗನಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೧೮.೭೧ ಹೆಕ್ಟೇರ್ ಹೊಂದಿದ್ದು ಬ್ಯಾಲ್ಯ ಗ್ರಾಮದ ಭೂವಿಸ್ತೀರ್ಣದಲ್ಲಿ ಸೇರಿರುವ ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ಅರಣ್ಯವನ್ನು ಹೊಂದಿಲ್ಲದಿದ್ದರೂ ಬೇವು, ನೇರಳೆ, ಅರಳಿ, ಹೊಂಗೆ, ನೀಲಗಿರಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಹದ್ದು, ಪಾರಿವಾಳ, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆ, ಹಂದಿಗಳು ಮತ್ತು ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೬ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೬೭ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೪೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೨೮ ಮತ್ತು ಹೆಂಗಸರು ೧೨೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮತ್ತು ಮುಸುಕಿನಜೋಳ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ತೊಗರಿ, ಶೇಂಗಾ, ಬಾಳೆ, ಸೂರ್ಯಕಾಂತಿ, ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ.

ಕಂದಾಯ ಇಲಾಖೆ, ಶಿಕ್ಷಣ ಇಲಾಖೆಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಕಮ್ಮಾರರು, ಚಮ್ಮಾರರು ಮತ್ತು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬ್ಯಾಲ್ಯ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಬ್ಯಾಲ್ಯ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬ್ಯಾಲ್ಯ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಬ್ಯಾಲ್ಯ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಗ್ರಾಮದ ಒಟ್ಟು ಸಾಕ್ಷರತೆ ಪ್ರಮಾಣ ೬೦.೩೨%.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮಾರಮ್ಮದೇವಿ, ಆಂಜನೇಯಸ್ವಾಮಿ ದೇವಾಲಯವಿದೆ. ಗ್ರಾಮದಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹರಿಹರಪುರ

ಹರಿಹರಪುರ ಗ್ರಾಮವು ಮಧುಗಿರಿ ತಾಲ್ಲೂಕಿನ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೫೪.೧೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ದೈವಸಂಬಂಧಿ ಗ್ರಾಮದ ಹೆಸರಾಗಿದ್ದು ಹರಿ + ಹರ ಎರಡೂ ಶಬ್ಧ ಸೇರಿ ಹರಿಹರಪುರವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕರಿ ಹಾಗೂ ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಬೆಟ್ಟದ ಬುಡದಲ್ಲಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಹಂದಿ, ಕಾಡುಮೊಲ, ಜಿಂಕೆ, ನರಿ, ತೋಳ ಮೊದಲಾದವುಗಳು

ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಕೋಗಿಲೆ ಮೊದಲಾದವುಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕಿದ್ದು ನಾಟಿಕೋಳಿಗಳನ್ನು ಸಾಕಿದ್ದಾರೆ

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಯಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೬ ಸಾರ್ವಜನಿಕ ನಲ್ಲಿಗಳು ಹಾಗೂ ೧ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗ್ರಾಮದಲ್ಲಿ ಒಂದು ಕೆರೆ ಇದ್ದು ಜಾನುವಾರುಗಳಿಗೆ ಹಾಗೂ ಕೃಷಿಗೆ ಸ್ವಲ್ಪ ಪ್ರಮಾಣದ ನೀರನ್ನು ಒದಗಿಸುತ್ತದೆ. ಕೆರೆ ಪೂರ್ಣವಾಗಿ ತುಂಬಿ ೩-೪ ವರ್ಷಗಳೇ ಕಳೆದಿವೆಯಂತೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ಒಟ್ಟು ೮೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೨೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೦೨, ಹೆಂಗಸರು ೨೨೦ ಜನ ಇದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ, ಇಟ್ಟಿಗೆ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೮ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎರಡು ಸಾಂಪ್ರದಾಯಿಕ ವಾಹನವಾದ ಎತ್ತಿನ ಗಾಡಿಗಳಿದ್ದು, ೧ ಆಟೋ, ೨ ಟ್ರ್ಯಕ್ಟರ್ ಹಾಗೂ ೨೮ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೧೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಮುಖ್ಯ ಉದ್ಯೋಗವಾಗಿದ್ದು ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ. ರಾಗಿ, ಭತ್ತ, ಶೇಂಗಾ ಮುಖ್ಯ ಬೆಳೆಗಳಾಗಿದ್ದು ತೆಂಗು, ಅಡಿಕೆಯನ್ನು ಬೆಳೆಯುತ್ತಾರೆ. ಹೂವು, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ ಹಾಗೂ ಒಂದು ಆಧುನಿಕ ಡೈರಿಯು ಗ್ರಾಮದಲ್ಲಿದೆ.

ಶಿಕ್ಷಕರು, ಕೆಎಸ್‌ಆರ್‌ಟಿಸಿ, ಮಿಲಿಟರಿ ಸೇರಿದಂತೆ ೪ ಜನ ನೌಕರರಾಗಿದ್ದು ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಕುಂಬಾರರು, ಇಬ್ಬರು ಬಡಗಿಗಳು ಗ್ರಾಮದಲ್ಲಿದ್ದಾರೆ. ಟೈಲರ್‌ನಂತಹ ಆಧುನಿಕ ಉದ್ಯೋಗ ಮಾಡುವ ಇಬ್ಬರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ದಬ್ಬೇಘಟ್ಟ ಗ್ರಾಮಪಂಚಾಯ್ತಿಗೆ ಸೇರುತ್ತದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ದಬ್ಬೇಘಟ್ಟ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ದಬ್ಬೇಘಟ್ಟ ಗ್ರಾಮದ ಅಂಚೆ ಕಚೇರಿಗೆ ಸೇರಿದೆ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ೩೦ ಕ್ಕೂ ಹೆಚ್ಚು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೩ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೮ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ

ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೬೦.೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಅಂಗಡಿಗಳು ಹಾಗೂ ಒಂದು ಹೋಟೆಲ್ ಇವೆ.

ಗ್ರಾಮದಲ್ಲಿ ಹರಿಹರೇಶ್ವರ, ಆಂಜನೇಯ, ಊರ ಮಾರಮ್ಮ, ದುರ್ಗಮ್ಮ, ನಾಗರಕಟ್ಟೆ, ಈಶ್ವರ ದೇವಾಲಯಗಳಿವೆ. ಊರ ಮಾರಮ್ಮ, ದುರ್ಗಮ್ಮ ಹಾಗೂ ಆಂಜನೇಯನ ಆರತಿಯನ್ನು ಆಚರಿಸುವರು. ಹರಿಹರೇಶ್ವರನ ಜಾತ್ರೆಯು ನಡೆಯುತ್ತದೆ. ಯುಗಾದಿ, ಶಿವರಾತ್ರಿ ಹಾಗೂ ಮಾರ್ನವಮಿ ವಿಶೇಷವಾಗಿದ್ದು ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹರಿಹರಪುರ ಜನತಾ ಹೌಸಿಂಗ್ ಕಾಲೋನಿ

ಹರಿಹರಪುರ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಹರಿಹರಪುರದ ಹೊರವಲಯದಲ್ಲಿದೆ. ಒಟ್ಟು ೨೧ ಮನೆಗಳನ್ನು ಹೊಂದಿದ್ದು ೮೬ ಜನಸಂಖ್ಯೆಯನ್ನು ಹೊಂದಿದೆ. ಹರಿಹರಪುರದೊಂದಿಗೆ ಸಾಮಾಜಿಕ ಸೌಲಭ್ಯ ಹಂಚಿಕೆಯಾಗಿದೆ. ಒಕ್ಕಲಿಗ, ನಾಯಕ, ಆದಿಕರ್ನಾಟಕ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ದಬ್ಬೇಘಟ್ಟ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಮತ್ತು ಕೂಲಿ ಮುಖ್ಯ ಕಸುಬಾಗಿದೆ. ಶಿಕ್ಷಣ ಹಾಗೂ ಅಂಚೆ ಇಲಾಖೆಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದಾರೆ.

ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಹರಿಹರ ರೊಪ್ಪ

ಹರಿಹರರೊಪ್ಪ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದಿಂದ ೬ ಕಿಮೀ ದೂರದಲ್ಲಿದೆ. ಒಟ್ಟು ೨೪೧.೩೧ ಹೆಕ್ಟೇರ್‌ನಲ್ಲಿದ್ದು ಕಂದಾಯ ಗ್ರಾಮವಾಗಿದೆ. ಹರಿಹರ ದೇವರ ಹೆಸರಿನಲ್ಲಿ ಗ್ರಾಮ ರಚನೆಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ ಕೆಂಪು ಮಣ್ಣಿನ ಭೂಮಿಯನ್ನು ಹೊಂದಿದೆ. ಪ್ರಾಣಿಗಳಾದ ಕರಡಿ, ನರಿ, ತೋಳ, ಮೊಲ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಗೊರವಂಕ, ಗುಬ್ಬಚ್ಚಿ, ಕಾಗೆ, ಕೋಗಿಲೆ ಕಂಡುಬರುತ್ತವೆ. ಹಸು, ಎಮ್ಮೆ, ಕುರಿ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ.

ಒಟ್ಟು ೩೩ ಮನೆಗಳನ್ನು ಹೊಂದಿದ್ದು ೧೩೪ ಜನಸಂಖ್ಯೆಯನ್ನು ಹೊಂದಿದೆ. ಒಕ್ಕಲಿಗ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ಕನ್ನಡ ಮಾತೃಭಾಷೆಯಾಗಿದೆ. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ. ರಸ್ತೆ, ಚರಂಡಿ ಹಾಗೂ ಶೌಚಾಲಯ ವ್ಯವಸ್ಥೆ ಇದೆ. ಮಧುಗಿರಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರ, ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ, ಚಿನಕವಜ್ರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ.

ಚಿನಕವಜ್ರ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಹಾಗೂ ಕೂಲಿ ಮಾಡುವವರಿದ್ದಾರೆ. ಅಂಚೆ ಹಾಗೂ ಶಿಕ್ಷಣ ಇಲಾಖೆಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದಾರೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ, ವಿಧವಾ ವೇತನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ. ಒಂದು ಸ್ತ್ರೀಶಕ್ತಿ ಸಂಘವಿದೆ.

ಗ್ರಾಮದಲ್ಲಿ ಆಂಜನೇಯನ ದೇವಾಲಯವಿದೆ. ಆಂಜನೇಯನಿಗೆ ಶ್ರಾವಣಮಾಸದಲ್ಲಿ ಆರತಿ, ಬಾನ, ಉತ್ಸವ ಏರ್ಪಡುತ್ತದೆ. ಮಳೆ ಸರದೇ ಹೋದಾಗ ಆಂಜನೇಯನಿಗೆ ಪರ, ಅನ್ನದಾನ ಏರ್ಪಡಿಸುವ ಸಂಪ್ರದಾಯವಿದೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಹೊಸಹಳ್ಳಿ

ಹೊಸಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೯೬.೧೭ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಚಿನ್ನೇನಹಳ್ಳಿ ಮೂಲದಿಂದ ವಲಸೆ ಬಂದು ಹೊಸದಾಗಿ ಗ್ರಾಮ ನಿರ್ಮಿಸಿದ್ದರಿಂದ ಹೊಸಹಳ್ಳಿ ಎಂದು ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣು ಮಿಶ್ರ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಇದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨ ಸಾರ್ವಜನಿಕ ನಲ್ಲಿಗಳು ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮಡಿವಾಳ, ನಾಯಕ, ಆದಿಕರ್ನಾಟಕ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೦೪ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೮೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನ್ನೇನಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನ್ನೇನಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೪೬.೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಅಂಗಡಿ ಇದೆ.

ಗ್ರಾಮದಲ್ಲಿ ಕೆಂಚಮ್ಮ, ಕರಿಯಮ್ಮ, ಭೂತಪ್ಪ, ಜುಂಜಪ್ಪ, ದೇವಿ ದೇವಾಲಯಗಳಿವೆ. ಪ್ರತಿ ವರ್ಷ ಕರಿಯಮ್ಮನ ಜಾತ್ರೆಯನ್ನು ಬಲಿ, ಹರಕೆಯೊಂದಿಗೆ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹೊಸಕೆರೆ

ಹೊಸಕೆರೆ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೫೯.೭೯ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಹಳೆಯ ಕೆರೆ ಇದ್ದ ಸ್ಥಳದಲ್ಲಿ ಮತ್ತೊಂದು ಕೆರೆ ನಿರ್ಮಾಣವಾಗಿ ಅದರ ಪಕ್ಕದಲ್ಲಿ ಗ್ರಾಮ ಬೆಳೆದಿದ್ದರಿಂದಾಗಿ ಕೆರೆಯ ಮೂಲದಿಂದ ಹೊಸಕೆರೆ ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದಲ್ಲಿ ಒಂದು ಬೆಟ್ಟ, ಒಂದು ಗುಡ್ಡೆ ಇದೆ.

ಗ್ರಾಮವು ಅರಣ್ಯ ಪ್ರದೇಶವನ್ನು ಹೊಂದಿದ್ದು ಪ್ರಾಣಿಗಳಾದ ಮೊಲ, ಕಾಡುಹಂದಿ, ಕರಡಿ, ಚಿರತೆ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗುಬ್ಬಚ್ಚಿ, ಗಿಳಿ, ಕೋಗಿಲೆ, ಬೆಳವ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಎರಡು ಕೆರೆ ಹಾಗೂ ಹತ್ತು ಹಳ್ಳಗಳಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೫೦೦ ಸಾರ್ವಜನಿಕ ನಲ್ಲಿಗಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಲಿಂಗಾಯಿತ, ಆದಿಕರ್ನಾಟಕ, ಆದಿದ್ರಾವಿಡ, ಮಡಿವಾಳ, ಬ್ರಾಹ್ಮಣ, ವೈಷ್ಣವ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ. ತೆಲುಗು, ಉರ್ದು ಮಾತನಾಡುವವರೂ ಗ್ರಾಮದಲ್ಲಿದ್ದಾರೆ.

ಒಟ್ಟು ೮೪೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೭೯೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ ಹಾಗೂ ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಗ್ರಾಮದಲ್ಲಿ ಎತ್ತಿನ ಗಾಡಿ, ತಳ್ಳುವ ಗಾಡಿ, ಟ್ರ್ಯಾಕ್ಟರ್, ಆಟೋ, ಕಾರು, ಟೆಂಪೋ, ಬಸ್ಸು, ಲಾರಿ, ಬೋರ್ ಲಾರಿ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೯ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಮಾಡುವವರ ಸಂಖ್ಯೆ ವಿರಳವಾಗಿದ್ದು ಕೂಲಿ ಹಾಗೂ ವ್ಯಾಪಾರ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಶೇಂಗಾ, ರಾಗಿ, ಭತ್ತ ಮುಖ್ಯ ಬೆಳೆಗಳಾಗಿದ್ದು ತರಕಾರಿ, ಜೋಳಗಳನ್ನು ಬೆಳೆಯುತ್ತಾರೆ. ತಳ್ಳು ಗಾಡಿ ವ್ಯಾಪಾರಿಗರು ಹೆಚ್ಚಾಗಿ ಕಂಡುಬರುತ್ತಾರೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ. ಗ್ರಾಮದ ಕೆರೆಯಲ್ಲಿ ಮೀನುಗಾರಿಕಾ ಚಟುವಟಿಕೆ ಕಂಡುಬರುತ್ತದೆ. ಶಿಕ್ಷಣ ಇಲಾಖೆ, ಪೊಲೀಸ್, ಡಾಕ್ಟರ್, ಇಂಜಿನಿಯರ್, ಕಂದಾಯ ಇಲಾಖೆ, ಬ್ಯಾಂಕ್ ಅಧಿಕಾರಿ, ಪಂಚಾಯ್ತಿ ಅಧಿಕಾರಿ, ಆರೋಗ್ಯ ಇಲಾಖೆ ಹಾಗೂ ವಕೀಲರು ಸೇರಿದಂತೆ ೪೦೦ ಕ್ಕೂ ಹೆಚ್ಚು ಉದ್ಯೋಗಸ್ಥರು ಇದ್ದಾರೆ.

ಗ್ರಾಮದಲ್ಲಿ ಊದುಬತ್ತಿ, ಬುಟ್ಟಿ ತಯಾರಿಕೆ, ತಟ್ಟೆ ತಯಾರಿಕೆ, ಬೀಡಿ ಸುತ್ತುವುದು ಹಾಗೂ ಐಸ್‌ಕ್ರೀಮ್‌ನಂತಹ ಸಣ್ಣ ಕೈಗಾರಿಕೆಗಳು ಕಂಡುಬರುತ್ತವೆ. ಸಾಂಪ್ರದಾಯಿಕ ಉದ್ಯೋಗ ಮಾಡುವ ಬಡಗಿ, ಕಮ್ಮಾರ, ಅಕ್ಕಸಾಲಿಗ, ಕಂಬಾರ, ಚಮ್ಮಾರ, ಚಿತ್ರಕಾರ, ಗಾರೆ ಕೆಲಸ ಮಾಡುವವರು ಗ್ರಾಮದಲ್ಲಿದ್ದು ೨೦ ಕ್ಕೂ ಹೆಚ್ಚು ಜನ ಟೈಲರ್‌ಗಳು ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಹೊಸಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಹದಿನೆಂಟು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಐವರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಹೊಸಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಗ್ರಾಮದಲ್ಲಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ೫ ಅಂಗನವಾಡಿ ಕೇಂದ್ರವಿದೆ. ಅಂಗನವಾಡಿ–೧ ರಲ್ಲಿ ೬೭ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ. ಅಂಗನವಾಡಿ–೨ ರಲ್ಲಿ ೨೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗನವಾಡಿ–೩ ರಲ್ಲಿ ೬೦ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕರು ಇದ್ದಾರೆ. ಅಂಗನವಾಡಿ–೪ ರಲ್ಲಿ ೨೮ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕರು ಇದ್ದಾರೆ. ಅಂಗನವಾಡಿ–೫ ರಲ್ಲಿ ೪೬ ಮಕ್ಕಳು, ಒಬ್ಬರು ಕಾರ್ಯಕರ್ತೆ, ಒಬ್ಬರು ಸಹಾಯಕರು ಇದ್ದಾರೆ.

ಗ್ರಾಮದಲ್ಲಿ ಜ್ಞಾನಸಿರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೧೫೦ ಮಕ್ಕಳು ಉಚಿತ ಶಿಕ್ಷಣ ಪಡೆಯುತ್ತಿದ್ದು ೬ ಜನ ಶಿಕ್ಷಕರಿದ್ದಾರೆ. ಜೀವನ್ ಜೈಹಿಂದ್ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೩೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಹದಿನೆಂಟು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಗ್ರಾಮದಲ್ಲಿ ಜಿ.ಎಂ. ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ೧೬೨ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಏಳು ಜನ ಶಿಕ್ಷಕರಿದ್ದಾರೆ. ಗ್ರಾಮದಲ್ಲಿ ಆರ್‌ಆರ್ ಪ್ರೌಢಶಾಲೆಯಿದ್ದು ೨೬೦ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೮ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೨.೪%.

ಗ್ರಾಮದಲ್ಲಿ ಸ್ವತಂತ್ರ ಪದವಿಪೂರ್ವ ಕಾಲೇಜು ಇದ್ದು ೧೮೦ ಜನ ವಿದ್ಯಾರ್ಥಿಗಳು, ೬ ಉಪನ್ಯಾಸಕರು ಹಾಗೂ ಒಬ್ಬರು ಪ್ರಾಂಶುಪಾಲರು ಇದ್ದಾರೆ. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧೦ ಹೋಟೆಲ್‌ಗಳು ಹಾಗೂ ೮೦ ಅಂಗಡಿಗಳು, ೨ ಪೆಟ್ರೋಲ್ ಬಂಕ್, ೧ ಸ್ಟೇಟ್ ಬ್ಯಾಂಕ್ ಆಫ್ ಮೈಸೂರಿನ ಶಾಖೆ, ಒಂದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ಒಂದು ಕೆಇಬಿ ಕಛೇರಿ ಇದೆ.

ಗ್ರಾಮಪಂಚಾಯ್ತಿ ಕಛೇರಿ ಗ್ರಾಮದಲ್ಲಿಯೇ ಇದೆ. ಪ್ರಾಥಮಿಕ ಆರೋಗ್ಯ ಕೇಂದ್ರವಿದ್ದು ಇಬ್ಬರು ವೈದ್ಯರಿದ್ದಾರೆ. ಗ್ರಾಮದಲ್ಲಿ ಪಶುಪಾಲನಾ ಕೇಂದ್ರ, ಎಣ್ಣೆ ಮಿಲ್ ಹಾಗೂ ಸಮುದಾಯ ಭವನವಿದೆ. ಒಂದು ಗ್ಯಾಸ್ ಏಜೆನ್ಸಿ ಇದೆ. ಮೂರು ಸಮುದಾಯ ಭವನಗಳಿವೆ, ವಿ.ನಾಗಯ್ಯ ಮೆಮೋರಿಯಲ್ ಹಾಲ್ ಇದೆ. ಗ್ರಾಮದಲ್ಲಿ ಒಂದು ಪ್ರಾಚೀನ ಬಾವಿ, ಮುಸ್ಲಿಂ ದರ್ಗಾ ಇದೆ.

೫೦ ವರ್ಷದ ಕರಿಯಣ್ಣ ನಾಯಕ ಜನಾಂಗದವರು. ಇವರು ಶನಿಮಹಾತ್ಮ ನಾಟಕ ಮಂಡಳಿಯನ್ನು ೨೫ ಜನರ ತಂಡದೊಂದಿಗೆ ನಿರ್ಮಿಸಿದ್ದಾರೆ. ಇವರು ನಾಟಕ ಹೇಳಿಕೊಡುವ ಶಿಕ್ಷಕರೂ ಆಗಿದ್ದಾರೆ. ಪ್ರತಿ ವರ್ಷ ಗ್ರಾಮದಲ್ಲಿ ಪೌರಾಣಿಕ ಹಾಗೂ ಸಾಮಾಜಿಕ ನಾಟಕಗಳೊಂದಿಗೆ ಪ್ರದರ್ಶನ ನೀಡುತ್ತಾರೆ. ಗ್ರಾಮದಲ್ಲಿ ಎಲ್ಲಾ ರೀತಿಯ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಗ್ರಾಮದಲ್ಲಿ ಶನಿಮಹಾತ್ಮ, ವನಮನ ರಂಗನಾಥಸ್ವಾಮಿ, ನಾಗಮ್ಮ ದೇವಸ್ಥಾನ, ಮಂಟಪ ಆಂಜನೇಯ, ದುರ್ಗಾದೇವಿ, ಬಿಳಿಯಣ್ಣ, ಕರಿಯಣ್ಣ, ಭೂತಪ್ಪ, ಮಾರಮ್ಮ ದೇವಾಲಯಗಳಿವೆ. ಆಷಾಢದಲ್ಲಿ ಪ್ರತಿ ವರ್ಷ ವನಮನ ರಂಗನಾಥ ಜಾತ್ರೆ, ನಾಗಮ್ಮನ ಜಾತ್ರೆ ಹಾಗೂ ಪ್ರಥಮ ಏಕಾದಶಿಯಲ್ಲಿ ಭೂತಪ್ಪನ ಜಾತ್ರೆಯನ್ನು ಆಚರಿಸುತ್ತಾರೆ. ಹರಕೆ ಹಾಗೂ ಬಲಿ ನೀಡುವ ಆಚರಣೆಯು ರೂಢಿಯಲ್ಲಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ಮುಸ್ಲಿಂ ಬಾಂಧವರು ಮುಸ್ಲಿಂ ಹಬ್ಬಗಳನ್ನು ಆಚರಿಸುತ್ತಾರೆ.

## ಹೊಸಕೆರೆ ಬಸವನಹಳ್ಳಿ

ಎಚ್.ಬಸವನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೯.೪೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ವ್ಯಕ್ತಿಮೂಲದಿಂದ ಈ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಬೆಳ್ಳಕ್ಕಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೫೦ ಸಾರ್ವಜನಿಕ ನಲ್ಲಿಗಳು, ೪ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ, ಆದಿಕರ್ನಾಟಕ, ಆದಿದ್ರಾವಿಡ, ನಾಯಕ, ವಿಶ್ವಕರ್ಮ ಜನಾಂಗದವರು ಇದ್ದು ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ವಿಶ್ವಕರ್ಮ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೧೫೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೮೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨೬ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಸಿಹಿ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್, ಕಾರು ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿಕಾರರು ೫೦% ಇದ್ದಾರೆ. ಶೇಂಗಾ, ರಾಗಿ, ಜೋಳ, ಭತ್ತ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಹೊಸಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಹೊಸಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಹೊಸಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೬ ವಿದ್ಯಾರ್ಥಿಗಳು ಉಚಿತ

ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹೊಸಪಾಳ್ಯ

ಹೊಸಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೬೫೯.೭೯ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮದ ಭೂವಿಸ್ತೀರ್ಣವು ಹೊಸಕೆರೆ ವಿಸ್ತೀರ್ಣದಲ್ಲಿ ಸೇರಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸುತ್ತಲೂ ಬೆಟ್ಟದ ಸಾಲು ಹಾಗೂ ಒಂದು ಅರಣ್ಯವಿದೆ.

ಗ್ರಾಮವು ಬೆಟ್ಟ ಹಾಗೂ ಅರಣ್ಯ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಚಿರತೆ, ಕರಡಿ, ತೋಳ, ಕಾಡುಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ. ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಮಳೆಗಾಲದಲ್ಲಿ ಹರಿದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೩ ಸಾರ್ವಜನಿಕ ನಲ್ಲಿಗಳು, ೫ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಲಿಂಗಾಯಿತ, ಬ್ರಾಹ್ಮಣ ಜನಾಂಗಗಳಿವೆ. ಲಿಂಗಾಯಿತ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಇವರು ಮಾತೃಭಾಷೆಯಾದ ಕನ್ನಡವನ್ನೇ ಮಾತನಾಡುತ್ತಾರೆ.

ಒಟ್ಟು ೮೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೫೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨೭ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಸಿಹಿ ಮತ್ತು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿ, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ೫೦% ಕೂಲಿಗಾರರು ಗ್ರಾಮದಲ್ಲಿದ್ದಾರೆ. ಶೇಂಗಾ, ರಾಗಿ, ಭತ್ತ, ಜೋಳ ಬೆಳೆಯಲಾಗುತ್ತಿದ್ದು ಶೇಂಗಾ ವ್ಯಾಪಾರ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಹೊಸಕೆರೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಹೊಸಕೆರೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸ್ಥಿರ ದೂರವಾಣಿ ಸಂಪರ್ಕವಿಲ್ಲದೆ ಇದ್ದು ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಹೊಸಕೆರೆ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೪ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೧೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೪.೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಬೂಡಬಂಡೆ ಬಸಪ್ಪ, ಆಂಜನೇಯ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹನುಮಂತಪುರ

ಹನುಮಂತಪುರ ಗ್ರಾಮವು ಮಧುಗಿರಿ ತಾಲ್ಲೂಕಿನ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೪ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೮೮.೧೫ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಹನುಮಂತದೇವರ ಮೂಲದಿಂದ ಹನುಮಂತಪುರ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಬೆಟ್ಟಸಾಲು ಪ್ರದೇಶವಾಗಿದ್ದು ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ಕರಡಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ೧೫ ಹಳ್ಳಗಳಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ರೆಡ್ಡಿಗರು, ಲಿಂಗಾಯಿತ, ನಾಯಕ, ಆದಿಕರ್ನಾಟಕ, ಆದಿದ್ರಾವಿಡ, ಬಣಜಿಗ, ನೇಕಾರ, ಕುಂಬಾರ ಜನಾಂಗವಿದ್ದು ಕುರುಬ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನ್ನಾಡುತ್ತಾರೆ.

ಒಟ್ಟು ೨೫೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೨೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೬೩ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೯ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಗ್ರಾಮದಲ್ಲಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಮಿಡಿಗೇಶಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಹನುಮಂತಪುರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಮೂರು ಜನ ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಿಡಿಗೇಶಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಹನುಮಂತಪುರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಹನುಮಂತಪುರ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಹನುಮಂತಪುರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಮೂರು ಅಂಗನವಾಡಿ ಕೇಂದ್ರಗಳಿದ್ದು ೯೪ ಮಕ್ಕಳಿದ್ದಾರೆ. ಮೂರು ಜನ ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೦೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ೮ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೭.೨%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಹೋಟೆಲ್‌ಗಳು ಹಾಗೂ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಕೆಎಎಸ್ ಅಧಿಕಾರಿ ಲಕ್ಷ್ಮೀನರಸಯ್ಯ, ಪ್ರಿನ್ಸಿಪಾಲ್ ಓಬಳನರಸಿಂಹಯ್ಯ ಸೇರಿದಂತೆ ಶಿಕ್ಷಕರು, ಡಾಕ್ಟರುಗಳು, ಇಂಜಿನಿಯರ್‌ಗಳು ಸರ್ಕಾರಿ ಉದ್ಯೋಗದಲ್ಲಿದ್ದಾರೆ. ನರಸೇಗೌಡ ಎಂಬ ಶಿಕ್ಷಕ ಯಕ್ಷಗಾನ ಕಲಾವಿದರಾಗಿದ್ದು ಕಿರುಗೆಜ್ಜೆ ಬಯಲಾಟದ ಕಲಾಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ ದೇವಾಲಯವಿದೆ. ಪ್ರತಿ ವರ್ಷ ಆರತಿ ಮತ್ತು ಹರಕೆಯೊಂದಿಗೆ ಹಬ್ಬ ಆಚರಿಸಲಾಗುವುದು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹುಣಸೇಮರದಹಟ್ಟಿ

ಹುಣಸೇಮರದಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ದಕ್ಷಿಣ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೨ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೧೨೪.೮೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಗ್ರಾಮದ ಭೂ ವಿಸ್ತೀರ್ಣವು ಚಿನಕವಜ್ರ ವಿಸ್ತೀರ್ಣದಲ್ಲಿ ಸೇರಿದೆ. ಸಸ್ಯಮೂಲದ ವಾಸಸ್ಥಳವಾದ್ದರಿಂದ ಹುಣಸೇಮರದ ಹಟ್ಟಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ, ತೋಳ, ನರಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಬೆಳ್ಳಕ್ಕಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ

ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೭ ಸಾರ್ವಜನಿಕ ನಲ್ಲಿಗಳು, ೩ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಒಟ್ಟು ೧೦೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೫೫೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೨ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಇದೆ. ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿನಕವಜ್ರ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಮೂವರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿನಕವಜ್ರ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಚಿನಕವಜ್ರ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೫ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೪೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೫೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೩ ಹೋಟೆಲ್‌ಗಳು ಹಾಗೂ ೪ ಅಂಗಡಿಗಳಿವೆ. ನೌಕರರು, ಪೊಲೀಸ್, ಬ್ಯಾಂಕ್, ನಗರಸಭೆ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ, ೧೦ ಜನ ಕೆಎಸ್‌ಆರ್‌ಟಿಸಿ ಸರ್ಕಾರಿ ಉದ್ಯೋಗದಲ್ಲಿದ್ದಾರೆ. ಗ್ರಾಮದಲ್ಲಿ ಬಸವಣ್ಣ, ಆಂಜನೇಯ, ಮಾರಮ್ಮ, ಚಿಲಕಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹೊಸಳ್ಳಿ

ಹೊಸಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೧೧೫೧.೦೦ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ನರಿ, ತೋಳ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಕಾಗೆ, ಕೋಗಿಲೆ, ಗಿಳಿ ಮೊದಲಾದ ಪಕ್ಷಿಗಳು

ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಕುಂಟೆಯಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೪ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳು, ೨ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ, ಒಕ್ಕಲಿಗ, ಸಾದರು, ಆದಿ ಕರ್ನಾಟಕ, ಆದಿ ದ್ರಾವಿಡ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೧೦೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೭೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೮೧ ಮತ್ತು ಹೆಂಗಸರು ೧೯೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೨ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ, ಶೇಂಗಾ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಜೋಳ, ತೊಗರಿ, ಅವರೆ ಬೆಳೆಯಲಾಗುತ್ತಿದ್ದು ತೆಂಗು, ಅಡಿಕೆ ಹಾಗೂ ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಮಿನಿ ಡೈರಿ ಇದೆ. ಇಬ್ಬರು ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದು ಒಬ್ಬರು ವೈದ್ಯರು ಹಾಗೂ ೪ ಜನ ಟೈಲರ್‌ಗಳು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಡಿ.ವಿ.ಹಳ್ಳಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಡಿ.ವಿ.ಹಳ್ಳಿ ಅಂಚೆ ಸಂಪರ್ಕ ಒದಗಿಸುತ್ತಿದೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೨೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೮.೮೭%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ

ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೧ ಹೋಟೆಲ್ ಹಾಗೂ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯ, ದುರ್ಗಮ್ಮ, ಅಶ್ವತ್ಥಕಟ್ಟೆ, ಈಶ್ವರ ದೇವಾಲಯಗಳಿವೆ. ಮಾರಮ್ಮನ ಜಾತ್ರೆಯನ್ನು ಹಾಗೂ ಆಂಜನೇಯನ ಆರತಿಯನ್ನು ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹೊಸಹಳ್ಳಿ ಜನತಾ ಹೌಸಿಂಗ್ ಕಾಲೋನಿ

ಹೊಸಹಳ್ಳಿ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಹೊಸಹಳ್ಳಿಯ ಹೊರವಲಯದಲ್ಲಿದೆ. ಒಟ್ಟು ೩೦ ಮನೆಗಳನ್ನು ಹೊಂದಿದ್ದು ೯೪ ಜನಸಂಖ್ಯೆಯನ್ನು ಹೊಂದಿದೆ. ಒಕ್ಕಲಿಗ, ನಾಯಕ ಜನಾಂಗದವರು ಗ್ರಾಮದಲ್ಲಿದ್ದಾರೆ. ಸರ್ಕಾರದ ಜನತಾ ಯೋಜನೆಯಡಿ ಮನೆಗಳು ನಿರ್ಮಾಣವಾಗಿವೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ದೊಡ್ಡವೀರಗೊಂಡನಹಳ್ಳಿ ಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಹಸು, ಕುರಿ, ಎಮ್ಮೆ ಹಾಗೂ ನಾಟಿಕೋಳಿಗಳನ್ನು ಸಾಕಿದ್ದಾರೆ. ವ್ಯವಸಾಯ ಮತ್ತು ಕೂಲಿ ಮುಖ್ಯ ಕಸುಬಾಗಿದೆ. ಶಿಕ್ಷಣ ಇಲಾಖೆಯಲ್ಲಿ ಇಬ್ಬರು ಸೇವೆ ಸಲ್ಲಿಸುತ್ತಿದ್ದಾರೆ. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಹಳೇಹಟ್ಟಿ

ಹಳೇಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ಗಂಜಲಗುಂಟೆಯ ವಿಸ್ತೀರ್ಣ ೨೦೫.೮೩ ಹೆಕ್ಟೇರ್‌ಗಳಲ್ಲಿ ಸೇರಿದ್ದುಮಜರೆ ಗ್ರಾಮವಾಗಿದೆ. ಗ್ರಾಮವು ಗಂಜಲಗುಂಟೆ ಭೂವಿಸ್ತೀರ್ಣದಲ್ಲಿ ಸೇರಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಅರಣ್ಯ ಪ್ರದೇಶವನ್ನು ಹೊಂದಿರುವುದರಿಂದ ಪ್ರಾಣಿಗಳಾದ ಚಿರತೆ, ನರಿ, ತೋಳ, ಕರಡಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೯ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳು, ೫ ಸಿಸ್ಟರ್ನ್‌ಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ತಿಗಳ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೬೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೦೬ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಮಣ್ಣಿನ ಮನೆ ಮತ್ತು ಗುಡಿಸಲು ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ೧೮ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೧೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಶೇಂಗಾ, ಮುಸುಕಿನ ಜೋಳ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಜೋಳ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ. ಇಲ್ಲಿನ ೫ ಜನಗಳು ತರಕಾರಿ ಮಾರುವವರು ಇದ್ದಾರೆ. ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ ಸೇರಿದಂತೆ ೮ ಜನ ಸರ್ಕಾರಿ ನೌಕರರಿದ್ದಾರೆ. ಗ್ರಾಮದಲ್ಲಿ ಸಾಂಪ್ರದಾಯಿಕ ಉದ್ಯೋಗ ಮಾಡುವ ಒಬ್ಬರು ಕಮ್ಮಾರರು ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಸಿದ್ದಾಪುರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಗಂಜಲಗುಂಟೆ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಮಧುಗಿರಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಗಂಜಲಗುಂಟೆ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೪ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೨೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಆರು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಹಾಗೂ ೪ ಸ್ವಸಹಾಯ ಸಂಘಗಳಿವೆ. ೨ ಹೋಟೆಲ್‌ಗಳು ಹಾಗೂ ೨ ಅಂಗಡಿಗಳಿವೆ. ಗ್ರಾಮದಲ್ಲಿ ಒಂದು ಗೊಲ್ಲ ಸಮುದಾಯದ ಹಾಸ್ಟೆಲ್ ಇದೆ.

ಗ್ರಾಮದಲ್ಲಿ ಚೌಡಮ್ಮ, ವೆಂಕಟರಮಣಸ್ವಾಮಿ, ಲಕ್ಕಮ್ಮ, ತಿಮ್ಮಪ್ಪ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹೊಸಹಳ್ಳಿ

ಹೊಸಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೩೯೨.೦೨ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ. ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಉಳಿದಂತೆ ಹಲವು ರೀತಿಯ ಹಾವುಗಳಿವೆ. ಪಕ್ಷಿಗಳಾದ ನವಿಲು, ಗಿಳಿ, ಪಾರಿವಾಳ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ ಹಾಗೂ ಮೇಕೆಗಳನ್ನು ಸಾಕುತ್ತಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಒಂದು ಹಳೆಯ ಬಾವಿಯನ್ನು ಕಾಣಬಹುದು.

ನಾಯಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ತಿಗಳ, ರೆಡ್ಡಿ, ಒಕ್ಕಲಿಗರು, ಕುರುಬ, ಕುಂಬಾರ, ಉಪ್ಪಾರ, ಬ್ರಾಹ್ಮಣ, ಭಜಂತ್ರಿ ಮತ್ತು ಅಗಸರ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೭೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೩೨೩ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೬೪ ಮತ್ತು ಹೆಂಗಸರು ೧೫೯ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ ಮತ್ತು ಕಲ್ಲಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ

ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ೩ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೮ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಶೇಂಗಾ, ತೊಗರಿ, ಅವರೆ, ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಇಲ್ಲಿನ ಜನರ ಉಪಕಸುಬಾಗಿದೆ. ಈ ಗ್ರಾಮವು ಇಬ್ಬರು ಶಿಕ್ಷಣ ಇಲಾಖೆ, ಪೊಲೀಸ್, ಸಾರಿಗೆ ಇಲಾಖೆಗಳಿಗೆ ಸೇರಿದ ೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್‌ನಂತಹ ಆಧುನಿಕ ಉದ್ಯೋಗ ಮಾಡುವ ಮೂರು ಜನ ಗ್ರಾಮದಲ್ಲಿದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಕೊಡಿಗೇನಹಳ್ಳಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಚಿಕ್ಕಮಾಲೂರು ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಚಿಕ್ಕಮಾಲೂರು ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಚಿಕ್ಕಮಾಲೂರು ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸ್ವಸಹಾಯ ಸಂಘಗಳಿವೆ. ಇಲ್ಲಿ ಅನೇಕರು ಹೂಗಳ ಮಾರಾಟ ಮಾಡುವರು.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೩ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ೩ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೩.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೧ ಹೋಟೆಲ್ ಹಾಗೂ ೨ ಅಂಗಡಿಗಳಿವೆ. ಈ ಗ್ರಾಮದಲ್ಲಿ ಜ್ವರ ಮತ್ತು ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಸಪ್ಲಮ್ಮ, ವೀರಲಕ್ಕಮ್ಮ, ಬಾಬಯ್ಯ ಮತ್ತು ಆಂಜನೇಯ ದೇವಾಲಯಗಳಿವೆ. ಪ್ರತಿ ವರ್ಷ ಸಪ್ಲಮ್ಮನ ಹಬ್ಬ ಆಚರಿಸುವರು. ಆಂಜನೇಯನ ಜಾತ್ರೆ ಮಾಡುವರು. ಗ್ರಾಮದಲ್ಲಿ ಎಲ್ಲಾ ಹಿಂದೂ ಹಬ್ಬಗಳನ್ನು ವಿಶೇಷವಾಗಿ ಯುಗಾದಿ ಮತ್ತು ದಸರಾ ಹಬ್ಬವನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹುಣಸವಾಡಿ

ಹುಣಸವಾಡಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೫೫೧.೬೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಹುಣಸೆ ತೋಪಿನ ಪ್ರದೇಶವಾದುದರಿಂದ ಹುಣಸವಾಡಿ ಎಂದಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಅರಳಿ, ಬೇವು, ನೇರಳೆ, ದಿಂಡುಗ, ಆಲ, ಬಾಗೆ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ಕೃಷ್ಣಮೃಗ, ನರಿ, ತೋಳ, ಕಾಡುಹಂದಿ

ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಹದ್ದು, ಗೌಜುಗ, ನವಿಲು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ೪೫ ಎಮ್ಮೆ, ೧೪ ಕುರಿ, ೭೦ ಮೇಕೆಗಳನ್ನು ಸಾಕಿದ್ದಾರೆ. ೫೭ ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳವಿದ್ದು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೩ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೨ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಉಪ್ಪಾರ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಶೆಟ್ರು, ಲಿಂಗಾಯಿತ, ಆದಿಕರ್ನಾಟಕ, ಒಕ್ಕಲಿಗ, ಕುರುಬ, ಮುಸ್ಲಿಂ, ಆದಿದ್ರಾವಿಡ, ಶ್ಯಾನುಭೋಗ, ಬ್ರಾಹ್ಮಣ ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉರ್ದು, ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೨೫೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೦೩೫ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೪೯ ಮತ್ತು ಹೆಂಗಸರು ೪೯೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು, ಸಾರಿಗೆ ವ್ಯವಸ್ಥೆ, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೮೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಮೆಕ್ಕೆಜೋಳ, ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಶೇಂಗಾ, ಬಾಳೆ, ಸೂರ್ಯಕಾಂತಿ, ಅಡಿಕೆ ಮತ್ತು ತೆಂಗನ್ನು ಬೆಳೆಯಲಾಗುತ್ತಿದೆ. ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ಆರ್ಮಿ ಇಲಾಖೆಗಳಿಗೆ ಸೇರಿದ ೫ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಒಬ್ಬರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೊಂಡವಾಡಿ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೊಂಡವಾಡಿ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೊಂಡವಾಡಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೪೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೯ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಮೂವರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೫.೩೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಕಾಫಿ–ಟೀ ದೊರೆಯುವ ೬ ಹೋಟೆಲ್‌ಗಳಿದ್ದು ೮ ಅಂಗಡಿಗಳಿವೆ. ಇಲ್ಲಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ಇದೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ, ಆಂಜನೇಯ, ಶನಿಮಹಾತ್ಮ, ಮಾರಮ್ಮ, ಬಸವಣ್ಣ, ಸಪ್ಲಮ್ಮ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮ, ಸಪ್ಲಮ್ಮ ಅದ್ಧೂರಿಯಾಗಿ ಜಾತ್ರೆ ನಡೆಯುತ್ತದೆ. ಗ್ರಾಮದ ಜನರು ತಮ್ಮ ಇಷ್ಟಾರ್ಥ ಸಿದ್ಧಿಗಾಗಿ ದೇವರಲ್ಲಿ ಹರಕೆ ಹೊರುವ, ಬಲಿ ನೀಡುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹೊಸಪಾಳ್ಯ

ಹೊಸಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಉತ್ತರ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೩ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೭೦.೭೯ ಹೆಕ್ಟೇರ್ ಹೊಂದಿದ್ದು ಕೋಡಗದಾಲ ಭೂ ವಿಸ್ತೀರ್ಣದಲ್ಲಿ ಸೇರಿರುವ ಮಜರೆ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮ ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲ. ಮಾವು, ಹೊಂಗೆ, ಅರಳಿ, ಬೇವು, ಅಕೇಶಿಯಾ, ನೀಲಗಿರಿ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಪಾರಿವಾಳ, ಕೋಗಿಲೆ, ಹದ್ದು, ಕಾಗೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೪ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಕೆರೆ ಹಾಗೂ ಒಂದು ಹಳ್ಳ ಮತ್ತು ಜಯಮಂಗಲಿ ನದಿ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೬ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಗೊಲ್ಲ, ಶಿಳ್ಳೇಕ್ಯಾತರು, ಒಕ್ಕಲಿಗ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೬೯ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೮೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೫೨ ಮತ್ತು ಹೆಂಗಸರು ೧೩೬ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ಉಳಿದಂತೆ ತೊಗರಿ, ಅವರೆ, ಅಡಿಕೆ, ಶೇಂಗಾ, ದಾಳಿಂಬೆ, ಬಾಳೆ ಮತ್ತು ತೆಂಗನ್ನು ಬೆಳೆಯುತ್ತಾರೆ. ಅಡಿಕೆ ಮತ್ತು ತೆಂಗು ಗ್ರಾಮದ ಪ್ರಮುಖ ಸರಕಾಗಿದೆ.

ಶಿಕ್ಷಣ ಇಲಾಖೆ ಹಾಗೂ ಪೊಲೀಸ್ ಇಲಾಖೆಗಳಿಗೆ ಸೇರಿದ ಇಬ್ಬರು ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕೋಡಗದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಕೋಡಗದಾಲ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕೋಡಗದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕೋಡಗದಾಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ. ಗ್ರಾಮದ ಒಟ್ಟು ಸಾಕ್ಷರತಾ ಪ್ರಮಾಣ ೫೬.೮೯%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ ದೇವಾಲಯವಿದೆ. ಇಷ್ಟಾರ್ಥ ಸಿದ್ಧಿಗಾಗಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹನುಮಂತಪುರ

ಹನುಮಂತಪುರ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೮೯.೩೩ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ದೈವದ ಹೆಸರಿನಿಂದ ಗ್ರಾಮಕ್ಕೆ ಈ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ಅರಣ್ಯವನ್ನು ಹೊಂದಿಲ್ಲದಿದ್ದರೂ ಅರಳಿ, ಹೊಂಗೆ, ಹುಣಸೆ, ನೇರಳೆ ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ, ಕೃಷ್ಣಮೃಗ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗರುಡ, ಕೋಗಿಲೆ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಮೇಕೆಗಳು ಮತ್ತು ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ

ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೮ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಬೋವಿ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಲಿಂಗಾಯಿತ, ಗೊಲ್ಲ, ಉಪ್ಪಾರ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೯೨ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೪೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೯೬ ಮತ್ತು ಹೆಂಗಸರು ೨೦೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಶೇಂಗಾ, ಬಾಳೆ, ದಾಳಿಂಬೆ, ಮುಸುಕಿನ ಜೋಳ ಮತ್ತು ತೆಂಗನ್ನು ಬೆಳೆಯುತ್ತಾರೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಮತ್ತು ಕಸೂತಿ ಕೆಲಸ ಮಾಡುವಂತಹ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯಿತ್ತಿ ಕ್ಷೇತ್ರ ಹಾಗೂ ಬ್ಯಾಲ್ಯ ಗ್ರಾಮಪಂಚಾಯಿತ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಬ್ಯಾಲ್ಯ ಗ್ರಾಮದಲ್ಲಿ ಗ್ರಾಮಪಂಚಾಯಿತ್ತಿ ಕಾರ್ಯಾಲಯವಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯಿತ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬ್ಯಾಲ್ಯ ಗ್ರಾಮಪಂಚಾಯಿತ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಬ್ಯಾಲ್ಯ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೬೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೮೯%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಕಾಫಿ ಮತ್ತು ಟೀ ದೊರೆಯುವ ೩ ಹೋಟೆಲ್ ಇದ್ದು ೪ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಮುತ್ಯಾಲಮ್ಮ, ಆಂಜನೇಯ ದೇವಾಲಯಗಳು ಕಂಡುಬರುತ್ತದೆ. ಗ್ರಾಮದಲ್ಲಿ ಹರಕೆ ಹೊರುವ, ಬಲಿಯನ್ನು ನೀಡುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹಂದ್ರಾಳು

ಹಂದ್ರಾಳು ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೬ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೨೪೪.೫೮ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ. ಹರಡಿಕೊಂಡಿರುವ ಆಲದ ಮರದ ಲಕ್ಷಣಗಳಿಂದ ಕೂಡಿದ ಭೂ ಪ್ರದೇಶದಲ್ಲಿ ರಚನೆಯಾದುದರಿಂದ ಹಂದರ–ಆಲ = ಹಂದರಾಳು ಎಂದಾಗಿದೆ. ವಿಜಯನಗರ ಕಾಲದ ಶಾಸನದಲ್ಲಿ ಈ ಗ್ರಾಮವನ್ನು ಶ್ರೀರಂಗಪುರ ಎಂದು ಉಲ್ಲೇಖಿಸಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ಅರಣ್ಯವನ್ನು ಹೊಂದಿಲ್ಲದಿದ್ದರೂ ತಾರೆ, ಜಾಲಾರಿ, ಆಲ, ಅಕೇಶಿಯಾ, ಬಾಳೆ, ಮಾವು ಮೊದಲಾದ ಮರಗಳು ಕಂಡುಬರುತ್ತವೆ. ಪ್ರಾಣಿಗಳಾದ ನರಿ, ತೋಳ, ಕಾಡುಹಂದಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ನವಿಲು, ಪಾರಿವಾಳ, ಗೌಜುಗ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಸೀಮೆಹಸು, ಎಮ್ಮೆ, ಕುರಿ, ಹಂದಿಗಳು ಮತ್ತು ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೫ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಒಂದು ಹಳ್ಳ ಕಂಡುಬರುತ್ತದೆ. ಇವು ಜಾನುವಾರುಗಳು ಹಾಗೂ ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಶೆಟ್ಟಿ ಬಣಜಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಒಕ್ಕಲಿಗ, ಬ್ರಾಹ್ಮಣ, ನಾಯಕ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೬೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೬೦೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೨೮೯ ಮತ್ತು ಹೆಂಗಸರು ೩೧೩ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಸಾಂಪ್ರದಾಯಿಕ ಎತ್ತಿನ ಗಾಡಿಗಳು, ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೪೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ಭತ್ತ, ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅವರೆ, ತೊಗರಿ, ಶೇಂಗಾ, ಸೂರ್ಯಕಾಂತಿ, ಬಾಳೆ, ಅಡಿಕೆ, ದಾಳಿಂಬೆ ಮತ್ತು ತೆಂಗನ್ನು ಬೆಳೆಯುತ್ತಾರೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ. ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆಗೆ ಸೇರಿದ ೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಟೈಲರಿಂಗ್ ಕೆಲಸ ಮಾಡುವಂತಹ ೩ ಜನರು ಕಂಡುಬರುತ್ತಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡುಬರುವುದಿಲ್ಲ.

ಗ್ರಾಮವು ಕೊರಟಗೆರೆ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಪುರವರ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಬ್ಯಾಲ್ಯ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಬ್ಯಾಲ್ಯ ಗ್ರಾಮದಲ್ಲಿ ಗ್ರಾಮಪಂಚಾಯ್ತಿ ಕಾರ್ಯಾಲಯವಿದೆ. ಈ ಗ್ರಾಮದಿಂದ ಇಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ

ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಕೊಡಿಗೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಬ್ಯಾಲ್ಯ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಬ್ಯಾಲ್ಯ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಚರ ದೂರವಾಣಿಗಳನ್ನು ಹೊಂದಿದೆ. ಇವುಗಳೇ ದೂರಸಂಪರ್ಕ ಸಾಧನಗಳಾಗಿವೆ. ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೨ ಸ್ತ್ರೀಶಕ್ತಿ ಸಂಘ ಹಾಗೂ ೧ ಧರ್ಮಸ್ಥಳ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೧ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೯೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ನಾಲ್ಕು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೭.೩೦%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ಗ್ರಾಮದಲ್ಲಿ ಕಾಫಿ ಮತ್ತು ಟೀ ದೊರೆಯುವ ೪ ಹೋಟೆಲ್ ಇದ್ದು ೫ ಅಂಗಡಿಗಳಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಕ್ರಿ.ಶ.೧೫೦೩ ರ ವಿಜಯನಗರ ಕಾಲದ ಶಾಸನವಿದ್ದು ಸಾಳುವ ನರಸಿಂಹಗಾಯನ ಆಳ್ವಿಕೆಯನ್ನು ಉಲ್ಲೇಖಿಸುತ್ತದೆ.

ಗ್ರಾಮದಲ್ಲಿ ರಂಗನಾಥಸ್ವಾಮಿ, ಮಾರಮ್ಮ, ಹಟ್ಟಿಮಾರಮ್ಮ ದೇವಾಲಯಗಳು ಕಂಡುಬರುತ್ತದೆ. ಗ್ರಾಮದಲ್ಲಿ ಹರಕೆ ಹೊರುವ ಆಚರಣೆಗಳು ರೂಢಿಯಲ್ಲಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ. ರಂಗನಾಥಸ್ವಾಮಿಯ ಕಲ್ಲುಗಾಲಿ ರಥ, ಜಾತ್ರೆ ನಡೆಯುತ್ತದೆ.

## ಹನುಮಂತರಾಯನಪಾಳ್ಯ

ಹನುಮಂತರಾಯನಪಾಳ್ಯ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೭ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೪೧೦.೪೩ ಹೆಕ್ಟೇರ್ ಹೊಂದಿದ್ದು ಮಜರೆ ಗ್ರಾಮವಾಗಿದೆ. ಗ್ರಾಮದ ಭೂವಿಸ್ತೀರ್ಣವು ಕುಣಿಗಲ್ ತಿಮ್ಮನಹಳ್ಳಿ ವಿಸ್ತೀರ್ಣದಲ್ಲಿ ಸೇರಿದೆ.

ಗ್ರಾಮದಲ್ಲಿ ಹನುಮಂತರಾಯನ ದೇವಾಲಯವಿರುವುದರಿಂದ ಗ್ರಾಮಕ್ಕೆ ಹನುಮಂತರಾಯನಪಾಳ್ಯವೆಂದು ನಾಮಕರಣ ಮಾಡಿದ್ದಾರೆಂದು ಹಿರಿಯರು ಹೇಳುತ್ತಾರೆ. ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳಿಂದ ಕೂಡಿದ ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ. ಗ್ರಾಮದ ಸುತ್ತಲೂ ಗುಡ್ಡಗಳಿವೆ.

ಗ್ರಾಮ ಕುರುಚಲು ಗಿಡದ ಅರಣ್ಯ ಪ್ರದೇಶವಿದ್ದು ಪ್ರಾಣಿಗಳಾದ ಕರಡಿ, ನರಿ, ತೋಳ, ಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಕಾಗೆ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಹಸು, ಎಮ್ಮೆ, ದನ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದ ಕುಡಿಯುವ ನೀರಿನ ಸಲುವಾಗಿ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ತಿಗಳ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಒಕ್ಕಲಿಗ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ.

ಒಟ್ಟು ೭೩ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೪೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೬೧ ಮತ್ತು

ಹೆಂಗಸರು ೨೮೦ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಇಟ್ಟಿಗೆ ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಟ್ರ್ಯಕ್ಟರ್, ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೩ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ಕೂಲಿ ಮಾಡುವ ಜನರೂ ಕಂಡುಬರುತ್ತಾರೆ. ರಾಗಿ ಮುಖ್ಯ ಬೆಳೆಯಾಗಿದೆ. ಉಳಿದಂತೆ ಅಡಿಕೆ, ತೆಂಗು, ಹೂವು ಬೆಳೆಯುತ್ತಾರೆ. ಅಡಿಕೆ, ತೆಂಗು ಹಾಗೂ ಹೂವು ಗ್ರಾಮದ ವ್ಯಾಪಾರದಲ್ಲಿನ ಪ್ರಮುಖ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಮಿನಿ ಡೈರಿ ಗ್ರಾಮದಲ್ಲಿದೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕವಣದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಿಂದ ಒಬ್ಬರು ಸದಸ್ಯರು ಗ್ರಾಮ ಪಂಚಾಯ್ತಿಗೆ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕವಣದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಹನುಮನಹಳ್ಳಿ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಇಲ್ಲಿ ಮೊಬೈಲ್‌ನಂತಹ ದೂರಸಂಪರ್ಕ ಸಾಧನಗಳಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು–ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೩ ಸ್ತ್ರೀಶಕ್ತಿ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೨ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೩೧ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಇಬ್ಬರು ಶಿಕ್ಷಕರು, ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೪%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ೩ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ ದೇವಾಲಯವಿದೆ. ಪ್ರತಿ ವರ್ಷ ಜಾತ್ರಾ ಮಹೋತ್ಸವವನ್ನು ತೇರು ಎಳೆಯುವುದರೊಂದಿಗೆ ಆಚರಿಸುವರು. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹನುಮನಹಳ್ಳಿ

ಹನುಮನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೯ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೭೩.೯೪ ಹೆಕ್ಟೇರ್ ಹೊಂದಿದ್ದು ಕಂದಾಯ ಗ್ರಾಮವಾಗಿದೆ.

ಗ್ರಾಮಕ್ಕೆ ಈ ಹೆಸರು ಬರಲು ಕಾರಣವನ್ನು ಹಿರಿಯರು ಹೇಳುವಂತೆ ಗ್ರಾಮದಲ್ಲಿ ಒಂದು ಹನುಮನ ದೇವಾಲಯವಿದ್ದು ಗ್ರಾಮಸ್ಥರು ಅತ್ಯಂತ ವೈಭವವಾಗಿ ಸ್ವಾಮಿಯ ಆರಾಧನೆ ಮಾಡುತ್ತಿದ್ದರಂತೆ. ಆದ ಕಾರಣ ಗ್ರಾಮಕ್ಕೆ ಹನುಮನಹಳ್ಳಿ ಎಂದು ನಾಮಕರಣ ಮಾಡಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ ಜಂಬಿಟ್ಟಿಗೆ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಗ್ರಾಮವು ಯಾವುದೇ ರೀತಿಯ ಅರಣ್ಯ ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕರಡಿ, ಹಂದಿ, ಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ

ನವಿಲು, ಗಿಳಿ, ಕೋಗಿಲೆ, ಮರಕುಟಿಕ, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ಎಮ್ಮೆ, ಕುರಿ, ಮೇಕೆಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೬ ಮಿಮೀ ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮಪಂಚಾಯ್ತಿಯ ಸಹಾಯದಿಂದ ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೨೦ ಸಾರ್ವಜನಿಕ ನಲ್ಲಿಗಳಿದ್ದು ೧೦ ಸಿಸ್ಟರ್ನ್‌ಗಳಿವೆ. ಅವುಗಳ ಮೂಲಕ ಗ್ರಾಮಸ್ಥರು ನೀರನ್ನು ಪಡೆಯುತ್ತಿದ್ದಾರೆ.

ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿಕರ್ನಾಟಕ, ಮಡಿವಾಳ, ಮುಸ್ಲಿಂ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಮುಸ್ಲಿಂ ಜನಾಂಗದವರು ಉರ್ದು ಭಾಷೆಯನ್ನು ಬಳಸುವರು.

ಒಟ್ಟು ೧೦೫ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೪೩೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಗುಡಿಸಲು ಮನೆ ಮತ್ತು ಮಣ್ಣಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್‌ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಸುವರ್ಣ ಯೋಜನೆಯಡಿ ಗ್ರಾಮದಲ್ಲಿ ರಸ್ತೆಗಳು ಉತ್ತಮವಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ, ತೊಗರಿ ಮತ್ತು ಭತ್ತ ಮುಖ್ಯ ಬೆಳೆಯಾಗಿದೆ. ವಾಣಿಜ್ಯ ಬೆಳೆಯಾಗಿ ಅಡಿಕೆ, ತೆಂಗು, ಹುಣಸೆ ಬೆಳೆಯುವರು. ಅಡಿಕೆ, ತೆಂಗು ಹಾಗೂ ಹುಣಸೆ ಗ್ರಾಮದ ವ್ಯಾಪಾರದಲ್ಲಿನ ಪ್ರಮುಖ ಸರಕಾಗಿದೆ. ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಆಧುನಿಕ ಡೈರಿ ಗ್ರಾಮದಲ್ಲಿದೆ.

ಗ್ರಾಮದಲ್ಲಿ ಕಾಲೇಜು ಶಿಕ್ಷಣ ಇಲಾಖೆ, ಕೃಷಿ, ಸಾರಿಗೆ ಇಲಾಖೆಗೆ ಸೇರಿದ ೧೨ ಜನ ಸರ್ಕಾರಿ ನೌಕರರಿದ್ದಾರೆ. ಹೆಚ್.ಡಿ. ನಾಗರಾಜ್ ಸರ್ಕಾರಿ ನೌಕರರ ಸಂಘದ ನಿರ್ದೇಶಕರಾಗಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ದೊಡ್ಡೇರಿ ಜಿಲ್ಲಾ ಪಂಚಾಯ್ತಿ ಕ್ಷೇತ್ರ ಹಾಗೂ ಕವಣದಾಲ ಗ್ರಾಮಪಂಚಾಯ್ತಿ ವ್ಯಾಪ್ತಿಗೆ ಒಳಪಟ್ಟಿದೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿ ಇದೆ. ಬಡವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ಕುಡಿಯುವ ನೀರಿನ ಸರಬರಾಜು ಕವಣದಾಲ ಗ್ರಾಮಪಂಚಾಯ್ತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಕವಣದಲ ಅಂಚೆ ವ್ಯಾಪ್ತಿಗೆ ಒಳಪಟ್ಟಿದೆ. ಇಲ್ಲಿ ಮೊಬೈಲ್‌ನಂತಹ ದೂರಸಂಪರ್ಕ ಸಾಧನಗಳಿವೆ.

ಸಣ್ಣಪುಟ್ಟ ಕಲಹ ವ್ಯಾಜ್ಯಗಳನ್ನು ಗ್ರಾಮದ ಹಿರಿಯರು-ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತದೆ. ಉಳಿದವು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ. ಗ್ರಾಮದಲ್ಲಿ ೧ ಸ್ತ್ರೀಶಕ್ತಿ ಸಂಘ ಹಾಗೂ ೪ ಸ್ವಸಹಾಯ ಸಂಘಗಳಿವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೨೫ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಸರ್ಕಾರಿ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೧೫೮ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಏಳು ಜನ ಶಿಕ್ಷಕರು, ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೬.೫%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ಜ್ವರ, ಕೆಮ್ಮು ಮೊದಲಾದ ಸಾಮಾನ್ಯ

ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ೩ ಕಾಫಿ-ಟೀ ದೊರೆಯುವ ಹೋಟೆಲ್ ಹಾಗೂ ೨ ಅಂಗಡಿಗಳಿವೆ.

ಗ್ರಾಮದಲ್ಲಿ ಆಂಜನೇಯಸ್ವಾಮಿ, ಕೊಲ್ಲಾಪುರದಮ್ಮ, ಶನಿಮಹಾತ್ಮ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ-ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹಾಲಪ್ಪನಹಳ್ಳಿ

ಹಾಲಪ್ಪನಹಳ್ಳಿಯು ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ಗರಣಿಯ ಹೊರವಲಯದಲ್ಲಿದೆ. ಹಾಲಪ್ಪ ಎಂಬ ವ್ಯಕ್ತಿ ಮೂಲದಿಂದಾಗಿ ಹಾಲಪ್ಪನ ಹಳ್ಳಿ ಎಂದು ಕರೆಯುತ್ತಾರೆ. ಒಟ್ಟು ೧೦ ಮನೆಗಳನ್ನು ಹೊಂದಿದ್ದು ೩೮ ಜನಸಂಖ್ಯೆಯನ್ನು ಹೊಂದಿದೆ. ಒಕ್ಕಲಿಗ, ನಾಯಕ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಗರಣಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ವ್ಯವಸಾಯ ಮುಖ್ಯ ಉದ್ಯೋಗವಾಗಿದೆ. ಒಬ್ಬರು ಶಿಕ್ಷಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಹೊಸಗೊಲ್ಲರಹಟ್ಟಿ

ಹೊಸಗೊಲ್ಲರಹಟ್ಟಿಯು ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ಗರಣಿಯ ಹೊರವಲಯದಲ್ಲಿದೆ.

ಒಟ್ಟು ೩೫ ಮನೆಗಳನ್ನು ಹೊಂದಿದ್ದು ೧೪೮ ಜನಸಂಖ್ಯೆಯನ್ನು ಹೊಂದಿದೆ. ಗೊಲ್ಲ ಜನಾಂಗದವರು ಮಾತ್ರ ಗ್ರಾಮದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಗರಣಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ವ್ಯವಸಾಯ ಹಾಗೂ ಪಶುಸಂಗೋಪನೆ ಮುಖ್ಯ ಉದ್ಯೋಗವಾಗಿದೆ. ಗ್ರಾಮದಲ್ಲಿ ಮುನೇಶ್ವರ ದೇವಸ್ಥಾನವಿದೆ. ಮುನೇಶ್ವರನಿಗೆ ಆರತಿ ಮಾಡುವರು. ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಹೊಸಕೋಟೆ

ಹೊಸಕೋಟೆ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೨ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ಗರಣಿ ಭೂ ವಿಸ್ತೀರ್ಣಕ್ಕೆ ಸೇರಿರುತ್ತದೆ ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ ಗ್ರಾಮದಲ್ಲಿ ಹತ್ತು ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಬೋವಿ ಜನಾಂಗದವರೆ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಪ್ಪಾರ, ಒಕ್ಕಲಿಗ, ಲಂಬಾಣಿ, ಬಲಜಿಗ, ನಾಯಕ, ಶೆಟ್ರು ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದಲ್ಲಿ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೩೧ ಮನೆಗಳಿದ್ದು ಒಟ್ಟು ೫೯೮ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ ಗಂಡು ೩೨೨, ಹೆಣ್ಣು ೨೭೬ ಜನಸಂಖ್ಯೆ ಹೊಂದಿದೆ ಗ್ರಾಮದಲ್ಲಿ ಕಾಂಕ್ರೀಟ್ ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಯನ್ನು ಹೊಂದಿದ್ದು ಚರಂಡಿ ವ್ಯವಸ್ಥೆ ಕಂಡುಬರುತ್ತದೆ.. ಗ್ರಾಮದಲ್ಲಿ ೨೫ ಶೌಚಾಲಯ ಹೊಂದಿದ ಮನೆಗಳಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಬೆಳೆಯನ್ನು ಬೆಳೆಯುತ್ತಾರೆ ತೆಂಗು ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆಯಲ್ಲಿ ಇಲ್ಲಿನ ಜನ ತೊಡಗಿದ್ದಾರೆ.

ಸಾರಿಗೆ ಇಲಾಖೆ, ಶಿಕ್ಷಣ ಇಲಾಖೆ ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ಮೂರು ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಉಳಿದಂತೆ ಯಾವುದೇ ರೀತಿಯ ಕೈಗಾರಿಕೆಗಳು ಕಂಡು ಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಗರಣಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ ಗರಣಿ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ ಒಟ್ಟು ಒಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಗರಣಿ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಗರಣಿ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ ಒಟ್ಟು ೪೮ ಮಕ್ಕಳಿದ್ದಾರೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಿದ್ದು ಒಟ್ಟು ೯೮ ಮಕ್ಕಳಿದ್ದಾರೆ, ೩ ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೫೬.೫%. ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೋಟೇಲ್ ಇದ್ದು ಎರಡು ಅಂಗಡಿಗಳಿವೆ ಈ ಗ್ರಾಮದಲ್ಲಿ ಜ್ವರ ಕೆಮ್ಮು ಮೊದಲಾದ ಸಾಮಾನ್ಯ ರೋಗಗಳು ಕಂಡು ಬರುತ್ತವೆ.

ಗ್ರಾಮದಲ್ಲಿ ಯಲ್ಲಮ್ಮ, ಚೌಡಮ್ಮ, ಹಟ್ಟಿಮಾರಮ್ಮ, ವೆಂಕಟರಮಣಸ್ವಾಮಿ, ಆಂಜನೇಯ, ದುರ್ಗಮ್ಮ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹೊಸಕೋಟೆ ಜನತಾ ಹೌಸಿಂಗ್ ಕಾಲೋನಿ

ಹೊಸಕೋಟೆ ಜನತಾ ಹೌಸಿಂಗ್ ಕಾಲೋನಿಯು ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ಗರಣಿಯ ಹೊರವಲಯದಲ್ಲಿದೆ. ಹಾಲಪ್ಪ ಎಂಬ ವ್ಯಕ್ತಿ ಮೂಲದಿಂದಾಗಿ ಹಾಲಪ್ಪನ ಹಳ್ಳಿ ಎಂದು ಕರೆಯುತ್ತಾರೆ.

ಒಟ್ಟು ೧೦ ಮನೆಗಳನ್ನು ಹೊಂದಿದ್ದು ೩೮ ಜನಸಂಖ್ಯೆಯನ್ನು ಹೊಂದಿದೆ. ಒಕ್ಕಲಿಗ, ನಾಯಕ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ ಹಾಗೂ ತೆಲುಗು ಮಾತನಾಡುವರು. ರಾಗಿಮುದ್ದೆ, ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಗರಣಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ. ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಹೊಸಕೋಟೆ ಲಂಬಾಣಿ ತಾಂಡ

ಹೊಸಕೋಟೆ ಲಂಬಾಣಿ ತಾಂಡವು ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ಹೊಸಕೋಟೆಯ ಹೊರವಲಯದಲ್ಲಿದೆ. ಗರಣಿ ಗ್ರಾಮಕ್ಕೆ ಸೇರಿದೆ.

ಒಟ್ಟು ೧೦ ಮನೆಗಳನ್ನು ಹೊಂದಿದ್ದು ೪೮ ಜನಸಂಖ್ಯೆಯನ್ನು ಹೊಂದಿದೆ. ಲಂಬಾಣಿ ಜನಾಂಗದವರು ಗ್ರಾಮದಲ್ಲಿದ್ದಾರೆ. ಕನ್ನಡ , ಲಂಬಾಣಿ ಹಾಗೂ ತೆಲುಗು

ಮಾತನಾಡುವರು. ರಾಗಿಮುದ್ದೆ, ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ ವಿಶೇಷ ಆಹಾರವಾಗಿದೆ.

ಗರಣಿ ಗ್ರಾಮಪಂಚಾಯ್ತಿಯು ಕಿರುನೀರು ಸರಬರಾಜಿನ ಮುಖೇನ ನೀರನ್ನು ಒದಗಿಸುತ್ತದೆ. ಕೂಲಿ ಮಾಡುವವರು ಗ್ರಾಮದಲ್ಲಿದ್ದಾರೆ. ಪೊಲೀಸ್ ಇಲಾಖೆಯಲ್ಲಿ ಒಬ್ಬರು ಸೇವೆ ಸಲ್ಲಿಸುತ್ತಿದ್ದಾರೆ. ಗ್ರಾಮದಲ್ಲಿ ಯುಗಾದಿ, ಶಿವರಾತ್ರಿ, ದೀಪಾವಳಿ, ಗೌರಿ-ಗಣೇಶ, ಸಂಕ್ರಾಂತಿ ಹಬ್ಬಗಳನ್ನು ಆಚರಿಸುತ್ತಾರೆ.

## ಹೊಸ ಇಟಕಲೋಟಿ

ಹೊಸ ಇಟಕಲೋಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೫೩೦.೭೩ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ.

ಇಟ್ಟಿಗೆ ತಯಾರಿಸುವ ಸ್ಥಳದಲ್ಲಿ ಗ್ರಾಮ ರಚನೆಯಾದುದರಿಂದ ಇಟಕಲೋಟಿ ಎಂದು ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ. ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ, ಗೌಜುಗ, ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವುಗಳನ್ನು ಜಾನುವಾರುಗಳಿಗೆ ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಆದಿಕರ್ನಾಟಕ, ಆದಿದ್ರಾವಿಡ, ಮಡಿವಾಳ ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೨೬ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೬೧೬ ಜನಸಂಖ್ಯೆ ಇದ್ದು ಗಂಡು ೩೧೦, ಹೆಣ್ಣು ೩೦೬ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಈ ಗ್ರಾಮದಲ್ಲಿ ಉತ್ತಮವಾದ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ..

ವ್ಯವಸಾಯ ಇಲ್ಲಿನ ಮುಖ್ಯ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ತೆಂಗು ಅಡಿಕೆ ಬೆಳೆಯುತ್ತಾರೆ, ತೆಂಗು ಮತ್ತು ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಇಲ್ಲಿನ ರೈತರು ಉಪ ಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ ಹಾಗೂ ವಿದ್ಯುತ್ ಇಲಾಖೆಗಳಿಗೆ ಸಂಬಂಧಿಸಿದ ೦೩ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಇಂಜಿನಿಯರ್-೦೧, ಬಡಗಿ-೦೨ ಉದ್ಯೋಗಿಗಳು ಇದ್ದಾರೆ ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ. ಒಬ್ಬರು ಟೈಲರ್ ಇದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಚಿಕ್ಕದವಳಾವಟ್ಟ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಇಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಚೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ

ಚಿಕ್ಕದಾಳವಟ್ಟ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಚಿಕ್ಕದಾಳವಟ್ಟ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ. ಗ್ರಾಮದ ಒಟ್ಟು ಸಾಕ್ಷರತೆ ೬೧.೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ೦೨ ಹೋಟೇಲ್ ಇದ್ದು, ಈ ಗ್ರಾಮದಲ್ಲಿ ೧ ಅಂಗಡಿಗಳಿವೆ. ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ.

ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

### ಹಳೇ ಇಟಕಲೋಟಿ

ಹಳೇ ಇಟಕಲೋಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೨೮ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೪೭೫.೪೫ ಹೆಕ್ಟೇರ್ಸ್ ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕಾಡುಹಂದಿ ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮಕ್ಕೆ ಸೇರಿದಂತೆ ಕೆರೆ ಮತ್ತು ಹಳ್ಳಗಳನ್ನು ಒಳಗೊಂಡಿದೆ ಇವು ಜಾನುವಾರುಗಳು ಮತ್ತು ಕೃಷಿಗೆ ನೀರನ್ನು ಒದಗಿಸುತ್ತಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೧೦ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಆದಿಕರ್ನಾಟಕ, ಗೊಲ್ಲ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಕುರುಬ, ನಾಯಕ, ಪಿಂಜಾರ, ಉಪ್ಪಾರ, ಮಡಿವಾಳ, ಶೆಟ್ರು, ಬ್ರಾಹ್ಮಣ, ಆದಿದ್ರಾವಿಡ ಜನಾಂಗದವರು ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರು ಗ್ರಾಮದಲ್ಲಿದ್ದಾರೆ.

ಒಟ್ಟು ೧೨೭ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೫೭೬೫ ಜನಸಂಖ್ಯೆ ಹೊಂದಿದೆ. ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಾಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಈ ಗ್ರಾಮದಲ್ಲಿ ರಸ್ತೆ ವ್ಯವಸ್ಥೆ ಚರಂಡಿ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಅಡಿಕೆ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಮತ್ತು ಅಡಿಕೆ ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ, ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ, ಸಾರಿಗೆ ಇಲಾಖೆ, ವಿದ್ಯುತ್ ಇಲಾಖೆಗಳಿಗೆ ಸಂಬಂಧಪಟ್ಟ ೦೩ ಸರ್ಕಾರಿ ನೌಕರರು ಗ್ರಾಮದಲ್ಲಿದ್ದು ಗಂಧದಕಡ್ಡಿ ತಯಾರಿಕೆ ಮಾಡುವವರು ೨ ಜನ ಗ್ರಾಮದಲ್ಲಿದ್ದಾರೆ ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಚಿಕ್ಕದಾಳವಟ್ಟ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಒಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಚಿಕ್ಕದಾಳವಟ್ಟ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಚಿಕ್ಕದಾಳವಟ್ಟ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಬಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೦೧ ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳಿದ್ದಾರೆ, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕಿ ಇದ್ದಾರೆ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ೫೪ ವಿದ್ಯಾರ್ಥಿಗಳಿದ್ದು ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೭.೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೋಟೇಲ್ ಇದ್ದು, ಎರಡು ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹಳೇ ಗೊಲ್ಲರಹಟ್ಟಿ

ಹಳೇ ಗೊಲ್ಲರಹಟ್ಟಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ೧೬ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ಬ್ರಹ್ಮ ಸಮುದ್ರ ಭೂ ವಿಸ್ತೀರ್ಣದಲ್ಲಿ ಸೇರಿದೆ, ಕಂದಾಯ ಗ್ರಾಮವಾಗಿದೆ. ಜಾತಿ ಮೂಲದಿಂದ ಗ್ರಾಮಕ್ಕೆ ಹೆಸರು ಬಂದಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೯ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೧ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೦೩ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಗೊಲ್ಲರು ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ ನಾಯಕ. ಜನಾಂಗ ಕಿರು ಸಮುದಾಯವಾಗಿದೆ ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ.

ಒಟ್ಟು ೯೦ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೩೨೦ ಜನಸಂಖ್ಯಾ

ಪ್ರಮಾಣವನ್ನು ಗಂಡು–೧೮೦, ಹೆಣ್ಣು–೧೪೦ ಹೊಂದಿದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ರಸ್ತೆ ವ್ಯವಸ್ಥೆ ಹಾಗೂ ಚರಂಡಿ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೫ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ತೆಂಗು ಗ್ರಾಮದ ವ್ಯಾಪಾರದಲ್ಲಿನ ಮುಖ್ಯ ಸರಕಾಗಿದೆ.

ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆಯನ್ನು ರೈತರು ಉಪಕಸುಬಾಗಿ ಬಳಸಿಕೊಂಡಿದ್ದಾರೆ.

ಶಿಕ್ಷಣ ಇಲಾಖೆ, ಹಾಗೂ ಪೋಲಿಸ್ ಇಲಾಖೆಗಳಿಗೆ ಸೇರಿದ ಒಟ್ಟು ೦೪ ಸರ್ಕಾರಿ ನೌಕರರು ಇದ್ದಾರೆ. ಉಳಿದಂತೆ ಯಾವುದೇ ರೀತಿಯ ಕೈಗಾರಿಕೆ ಕಂಡುಬರುವುದಿಲ್ಲ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಐ.ಡಿ.ಹಳ್ಳಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ, ಬ್ರಹ್ಮಸಮುದ್ರ ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ, ಒಟ್ಟು ಒಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ ಬ್ರಹ್ಮ ಸಮುದ್ರ ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ಬ್ರಹ್ಮಸಮುದ್ರ ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ದಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಒಂದು ಹೊಟೇಲ್ ಇದ್ದು, ಎರಡು ಅಂಗಡಿಗಳಿವೆ.

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಗೊಲ್ಲಳ್ಳಿ ಮಾರಮ್ಮ, ತಿಮ್ಮಪ್ಪ, ಬೆಳಗೆರೆ ರಂಗಪ್ಪ ದೇವಾಲಯಗಳಿವೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ಹೂವಿನಹಳ್ಳಿ

ಹೂವಿನಹಳ್ಳಿ ಗ್ರಾಮವು ಮಧುಗಿರಿ ತಾಲ್ಲೂಕು ಕೇಂದ್ರದ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ ದೂರದಲ್ಲಿದೆ ಒಟ್ಟು ಭೌಗೋಳಿಕ ವಿಸ್ತೀರ್ಣ ೧೯೭.೨೯ ಹೆಕ್ಟೇರ್ಸ್, ಕಂದಾಯ ಗ್ರಾಮವಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕಪ್ಪು ಮತ್ತು ಬೆಣಚು ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ ಮತ್ತು ಸಣ್ಣ ಸಣ್ಣ ಗುಡ್ಡಗಳಿವೆ.

ಗ್ರಾಮವು ಯಾವುದೇ ರೀತಿಯ ಅರಣ್ಯವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ. ಕಾಡುಹಂದಿ. ಕಂಡುಬರುತ್ತದೆ. ಉಳಿದಂತೆ ಹಲವು ಜಾತಿಯ ವಿಷಪೂರಿತ ಹಾವುಗಳು ಕಂಡು ಬರುತ್ತವೆ.

ಪಕ್ಷಿಗಳಾದ ಗೊರವಂಕ ಗೌಜುಗ ಗಿಳಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ, ಗ್ರಾಮದಲ್ಲಿ ಸೀಮೆಹಸು ಎಮ್ಮೆ ಕುರಿ ಮತ್ತು ಮೇಕೆಗಳನ್ನು ಸಾಕುತ್ತಾರೆ ಸಾಕು ಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲ ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೭ ಮಿ.ಮೀ. ಮಳೆ ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಗ್ರಾಮದ ಕುಡಿಯುವ ನೀರಿನ ಸಲುವಾಗಿ ೨ ಕೊಳವೆ ಬಾವಿಗಳಿದ್ದು ಗ್ರಾಮವು ಕಿರುನೀರು ಸರಬರಾಜಿನ

ಮುಖೇನ ಗ್ರಾಮಕ್ಕೆ ನೀರನ್ನು ಒದಗಿಸುತ್ತದೆ. ಗ್ರಾಮದಲ್ಲಿ ೦೪ ಸಾರ್ವಜನಿಕ ನಲ್ಲಿಗಳಿದ್ದು ಎರಡು ಸಿಸ್ಟನ್‌ಗಳಿವೆ.

ಕುರುಬ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ನಾಯಕ, ಉಪ್ಪಾರ ಜನಾಂಗ ಕಿರು ಸಮುದಾಯವಾಗಿದೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡದಲ್ಲೇ ಮಾತನಾಡುತ್ತಾರೆ. ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೧೧೨ ಮನೆಗಳನ್ನು ಹೊಂದಿರುವ ಗ್ರಾಮವು ೨೦೧೧ರ ಜನಗಣತಿಯ ಪ್ರಕಾರ ೫೧೫ ಜನಸಂಖ್ಯೆ ಹೊಂದಿದ್ದು ಗಂಡು–೨೫೫, ಹೆಣ್ಣು–೨೬೦ ಜನಸಂಖ್ಯೆ ಇದೆ ಗ್ರಾಮದಲ್ಲಿ ಕಾಂಕ್ರೀಟ್‌ಮನೆ ಕಲ್ಲಿನಮನೆ ಹೆಂಚಿನ ಮನೆ, ಹಾಗೂ ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆ ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ ಗ್ರಾಮದ ಪ್ರಮುಖ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ಸಾಂಪ್ರದಾಯಿಕ ಎತ್ತಿನಗಾಡಿಗಳಿದ್ದು ಟ್ರ್ಯಕ್ಟರ್ ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ.

ಗ್ರಾಮದಲ್ಲಿ ಉತ್ತಮ ಚರಂಡಿ ವ್ಯವಸ್ಥೆ, ರಸ್ತೆ ವ್ಯವಸ್ಥೆ, ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ಗ್ರಾಮದಲ್ಲಿ ೨೨ ಮನೆಗಳು ಶೌಚಾಲಯ ಹೊಂದಿವೆ.

ವ್ಯವಸಾಯ ಇಲ್ಲಿನ ಪ್ರಮುಖ ಕಸುಬಾಗಿದ್ದು ರಾಗಿ ಮತ್ತು ಭತ್ತ ಮುಖ್ಯ ಬೆಳೆಗಳಾಗಿವೆ ಉಳಿದಂತೆ ತೊಗರಿ ಅವರೆ ಶೇಂಗಾ ಮತ್ತು ತೆಂಗನ್ನು ಬೆಳೆಯುತ್ತಾರೆ, ಸಾಂಪ್ರದಾಯಿಕ ಶೈಲಿಯ ಹೈನುಗಾರಿಕೆ ಇದ್ದು ಒಂದು ಮಿನಿ ಡೈರಿ ಇದೆ, ಇಲ್ಲಿನ ರೈತರು ಉಪಕಸುಬಾಗಿ ಹೈನುಗಾರಿಕೆಯಲ್ಲಿ ತೊಡಗಿಕೊಂಡಿದ್ದಾರೆ. ಇಲ್ಲಿ ಮಿನಿ ಡೈರಿ ಇದೆ.

ಶಿಕ್ಷಣ ಇಲಾಖೆ ಹಾಗೂ ಸಾರಿಗೆ ಇಲಾಖೆಗಳಿಗೆ ಸೇರಿದ ಒಟ್ಟು ೦೪ ಜನ ಸರ್ಕಾರಿ ನೌಕರರು ಗ್ರಾಮದಲ್ಲಿದ್ದಾರೆ.

ಗ್ರಾಮವು ಮಧುಗಿರಿ ವಿಧಾನಸಭಾ ಮತಕ್ಷೇತ್ರಕ್ಕೆ ತುಮಕೂರು ಗ್ರಾಮಾಂತರ ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಐ.ಡಿ.ಹಳ್ಳಿ ಜಿಲ್ಲಾ ಪಂಚಾಯತ್ ಕ್ಷೇತ್ರ ಹಾಗೂ ಗರಣಿ ತಾಲ್ಲೂಕು ಪಂಚಾಯತಿಗೆ ಒಳಪಟ್ಟಿದೆ. ದೊಡ್ಡಯಲ್ಕೂರು ಗ್ರಾಮದಲ್ಲಿ ಗ್ರಾಮ ಪಂಚಾಯಿತಿ ಕಾರ್ಯಾಲಯವಿದೆ. ಒಟ್ಟು ಒಬ್ಬರು ಸದಸ್ಯರುಗಳಿದ್ದು ಒಬ್ಬರು ಪಂಚಾಯಿತಿಯ ನೌಕರರಿದ್ದಾರೆ. ತಹಶೀಲ್ದಾರ್ ಕಛೇರಿ ತಾಲ್ಲೂಕು ಕೇಂದ್ರವಾದ ಮಧುಗಿರಿಯಲ್ಲಿದೆ ಮಿಡಿಗೇಶಿ ಪೋಲಿಸ್ ಠಾಣಾ ವ್ಯಾಪ್ತಿಗೆ ಒಳಪಟ್ಟಿದೆ. ದೊಡ್ಡಯಲ್ಕೂರು ಗ್ರಾಮ ಪಂಚಾಯಿತಿ ಆಡಳಿತ ವ್ಯಾಪ್ತಿಗೆ ಒಳಪಟ್ಟಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಒಸ್ಸುಗಳ ಸೌಲಭ್ಯವಿದೆ ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ ಗ್ರಾಮಕ್ಕೆ ಅಂಚೆ ಸಂಪರ್ಕವಿದ್ದು ಗ್ರಾಮವು ದೊಡ್ಡ ಯಲ್ಕೂರು ಅಂಚೆ ಕಛೇರಿಗೆ ಸೇರಿದೆ ಚರ ದೂರವಾಣಿಗಳು ದೂರ ಸಂಪರ್ಕ ಸಾಧನಗಳು ಗ್ರಾಮದಲ್ಲಿವೆ.

ಸಣ್ಣ ಪುಟ್ಟ ಕಲಹ ವ್ಯಾಜ್ಯಗಳು ಗ್ರಾಮದ ಹಿರಿಯರು ಮುಖಂಡರ ಸಮ್ಮುಖದಲ್ಲಿಯೇ ಒಗೆಹರಿಯುತ್ತವೆ ಉಳಿದವುಗಳು ತಾಲ್ಲೂಕು ಹಾಗೂ ಜಿಲ್ಲಾ ನ್ಯಾಯಾಲಯಗಳವರೆಗೆ ಸಾಗುತ್ತವೆ ಎರಡು ಸ್ತ್ರೀಶಕ್ತಿ ಸಂಘಗಳು ಹಾಗೂ ೧ ಧರ್ಮಸ್ಥಳ ಸಂಘಗಳನ್ನು ಹೊಂದಿದೆ.

ಗ್ರಾಮದಲ್ಲಿ ೧ ಅಂಗನವಾಡಿ ಕೇಂದ್ರವಿದ್ದು ೨೭ ಮಕ್ಕಳಿದ್ದಾರೆ, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬ ಸಹಾಯಕಿ ಇದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದ್ದು ಒಟ್ಟು ೩೭ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ, ಇಲ್ಲಿ ಇಬ್ಬರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಗ್ರಾಮದ ಒಟ್ಟು ಸಾಕ್ಷರತೆ ೬೦.೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾಯೋಜನೆ ವೃದ್ಧಾಪ್ಯವೇತನ ವಿಕಲಚೇತನವೇತನ ವಿಧವಾವೇತನ ಮಾಸಾಶನ ಮೊದಲಾದ ಸೌಲಭ್ಯಗಳು ಚಾಲ್ತಿಯಲ್ಲಿವೆ ಕಾಫಿ, ಟೀ ದೊರೆಯುವ ಎರಡು ಹೊಟೇಲ್ ಇದ್ದು, ಆರು ಅಂಗಡಿಗಳಿವೆ

ಈ ಗ್ರಾಮದಲ್ಲಿ ಜ್ವರ, ಕೆಮ್ಮು, ಮೊದಲಾದ ಸಾಮಾನ್ಯ ರೋಗಗಳು ಕಂಡುಬರುತ್ತವೆ. ಗ್ರಾಮದಲ್ಲಿ ಆಂಜನೇಯ ದೇವಾಲಯವಿದೆ. ಗ್ರಾಮದಲ್ಲಿ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವಾರ್ಡ್ ನಂ.೧ ಹೊಗೆಬೀಳು

ಮಧುಗಿರಿಯ ವಾರ್ಡ್ ನಂ.೧ ಹೊಗೆಬೀಳು ಮಧುಗಿರಿಯ ದಕ್ಷಿಣ ದಿಕ್ಕಿನಲ್ಲಿದ್ದು ಮಧ್ಯಭಾಗದಿಂದ ೧.೫ ಕಿ.ಮೀ. ದೂರದಲ್ಲಿದೆ. ಬಯಲುನಾಡು ಪ್ರದೇಶವಾಗಿದೆ. ಇಲ್ಲಿ ಕೆಂಪು ಕಲ್ಲುಗಳು ಹಾಗೂ ಕೆಂಪುಮಣ್ಣು ಕಂಡುಬರುತ್ತದೆ.

ಯಾವುದೇ ರೀತಿಯ ಕಾಡುಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕಾಡುಮೊಲ, ಕೋತಿಗಳು ಮೊದಲಾದವುಗಳು ಕಂಡು ಬರುತ್ತವೆ. ಪಕ್ಷಿಗಳಾದ ಕಾಗೆ, ಕೋಗಿಲೆ, ಗೊರವಂಕ, ಗುಬ್ಬಚ್ಚಿ ಮೊದಲಾದವುಗಳು ಕಂಡುಬರುತ್ತವೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಇಲ್ಲಿ ಸಾದರು, ಜೈನರು, ಮುಸ್ಲಿಂ, ಒಕ್ಕಲಿಗ, ಆದಿಕರ್ನಾಟಕ, ಶೆಟ್ಟರು, ಲಿಂಗಾಯಿತ ಜನಾಂಗದವರಿದ್ದು ಕನ್ನಡ ಮಾತೃಭಾಷೆಯಾಗಿ ಬಳಸುತ್ತಾರೆ. ಉಳಿದಂತೆ ಉರ್ದು, ತೆಲುಗು ಮಾತನಾಡುವವರಿದ್ದಾರೆ.

ಒಟ್ಟು ೭೯೯ ಮನೆಗಳನ್ನು ಹೊಂದಿರುವ ಗ್ರಾಮವು ೧೪೫೮ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗಂಡಸರು ೬೧೪ ಮತ್ತು ಹೆಂಗಸರು ೮೪೪ ಜನಸಂಖ್ಯೆ ಇದೆ. ಇಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ ಹಾಗೂ ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೪೮ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ-ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷವಾದ ಆಹಾರವಾಗಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಬೇರೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಸುವರ್ಣ ಗ್ರಾಮ ಯೋಜನೆಯಡಿ ಗ್ರಾಮದಲ್ಲಿನ ರಸ್ತೆಗಳೆಲ್ಲವೂ ಸಿಮೆಂಟ್ ರಸ್ತೆಗಳಾಗಿದ್ದು ಚರಂಡಿ ಹಾಗೂ ಶೌಚಾಲಯದ ವ್ಯವಸ್ಥೆಗಳಾಗಿವೆ. ವಾರ್ಡ್‌ನಲ್ಲಿ ೭೯೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಇಲ್ಲಿ ಆಟೋ, ಟೆಂಪೋ, ಬಸ್ಸು, ಕಾರು, ಲಾರಿ ಹಾಗೂ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ. ಗ್ರಾಮದಲ್ಲಿ ಹೆಚ್ಚು ಜನ ಉದ್ಯೋಗಸ್ಥರಾಗಿದ್ದು ಕೆಲವರು ಕೂಲಿ ಹಾಗೂ ಸ್ವಂತ ಉದ್ಯೋಗ ಮಾಡುವವರಾಗಿದ್ದಾರೆ.

ಶಿಕ್ಷಣ ಇಲಾಖೆ, ಸಾರಿಗೆ, ವೈದ್ಯಕೀಯ, ನ್ಯಾಯಾಲಯ, ತಹಸೀಲ್ದಾರ್ ಕಛೇರಿ, ಬಿಇಓ ಕಛೇರಿ, ಕಂದಾಯ ಇಲಾಖೆಗಳಲ್ಲಿ ಕಾರ್ಯ ನಿರ್ವಹಿಸುತ್ತಿದ್ದು ಕೆಲವರು ಖಾಸಗಿ ಉದ್ಯೋಗಗಳನ್ನು ನಿರ್ವಹಿಸುತ್ತಿದ್ದಾರೆ. ಚಿಲ್ಲರೆ ಅಂಗಡಿಗಳು, ಬಟ್ಟೆ ಅಂಗಡಿ, ತಳ್ಳುವ ಗಾಡಿ ವ್ಯಾಪಾರ ಮಾಡುವವರೂ ಕೂಡ ಗ್ರಾಮದಲ್ಲಿದ್ದಾರೆ.

ಮಧುಗಿರಿಯಲ್ಲಿಯೇ ವಿಧಾನಸಭಾ ಮತಕ್ಷೇತ್ರವಾಗಿದ್ದು ತುಮಕೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರಿರುತ್ತದೆ. ಉಳಿದಂತೆ ತಹಸೀಲ್ದಾರ್ ಕಛೇರಿ, ಪೊಲೀಸ್, ಅಂಚೆ, ಬ್ಯಾಂಕ್, ವಿದ್ಯುತ್ ಎಲ್ಲಾ ಸೌಲಭ್ಯಗಳೂ ಮಧುಗಿರಿಯಲ್ಲಿಯೇ ಲಭ್ಯವಾಗುತ್ತವೆ. ಸಿವಿಲ್ ನ್ಯಾಯಾಲಯಗಳೂ ಕೂಡ ಮಧುಗಿರಿಯಲ್ಲಿಯೇ ಇವೆ.

ನಗರದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ಒಟ್ಟು ೬೪ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಿದ್ದು ಒಟ್ಟು ೨೨ ಮಕ್ಕಳು ಹಾಗೂ ೪ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ಒಟ್ಟು ಸಾಕ್ಷರತೆ ಪ್ರಮಾಣ ೬೯.೨%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಎಲ್‌ಐಸಿ ಆಫೀಸ್, ಮಸೀದಿಯು ನಗರದಲ್ಲಿದೆ.

## ವಾರ್ಡ್ ನಂ.೨ ಕುಂಬಾರಹಟ್ಟಿ

ಕುಂಬಾರಹಟ್ಟಿ ವಾರ್ಡ್ ನಂ.೨ ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧೮ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮.೮ ಹೆಕ್ಟೇರ್‌ನ ಮಧುಗಿರಿಯ ಭೂ ವಿಸ್ತೀರ್ಣದಲ್ಲಿ ಸೇರಿರುತ್ತದೆ. ಜನಾಂಗಿಕ ಮೂಲದಿಂದ ಅಥವಾ ಪ್ರಭಾವದಿಂದ ಕುಂಬಾರಹಟ್ಟಿಯಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿಯ ಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ಈ ಪ್ರದೇಶದಲ್ಲಿ ಕುಂಬಾರ ಜನಾಂಗದವರು ಅತಿ ಹೆಚ್ಚಾಗಿ ವಾಸಿಸುತ್ತಿದ್ದು ಮಡಕೆ ಮತ್ತು ಗಣಪತಿಯ ತಯಾರಿಕೆಯಲ್ಲಿ ತೊಡಗಿದ್ದರಂತೆ. ಆದ ಕಾರಣ ಈ ಪ್ರದೇಶಕ್ಕೆ ಕುಂಬಾರಹಟ್ಟಿ ಎಂದು ಕರೆಯುತ್ತಾರೆ. ಆದರೆ ಇಂದು ಇಲ್ಲಿ ಕುಂಬಾರರು ಮಾತ್ರವಲ್ಲದೆ ಬೇರೆ ಜನಾಂಗದವರೂ ಕೂಡ ವಾಸವಾಗಿರುವುದು ಕಂಡುಬರುತ್ತದೆ.

ಗ್ರಾಮವು ಅರಣ್ಯ ಪ್ರದೇಶವನ್ನು ಹೊಂದಿದೆ. ಪ್ರಾಣಿಗಳಾದ ಕೋತಿಗಳು, ಕಾಡುಮೊಲ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕಾಗೆ,

ಕೋಗಿಲೆ, ಗೊರವಂಕ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಹಸುಗಳನ್ನು ಸಾಕಿ ಸಲಹುವವರು ಕಡಿಮೆಯಾಗಿದ್ದು ಇಲ್ಲಿ ಕೆಲವರು ೩ ಹಸುಗಳನ್ನು ಮಾತ್ರ ಸಾಕಿದ್ದಾರೆ. ಉಳಿದಂತೆ ನಾಯಿಗಳು ಕಂಡುಬರುತ್ತವೆ. ೧೦-೨೦ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಕುಡಿಯುವ ನೀರಿನ ಸರಬರಾಜನ್ನು ಕಿರುನೀರು ಸರಬರಾಜಿನ ಮುಖೇನ ಒದಗಿಸಲಾಗುತ್ತಿದೆ.

ನಾಯಕ ಹಾಗೂ ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಮುಸ್ಲಿಂ, ಆದಿ ಕರ್ನಾಟಕ, ಆದಿ ದ್ರಾವಿಡ ಜನಾಂಗ, ಕುಂಬಾರರು, ಲಿಂಗಾಯಿತ ಮತ್ತು ಬ್ರಾಹ್ಮಣ ಜನಾಂಗದವರಿದ್ದಾರೆ. ಬ್ರಾಹ್ಮಣ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉಳಿದಂತೆ ಉರ್ದು, ತೆಲುಗು ಮಾತನಾಡುವರು.

ಒಟ್ಟು ೨೫೮ ಮನೆಗಳನ್ನು ಹೊಂದಿರುವ ಕುಂಬಾರಹಟ್ಟಿಯು ಇತ್ತೀಚಿನ ಜನಗಣತಿಯ ಪ್ರಕಾರ ೧೧೮೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೬೩೯ ಮತ್ತು ಹೆಂಗಸರು ೫೪೮ ಜನರಿದ್ದಾರೆ. ಗ್ರಾಮದಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆ ಮತ್ತು ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೭೨ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ - ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಉಳಿದಂತೆ ಬೇರೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ನಗರಾಭಿವೃದ್ಧಿ ಯೋಜನೆಯಡಿ ಗ್ರಾಮದಲ್ಲಿನ ರಸ್ತೆಗಳು ಸಿಮೆಂಟ್ ರಸ್ತೆಗಳಾಗಿವೆ. ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೨೩೬ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಸಾಂಪ್ರದಾಯಿಕ ಉದ್ಯೋಗ ಮಾಡುವ ಇಬ್ಬರು ಕುಂಬಾರರು ನಗರದಲ್ಲಿದ್ದು ಹೂವಿನ ಪಾಟ್ ಹಾಗೂ ಗಣಪತಿಯನ್ನು ತಯಾರಿಸುತ್ತಾರೆ. ಉಳಿದಂತೆ ಸ್ವಂತ ಉದ್ಯೋಗ ಮಾಡುವುದು ಇಲ್ಲಿನ ಮುಖ್ಯ ಕಸುಬಾಗಿದ್ದು ಹೂವು, ತರಕಾರಿ, ಹಣ್ಣು, ಬಟ್ಟೆ, ದಿನಸಿ, ಗಂಧದಕಡ್ಡಿ, ಐಸ್‌ಕ್ರೀಂ ವ್ಯಾಪಾರದಲ್ಲಿ ತೊಡಗಿರುತ್ತಾರೆ. ಕೆಲವರು ಕೂಲಿ ಮಾಡುವವರಿದ್ದಾಕೆ

ಕುಂಬಾರಹಟ್ಟಿಯಲ್ಲಿ ಕಂದಾಯ ಇಲಾಖೆ, ಶಿಕ್ಷಣ ಇಲಾಖೆ, ಮಿಲಿಟರಿ, ಪೊಲೀಸ್ ಹಾಗೂ ಇಂಜಿನಿಯರ್ ಸೇರಿದಂತೆ ಉದ್ಯೋಗಸ್ಥರಾಗಿದ್ದು ಖಾಸಗಿಯಾಗಿರುವ ಸಂಸ್ಥೆಗಳಲ್ಲಿ, ಕಛೇರಿಗಳಲ್ಲಿ ಕಾರ್ಯ ನಿರ್ವಹಿಸುವವರೂ ಇದ್ದಾರೆ. ಇಲ್ಲಿ ಆಟೋ, ಕಾರು, ಟೆಂಪೋ, ಲಗೇಜ್ ಗಾಡಿ ಹಾಗೂ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಮಧುಗಿರಿ ವಿಧಾನಸಭಾ ಕ್ಷೇತ್ರಕ್ಕೆ ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ಈ ಗ್ರಾಮದಿಂದ ಒಬ್ಬರು ಕೌನ್ಸಿಲರ್ ಆಗಿ ಆಯ್ಕೆಯಾಗಿದ್ದಾರೆ. ಈ ಗ್ರಾಮದಲ್ಲಿ ಒಬ್ಬರು ಪಂಚಾಯ್ತಿಯ ನೌಕರರಾಗಿದ್ದಾರೆ. ತಹಸೀಲ್ದಾರ್ ಕಛೇರಿ, ಪೊಲೀಸ್ ಠಾಣೆ, ಅಂಚೆ ಕಛೇರಿ, ವಿದ್ಯುತ್ ಕೇಂದ್ರ ಉಳಿದೆಲ್ಲಾ ಸೌಲಭ್ಯಗಳು ಮಧುಗಿರಿಯಲ್ಲಿಯೇ ಲಭ್ಯವಾಗಿರುತ್ತವೆ.

ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೯ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಅಂಗವಿಕಲರ ಶಾಲೆಯಿದ್ದು ಒಟ್ಟು ೧೮ ಮಕ್ಕಳು ಹಾಗೂ ಇಬ್ಬರು ಶಿಕ್ಷಕರಿದ್ದಾರೆ. ಉರ್ದು ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆ ಇದ್ದು ಒಟ್ಟು ೯೬ ವಿದ್ಯಾರ್ಥಿಗಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಇಲ್ಲಿ ಎಂಟು ಜನ ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ಪ್ರಮಾಣ ೭೯.೨% ರಷ್ಟಿದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೬ ಹೋಟೆಲ್‌ಗಳು ಹಾಗೂ ೧೦ ಅಂಗಡಿಗಳು, ತರಕಾರಿ ಹಾಗೂ ಹಣ್ಣಿನ ಅಂಗಡಿಗಳಿವೆ.

ಒಂದು ಮಸೀದಿ ಇದೆ. ಹಟ್ಟಿಯಲ್ಲಿ ಚಿಕ್ಕದಾದ ಹಟ್ಟಿಮಾರಮ್ಮ ದೇವರು ಇದೆ. ಪ್ರತಿ ವರ್ಷ ಹರಕೆ, ಬಲಿ, ಆರತಿ ನಡೆಯುತ್ತದೆ. ಮುಸ್ಲಿಂ ಹಾಗೂ ಹಿಂದೂ ಹಬ್ಬಗಳನ್ನು ಆಚರಿಸುತ್ತಾರೆ.

**ವಾರ್ಡ್-೩: ಟಿವಿವಿ ಕಾಲೇಜು, ಎಸ್.ಎಂ.ಕೃಷ್ಣ ಬಡಾವಣೆ, ಕರಡೀಪುರ**

ಈ ಮೂರು ಬೀದಿಗಳು ಅಥವಾ ಬಡಾವಣೆಗಳು ವಾರ್ಡ್ ನಂ.೩ ಎಂದು ಗುರುತಿಸಲ್ಪಟ್ಟು ಮಧುಗಿರಿ ಕೇಂದ್ರಭಾಗದಿಂದ ಸುಮಾರು ೧.೫ ಕಿಮೀ ಅಂತರದಲ್ಲಿ ಪೂರ್ವದಿಕ್ಕಿನಲ್ಲಿವೆ. ಮೂರು ವಾರ್ಡ್‌ಗಳು ಮಧುಗಿರಿ ಭೂವಿಸ್ತೀರ್ಣವಾದ ೮.೮೧ ಚದುರ ಕಿ.ಮೀ. ವಿಸ್ತೀರ್ಣದಲ್ಲಿ ಸೇರಿಕೊಂಡಿದೆ.

ಈ ವಾರ್ಡ್‌ಗಳು ಸಹ ಬಯಲುನಾಡು ಪ್ರದೇಶಗಳಾಗಿದ್ದು ಭೌಗೋಳಿಕವಾಗಿ ಬಿಳಿಕಲ್ಲು ಕೆಂಪು ಮಣ್ಣು ಹೊಂದಿವೆ. ಪ್ರಾಣಿಗಳಾದ ಅಳಿಲು, ಕೋತಿ, ಮುಂಗುಸಿ ಕಂಡುಬರುತ್ತವೆ. ನಗರದ ೧ ಕಿ.ಮೀ. ಅಂತರದಲ್ಲಿ ಚಿಕ್ಕ ಚಿಕ್ಕ ಗುಡ್ಡಗಳು ಕಂಡುಬರುತ್ತವೆ. ಇದರಲ್ಲಿ ಪಕ್ಷಿಗಳಾದ ಗಿಳಿ, ಕಾಗೆ, ಗೊರವಂಕ, ಗುಬ್ಬಚ್ಚಿ ಕಂಡುಬರುತ್ತವೆ. ಸಾಕುಪಕ್ಷಿಗಳಾದ ಕೋಳಿಗಳು ಸಹ ನಗರದಲ್ಲಿ ಕಾಣಬಹುದು.

ಕಳೆದ ವರ್ಷಗಳಿಂದ ಮಳೆಯ ಪ್ರಮಾಣ ತುಂಬಾ ಕಡಿಮೆಯಾಗಿದ್ದು ೪೫೩.೭ ಮಿಮೀ ನಷ್ಟು ಸರಾಸರಿ ಮಳೆಯ ಪ್ರಮಾಣ ದಾಖಲಾಗಿದೆ.ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಈ ವಾರ್ಡ್‌ಗಳಲ್ಲಿ ಒಕ್ಕಲಿಗ, ಲಿಂಗಾಯಿತ, ಮುಸ್ಲಿಂ, ಕುರುಬ, ಪರಿಶಿಷ್ಟ ಜಾತಿ (ಆದಿಕರ್ನಾಟಕ), ಮಡಿವಾಳ, ಬಲಜಿಗ, ಶೆಟ್ಟಿ ಹಾಗೂ ರೆಡ್ಡಿ ಜನಾಂಗದವರು ವಾಸವಾಗಿದ್ದು ಒಕ್ಕಲಿಗ ಸಮುದಾಯ ದೊಡ್ಡ ಸಮುದಾಯವಾಗಿದೆ. ಇದರ ಜೊತೆಗೆ ಬೋವಿ ಸಮುದಾಯದವರು ಸಮವಾದ ಪೈಪೋಟಿ ನೀಡಿದ್ದು ಮಡಿವಾಳ ಜನಾಂಗದವರು ಸಣ್ಣ ಸಮುದಾಯದವರಾಗಿದ್ದಾರೆ. ಕನ್ನಡ ಇಲ್ಲಿನ ಮಾತೃಭಾಷೆಯಾಗಿದೆ. ಇದರ ಜೊತೆ ಮುಸ್ಲಿಂ ಸಮುದಾಯದವರು ಉರ್ದು ಭಾಷೆ, ರೆಡ್ಡಿ ಹಾಗೂ ಬೋವಿ ಜನಾಂಗದವರು ತೆಲುಗು ಭಾಷೆಯನ್ನು ಮಾತನಾಡುತ್ತಾರೆ.

ಕುಡಿಯುವ ನೀರನ್ನು ಪುರಸಭಾ ವತಿಯಿಂದ ಕಿರುನೀರು ಸರಬರಾಜಿನ ಮುಖೇನ ಪೂರೈಸಲಾಗುತ್ತದೆ. ಮನೆಮನೆಗೆ ನಲ್ಲಿ ವ್ಯವಸ್ಥೆ ಇದ್ದು ಸುಮಾರು ೬೮೦ ನಲ್ಲಿಗಳಿರುತ್ತವೆ. ಒಟ್ಟು ಮೂರು ವಾರ್ಡ್‌ಗಳಿಂದ ೬೮೭ ಮನೆಗಳಿದ್ದು ೨೭೭೮ ಜನಸಂಖ್ಯೆಯಲ್ಲಿ ಗಂಡಸರು ೧೩೮೨, ಹೆಂಗಸರು ೧೪೦೮ ರ ಪ್ರಮಾಣದಲ್ಲಿದ್ದಾರೆ.

ಈ ವಾರ್ಡ್‌ಗಳಲ್ಲಿ ಕಾಂಕ್ರೀಟ್, ಶೀಟ್ ಟಾಪ್, ಹೆಂಚು, ಮೋಲ್ಡ್ ಮನೆಗಳು ಕಾಣಿಸುತ್ತವೆ. ಈ ವಾರ್ಡ್‌ಗಳಿಗೆ ಉತ್ತಮವಾದ ಚರಂಡಿ, ಟಾರ್ ಹಾಗೂ ಸಿಮೆಂಟ್ ರಸ್ತೆಗಳ ವ್ಯವಸ್ಥೆಯಿದ್ದು ಆಧುನಿಕ ವಾಹನಗಳಾದ ಆಟೋ, ಕಾರ್, ವ್ಯಾನ್, ಟೆಂಪೋಗಳು ಸಂಚರಿಸುತ್ತವೆ. ಬೇರೆ ಯಾವ ಮಾರ್ಗಗಳ ವ್ಯವಸ್ಥೆ ಇರುವುದಿಲ್ಲ. ಪ್ರತಿಯೊಂದು ಮನೆಗೂ ಶೌಚಾಲಯ ವ್ಯವಸ್ಥೆ ಇರುತ್ತದೆ. ಈ ವಾರ್ಡ್‌ನಲ್ಲಿ ಸರ್ಕಾರಿ, ಖಾಸಗಿ ಹಾಗೂ ಕೂಲಿ ಮಾಡುವ ನೌಕರ ವರ್ಗದವರು ಇದ್ದಾರೆ. ವಾರ್ಡ್‌ನಲ್ಲಿ ೬೮೧ ಮನೆಗಳು ಶೌಚಾಲಯ ಹೊಂದಿವೆ.

ಪೊಲೀಸ್, ಶಿಕ್ಷಣ ಇಲಾಖೆ, ಕೃಷಿ ಮತ್ತು ಅರಣ್ಯ ಇಲಾಖೆ, ವೈದ್ಯಕೀಯ ಇಲಾಖೆ, ಪಿಡಬ್ಲ್ಯೂಡಿ, ಕೆಇಬಿ, ಕೆಎಸ್‌ಆರ್‌ಟಿಸಿ, ಕೂಲಿ ಕಾರ್ಮಿಕರಾದ ಬಡಗಿ, ರಸ್ತೆ ಕೆಲಸ ಮಾಡುವವರು, ತರಕಾರಿ ಮಾರುವವರು ಇನ್ನೂ ಅನೇಕ ರೀತಿಯ ನೌಕರ ವರ್ಗದವರು ಇಲ್ಲಿ ವಾಸಿಸುತ್ತಿದ್ದಾರೆ.

ಮಧುಗಿರಿ ವಿಧಾನಸಭಾ ತುಮಕೂರು ಲೋಕಸಭಾ ಮತಕ್ಷೇತ್ರ ವ್ಯಾಪ್ತಿಗೆ ಸೇರಿದ್ದು ಉಳಿದಂತೆ ನ್ಯಾಯಾಂಗ ವ್ಯವಸ್ಥೆ, ಆಸ್ಪತ್ರೆ, ಪೊಲೀಸ್ ಠಾಣೆ, ಕೆಇಬಿ, ಅಂಚೆ ವ್ಯವಸ್ಥೆ, ವಿದ್ಯುತ್, ಕೃಷಿ ಇಲಾಖೆ, ತಾಲ್ಲೂಕು ಕಛೇರಿಯು ಮಧುಗಿರಿಯಲ್ಲಿ ಲಭ್ಯವಿರುತ್ತದೆ. ಮೂರು ಬಡಾವಣೆಗಳಿಂದ ೩ ಜನ ನೌಕರ ವರ್ಗ ಹಾಗೂ ೩ ಜನ ಚುನಾಯಿತ ಪ್ರತಿನಿಧಿಗಳು ಇದ್ದಾರೆ.

ಮೂರು ವಾರ್ಡ್‌ಗಳಲ್ಲಿ ೩ ಅಂಗನವಾಡಿ ಕೇಂದ್ರವಿದ್ದು ೩ ಜನ ಕಾರ್ಯಕರ್ತೆಯರು ೩ ಜನ ಸಹಾಯಕಿಯರು ಇದ್ದಾರೆ. ಕರಡೀಪುರ ಅಂಗನವಾಡಿಯಲ್ಲಿ ೬೯ ಜನ ಮಕ್ಕಳಿದ್ದು ೩೮ ಗಂಡು, ೩೧ ಹೆಣ್ಣು ಮಕ್ಕಳಿದ್ದಾರೆ. ಎಸ್.ಎಂ.ಕೃಷ್ಣ ಬಡಾವಣೆಯ ಅಂಗನವಾಡಿ ಕೇಂದ್ರದಲ್ಲಿ ೩೯ ಜನ ಮಕ್ಕಳಿದ್ದು ಅದರಲ್ಲಿ ೨೨ ಗಂಡು, ೧೭ ಜನ ಹೆಣ್ಣುಮಕ್ಕಳಿದ್ದಾರೆ. ಟಿವಿವಿ ಕಾಲೇಜು ಬಡಾವಣೆಯ ಅಂಗನವಾಡಿಯಲ್ಲಿ ೩೦ ಜನ ಮಕ್ಕಳಿದ್ದು ೧೬ ಗಂಡು ಹಾಗೂ ೧೪ ಹೆಣ್ಣುಮಕ್ಕಳಿದ್ದಾರೆ. ಕರಡೀಪುರ ಎಲ್‌ಪಿಎಸ್ ನಲ್ಲಿ ೯೮ ಮಕ್ಕಳು ಇಬ್ಬರು ಶಿಕ್ಷಕರು, ಎಸ್‌ಎಂ ಕೃಷ್ಣ ಬಡಾವಣೆಯ ಶಾಲೆಯಲ್ಲಿ ೩೯ ಮಕ್ಕಳು ಹಾಗೂ ಇಬ್ಬರು ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತಾ ಪ್ರಮಾಣ ೮೦.೪೮%.

ಟಿವಿವಿ ಪದವಿ ಕಾಲೇಜು ಹಾಗೂ ಬಿಇಡಿ ಕಾಲೇಜುಗಳಿವೆ. ಬಿಎ, ಬಿಆದಿಕರ್ನಾಟಕ, ಬಿಸಿಏ ಅಭ್ಯಾಸ ಮಾಡುವ ೧೨೦ ಮಕ್ಕಳು ಇದ್ದಾರೆ. ಬಿಇಡಿ ಕಾಲೇಜಿನಲ್ಲಿ ೬೦ ವಿದ್ಯಾರ್ಥಿಗಳು ಶಿಕ್ಷಕರ ತರಬೇತಿ ಪಡೆಯುತ್ತಿದ್ದು ಇಲ್ಲಿ ೯ ಜನ ಶಿಕ್ಷಕರು ಮೂರು ಜನ ಸಹಾಯಕ ವರ್ಗದವರು ಕೆಲಸ ಮಾಡುತ್ತಿದ್ದಾರೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ

ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೯ ಹೋಟೆಲ್‌ಗಳು ಹಾಗೂ ೧೨ ಅಂಗಡಿಗಳಿವೆ. ಅನೇಕ ರಿಪೇರಿ ಮಾಡುವ ಅಂಗಡಿ, ಬಡಗಿ ಕೆಲಸ ಮಾಡುವ ಸ್ಟೋರ್, ಸೈಕಲ್ ರಿಪೇರಿ ಮಾಡುವ ಶಾಪ್ ಇನ್ನೂ ಮುಂತಾದ ಸೌಲಭ್ಯಗಳು ಇಲ್ಲಿವೆ.

ಈ ವಾರ್ಡ್‌ಗಳಲ್ಲಿ ಲಕ್ಷ್ಮಿ, ಅನ್ನಪೂರ್ಣೇಶ್ವರಿ, ಹಟ್ಟಿಮಾರಮ್ಮ, ಆಂಜನೇಯ ದೇವಸ್ಥಾನಗಳಿವೆ. ಮಸೀದಿಯಿದೆ. ಲಕ್ಷ್ಮಿ ಪೂಜೆಯ ದಿನದಂದು ದೇವರಿಗೆ ತುಳಸಿ ಹಾರದೊಂದಿಗೆ ಬಹಳ ಅದ್ದೂರಿಯಿಂದ ಪೂಜೆ ಸಲ್ಲಿಸುತ್ತಾರೆ. ಪ್ರತಿ ವರ್ಷ ಮಾರಮ್ಮ ದೇವಿಗೆ ಬಲಿ, ಹರಕೆ, ಆರತಿ ಮಾಡುವ ಪದ್ಧತಿ ಇದೆ. ಅನ್ನಪೂರ್ಣೇಶ್ವರಿಗೆ ಗೌರಿ–ಗಣೇಶ ಹಬ್ಬದಂದು ಬಹಳ ವಿಜೃಂಭಣೆಯಿಂದ ಅಲಂಕಾರ ಮಾಡಿ ಬಹಳ ಸಾಂಗವಾಗಿ ಪೂಜಾ ಕಾರ್ಯಕ್ರಮಗಳು ಜರುಗುತ್ತವೆ. ಅದೇ ರೀತಿಯಲ್ಲಿ ಎಲ್ಲಾ ಹಿಂದೂ ಹಾಗೂ ಮುಸ್ಲಿಂ ಬಾಂಧವರು ದೀಪಾವಳಿ, ದಸರಾ, ಯುಗಾದಿ, ರಂಜಾನ್, ಬಕ್ರೀದ್ ಹಬ್ಬಗಳನ್ನು ಆಚರಿಸುತ್ತಾರೆ.

## ವಾರ್ಡ್ ನಂ.೪: ಮಸೀದಿ ಹಿಂಭಾಗ

ಮಸೀದಿ ಹಿಂಭಾಗ ವಾರ್ಡ್ ನಂ.೪ ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದ ಅರ್ಧ ಕಿ.ಮೀ. ದೂರದಲ್ಲಿ ಬರುತ್ತದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೮.೮೧ ಹೆಕ್ಟೇರ್‌ನ ಮಧುಗಿರಿಯ ಭೂ ವಿಸ್ತೀರ್ಣದಲ್ಲಿ ಸೇರಿರುತ್ತದೆ.

ಮುಸ್ಲಿಂ ಜನಾಂಗದವರ ಮಸೀದಿ ಇದ್ದು ಇದರ ಹಿಂಭಾಗದಲ್ಲಿ ಜನರು ವಾಸ ಮಾಡುತ್ತಿದ್ದಾರೆ. ಇದನ್ನು ಮಸೀದಿ ಹಿಂಭಾಗವೆಂದೇ ಕರೆಯುತ್ತಾರೆ.

ಬಯಲುನಾಡು ಪ್ರದೇಶವಾಗಿದ್ದು ಕೆಂಪು ಬಿಳಿ ಕಲ್ಲುಗಳಿಂದ ಕೂಡಿದ್ದು ಕೆಂಪು ಮಣ್ಣನ್ನು ಹೊಂದಿದೆ. ಯಾವುದೇ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕೋತಿಗಳು, ಮುಂಗುಸಿ, ಮೊಲ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಕಾಗೆ, ಕೋಗಿಲೆ, ಗಿಳಿ, ಹದ್ದು, ಗುಬ್ಬಚ್ಚಿ ಮೊದಲಾದವುಗಳು ಕಂಡುಬರುತ್ತವೆ.

ಸಾಕುಪ್ರಾಣಿಗಳಾದ ನಾಯಿಗಳು ಹಾಗೂ ಸಾಕುಪಕ್ಷಿಗಳಾದ ನಾಟಿ ಕೋಳಿ, ಚಿಟ್ಟೆಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೫.೯ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ. ಕುಡಿಯುವ ನೀರಿನ ಸಲುವಾಗಿ ಕಿರುನೀರು ಸರಬರಾಜಿನ ವ್ಯವಸ್ಥೆಯಿದೆ.

ಮುಸ್ಲಿಂ ಜನಾಂಗದವರು ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಆದಿದ್ರಾವಿಡ, ಆದಿಕರ್ನಾಟಕ ಜನಾಂಗ ಕಿರು ಸಮುದಾಯವಾಗಿದೆ. ಇಲ್ಲಿನ ಮಾತೃಭಾಷೆಯು ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉರ್ದು ಮಾತನಾಡುವವರು ಅತಿ ಹೆಚ್ಚಾಗಿದ್ದಾರೆ.

ಒಟ್ಟು ೨೨೯ ಮನೆಗಳನ್ನು ಹೊಂದಿರುವ ಗ್ರಾಮವು ಒಟ್ಟು ೯೧೬ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗಂಡಸರು ೪೬೧, ಹೆಂಗಸರು ೪೫೫ ಜನಸಂಖ್ಯೆ ಇದೆ. ಇಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚಿನ ಮನೆ, ಶೀಟಿನ ಮನೆ ಹಾಗೂ ಇಟ್ಟಿಗೆ ಮನೆಗಳಿವೆ. ರಾಗಿಮುದ್ದೆ ಮತ್ತು ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ. ಜನತಾ, ಆಶ್ರಯ, ಬಸವ ವಸತಿ ಯೋಜನೆಯ ೧೦೨ ಫಲಾನುಭವಿಗಳಿದ್ದಾರೆ.

ರಸ್ತೆ ಮಾರ್ಗದ ವ್ಯವಸ್ಥೆ ಇದ್ದು ಉಳಿದಂತೆ ಬೇರೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ನಗರಾಭಿವೃದ್ಧಿ ಯೋಜನೆಯಡಿ ಎಲ್ಲಾ ರಸ್ತೆಗಳೂ ಸಿಮೆಂಟ್ ರಸ್ತೆಗಳು ಹಾಗೂ ಚರಂಡಿ ಮತ್ತು ಶೌಚಾಲಯದ ವ್ಯವಸ್ಥೆಗಳಾಗಿವೆ. ವಾರ್ಡ್‌ನ ೨೦೦ ಮನೆಗಳು ಶೌಚಾಲಯ ಹೊಂದಿವೆ.

ಕೂಲಿ ಹಾಗೂ ಸ್ವಂತ ವ್ಯಾಪಾರಸ್ಥರು ಗ್ರಾಮದಲ್ಲಿದ್ದು ಆಟೋ ಚಾಲಕರು, ಹೂವು ಹಣ್ಣು, ತರಕಾರಿ, ಬಳೆ, ಬಟ್ಟೆ, ಪ್ಲಾಸ್ಟಿಕ್ ವ್ಯಾಪಾರ ಮಾಡುವವರು, ಹಳೇ ಪೇಪರ್ ಐಸ್‌ಕ್ರೀಂ ವ್ಯಾಪಾರ ಮಾಡುವವರು ಇದ್ದಾರೆ. ಸ್ವಂತ ಸೈಕಲ್ ಶಾಪ್, ಮೊಬೈಲ್ ಅಂಗಡಿ, ದಿನಸಿ ಅಂಗಡಿ ಹಾಗೂ ತಳ್ಳುವ ಗಾಡಿ ವ್ಯಾಪಾರ ಮಾಡುವವರಿದ್ದಾರೆ. ಇಲ್ಲಿ ಆಟೋ, ಕಾರು, ಜೀಪು, ಲಾರಿ, ಟೆಂಪೋ ಹಾಗೂ ದ್ವಿಚಕ್ರ ವಾಹನಗಳಂಥ ಆಧುನಿಕ ವಾಹನಗಳಿವೆ.

ಮಧುಗಿರಿ ವಿಧಾನಸಭಾ ತುಮಕೂರು ಲೋಕಸಭಾ ಮತಕ್ಷೇತ್ರ ವ್ಯಾಪ್ತಿಗೆ ಸೇರಿದ್ದು ಉಳಿದಂತೆ ತಹಸೀಲ್ದಾರ್ ಕಛೇರಿ, ಅಂಚೆ, ಪೊಲೀಸ್ ಠಾಣೆ, ಕಾರ್ಪೋರೇಷನ್ ಆಫೀಸ್, ಸಿವಿಲ್ ನ್ಯಾಯಾಲಯ ವ್ಯವಸ್ಥೆಗಳು ಮಧುಗಿರಿಯಲ್ಲಿ ಲಭ್ಯವಿರುತ್ತದೆ. ಈ ಬಡಾವಣೆಗಳಿಂದ ಒಬ್ಬರು ನೌಕರ ವರ್ಗ ಹಾಗೂ ಒಬ್ಬರು ಕೌನ್ಸಿಲರ್ ಇದ್ದಾರೆ.

ಈ ವಾರ್ಡ್‌ಗಳಲ್ಲಿ ೧ ಅಂಗನವಾಡಿ ಕೇಂದ್ರವಿದ್ದು ೩೦ ಮಕ್ಕಳು, ಒಬ್ಬರು ಕಾರ್ಯಕರ್ತೆ ಒಬ್ಬರು ಸಹಾಯಕಿ ಇದ್ದಾರೆ. ಉರ್ದು ಹೆಚ್‌ಪಿಎಸ್‌ನಲ್ಲಿ ೧೨೪ ಮಕ್ಕಳು ಒಂಬತ್ತು ಶಿಕ್ಷಕರು, ಜಿಹೆಚ್‌ಪಿಎಸ್ ಶಾಲೆಯಲ್ಲಿ ೨೦೮ ಮಕ್ಕಳು ಹಾಗೂ ಒಂಬತ್ತು ಶಿಕ್ಷಕರಿದ್ದಾರೆ. ಶಾಲೆಯಲ್ಲಿ

ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ಪ್ರಮಾಣ ೭೯.೮% ನಗರದಲ್ಲಿ ಬಸವಣ್ಣ, ಕೋಟೆರಾಮದೇವರ ದೇವಸ್ಥಾನ, ಅಕ್ಕ–ತಂಗಿ ಕಲ್ಯಾಣಿ, ಕನ್ನಿಕಾಪರಮೇಶ್ವರಿ, ಪಾಂಡುರಂಗ ದೇವಾಲಯ, ಎರಡು ಮಸೀದಿಗಳಿವೆ. ನಗರದಲ್ಲಿ ಯುಗಾದಿ, ಏಕಾದಶಿ, ಶಿವರಾತ್ರಿ ಹಬ್ಬಗಳನ್ನು ವಿಶೇಷವಾಗಿ ಆಚರಿಸುತ್ತಾರೆ. ಉಳಿದಂತೆ ಎಲ್ಲಾ ಹಿಂದೂ ಹಬ್ಬಗಳು ಹಾಗೂ ಮುಸ್ಲಿಂ ಹಬ್ಬಗಳನ್ನು ಆಚರಿಸುತ್ತಾರೆ.

ಕೋಟೆ ಇದ್ದು ಮುಮ್ಮಡಿ ಚಿಕ್ಕಪ್ಪಗೌಡರು ಆಳಿದ ನಗರವಾಗಿದೆ. ಕರ್ನಾಟಕದಲ್ಲಿಯೇ ಪ್ರಸಿದ್ಧಿ ಹೊಂದಿರುವ ಏಕಶಿಲಾ ಬೆಟ್ಟವನ್ನು ಹೊಂದಿದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ಗ್ರಾಮದಲ್ಲಿ ೮ ಹೋಟೆಲ್‌ಗಳು ಹಾಗೂ ೧೫ ಅಂಗಡಿಗಳಿವೆ. ೪ ಮಟನ್ ಸ್ಟಾಲ್, ೨ ಟೈಲರ್ ಅಂಗಡಿ, ೩ ಸೈಕಲ್ ಶಾಪ್ ಕಂಡುಬರುತ್ತವೆ.

## ವಾರ್ಡ್ ನಂ.೫: ಇಂದಿರಾನಗರ ಮತ್ತು ಸಿದ್ದನಾಯಕನ ಗಲ್ಲಿ

ಇಂದಿರಾನಗರ ಮತ್ತು ಸಿದ್ದನಾಯಕನ ಗಲ್ಲಿ ೫ ನೇ ವಾರ್ಡ್‌ಗೆ ಸೇರಿದ್ದು ನಗರ ಪ್ರದೇಶಗಳಾಗಿವೆ. ಮಧುಗಿರಿ ಹೃದಯ ಭಾಗದಿಂದ ಸುಮಾರು ೧ ಕಿ.ಮೀ. ಅಂತರದಲ್ಲಿವೆ.

ದಿಕ್ಕಿಗೆ ಅನುಗುಣವಾಗಿ ಪೂರ್ವದಿಕ್ಕಿನಲ್ಲಿದ್ದು ಭೌಗೋಳಿಕವಾಗಿ ಬಿಳಿಕಲ್ಲು ಹಾಗೂ ಕೆಂಪು ಮಣ್ಣನ್ನು ಹೊಂದಿರುವುದು ಕಾಣಬಹುದು. ಇಂದಿರಾನಗರ ಬೆಟ್ಟದ ಬುಡದಲ್ಲಿದೆ. ಈ ಪ್ರದೇಶದಲ್ಲಿ ಕೃಷಿ ಇಲಾಖೆ, ಕೆಇಬಿ ಕ್ವಾರ್ಟರ್ಸ್, ಶಿರಾ ಬಸ್ ನಿಲ್ದಾಣ, ಒಂದು ಕಲ್ಯಾಣಿಯು ಸಹ ಇದ್ದು ಕ್ವಾಟ್ರರ್ಸ್‌ನಲ್ಲಿ ಶ್ರೀರಾಮ ಹಾಗೂ ಗಣೇಶ ದೇವಸ್ಥಾನವನ್ನು ಸಹ ಹೊಂದಿದೆ.

ಈ ವಾರ್ಡ್‌ಗಳ ಭೌಗೋಳಿಕ ಭೂವಿಸ್ತೀರ್ಣ ಮಧುಗಿರಿ ಪಟ್ಟಣದ ಭೂವಿಸ್ತೀರ್ಣದ ೮.೮೧ ರಲ್ಲಿ ಹಂಚಿಕೆಯಾಗಿದೆ. ಬೆಟ್ಟದ ಬುಡಭಾಗದಲ್ಲಿ ಇರುವುದರಿಂದ ರಾತ್ರಿಯ ವೇಳೆಯಲ್ಲಿ ತೋಳ, ನರಿ, ಕರಡಿ, ಮೊಲ ಇರುವುದು ಕಂಡುಬರುತ್ತದೆ.

ಸಾಕುಪ್ರಾಣಿಗಳಾದ ಹಸು, ಕುರಿ, ಮೇಕೆ ಇರುವುದು ಕಂಡುಬರುತ್ತದೆ ಹಾಗೂ ಸಾಕುಪಕ್ಷಿಗಳಾದ ಕೋಳಿಗಳು ಸಹ ಕಂಡುಬರುತ್ತವೆ. ಪಕ್ಷಿಗಳಾದ ಕಾಗೆ, ಕೋಗಿಲೆ, ನವಿಲು, ಬೆಳವ, ಗಿಳಿ ವಿಶೇಷವಾಗಿ ಹಿರೇಮರದ ಹಕ್ಕಿ, ಬಾವಲಿ ಪಕ್ಷಿಗಳ ಗುಂಪಿನ ಹಕ್ಕಿಗಳು ಸುಮಾರು ೧೦೦೦ ಕ್ಕೂ ಹೆಚ್ಚು ಕ್ವಾಟ್ರರ್ಸ್‌ನಲ್ಲಿ ಇರುವ ಅರಳಿ ಹಾಗೂ ಆಲದ ಮರಕ್ಕೆ ಜೋತುಬಿದ್ದಿರುವುದನ್ನು ನಾವು ಗಮನಿಸಬಹುದು.

ಮಳೆಯ ವಿಚಾರವಾಗಿ ಕಳೆದೆರಡು ವರ್ಷಗಳಿಂದಗಳಿಂದ ಮಳೆಯ ಪ್ರಮಾಣ ಕಡಿಮೆಯಾಗಿದ್ದು ಸರಾಸರಿ ೪೫೩.೮ ರಷ್ಟು ಮಳೆ ಬಿದ್ದಿರುವುದು ದಾಖಲಾಗಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಇಲ್ಲಿ ಮುಸ್ಲಿಂ, ಆದಿ ಕರ್ನಾಟಕ, ಪರಿಶಿಷ್ಟ ಪಂಗಡ, ಒಕ್ಕಲಿಗ, ಬಲಜಿಗ, ಲಿಂಗಾಯಿತ, ಬೋವಿ ಜಾತಿಯ ಜನಾಂಗ ಹಾಗೂ ಜೈನರು ಇದ್ದು ಮುಸ್ಲಿಂ ದೊಡ್ಡ ಸಮುದಾಯವಾಗಿದೆ. ಲಿಂಗಾಯಿತರ ಜನಾಂಗ ಚಿಕ್ಕ ಸಮುದಾಯವಾಗಿದೆ. ಇಲ್ಲಿನ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಕನ್ನಡವನ್ನು ಮಾತನಾಡುತ್ತಾರೆ. ಉಳಿದಂತೆ ಮುಸ್ಲಿಂ ಬಾಂಧವರು ಉರ್ದು ಭಾಷೆಯನ್ನು ಮಾತನಾಡುತ್ತಾರೆ.

ಕುಡಿಯುವ ನೀರು ಪುರಸಭಾ ವತಿಯಿಂದ ಕಿರುನೀರು ಸರಬರಾಜು ಮುಖೇನ ಪೂರೈಸಲಾಗುತ್ತಿದೆ. ಈ ಎರಡು ವಾರ್ಡ್‌ಗಳಿಂದ ಸುಮಾರು ೮೦೦ ಕ್ಕೂ ಹೆಚ್ಚು ಕುಡಿಯುವ ನೀರಿನ ಸಣ್ಣ ನಲ್ಲಿಗಳ ವ್ಯವಸ್ಥೆಯನ್ನು ಮಾಡಲಾಗಿದೆ. ಒಟ್ಟು ಎರಡು ವಾರ್ಡ್‌ಗಳಿಂದ ೮೮೯ ಮನೆಗಳನ್ನು ಹೊಂದಿದ್ದು ೩೮೪೬ ಜನಸಂಖ್ಯೆಯಲ್ಲಿ ೧೮೫೭ ಗಂಡು, ೧೯೮೯ ಹೆಣ್ಣು ಪ್ರಮಾಣವನ್ನು ಹೊಂದಿದೆ.

ಇಲ್ಲಿ ಹೆಚ್ಚಿನದಾಗಿ ಕಾಂಕ್ರೀಟ್, ಶೀಟ್ ಹಾಗೂ ಇಟ್ಟಿಗೆ ಮನೆಗಳು ಕಂಡು ಬರುತವೆ. ಕಡಿಮೆ ಪ್ರಮಾಣದಲ್ಲಿ ಸಿದ್ದಿವಿನಾಯಕನ ಗಲ್ಲಿಯಲ್ಲಿ ಗುಡಿಸಲುಗಳೂ ಸಹ ಕಂಡುಬರುತ್ತವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೨೧೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ವಾರ್ಡ್‌ನ ೮೬೦ ಮನೆಗಳು ಶೌಚಾಲಯ ಹೊಂದಿವೆ. ಉತ್ತಮವಾದ ಸಿಮೆಂಟ್ ಹಾಗೂ ಟಾರ್‌ನಿಂದ ಕೂಡಿದ ರಸ್ತೆ ಹಾಗೂ ಚರಂಡಿ ವ್ಯವಸ್ಥೆಯು ಸಹ ಇದೆ.

ಮಧುಗಿರಿ ವಿಧಾನಸಭಾ ಕ್ಷೇತ್ರ ಉಳಿದಂತೆ ತಹಸೀಲ್ದಾರ್ ಪೊಲೀಸ್ ಠಾಣೆ, ಆಸ್ಪತ್ರೆ, ನ್ಯಾಯಾಂಗ ವ್ಯವಸ್ಥೆ, ಅಂಚೆ ವ್ಯವಸ್ಥೆ, ಸಾರಿಗೆ ವ್ಯವಸ್ಥೆ ಇನ್ನೂ ಮುಂತಾದ ಅನೇಕ ಸೌಲಭ್ಯಗಳು ಮಧುಗಿರಿ ಪಟ್ಟಣದಲ್ಲಿ

ಲಭ್ಯವಿರುತ್ತದೆ. ಎರಡು ನಗರಗಳಿಂದ ಇಬ್ಬರು ನೌಕರರು ಹಾಗೂ ಇಬ್ಬರು ಸದಸ್ಯರನ್ನು ಹೊಂದಿದೆ.

ಎರಡು ಅಂಗನವಾಡಿ ಕೇಂದ್ರಗಳಿದ್ದು ಇಬ್ಬರು ಕಾರ್ಯಕರ್ತೆಯರು ಹಾಗೂ ಇಬ್ಬರು ಸಹಾಯಕಿಯರು ಇದ್ದಾರೆ. ಇಂದಿರಾನಗರದ ಅಂಗನವಾಡಿ ಕೇಂದ್ರದಲ್ಲಿ ೫೦ ಮಕ್ಕಳಿದ್ದು ಸಿದ್ದನಾಯಕನ ಗಲ್ಲಿಯಲ್ಲಿ ೬೭ ಮಕ್ಕಳಿದ್ದಾರೆ. ಹೆಚ್‌ಪಿಎಸ್ ಶಿರಾ ಗೇಟ್‌ನಲ್ಲಿ ೧೦೮ ವಿದ್ಯಾರ್ಥಿಗಳಿದ್ದು ೭ ಜನ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. ಎಲ್‌ಪಿಎಸ್ ಸಿದ್ದನಾಯಕನಗಲ್ಲಿಯಲ್ಲಿ ೩೯ ವಿದ್ಯಾರ್ಥಿಗಳಿದ್ದು ಇಬ್ಬರು ಶಿಕ್ಷಕರು ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೮೩.೮೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ೧೦ ಅಂಗಡಿಗಳು ಮತ್ತು ೮ ಹೋಟೆಲ್‌ಗಳಿವೆ.

ಈ ವಾರ್ಡ್‌ಗಳಲ್ಲಿ ಜೈನರ ಬಸದಿ, ಮಸೀದಿ ಹಾಗೂ ಬೆಟ್ಟದಲ್ಲಿರುವ ಕೋಟೆ ಜೊತೆ ಕ್ವಾಟ್ರರ್ಸ್ ಶ್ರೀರಾಮ, ಆಂಜನೇಯ ಹಾಗೂ ಗಣೇಶ ದೇವಸ್ಥಾನವಿದೆ. ಶ್ರಾವಣ ಮಾಸದಲ್ಲಿ ಶ್ರೀರಾಮ ಹಾಗೂ ಆಂಜನೇಯ ಸ್ವಾಮಿಗೆ ಆರತಿ ಮಾಡುತ್ತಾರೆ. ಮುಸ್ಲಿಂ ಬಾಂಧವರು ಮುಸ್ಲಿಂ ಹಬ್ಬಗಳನ್ನು ಆಚರಿಸುತ್ತಾರೆ. ಹಾಗೆಯೇ ಹಿಂದೂಗಳು ಸಹ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

### ವಾರ್ಡ್ ನಂ.೬ : ಗೋರಿಪಾಳ್ಯ

ಗೋರಿಪಾಳ್ಯ ಮತ್ತು ವಿದ್ಯಾನಗರ ಎರಡು ಬಡಾವಣೆ ೬ನೇ ವಾರ್ಡ್‌ಗೆ ಸೇರಿದ್ದು ನಗರ ಪ್ರದೇಶಗಳಾಗಿರುತ್ತವೆ. ಮಧುಗಿರಿ ಕೇಂದ್ರ ಭಾಗದಿಂದ ೧ ಕಿ.ಮೀ ಅಂತದಲ್ಲಿರುತ್ತವೆ.

ದಿಕ್ಕಿಗೆ ಅನುಗುಣವಾಗಿ ಪಶ್ಚಿಮಾರ್ಧ ಹಾಗೂ ಉತ್ತರ ದಿಕ್ಕಿಗೆ ಇರುವುದನ್ನು ಗಮನಿಸಬಹುದು. ಈ ಎರಡು ವಾರ್ಡ್‌ಗಳ ಭೂವಿಸ್ತೀರ್ಣ ಮಧುಗಿರಿ ನಗರದ ಭೂವಿಸ್ತೀರ್ಣವಾದ ೮.೮೧ ಚದುರ ಕಿಮೀ ನಲ್ಲಿಯೇ ಹಂಚಿಕೆಯಾಗಿದೆ.

ಈ ವಾರ್ಡ್‌ಗಳು ಸಹ ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲು, ಕೆಂಪು ಹಾಗೂ ಬಿಳಿ ಮರಳು ಮಿಶ್ರ ಮಣ್ಣಿನಿಂದ ಕೂಡಿದೆ. ಸುತ್ತಲೂ ಸಣ್ಣ ಸಣ್ಣ ಗುಟ್ಟೆಗಳು ಕಂಡುಬರುತ್ತಿವೆ.

ಇಲ್ಲಿ ಯಾವುದೇ ಪ್ರಾಣಿಗಳು ಕಂಡುಬರದೆ ನಾಡುಪ್ರಾಣಿಗಳಾದ ನಾಯಿ, ಹಂದಿ, ಬೆಕ್ಕು ಕಂಡು ಬರುತ್ತವೆ. ಪಕ್ಷಿಗಳಾದ ಸಾಮಾನ್ಯವಾದ ಕಾಗೆ, ಗುಬ್ಬಚ್ಚಿ, ಗೊರವಂಕ ಇತ್ಯಾದಿ ಪಕ್ಷಿಗಳು ಕಂಡುಬರುತ್ತವೆ. ಸಾಕು ಪಕ್ಷಿಗಳಾದ ಕೋಳಿಗಳು ಸಹ ಕಂಡುಬರುತ್ತವೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆಯ ಪ್ರಮಾಣ ಕಡಿಮೆಯಾಗಿದ್ದು ೪೫೩.೯ ಮಿಮೀ ಮಳೆ ಬಿದ್ದಿರುವುದು ದಾಖಲಾಗಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಇಲ್ಲಿ ಬೋವಿ, ಆದಿಕರ್ನಾಟಕ, ಮುಸ್ಲಿಂ, ಬಲಜಿಗ, ಒಕ್ಕಲಿಗ, ಲಿಂಗಾಯಿತ, ವಿಶ್ವಕರ್ಮ ಜನಾಂಗಕ್ಕೆ ಸೇರಿದವರು ವಾಸವಾಗಿದ್ದಾರೆ. ಮಾತೃಭಾಷೆಯಾದ ಕನ್ನಡವನ್ನೇ ಬಳಸುತ್ತಾರೆ. ಮುಸ್ಲಿಂ ಬಾಂಧವರು ಉರ್ದು ಭಾಷೆಯನ್ನು ಮಾತನಾಡುತ್ತಾರೆ. ಕುಡಿಯುವ ನೀರನ್ನು ಪುರಸಭಾ ವತಿಯಿಂದ ಕಿರುನೀರು ಸರಬರಾಜು ಮುಖೇನ ಪೂರೈಸುತ್ತಾರೆ.

ಒಟ್ಟು ೨ ವಾರ್ಡ್‌ಗಳಿಂದ ೯೯೯ ಮನೆಗಳನ್ನು ಹೊಂದಿದ್ದು ೪೨೨೨ ಒಟ್ಟು ಜನಸಂಖ್ಯೆ ಹೊಂದಿರುತ್ತದೆ. ೨೦೫೮ ಗಂಡು, ೨೧೬೪ ಹೆಣ್ಣು ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಇಲ್ಲಿಯೂ ಸಹ ಕಾಂಕ್ರೀಟ್, ಶೀಟ್ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೯೩ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ವಾರ್ಡ್‌ನ ೧೮೦ ಮನೆಗಳಲ್ಲಿ ಶೌಚಾಲಯ ಹೊಂದಿದೆ.

ಚರಂಡಿ ಹಾಗೂ ರಸ್ತೆ ವ್ಯವಸ್ಥೆ ಇದ್ದು ಆಧುನಿಕ ವಾಹನಗಳಾದ ಆಟೋ, ಟೆಂಪೋ, ಕಾರು ಸಂಚರಿಸುವುದು ಕಂಡುಬರುತ್ತದೆ.

ಈ ವಾರ್ಡ್‌ಗಳಲ್ಲಿ ಸರ್ಕಾರಿ ಹಾಗೂ ಖಾಸಗಿ ವ್ಯವಸ್ಥೆಯಲ್ಲಿ ನೌಕರಿ ಮಾಡುವ ನೌಕರರಿದ್ದು ಪೊಲೀಸ್ ಇಲಾಖೆ, ಶಿಕ್ಷಣ ಇಲಾಖೆ, ಖಾಸಗಿ ಕೈಗಾರಿಕೆಯಲ್ಲಿ ಕಾರ್ಯ ನಿರ್ವಹಿಸುವವರು ಹಾಗೂ ಟೈಲರ್ಸ್ ವಾಸಿಸುತ್ತಿದ್ದಾರೆ.

ಮಧುಗಿರಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಮತಕ್ಷೇತ್ರ ಉಳಿದಂತೆ ತಹಸೀಲ್ದಾರ್ ಕಛೇರಿ, ತಾಲ್ಲೂಕು ಕಛೇರಿ, ನ್ಯಾಯಾಂಗ, ಪೊಲೀಸ್ ಠಾಣೆ, ಅಂಚೆ

ಕಛೇರಿ, ವಿದ್ಯುತ್ ಇಲಾಖೆ, ಕೃಷಿ ಇಲಾಖೆ, ಆಸ್ಪತ್ರೆ, ಸರ್ಕಾರಿ ಬಸ್ ನಿಲ್ದಾಣ ಮಧುಗಿರಿ ಲಭ್ಯವಿರುತ್ತವೆ. ಎರಡು ನಗರಗಳಿಂದ ಇಬ್ಬರು ನೌಕರರು, ಸದಸ್ಯರು ಇದ್ದಾರೆ.

ಎರಡು ಅಂಗನವಾಡಿ ಕೇಂದ್ರಗಳಿದ್ದು ಇಬ್ಬರು ಕಾರ್ಯಕರ್ತೆ ಮತ್ತು ಇಬ್ಬರು ಸಹಾಯಕಿಯರು ಇದ್ದಾರೆ. ಗೋರಿಪಾಳ್ಯ ಅಂಗನವಾಡಿ ಕೇಂದ್ರದಲ್ಲಿ ಒಟ್ಟು ೩೧ ಮಕ್ಕಳಿದ್ದು ಹಾಗೆಯೇ ವಿದ್ಯಾನಗರದಲ್ಲಿ ೩೩ ಮಕ್ಕಳಿದ್ದಾರೆ. ವಿದ್ಯಾನಗರ ವ್ಯಾಪ್ತಿಯ ಸಿದ್ಧಾರ್ಥ ಪ್ರೌಢಶಾಲೆ ಹಾಗೂ ಮೌಂಟ್ ವ್ಯೂ ಪ್ರೌಢಶಾಲೆ ಇದ್ದು ಎರಡು ಶಾಲೆಗಳಿಂದ ೧೦೫೦ ವಿದ್ಯಾರ್ಥಿಗಳಿದ್ದು ೩೨ ಜನ ಶಿಕ್ಷಕರಿದ್ದು ಮಕ್ಕಳಿಗೆ ಉಚಿತ ಶಿಕ್ಷಣ ನೀಡುತ್ತಿದ್ದಾರೆ. ೬ ಜನ ಸಹಾಯಕರು ಶಾಲೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೭೨.೭೮%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ೧೬ ಅಂಗಡಿ, ೮ ಹೋಟೆಲ್ ಇವೆ.

ಈ ವಾರ್ಡ್‌ಗಳಲ್ಲಿ ಮೈಲಾರಲಿಂಗೇಶ್ವರ, ಮಾರಮ್ಮ, ಗಣೇಶ ಹಾಗೂ ಶನಿಮಹಾತ್ಮ ದೇವಾಲಯಗಳಿದ್ದು ಇಲ್ಲಿ ಪ್ರತಿ ವರ್ಷ ಮಾರಮ್ಮ ದೇವರಿಗೆ ಆರತಿ ನಡೆಯುತ್ತದೆ. ಹಾಗೆಯೇ ಮೈಲಾರಲಿಂಗೇಶ್ವರ ದೇವರು ಹಾಗೂ ಗಣೇಶ ದೇವಸ್ಥಾನದಲ್ಲಿ ನೈವೇದ್ಯ ಪೂಜೆಗಳು ಪ್ರತಿ ವಾರದಲ್ಲಿ ದಿನದ ಬೆಳಗಿನ ಸಮಯದಲ್ಲಿ ಸಾಂಗವಾಗಿ ನೆರವೇರುತ್ತದೆ. ಉಳಿದಂತೆ ಎಲ್ಲಾ ರೀತಿಯ ಹಿಂದೂ ಹಬ್ಬಗಳಾದ ಶಿವರಾತ್ರಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ, ದಸರಾ ಹಬ್ಬಗಳನ್ನು ಆಚರಿಸುತ್ತಾರೆ.

### ವಾರ್ಡ್ ನಂ.೭ : ಸಿಹೀನೀರಿನ ಬಾವಿ

ಚೌಡೇಶ್ವರಿ ಬೀದಿ, ಸಿಹೀನೀರಿನ ಬಾವಿ ವಾರ್ಡ್ ನಂ.೭ ರ ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ತಾಲ್ಲೂಕು ಕೇಂದ್ರದಿಂದ ೧.೫ ಕಿಮೀ ನಲ್ಲಿಯೇ ಬರುತ್ತದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ೮.೮೧ ಚದುರ ಕಿ.ಮೀ. ಮಧುಗಿರಿ ಭೂ ವಿಸ್ತೀರ್ಣದಲ್ಲಿ ಸೇರಿರುತ್ತದೆ.

ಹಿಂದೆ ಈ ಪ್ರದೇಶದಲ್ಲಿನ ಬಾವಿಯಲ್ಲಿ ಸಿಹೀನೀರು ಕುಡಿಯಲು ಬಳಸುತ್ತಿದ್ದು ನೀರು ಅತಿ ರುಚಿಯಾಗಿದ್ದರಿಂದ ಸಿಹಿ ನೀರಿನ ಬಾವಿ ಎಂದು ಕರೆಯುತ್ತಿದ್ದರು. ತದನಂತರ ಈ ಹೆಸರು ಈ ಪ್ರದೇಶಕ್ಕೆ ವರ್ಗಾಂತರವಾಗಿದೆ. ತೆಂಗಿನಮರದ ಬಾವಿ ಎಂತಲೂ ಕರೆಯುತ್ತಾರೆ.

ನಗರವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳಿಂದ ಕೂಡಿದ್ದು ಕೆಂಪು ಮರಳು ಮಿಶ್ರ ಮಣ್ಣಿನ ಫಲವತ್ತಾದ ಭೂಮಿಯನ್ನು ಹೊಂದಿದೆ.

ನಗರವು ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕೋತಿ, ಅಳಿಲು, ಮುಂಗುಸಿ, ಕರಡಿ ಮೊದಲಾದವುಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಗೊರವಂಕ, ಕಾಗೆ, ಕೋಗಿಲೆ ಮೊದಲಾದವುಗಳು ಕಂಡುಬರುತ್ತವೆ. ನಾಟಿಹಸು ಹಾಗೂ ೧ ಸೀಮೆಹಸು ಮತ್ತು ನಾಟಿಕೋಳಿಗಳು ನಗರದಲ್ಲಿವೆ.

ಕಳೆದೆರಡು ವರ್ಷಗಳಿಂದಗಳಿಂದ ಮಳೆ ಇಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೪.೯ ಮಿಮೀ ಮಳೆಯು ಬಿದ್ದಿದೆ. ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಕುಂಚಿಟಿಗ, ಜೈನ, ಮುಸ್ಲಿಂ, ನಾಯಕ, ಆದಿಕರ್ನಾಟಕ, ಆದಿದ್ರಾವಿಡ, ಹೊಲೆಯರು, ತಿಗಳರು, ಕುಂಬಾರ, ಕಮ್ಮಾರ ಜನಾಂಗದವರಿದ್ದು ಬ್ರಾಹ್ಮಣ ಮತ್ತು ಲಿಂಗಾಯಿತ ಜನಾಂಗ ಕಿರು ಸಮುದಾಯದವರಾಗಿದ್ದಾರೆ. ನಗರದ ಮಾತೃಭಾಷೆಯು ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉಳಿದಂತೆ ತೆಲುಗು, ಉರ್ದು, ಮಲಯಾಳಂ, ತಮಿಳು ಮಾತನಾಡುವವರೂ ಗ್ರಾಮದಲ್ಲಿದ್ದಾರೆ.

ಒಟ್ಟು ೨೫೮ ಮನೆಗಳನ್ನು ಹೊಂದಿರುವ ಗ್ರಾಮವು ಒಟ್ಟು ೧೧೯೪ ಜನಸಂಖ್ಯಾ ಪ್ರಮಾಣವನ್ನು ಹೊಂದಿದೆ. ಗಂಡು ೫೫೪ ಹೆಣ್ಣು ೫೪೦ ಇದೆ. ಇಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಹೆಂಚು ಮತ್ತು ಶೀಟಿನ ಮನೆ ಹಾಗೂ ಇಟ್ಟಿಗೆ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೦೬ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿಮುದ್ದೆ ಮತ್ತು ಅನ್ನ–ಸಾಂಬಾರ್ ಮುಖ್ಯ ಆಹಾರವಾಗಿದ್ದು ಬಾಡೂಟ, ಪಾಯಸ, ಹೋಳಿಗೆ ವಿಶೇಷ ಆಹಾರವಾಗಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ನಗರಾಭಿವೃದ್ಧಿ ಯೋಜನೆಯಡಿ ನಗರದ ಎಲ್ಲಾ ರಸ್ತೆಗಳು ಸಿಮೆಂಟ್ ರಸ್ತೆಗಳಾಗಿದ್ದು ಚರಂಡಿ ಹಾಗೂ ಶೌಚಾಲಯದ ವ್ಯವಸ್ಥೆಯಾಗಿದೆ. ವಾರ್ಡ್‌ನಲ್ಲಿ ೨೫೧ ಮನೆಗಳು ಶೌಚಾಲಯ ಹೊಂದಿವೆ.

ಇಲ್ಲಿ ಆಟೋ, ಕಾರು ಹಾಗೂ ದ್ವಿಚಕ್ರ ವಾಹನಗಳಂತಹ ಆಧುನಿಕ ವಾಹನಗಳಿವೆ. ಕೂಲಿ ಮತ್ತು

ವ್ಯಾಪಾರ ಮುಖ್ಯ ಕಸುಬಾಗಿದ್ದು ತರಕಾರಿ, ಹೂವು, ಹಣ್ಣು ಮಾರುವವರು ಹಾಗೂ ಸ್ವಂತ ಅಂಗಡಿಗಳನ್ನು ಇಟ್ಟಿರುವವರಿದ್ದು ಸರ್ಕಾರಿ ಹಾಗೂ ಖಾಸಗಿ ನೌಕರರಾಗಿದ್ದಾರೆ. ಶಿಕ್ಷಣ ಇಲಾಖೆ, ಕಂದಾಯ ಇಲಾಖೆ, ಪೊಲೀಸ್, ಮಿಲಿಟರಿ, ಕೃಷಿ ಇಲಾಖೆ, ವಿಲೇಜ್ ಅಕೌಂಟೆಂಟ್, ಕೆಇಬಿ ಹಾಗೂ ಕೆಎಸ್‌ಆರ್‌ಟಿಸಿಯಲ್ಲಿ ಸೇವೆ ಸಲ್ಲಿಸುತ್ತಿದ್ದು ವೈದ್ಯರು ಮತ್ತು ಇಂಜಿನಿಯರ್‌ಗಳಾಗಿದ್ದಾರೆ. ಇಲ್ಲಿ ೧೦ ಜನ ಟೈಲರ್‌ಗಳಿದ್ದಾರೆ.

ಮಧುಗಿರಿಯೇ ವಿಧಾನಸಭಾ ಮತಕ್ಷೇತ್ರವಾಗಿದ್ದು ತುಮಕೂರು ಲೋಕಸಭಾ ಕ್ಷೇತ್ರ ವ್ಯಾಪ್ತಿಗೆ ಸೇರುತ್ತದೆ. ಇಬ್ಬರು ಕೌನ್ಸಿಲರ್ ಹಾಗೂ ಇಬ್ಬರು ನೌಕರರಾಗಿದ್ದು ತಹಸೀಲ್ದಾರ್ ಕಛೇರಿ, ಪೊಲೀಸ್ ಠಾಣೆ, ಅಂಚೆ ಮೊದಲಾದವುಗಳು ಮಧುಗಿರಿಯಲ್ಲಿಯೇ ಲಭ್ಯವಿರುತ್ತದೆ.

ನಗರದಲ್ಲಿ ಸಿಹೀನೀರ ಬಾವಿ ಬಡಾವಣೆಯಲ್ಲಿ ಅಂಗನವಾಡಿ ಕೇಂದ್ರವಿದ್ದು ೩೬ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರಿದ್ದಾರೆ. ಜ್ಞಾನಭಾರತಿ ಪ್ರೌಢಶಾಲೆಯಲ್ಲಿ ೧೬೮ ಮಕ್ಕಳು, ೧೦ ಜನ ಶಿಕ್ಷಕರು ಮತ್ತು ಇಬ್ಬರು ಸಹಾಯಕರಿದ್ದಾರೆ. ಅಂಬೇಡ್ಕರ್ ಶಾಲೆಯಿದ್ದು ಇಲ್ಲಿ ೨೧೦ ವಿದ್ಯಾರ್ಥಿಗಳು ಹಾಗೂ ೯ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೭೨.೧೫%.

ಸಿಹೀನೀರು ಬಾವಿ ವಾರ್ಡ್‌ನಲ್ಲಿ ಎ.ಸಿ ಆಫೀಸ್, ಸಿವಿಲ್ ಕೋರ್ಟ್ ಇದೆ. ಚಿಕ್ಕಣ್ಣ ಸಮುದಾಯಭವನ, ಕಲ್ಯಾಣಿ ಪ್ರಧಾನರ ಬಾವಿ ಹಾಗೂ ಮಸೀದಿಯೂ ಇದೆ.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ೧೦೦ ಕ್ಕೂ ಹೆಚ್ಚು ಅಂಗಡಿಗಳು ಹಾಗೂ ೨೫ ಕ್ಕೂ ಹೆಚ್ಚು ಹೋಟೆಲ್‌ಗಳಿವೆ.

ಚೌಡೇಶ್ವರಿ ನಗರದಲ್ಲಿ ಬಾಲಸುಬ್ರಹ್ಮಣ್ಯ, ಗಣೇಶ ದೇವಾಲಯ, ಸಿಹೀನೀರ ಬಾವಿ ವಾರ್ಡ್‌ನಲ್ಲಿ ವೇಣುಗೋಪಾಲ ದೇವಾಲಯವಿದೆ. ನಗರದಲ್ಲಿ ಎಲ್ಲಾ ಹಿಂದೂ ಹಾಗೂ ಮುಸ್ಲಿಂ ಹಬ್ಬಗಳನ್ನು ಆಚರಿಸುವರು. ಯುಗಾದಿ, ಶಿವರಾತ್ರಿ, ದೀಪಾವಳಿ, ರಂಜಾನ್, ಬಕ್ರಿದ್ ಹಬ್ಬಗಳನ್ನು ಆಚರಿಸುತ್ತಾರೆ.

## ವಾರ್ಡ್ ನಂ.೮ : ಹೌಸಿಂಗ್ ಬೋರ್ಡ್

ವಾರ್ಡ್ ನಂ.೮ ಮಧುಗಿರಿಯ ಉತ್ತರ ದಿಕ್ಕಿನಲ್ಲಿದ್ದು ಮಧ್ಯಭಾಗದಿಂದ ೧.೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮.೮೧ ಚದುರ ಕಿಮೀ ಬಯಲುನಾಡು ಪ್ರದೇಶ ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು–ಬಿಳಿ ಕಲ್ಲುಗಳು ಹಾಗೂ ಕೆಂಪು ಮಣ್ಣು ಕಂಡುಬರುತ್ತದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ಮಧುಗಿರಿಯ ಭೂವಿಸ್ತೀರ್ಣದಲ್ಲಿ ಸೇರಿರುತ್ತದೆ.

ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕೋತಿಗಳು, ಅಳಿಲು ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಹಿರೇಮರದ ಹಕ್ಕಿ, ಗರುಡ, ಕಾಗೆ, ಗುಬ್ಬಚ್ಚಿ, ಕೋಗಿಲೆ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ನಾಯಿ, ಹಂದಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಈ ವಾರ್ಡ್‌ನಲ್ಲಿ ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಬಿಟಿ (ಆದಿಕರ್ನಾಟಕ, ಆದಿದ್ರಾವಿಡ), ತಿಗುಳ, ಕುಂಬಾರ, ಕಮ್ಮಾರ, ಕುಂಚಿಟಿಗ, ಲಿಂಗಾಯಿತ, ಬ್ರಾಹ್ಮಣ, ವೈಷ್ಣವ ಜನಾಂಗದವರಿದ್ದು ಕುಂಬಾರ, ಮುಸ್ಲಿಂ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉಳಿದಂತೆ ಉರ್ದು, ತೆಲುಗು ಮಾತನಾಡುವರು.

ಒಟ್ಟು ೫೭೦ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೩೮೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೨೪೩ ಮತ್ತು ಹೆಂಗಸರು ೧೧೪೫ ಜನರಿದ್ದಾರೆ. ಇಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಇಟ್ಟಿಗೆ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೮೩ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ಮತ್ತು ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಆಟೋ, ಟ್ರ್ಯಾಕ್ಟರ್, ಬೋರ್‌ಲಾರಿ, ಟೆಂಪೋ, ಬಸ್ಸು, ಕಾರು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ರಸ್ತೆಗಳೆಲ್ಲವೂ ಸಿಮೆಂಟ್ ರಸ್ತೆಗಳಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೫೫೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಕೂಲಿ ಮತ್ತು ಸರ್ಕಾರಿ ನೌಕರರು ಹಾಗೂ ಖಾಸಗಿ ನೌಕರರು ಗ್ರಾಮದಲ್ಲಿದ್ದು ವ್ಯಾಪಾರ ಮಾಡುವವರೂ ಕೂಡ ಗ್ರಾಮದಲ್ಲಿದ್ದಾರೆ. ಕಂದಾಯ ಇಲಾಖೆ, ಶಿಕ್ಷಣ ಇಲಾಖೆ, ನ್ಯಾಯಾಂಗ ವ್ಯವಸ್ಥೆ, ಕೆಇಬಿ, ಮಿಲಿಟರಿ, ಪೊಲೀಸ್ ಇಲಾಖೆ, ವೈದ್ಯರು ಹಾಗೂ ಇಂಜಿನಿಯರ್ ವೃತ್ತಿಯಲ್ಲಿರುವ ಜನರಿದ್ದಾರೆ.

ಮಧುಗಿರಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್ ಕಛೇರಿ, ಪೊಲೀಸ್ ಠಾಣೆ, ಅಂಚೆ ಕಛೇರಿ ಹಾಗೂ ತಾಲ್ಲೂಕು ನ್ಯಾಯಾಲಯದ ಸೌಲಭ್ಯಗಳೆಲ್ಲವೂ ಮಧುಗಿರಿಯಲ್ಲಿಯೇ ಲಭ್ಯವಾಗಿದೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ಗ್ರಾಮದಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ೩೬ ಮಕ್ಕಳಿದ್ದಾರೆ. ಒಬ್ಬರು ಕಾರ್ಯಕರ್ತೆಯರು ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ವಾರ್ಡ್‌ನ ಒಟ್ಟು ಸಾಕ್ಷರತೆ ೫೪.೫೩%

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ನಗರದಲ್ಲಿ ಮಾರಮ್ಮನ ದೇವಾಲಯಗಳಿವೆ. ಹರಕೆ ಹಾಗೂ ಬಲಿಯೊಂದಿಗೆ ಆರತಿ ಮಾಡುವರು. ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.ಯುಗಾದಿ, ಶಿವರಾತ್ರಿ, ದೀಪಾವಳಿ ಹಬ್ಬಗಳನ್ನು ಆಚರಿಸುತ್ತಾರೆ.

## ವಾರ್ಡ್ ನಂ.೯ : ಮೇಕೆಬಂಡೆ ಮತ್ತು ತಿಪ್ಪಾಪುರ ಛತ್ರ

ಮೇಕೆಬಂಡೆ ಮತ್ತು ತಿಪ್ಪಾಪುರ ಛತ್ರ ಎರಡೂ ಬಡಾವಣೆ ವಾರ್ಡ್ ನಂ.೯ ಗೆ ಸೇರಿದ್ದು ಮಧುಗಿರಿಯ ಮಧ್ಯಭಾಗದಿಂದ ೧.೫ ಕಿ.ಮೀ. ದೂರದಲ್ಲಿದೆ. ದಿಕ್ಕಿಗೆ ಅನುಗುಣವಾಗಿ ಉತ್ತರ ದಿಕ್ಕಿನಲ್ಲಿದ್ದು ಭೌಗೋಳಿಕವಾಗಿ ಬಿಳಿ ಕಲ್ಲು, ಕೆಂಪು ಮಿಶ್ರಿತ ಮಣ್ಣನ್ನು ಹೊಂದಿದೆ. ಈ ಎರಡು ವಾರ್ಡ್‌ಗಳು ಮಧುಗಿರಿಯ ಭೂವಿಸ್ತೀರ್ಣ ೮.೮೧ ಚದುರ ಕಿಮೀ ರಲ್ಲಿ ಹಂಚಿಕೆಯಾಗಿದೆ.

ಚಿಕ್ಕ ಬೆಟ್ಟದ ಬಂಡೆಗಳ ಮೇಲೆ ಮೇಕೆಗಳು ಇರುತ್ತಿದ್ದ ಕಾರಣದಿಂದ ಮೇಕೆಬಂಡೆ ಎಂದು ಹೆಸರಾಗಿದೆ. ಇಲ್ಲಿ ಜನವಸತಿ ಸ್ಥಳವಾಗಿದ್ದು ಆನಂದರಾಯನ ಗುಡ್ಡ ಎಂತಲೂ ಕರೆಯಲಾಗುತ್ತಿದೆ.

ಪ್ರಾಣಿಗಳಾದ ಕೋತಿಗಳು ಕಂಡುಬರುತ್ತವೆ. ಪಕ್ಷಿಗಳಾದ ಕಾಗೆ, ಗೊರವಂಕ, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಸಾಕು ಪ್ರಾಣಿಗಳ ಗುಂಪಿಗೆ ಸೇರಿದ ಸೀಮೆಹಸು, ಬೆಕ್ಕು, ನಾಯಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ಕೋಳಿ, ಪಾರಿವಾಳಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ಈ ವಾರ್ಡ್‌ನಲ್ಲಿ ಆದಿಕರ್ನಾಟಕ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಮುಸ್ಲಿಂ, ಒಕ್ಕಲಿಗರು, ಕುರುಬರು, ನಾಯಕರು, ಮತ್ತು ಬೋವಿ ಜನಾಂಗದವರಿದ್ದು ಒಕ್ಕಲಿಗ ಜನಾಂಗ ಚಿಕ್ಕ ಸಮುದಾಯ ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉಳಿದಂತೆ ಮುಸ್ಲಿಮರು ಉರ್ದು ಮಾತನಾಡುವರು.

ಕುಡಿಯುವ ನೀರನ್ನು ಕಿರುನೀರು ಸರಬರಾಜು ಮುಖೇನ ಪುರಸಭೆಯು ಪೂರೈಸುತ್ತದೆ. ಈ ವಾರ್ಡ್‌ಗಳಲ್ಲಿ ಸುಮಾರು ೬೨೦ ಕ್ಕೂ ಹೆಚ್ಚು ನಲ್ಲಿಗಳಿವೆ.

ಎರಡು ವಾರ್ಡ್‌ಗಳಿಂದ ಒಟ್ಟು ೬೫೧ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೫೯೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೩೦೩ ಮತ್ತು ಹೆಂಗಸರು ೧೨೯೬ ಜನರಿದ್ದಾರೆ. ಇಲ್ಲಿ ಕಾಂಕ್ರೀಟ್ ಮನೆ, ಇಟ್ಟಿಗೆ ಮನೆ, ಶೀಟಿನ ಮನೆ ಮತ್ತು ಗುಡಿಸಲುಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೬೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ಮತ್ತು ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಆಟೋ, ಟೆಂಪೋ, ಕಾರು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ರಸ್ತೆಗಳೆಲ್ಲವೂ ಸಿಮೆಂಟ್ ರಸ್ತೆಗಳಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೬೫೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಇಲ್ಲಿಯೂ ಸಹ ಸರ್ಕಾರಿ ನೌಕರರು ಇದ್ದು ಪೊಲೀಸ್, ಶಿಕ್ಷಣ ಇಲಾಖೆ, ಕೃಷಿ ಇಲಾಖೆ, ಸಾರಿಗೆ ಇಲಾಖೆಗಳಲ್ಲಿ ಕೆಲಸ ಮಾಡುವವರು ಕಂಡುಬರುತ್ತಾರೆ. ಆಧುನಿಕ ಉದ್ಯೋಗವಾದ ಟೈಲರಿಂಗ್ ಕೆಲಸ ಮಾಡುವವರಿದ್ದಾರೆ.

ಮಧುಗಿರಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ನ್ಯಾಯಾಲಯ, ಪೊಲೀಸ್ ಠಾಣೆ, ಕೆಇಬಿ, ಪಿಡಬ್ಲ್ಯೂಡಿ, ಕೃಷಿ ಇಲಾಖೆ, ಆಸ್ಪತ್ರೆ, ಸರ್ಕಾರಿ ಬಸ್ ನಿಲ್ದಾಣ ಸೌಲಭ್ಯಗಳೆಲ್ಲವೂ ಮಧುಗಿರಿಯಲ್ಲಿಯೇ ಲಭ್ಯವಾಗಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಎರಡು ವಾರ್ಡ್‌ಗಳಿಂದ ಇಬ್ಬರು ನೌಕರರು ಹಾಗೂ ಇಬ್ಬರು ಸದಸ್ಯರು ಇರುವುದನ್ನು ಕಾಣಬಹುದು.

ಎರಡು ವಾರ್ಡ್‌ಗಳಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ಇಬ್ಬರು ಕಾರ್ಯಕರ್ತೆಯರು ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಮೇಕೆಬಂಡೆ ಅಂಗನವಾಡಿ ಕೇಂದ್ರದಲ್ಲಿ ೬೯ ಮಕ್ಕಳು ಹಾಗೂ ತಿಪ್ಪಾಪುರ ಛತ್ರ ಅಂಗನವಾಡಿ ಕೇಂದ್ರದಲ್ಲಿ ೬೩ ಮಕ್ಕಳಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೩೬ ಮಕ್ಕಳಿದ್ದಾರೆ. ಇಬ್ಬರು ಶಿಕ್ಷಕರಿದ್ದು ಮಕ್ಕಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೮೩%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ೧೦ ಅಂಗಡಿಗಳು, ೬ ಹೋಟೆಲ್ ಇದ್ದು ಸುಮಾರು ತರಕಾರಿ ಮಾರುವ, ಹೂವಿನ ಹಾಗೂ ಹಣ್ಣಿನ ಅಂಗಡಿಗಳು ಇರುವುದನ್ನು ಗಮನಿಸಬಹುದು.

ನಗರದಲ್ಲಿ ಹಟ್ಟಿಮಾರಮ್ಮ, ಕಾಟಮಹಲಿಂಗೇಶ್ವರ, ಅರಳಿಕಟ್ಟೆ ನಾಗಪ್ಪ, ವಿನಾಯಕ ದೇವಾಲಯಗಳಿವೆ. ಮಾರಮ್ಮ ತಾಯಿಗೆ ಬಲಿ, ಹರಕೆ, ಆರತಿಯು ಆಷಾಢ ಮಾಸದಲ್ಲಿ ನಡೆಯುತ್ತದೆ. ಹರಕೆ ಹಾಗೂ ಬಲಿಯೊಂದಿಗೆ ಆರತಿ ಮಾಡುವರು. ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಸಂಕ್ರಾಂತಿ, ದೀಪಾವಳಿ, ಗೌರಿ–ಗಣೇಶ, ಯುಗಾದಿ ಮುಂತಾದ ಎಲ್ಲಾ ಹಿಂದೂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವಾರ್ಡ್ ನಂ.೧೦, ೧೧ ಹಾಗೂ ೧೨ : ಹೊಗೆಬೀಳು ನಾಯ್ಕರಹಟ್ಟಿ

ವಾರ್ಡ್ ನಂ.೧೦, ೧೧, ೧೨ ಮಧುಗಿರಿಯ ಉತ್ತರ ದಿಕ್ಕಿನಲ್ಲಿದ್ದು ಮಧ್ಯಭಾಗದಿಂದ ೧ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮.೮೧ ಚದುರ ಕಿಮೀ ಬಯಲುನಾಡು ಪ್ರದೇಶ ಆಗಿದೆ. ಮಧುಗಿರಿಯ ಉತ್ತರ ಭಾಗದಲ್ಲಿನ ಕೃಷಿ ಭೂಮಿಯಲ್ಲಿ ಗಿಡ–ಕಡ್ಡಿಗಳಿಗೆ ಬೆಂಕಿ ಹಚ್ಚುತ್ತಿದ್ದುದರಿಂದ ಏಳುತ್ತಿದ್ದ ಹೊಗೆಯ ಮೂಲದಿಂದ ಹೊಗೆಬೀಳು ಎಂದು ಕರೆಯಲಾಗುತ್ತಿದೆ.

ನಾಯಕ ಜನಾಂಗದವರು ಅಧಿಕ ಸಂಖ್ಯೆಯಲ್ಲಿದ್ದುದರಿಂದ ಈ ಪ್ರದೇಶಕ್ಕೆ ನಾಯಕರಹಟ್ಟಿ ಎಂದು ಕರೆಯಲಾಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳು ಹಾಗೂ ಕೆಂಪು ಮಣ್ಣು ಹೊಂದಿರುವ ಫಲವತ್ತಾದ ಭೂಮಿಯನ್ನು ಹೊಂದಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ಮಧುಗಿರಿಯ ಭೂವಿಸ್ತೀರ್ಣದಲ್ಲಿ ಸೇರಿರುತ್ತದೆ.

ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕೋತಿಗಳು, ಅಳಿಲು ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಕಾಗೆ, ಹದ್ದು ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ೩ ಹಸು, ೬ ನಾಯಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ನಗರದ ಕುಡಿಯುವ ನೀರಿನ ಸರಬರಾಜನ್ನು ಕಿರುನೀರು ಸರಬರಾಜಿನ ಮುಖೇನ ಕಾರ್ಪೋರೇಷನ್ ಒದಗಿಸುತ್ತಿದೆ.

ಈ ವಾರ್ಡ್‌ನಲ್ಲಿ ನಾಯಕ ಹಾಗೂ ಒಕ್ಕಲಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಬೋವಿ, ಹೊಲೆಯರು, ತಿಗುಳರು, ವಡ್ಡರು ಜನಾಂಗದವರಿದ್ದು ಬ್ರಾಹ್ಮಣರು ಹಾಗೂ ತೆಲುಗು ಕುಂಬಾರ ಜನಾಂಗ ಚಿಕ್ಕ ಸಮುದಾಯ

ದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉಳಿದಂತೆ ತೆಲುಗು, ತಮಿಳು ಮಾತನಾಡುವರು.

ಒಟ್ಟು ೫೬೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೪೯೮ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೧೩೭ ಮತ್ತು ಹೆಂಗಸರು ೧೩೬೧ ಜನರಿದ್ದಾರೆ. ಇಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಇಟ್ಟಿಗೆ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೮೪ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ಮತ್ತು ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಆಟೋ, ಟೆಂಪೋ, ಕಾರು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ರಸ್ತೆಗಳೆಲ್ಲವೂ ಸಿಮೆಂಟ್ ರಸ್ತೆಗಳಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೫೬೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯಾಪಾರ ವಾರ್ಡ್‌ನ ಮುಖ್ಯ ಕಸುಬಾಗಿದ್ದು ಕುರಿ, ಬಟ್ಟೆ, ದಿನಸಿ, ಪ್ಲಾಸ್ಟಿಕ್ ವ್ಯಾಪಾರ ಮಾಡುವರು. ಮನೆಗಳಲ್ಲಿ ಹಪ್ಪಳ, ಉಪ್ಪಿನಕಾಯಿ, ಗಂಧದ ಕಡ್ಡಿ ತಯಾರಿಸುವವರೂ ಇದ್ದಾರೆ. ಶಿಕ್ಷಣ ಇಲಾಖೆ, ಕಂದಾಯ ಇಲಾಖೆ, ಪೊಲೀಸ್, ಸಾರಿಗೆ ಇಲಾಖೆ, ಇಂಜಿನಿಯರ್ ಹಾಗೂ ವೈದ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಮಧುಗಿರಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್ ಕಛೇರಿ, ಪೊಲೀಸ್ ಠಾಣೆ, ಅಂಚೆ ಕಛೇರಿ, ಕಾರ್ಪೋರೇಷನ್ ಆಫೀಸ್ ಹಾಗೂ ಸಿವಿಲ್ ನ್ಯಾಯಾಲಯದ ಸೌಲಭ್ಯಗಳೆಲ್ಲವೂ ಮಧುಗಿರಿಯಲ್ಲಿಯೇ ಲಭ್ಯವಾಗಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ.

ವಾರ್ಡ್‌ಗಳಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ಇಬ್ಬರು ಕಾರ್ಯಕರ್ತೆಯರು ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಹೊಗೆಬೀಳು ಅಂಗನವಾಡಿ ಕೇಂದ್ರದಲ್ಲಿ ೬೪ ಮಕ್ಕಳು ಹಾಗೂ ನಾಯ್ಕರಹಟ್ಟಿ ಅಂಗನವಾಡಿ ಕೇಂದ್ರದಲ್ಲಿ ೩೯ ಮಕ್ಕಳಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೨೨೬ ಮಕ್ಕಳಿದ್ದಾರೆ. ೮ ಜನ ಶಿಕ್ಷಕರಿದ್ದು ೪ ಜನ ಸಹಾಯಕರಿದ್ದಾರೆ. ಮಕ್ಕಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೮೦.೭೫%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ವಾರ್ಡ್‌ನಲ್ಲಿ ೧೫ ಅಂಗಡಿ ಹಾಗೂ ೧೦ ಹೋಟೆಲ್‌ಗಳಿವೆ.

ನಗರದಲ್ಲಿ ಬಸವಣ್ಣ, ಕನ್ನಿಕಾ ಪರಮೇಶ್ವರಿ, ಮಾರಮ್ಮ ದೇವಾಲಯಗಳಿವೆ ಹಾಗೂ ಮಸೀದಿ ಇದೆ. ಎಲ್ಲಾ ಹಿಂದೂ ಹಾಗೂ ಮುಸ್ಲಿಂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವಾರ್ಡ್ ನಂ.೧೩ : ಬೂರ್ಕನಹಟ್ಟಿ

ವಾರ್ಡ್ ನಂ.೧೩ ಮಧುಗಿರಿಯ ಉತ್ತರ ದಿಕ್ಕಿನಲ್ಲಿದ್ದು ಮಧ್ಯಭಾಗದಿಂದ ೧.೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮.೮೧ ಚದುರ ಕಿಮೀ ಬಯಲುನಾಡು ಪ್ರದೇಶ ಆಗಿದೆ. ಬೋರಕ್ಕನಹಟ್ಟಿ ನಂತರ ಜನಬಳಕೆಯಲ್ಲಿ ಬೂರ್ಕನಹಟ್ಟಿ ಎಂದು ಕರೆಯಲಾಗುತ್ತಿದೆ. ಇದು ಮಧುಗಿರಿಯ ಆದಿಕರ್ನಾಟಕದವರ ಮೂಲನೆಲೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಕೆಂಪು ಕಲ್ಲುಗಳು ಹಾಗೂ ಕೆಂಪು ಮಣ್ಣು ಹೊಂದಿರುವ ಫಲವತ್ತಾದ ಭೂಮಿಯನ್ನು ಹೊಂದಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ಮಧುಗಿರಿಯ ಭೂವಿಸ್ತೀರ್ಣದಲ್ಲಿ ಸೇರಿರುತ್ತದೆ.

ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕೋತಿಗಳು, ಅಳಿಲು, ಮುಂಗುಸಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ನವಿಲು, ಗಿಳಿ, ಗೊರವಂಕ, ಹಿರೇಮರದ ಹಕ್ಕಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ೧ ಹಸು, ನಾಯಿ, ಹಂದಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ

೪೫೩.೭ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ನಗರದ ಕುಡಿಯುವ ನೀರಿನ ಸರಬರಾಜನ್ನು ಕಿರುನೀರು ಸರಬರಾಜಿನ ಮುಖೇನ ಕಾರ್ಪೋರೇಷನ್ ಒದಗಿಸುತ್ತಿದೆ.

ಈ ವಾರ್ಡ್‌ನಲ್ಲಿ ಕುಂಚಿಟಿಗ, ನಾಯಕ, ಮುಸ್ಲಿಂ, ಆದಿದ್ರಾವಿಡ, ಆದಿ ಕರ್ನಾಟಕ, ನಾಯಕ, ಶೆಟ್ಟರು, ಅಗಸರು, ಮಡಿವಾಳ, ಲಿಂಗಾಯಿತ, ಸಾದರು, ಬ್ರಾಹ್ಮಣ, ಶ್ರೀವೈಷ್ಣವ ಜನಾಂಗದವರಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉಳಿದಂತೆ ಹಿಂದಿ, ತೆಲುಗು, ಉರ್ದು, ಮಲಯಾಳಂ ಮಾತನಾಡುವರು.

ಒಟ್ಟು ೧೬೫ ಮನೆಗಳನ್ನು ಹೊಂದಿರುವ ವಾರ್ಡ್ ಇತ್ತೀಚಿನ ಜನಗಣತಿಯ ಪ್ರಕಾರ ೮೨೦ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೯೯ ಮತ್ತು ಹೆಂಗಸರು ೪೧೧ ಜನರಿದ್ದಾರೆ. ಇಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಇಟ್ಟಿಗೆ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೧೮ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ಮತ್ತು ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಆಟೋ, ಟೆಂಪೋ, ಲಾರಿ, ಕಾರು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ರಸ್ತೆಗಳೆಲ್ಲವೂ ಸಿಮೆಂಟ್ ರಸ್ತೆಗಳಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೧೬೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಗ್ರಾಮದಲ್ಲಿನ ಜನರು ಸ್ವಂತ ಉದ್ಯೋಗಸ್ಥರಾಗಿದ್ದು ತರಕಾರಿ, ಹೂ, ಹಣ್ಣು, ಬಟ್ಟೆ ವ್ಯಾಪಾರ ಮಾಡುವವರಾಗಿದ್ದಾರೆ. ಸ್ವಂತ ಅಂಗಡಿಗಳನ್ನು ಇಟ್ಟಿದ್ದಾರೆ. ಕೆಲವರು ಕೂಲಿ ಮಾಡುತ್ತಾರೆ. ಊದುಬತ್ತಿ (ಗಂಧದ ಕಡ್ಡಿ)ಗಳನ್ನು ಕೆಲವು ಮನೆಗಳಲ್ಲಿ ಮಾಡುತ್ತಿರುವುದು ಕಂಡುಬರುತ್ತದೆ. ಶಿಕ್ಷಣ ಇಲಾಖೆ, ಸಾರಿಗೆ ಇಲಾಖೆ, ಕಂದಾಯ ಇಲಾಖೆ, ರೆವಿನ್ಯೂ, ಕೆಇಬಿ ಸೇರಿದಂತೆ ಉದ್ಯೋಗಗಳನ್ನು ನಿರ್ವಹಿಸುತ್ತಿದ್ದು ಖಾಸಗಿ ಉದ್ಯೋಗ ಮಾಡುವ ವೈದ್ಯರು, ನರ್ಸ್‌ಗಳು ಹಾಗೂ ಇಂಜಿನಿಯರ್‌ಗಳಿದ್ದಾರೆ. ಕೆಲವರು ಗ್ಯಾರೇಜ್ ಮೆಕ್ಯಾನಿಕ್, ಟೈಲರ್, ಮನೆಕಟ್ಟುವವರೂ ಕೂಡ ವಾರ್ಡ್‌ನಲ್ಲಿದ್ದಾರೆ.

ಮಧುಗಿರಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್ ಕಛೇರಿ, ಸಿವಿಲ್ ನ್ಯಾಯಾಲಯ, ಕೆಇಬಿ, ಬ್ಯಾಂಕ್‌ಗಳು, ಎಟಿಎಂಗಳು, ಮಾರುಕಟ್ಟೆ, ಮಾರಾಟ ಮಳಿಗೆಗಳು, ಅಂಚೆ ಕಛೇರಿ ದ ಸೌಲಭ್ಯಗಳೆಲ್ಲವೂ ಮಧುಗಿರಿಯಲ್ಲಿಯೇ ಲಭ್ಯವಾಗಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ.

ವಾರ್ಡ್‌ನಲ್ಲಿ ಒಂದು ಅಂಗನವಾಡಿ ಕೇಂದ್ರವಿದ್ದು ಒಟ್ಟು ೩೮ ಮಕ್ಕಳು, ಒಬ್ಬರು ಕಾರ್ಯಕರ್ತೆ ಹಾಗೂ ಒಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ವಾಡ್‌ರ್ನ ಒಟ್ಟು ಸಾಕ್ಷರತೆ ಪ್ರಮಾಣ ೮೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ನಗರದಲ್ಲಿ ಹಟ್ಟಿಮಾರಮ್ಮ ದೇವಾಲಯಗಳಿವೆ ಹಾಗೂ ಮಸೀದಿ ಇದೆ. ಎಲ್ಲಾ ಹಿಂದೂ ಹಾಗೂ ಮುಸ್ಲಿಂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವಾರ್ಡ್ ನಂ.೧೪ : ರಾಮೇಗೌಡನ ಗಲ್ಲಿ

ರಾಮೇಗೌಡನ ಗಲ್ಲಿ ವಾರ್ಡ್ ನಂ.೧೪ ಮಧುಗಿರಿಯ ಪಶ್ಚಿಮ ದಿಕ್ಕಿನಲ್ಲಿದ್ದು ಮಧ್ಯಭಾಗದಿಂದ ೧.೫ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮.೮೧ ಚದುರ ಕಿಮೀ ಬಯಲುನಾಡು ಪ್ರದೇಶ ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳು ಹಾಗೂ ಕೆಂಪು ಮಣ್ಣು ಹೊಂದಿರುವ ಫಲವತ್ತಾದ ಭೂಮಿಯನ್ನು ಹೊಂದಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ಮಧುಗಿರಿಯ ಭೂವಿಸ್ತೀರ್ಣದಲ್ಲಿ ಸೇರಿರುತ್ತದೆ.

ಯಾವುದೇ ರೀತಿಯ ಅರಣ್ಯ ಪ್ರದೇಶವನ್ನು ಹೊಂದಿಲ್ಲದಿದ್ದರೂ ಪ್ರಾಣಿಗಳಾದ ಕೋತಿಗಳು, ಮುಂಗುಸಿ ಮೊದಲಾದ ಪ್ರಾಣಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗಿಳಿ, ಕೋಗಿಲೆ, ಕಾಗೆ, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ೨ ಹಸು, ೩ ನಾಯಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ

೪೫೩.೯ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ನಗರದ ಕುಡಿಯುವ ನೀರಿನ ಸರಬರಾಜನ್ನು ಕಿರುನೀರು ಸರಬರಾಜಿನ ಮುಖೇನ ಕಾರ್ಪೋರೇಷನ್ ಒದಗಿಸುತ್ತಿದೆ. ಈ ವಾರ್ಡ್‌ನಲ್ಲಿ ಕುಂಚಿಟಿಗ ಜನಾಂಗದವರೇ ಪ್ರಧಾನ ಸಂಖ್ಯೆಯಲ್ಲಿದ್ದು ದೊಡ್ಡ ಸಮುದಾಯವಾಗಿದೆ. ಉಳಿದಂತೆ ಮುಸ್ಲಿಂ, ಆದಿಕರ್ನಾಟಕ, ಆದಿದ್ರಾವಿಡ, ಅಗಸರು, ಕಮ್ಮಾರ, ಲಿಂಗಾಯಿತ ಜನಾಂಗದವರಿದ್ದು ಮುಸ್ಲಿಂ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉಳಿದಂತೆ ತೆಲುಗು, ತಮಿಳು, ಉರ್ದು ಮಾತನಾಡುವರು.

ಒಟ್ಟು ೪೮೮ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೧೯೬೯ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೯೭೭ ಮತ್ತು ಹೆಂಗಸರು ೯೯೨ ಜನರಿದ್ದಾರೆ. ಇಲ್ಲಿ ಕಾಂಕ್ರೀಟ್ ಮನೆ, ಕಲ್ಲಿನ ಮನೆ, ಇಟ್ಟಿಗೆ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೩೭೨ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ಮತ್ತು ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಆಟೋ, ಬಸ್ಸು, ಲಾರಿ, ಟೆಂಪೋ, ಕಾರು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ರಸ್ತೆಗಳೆಲ್ಲವೂ ಸಿಮೆಂಟ್ ರಸ್ತೆಗಳಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೪೮೧ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯಾಪಾರ ವಾರ್ಡ್‌ನ ಮುಖ್ಯ ಕಸುಬಾಗಿದ್ದು ಕೆಲವರು ಮನೆಗಳಲ್ಲಿಯೇ ಜಾಮೂನು, ಹಪ್ಪಳ, ಉಪ್ಪಿನಕಾಯಿ ಮಾಡುವುದರಲ್ಲಿ ತೊಡಗಿದ್ದಾರೆ. ಶಿಕ್ಷಣ ಇಲಾಖೆ, ಸಾರಿಗೆ ಇಲಾಖೆ, ಕೆಇಬಿ, ಪೊಲೀಸ್, ಮಿಲಿಟರಿ ಹಾಗೂ ಲಾಯರ್ ಆಗಿ ಉದ್ಯೋಗಗಳನ್ನು ನಿರ್ವಹಿಸುತ್ತಿದ್ದು ವೈದ್ಯರು ಹಾಗೂ ಇಂಜಿನಿಯರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಇಬ್ಬರು ಬಡಗಿ ಹಾಗೂ ೫ ಗುಡಿಕಾರರು ನಗರದಲ್ಲಿದ್ದಾರೆ.

ಮಧುಗಿರಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್ ಕಛೇರಿ, ಪೊಲೀಸ್ ಠಾಣೆ, ಅಂಚೆ ಕಛೇರಿ, ಕಾರ್ಪೋರೇಷನ್ ಆಫೀಸ್ ಹಾಗೂ ಸಿವಿಲ್ ನ್ಯಾಯಾಲಯದ ಸೌಲಭ್ಯಗಳೆಲ್ಲವೂ ಮಧುಗಿರಿಯಲ್ಲಿಯೇ ಲಭ್ಯವಾಗಿದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ. ವಾರ್ಡ್‌ಗಳಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ಇಬ್ಬರು ಕಾರ್ಯಕರ್ತೆಯರು ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಮಂಡರ ಕಾಲೋನಿ ಅಂಗನವಾಡಿ ಕೇಂದ್ರದಲ್ಲಿ ೫೦ ಮಕ್ಕಳು ಹಾಗೂ ರಾಮೇಗೌಡನ ಗಲ್ಲಿ ಅಂಗನವಾಡಿ ಕೇಂದ್ರದಲ್ಲಿ ೨೩ ಮಕ್ಕಳಿದ್ದಾರೆ. ಸರ್ಕಾರಿ ಕಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೪೯ ಮಕ್ಕಳಿದ್ದಾರೆ. ೩ ಜನ ಶಿಕ್ಷಕರಿದ್ದಾರೆ. ರಾಮೇಗೌಡರ ಗಲ್ಲಿಯ ಗುರುಕುಲ ವಿದ್ಯಾಮಂದಿರದಲ್ಲಿ ಒಟ್ಟು ೪೮೦ ಮಕ್ಕಳು ಹಾಗೂ ೧೨ ಜನ ಶಿಕ್ಷಕರಿದ್ದಾರೆ. ಮಕ್ಕಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೭೧.೯%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ.

ನಗರದಲ್ಲಿ ವೆಂಕಟರಮಣ, ಮಲ್ಲೇಶ್ವರ ಹಾಗೂ ಶನಿಮಹಾತ್ಮ ದೇವಾಲಯಗಳಿವೆ ಹಾಗೂ ಮಸೀದಿ ಇದೆ. ಎಲ್ಲಾ ಹಿಂದೂ ಹಾಗೂ ಮುಸ್ಲಿಂ ಹಬ್ಬಗಳನ್ನು ತುಂಬಾ ವೈಭವದಿಂದ ಆಚರಿಸುತ್ತಾರೆ.

## ವಾರ್ಡ್ ನಂ.೧೫ : ಚೌಡೇಶ್ವರಿ ಮತ್ತು ವಿಆರ್‌ಎಸ್‌ಟಿ

ಚೌಡೇಶ್ವರಿ ಮತ್ತು ವಿ.ಆರ್.ಎಸ್.ಟಿ ವಾರ್ಡ್ ನಂ.೧೫ ಕ್ಕೆ ಸೇರಿದ್ದು ಮಧುಗಿರಿಯ ಪೂರ್ವ ದಿಕ್ಕಿನಲ್ಲಿದ್ದು ಮಧ್ಯಭಾಗದಿಂದ ೮–೧೦ ಕಿ.ಮೀ. ದೂರದಲ್ಲಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣ ೮.೮೧ ಚದುರ ಕಿಮೀ ಬಯಲುನಾಡು ಪ್ರದೇಶ ಆಗಿದೆ.

ಗ್ರಾಮವು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳು ಹಾಗೂ ಕೆಂಪು–ಬಿಳಿ ಮರಳು ಮಿಶ್ರ ಮಣ್ಣು ಹೊಂದಿರುವ ಫಲವತ್ತಾದ ಭೂಮಿಯನ್ನು ಹೊಂದಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ಮಧುಗಿರಿಯ ಭೂವಿಸ್ತೀರ್ಣದಲ್ಲಿ ಸೇರಿರುತ್ತದೆ. ೯೫೦ ಮೀ. ಅಂತರದಲ್ಲಿ ಒಂದು ದೊಡ್ಡ ಏಕಶಿಲಾ ಬೆಟ್ಟವನ್ನು ಹಾಗೂ ಕೋಟೆಯನ್ನು ಹೊಂದಿವೆ.

ಯಾವುದೇ ಪ್ರಾಣಿಗಳು ವಾರ್ಡ್‌ನಲ್ಲಿ ಕಂಡುಬರದೆ ಬೆಟ್ಟ ಮತ್ತು ಕೋಟೆಯಲ್ಲಿ ಕರಡಿಗಳು, ಕೋತಿಗಳು ಕಂಡುಬರುತ್ತವೆ. ಪಕ್ಷಿಗಳಾದ ಗೊರವಂಕ, ಗುಬ್ಬಚ್ಚಿ, ಕಾಗೆ, ಬೆಳವ ಮೊದಲಾದ ಪಕ್ಷಿಗಳು ಕಂಡುಬರುತ್ತವೆ.

ಗ್ರಾಮಸ್ಥರು ಹಸು, ನಾಯಿಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೮ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ನಗರದ ಕುಡಿಯುವ ನೀರಿನ ಸರಬರಾಜನ್ನು ಕಿರುನೀರು ಸರಬರಾಜಿನ ಮುಖೇನ ಕಾರ್ಪೋರೇಷನ್ ಒದಗಿಸುತ್ತಿದೆ. ೩೫೦ ಕ್ಕೂ ಹೆಚ್ಚು ನಲ್ಲಿಗಳಿವೆ.

ಈ ವಾರ್ಡ್‌ನಲ್ಲಿ ಬ್ರಾಹ್ಮಣ, ಶೆಟ್ಟಿ, ಒಕ್ಕಲಿಗ, ಮುಸ್ಲಿಂ, ಬಲಜಿಗ, ವಿಶ್ವಕರ್ಮ, ಲಿಂಗಾಯಿತ ಜನಾಂಗದವರಿದ್ದು ಬಲಜಿಗ ಜನಾಂಗ ಚಿಕ್ಕ ಸಮುದಾಯದವರಾಗಿದ್ದಾರೆ. ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉಳಿದಂತೆ ತೆಲುಗು, ಉರ್ದು ಮಾತನಾಡುವರು.

ಎರಡೂ ವಾರ್ಡ್‌ಗಳಿಂದ ಒಟ್ಟು ೫೪೬ ಮನೆಗಳನ್ನು ಹೊಂದಿರುವ ಗ್ರಾಮವು ಇತ್ತೀಚಿನ ಜನಗಣತಿಯ ಪ್ರಕಾರ ೨೧೨೨ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೧೦೭೨ ಮತ್ತು ಹೆಂಗಸರು ೧೦೫೦ ಜನರಿದ್ದಾರೆ. ಇಲ್ಲಿ ಕಾಂಕ್ರೀಟ್ ಮನೆ, ಜಂತೆ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ಹಳೆಯ ಮಣ್ಣಿನ ಮನೆಗಳು ಸಹ ಕಾಣಿಸುತ್ತವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೪೧ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ಮತ್ತು ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಆಟೋ, ಬಸ್, ಟಾಟಾ–ಏಸ್, ಟೆಂಪೋ, ಕಾರು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ರಸ್ತೆಗಳೆಲ್ಲವೂ ಸಿಮೆಂಟ್ ರಸ್ತೆಗಳಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೫೪೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ಈ ಭಾಗದಲ್ಲಿ ಸರ್ಕಾರಿ ಹಾಗೂ ಖಾಸಗಿ ವರ್ಗಕ್ಕೆ ಸೇರಿದ ನೌಕರರು ಇರುವುದನ್ನು ಗಮನಿಸಬಹುದು. ಪೊಲೀಸ್, ಕೆಎಸ್‌ಆರ್ಟಿಸಿ, ಬಿಟಿಎಸ್, ಖಾಸಗಿ ಬಸ್ ಡ್ರೈವರ್, ಟ್ರಕ್ ಡ್ರೈವರ್, ಆಟೋ ಡ್ರೈವರ್, ಶಿಕ್ಷಣ ಇಲಾಖೆ, ಸರ್ಕಾರಿ ವೈದ್ಯರು, ಇಂಜಿನಿಯರ್, ಗುಡಿಕಾರರು, ಅಕ್ಕಸಾಲಿಗರು, ವ್ಯಾಪಾರಿಗಳು, ಶ್ತ್ರಾಯ ವರ್ಗದವರು, ಲೈಬ್ರರಿಯನ್ ಎಲ್ಲಾ ರೀತಿಯ ನೌಕರ ವರ್ಗದವರು ಇಲ್ಲಿ ವಾಸಿಸುತ್ತಾರೆ.

ಮಧುಗಿರಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್ ಕಛೇರಿ, ಪೊಲೀಸ್ ಠಾಣೆ, ಅಂಚೆ ಕಛೇರಿ, ವಿದ್ಯುತ್ ಇಲಾಖೆ, ಕೃಷಿ ಇಲಾಖೆ, ಆಸ್ಪತ್ರೆ, ಸರ್ಕಾರಿ ಬಸ್ ನಿಲ್ದಾಣ ಹಾಗೂ ಸಿವಿಲ್ ನ್ಯಾಯಾಲಯದ ಸೌಲಭ್ಯಗಳೆಲ್ಲವೂ ಮಧುಗಿರಿಯಲ್ಲಿಯೇ ಲಭ್ಯವಾಗಿದೆ.

ಎರಡು ನಗರಗಳಿಂದ ಇಬ್ಬರು ನೌಕರರು ಇಬ್ಬರು ಸದಸ್ಯರು ಇದ್ದಾರೆ. ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ.

ವಾರ್ಡ್‌ಗಳಲ್ಲಿ ಎರಡು ಅಂಗನವಾಡಿ ಕೇಂದ್ರವಿದ್ದು ಇಬ್ಬರು ಕಾರ್ಯಕರ್ತೆಯರು ಹಾಗೂ ಇಬ್ಬರು ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ಚೌಡೇಶ್ವರಿ ಬೀದಿಯ ಅಂಗನವಾಡಿ ಕೇಂದ್ರದಲ್ಲಿ ೯೮ ಮಕ್ಕಳು ಹಾಗೂ ವಿಆರ್‌ಎಸ್‌ಟಿ ವಾರ್ಡ್‌ನ ಅಂಗನವಾಡಿ ಕೇಂದ್ರದಲ್ಲಿ ೩೬ ಮಕ್ಕಳಿದ್ದಾರೆ. ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಿದ್ದು ೧೬೪ ಮಕ್ಕಳಿದ್ದಾರೆ. ೭ ಜನ ಶಿಕ್ಷಕರಿದ್ದಾರೆ. ವಿವೇಕಾನಂದ ಪ್ರೌಢಶಾಲೆಯು ಸಹ ಇದ್ದು ೨೭೦ ವಿದ್ಯಾರ್ಥಿಗಳು ಇದ್ದು ೯ ಜನ ಶಿಕ್ಷಕರು, ಇಬ್ಬರು ಸಹಾಯಕರು ಇದ್ದಾರೆ. ಮಕ್ಕಳು ಉಚಿತ ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೮೧.೬%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ವಾರ್ಡ್‌ನಲ್ಲಿ ೧೦ ಅಂಗಡಿ ಹಾಗೂ ೬ ಹೋಟೆಲ್‌ಗಳಿವೆ.

ನಗರದಲ್ಲಿ ವೆಂಕಟರಮಣಸ್ವಾಮಿ, ಚೌಡೇಶ್ವರಿ, ಬಾಲಸುಬ್ರಹ್ಮಣ್ಯ, ಗಣೇಶ ದೇವಾಲಯಗಳಿವೆ. ವೆಂಕಟರಮಣಸ್ವಾಮಿ ತೇರು ಇದ್ದು ಬಹಳ ವಿಜೃಂಭಣೆಯಿಂದ ಜಾತ್ರಾ ಮಹೋತ್ಸವವನ್ನು

ನೆರವೇರಿಸುತ್ತಾರೆ. ಕೃಷ್ಣಾಷ್ಟಮಿ, ನವರಾತ್ರಿ, ಏಕಾದಶಿಯ ದಿನದ ಪೂಜೆಗಳು ತುಂಬ ವಿಜೃಂಭಣೆಯಿಂದ ನೆರವೇರುತ್ತವೆ. ಎಲ್ಲಾ ಹಿಂದೂ ಹಬ್ಬಗಳಾದ ಶಿವರಾತ್ರಿ, ಯುಗಾದಿ, ದೀಪಾವಳಿ, ಗಣೇಶ ಚತುರ್ಥಿ, ಗೌರಿ ಹಬ್ಬಗಳು ಹಾಗೂ ಲಕ್ಷ್ಮಿ ಪೂಜೆಯನ್ನು ತುಂಬ ವೈಭವದಿಂದ ಆಚರಿಸುತ್ತಾರೆ.

## ವಾರ್ಡ್ ನಂ.೧೬, ೧೭, ೧೮ : ಆದಿಕರ್ನಾಟಕ ಕಾಲೋನಿ

ಆದಿಕರ್ನಾಟಕ ಕಾಲೋನಿ ವಾರ್ಡ್ ನಂ.೧೬, ೧೭, ೧೮, ಬೋವಿ ಕಾಲೋನಿ ವಾರ್ಡ್ ನಂ.೧೭, ಕೆ.ಆರ್. ಬಡಾವಣೆ ೧೯–೧೭ ನಂಬರ್‌ಗಳಿಗೆ ಸೇರಿದ್ದು ನಗರ ಪ್ರದೇಶವಾಗಿರುತ್ತದೆ. ಮಧುಗಿರಿಯ ಮಧ್ಯಭಾಗದಿಂದ ೧ ಕಿ.ಮೀ. ದೂರದಲ್ಲಿದೆ. ದಿಕ್ಕಿಗೆ ಅನುಗುಣವಾಗಿ ೧೬, ೧೭ ನೇ ವಾರ್ಡ್ ಪೂರ್ವಾರ್ಧಕ್ಕೆ ಸೇರಿದ್ದು ೧೯ ಮತ್ತು ಸ್ವಲ್ಪ ಭಾಗ ೧೭ ಉತ್ತರಾರ್ಧದಲ್ಲಿ ಸೇರ್ಪಡೆಯಾಗಿದೆ. ೧೬, ೧೭, ೧೮ ಸಂಖ್ಯೆಗಳ ಈ ವಾರ್ಡ್‌ಗಳು ಭೌಗೋಳಿಕವಾಗಿ ೮.೮೧ ಚದುರ ಕಿ.ಮೀ. ಮಧುಗಿರಿ ನಗರದ ವಿಸ್ತೀರ್ಣದಲ್ಲಿ ಸೇರ್ಪಡೆಯಾಗಿರುತ್ತವೆ.

ಈ ವಾರ್ಡ್‌ಗಳು ಬಯಲುನಾಡು ಪ್ರದೇಶವಾಗಿದ್ದು ಬಿಳಿ ಕಲ್ಲುಗಳು ಹಾಗೂ ಕೆಂಪು–ಬಿಳಿ ಮರಳು ಮಿಶ್ರ ಮಣ್ಣು ಹೊಂದಿರುವ ಫಲವತ್ತಾದ ಭೂಮಿಯನ್ನು ಹೊಂದಿದೆ. ಒಟ್ಟು ಭೌಗೋಳಿಕ ವಿಸ್ತೀರ್ಣವು ಮಧುಗಿರಿಯ ಭೂವಿಸ್ತೀರ್ಣದಲ್ಲಿ ಸೇರಿರುತ್ತದೆ. ನಗರದ ಒಳಭಾಗದಲ್ಲಿ ಈ ವಾರ್ಡ್‌ಗಳು ಸೇರಿರುವುದರಿಂದ ಯಾವುದೇ ರೀತಿಯ ಕಾಡುಪ್ರಾಣಿಗಳು ಕಂಡುಬರುವುದಿಲ್ಲ. ಪಕ್ಷಿಗಳಾದ ಕಾಗೆ, ಗೊರವಂಕ, ಗುಬ್ಬಚ್ಚಿ ಮೊದಲಾದ ಪಕ್ಷಿಗಳು ಕಂಡುಬರುತ್ತವೆ. ಗ್ರಾಮಸ್ಥರು ಸೀಮೆಹಸುಗಳನ್ನು ಸಾಕಿದ್ದಾರೆ. ಸಾಕುಪಕ್ಷಿಗಳಾದ ನಾಟಿಕೋಳಿಗಳನ್ನು ಸಾಕಿದ್ದಾರೆ.

ಕಳೆದೆರಡು ವರ್ಷಗಳಿಂದ ಮಳೆಯಿಲ್ಲದೆ ತೀವ್ರ ಬರಗಾಲವನ್ನು ಎದುರಿಸುತ್ತಿದ್ದು ವಾರ್ಷಿಕ ಸರಾಸರಿ ೪೫೩.೯ ಮಿಮೀ ಗ್ರಾಮದಲ್ಲಿ ೮ ಡಿಗ್ರಿಯಿಂದ ೧೦ ಡಿಗ್ರಿ ಚಳಿ, ೩೨ ರಿಂದ ೩೪ ಡಿಗ್ರಿ ಉಷ್ಣಾಂಶವಿದೆ.

ನಗರದ ಕುಡಿಯುವ ನೀರಿನ ಸರಬರಾಜನ್ನು ಕಿರುನೀರು ಸರಬರಾಜಿನ ಮುಖೇನ ಕಾರ್ಪೊರೇಷನ್ ಒದಗಿಸುತ್ತಿದೆ. ೬೩೮ ನಲ್ಲಿಗಳು ಇರುವುದು ಕಂಡುಬರುತ್ತದೆ.

ಈ ವಾರ್ಡ್‌ನಲ್ಲಿ ಬೋವಿ, ಒಕ್ಕಲಿಗ, ಆದಿಕರ್ನಾಟಕ ಹಾಗೂ ಕೊರಚ ಜನಾಂಗದವರಿದ್ದು ಗ್ರಾಮದ ಮಾತೃಭಾಷೆ ಕನ್ನಡವಾಗಿದ್ದು ಎಲ್ಲರೂ ಬಳಸುತ್ತಾರೆ. ಉಳಿದಂತೆ ತೆಲುಗು ಮಾತನಾಡುವರು.

ವಾರ್ಡ್ ನಂ.೧೬ ರಲ್ಲಿ ೨೬೮ ಮನೆಗಳನ್ನು ಹೊಂದಿದ್ದು ಇತ್ತೀಚಿನ ಜನಗಣತಿಯ ಪ್ರಕಾರ ೧೦೭೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೫೩೨ ಮತ್ತು ಹೆಂಗಸರು ೫೪೫ ಜನರಿದ್ದಾರೆ. ವಾರ್ಡ್ ನಂ.೧೭ ರಲ್ಲಿ ೪೧೯ ಮನೆಗಳನ್ನು ಹೊಂದಿದ್ದು ಇತ್ತೀಚಿನ ಜನಗಣತಿಯ ಪ್ರಕಾರ ೧೭೫೪ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೮೮೫ ಮತ್ತು ಹೆಂಗಸರು ೮೬೯ ಜನರಿದ್ದಾರೆ. ವಾರ್ಡ್ ನಂ.೧೮ ರಲ್ಲಿ ೨೦೦ ಮನೆಗಳನ್ನು ಹೊಂದಿದ್ದು ಇತ್ತೀಚಿನ ಜನಗಣತಿಯ ಪ್ರಕಾರ ೮೮೭ ಜನಸಂಖ್ಯೆ ಪ್ರಮಾಣವನ್ನು ಹೊಂದಿದೆ. ಗಂಡಸರು ೪೭೯ ಮತ್ತು ಹೆಂಗಸರು ೪೦೮ ಜನರಿದ್ದಾರೆ. ಇಲ್ಲಿ ಕಾಂಕ್ರೀಟ್ ಮನೆ, ಇಟ್ಟಿಗೆ ಮನೆ, ಹೆಂಚಿನ ಮನೆ ಮತ್ತು ಶೀಟಿನ ಮನೆಗಳಿವೆ. ವಸತಿ ಯೋಜನೆಗಳಾದ ಆಶ್ರಯ, ಜನತಾ, ಇಂದಿರಾ ಆವಾಸ್ ಯೋಜನೆಯ ೩೬ ಫಲಾನುಭವಿಗಳು ಹಾಗೂ ಭಾಗ್ಯಜ್ಯೋತಿ ವಿದ್ಯುತ್ ಸೌಲಭ್ಯದ ಫಲಾನುಭವಿಗಳಿದ್ದಾರೆ. ರಾಗಿ ಮುದ್ದೆ ಮತ್ತು ಅನ್ನ – ಸಾಂಬಾರ್ ಗ್ರಾಮದ ಪ್ರಮುಖ ಆಹಾರವಾಗಿದೆ. ಬಾಡೂಟ, ಪಾಯಸ, ಹೋಳಿಗೆ ಮತ್ತು ಹೋಳಿಗೆ ವಿಶೇಷ ಆಹಾರವಾಗಿದೆ.

ಗ್ರಾಮದಲ್ಲಿ ಆಟೋ, ಟೆಂಪೋ, ಕಾರು ಹಾಗೂ ದ್ವಿಚಕ್ರ ವಾಹನ ಬೈಕ್‌ಗಳಂತಹ ಆಧುನಿಕ ವಾಹನಗಳಿವೆ.

ಸುವರ್ಣ ಗ್ರಾಮ ಯೋಜನೆಯಡಿ ರಸ್ತೆಗಳೆಲ್ಲವೂ ಸಿಮೆಂಟ್ ರಸ್ತೆಗಳಾಗಿದ್ದು, ಚರಂಡಿ ವ್ಯವಸ್ಥೆ ಹಾಗೂ ಶೌಚಾಲಯ ವ್ಯವಸ್ಥೆ ಕಂಡುಬರುತ್ತದೆ. ೮೮೦ ಮನೆಗಳು ಶೌಚಾಲಯ ವ್ಯವಸ್ಥೆ ಹೊಂದಿವೆ.

ವ್ಯವಸಾಯ ಮಾಡುವವರು ಇಲ್ಲದೇ ಇದ್ದು ಖಾಸಗಿ ಹಾಗೂ ಸರ್ಕಾರಿ ನೌಕರರಿದ್ದಾರೆ. ವೈದ್ಯರು, ಇಂಜಿನಿಯರ್, ಶಿಕ್ಷಣ ಇಲಾಖೆ, ಪೊಲೀಸ್ ಇಲಾಖೆ, ಕೆಇಬಿ, ಕೆಎಸ್‌ಆರ್ಟಿಸಿ, ಕೃಷಿ, ಟೈಲರ್, ಬಡಗಿ, ಮೆಕಾನಿಕ್ಸ್, ವಕೀಲರು ಇನ್ನೂ ಅನೇಕ ರೀತಿಯ ನೌಕರ ವರ್ಗದವರು ಇಲ್ಲಿ ವಾಸಿಸುತ್ತಾರೆ.

ಮಧುಗಿರಿ ವಿಧಾನಸಭಾ ಕ್ಷೇತ್ರ, ತುಮಕೂರು ಲೋಕಸಭಾ ಕ್ಷೇತ್ರವ್ಯಾಪ್ತಿಗೆ ಸೇರುತ್ತದೆ. ತಹಸೀಲ್ದಾರ್ ಕಛೇರಿ, ತಾಲ್ಲೂಕು ಕಛೇರಿ, ನ್ಯಾಯಾಲಯ, ಪೊಲೀಸ್ ಠಾಣೆ, ಅಂಚೆ ಕಛೇರಿ, ವಿದ್ಯುತ್ ಇಲಾಖೆ, ಕೃಷಿ ಇಲಾಖೆ, ಆಸ್ಪತ್ರೆ, ಸರ್ಕಾರಿ ಬಸ್‌ಸ್ಟ್ಯಾಂಡ್ ಸೌಲಭ್ಯಗಳೆಲ್ಲವೂ ಮಧುಗಿರಿಯಲ್ಲಿಯೇ ಲಭ್ಯವಾಗಿದೆ.

ಪ್ರತಿ ವಾರ್ಡ್‌ಗೆ ಒಬ್ಬರಂತೆ ಒಬ್ಬರು ನೌಕರರು ಒಬ್ಬರು ಸದಸ್ಯರಂತೆ ೩ ಜನ ನೌಕರರು ಹಾಗೂ ೩ ಜನ ಪುರಸಭಾ ಚುನಾಯಿತ ಪ್ರತಿನಿಧಿಗಳನ್ನು ಹೊಂದಿರುತ್ತದೆ.

ರಸ್ತೆ ಮಾರ್ಗದ ಮೂಲಕ ಗ್ರಾಮವನ್ನು ಸಂಪರ್ಕಿಸಬಹುದಾಗಿದ್ದು ಸರ್ಕಾರಿ ಬಸ್ಸುಗಳ ಸೌಲಭ್ಯವಿದೆ. ಉಳಿದಂತೆ ಯಾವುದೇ ಸಂಚಾರಿ ಮಾರ್ಗಗಳಿಲ್ಲ.

ವಾರ್ಡ್‌ಗಳಲ್ಲಿ ಮೂರು ಅಂಗನವಾಡಿ ಕೇಂದ್ರವಿದ್ದು ಮೂರು ಜನ ಕಾರ್ಯಕರ್ತೆಯರು ಹಾಗೂ ಮೂರು ಜನ ಸಹಾಯಕರು ಕಾರ್ಯನಿರ್ವಹಿಸುತ್ತಿದ್ದಾರೆ. ವಾರ್ಡ್ ನಂ.೧೬ ರ ಅಂಗನವಾಡಿ ಕೇಂದ್ರದಲ್ಲಿ ೧೯ ಮಕ್ಕಳು, ವಾರ್ಡ್ ನಂ.೧೭ ರ ಅಂಗನವಾಡಿ ಕೇಂದ್ರದಲ್ಲಿ ೬೩ ಮಕ್ಕಳು ಹಾಗೂ ವಾರ್ಡ್ ನಂ.೧೮ ರ ಅಂಗನವಾಡಿ ಕೇಂದ್ರದಲ್ಲಿ ೫೧ ಮಕ್ಕಳಿದ್ದಾರೆ. ಎರಡು ಖಾಸಗಿ ಶಾಲೆಗಳಾದ ಚೇತನ ಹೈಸ್ಕೂಲ್ ಹಾಗೂ ವಿವೇಕಾನಂದ ಪ್ರೌಢಶಾಲೆಯಿದ್ದು ೧೦೫೨ ಮಕ್ಕಳಿದ್ದಾರೆ. ೩೨ ಜನ ಶಿಕ್ಷಕರಿದ್ದಾರೆ. ಶಾಲೆಯಲ್ಲಿ ಬಿಸಿಯೂಟ, ಕ್ಷೀರಭಾಗ್ಯ, ಶೌಚಾಲಯ, ಸಮವಸ್ತ್ರ, ಉಚಿತ ಪುಸ್ತಕಗಳ ಸೌಲಭ್ಯಗಳಿವೆ. ವಾರ್ಡ್‌ನ ಒಟ್ಟು ಸಾಕ್ಷರತೆ ೮೨.೧%.

ಸರ್ಕಾರದ ಸಮುದಾಯ ಸೌಲಭ್ಯಗಳಾದ ಸಂಧ್ಯಾ ಸುರಕ್ಷಾ ಯೋಜನೆ, ವೃದ್ಧಾಪ್ಯವೇತನ, ವಿಕಲಚೇತನ ವೇತನ, ವಿಧವಾವೇತನ ಮತ್ತು ಇನ್ನೂ ಅನೇಕ ಸೌಲಭ್ಯಗಳು ಚಾಲ್ತಿಯಲ್ಲಿವೆ. ವಾರ್ಡ್‌ನಲ್ಲಿ ೬ ಅಂಗಡಿ ಹಾಗೂ ೮ ಹೋಟೆಲ್‌ಗಳಿವೆ.

ವಾರ್ಡ್‌ಗಳಲ್ಲಿ ಹಟ್ಟಿ ಮಾರಮ್ಮ ಹಾಗೂ ಶನಿಮಹಾತ್ಮ ದೇವಾಲಯಗಳಿವೆ. ಪ್ರತಿ ವರ್ಷ ಮಾರಮ್ಮ ದೇವಿಗೆ ಆರತಿ, ಬಲಿ, ಹರಕೆ ನೀಡುತ್ತಿದ್ದು ಶನಿ ಮಹಾತ್ಮನಿಗೆ ವಿಜೃಂಭಣೆಯಿಂದ ಶ್ರಾವಣ ಮಾಸದಲ್ಲಿ ಒಂದು ತಿಂಗಳು ಪೂಜೆ ಕಾರ್ಯಕ್ರಮ ನೆರವೇರುತ್ತಿರುತ್ತದೆ. ಉಳಿದಂತೆ ಎಲ್ಲಾ ರೀತಿಯ ಹಿಂದೂ ಹಬ್ಬಗಳನ್ನು ಆಚರಿಸಿಕೊಂಡು ಬರುತ್ತಾರೆ.

# ಆಕರ – ಪರಾಮರ್ಶಾ ಗ್ರಂಥಗಳು

೧. ತುಮಕೂರು ಜಿಲ್ಲಾ ದರ್ಶನ, ಸಂ. ಸಿ.ಎನ್. ಭಾಸ್ಕರಪ್ಪ
೨. ಎಪಿಗ್ರಾಫಿಯ ಕರ್ನಾಟಕ ಸಂಪುಟ–೧೨
೩. ಮಧುಗಿರಿ ಇತಿಹಾಸ, ಎಂ.ಡಿ. ಶ್ರೀನಿವಾಸ
೪. ಮಿಡಿಗೇಶಿ, ಎಂ.ಡಿ. ಶ್ರೀನಿವಾಸ
೫. ತುಮಕೂರು ಜಿಲ್ಲೆ ಜಾತ್ರೆಗಳು, ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ
೬. ಮಧುಗಿರಿ ತಾಲ್ಲೂಕು ದರ್ಶನ, ಪ್ರೊ॥ ಹ.ಬ. ಮಹದೇವಪ್ಪ
೭. ಮಧುಗಿರಿ ದಂಡಿನ ಮಾರಮ್ಮ, ಪ್ರೊ॥ ಎಂ.ಎಲ್. ನರಸಿಂಹಮೂರ್ತಿ
೮. ತುಮಕೂರು ಜಿಲ್ಲಾ ಜನಪದ ಕಲಾವಿದರು, ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ
೯. ತುಮಕೂರು ಜಿಲ್ಲೆ ಜಾನಪದೀಯ ನೆಲೆಗಳು, ಡಾ॥ ಚಿಕ್ಕಣ್ಣ ಯಣ್ಣೆಕಟ್ಟೆ
೧೦. ಕಲ್ಪಶೋಧ, ಡಾ॥ ಬಿ.ಎನ್. ಯೋಗೀಶ್ವರ


# ಪರಿಶೀಲನೆ ಮಾಹಿತಿ

೧. ಪ್ರೊ॥ ಎಲ್. ಪುಟ್ಟರಾಜು, ಕನ್ನಡ ಉಪನ್ಯಾಸಕರು, ಮಧುಗಿರಿ
೨. ಪ್ರೊ॥ ಕೃಷ್ಣಪ್ಪ, ಪ್ರಾಧ್ಯಾಪಕರು, ಟಿವಿವಿ ಕಾಲೇಜು, ಮಧುಗಿರಿ
೩. ಶ್ರೀ ಮಹಾಲಿಂಗೇಶ್ವರ, ಉಪನ್ಯಾಸಕರು, ಬಂದ್ರೇಹಳ್ಳಿ, ಮಧುಗಿರಿ
೪. ಶ್ರೀ ಎಂ.ಡಿ. ಶ್ರೀನಿವಾಸ್, ಇತಿಹಾಸ ಸಂಶೋಧಕರು, ಮಧುಗಿರಿ
೫. ಶ್ರೀಮತಿ ವಿಜಯಾ ಮೋಹನ್, ಸಾಹಿತಿ, ಶಿಕ್ಷಕಿ, ಮಧುಗಿರಿ